# ಕನ್ನಡ ಜೈನ ಹಾಡುಗಳು

## ಕನ್ನಡಪ್ರಜ್ಞೆಯನ್ನು ವಿಶ್ವಪ್ರಜ್ಞೆಯಾಗಿಸುವತ್ತ

ಸಾವಿರಾರು ವರ್ಷಗಳ ಸುದೀರ್ಘ ಮತ್ತು ಉಜ್ವಲ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಕರ್ನಾಟಕದ ಆಧುನಿಕ ಇತಿಹಾಸದಲ್ಲಿ ಕರ್ನಾಟಕದ ಏಕೀಕರಣ ಒಂದು ಐತಿಹಾಸಿಕವೂ ಮತ್ತು ಮಹತ್ವಪೂರ್ಣವೂ ಆದ ವಿಶಿಷ್ಟ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆ ಮತ್ತೊಂದು ಮಹತ್ವದ ಐತಿಹಾಸಿಕ ಘಟನೆ. ಕರ್ನಾಟಕದ ಇತರೆ ವಿಶ್ವವಿದ್ಯಾಲಯಗಳು ಕೇವಲ ಕೆಲವು ಜಿಲ್ಲೆಗಳಿಗೆ ಮಾತ್ರ ಪರಿಮಿತಗೊಂಡಿದ್ದರೆ ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿ ಅಖಂಡ ಕರ್ನಾಟಕ ಮಾತ್ರವಲ್ಲದೆ ಕನ್ನಡಿಗ ಮತ್ತು ಕನ್ನಡ ಸಂಸ್ಕೃತಿ ನೆಲೆಸಿರುವ ಎಲ್ಲ ದೇಶ ಮತ್ತು ವಿದೇಶಗಳನ್ನೂ ಒಳಗೊಂಡಿದೆ. ಈ ಕಾರಣದಿಂದ ನಮ್ಮ ವಿಶ್ವವಿದ್ಯಾಲಯದ ದಾರಿ ಮತ್ತು ಗುರಿ ಎರಡೂ ವಿಭಿನ್ನವೂ ಮತ್ತು ವೈಶಿಷ್ಟ್ಯಪೂರ್ಣವೂ ಆಗಿವೆ.

ಕನ್ನಡ ವಿಶ್ವವಿದ್ಯಾಲಯ ಕನ್ನಡ ನಾಡು, ನುಡಿ, ಸಂಸ್ಕೃತಿ ಮತ್ತು ಜನಜೀವನದ ಸರ್ವಮುಖಗಳ ವಿಶಿಷ್ಟವಾದ ಅಂತರಂಗ ಮತ್ತು ಬಹಿರಂಗ ಸಂಪತ್ತನ್ನು ಕುರಿತು ಅಧ್ಯಯನ ಮಾಡುವ, ಸಂಶೋಧಿಸುವ ಮತ್ತು ಅದರ ಅಧ್ಯಯನದ ಫಲಿತಗಳನ್ನು ಜಗತ್ತಿನಾದ್ಯಂತ ಪ್ರಸಾರ ಮಾಡಿ ಕರ್ನಾಟಕದ ಬಗೆಗಿನ ಅರಿವನ್ನು ಜನಸಮುದಾಯದಲ್ಲಿ ವಿಸ್ತರಿಸುವ ಹಾಗೂ ಅನಂತಮುಖಿಯಾದ ವಿಶ್ವಜ್ಞಾನವನ್ನು ಕನ್ನಡ ಜ್ಞಾನವನ್ನಾಗಿ ಪರಿವರ್ತಿಸಿ ಅದು ಕನ್ನಡಿಗರೆಲ್ಲರಿಗೆ ದಕ್ಕುವಂತೆ ಮಾಡುವ ಮೂಲಭೂತ ಆಶಯದ ಪ್ರತಿನಿಧಿಯಾಗಿ ಸ್ಥಾಪಿತಗೊಂಡಿದೆ. ಬೋಧನೆಗಿಂತ ಸಂಶೋಧನೆ, ಸೃಷ್ಟಿಗಿಂತ ವಿಶ್ವಂಭರ ದೃಷ್ಟಿ, ಶಿಥಿಲ ವಿವರಣೆಗಿಂತ ಅತುಳ ಸಾಧ್ಯತೆಗಳನ್ನೊಳಗೊಂಡ ಅನನ್ಯ ಅಭಿವ್ಯಕ್ತಿ, ನಾಡಿನ ಕೋಟಿ ಕೋಟಿ ಶ್ರೀಸಾಮಾನ್ಯರ ವಿವಿಧ ಪ್ರತಿಭಾಶಕ್ತಿ ಮತ್ತು ಸಾಮರ್ಥ್ಯಗಳ ಸದ್ಬಳಕೆಯ ಮೂಲಕ ಅವರ ಅಂತಃಪ್ರಜ್ಞೆಯನ್ನು ಎಚ್ಚರಿಸುವ, ವಿಕಸಿಸುವ ಶ್ರದ್ಧಾನ್ವಿಕ ಕಾಯಕ ಇದರ ದಾರಿಯಾಗಿದೆ.

ಕನ್ನಡ ನಾಡನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ನೋಡು, ಕನ್ನಡ ವಿಶ್ವವಿದ್ಯಾಲಯವನ್ನು ನೋಡಿದಲ್ಲದೆ ಕನ್ನಡ ನಾಡಿನ ಯಾತ್ರೆ ಸಂಪೂರ್ಣವಾಗದು, ಸಾರ್ಥಕವಾಗದು ಎಂಬಂತೆ ರೂಪುಗೊಳ್ಳುತ್ತಿರುವ ಮತ್ತು ರೂಪುಗೊಳ್ಳಬೇಕಾದ ಮಹಾಸಂಸ್ಥೆ ಇದು. ಕನ್ನಡ ಪ್ರಜ್ಞೆ ತನ್ನ ಸತ್ವ ಮತ್ತು ಸತ್ವದೊಡನೆ ವಿಶ್ವಪ್ರಜ್ಞೆಯಾಗಿ ಅರಳಿ ನಳನಳಿಸಬೇಕು; ವಿಶ್ವಪ್ರಜ್ಞೆ ಕನ್ನಡ ದೇಶೀಪ್ರಜ್ಞೆಯೊಳಗೆ ಪ್ರವೇಶಿಸಿ, ಪ್ರವಹಿಸಿ, ಸಮನ್ವಯಗೊಂಡು, ಸಂಲಗ್ನಗೊಂಡು, ಸಮರಸಗೊಂಡು ಸಾಕ್ಷಾತ್ಕಾರಗೊಳ್ಳಬೇಕು ಎಂಬುದೇ ಇದರ ಗುರಿ. ಈ ಗುರಿಯ ಮೂಲಕ ಕನ್ನಡ ಕರ್ನಾಟಕತ್ವದ ಉಸಿರಾಗಿ, ವಿಶ್ವಪ್ರಜ್ಞೆಯ ಹಸಿರಾಗಿ, ಕನ್ನಡಮಾನವ ವಿಶ್ವಮಾನವನಾಗಿ ಬೆಳೆಯಲು ಸಾಧನವಾಗಬೇಕು. ಕನ್ನಡಿಗರೆಲ್ಲರ ಸಾಮೂಹಿಕ ಶ್ರಮ ಮತ್ತು ಪ್ರತಿಭೆಗಳ ಸಮಷ್ಟಿ ಪ್ರಕ್ರಿಯೆಯಿಂದ ಬೆಳಕಿನ ಈ ಮಹಾಪಥವನ್ನು ಕ್ರಮಿಸುವುದು ನಮ್ಮ ವಿಶ್ವವಿದ್ಯಾಲಯದ ಮಹತ್ತರ ಆಶಯ.

ನಾಗಾಲೋಟದಿಂದ ಕ್ರಮಿಸುತ್ತಿರುವ ಜಗತ್ತಿನ ವ್ಯಾಪಕ ಜ್ಞಾನ, ತಂತ್ರಜ್ಞಾನ ಮತ್ತು ವಿಜ್ಞಾನಗಳ ಶೋಧನೆ ಮತ್ತು ಚಿಂತನೆಗಳನ್ನು ಕನ್ನಡದಲ್ಲಿ ಸತ್ವಪೂರ್ಣವಾಗಿ ದಾಖಲಿಸಿ ಕನ್ನಡ ಓದುಗರ ಜ್ಞಾನವನ್ನು ವಿಸ್ತರಿಸಿ ಅವರಲ್ಲಿ ಪುಸ್ತಕ ಸಂಸ್ಕೃತಿಯನ್ನು ಪ್ರಸರಿಸುವ ವಿಶೇಷ ಹೊಣೆಯನ್ನು ಹೊತ್ತು ನಮ್ಮ ವಿಶ್ವವಿದ್ಯಾಲಯದ ಪ್ರಸಾರಾಂಗ ಅಸ್ತಿತ್ವಕ್ಕೆ ಬಂದಿದೆ. ಶ್ರವ್ಯ, ದೃಶ್ಯ ಮತ್ತು ವಾಚನ ಸಾಮಗ್ರಿಗಳ ಸಮರ್ಪಕ ಉತ್ಪಾದನೆ ಮತ್ತು ವಿತರಣಾ ಪ್ರಕ್ರಿಯೆಗಳ ಮೂಲಕ ಇದು ಈ ಗುರಿಯನ್ನು ತಲುಪಲು ಶಕ್ತಿಮೀರಿ ಪ್ರಯತ್ನಿಸುತ್ತಿದೆ. ಈಗಾಗಲೇ ೭೦೦ಕ್ಕೂ ಹೆಚ್ಚು ವೈವಿಧ್ಯಮಯ ಮತ್ತು ವೈಶಿಷ್ಟ್ಯಮಯ ಕೃತಿಗಳ ಮೂಲಕ ಕನ್ನಡ ಗ್ರಂಥಲೋಕದ ಅಂತರಂಗ ಮತ್ತು ಬಹಿರಂಗ ಸೌಂದರ್ಯಗಳನ್ನು ಉಜ್ವಲಿಸಿರುವ ಇದು ತನ್ನ ಮುಂದಿನ ಗುರಿಯ ಕಡೆಗೆ ಆಶಾದಾಯಕವಾಗಿ ಚಲಿಸುತ್ತದೆ.

ಕನ್ನಡ ಸಾಹಿತ್ಯಕ್ಕೆ ಭದ್ರವಾದ ಬುನಾದಿಯನ್ನು ಹಾಕಿ ಅದರ ಧಾರ್ಮಿಕ, ಸಾಂಸ್ಕೃತಿಕ ಮತ್ತು ಜೀವನ ಮೌಲ್ಯಗಳನ್ನು ಎತ್ತಿ ಹಿಡಿದವರು ಮುಖ್ಯವಾಗಿ ಜೈನ ಕವಿಗಳು. ನಮ್ಮ ಸಾಹಿತ್ಯದ ಆರಂಭ ಕಾಲವನ್ನು ಜೈನಯುಗವೆಂದೇ ಕರೆಯುವಷ್ಟರ ಮಟ್ಟಿಗೆ ಸೃಜನಶೀಲ ಪ್ರತಿಭೆಯ ಕವಿಗಳು, ಕಥನಕಾರರು, ಶಾಸ್ತ್ರಗ್ರಂಥ ರಚನೆಕಾರರು, ವ್ಯಾಖ್ಯಾನಕಾರರು ಅಧಿಕ ಪ್ರಮಾಣದಲ್ಲಿ ಕೃತಿಗಳನ್ನು ರಚಿಸಿ ನಮ್ಮ ಸಾಹಿತ್ಯಕ್ಕೆ ಎತ್ತರ ಮತ್ತು ವ್ಯಾಪ್ತಿಗಳನ್ನು ತಂದು ಕೊಟ್ಟಿದ್ದಾರೆ. ಈ ಕಥನಾತ್ಮಕ ಮತ್ತು ವ್ಯಾಖ್ಯಾನಾತ್ಮಕ ಕೃತಿಗಳ ನಡುವೆಯೇ ತೀರ್ಥಂಕರರನ್ನು, ಜೈನ ಗುರುಗಳನ್ನು ಮತ್ತು ಧಾರ್ಮಿಕ ಮೌಲ್ಯಗಳನ್ನು ಬಿಡಿ ಬಿಡಿಯ ಕವಿತೆಗಳಾಗಿ ಕಟ್ಟಿ ಜನಮನದಲ್ಲಿ ಪ್ರಸಾರ ಮಡುವ ಕಾಯಕವನ್ನೂ ಅವರು ಕೈಗೊಂಡಿದ್ದರು. ವಚನಕಾರರಿಗಿಂತ ಕೀರ್ತನಕಾರಿಗಿಂತ ಪೂರ್ವದಲ್ಲಿಯೇ ಜನಸಾಮಾನ್ಯರಲ್ಲಿ ಧರ್ಮ ಮತ್ತು ಜೀವನ ಮೌಲ್ಯ ಪ್ರಸಾರಕ್ಕಾಗಿ ಹಾಡುಗಳನ್ನು ಕಟ್ಟಿ ಹಾಡುತ್ತ ಧರ್ಮ ಜಾಗೃತಿಯನ್ನು ಉಂಟುಮಾಡಲು ಈ ಕವಿಗಳು ಶ್ರಮಿಸದರೆಂಬುದು ಬಹುಮುಖ್ಯವಾದ ಸಂಗತಿಯಾಗಿದೆ. ಕ್ಲಿಷ್ಟವಾದ ಮತ್ತು ಪಾಂಡಿತ್ಯಜನ್ಯವಾದ ಕೃತಿಗಳು ತಮ್ಮ ಆಂತರ್ಯದಲ್ಲಿ ಧಾರ್ಮಿಕ ಮೌಲ್ಯಗಳನ್ನು ಧಾರಣ ಮಾಡಿಕೊಂಡಿದ್ದರೂ ಅವು ಜನಸಾಮಾನ್ಯರ ಗಂಟಲು ಮತ್ತು ಮನಸ್ಸುಗಳೊಳಗೆ ಇಳಿಯಲಾರವು ಎಂಬ ಜನಪ್ರಜ್ಞೆ ಈ ಕವಿಗಳಿಗೆ ಆಗಲೇ ಮೂಡಿದ್ದು, ಸ್ವಾಗತಾರ್ಹವಾದ ಸಂಗತಿಯಾಗಿದೆ. ಜೈನ ಧರ್ಮೀಯರಲ್ಲಿ ಮತ್ತು ಋಜುಜೀವನ ಮಾರ್ಗಿಗಳಲ್ಲಿ ದೈವಪರವಾದ ಹಾಗೂ ಉತ್ಕೃಷ್ಟ ಜೀವನಪರವಾದ ಆಲೋಚನೆಗಳನ್ನು ಪ್ರಸಾರ ಮಾಡಲೆಂದೇ ಮೂಡಿದ ಈ ಹಾಡುಗಳು ನಮ್ಮ ಜನಪ್ರಿಯ ವಚನ ಮತ್ತು ಕೀರ್ತನೆಗಳಿಗೆ ಪೂರ್ವಭಾವಿಯಾಗಿ ಆವಿರ್ಭವಿಸಿದ್ದವೆಂಬುದು ಐತಿಹಾಸಿಕ ಸಂಗತಿಯಾಗಿದೆ.

ಇಂತಹ ಸರಳವೂ ಜನಪ್ರಿಯ ಮಾದರಿಯ ಹಾಗೂ ಸಾಂಸ್ಕೃತಿಕ ಆಶಯಗಳನ್ನು ಗರ್ಭೀಕರಿಸಿಕೊಂಡಿರುವ ಈ ಹಾಡುಗಳನ್ನು ನಮ್ಮ ವಿಶ್ವವಿದ್ಯಾಲಯದ ಹಸ್ತಪ್ರತಿ ವಿಭಾಗದ ವಿದ್ವಾಂಸರು ಬಹು ಶ್ರಮದಿಂದ ಹೆಕ್ಕಿ ಆರಿಸಿ ಇಲ್ಲಿ ಸಂಪಾದಿಸಿಕೊಟ್ಟಿದ್ದಾರೆ. ಪ್ರಸಿದ್ಧ ಕವಿ ರತ್ನಾಕರ ರಚಿಸಿದ ಹಾಡುಗಳಲ್ಲದೆ, ತೀರ್ಥಂಕರ ಹಾಡುಗಳು, ಯಕ್ಷಿಣಿಯರ ಹಾಡುಗಳು, ಜೋಗುಳ ಹಾಡುಗಳು, ಶೋಭಾನೆಯ ಹಾಡುಗಳು ಮತ್ತು ಯಾವ ನಿಶ್ಚಿತ ವರ್ಗಕ್ಕೂ ಸೇರದ ಸಂಕೀರ್ಣ ಹಾಡುಗಳು ಈ ಕೃತಿಯಲ್ಲಿ ಸೇರ್ಪಡೆಯಾಗಿವೆ. ನಮ್ಮ ಹರಿದಾಸ ಕೀರ್ತನೆಗಳ ಬಂಧ, ಚೌಕಟ್ಟು ಗೇಯತೆಗಳನ್ನು ಒಳಗೊಂಡು ಹಾಡಲು ಅನುಗುಣವಾಗಿರುವ ಈ ಹಾಡುಗಳ ಕನ್ನಡ ಸಾಹಿತ್ಯಕ್ಕೆ ಹೊಸ ಸೇರ್ಪಡೆಯಾಗಿವೆ. ಶರಣ ಸಂಪ್ರದಾಯದಲ್ಲಿ ರಚಿತವಾದ ಇಂತಹುದೇ ಹಾಡುಗಳನ್ನು ಪ್ರೊ.ಎಲ್.ಬಸವರಾಜು ಅವರು 'ಶಿವದಾಸ ಗೀತಾಂಜಲಿ' ಎಂಬ ಹೆಸರಿನಲ್ಲಿ ಸಂಪಾದಿಸಿ ಪ್ರಕಟಿಸಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಇವು ಕೀರ್ತನ ಪರಂಪರೆಯ ಸಾಹಿತ್ಯದ ಸಾತತ್ಯವನ್ನು ಸಶಕ್ತವಾಗಿ ಬಿಂಬಿಸುತ್ತವೆ.

ಇಂತಹ ಹಾಡುಗಳನ್ನು ಸಂಗ್ರಹಿಸಿ ಸಂಪಾದಿಸಿ ಅವುಗಳ ವಿಶಿಷ್ಟ ಗುಣಲಕ್ಷಣಗಳನ್ನು ವಿವರಿಸುವ ಪ್ರಸ್ತಾವನೆಯೊಡನೆ ಕೊಟ್ಟಿರುವ ಸಂಪಾದಕರಾದ ಡಾ. ಎಫ್.ಟಿ. ಹಳ್ಳಿಕೇರಿ ಮತ್ತು ಡಾ.ಕೆ. ರವೀಂದ್ರನಾಥ ಅವರನ್ನು ನಾನು ಅಭಿನಂದಿಸುತ್ತೇನೆ. ಧಾರ್ಮಿಕ ಪ್ರಜ್ಞೆಯುಳ್ಳವರಿಗೆ ಮತ್ತು ವಿಶೇಷವಾಗಿ ಜೈನ ಧರ್ಮೀಯರಿಗೆ ಈ ಹಾಡುಗಳು ಹೆಚ್ಚು ಇಷ್ಟವಾಗುತ್ತವೆ ಎಂದು ನಂಬಿದ್ದೇನೆ.

**ಡಾ. ಎಚ್.ಜೆ. ಲಕ್ಕಪ್ಪಗೌಡ**
ಕುಲಪತಿಗಳು

# ವಿಭಾಗ ಮುಖ್ಯಸ್ಥರ ಮಾತು

ಕನ್ನಡ ಸಾಹಿತ್ಯದಲ್ಲಿ ಹಾಡುಹಬ್ಬ ಪರಂಪರೆಗೆ ಸುದೀರ್ಘ ಇತಿಹಾಸವಿದೆ. ಇದು ಅನೇಕ ವಸ್ತು ವೈವಿಧ್ಯತೆಗಳನ್ನು ರೂಢಿಸಿಕೊಂಡು ಬೆಳೆದುಬಂದಿದೆ. ಲಯ, ಗೇಯತೆ, ರಾಗ-ತಾಳಗಳ ಬದ್ಧತೆಯಿಂದ ವೀರಶೈವರಲ್ಲಿ ಸ್ವರವಚನೆಗಳೆಂಬ ಹೆಸರಿನಿಂದಲೂ, ವೈದಿಕರಲ್ಲಿ ಕೀರ್ತನೆ-ಸುಳಾದಿ-ಉಗಾಭೋಗಗಳೆಂಬ ಹೆಸರಿನಿಂದಲೂ ಹಾಡುಗಳು ರಚನೆಗೊಂಡಿವೆ. ಹಾಗೆಯೇ ಜೈನಸಾಹಿತ್ಯದಲ್ಲಿಯೂ ಇಂತಹ ಹಾಡುಗಳು ಸೃಷ್ಟಿಯಾಗಿವೆ. ಆ ಹಾಡುಗಳ ಸಂಗ್ರಹರೂಪದ ಪುಸ್ತಕ "ಕನ್ನಡ ಜೈನ ಹಾಡುಗಳು".

ಗೊಂದಲಹಾಡು, ಕಣಿ, ಕೋಲಾಟ, ಚಂದಮಾಮದ ಪದಗಳ ಮೂಲಕ ಆಧ್ಯಾತ್ಮ ಹಾಗೂ ತಾತ್ವಿಕ ವಿಷಯಗಳನ್ನು ಶ್ರೀಸಾಮಾನ್ಯರಿಗೆ ಅರ್ಥವಾಗುವಂತೆ ಪ್ರತಿಪಾದಿಸುವ ಹಾಡುಗಳು ಸ್ತುತಿ, ಶೋಬಾನ, ಜೋ ಜೋ ಪದ, ಮಂಗಳಾರತಿ ಹಾಡುಗಳೆಂಬ ಹೆಸರಿನಿಂದಲೂ ಪಚಲಿತಗೊಂಡಿವೆ. ಇದರಿಂದ ಜನಪದ ಸಾಹಿತ್ಯ ಪ್ರಕಾರಗಳು ಶಿಷ್ಟ ಸಾಹಿತ್ಯ ವೇದಿಕೆಯನ್ನೇರಿದಂತಾಯಿತು. ಈ ಹಾಡುಗಳ ನಿರ್ಮಾತೃಗಳು ಭಕ್ತಿ-ಭಜನೆ (ಆರಾಧನೆ) ಗಳನ್ನು ಮೈಗೂಡಿಸಿಕೊಂಡ ಬ್ರಹ್ಮಚಾರಿಗಳು, ಜಿನಯೋಗಿಗಳು, ಸಂಸಾರಿಗಳು. ಹೀಗಾಗಿ ಇಂತಹ ಹಾಡುಗಳಲ್ಲಿ ಆಧ್ಯಾತ್ಮಿಕ, ಯೋಗಿಕ ಹಾಗೂ ಕೌಟುಂಬಿಕ ವಿಚಾರಗಳು ಮುಪ್ಪುರಿಗೊಂಡವು. ಜೊತೆಗೆ ಸ್ಥಳೀಯ ಸ್ಥಳಪುರಾಣ ಮಹಾತ್ಮೆ, ಚರಿತ್ರೆ, ಚೈತ್ಯಾಲಯ, ಬಸದಿ, ಗುರುಪರಂಪರೆ ಮುಂತಾದ ಐತಿಹಾಸಿಕ ಸಂಗತಿಗಳನ್ನು ಈ ಹಾಡುಗಳು ಬಿಚ್ಚಿತೋರಿಸುವುದರಿಂದ ಇವುಗಳಿಗೆ ಸಾಹಿತ್ಯಿಕ ಹಾಗೂ ಚಾರಿತ್ರಿಕ ಮಹತ್ವ ಪ್ರಾಪ್ತವಾಗುತ್ತವೆ.

ಇಲ್ಲಿಯ ಹಾಡುಗಳನ್ನು ನಾಡಿನ ಶ್ರವಣಬೆಳಗೊಳ, ಧರ್ಮಸ್ಥಳ, ಮೂಡಬಿದರೆ, ಹೊಂಬುಜ ಮಠಗಳ ಹಾಗೂ ಮೈಸೂರು, ಬೆಂಗಳೂರು ವಿಶ್ವವಿದ್ಯಾಲಯಗಳ ಹಸ್ತಪ್ರತಿ ಭಂಡಾರಗಳಿಂದ ಮತ್ತು ಇದುವರೆಗು ಅಲ್ಲೊಂದು ಇಲ್ಲೊಂದು ಹಾಡುಗಳನ್ನು ಪ್ರಕಟಿಸಿದ ಗ್ರಂಥಗಳಿಂದ ಆಯ್ದುಕೊಳ್ಳಲಾಗಿದೆ. ಆಧ್ಯಯನದ ಅನುಕೂಲಕ್ಕಾಗಿ ಹಾಡುಗಳನ್ನು ವರ್ಗೀಕರಿಸಕೊಂಡು ಸಂಪಾದನೆಯು ಶಾಸ್ತ್ರೀಯ ಚೌಕಟ್ಟಿನಲ್ಲಿ ರೂಪುಗೊಂಡಿದೆ. ಈ ಮೊದಲು ಪ್ರಕಟಗೊಂಡ ರತ್ನಾಕರವರ್ಣಿಯ ಹಾಡುಗಳನ್ನು ಬಿಟ್ಟರೆ ಉಳಿದಂತೆ ಎಲ್ಲ ಹಾಡುಗಳು ಮೂಲತಃ ಆಶು ರಚನೆಗಳಂತೆ ತೋರುತ್ತವೆ. ಮೊದಮೊದಲು ಮೌಖಿಕ ಪರಂಪರೆಯಲ್ಲಿ ಜನಿಸಿ ಲಿಖಿತ ಪರಂಪರೆಯಲ್ಲಿ ಬದುಕಿ ಬಂದಿರುವ ಇವುಗಳಲ್ಲಿ ವಚನಕಾರರ ಸ್ವರವಚನಗಳು, ಹರಿದಾಸರ ಕೀರ್ತನೆಗಳ ಛಾಪು ಗೋಚರಿಸುತ್ತದೆ. ಅನುಭವ ಹಾಗೂ ಅಭಿವ್ಯಕ್ತಿ ವಿಧಾನಗಳಲ್ಲಿ ಜೈನ ಹಾಡುಗಳ ಸ್ವಂತಿಕೆಯಿದೆ, ಅನನ್ಯತೆಯಿದೆ. ಮೇಲಾಗಿ ಧಾರ್ಮಿಕ ತತ್ತ್ವ ಸಿದ್ಧಾಂತಗಳ ಪ್ರತಿಪಾದನೆಯಿದೆ. ಕೆಲವು ಹಾಡುಗಳಂತೂ ಸಾಮಾಜಿಕ ಬದುಕಿಗೆ, ಡಾಂಭಿಕ ಜೀವನಕ್ಕೆ ಕನ್ನಡಿ ಹಿಡಿದಂತಿವೆ. ಉಪೇಕ್ಷಿತ ಸಾಹಿತ್ಯ ಮಾಲೆಗೆ ಸೇರುವ ಇಲ್ಲಿಯ ಹಾಡುಗಳನ್ನು ಶಾಸ್ತ್ರೀಯವಾಗಿ ಸಂಗ್ರಹಿಸಿ-ಸಂಸ್ಕರಿಸಿ ಕೊಟ್ಟ ವಿಭಾಗದ ಸಹೋದ್ಯೋಗಿಗಳಾದ ಡಾ. ಎಫ್.ಟಿ. ಹಳ್ಳಿಕೇರಿ ಹಾಗೂ ಡಾ. ಕೆ. ರವೀಂದ್ರನಾಥ ಅವರನ್ನು ಅಭಿನಂದಿಸುತ್ತ, ಕನ್ನಡ ಜೈನ ಹಾಡುಗಳ ಸಮಗ್ರ ಅಧ್ಯಯನಕ್ಕೆ ಈ ಸಂಪುಟ ನೆರವಾಗುತ್ತದೆಂದು ಭಾವಿಸುತ್ತೇನೆ.

**ಪ್ರೊ. ಎ.ವಿ. ನಾವಡ**
ಮುಖ್ಯಸ್ಥರು

# ಪ್ರಸ್ತಾವನೆ

*ನುಡಿದುದನಾರೊಳಂ ನುಡಿದು ತಪ್ಪಿದೊಡಂ ಜಿನಶಾಸನಕ್ಕೊಡಂ*
*ಬಡದೊಡಮನ್ಯನಾರಿಗೆರೆದಟ್ಟಿದೊಡಂ ಮಧುಮಾಂಸ ಸೇವೆಗೆ*
*ಯ್ದೊಡಮಕುಲೀನರಪ್ಪವರ ಕೊಳ್ಕೊಡೆಯಾದದೊಡಮರ್ಥಿಗರ್ಥಮಂ*
*ಕುಡುದೊಡಮಾಹವಾಂಗಣದೊಳೋಡಿದೊಡಂ ಕಿಡುನುಂಕುಲವ್ರತಂ*

"ಕೊಟ್ಟ ಮಾತನ್ನು ಮರೆಯದಿರು, ಮದ್ಯ-ಮಾಂಸ ಸೇವಿಸದಿರು, ಹೆರವರ ಹೆಣ್ಣಿಗೆ ಮನ ಸೋಲದಿರು, ಕೀಳುತನಕ್ಕೆ ಇಳಿಯಬೇಡ, ದೀನ ರಕ್ಷಕನಾಗು, ಕಾಳಗದಲ್ಲಿ ಕಾಲ್ದೆಗೆಯದಿರು, ಜೈನಧರ್ಮವನ್ನು ಬಿಡಬೇಡ ಇದಕ್ಕೆ ತಪ್ಪಿದರೆ ನಿನ್ನ ಕುಲವು ಹಾಳಾಗುವುದು ನಿಶ್ಚಿತ" ಎಂಬ ಶಾಸನೋಕ್ತವಾದ (ಎ.ಕ. **VII.** ಎಸ್.ಕೆ.ಜೆ. ೧೧) ಮಾತು ಆಚಾರ್ಯ ಸಿಂಹ ನಂದಿಯು ಗಂಗವಂಶದ ಸ್ಥಾಪಕನಾದ ಮಾಧವನಿಗೆ ಉಪದೇಶಿಸಿದ್ದಾಗಿದೆ. ಸ್ವತಃ ತಪೋಬಲದಿಂದ ಜ್ಞಾನವರಣೀಯ ಮೊದಲಾದ ಎಂಟು ಕರ್ಮಗಳನ್ನು ಗೆದ್ದ ಇಂತಹ ಆಚಾರ್ಯ ಪುರುಷರನ್ನೇ ಜಿನರೆಂದು; ಇವರಿಂದ ಬೋಧಿಸಲ್ಪಟ್ಟ ಧರ್ಮ ಜೈನಧರ್ಮವೆಂದು ಕರೆಯುತ್ತಾರೆ.

ಪ್ರಥಮ ತೀರ್ಥಂಕರ ವೃಷಭನಿಂದ ಆರಂಭಗೊಂಡ ಜೈನ ಧರ್ಮ ತರುವಾಯದ ಇಪ್ಪತ್ಮೂರು ಜನ ತೀರ್ಥಂಕರರಿಂದ ಪ್ರಚುರಗೊಂಡು ಭಾರತದ ಪ್ರಮುಖ ಧರ್ಮಗಳಲ್ಲಿ ಒಂದಾಗಿದೆ. ಇದರ ಉಗಮದ ಕಾಲವನ್ನು ಕ್ರಿ.ಶ. ೫೦೦೦ ವರ್ಷಗಳಿಗಿಂತ ಮೊದಲಿನದೆಂಬುದಾಗಿ ವಿದ್ವಾಂಸರು ಗುರುತಿಸುತ್ತಾರೆ. ಕೊನೆಯ ತೀರ್ಥಂಕರನಾದ ಮಹಾವೀರನ ತರುವಾಯ ಅಂದರೆ ಸಂಪ್ರತಿ ಚಂದ್ರಗುಪ್ತನೆಂಬ ಅರಸನ ಕಾಲಾವಧಿಯಲ್ಲಿ (ಕ್ರಿ.ಶ.ಪೂ. ೩೭೩-೧೯೮) ಈ ಧರ್ಮ ಮೊದಲಿನ ದಿಗಂಬರ ಸಂಪ್ರದಾಯದ ಜೊತೆಗೆ ಶ್ವೇತಾಂಬರವೆಂಬ ಮತ್ತೊಂದು ಸಂಪ್ರದಾಯವನ್ನು ರೂಢಿಸಿಕೊಂಡ ಬಗ್ಗೆ ಅನೇಕ ದಾಖಲೆಗಳಿವೆ. ಉತ್ತರ ಪ್ರದೇಶದಲ್ಲಿ ಆಗ ಸಂಭವಿಸಿದ ಭೀಕರ ಬರಗಾಲ ಇದಕ್ಕೆ ಕಾರಣವೆಂದು ವಡ್ಡಾರಾಧನೆಯಿಂದ ತಿಳಿದು ಬರುತ್ತದೆ. ಬರಗಾಲದ ಪ್ರಸಂಗದಲ್ಲಿ ಭದ್ರಬಾಹು ಮುನಿಯು ಶಿಷ್ಯ ಚಂದ್ರಗುಪ್ತ ಮೌರ್ಯ ಹಾಗೂ ಸಂಘದೊಡನೆ ಆಚರಣೆಗೆ ಚ್ಯುತಿ ಬರಬಾರದೆಂಬ ಭಾವನೆಯಿಂದ "ಕಳ್ವಪ್ಪು" ಎಂದು ಕರೆಸಿಕೊಂಡಿದ್ದ ಈಗಿನ ಶ್ರವಣಬೆಳ್ಗೊಳಕ್ಕೆ ಬಂದು ಅಲ್ಲಿಯ ಚಂದ್ರಗಿರಿ ಬೆಟ್ಟದಲ್ಲಿ ಸಲ್ಲೇಖನ ವ್ರತದಿಂದ ಸಮಾಧಿ ಹೊಂದಿದರೆಂದು ಶ್ರವಣಬೆಳ್ಗೊಳದ ಒಂದು ಶಾಸನ ತಿಳಿಸುತ್ತದೆ. ದಕ್ಷಿಣಕ್ಕೆ ಬದಲಾಗಿ ಅತ್ತ ಸಿಂಧೂ ದೇಶಕ್ಕೆ ವಲಸೆ ಹೋದ ರಾಮಿಲಾಚಾರ್ಯ, ಸ್ಥೂಲಾಚಾರ್ಯ ಮತ್ತು ಸ್ಥೂಲಭದ್ರಾಚಾರ್ಯ ಮುನಿಗಳ ಗುಂಪು ತೊಂದರೆ ಗೀಡಾಯಿತು. ಹಗಲಿನ ಬದಲು ರಾತ್ರಿ ಭಿಕ್ಷಕ್ಕೆ ಹೋದ ಒಬ್ಬ ಮುನಿಯನ್ನು ಕಂಡ ಓರ್ವ ಸ್ತ್ರೀಗೆ ಗರ್ಭಪಾತವಾಗುತ್ತದೆ. ಇದನ್ನು ತಿಳಿದ ಅಲ್ಲಿಯ ರಾಜ ಮೈಮೇಲೆ ತುಂಡು ಬಟ್ಟೆ ಧರಿಸುವಂತೆ ಆ ಮುನಿಗಳಿಗೆ ಆದೇಶಿಸಿದ. ಅಂದಿನಿಂದ ಅವರಿಗೆ ಅರ್ಧಗಪ್ಪಡದವರು ಎಂಬ ಹೆಸರು ರೂಢಿಗೆ ಬಂತು. ಮುಂದೆ ವಲಭೆಯ ದೊರೆ ಮೈಮೇಲೆ ಶ್ವೇತಬಣ್ಣದ ಪೂರ್ವವಸ್ತ್ರ ಧರಿಸುವಂತೆ ಆಜ್ಞಾಪಿಸಿದನು. ಅಂದಿನಿಂದ ಉತ್ತರದ ಆ ಮುನಿಗಳು ಶ್ವೇತಾಂಬರರು ಎಂದು ಕರೆಸಿಕೊಂಡರು. ಶ್ವೇತಾಂಬರರು ಕರ್ನಾಟಕದಲ್ಲೂ ಇದ್ದರೆಂಬುದಕ್ಕೆ ಮೃಗೇಶವರ್ಮನೆಂಬ ಕದಂಬದೊರೆ ಇವರ ಸಂಘದ ಉಪಭೋಗಕ್ಕೆ ದತ್ತಿ ಬಿಟ್ಟಿರುವುದನ್ನು ಕದಂಬರ ೫ನೇ ಶತಮಾನದ ತಾಮ್ರ ಶಾಸನಗಳಿಂದ ತಿಳಿದು ಬರುತ್ತದೆ. ಅಲ್ಲದೆ ಸಂಸ್ಕೃತ ಪ್ರಾಕೃತ ಭಾಷೆಗಳಲ್ಲಿ ಕೆಲವು ಜನಕವಿಗಳು ಸಾಹಿತ್ಯ ಸೃಷ್ಟಿ ಮಾಡಿರುವ ಬಗ್ಗೆ ಗೊತ್ತಾಗುತ್ತದೆ. ಹೀಗೆ ಎರಡು ಸಂಪ್ರದಾಯಗಳು ಬೆಳೆದು ಬಂದಿದ್ದರೂ ಸಾಹಿತ್ಯ ಕೃಷಿಯ ಆಶಯ ದಿಗಂಬರ ಸಂಪ್ರದಾಯ ಆಚರಣೆ ಸಂಸ್ಕೃತಿಯ ಅಭಿವ್ಯಕ್ತಿಗೆ ಹೆಚ್ಚು ಮೀಸಲಾದಂತೆ ತೋರುತ್ತದೆ. ಮಹಾಕಾವ್ಯಗಳಿಂದ ಹಿಡಿದು ಚಿಕ್ಕ ಹಾಡುಗಳು ಈ ಪಂಥದ ಆಚರಣೆಯ ಫಲಿತಗಳನ್ನು ಕಟ್ಟಿಕೊಡುತ್ತವೆ. ಹೀಗಾಗಿ ದಿಗಂಬರ-ಶ್ವೇತಾಂಬರ ಸಂಪ್ರದಾಯಗಳಲ್ಲಿ ಕೆಲವು ತಾತ್ವಿಕವಾದ ವ್ಯತ್ಯಾಸಗಳು ಕಂಡುಬಂದರೂ ಅವರೀರ್ವರ ನಂಬಿಕೆಯ ಸೂತ್ರ ಒಂದೇ ಆಗಿದೆಯೆಂಬುದು ಇದರಿಂದ ಮನವರಿಕೆಯಾಗುತ್ತದೆ.

ಕನ್ನಡ ಸಾಹಿತ್ಯದ ವಿಷಯವಾಗಿ ಅದರ ಆರಂಭ ಜೈನರಿಂದಲೇ ಗಂಗ, ರಾಷ್ಟ್ರಕೂಟ, ಚಾಲುಕ್ಯ, ಕಲಚೂರಿ, ಸೌದತ್ತಿಯ ರಟ್ಟರು, ವಿಜಯನಗರ ಅರಸರು, ಸಾಮಂತರಾದ ಸೇನವಾರರು, ಸಾಳುವರು, ಚೆಂಗಾಳ್ವರು, ಕೊಂಗಾಳ್ವರು, ಸಾಂತರ ಇತ್ಯಾದಿ

ರಾಜಾಶ್ರಯದಲ್ಲಿ ಜೈನ ಕವಿಗಳ ಸಾಹಿತ್ಯಕ ಕೃಷಿ ನಡೆದು ಕನ್ನಡ ಸಾಹಿತ್ಯ ಮೌಲಿಕವಾದ ಕೃತಿಗಳನ್ನು ತನ್ನ ಮಡಿಲಿಗೆ ಸೇರಿಸಿಕೊಂಡಿತು; ಹೀಗಾಗಿ ಈ ಪರಿಸರದ ಸಾಹಿತ್ಯ ಪಂಡಿತಪ್ರಿಯ ಸಾಹಿತ್ಯವೆಂತಲೂ, ಚಂಪೂ ಪ್ರಕಾರವನ್ನು ಹೆಚ್ಚು ದುಡಿಸಿಕೊಂಡಿದ್ದರಿಂದ ಚಂಪೂಯುಗವೆಂತಲೂ ಕರೆಸಿಕೊಂಡಿತು. ಕನ್ನಡ ಜೈನ ಸಾಹಿತ್ಯ ಅದರಲ್ಲೂ "ಆಗಮಿಕ ಕಾವ್ಯಗಳ ವಸ್ತು" ಕ್ಷಣಕೆ ಕರ್ಮವ ಸುಟ್ಟು ಜಿನನಾದ ಭೂಭುಜಾಗ್ರಣಿಗಳ ಕಥೆಗಳಾಗಿವೆ. ಅಂದರೆ ಆತ್ಮನಲ್ಲಿ ಸೌಮ್ಯಭಾವವನ್ನು ಬೆಳೆಸುವುದೇ ಆಗಿದೆ. ಯಾಕೆಂದರೆ ಯಾವುದು ರಾಗ, ದ್ವೇಷ, ಮೋಹ, ಮಾತ್ಸರ್ಯ, ದೀನತೆ ಮೊದಲಾದ ವಿಕೃತಿಗಳನ್ನು ಉತ್ಪಾದಿಸುವುದೋ ಅದು ಹೀನ ಸಾಹಿತ್ಯವೆಂದು ಭಾವಿಸಿದವರು. ಅಂತೆಯೇ ಕವಿ ನಾಗಚಂದ್ರ ತನ್ನ ರಾಮಚಂದ್ರಪುರಾಣದ ಸಂಧಿ ೧ ಪದ್ಯ ೨೪ರಲ್ಲಿ

*ರಾಗದ್ವೇಷ ನಿಬಂಧಮಪ್ಪ ಕೃತಿಯಂ ನಿರ್ಭಂಧದಿಂ ಬಂಧಮಿಂ*
*ಬಾಗರ್ಥ ಪೊಸತಾಗೆ ಪೇಳ್ದೆಖಿಲಮ ರಾಗವಿಲಂ ಮಾಳ್ಪದಿ*
*ದ್ಯಾಗರ್ವಗ್ರಹ ಪೀಡಿತರ್ ಸ್ವಪರ ಬಾಧಾಹೇತುವಂ ದುಸ್ತರೋ*
*ದ್ಯೋಗ ಕ್ಲೇಶಿತರಾಗಿ ಭಿತ್ತಿ ಬೆಳೆವಂತಕ್ಕುಂ ವಿಷ್ಯೋದ್ಯಾನಮಂ*

ರಾಗದ್ವೇಷದಿಂದ ಕೂಡಿದ ಕೃತಿಯನ್ನು ಎಷ್ಟೇ ಸುಂದರವಾಗಿ ಬರೆದರೂ ಅದು ವಿಷೋದ್ಯಾನವನ್ನು ಬೆಳೆಸಿದಂತಹ ಅನಾರೋಗ್ಯಕರ ಉಪಕ್ರಮವೆಂದಿದ್ದಾನೆ. ಹೀಗಾಗಿ "ಎನಗೆ ರಸವೊಂದೇ ಶಾಂತಮೇ ಜಿನೇಂದ್ರ" ನೆಂದು ಕನ್ನಡ ಸಾಹಿತ್ಯಕ್ಕೆ ಶಮಸ್ಥಾಯಿಯಾದ ಶಾಂತರಸವನ್ನು ನೀಡಿದವರು. ಅಸಹಾಯಕರ ಬಗ್ಗೆ ಅನುಕಂಪ ತೋರಿ "ಸಂಕಲ್ಪ ಹಿಂಸೆಯ" ಸಾಧಕ ಬಾಧಕಗಳನ್ನು ಕಾವ್ಯಗಳ ಮೂಲಕ ಕಟ್ಟಿಕೊಟ್ಟವರು. ಹೀಗೆಂದಾಕ್ಷಣ ಜೈನ ಕವಿಗಳು ಧಾರ್ಮಿಕ ಕೃತಿಗಳಲ್ಲದೆ ಬೇರೆ ಕೃತಿ ರಚನೆಗೆ ಕೈ ಹಾಕಿಲ್ಲವೆಂದರ್ಥವಲ್ಲ. ಕಾವ್ಯಾವಲೋಕನ, ಛಂಧೋ ಬುಧಿ, ಶಬ್ದಮಣಿದರ್ಪಣ, ಶಬ್ದಸ್ಮೃತಿ ಮುಂತಾದ ಛಂದಸ್ಸು-ವ್ಯಾಕರಣಗ್ರಂಥಗಳು, ರನ್ನಕಂದ, ವಸ್ತುಕೋಶಗಳಂತಹ ನಿಘಂಟುಗಳು, ಗಜಶಾಸ್ತ್ರ, ಜಾತಕ ತಿಲಕ, ಲೋಕೋಪಕಾರ, ಮದನತಿಲಕಗಳಂತಹ ಜ್ಯೋತಿಷ್ಯ, ವೈದ್ಯ, ಗಣಿತ, ಕಾಮಶಾಸ್ತ್ರಗಳಂತಹ ನಿತ್ಯಜೀವನೋಪಯೋಗಿ ಕೃತಿಗಳ ರಚನೆಗೆ ಇವರೇ ಆದ್ಯರು. ಹೀಗೆ ಪ್ರಾರಂಭದ ಹಂತದಲ್ಲಿ ಪಾಂಡಿತ್ಯ ಮತ್ತು ಶಾಸ್ತ್ರ ಸಮ್ಮತವಾದ ಕೃತಿಗಳನ್ನು ನೀಡಿದ ಕಾರಣ 'ಮಾರ್ಗಿ' ಮಾರ್ಗವನ್ನು ತುಳಿದರು. ಮುಂದೆ ನಡುಗನ್ನಡ ಸಂದರ್ಭದಲ್ಲಿ ಮಾರ್ಗಿಧೋರಣೆಯಿಂದ ಹೊರಬಂದು 'ದೇಶಿ' ಮಾರ್ಗವನ್ನನುಸರಿಸಿದರು. ಈ ಪರಿಣಾಮವಾಗಿ ರತ್ನಾಕರವರ್ಣಿಯ ಭರತೇಶ ವೈಭವ, ಪಾಯಣ್ಣವ್ರತಿಯ (೧೫೫೦) ಸಮ್ಯಕ್ತ್ವ ಕೌಮುದಿ, ಜಿನಸೇನದೇಶವ್ರತಿಯ (೧೬೦೦) ವರ್ಧಮಾನಪುರಾಣ, ಬ್ರಹ್ಮಕವಿಯ (೧೬೦೦) ವಜ್ರಕುಮಾರಚರಿತೆ, ಪಂಚ ಬಾಣನ (೧೬೧೪) ಬಾಹುಬಲಿ ಚರಿತೆ, ಪಾಯಣ್ಣಮುನಿ (೧೬೦೬)ಯ ಸನತ್ಕುಮಾರ ಚರಿತ್ರೆಗಳು ಸಾಂಗತ್ಯ ಪ್ರಕಾರದಂತಹ ರಾಗ-ತಾಳ ಬದ್ಧವಾದ ಹಾಡುಗಳನ್ನು ಬರೆದಿದ್ದಾರೆ. ಮಹಾಕಾವ್ಯಗಳ ಕಥಾವಸ್ತುವನ್ನೇ ತಮ್ಮೊಡಲಲ್ಲಿರಿಸಿಕೊಂಡು ಕುಳಿತಿರುವ ಇದಕ್ಕಿಂತ ಹೆಚ್ಚಾಗಿ ಸ್ಥಳೀಯ ಸ್ಥಳಪುರಾಣ ಮಹಾತ್ಮೆಗಳನ್ನು ಉಸುರುವ ಈ ಹಾಡುಗಳ ಶೋಧ-ಸಂಗ್ರಹ-ಸಂಪಾದನೆ ಹಾಗೂ ವಿಶ್ಲೇಷಣೆಗಳು ವೀರಶೈವ ಹಾಗೂ ಹರಿದಾಸರ ಸ್ವರವಚನ-ಕೀರ್ತನೆಗಳಂತೆ ವ್ಯಾಪಕವಾಗಿ ನಡೆದಿರುವುದಿಲ್ಲ. ಹೀಗಾಗಿ ನಾಡಿನ ಪ್ರಮುಖ ಜೈನ ಮಠಗಳ, ವಿಶ್ವವಿದ್ಯಾಲಯಗಳ ಹಸ್ತಪ್ರತಿ ಭಂಡಾರಗಳಲ್ಲಿನ ಹಾಡುಗಳ ಸಂಗ್ರಹದ ಪುಸ್ತಕರೂಪ ಈ "ಕನ್ನಡ ಜೈನ ಹಾಡುಗಳು".

**ಜೈನ ಹಾಡುಗಳ ಲಕ್ಷಣ**

ಅನುಭಾವ ಗೀತೆ, ಹಾಡು, ಕೈವಲ್ಯಪದ, ಭಜನೆ ಹಾಡುಗಳೆಂದು ಕರೆಸಿಕೊಂಡಿರುವ ವೀರಶೈವ ಸ್ವರವಚನ, ದಾಸರ ಕೀರ್ತನೆಗಳ ಪರಂಪರೆಗೆ ಜೈನ ಹಾಡುಗಳು ಸೇರುತ್ತವೆ. ಇವುಗಳು ಲಕ್ಷಣ ಹೀಗಿದೆ.

೧. ಪಲ್ಲವಿ, ಅನುಪಲ್ಲವಿ, ನಾಲ್ಕುಡಿಗಳು ಚರಣಬಂಧಗಳಿಂದ ಕೂಡಿವೆ.

೨. ಆರಂಭದಲ್ಲಿ ಕೆಲವು ಹಾಡುಗಳಲ್ಲಿ ರಾಗ-ತಾಳಗಳ ನಿರ್ದೇಶನವಿರುತ್ತದೆ.

೩. ಹಾಡುಗಳು ಷಟ್ಪದಿ, ಕಂದ, ಚೌಪದಿ, ತ್ರಿಪದಿ, ದ್ವಿಪದಿಗಳಿಂದ ರಚನೆಯಾಗಿದ್ದು; ಗಾದೆ, ನುಡಿಗಟ್ಟುಗಳಂತಹ ಸಾಲುಗಳಿಂದ ಮನೋಹರವಾಗಿವೆ.

೪. ಅಂಶಗಣ ಇಲ್ಲವೇ ಮಾತ್ರಾಗಣ ಸಂಯೋಜನೆ ಇಲ್ಲವೆ ಇವೆರಡರ ಮಿಶ್ರ ಛಂದೋ ಪದ್ಯಗಳಾಗಿವೆ. ಆದಿ-ಅಂತ್ಯ ಪ್ರಾಸಗಳ ಸೊಬಗಿನಿಂದ ಕೂಡಿದ ಇವುಗಳಿಗೆ ಕೊನೆಯಲ್ಲಿ ಆರಾಧ್ಯ ದೈವದ ಇಲ್ಲವೇ ರಚನಾಕಾರರ ಅಂಕಿತ (ಮುದ್ರಿಕೆ) ಬರುತ್ತದೆ. ಆದರೆ ಬಳಕೆಗೊಂಡ ಅಂಕಿತಗಳಲ್ಲಿ ನಿರ್ದಿಷ್ಟತೆ ಇಲ್ಲವೆನಿಸುತ್ತದೆ. ಉದಾ: ರತ್ನಾಕರ ಬರೆದನೆನ್ನಲಾದ ಹಾಡುಗಳು ಅಪರಾಜಿತೇಶ, ಹಂಸನಾಥ, ನಿರಂಜನ ಸಿದ್ಧ, ಶ್ರೀಮಂದರಸ್ವಾಮಿ, ಚಿದಂಬರ ಪುರುಷ ಮುಂತಾದ ಬೇರೆ ಬೇರೆ ಅಂಕಿತಗಳಿಂದ ಬಳಕೆಗೊಂಡಿರುವುದನ್ನು ನೋಡಬಹುದು.

೫. ಗೀತ ಮಾಧ್ಯಮವಾದ ಕಾರಣ ಇವು ಹಾಡುಹಬ್ಬಗಳು.

೬. ಬೆಡಗು, ಸಾಂಕೇತಿಕೆ, ರೂಪಕ, ಉಪಮೆಗಳಿಂದ ಕೂಡಿದವುಗಳಾಗಿವೆ.

೭. ವಸ್ತುವಿನ ದೃಷ್ಟಿಯಿಂದ ಜಿನತತ್ತ್ವ -ಸಿದ್ಧಾಂತಗಳ ಪ್ರತಿಪಾದನೆ ಇಲ್ಲಿಯ ಮುಖ್ಯ ಅಶಯ.

೮. ತೀರ್ಥವಂದನೆ, ತೀರ್ಥಂಕರ ಸ್ತುತಿಗಳಂತಹ ಸುದೀರ್ಘವಾದ ಹಾಡುಗಳು ರಚನೆಗೊಂಡಿವೆ.

**ಜೈನ ಹಾಡುಗಳ ವಸ್ತು-ವಿಷಯ**

ಜೈನ ಧಾರ್ಮಿಕ ಆಚಾರ-ವಿಚಾರಗಳಲ್ಲದೆ, ಆ ಧರ್ಮದಲ್ಲಿ ಆಗಿಹೋದ ಮಹಾಪುರುಷರ ಜೀವನ ಸಾಧನೆಗಳ ಸ್ತುತಿ ಇಲ್ಲಿಯ ವಸ್ತು. ವಚನ ಕೀರ್ತನೆಗಳಂತೆ ಇಲ್ಲಿ ಸಾಮಾಜಿಕ ಅಭಿವ್ಯಕ್ತಿಯ ತೀವ್ರ ಸಂವೇದನೆ ಇಲ್ಲಿಲ್ಲವಾದರೂ ಲೋಕಜ್ಞಾನವನ್ನೊಳಗೊಂಡ ಅನುಭಾವದ ಮಾತುಗಳಿಂದ ಧಾರ್ಮಿಕತೆಯ ಕಡೆಗೆ ನಮ್ಮ ಒಲವನ್ನು ಕೇಂದ್ರಿಕರಿಸುವುದು ಪ್ರಸ್ತುತ ಹಾಡುಗಳ ಆಶಯವಾಗಿದೆ. ಅಂದರೆ ಜಿನಪತಿಗಂ, ಜಿನಮುನಿಗಂ, ಜಿನಾಗಮಕ್ಕಂ, ಪ್ರಸ್ತುತ ಹಾಡುಗಳ ಆಶಯವಾಗಿದೆ. ಅಂದರೆ ಜಿನಪತಿಗಂ, ಜಿನಮುನಿಗಂ, ಜಿನಾಗಮಕ್ಕಂ, ಜಿನಾಧಿಪತಿಗೆ ಭವನಕ್ಕಂ, ಜಿನಗುಣಸಂಪತ್ತಿಗಂ ಮೀಸಲಾದ ಇಲ್ಲಿಯ ಹಾಡುಗಳಲ್ಲಿ ಜಿನಭಕ್ತಿಯ ನಿಷ್ಠೆ-ಅವಧಾನಗಳು ಸ್ಥಾನ ಗಳಿಸಿವೆ. ಜನ್ಮಾಂತರಗಳ ಪ್ರಸ್ತಾಪ, ಲೌಕಿಕ ಬದುಕಿನ ದುಃಖಮಯ ಸನ್ನಿವೇಶಗಳು, ಇದರಿಂದ ಪಾರಾಗಲು ಹಂಸನಾಥನ, ಧ್ಯಾನ್ಯ ದಾನ-ಪೂಜೆ ಜಪತಪಗಳ ಪರಿಕರಗಳನ್ನೊಳಗೊಂಡ ಇಲ್ಲಿಯ ಹಾಡುಗಳನ್ನು ಸಂಗ್ರಹ ಹಾಗೂ ಅಧ್ಯಯನ ದೃಷ್ಟಿಯಿಂದ ೧. ರತ್ನಾಕರನ ಹಾಡುಗಳು, ೨. ತೀರ್ಥಂಕರರ ಹಾಡುಗಳು, ೨. ಯಕ್ಷಿಣಿಯರ ಹಾಡುಗಳು, ೪. ಜೋಗುಳ ಹಾಡುಗಳು, ೫. ಶೋಭಾನದ ಹಾಡುಗಳು, ೬. ಮಂಗಳಾರತಿಯ ಹಾಡುಗಳು ಹಾಗೂ ೭. ಸಂಕೀರ್ಣ ಹಾಡುಗಳೆಂದು ವರ್ಗೀಕರಿಸಿಕೊಳ್ಳಲಾಗಿದೆ.

**೧. ರತ್ನಾಕರನ ಹಾಡುಗಳು**

ಶತಕ ಬರೆದು ಕೈ ಪಳಗಿಸಿಕೋಂಡ ರತ್ನಾಕರ ಅಣ್ಣನ ಪದಗಳೆಂಬ ಹೆಸರಿನಲ್ಲಿ ಆತ್ಮ ಮೋಕ್ಷ ವಿಚಾರಗಳನ್ನೊಳಗೊಂಡ ಹಾಡುಗಳನ್ನು ಬರೆದಿದ್ದಾನೆ. ಇಲ್ಲಿ ನೀತಿ-ತತ್ತ್ವಗಳೇ ಸ್ಥಾಯಿಭಾವ. ಹೇಳುವ ರೀತಿ ಶತಕಗಳಿಗಿಂತ ತೀರಾ ಸಾಮಾನ್ಯ. 'ಬಿಡುಬಿಡು ತನುವೆ' ಎಂಬ ತನು ವಿಮೋಚನಾಭವ; ಆತ್ಮಧ್ಯಾನ ಮುನಿಗಳಿಗುಂಟು ಗೃಹವಂತರಿಗುಂಟು, ಹಾಗೆಯೇ ಬಲುಶಾಸ್ತ್ರ ಬಡಶಾಸ್ತ್ರಗಳಿಗುಂಟು ಭವ್ಯತಿಲಕರಿಗುಂಟು ಎಂದು ನಿರ್ಭೀಡೆಯಿಂದ ಹೇಳುವ ರತ್ನಾಕರ ಡಾಂಭಿಕರ ನಡೆ-ನುಡಿಗಳನ್ನು ವಿಮರ್ಶೆ ಮಾಡುತ್ತಾನೆ. ಹಿಂದುಳಿದೆನೋ ನಾನು; ಮುಂದಾದರೆಮ್ಮವರು ಮೋಕ್ಷಪುರಕೆ ಎಂಬ ಮೋಕ್ಷ ಸಾಧನೆಯ ತುಡಿತವಿದೆ. ಈ

ಮೋಕ್ಷವನ್ನು ಕೈವಶ ಮಾಡಿಕೊಳ್ಳಬೇಕಾದರೆ ಸಾಧನೆಯ ದಾರಿ ಮುಖ್ಯ. ಆ ಕಾರಣವಾಗಿ "ಆಯುಷ್ಯದಂತ್ಯದೊಳು ಮುಪ್ಪು ತಬ್ಬುತ ನೋಯಿಸುತ ಕರ್ಮವ ಗೆಲ್ಲುಮಲ್ಲ"ನೆಂದು ಕರೆಕೊಡುತ್ತಾನೆ. ಯಾಕೆಂದರೆ ಲೌಕಿಕ ಸುಖಕ್ಕೆ ಮಾರುಹೋದ ನಾವುಗಳು "ನೆರೆ ಕಬ್ಬಿನೊಳಗಿರ್ದ ರಸವ ಕಾಣದೆ ಹೊರಗಿನ ಸೋಗೆಯ (ರವದಿ)ನ್ನು ಮಾತ್ರ ತಿನ್ನುವ ಕುರಿಗಳಂತಾಗಿದ್ದೇವೆ; ಇದು ಸರಿಯಲ್ಲ, ಕಬ್ಬಿನ ರಸವ ತಿನ್ನುವ ಆನೆಯಂತೆ ವಿಷಯದಾಸೆಯಿಂದ ಮಿಮುಖರಾಗಿ ಬ್ರಹ್ಮಾನಂದ ರಸವ ಸವಿಯಬೇಕೆಂದು ಕವಿಯ ಆಶಯವಾಗಿದೆ.

ರತ್ನಾಕರವರ್ಣಿ ಯೋಗಭೋಗಗಳ ಸಮನ್ವಯ ಕವಿ. ಹೀಗಾಗಿ ಯೋಗವೇ ಭೋಗವಯ್ಯ ತಿಳಿದರೆ; ತಿಳಿಯದಿರೆ ತನ್ನ ಯೋಗವೇ ರೋಗವಯ್ಯ ಎಂದಿದ್ದಾನೆ. ಸಂಸಾರ ಸುಖದಿಂದ ಸಾಕಾಗಿ ಹೋಗಿರುವ ಜೀವಿಯು ಸಂಜೀವನದಮೃತವನ್ನು, ಹಾಲ ಸಮುದ್ರವನ್ನು ಹಾಗೂ ಪರುಷಪರ್ವತವನ್ನು ಕಂಡ ಮೇಲೆ ಗಂಜಿ, ಪಶುಜಾಲ ಸಿರಿ ಬೇಕೆಂದು ಹಲಬುವುದೆಷ್ಟು ಉಚಿತವಾದದ್ದು. ಹಾಗೆಯೇ ಪರಮಾತ್ಮ ಭಾವನೆಯನ್ನು ಕಂಡ ಮೇಲೆ ಗುರುಚಿ ದಂಬರನಾಸೆಯೇ ಎಂದು ಪ್ರಶ್ನಿಸುವ ಔಚಿತ್ಯವನ್ನು ಇಲ್ಲಿ ಗಮನಿಸಬೇಕು. ಅಂದರೆ ಆತ್ಮ ಸ್ವರೂಪವನ್ನು ಪಡೆಯಲೆತ್ನಿಸುವ ವ್ಯಕ್ತಿ ವಾಸ್ತವದ ವಿಷಯ ಪರಿವೆಗಳನ್ನು ಲಕ್ಷ್ಯದಲ್ಲಿರಿಸಿಕೊಳ್ಳಬೇಕು. ಅವುಗಳಲ್ಲಿ ಸಿರಿಯೂ ಒಂದು. "ಮಣ್ಣಿನ ಬೆನಕಗೆ ಮಜ್ಜನವೆ ಮರಣವೆಂಬಂತಹ" ಕ್ಷಣಿಕ ಸುಖದ ಸ್ವರೂಪ ಇದರದ್ದು. ದೇಹ, ಆತ್ಮ, ಮನಸ್ಸು, ಮೋಕ್ಷ ಮುಂತಾದ ವಿಷಯಗಳ ಬಗ್ಗೆ ಸಾಕಷ್ಟು ಮಾತಾಡಿದ್ದಾನೆ. ಕರ್ಮದಾಟವೇ ಸಂಸಾರವೆಂಬ ಭಾವನೆ ಹೊಂದಿದ್ದಾನೆ. ಇದರ ಫಲವಾಗಿ ಆಳುದ್ದ ದೇಹ ಗೇಣುದ್ದವಾಗುತ್ತದೆಂದು ಟೀಕಿಸಿದ್ದಾನೆ. ದೇಹದ ಅವಸ್ಥೆಗಳಾದ ಹುಟ್ಟು, ಯೌವ್ವನ, ಮುಪ್ಪು, ಸಾವುಗಳನ್ನು ಕುರಿತು ಅನೇಕ ಪದ್ಯಗಳಲ್ಲಿ ಎಚ್ಚರಿಸಿದ್ದಾನೆ. ಇವುಗಳಿಂದ ತಪ್ಪಿಸಿಕೊಳ್ಳುವ ಪರಿಯನ್ನು ಸೂಚಿಸಿದ್ದಾನೆ. ಲೌಕಿಕ ಜೀವನದಲ್ಲಿ ತೊಳಲುವ ವ್ಯಕ್ತಿಯನ್ನು ಕೋಣ ಮನುಜನೆಂದು ಕರೆದು ಧ್ಯಾನ, ವ್ರತ ಇತ್ಯಾದಿ ಧರ್ಮಗಳ ಮೂಲಕ ಆತ್ಮನ ಕಾಣಬೇಕೆಂದು ವೈರಾಗ್ಯದ ತುತ್ತತುದಿಯನ್ನು ಮೆಟ್ಟಿ ತಿಳಿಸುತ್ತಾನೆ. ಮುಂದುವರಿದು ಯಾವುದು ಹಿತಕರ ಯಾವುದು ಅಹಿತಕರವಾದದ್ದು ಎಂಬುದನ್ನು ಗಾದೆ ಮಾತಿನಂತೆ ಹೇಳಿ ಮನವರಿಕೆ ಮಾಡಿಕೊಳ್ಳುತ್ತಾನೆ.

*ಹಂಸನರಿದು ಭಾವಿಸುವುದೇ ಸಂಸಾರ*
*ಹಂಸನರಿಯದ ಸುಖವೇ ದುಃಸ್ಸಾರ ॥*

*ಆತ್ಮನನರಿದು ಭೋಗಿಪ ಭೋಗ ಸಂಭೋಗ*
*ಆತ್ಮನನರಿಯದ ಭೋಗದುಬ್ಬೇಗ*
*ಆತ್ಮನನರಿದು ಕೂಡುವ ಯೋಗ ಸಂಯೋಗ*
*ಆತ್ಮನನರಿಯದ ಯೋಗ ಕುಯೋಗ ॥*

*ಆಧ್ಯಾತ್ಮ ಮುಟ್ಟಿ ಹಾಡುವ ಗೀತ ಸಂಗೀತ*
*ಆಧ್ಯಾತ್ಮ ಮುಟ್ಟಿ ಹಾಡದ ಗೀತ ದುರ್ಗೀತ*
*ತನ್ನ ಬಲವನ ಜೀವನವೇ ಸಂಜೀವನ*
*ತನ್ನನರಿಯದಿರ್ದಡದು ದುರ್ಜೀವನವು ॥*

ಕೊಲೆ-ಹುಸಿ-ಕಳವು ಕುರಿತಂತೆ ತನ್ನದೇ ಆದ ರೀತಿಯಲ್ಲಿ ರತ್ನಾಕರ ವ್ಯಾಖ್ಯಾನಿಸಿಕೊಮಡು ಹೋಗಿದ್ದಾನೆ. ಕೊಲೆ ಅಂತಕನ ಸಂಕೋಲೆ! ಅದು ಬಹುಘೋರ ನರಕ ನೆಲೆ ಹುಸಿ (ಸುಳ್ಳು) ತನ್ನನ್ನೇ ಮುರಿದು ನುಂಗುವ ಮೃತ್ಯುದೇವಿಯ ಖಡ್ಗದಂತೆ, ವಿಮಲಕೀರ್ತಿ ಕಾಂತೆಯ ಮುಖಕೆ ತೊಡೆದ ಮಸಿಯಂತೆ, ಹಾಗೆಯೇ ಕಳವು ತನ್ನೆದೆಯಲ್ಲಿ ಹೊಕ್ಕ ಕಳವಳವು; ಲೋಕದಳಿವು; ಸಂಸಾರ ಘೋರಾಂಬುರಾಶಿಯ ಸೆಳೆವು. ಪರದಾರರೊಳು ಸ್ನೇಹ ಪರಮ ಪಾಪದ ಗೇಹ, ಪರನಾರಿಯರ ಸಂಗದಿಂದ ಪರಮಾಯುಷ್ಯಕೆ ಭಂಗಬರುತ್ತದೆ. ಇಂತಹ ಅತಿಕಾಂಕ್ಷೆ ಯಾರಿಗಿರುತ್ತದೆಯೋ ಆತನಿಗೆ ಅತಿಕ್ಲೇಶ, ಅತಿದುಃಖ ಎಲ್ಲವೂ ಅತಿಯಾಗುತ್ತವೆ. ಅದಕ್ಕೆ ಬದಲಾಗಿ ಹಂಸನ ಭಜನೆಯಿಂದ ಸದ್ಗತಿಪಡೆದು ಮುಕ್ತಿಯ ಮಾರ್ಗ ಹಿಡಿಯಲು ಆತ್ಮಕ್ಕೆ ಆದೇಶಿಸುತ್ತಾನೆ. ಬದುಕಿನ ಪಾಪ-

ಪುಣ್ಯಗಳೆಂಬ ಕರ್ಮಗಳೇ ಆತ್ಮನ ಬೀಳು-ಏಳುಗಳಿಗೆ ಕಾರಣವೆಂಬುದು ಜೈನರ ಸಿದ್ಧಾಂತವಾಗಿದೆ. ಚಾರಿತ್ರ ಹಾಗೂ ಆಚಾರಗಳು ಜಿನಧರ್ಮದ ಅಂಗಗಳು. ಗುರಿ ಶುದ್ಧವಿದ್ದರಷ್ಟೆ ಅದನ್ನು ಸಾಧಿಸುವ ಮಾರ್ಗ ಶುದ್ಧವಿರಬೇಕು. ಮಾನವ ಸುಖಸಂಪಾದನೆಗೆ ತೊಡಗುತ್ತಾನೆ. ಸುಖವೆಂದರೇನು? ಅದರ ಅಸ್ತಿತ್ವ ಎಲ್ಲಿ? ಅದರ ಸ್ವರೂಪವೇನು? -ಎಂಬಿತ್ಯಾದಿ ಪ್ರಶ್ನೆಗಳಿಗೆ ಇಲ್ಲಿ ಮೊದಲು ಉತ್ತರ ಕಂಡುಕೊಳ್ಳಬೇಕಾಗಿದೆ. ಭೌತಿಕ ದೃಷ್ಟಿಯಲ್ಲಿ ದುಃಖದ ನಂತರ ಸುಖದ ಸರತಿ, ಸಂಸಾರ ಅತಿ ದುಃಖದಿಂದ ಕೂಡಿರುವುದರಿಂದ ಅಲ್ಲಿ ಬರುವ ಅಲ್ಪಸುಖಕ್ಕೆ ಬೆಲೆ. ಆದರೆ ಆತ್ಮನ ಸ್ವಭಾವವಾದ ಸುಖ ಶಾಶ್ವತವಾದದ್ದು. ಇದು ಬಾಹ್ಯವಸ್ತುಗಳಿಂದ ಕೈಗೂಡುವುದಿಲ್ಲ. ಯಾವ ಸತ್ಯಮಾರ್ಗವನ್ನವಲಂಬಿಸುವವೋ ಅದರಲ್ಲಿ ಸಂಶಯ ಪಡದಿರುವ ನಿಃಶಂಕಭಾವ, ಲೌಕಿಕ ಸುಖದಿಚ್ಛೆಯನ್ನು ಮಾಡದಿರುವ ನಿಃಕಾಂಕ್ಷಿತ ಭಾವ, ರೋಗಿಯನ್ನು, ಕುರೂಪಿಯನ್ನು, ದುಃಖಿಯನ್ನು ಕಂಡು ಹೇಸದೆ ಅವನ ಸಹಾಯಕ್ಕೆ ಮುಂದಾಗುವ ನಿರ್ವಿಚಿಕಿತ್ಸಾಗುಣ, ಸತ್ಯದ ಆಚರಣೆಗೆ ಸಹಿಸದ ಅಮೂಢದೃಷ್ಟಿ; ಅಜ್ಞಾನಿ-ಅಸಮರ್ಥರಿಂದ ಸನ್ಮಾರ್ಗದ ನಿಂದೆಯಾಗುತ್ತಿದ್ದರೆ ಖಂಡಿಸಿ ನಿಲ್ಲುವ ಉಪಗೂಹನ ಭಾವ, ಯೋಗ್ಯ ದಾರಿಯಲ್ಲಿ ಕರೆದೊಯ್ಯುವ ಸ್ಥಿತೀಕರಣ, ಸುತ್ತಲಿನವರನ್ನು ಪ್ರೀತಿ-ಸ್ನೇಹದಿಂದ ಕಾಣುವ ವಾತ್ಸಲ್ಯಭಾವ, ಅಹಿಂಸಾಮಯ ಧರ್ಮ ಪ್ರಚಾರದ ಪ್ರಭಾವನಾಗಳೆಂಬ ಸಮ್ಯಗ್ ದರ್ಶನದ ಎಂಟು ಅಂಗಗಳನ್ನು ಅಳವಡಿಸಿಕೊಳ್ಳಬೇಕೆಂದು ಜೈನ ತತ್ತ್ವಶಾಸ್ತ್ರ ಹಾಗೂ ಧರ್ಮದ ತಿರುಳಾಗಿದೆ. ಹಾಗೆಯೇ ಚಾರಿತ್ರ್ಯವೆನ್ನುವುದು ಜೈನ ಧರ್ಮದ ಪ್ರಾಣ. ಇಲ್ಲಿ ಚಾರಿತ್ರ್ಯವೆಂದರೆ ಆಚಾರಗಳು ಎಂದರ್ಥ. ಇದಕ್ಕೆ ಆಧಾರವಾಗಿ ಪಂಚಮಹಾವ್ರತಗಳಾದ ಅಹಿಂಸೆ, ಸತ್ಯ, ಅಸ್ತೇಯ, ಬ್ರಾಹ್ಮಣ ಹಾಗೂ ಅಪರಿಗ್ರಹಗಳು ಮುಖ್ಯವೆನಿಸುತ್ತವೆ. ಇವುಗಳು ವ್ಯಕ್ತಿವಿಕಸನಕ್ಕೆ ಮಾತ್ರ ಪೂರಕವಾಗಿಲ್ಲ. ಇಡೀ ವಿಶ್ವಕಲ್ಯಾಣಕ್ಕೆ ಪ್ರೇರಕವಾಗಿವೆಂಬುದನ್ನು ರತ್ನಾಕರ ಸರಳವಾದ ಹಾಡುಗಳ ಮೂಲಕ ಸಾಮಾನ್ಯರಿಗೆ ಸಂದೇಶ ಮಾಡಿದ್ದಾನೆ.

**೧. ತೀರ್ಥಂಕರರ ಹಾಡುಗಳು**

ಜೈನರಲ್ಲಿ ದೇವರ (ಈಶ್ವರ) ಕಲ್ಪನೆಯಿಲ್ಲವಾದರೂ ಆತ್ಮಕ್ಕೆ ಪ್ರಾಶಸ್ತ್ಯವಿದೆ. ಆತ್ಮವನ್ನು ಗೆದ್ದ ತೀರ್ಥಂಕರಾದಿ ಮುಕ್ತಜೀವರ ಪೂಜೆ ಇವರಲ್ಲಿ ನಡೆಯುತ್ತದೆ. ಅವರಲ್ಲಿ ಅರ್ಹಂತರು, ಸಿದ್ಧರು, ಉಪಾಧ್ಯಾಯರು, ಆಚಾರ್ಯರು, ಸಾಧುಗಳನ್ನೊಳಗೊಂಡು ಪಂಚಪರಮೇಷ್ಠಿಗಳೆಂದು ಕರೆಯುವ ವಾಡಿಕೆ. ತೀರ್ಥಂಕರರನ್ನು ಸಂಸಾರ ನಿಸ್ತರಣೋಪಾಯವನ್ನು ಮಾಡುವ ತೀರ್ಥಂಕರನೆಂದೂ; ರಾಗದ್ವೇಷ ಇಲ್ಲವೆ ಕರ್ಮರೂಪ ಶತ್ರುಗಳನ್ನು ಜಯಿಸಿದ ಜಿನನೆಂದೂ, ಪರಮಸ್ಥಾನದಲ್ಲಿರುವ ಪರಮೇಷ್ಠಿಯೆಂದೂ, ರಾಗವಿಲ್ಲದಿರುವ ವೀತರಾಗನೆಂಬ ಬೇರೆಬೇರೆ ಹೆಸರಿನಿಂದ ಕರೆಯಲಾಗುತ್ತದೆ.

ನಾಲ್ಕು ರೀತಿಯ ಘಾತಿಕರ್ಮಗಳನ್ನು ನಾಶಮಾಡಿಕೊಂಡು, ಅನಂತಜ್ಞಾನ-ದರ್ಶನ-ಸುಖ-ವೀರ್ಯಗಳುಳ್ಳವರೂ, ಶುಭ್ರದೇಹಿಗಳೂ, ಪರಿಶುದ್ಧರೂ ಆದ ತೀರ್ಥಂಕರರು ನಿಶ್ಚಯಾನುಸಾರವಾಗಿ ಅಶರೀರಿಗಳಾದರೂ ವ್ಯವಹಾರಾನುಸಾರವಾಗಿ ಸಪ್ತಧಾತು ರಹಿತ ಅತ್ಯುಜ್ವಲ ಪವಿತ್ರದೇಹವುಲ್ಲವರೆಂಬ ಭಾವನೆ ಜೈನಧರ್ಮದ ಸಿದ್ಧಾಂತ. ಈ ತೀರ್ಥಂಕರರು ಕ್ಷುಧೆ, ತೃಷೆ, ಭಯ, ದ್ವೇಷ, ರಾಗ, ಮೋಹ, ಚಿಂತೆ, ಜರೆ, ರೋಗ, ಮೃತ್ಯು, ಖೇದ, ಸ್ವೇದ, ಮದ, ಆರತಿ, ವಿಸ್ಮಯ, ಜನ್ಮ, ನಿದ್ರೆ, ವಿಷಾದಗಳೆಂಬ ಹದಿನೆಂಟು ರೀತಿಯ ದೋಷಗಳಿಂದ ಮುಕ್ತರಾದವರು. ಭೂಮಿಯ ಪಾಪವನ್ನು ಹಗುರುಮಾಡಲಿಕ್ಕೆ; ತಾಮಸ ಹೃದಯವನ್ನು ಬೆಳಗುವುದಕ್ಕೆ, ಕಲ್ಪಕಲ್ಪಗಳಲ್ಲಿ ತೀರ್ಥಂಕರರು ಉದಯಿಸಿದ್ದಾರೆಂಬ ಭಾವನೆಯಿದೆ. ತೀರ್ಥಂಕರರಾಗುವ ಜೀವರಿಗೆ ಮಾತೃಗರ್ಭದಲ್ಲಿ ಗರ್ಭಾವತರಣ, ಜನಿಸಿದಾಗ ಜನ್ಮಾಭಿಷೇಕ, ನಿಷ್ಕ್ರಮಣ ಕಾಲದಲ್ಲಿ ಪರಿನಿಷ್ಕ್ರಮಣ, ಕೇವಲ ಜ್ಞಾನವಾದಾಗ ಕೇವಲ ಜ್ಞಾನ ಕಲ್ಯಾಣ, ಪರಿನಿರ್ವಾಣ ಕಾಲದಲ್ಲಿ ಪರಿನಿರ್ವಾಣ ಕಾಲದಲ್ಲಿ ಪರಿನಿರ್ವಾಣ ಕಲ್ಯಾಣವೆಂಬ ಪಂಚಮಹಾಕಲ್ಯಾಣಗಳೆಂಬ ಮಹೋತ್ಸವಗಳು ನೆರವೇರುತ್ತವೆ.

ತೀರ್ಥಂಕರರಿಗೆ ಅಪಾಯಗಮಾತಿಶಯ, ಜ್ಞಾನಾತಿಶಯ, ಪೂಜಾತಿಶಯ, ವಚನಾತಿಶಯಗಳೆಂಬ ಚತುಷ್ಟಾತಿಶಯಗಳಲ್ಲದೇ; ಬೇರೆಯೇ ಆದ ೩೪ ಅತಿಶಯಗಳಿರುವವು. ಅವುಗಳೆಂದರೆ, "೧. ದೇಹದಲ್ಲಿ ಯಾವಾಗಲೂ ಜೀವರಿಲ್ಲ, ೨. ಯಾವ ಹೊಲಸೂ ಇಲ್ಲ, ೩. ಶರೀರದ ರಕ್ತ-ಮಾಂಸಗಳು ಶುಭ್ರವಾಗಿ, ವಿಶುದ್ಧವಾಗಿ ಇರುವವು, ೪. ಅವರ ಆಕೃತಿಯು ಉತ್ತಮ (ಸಮಚತುರಸ್ರ ಸಂಸ್ಥಾನ),

೫. ಅವರ ಶರೀರದ ಸ್ನಾಯುವೇಷ್ಟನ, ಎಲುಬು ಕೀಲುಗಳು ವಜ್ರಮಯ, ೬. ಅವರ ಶರೀರವು ಅತಿಶಯ ಸುಂದರ, ೭. ಅವರ ದೇಹವು ದಿವ್ಯಸುಗಂಧವನ್ನು ಬೀರುವುದು, ೮. ಅವರ ದೇಹವು ೧೦೮ ಸುಲಕ್ಷ (ಲಾಂಛನ)ಗಳುಳ್ಳದು, ೯. ಅವರ ಶರೀರವು ಅಪರಿಮಿತ ವೀರ್ಯವುಳ್ಳದ್ದು, ೧೦. ಅವರ ಭಾಷಣವು ಹಿತವೂ ಮಿತವೂ, ಪ್ರಿಯವೂ ಆಗಿರುವುದು. (ಇವು ೧೦ ಜನ್ಮ ಸಿದ್ಧವಾದ ಅತಿಶಯಗಳು.) ಕೇವಲ ಜ್ಞಾನ ಉಂಟಾದ ತರುವಾಯ ಬರುವ ಅತಿಶಯಗಳು ಹತ್ತು. ಅವುಗಳೆಂದರೆ, ೧. ಅವರು ಇರುವ ಪ್ರದೇಶದ ಸುತ್ತಲೂ ೧೦೦ ಯೋಜನೆಗಳವರೆಗೆ ಸುಭಿಕ್ಷವಿರುವುದು. ೨. ಅವರು ಭೂಮಿಯನ್ನು ಸೋಂಕದೆ ಆಕಾಶದಲ್ಲಿ ಸಂಚರಿಸುವರು, ೩. ಅವರಿರುವಲ್ಲಿ ಯಾವ ಪ್ರಾಣಿಯ ವಧೆಯೂ ಆಗುವುದಿಲ್ಲ. ೪. ಅವರು ಭೋಜನ ಮಾಡುವುದಿಲ್ಲ, ೫. ಅವರು ಸಂಚರಿಸುವಲ್ಲಿ ಅತಿವೃಷ್ಟ್ಯಾದಿ ಅತಿಬಾಧೆಗಳಿಲ್ಲ, ೬. ಅವರನ್ನು ನೋಡುವವರಿಗೆಲ್ಲ ಅವರು ತಮ್ಮ ಸಮ್ಮುಖದಲ್ಲಿದ್ದಂತೆ ತೋರುವುದು, ೭. ಎಲ್ಲಾ ವಿದ್ಯೆಗಳ ಒಡೆತನವು ಅವರಿಗುಂಟು, ೮. ಅವರ ನೆರಳು ಬೀಳುವುದಿಲ್ಲ, ೯. ಅವರು ಕಣ್ಣುರೆಪ್ಪೆಗಳನ್ನು ಬಿಡಯುವುದಿಲ್ಲ, ೧೦. ಅವರ ದೇಹದ ಕೂದಲು ಉಗುರುಗಳು ಬೆಳೆಯುವುದಿಲ್ಲ. (ಇನ್ನು ೧೪ ಅತಿಶಯಗಳು ದೇವತೆಗಳಿಂದ ಮಾಡಲ್ಪಡುವವು) ಅವುಗಳೆಂದರೆ: ೧. ಅರ್ಹಂತರಿಗೆ ಅರ್ಧ ಮಾಗಧೀ ಭಾಷೆಯುಂಟಾಗುವುದು, ೨. ಸಮಸ್ತ ಜೀವರಲ್ಲಿ ಪರಸ್ಪರ ಮೈತ್ರಿಯುಂಟಾಗುವುದು, ೩. ದಿಕ್ಕುಗಳು ನಿರ್ಮಲವಾಗುವುದು, ೪. ಆಕಾಶವು ನಿರ್ಮಲವಾಗುವುದು, ೫. ಎಲ್ಲ ಋತುಗಳ ಹೂ-ಹಣ್ಣು ಕಾಯಿಗಳೂ, ಕಾಳುಗಳೂ ಬೆಳೆಯುವವು, ೬. ಒಂದು ಗಾವುದವರೆಗಿನ ನೆಲವು ಕನ್ನಡಿಯಂತೆ ನಿರ್ಮಲವಾಗುವುದು, ೭. ಅರ್ಹಂತರು ನಡೆಯುವಾಗ ಅವರ ಪಾದಗಳ ಕೆಳಗೆ ಸುವರ್ಣ ಕಮಲಗಳುಂಟಾಗುವವು, ೮. ಆಕಾಶದಲ್ಲಿ ಜಯಜಯಧ್ವನಿಯುಂಟಾಗುವುದು, ೯. ಮಂದವೂ, ಸುಗಂಧವೂ ಆದ ಗಾಳಿ ಬೀಸುವುದು, ೧೦. ಸುವಾಸನೆಯ ನೀರಿನ ಮಳೆಯಾಗುವುದು, ೧೧. ಪವನಕುಮಾರ ದೇವತೆಗಳು ನೆಲವನ್ನು ಗೂಡಿಸಿ ನಿರ್ಮಲ ಮಾಡುವರು, ೧೨. ಎಲ್ಲ ಜೀವಿಗಳಿಗೆ ಆನಂದವಾಗುವುದು, ೧೩. ಅವರ ಇದಿರಿನಲ್ಲಿ ಧರ್ಮಚಕ್ರವು ತಿರುಗುವುದು, ೧೪. ಛತ್ರ ಚಾಮರ ಘಂಟೆ ಮೊದಲಾದ ಎಂಟು ಮಂಗಲ ವಸ್ತುಗಳು ಯಾವಾಗಲೂ ಹತ್ತಿರ ಇರುವವು." (ಜೈನಧರ್ಮ ಪರಿಭಾಷೆ: ಮ.ಪ್ರ.ಪೂಜಾರ ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ, ೧೯೭೬, ಪುಟ ೧೦೮-೧೦೯). ಇವುಗಳ ಜೊತೆಗೆ ತೀರ್ಥಂಕರರಿಗೆ ಅಷ್ಟಮಹಾ ಪ್ರಾತಿಹಾರ್ಯಗಳಿವೆ. ಇವು ಇವರ ಗುಣಗಳೆನಿಸಿವೆ. ಇದರಿಂದಾಗಿ ಮತಿ-ಶ್ರುತ-ಅವಧಿಗಳೆಂಬ ತ್ರಿಕಾಲಜ್ಞಾನಿಗಳೆಂಬ ಹೆಗ್ಗಳಿಕೆ ಇವರಿಗೆ ಪ್ರಾಪ್ತವಾಗಿದೆ. ಕ್ಲೇಶಗಳನ್ನು ತೊಡೆದುಹಾಕಿದ ಕೇವಲ ಜ್ಞಾನಿಗಳು. ತೀರ್ಥಂಕರರು ತಮ್ಮ ಮುಕ್ತಿ ಸಾಧನೆಯ ಜೊತೆಗೆ ಸಂಸಾರಿ ಜೀವರಿಗೆ ಪರಿನಿರ್ವಾಣ ಮಾರ್ಗವನ್ನು ತೋರುತ್ತಾರೆ.ಇವರನ್ನು ಕುರಿತಾಗಿ ಜೈನ ಪುರಾಣಾದಿಗಳು ಸೃಷ್ಟಿಯಾದಂತೆ ಇವರ ಅತಿಶಯ ವರ್ಣನೆಗಳನ್ನು ಕಿರಿದರಲ್ಲಿ ಹಿರಿದರ್ಥ ತಿಳಿಸಿಕೊಡುವಂತೆ ಜೈನ ಹಾಡುಗಳು ಬಣ್ಣಿಸಿವೆ. ತೀರ್ಥಂಕರರು ಪುರಾತನದಲ್ಲಿ ೨೪ ಜನ, ವರ್ತಮಾನದಲ್ಲಿ ೨೪ ಜನ ಹಾಗೂ ಭವಿಷ್ಯತ್ಕಾಲದಲ್ಲಿ ೨೪ ಜನ ಆಗಿ ಹೋಗಿದ್ದಾರೆ. ಪ್ರಸ್ತುತ ಹಾಡುಗಳು ಹೆಚ್ಚಾಗಿ ೨೪ ಜನ ವರ್ತಮಾನ ಕಾಲದ ತೀರ್ಥಂಕರರನ್ನು ಕುರಿತು ರಚನೆಗೊಂಡಿವೆ.

ಕಾವ್ಯಾರಂಭದ ಮಂಗಳಾಚರಣ ಪದ್ಯಗಳು, ನಾಂದ್ಯಗಳಲ್ಲಿ ಸಂಕಲನಗೊಂಡಿರುವ ಪ್ರಾರ್ಥನ ಇಲ್ಲವೇ ಸ್ತೋತ್ರ ಪದ್ಯಗಳಲ್ಲದೆ ಇಡೀ ಕಾವ್ಯವೇ ಪ್ರಾರ್ಥನೆಯಾಗಿರುವ ಹಲವು ನಿದರ್ಶನಗಳಿವೆ. ಹರಿಹರ ಕವಿ ಪ್ರಾರ್ಥನೆಗಾಗಿಯೇ ಇಡಿಯಾಗಿ ರಗಳೆಯನ್ನು ಬರೆದಿದ್ದಾನೆ. ವೀರಶೈವ ಸಾಹತ್ಯದಲ್ಲಂತೂ ಈ ಪ್ರಕಾರ ವಿಪುಲವಾಗಿ ಬೆಳೆದಿದೆ. ಪ್ರಾರಂಭದಲ್ಲಿ ದೈವೀ ಕೃಪೆಗಾಗಿ ಸ್ತೋತ್ರಗಳು ಮೀಸಲಾಗಿದ್ದವು. ಬರುಬರುತ್ತಾ ಇದರ ವಸ್ತು ವ್ಯಾಪ್ತಿಗೆ ಧರ್ಮ ಧರ್ಮಾಧಿಕಾರಿಗಳು, ಪುಣ್ಯಪುರುಷರು ಒಳಗಾಗಿದ್ದಾರೆ. ಹಾಗೆಯೇ ಜೈನ ಹಾಡುಗಳಲ್ಲಿಯ ತೀರ್ಥಂಕರ ಹಾಡುಗಳು ಈ ಸ್ತೋತ್ರ ಸಾಹಿತ್ಯ ಪರಂಪರೆಗೆ ಸೇರಿದವುಗಳಾಗಿದ್ದು ೨೪ ತೀರ್ಥಂಕರರ ಸಾಧನೆಯನ್ನು ವೈಭವೀಕರಿಸಿ ಪಠಣ ಮಾಡಿರುವುದು ಹಾಡುಗಳ ಒಟ್ಟು ಆಶಯವಾಗಿದೆ. ಕವಿಯ ಅಂತರಂಗದ ಸುಪ್ತಬಯಕೆಯ ಪ್ರತೀಕವಾಗಿರುವ ಇಲ್ಲಿಯ ಹಾಡುಗಳಲ್ಲಿ ಭಕ್ತಿ-ಶಾಂತರಸಗಳು ಮಡುಗಟ್ಟಿ ನಿಂತಿವೆ. "ಶ್ರೀಮದಮರಪತಿ ನರನೆಂಬ" ೨೪ ನುಡಿಗಳ ಸುದೀರ್ಘವಾದ ಹಾಡು ೨೪ ತೀರ್ಥಂಕರರನ್ನು ಬಣ್ಣಿಸುವ, ವಂದಿಸುವ, ಮೋಕ್ಷಪುರಕ್ಕೆ ದಾರಿ ತೋರಿಸೆಂದು ಬೇಡುವ ಪ್ರಾರ್ಥನ ಪದ್ಯವಾಗಿದೆ. ಕಾಮಿತಾರ್ಥವನು ಕೊಡುವ ವೃಷಭ, ಭಕ್ತಿಯ ಅತಿಶಯವಾದ ಅಜಿತ, ಸುಖದಿಂದ ತುಂಬಿರುವ ಶಂಭವಜಿನ, ಶುಭಲಕ್ಷಣ ಮೂರುತಿಯಾದ ಅಭಿನಂದನ, ಮಮತೆಯ ಪ್ರತೀಕವಾದ ಸುಮತಿ, ಪದ್ಮಾವ ಶಾಂತದವನಾದ ಪದ್ಮಪ್ರಭ, ಸುಖವಿತ್ತು ಸಲಹುವ ಸುಪಾರ್ಶ್ವನಾಥ, ಭವಬಂಧನವನ್ನು ಬಿಡಿಸುವ ಚಂದ್ರಪ್ರಭ, ಅಮೃತಾಂಗನೆಯೊಳು ನಿಂತ ಪುಷ್ಪದಂತ ಪಾತಕವನ್ನೆಲ್ಲ ಪರಿದೀಡಾಡಿದ ಶೀತಳಸ್ವಾಮಿ, ಕಾಮಿತಫಲವೀಯುವ ಶ್ರೇಯಾಂಸ; ಲೇಸನ್ನುಂಟು ಮಾಡುವ ವಾಸುಪೂಜ್ಯ, ಅಮರಗತಿ-

ಮತಿಕೊಡುವ ವಿಮಲಜಿನ, ಮುಕ್ತಿಸಂಪದವನೀಯ್ಯುವ ಅನಂತಜಿನ, ಧರ್ಮವನ್ನು ಧರೆಯೊಳುದ್ಧರಿಸಿದ ಧರ್ಮನಾಥ, ಅಗಣಿತ ಸುಖಗಳ ಗಣಿಯಾದ ಶಾಂತಿನಾಥ, ಭವನಾಶಕ್ಕೆ ಕಾರಣನಾದ ಕುಂಥುನಾಥ, ಜನರನ್ನು ಸಲಹುವ ಅರಜಿನ, ದೇವ ಮಲ್ಲಿನಾಥ, ಅನುಪಮಮತಿಗಣ ವೀತರಾಗರಾದ ಮುನಿಸುವ್ರತ, ಕೋಮಲಾಂಗನಾದ ನಮಿನಾಥ, ಮೋಕ್ಷ ಸಂಪದ ನೀಡುವ ನೇಮಿನಾಥ, ಸಿದ್ಧಪದವಿ ಕೊಡುವ ವರ್ಧಮಾನರನ್ನು ತಪಪ್ದೆ ನೆನೆವೆನು ಇಪ್ಪತ್ತು ನಾಲ್ವರ ಅಲ್ಪಮತಿಯೊಳು ನಾ ನಿಮ್ಮ ! ಎಂಬ ಉತ್ಕಟ ಭಾವ ಇಂತಹ ಹಾಡುಗಳಲ್ಲಿ ಕಂಡು ಬರುತ್ತವೆ. ಜೊತೆಗೆ ಇಪ್ಪತ್ನಾಲ್ಕು ತೀರ್ಥಂಕರ ಹೆಸರು-ವ್ಯಕ್ತಿತ್ವದ ಪರಿಚಯವಾಗುತ್ತದೆ. ಇದೇ ರೀತಿ ಸ್ತುತಿಸಲೆನಗಳವೆ, ಆದಿನಿನೇಶ್ವರ, ವೃಷಭ ಜಿನೇಶಗೆ, ಅಮರವಂದಿತನಾದ, ಎಂಬ ಪದ್ಯಗಳು ಕೂಡ ತೀರ್ಥಂಕರರ ಮಹಿಮೆಯನ್ನು ಸಾರುತ್ತವೆ.

ಕೆಲವು ಹಾಡುಗಳು ತೀರ್ಥಂಕರರ ಜನನ-ಯೌವ್ವನ-ನಿರ್ವಾಣ ಮುಂತಾದ ಜೀವನ ಚರಿತ್ರೆಯನ್ನು ಕಟ್ಟಿಕೊಡುತ್ತವೆ. ಜೀವನದುದ್ದಕ್ಕೂ ಜಿನರಿಗೆ ನಡೆಯುವ ಪಂಚ ಕಲ್ಯಾಣ ಮಹೋತ್ಸವಗಳ ವರ್ಣನೆಯನ್ನು ಸೊಗಸಾಗಿ ಪ್ರತಿಪಾದಿಸುತ್ತವೆ. ಉದಾ: ಜೋ ಜೋ ಜೋ ಎಂಬ ಹಾಡು ಆದಿಜಿನೇಶನಾದ ವೃಷಭವನ್ನು ಕುರಿತು ೨೦ ನುಡಿಗಳಲ್ಲಿ ಆತನ ಇತಿವೃತ್ತಿಯನ್ನೇ ಪಟ್ಟಿ ಮಾಡುತ್ತಾ ಹೋಗುತ್ತದೆ.

*ಸರ್ವಾರ್ಥ ಸಿದ್ಧಿಯ ಬಿಟ್ಟು ನೀ ಬಂದು*
*ಮರುದೇವಿಯ ಶುದ್ಧ ಉ*
*ದರದೊಳ್ನಿಂದು ಇಂದ್ರನರಿದು ವಿದತ್ತಪತಿ*
*ಕರೆದಂದು ಅನುಜ್ಞೆಯನಮಳ ಪೇಳ್ವರೆಂದು*

ಎಂಬ ೨ನೇ ನುಡಿಯಿಂದ ಪ್ರಾರಂಭವಾಗುವ ಹಾಡು ಅಯೋಧ್ಯೆಯ ನಾಭಿರಾಜನ ಮನೆಯ ಸುತ್ತೆಲ್ಲಾ ರತ್ನದಾ ಮಳೆಗರೆಯಲು ಇಂದ್ರನು ವಿದತ್ತಪತಿಯನ್ನು ಕಳಿಸುವುದು, ಶಚಿದೇವಿ ಸಹಿತ ಇಂದ್ರನು ಪ್ರಸೂತಿ ಗೃಹವನ್ನು ಪ್ರವೇಶಮಾಡುವುದು, ಮಗುವಿಗೆ ಸ್ನಾನ ಮಾಡಿಸುವುದು, ಅಂಗವಸ್ತ್ರಗಳಿಂದ ಮೈಯನೊರೆಸುವುದು, ವಿಶ್ವಕರ್ಮರು ಚಿತ್ತಚಿತ್ತಾರದ ತೊಟ್ಟಿಲನ್ನು ಮಾಡಿಕೊಡುವುದು, ನಾರಿಯರೆಲ್ಲ ಕೂಡಿ ಜೋ ಜೋ ಜೋ ಪಾಡುವುದು, ಆ ನೆಪದಲ್ಲಿ ೨೪ ತೀರ್ಥಂಕರರ ಗುಣಗಳನ್ನು ಕೊಂಡಾಡುವುದು ಇಡೀ ಹಾಡಿನ ತುಂಬಾ ಓತೋಪ್ರೋತವಾಗಿ ಹರಿದು ಬಂದಿದೆ.

'ಉದಯ ಕಾಲದೊಳೆದ್ದು' ಎಂಬುದು ಉದಯರಾಗ. ಒಂದು ರೀತಿಯಲ್ಲಿ ಸುಪ್ರಭಾತದ ಹಾಡು ಇದಾಗಿದೆ. ಉದಯ ಕಾಲದೊಳೆದ್ದು ಮುದದಿ ಸ್ನಾನವ ಮಾಡಿ ಮೃದುವಚನದಿಂದ ಶ್ರೀಜಿನರ ನೆನೆಯೈ" ಎಂಬ ಪಲ್ಲವಿಯಿಂದ ಜಿನ ಸ್ತುತಿಪರವಾದ ಹಾಡೆಂಬುದು ತಿಳಿದು ಬರುತ್ತದೆ. ಇಲ್ಲಿ ಪೆನಗೊಂಡೆ, ರತ್ನಗಿರಿ, ನಾಮಗೊಂಡಲ, ರಾಂಪುರ, ಹಿರಿಯೂರು, ವೇಣುಪುರಿ, ಕುಚ್ಚಂಗಿ, ಬೇಳೂರು, ಕೂಡಲೂರು, ನಿಡಗಲ್ಲು, ಶಿರ, ನಿಟ್ಟೂರು, ಚನ್ನಗಿರಿ ಮುಂತಾದ ಸ್ಥಳಗಳಲ್ಲಿ ಪ್ರತಿಷ್ಠಾಪನೆಗೊಂಡ ಜಿನರಸ್ತುತಿ ಇದೆ. ಆಯಾ ಸ್ಥಳಗಳಿಗೆ ಹಾಡುಗಾರ ಅನ್ವರ್ಥಕ ವಿಶೇಷಣಗಳನ್ನು ನೀಡಿರುವುದು ಅರ್ಥವತ್ತಾಗಿದೆ. ಹೆಸರಾದ ಪೆನುಗೊಂಡೆಯ ಪಚ್ಚಪಾರೀಶ್ವರ, ನಾಮಸಾಸಿರದೊಡೆಯ ನಾಮಗೊಂಡಲ ಅನಂಜಜಿನ, ನಿಚ್ಛ ವೈಭವದೊಳೆಸೆವ ವೇಣುಪುರಿ, ಇಳೆಯೊಳಧಿಕವಾದ ಬೇಳೂರು ಮಿಮಲ ಜಿ, ಎಡೆಬಿಡದ ನಿಡಗಲ್ಲು ಪಾರೀಶ್ವ, ಜಗದೊಳತಿಶಯವಾದ ಶಿರ್ಯದ ಶಾಂತಿಜಿನ ಹೀಗೆ ಮುಂತಾಗಿ ಬಣ್ಣಿಸುವ ರೀತಿ ಹಾಗೂ ಕೊನೆಯಲ್ಲಿ ಛಪ್ಪನ್ನದೇಶದೊಳಗಿಪ್ಪ ಜಿನ ಗೇಹದೊಳು ಇಪ್ಪತ್ನಾಲ್ಕು ಜಿನಬಿಂಬಗಳಿಗೆ ಪುಷ್ಪಗಂಧಕ್ಷತೆಯ ಫಲಗಳಿಂದರ್ಚಿಸುವ ಹಂಬಲವಿದೆ. ವಸುಧೆಗಧಿಕವಾದ ದೇವ' ಎಂಬ ಸ್ತುತಿ ಪದ್ಯ ೧೪ನೇ ತೀರ್ಥಂಕರನಾದ ಅನಂತನಾಥನನ್ನು ಕುರಿತಾದುದಾಗಿದೆ.

*ವಸುಧೆನಧಿಕವಾದ ದೇವಕಾಣಮ್ಮ*
*ಕುಸುಮಬಾಣನ ಮರ್ಧಿಸಿದ ಕಾಣಮ್ಮ*

*ವಸುಧೆಯ ಭವ್ಯರ ಭಾಗ್ಯಕಾಣಮ್ಮ*
*ಶಶಿಮುಖಿಯರು ನೋಡುವ ಬನ್ನಿರಮ್ಮ ॥*

ಎಂದು ಗುಣಗಾನ ಮಾಡುವುದರಿಂದ ಪ್ರಾರಂಭವಾಗಿ ಸಮವಸರಣ ಮಂಟಪವನ್ನು ಪ್ರವೇಶಿಸುವ; ಮೂವತ್ನಲ್ಕು ಅತಿಶಯಗಳು, ಮೂವತ್ತು ಲಕ್ಷದಾಯುಷ್ಯ ಎಡಬಲಗಳಲ್ಲಿರುವ ಅನಂತಮತಿ-ಪಾತಾಳ ಯಕ್ಷೆ-ಯಕ್ಷರ ಉಲ್ಲೇಖವಿದ್ದು, ಕೊನೆಯಲ್ಲಿ

*ಪಾರ್ಥಿವವೆಂಬ ಸಂವತ್ಸರವಮ್ಮ*
*ಕಾರ್ತೀಕ ಮಾಸದಷ್ಟಾನೀಕವಮ್ಮ*
*ಕರ್ತೃ ಅನಂತ ಜಿನೇಶಗಮ್ಮ*
*ಮುಕ್ತಿಸುಖವ ಶಾಂತಿ ಮುನಿಗೀವನಮ್ಮ ॥*

ಎನ್ನುವಲ್ಲಿ ಇವರ ನಿರ್ವಾಣ ಹೊಂದಿದ ಕಾಲಮಾನವನ್ನು ಸೂಚಿಸಲಾಗಿದೆ. ಹಾಗೆಯೇ ಆದಿಜಿನೇಶ್ವರ ನಮೋ ಎಂಬ ಮೂರು ನುಡಿಗಳ ೨೪ ತೀರ್ಥಂಕರರನ್ನು ಸ್ತುತಿಸಿರುವುದು ವಿಶೇಷವಾಗಿದೆ.

*ಅಜಿತಶಂಭವ ಅಭಿನಂದನ ಸುಮತೀಶ*
*ತ್ರಿಜಗವಂದಿತ ಸುಪಾರೀಶ್ವರ ಚಂದ್ರಪ್ರಭ*
*ನಿಜಗುಣಿ ಪುಷ್ಪ ಶೀತಳರೇ ನಮೋ ॥*

*ಶ್ರೇಯೋ ಜಿನವಾಸುಪೂಜ್ಯ ವಿಮಲ ಜಿನ*
*ಆಯತಮುಕ್ತಿ ಅನಂತನಮೋ*
*ಕಾಯಜ ಜಯಧರ್ಮ ಶಾಂತಿ ಜಿನನೇ*
*ಕುಂಥು ಕಾವುದೆನ್ನನು ಅರೆಸ್ವಾಮಿ ನಮೋ ॥*

*ಮಲ್ಲಿಜಿನೇಶ್ವರ ಮುನಿಸುವ್ರತ ಮುಕ್ತಿ*
*ವಲ್ಲಭ ನಮಿನೇಮಿ ಪಾರೀಶ್ವನಮೋ*
*ಬಲ್ಲಿದ ವೀರ ಜಿನೇಂದ್ರ ಚೌವೀಶನಿ*
*ಮ್ಮಲ್ಲಡಿಗಳಿಗೆರಗುವೆನು ನಮೋ ॥*

ಹೀಗೆಯೇ ಅಮರವಂದಿತನಾದ, ದೇವಪಾಲಿಸು ಎನ್ನ, ತೋರಿಸೊ ದೇವಾ, ಪಾಲಿಸೆನ್ನ ಪರಮದೇವ, ಬಂದು ನೋಡಿರೆಲ್ಲ, ಪಾಲಿಸೆನ್ನ ಚಂದ್ರನಾಥ, ಜಿನನೆ ಬಾರೋ ಜಿನ ಚಂದ್ರನೆ ಬಾರೋ, ಭಜಿಸಿರೋ ಭವ್ಯರೆಲ್ಲ, ಕರುಣಿಸೆನ್ನನು ಶಾಂತಿನಾಥ ಮುಂತಾದ ಹಾಡುಗಳಲ್ಲಿ ತೀರ್ಥಂಕರರನ್ನು ಹಲವು ರೀತಿಯಿಂದ ಸ್ತುತಿ ಮಾಡಿ ಹಾಡಲಾಗಿದೆ. ನೇಮಿಜಿನೇಶ್ವರ ಸ್ವಾಮಿ ಎಂಬ ಹಾಡು ೨೮೩ ದ್ವಿಪದಿ ಛಂದಸ್ಸಿನಲ್ಲಿ ರಚನೆಗೊಂಡ ಸುದೀರ್ಘ ಹಾಡಾಗಿದೆ.

*ನೇಮಿನಾಥನ ಪಂಚಕಲ್ಯಾಣವನು ಹೇಳ್ವೆ*
*ನೇಮದಿಮದ ಶಮಭವಗಳು ಸಹಿತವಾಗಿ*

ಎಂದು ಹೇಳಿರುವ ಕವಿ ಶಬರನು ಸತಿಯ ಸಮೇತ ಕಾಡಿಗೆ ಹೋಗಿದ್ದ ಸನ್ನಿವೇಶ, ಅಮಲಬುದ್ಧಿ ವಿಮಲ ಬುದ್ಧಿಗಳ ಯೋಗ ಸಾಧನೆ, ಅವರಿಂದ ಶಬರನಿಗೆ ಧರ್ಮಭೋದೆ ಮುಂತಾದ ಕಥಾನಕವೇ ಬಿಚ್ಚಿಕೊಂಡಿದೆ. ಹೀಗೆ ಇಲ್ಲಿಯ ಹಾಡುಗಳು ಭಕ್ತನ ಅಂತರಂಗದ ಭಕ್ತಿಯ ಆವೇಗವನ್ನು ತಿಳಿಸುವುದರ ಜೊತೆಗೆ ತೀರ್ಥಂಕರರ ಲಾಂಛನ, ತಂದೆ-ತಾಯಿ, ಜನ್ಮಸ್ಥಳ, ನಿರ್ವಾಣ ಸಮಯ, ಧರ್ಮಭೋದೆ, ಪಂಚಕಲ್ಯಾಣ ಪ್ರಸಂಗಗಳು, ಸಮವರಸರಣ ರಚನಾ ಪರಿಕಲ್ಪನೆಯನ್ನು ತೋರಿಸುವುದರ ಮೂಲಕ ಇಡೀ ಜೈನ ಧರ್ಮದ ಸಾಂಸ್ಕೃತಿಕ ಆಯಾಮಗಳನ್ನು ಅನಾವರಣಗೊಳಿಸಿವೆ.

**೩. ಯಕ್ಷಿಣಿಯರ ಹಾಡುಗಳು**

ಯಕ್ಷ-ಯಕ್ಷಿಯರು ಜೈನರಲ್ಲಿ ಮಾತ್ರ ಪ್ರಚಲಿತದಲ್ಲಿಲ್ಲ. ಬದಲಾಗಿ ಜೈನೇತರರಲ್ಲಿಯೂ ಇವರ ಕಲ್ಪನೆಗಳಿವೆ. ಆದರೆ ಜೈನರಲ್ಲಿ ಮಾತ್ರ ಇವರಿಗೆ ಸಿಂಹಾಪಾಲು. ಉಳಿದವರಲ್ಲಿ ಇವರ ಕುರಿತಾದ ಸಾಮಗ್ರಿ ತುಂಬಾ ವಿರಳವೆನ್ನಬಹುದು. ಇವರನ್ನು ಕುರಿತಾಗಿ ಕನ್ನಡದಲ್ಲಿ ಶಾಸನ(ಪಠ್ಯ), ಸಾಹಿತ್ಯ ಹಾಗೂ ಶಿಲ್ಪ (ಚಿತ್ರ)ಗಳೆಂಬ ಮೂರು ನೆಲೆಗಳಲ್ಲಿ ಅಧ್ಯಯನ ಮಾಡಬಹುದಾದಷ್ಟು ಹೇರಳ ಸಾಮಗ್ರಿ ಸಂಪತ್ತಿದೆ.

ಭಾರತೀಯ ಸಾಹಿತ್ಯ ಚರಿತ್ರೆಯಲ್ಲಿ ವೇದ-ಉಪನಿಷತ್ತು, ರಾಮಾಯಣ, ಪುರಾಣ, ಕಾವ್ಯಗಳಲ್ಲಿ ಇವರ ಉಲ್ಲೇಖ ಬರುತ್ತದೆ. ಅದೇನಿದ್ದರೂ ಜೈನ ಧರ್ಮದಲ್ಲಿ ತೀರ್ಥಂಕರರ ಮೂರ್ತಿಗಳಲ್ಲಿ ಯಕ್ಷ-ಯಕ್ಷಿಯರಿಗೆ ಉನ್ನತ ಸ್ಥಾನವನ್ನು ಕಲ್ಪಿಸಿಕೊಡಲಾಗಿದೆ. "ಜಿನ ಪ್ರತಿಮೆಯು ಮುಕ್ಕೊಡೆ, ಅಶೋಕ ವೃಕ್ಷ, ಚಾಮರ, ಸಿಂಹಪೀಠ, ಪ್ರಭಾಮಂಡಲ, ದಿವ್ಯಧ್ವನಿ, ಪುಷ್ಪದೃಷ್ಟಿ ಮತ್ತು ದುಂದುಭಿಗಳೆಂಬೀ ಅಷ್ಟ ಮಹಾಪ್ರಾತಿಹಾರ್ಯಗಳುಳ್ಳುದೂ ಸ್ಥಿರ ಮತ್ತು ಚರಬಿಂಬಗಳ ಪಾದಪೀಠದ ಕೆಳಗೆ ಲಾಂಛನವುಳ್ಳದೂ ಬಲಭಾಗದಲ್ಲಿ ಯಕ್ಷ ಎಡಭಾಗದಲ್ಲಿ ಯಕ್ಷಿಯುಳ್ಳದೂ ಆಗಿರಬೇಕು" (ಜಯಸೇನನ ಪ್ರತಿಷ್ಠಾಪಾಠ) ಈ ಮೇಲಿನ ಹೇಳಿಕೆಯಿಂದ ತೀರ್ಥಂಕರ ಹಲವು ಸಂಕೇತಗಳಲ್ಲಿ ಇವರು ಪ್ರಮುಖರೆಂದು ತಿಳಿದು ಬರುತ್ತದೆ. ತೀರ್ಥಂಕರರಿಗೆ ಇರುವಂತೆ ವಾಹನ-ಮೈಬಣ್ಣಗಳನ್ನು ಯಕ್ಷ-ಯಕ್ಷಿಯರಿಗೆ ಆರೋಪಿಸಲಾಗಿದೆ. ಇದಕ್ಕೂ ಮುಂದು ಹೋಗಿ ಲಲಿತಾಸನದಲ್ಲಿ ಕುಳಿತ, ಅವರವರ ವಾಹನ ಆಯುಧಗಳಿಂದ ಕೂಡಿದ ಪ್ರತ್ಯೇಕ ಶಿಲ್ಪಗಳೇ ರೂಪಗೊಂಡವು. ಜೈನರಲ್ಲಿ ಪ್ರಚಲಿತವಿರುವ ಶ್ವೇತಾಂಬರ ದಿಗಂಬರಗಳೆಂಬ ಎರಡು ಸಂಪ್ರದಾಯಗಳ ವ್ಯತ್ಯಾಸ ಯಕ್ಷಿಯರ ವಿವರಣೆಯಿಂದ ಕಂಡುಬರುತ್ತದೆಂಬುದನ್ನು ತಿಳಿದಾಗಲಂತೂ ಇವರ ಮಹತ್ವವೆಷ್ಟೆಂಬುದು ಮನವರಿಕೆಯಾಗುತ್ತದೆ.

ಇಪ್ಪತ್ನಾಲ್ಕು ತೀರ್ಥಂಕರರಿಗೆ ಪ್ರತ್ಯೇಕವಾಗಿ ಬಲಭಾಗದಲ್ಲಿ ಯಕ್ಷ-ಎಡಭಾಗದಲ್ಲಿ ಯಕ್ಷಿಯರಿರುತ್ತಾರೆ. ಇವರನ್ನು ತೀರ್ಥಂಕರರ ರಕ್ಷಕರೆಂದು ಹೇಳಲಾಗುತ್ತಿದೆ. ಕನ್ನಡದ ಬಹುತೇಕ ಜೈನ ಪುರಾಣಗಳಲ್ಲಿ ಇವರನ್ನು ಕುರಿತು ಪ್ರತ್ಯೇಕ ಪ್ರಾರ್ಥನೆ ಇಲ್ಲವೆ ಸ್ತೋತ್ರ ಪದ್ಯಗಳಿವೆ. ಉದಾಃ ರನ್ನನ ಅಜಿತ ಪುರಾಣದಲ್ಲಿ ಇವರ ಸ್ತುತಿ ಹೀಗೆ ಬರುತ್ತದೆ.

*ಜಿನವೃಂದಾರಕರಿರ್ಪ*
*ತ್ತು ನಾಲ್ವರಾ ತೀರ್ಥನಾಥ ಸಮುದಾಯದಶಾ ॥*
*ಸನ ದೇವಿಯರ್ಕಳಿರ್ಪ*
*ತ್ತು ನಾಲ್ವರೀಗೆಮಗೆ ಯಕ್ಷರಕ್ಷಯ ಸುಖಮಂ ॥*

ಹಾಗೆಯೇ ಜೈನಪುರಾಣಗಳಲ್ಲಿ ಇವರ ಕುರಿತು ಕಥೆಗಳು ಪ್ರಚಲಿತದಲ್ಲಿವೆ. ನಾಡಿನಾದ್ಯಂತ ದೇವಾಲಯ, ಬಸದಿ, ಜಿನಾಲಯಗಳಲ್ಲಿ ಸುಂದರ ಮೂರ್ತಿಗಳನ್ನು ನಿರ್ಮಿಸಲಾಗಿದೆ. ಇಂದಿಗೂ ವ್ಯಕ್ತಿಗಳಿಗೆ ಇವರ ಹೆಸರನ್ನಿಟ್ಟುಕೊಳ್ಳುವುದು ರೂಢಿಯಲ್ಲಿದೆ. ಚಕ್ರೇಶ್ವರ, ರೋಹಿಣಿ, ಪ್ರಜ್ಞಪ್ತಿ, ವಜ್ರಶೃಂಖಲಾ, ಪುರುಷದತ್ತಾ, ಮನೋವೇಗೆ, ಕಾಳಿ, ಜ್ವಾಲಾಮಾಲಿನಿ, ಮಹಾಕಾಳಿ, ಮಾನವಿ, ಗೌರಿ, ಗಾಂಧಾರಿ, ವೈರೋಟಿ, ಅನಂತಮತಿ, ಮಾನಸಿ, ಮಹಾಹಾ ಮಾನಸಿ, ಜಯವಿಜಯಾ, ಅಪರಾಜಿತಾ, ಬಹುರೂಪಿಣಿ, ಚಾಮುಂಡಿ, ಕೂಸ್ಮಾಂಡಿ, ಪದ್ಮಾವತಿ ಹಾಗೂ ಸಿದ್ಧಾಯಿನಿ ಇವರು ೨೪ ಜನ ಯಕ್ಷಿಣಿಯರು ಹಾಗೆಯೇ ಗೋಮುಖ, ಮಹಾಯಕ್ಷ, ಶ್ರೀಮುಖ,

ಯಕ್ಷೇಶ್ವರ, ತುಂಬರು, ಪುಷ್ಪ, ಮಾತಂಗ, ಶಾಮ, ಅಜಿತ, ಬ್ರಹ್ಮ, ಈಶ್ವರ, ಕುಮಾರ, ಷಣ್ಮುಖ, ಪಾತಾಳ, ಕಿನ್ನರ, ಗರುಡ, ಗಂಧರ್ವ, ಖೇಂದ್ರ, ಕುಬೇರ, ವರುಣ, ಭೃಕುಟಿ, ಗೋಮೇದ, ಧರಣ ಹಾಗೂ ಮಾತಂಗ ಇವರು ೨೪ ಜನ ಯಕ್ಷರು. ತೀರ್ಥಂಕರ ಹಾಡುಗಳಲ್ಲಿಯೂ ಪ್ರಾಸಂಗಿಕವಾಗಿ ಇವರ ಸ್ತೋತ್ರವನ್ನು ಮಾಡಿರುವುದಾದರೂ, ಇವರನ್ನೇ ಕುರಿತು ಪರಿಪೂರ್ಣವಾದ ಹಾಡುಗಳೂ ಸಹ ರಚನೆಗೊಂಡಿವೆ. ವಿಶೇಷವೆಂದರೆ ಪಾರ್ಶ್ವನಾಥನ ಯಕ್ಷಿ ಪದ್ಮಾವತಿಯ ಹಾಡುಗಳು ಹೆಚ್ಚು ದೊರೆತಿವೆ. ಉಳಿದಂತೆ ಕೂಷ್ಮಾಂಡಿನಿದೇವಿ ಜ್ವಾಲಾಮಾಲಿನಿಯರ ಕುರಿತು ಹಾಡುಗಳಿವೆ. ಪ್ರಸ್ತುತ ಸಂಗ್ರಹದಲ್ಲಿ ಯಕ್ಷಿಣಿಯರ ಹಾಡುಗಳೆಂಬ ಶೀರ್ಷಿಕೆಯಲ್ಲಿ ಇವುಗಳನ್ನು ಒಂದೆಡೆ ಸೇರಿಸಿಕೊಡಲಾಗಿದೆ. ಯಕ್ಷರ ಕುರಿತಂತೆ ಹಾಡುಗಳು ರಚನೆಗೊಂಡಿರುವುದು ಇಲ್ಲವೆನ್ನುವಷ್ಟು ಕಡಿಮೆ.

ಯಕ್ಷಿಯರ ಸೌಂದರ್ಯವನ್ನು ಬಣ್ಣಿಸುವ ಹಾಡುಗಳು ಅವರ ನೋಟ-ಮಾಟ, ವಯ್ಯಾರಗಳನ್ನು ಹಾಗೂ ಧರಿಸಿದ ಆಭರಣಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವ ಕಲೆಗಾರಿಕೆ ಈ ಹಾಡುಗಳಲ್ಲಿ ಕಂಡು ಬರುತ್ತದೆ. “ಸಿಂಗಾಡಿಯಂದದ” -ಎಂಬ ಹಾಡಿನಲ್ಲಿ ವರ್ಣಿಸಲಾದ ಪದ್ಮಾಂಬೆಯ ಚಿತ್ರಣ ಹೀಗಿದೆ.

*ಸಿಂಗಾಡಿಯಂದದ ಪುಬ್ಬಿನ*
*ಕಂಗಳ ಕುಡಿನೋಟದ ಚೆಲುವಿನ*
*ಭೃಂಗಕುಂತಳದ ಫಣಿವೇಣಿ ಪದ್ಮಾಂಬ*
*ಸಿಂಗಾರದ ಹೂವ ಮುಡಿಬಾರೇ ॥*

*ರಾಜೀವ ನೇತ್ರದ ತಿಲಕದ*
*ತೇಜಮುತ್ತಿನ ಮೂಗುತಿ ಹೊಳೆಯಲು*
*ರಾಜಿಪನಾಸಿಕದ ವಿಮಲಾಂಗಿ ಪದ್ಮಾಂಬ*
*ಜಾಜಿಯ ಹೂವ ಮುಡಿಬಾರೇ ॥*

*ಕೆಂಬಲಿನ ಕಡು ಸೊಬಗಿಯ ಸಾ*
*ರಂಬದ ತೊಳ್ಭುಜಯ ಚೆಲುವಿಕೆ*
*ಕಂಬು ಕಂದರದ ಸುಖಪಾಣಿ ಪ*
*ದ್ಮಾಂಬ ಹೋಗೇದಗೆ ಹೂವ ಮುಡಿಬಾರೇ ॥*

ಹೀಗೆ ಸಲೆಜಾಣೆ, ಮಂದಗಜಗಮನೆ, ಸುಖದೇವಿ ಮುಂತಾದ ವಿಶೇಷಣಗಳಿಂದ ಸಂಪಿಗೆ, ಮಲ್ಲಿಗೆ, ಪಂಕಜ, ಸುರಗಿ ಮುಂತಾದ ಹೂ ಮುಡಿಯಲು ಕರೆಯುವ ಭಾವನಾತ್ಮಕವಾದ ಸಂವೇದನೆ ಇಲ್ಲಿದೆ.

ಪದ್ಮಾವತಿಯನ್ನು ಹಸೆಗೆ ಕರೆಯುವ ಸಾಂಪ್ರದಾಯಿಕ ಹಾಡು “ಗಜದೇವನ ಪಾದ” ಗಜದೇವನ ಪಾದಕ್ಕೆ ನಮಿಸಿ ಅಜನರಸಿಯಾದ ಶಾರದೆಯನ್ನು ಸ್ಮರಿಸಿ ಭುಜಭೂಪಣನನ್ನು ಸಲಹೆಂದು ಬೇಡಿಕೊಂಡು ಪುಂಡಾರಿಕಾಂಬಿಕೆಯರು ತಂಡತಂಡವಾಗಿ ಬಂದು ನಾಚುತ ನಗುತ, ಚಂದ್ರಮಂಡಲದಂತೆ ಹೊಳೆಯುತ್ತ ಪದ್ಮಾವತಿಯನ್ನು ಹಸೆಗೆ ಕರೆತರುವ ನಾರಿಯರ ವರ್ಣನೆಯಿದೆ. ಇವನ್ನು ಕವಿ ಬಡನಡುವಿನ ಭಾವಕಿಯರಿ, ಮಲಯಜಗಂಧಿಯರು, ನಳಿತೋಳಿನ ನವ ಮೋಹಿನಿಯರು, ಕಲಶ ಕುಚದ ಕೋಮಲೆಯರು, ಪದ್ಮಾಂಬೆಯನ್ನು ಹಸೆಗೆ ಕರೆತರುವ ಭಂಗಿ ಶಬ್ದಚಿತ್ರಗಳಲ್ಲಿ ಸೊಗಸಾಗಿ ಮೂಡಿಬಂದಿದೆ. ಅವಳಲ್ಲಿರುವ ಸಂಪತ್ತಿನ ಪ್ರಮಾಣವನ್ನು ಹೀಗೆ ದಾಖಲಿಸುತ್ತಾರೆ.

*ದಿನಕೆ ನೂರೆಂಟು ಬಂಡಿ ಕಂಬಿನ ಚಿನ್ನ*
*ಅನುಮಾಡಿ ಕೊಡು ಜಿನದತ್ತ ಕೊಡು ಸಂಪನ್ನ*
*ಕನಕಾದ್ರಿ ಕೊಳವೆ ಅಂಡಿಗೆ ತುಂಬಿ ಹೊನ್ನ*
*ಎನುತ ಓಕುಳಿಯಾಡಿದರಂತೆ ಮುನ್ನ ॥*

ಪದ್ಮಾವತಿಯ ಪಟ್ಟಣವಿರುವುದು ಪಾತಾಳದಲ್ಲಿ, ಅವಳಿಗೆ ಧೂತಿಯರು, ನೂರೆಂಟು ಜನ, ಭೂ ಮಂಡಲವನ್ನಿತ್ತ ಫಣಿರಾಜನ ಸಂಬಂಧವಿರುವುದು. ಬದುಕಿನಲ್ಲಿ ಸೋತ ಮನ ಪೂಜಿಸಿದರೆ ಸಾಕು ಭಾಗ್ಯ ಕೈವಶವಾಗುತ್ತದೆ. ಇವಳ ಸತ್ಯಕ್ಕೆ ಚಂದ್ರಾರ್ಕಗಳೇ ಸಾಕ್ಷಿಗಳು. ಹೊಂಬುಜಪುರದ ಪದ್ಮಿನಿದೇವಿಯು ಬಟ್ಟ ಮುಖದ ಬಾಲೆ, ಹಣೆಯಲ್ಲಿ ಕಸ್ತೂರಿಯ ಲೀಲೆ, ವಿಸ್ತಾರದ ಎದೆಯ ಮೇಲೆ ಪದಕದಿಂದ ಅಂದವಾಗಿರುವ ನೀರು "ಮನಕೆ ತುಂಬು ಮತಿಯ ನಂಬೆನಮ್ಮ ಹಂಬಲ ಬಿಡೆ ಸಲಹೆ ಪೊಂಬುಚ್ಚಪುರ ಪದ್ಮಿನಿ" ಎಂದು ಆರಾಧಿಸುತ್ತಾರೆ. ಹೀಗೆ ತಾಯೇ ಪಾಲಿಸು ಮತಿಯ, ರಕ್ಷಿಸೆನ್ನನು ಪುಣ್ಯ, ಪಾಲಿಸೊ ಪದ್ಮಾಂಬ ಎಂಬ ಹಾಡುಗಳು ಅವಳ ಗುಣತಿಶಯಗಳಿಗೆ ಮೀಸಲಾಗಿದೆ. 'ಪರಾಕು' ಹೇಳುವ ಹೊಡೊಂದು ೧೧ ನುಡಿಗಳಲ್ಲಿ ಪೂರ್ಣಗೊಂಡಿದ್ದು,

*ಅಂಬಾ ಪರಾಕು ದೇವಿಪರಾಕು*
*ಅಂಬಾ ಪರಾಕು ಪದ್ಮಾಂಬ ಪರಾಕು ॥*

ಎಂದು ಪ್ರಾರಂಭವಾಗುವ ಪದ್ಯದಲ್ಲಿ ನಾಗಲೋಕಕೆ ಕರ್ತೆ, ಪಾಪಹರನ ಭಕ್ತೆ, ಕುಕ್ಕುಷ್ಠ ವಾಹನೆ, ಕಮಲನಯನೆ, ಪರಮದಯಾನಿಧಿ, ಸಮ್ಯತ್ವಕದಿ ಧೀರೆಯಾದ ಪದ್ಮಾವತಿ ಬೆಳ್ಗೊಳ ಪುರವಾಸೆಯಾಗಿರುವ ನೀನು ಈ ಬಾಲಕನನ್ನು ಕಾಯೇ ಜಗದಾಂಬೆ ಎಂಬ ಅನನ್ಯತೆ ಇಲ್ಲಿದೆ. ಹಾಗೆಯೇ ಶ್ರುತದೇವಿ ಕುರಿತು ಎಚ್ಚರಿಕೆ ಶ್ರುತದೇವಿ ಎಂಬ ಹಾಡು, ಜ್ವಾಲಿನಿ ಕುರಿತು "ಚಂದ್ರನುತ ಚಂದ್ರ" "ದೇವಿಯ ನೋಡುವೆ" ಎಂಬ ಹಾಡುಗಳು ಭಕ್ತರನ್ನು ಕಾಯಬೇಕೆಂಬ ಹಂಬಲದಿಂದ ತುಡಿಯುತ್ತಿವೆ.

**೪. ಜೋಗುಳ ಹಾಡುಗಳು**

'ತೊಟ್ಟಿಲದೊಳಗೊಂದು ತೊಳೆದ ಮುತ್ತನ್ನು ಕಾಣಬಲ್ಲೆವೆಂಬ' 'ಕೂಸು ಇದ್ದ ಮನೆಗೆ ಬೀಸಣಿಕೆ ಏಕೆಂಬ ಭಾವದಿಂದ ಮಕ್ಕಳ ಮಮತೆಗೆ ಹಾತೊರೆಯುವ ಜನಪದಿಯರ ಜೋಗುಳ ಹಾಡುಗಳಿಗೆ ತನ್ನದೇ ಆದ ಪರಂಪರೆಯಿದೆ.

*ಮುರುಕ ತೊಟ್ಟಿಲಿಗೊಂದು ಹರಕುಚಾಪಿಯ ಹಾಸಿ*
*ಅರಚು ಪಾಪನ ಮಲಗೀಸಿ / ಅವರಕ್ಕ*
*ಕಲಕೇತ ಹಾಡಿ ಹಿಗ್ಗ್ಯಾಳ ॥*

*ಲಾಲೀಯ ಹಾಡಿದರ ಲಾಲೀಸಿ ಕೇಳ್ಯಾನ*
*ತಾಯಿ ಹಂಬಲ ಮರೆತಾನ / ಕಂದಯ್ಯ*
*ತೋಳ ಬೇಡ್ಯಾನ ತಲೆಗಿಂಬ ॥*

ಇಲ್ಲಿ ಹಾಲಿನ ಹಂಬಲಕ್ಕಿಂತ ಲಾಲಿಯ (ಜೋಗುಳದ) ಬೆಂಬಲ ಮಕ್ಕಳಿಗೆ ಹಸಿವು-ನಿದ್ರೆಯನ್ನು ಹಿಂಗಿಸುವುದು. ಹೀಗೆ ಜೋಗುಳ ಹಾಡುಗಳು ತಮ್ಮದೇ ಆದ ಮಹತ್ವವನ್ನು ಕಾಯ್ದುಕೊಂಡು ಬಂದಿದ್ದು, ಶಿಷ್ಯ ಸಂಪ್ರದಾಯದ ಕವಿಗಳು ಈ ಮಾಧ್ಯಮವನ್ನು ತಮ್ಮ ಕಾವ್ಯ ಸಂವಹನಕ್ಕೆ ಬಳಸಿಕೊಂಡಿರುವುದನ್ನು ಕಾಣಬಹುದಾಗಿದೆ. ಆದಯ್ಯನ ಉಯ್ಯಲಪದ ೨೩ ಪದ್ಯಗಳಿಂದ ಕೂಡಿದ ಹಾಗೆಯೇ ಅಕ್ಕಮಹಾದೇವಿಯ ತೂಗಿದೆನು ನಿಜದುಯ್ಯಾಲೆ ೭ ನುಡಿಗಳ ಸ್ವರವಚನಗಳು ಜೋಕಾಲಿ ಜೀಕುವ ಧಾಟಿಯಲ್ಲಿ

ರಚನೆಗೊಂಡಥವುಗಳು. ಭಕ್ತಿ-ಶಕ್ತಿ-ಜ್ಞಾನ-ವೈರಾಗ್ಯವನ್ನು ಪ್ರತಿಪಾದಿಸುವುದಕ್ಕಾಗಿ; ಮುಕ್ತಿಗಧಿಕವಾದ ಆರಾಧ್ಯ ದೈವವನ್ನು ಕೊಂಡಾಡುವುದಕ್ಕಾಗಿ ಮಾಡಿಕೊಂಡ ಸುಂದರ ರೂಪಕಗಳ ಪದಗುಚ್ಚಗಳು ಈ ಜೊಗುಳ ಹಾಡುಗಳು. ಇಂತಹ ಹಾಡುಗಳು ಜೈನರಲ್ಲಿಯೂ ಪ್ರಚಲಿತದಲ್ಲಿವೆ. ಇವುಗಳನ್ನು ಜನಪದ ಸಾಹಿತ್ಯವೆಂದು ಕರೆಯುವುದಕ್ಕಿಂತ ಜನಪದ ಹಾಡಿನ ಪ್ರಕಾರವೊಂದನ್ನು ಬಳಸಿಕೊಂಡು ರಚನೆಯಾದ ಶಿಷ್ಟ ಪದ್ಯ ಮಾದರಿಗಳೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಪ್ರಕಾರ ಯಾವುದೇ ಇರಲಿ ಇಲ್ಲಿಯ ಆಶಯ ತೀರ್ಥಂಕರ ಗುಣಗಾನ, ತನ್ನ ಧರ್ಮ-ಧರ್ಮಕ್ಷೇತ್ರ ಪ್ರಚಾರ-ಪರಿಚಯ ಮುಖ್ಯ. ಆ ಹಿನ್ನೆಲೆಯಲ್ಲಿ ಇಲ್ಲಿಯ ಜೈನ ಜೋಗುಳ ಹಾಡುಗಳು ರಚನೆಗೊಂಡಿವೆ.

*ಅಷ್ಟಕಂಬದ ಮಂಟಪವಲಂಕರಿಸಿ*
*ಪಟ್ಟೆಪೀತಾಂಬರಗಳನು ಶೃಂಗರಿಸಿ*
*ಬಟ್ಟಮುತ್ತಿನ ಜಲ್ಲಿಗಳ ತಂದಿರಿಸಿ*
*ತೊಟ್ಟಿಲ ಕಟ್ಟಿದರಾಗ ಸಂಭ್ರಮದಿ ಜೋ ಜೋ* //

ಎಂದು ತೊಟ್ಟಿಲ ಕಟ್ಟುವಾಗಿನಿಂದ ಪ್ರಾರಂಭವಾದ ಇಲ್ಲಿಯ ಹಾಡುಗಳಲ್ಲಿ ಜೈನ ತತ್ವ-ಸಿದ್ಧಾಂತಗಳ ಜೊತೆಗೆ ಜೋಗುಳ ಹಾಡುವ ನಾರಿಯರ ಗುಣಾತಿಶಯವನ್ನು ಕೊಟ್ಟಿಕೊಡುವಲ್ಲಿ ಸಫಲತೆ ಹೊಂದಿವೆ.

*ಮುಡಿದ ಮಲ್ಲಿಗೆ ಸರ ಎಡಬಲಕೋಲೆಯು*
*ಕಡಗ ಕಂಕಣ ಬಳೆಗಳು ದಿನಿಗಯ್ಯೆ*
*ಬೆಡಗಿಂದ ಧವಳ ಶೋಭಾನವ ಪಾಡುತ್ತ*
*ಕಡುಜಾಣೆಯರೆಲ್ಲ ತೂಗಿ ಹಾಡಿದರು ಜೋ ಜೋ* //

*ಜನನಿಯ ಗರ್ಭಾಬ್ಧಿ ಚಂದ್ರಾಮ ಜೋ ಜೋ*
*ದಿನಕರ ಕೋಟಿಯಂತೆಸೆವನೆ ಜೋ ಜೋ*
*ಘನಗುಣಾನ್ವಿತ ಜಿನದತ್ತ ಜೋಯೆಂದು*
*ವನಜಗಂಧಿಯರೆಲ್ಲ ತೂಗಿ ನಲಿದರು ಜೋ ಜೋ* //

ಹಾಗೆಯೇ ಪುರಪರಮೇಶ್ವರನನ್ನು ಕುರಿತ ಹಾಡಿನಲ್ಲಿ ಮನುಭೂಮಿ ಪತಿ ವಂಶನಾದ ಈತನಿಗೆ ಯಾರು ಸಾಟಿಯಿಲ್ಲ. ಯಾಕೆಂದರೆ ಈತ ಬೇರೆಯಾರೂ ಅಲ್ಲ

*ಆದಿ ಚಕ್ರೇಶನ ಒಡಹುಟ್ಟಿದನುಜ*
*ಮೇದಿನಿಯೊಳು ವಿತರನ ಕಲ್ಪಭೂಜ*
*ಆದಿತ್ಯಮಂಡಲ ಸುರಚಿರ ತೇಜ*
*ಶ್ರೀದಿವಿಜಾತನ ಚರಣ ಸರೋಜ* //

ಆಗಿರುವಂಥವನು. ಆಳುವುದ್ಯಾತಕೆ ಕಂದಾ ಎಂಬ ಹಾಡು ಕಂದನ ಅಳುವಿಗೆ ಕಾರಣ ಕೇಳುವ ತಾಯಿಯ ಸಂಭಾಷಣೆಯಿಂದ ಕೂಡಿದೆ.

*ಆಳುವುದ್ಯಾತಕೆ ಕಂದಾ ಅತ್ತರಂಜಿಸು ಗುಮ್ಮಾ*
*ಏಳಯ್ಯ ಕಾರುಣ್ಯ ನೆಲಸಿದೆ ನಿನ್ನೊಳಗೆ*
*ವಜ್ರದ ಪಡಿಗಳು ಸೋಂಕಿದ ಕಿರಿವೆರ*
*ಳುಳುಕಿತೆ ನಿನಗಲರಡಿಯ ಕಂದಯ್ಯ //*

ಎಂದು ಕೇಳುವ ತಾಯಿ ಗರಳದ ಮಡುವಿನಲ್ಲಿ ಧುಮುಕಿದ ಕಾರಣವಾಗಿ ಕಾಲು ನೊಂದೀತೆ? ಹೂವ್ವಿನ ಮಳೆಯನ್ನು ಇಳೆಗೆ ತರಲು ಹೋದಾಗ ನಿನ್ನ ದೇಹ ಬಳಲೀತೆ? ಭೂವರರ ಸೋಲಿಸುವಾಗ ನಿನ್ನ ಕರ ನೊಂದೀತೆ? ಮೂರು ಕಂಡವ ಸುತ್ತಿದ ಕಾರಣ ನಿನ್ನ ಪಾದಗಳು ಬಳಲಿದವೆ? ಎಂದು ಪ್ರಶ್ನಿಸುತ್ತಾ ಹೋಗುವಲ್ಲಿ ಆತನ ಗುಣಾತಿಶಯವಾದ ಪರಾಕ್ರಮವನ್ನು ಪರಿಚಯ ಮಾಡಿಕೊಡಲಾಗಿದೆ. ಇದೇ ರೀತಿ ಜೋ ಜೋ ಸುಪಾರಿಶ್ವ, ಜೋ ಜೋ ಶ್ರೀ ಆದಿಜಿನೇಶಾ ಎಂಬ ಪದ್ಯಗಳು ತೀರ್ಥಂಕರರ ಹುಟ್ಟು ಬೆಳವಣಿಗೆ ಸಾಧನೆ ಜೊತೆಗೆ ಧಾರ್ಮಿಕ ಕ್ರಿಯೆಗಳಾದ ಪಂಚಕಲ್ಯಾಣಗಳ ವಿವರಣೆಯನ್ನು ವಿಶ್ಲೇಷಿಸುತ್ತವೆ.

**ಜ. ಶೋಭಾನದ ಹಾಡುಗಳು**

ಶೋಭಾನ ಇಲ್ಲವೆ ಸೋಭನೆವೆಂದರೆ ಮಂಗಳಕರವಾದದ್ದು, ಕಾಂತಿಯುಳ್ಳದ್ದು, ಹೊಳಪುಳ್ಳದ್ದು ಎಂಬಿತ್ಯಾದಿ ಅರ್ಥಗಳಿವೆ. ಮದುವೆಯಲ್ಲಿ ಮಾಡುವ ಹಲವು ಶಾಸ್ತಗಳಿಗೆ ತಕ್ಕಂತೆ ಹಾಡುವ ಈ ಪದಗಳಿಗೆ ಜನಪದದಲ್ಲಿ ವಿಶಿಷ್ಟ ಸ್ಥಾನವಿದೆ. ಹೆಂಗಸರಿಗೆ ಮೀಸಲಾಗಿರುವ ಈ ಹಾಡುಗಳು ಮುಮ್ಮೇಳ-ಹಿಮ್ಮೇಳಗಳಿಂದ ಪರಿಪೂರ್ಣಗೊಳ್ಳುತ್ತವೆಯಾದರೂ ಪ್ರದೇಶದಿಂದ ಪ್ರದೇಶಕ್ಕೆ ಇವುಗಳ ಧಾಟಿಯಲ್ಲಿ ಭಿನ್ನತೆಯಿದೆ. ಜೈನ ಹಾಡುಗಳು ಶೋಭಾನದ ಪ್ರಕಾರಗಳಲ್ಲಿ ರಚನೆಗೊಂಡಿದ್ದು

*ಪರಮೇಶನುದರಾಬ್ಧಿ ಚಂದ್ರ*
*ನೆರೆಚಕ್ರಿ ಭರತ ರಾಜೇಂದ್ರ*
*ನರಸುರ ನಾಗಲೋಕವ ಸಾಧಿಸಿದ*
*ಧರೆಗಾದಿ ಕುವರನ ಧವಳ ಶೋಭಾನವ*
*ನೂರೆವೆ ಲಾಲಿಪುದು ರಸಿಕರು*

ಎಂದು ಕೋರುವ ಕವಿ ವೃಷಭನಾಥನ ವಿವಾಹ ಮಹೋತ್ಸವವನ್ನು ಬಣ್ಣಿಸುತ್ತಾನೆ. ಪಚ್ಚೆಯ ಪಾದಪೀಠಗಳು, ಸ್ವಚ್ಛಪ್ರವಾಳ ಕಂಭಗಳು, ಮಣಿಬೋದಿಗೆಗಳು, ವೈಢೂರ್ಯದ ತೊಲೆಗಳು, ಮಾಣಿಕ್ಯಮಣಿ ಪುತ್ಥಳಿಗಳು, ಕನ್ನಡಿಗಳು, ಹೂಮಾಲೆಗಳಿಂದ ಕಟ್ಟಾಣಿ ಮಂಟಪ ಅಲಂಕೃತಗೊಂಡಿದೆ. ಇಲ್ಲಿಯ ಶುಭ ಸಂದರ್ಭಕ್ಕೆ ನವಯೌವನೆಯರು, ವಿದ್ಯಾಧರ ದಂಪತಿಗಳು, ಆದ್ಯರು, ಉಪಾಧ್ಯಾಯರು, ಕಿನ್ನರರು, ಗಂಧರ್ವರು, ಗರುಡ ಯಕ್ಷೇಂದ್ರರು, ಸಮಸ್ತರು ಆಗಮಿಸಿದ್ದಾರೆ.

*ಹರಳೋಲೆ ಹಸ್ತ ಕಡಗವ*
*ಬೆರಲ ಮುದ್ರಿಕೆ ಹಾರ ಮೆರೆವ*
*ಚರಣನೋಪುರ ಚಿತ್ರಾಂಬರ ನುಡಿಸಿ*
*ವರ ಮೋಹನಕರ ಕಂಚುಕಿ ತೊಡಿಸಿ*
*ಉರಗಿಣಿಯರು ಷಟ್ಖಂಡದರಸುಗಳ*
*ಪರಿಪಾಲಿಪನರಸಿಯ ಕರೆತನ್ನಿ //*

ಹಸೆಗೆ ಕರೆತರುವ ನಾರಿಯರು ವಧುವನ್ನು ಹಲವು ಬಗೆಯಲ್ಲಿ ಕೊಂಡಾಡುತ್ತಾರೆ. ಕರೆತರುವ ಪ್ರಸಂಗ ಸಂಗೀತ-ನಾಟ್ಯ-ನೃತ್ಯಗಳಿಂದ ಝೇಂಕರಿಸುತ್ತಲಿತ್ತು. ಅದನ್ನು ಹೊಗಳಲು ಕವಿ ಅಸಮರ್ಥನಾಗಿದ್ದಾನೆ.

*ಆವುಜ ಚೆಂಗು ಮೃದಂಗ*
*ತೀವಿದ ಸ್ವರ ಉಪ್ಪಾಂಗ*
*ಭಾಮೆಯರಾಳಪವು ತಾಳದಂಡಿಗೆ*
*ಭೂವಳೆಯದ ಬಹು ವಾದ್ಯ ಘೋಷಣೆಗೆ*
*ದೇವಗಣಿಕೆಯರು ನರ್ತನ ಮಾಡುವ*
*ಭಾವವನೆಂತು ಪೊಗಳುವೆ ॥*

ಅಲ್ಲದೆ ನಟಿಸುವ ಭಂಗಿಯನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತದೆ ಇಲ್ಲಿನ ಹಾಡಿನ ನುಡಿ.

*ತತ್ತತೇಂಗಿಣಧಿಮಿಕೆನುತ*
*ವೃತ್ತ ಕುಚೆಯರಾಳಾಪಿಸುತ*
*ತತ್ತಿತ್ತೈತೆದಿಂತರಿಕ್ಕಣ*
*ಧಿತ್ತಾಂ ಧಿಗಿಧಿಗಿ ಝಣಾಂತರಿಕ್ಕಿಣ*
*ಧಿತ್ತಿತ್ತೋಂಗೆನುತ ನಟಿಸುತ ॥*

ವಧುವರರಿಗೆ ಅರಿಷಿಣ ಎಣ್ಣೆಯನ್ನು ಎರೆದು

*ಕಸ್ತೂರಿ ತಿಲಕವನಿಟ್ಟು*
*ವಿಸ್ತಾರ ಮುತ್ತಿನ ಬಟ್ಟು*
*ಶಿಸ್ತಾಗಲು ಫಲಪುಂಜವಕೊಟ್ಟ*
*ಮಸ್ತಕಕಡಿಯಿಂದ ಸೇಸೆಯನಿಟ್ಟು*
*ವಸ್ತುವಾಹನ ಸಾಮ್ರಾಜ್ಯ ಸುಪುತ್ರರಾ*
*ರಸ್ತೆಂದು ಹರಸಿ ಮುದದಿಂದಾ ॥*

ಆಶೀರ್ವದಿಸಿದರು. ಶ್ರೀ ಸುರಪತಿ ನರಪತಿ ಎಂಬ ಶೋಭಾನದಲ್ಲಿ ಭರತೇಶನನ್ನು ಹಸೆಗೆ ಕರೆಯುವ ಪ್ರಸ್ತಾವನೆಯಿದ್ದು ೧೮ ನುಡಿಗಳ ಸುದೀರ್ಘವಾದ ಹಾಡಾಗಿದೆ. ಈ ಹಾಡಿನ ವಿಶೇಷವೆಂದರೆ:

*ಆಯುಧ ಶಾಲೆಯೊಳಗೆ ಸುದರ್ಶನ ಚಕ್ರ*
*ಆಯುತದೊಳು ಜನಿಸಿ ಸಕಲ ಸುರದಿ*
*ಕಾಯರೆಲ್ಲರು ಸ್ತುತಿಸಿ ವ್ಯಂತರ ದೇವ*
*ರೊಯ್ಯಾರದೊಳು ಭಜಿಸಿ ಮಂಗಲವೆರಸಿ*
*ದಾಯದಲಿ ಪದಿನಾಲ್ಕು ರತ್ನನಿಕಾಯ*
*……………………………………*
*…………………………………….*

*ರಾಯನುಮ್ಮ ಳವೇರಿ ಮನದೊಳು ಪ್ರೇಮದಿಂದಿಗ್ವಿ*
*ಜಯಸಾಧಿಪ ರಾಯನ ಹಸೆಗೆ ಕರದಾರು* //

ಎಂಬ ಭರತೇಶನಿಗೆ ಆಯುಧಾಗಾರದಲ್ಲಿ ಚಕ್ರರತ್ನ ಉದಯಿಸಿದ್ದು, ಯುದ್ಧಕ್ಕೆ ಹೊರಟಿದ್ದು, ಷಟ್ಖಂಡಗಳನ್ನು ಗೆದ್ದು ದಿಗ್ವಿಜಯ ಸಾಧಿಸಿದ ಮಹಾಕಾವ್ಯಗಳಲ್ಲಿ ಉಲ್ಲೇಖಿತ ಪ್ರಸಂಗಗಳನ್ನು ಹಾಡಿನಲ್ಲಿ ಸೆರೆಹಿಡಿದಿರುವುದು ಸಂಗ್ರಹ ಯೋಗ್ಯವಾಗಿದೆ. ಕೊನೆಯಲ್ಲಿ

*ಧರೆಯುಳ್ಳತನಕಮೀ ಶೋಭಾ*
*ಸ್ಥಿರವಾಗಿರಲಿ ಸಕಲಜನರು ನಿರುತಪಾಡಿ*
*ಪರಮ ಸಂಭ್ರಮವೇರಲು*
*ಬಾರಲು ಮನ ಹರುಷದೊಳೆಲಾಡಲು ಆನಂದ*
*ದೋರಲು ಧರೆಯ ಚಕ್ರ ನರೇಂದ್ರನಂದದಿ*
*ಸ್ಥಿರ ಸುಖದೊಳೊಲಾಡಿ*
*ಹರುಷದೊಳಿರದೆ ಮುಕ್ತಿಕಾಂತೆಗೆ ತಾ*
*ನಿರತನಾಗುವರೆಂದು ಪೇಳಿದ*
*ಭರತಕಲ್ಯಾಣ ಧವಳಾರ*

ಎಂಬುದಾಗಿ ಕವಿ 'ಭರತ ಕಲ್ಯಾಣ ಧವಳಾರವೆಂದು' ಹೆಸರಿಸುತ್ತಾನೆ. ಹೀಗೆಯೇ ಕರೆತಾರೆ

ಸರಸ್ವತಿ ಪ್ರಾಣವೆಂಬ ಹಾಡಿನಲ್ಲಿ ಶ್ರೀ ಬ್ರಹ್ಮರಾಯನನ್ನು ಬಲಗೊಂಬೆ ಶ್ರೀ ಪದ್ಮಾವತಿಯೆಂಬ ಹಾಡಿನಲ್ಲಿ ಪದ್ಮಾಂಬೆಯನ್ನು ಹಸೆಗೆ ಕರೆತರುವ ವರ್ಣನೆಯಿದೆ.

**೬. ಮಂಗಳಾರತಿಯ ಹಾಡುಗಳು**

ನಾಂದಿಗಳು ಮಂಗಳ ಕಾರ್ಯಗಳ ಅರಂಭದಲ್ಲಿ ನೆರೆವೇರಿಸುವ ಮೊದಲ ದೇವತಾಪೂಜೆ. ಹಾಡಿನ ಮೂಲಕ ನೆನೆಯುವ ದೇವತಾಸ್ತೋತ್ರಗಳಾದರೆ ಮಂಗಳಕಾರ್ಯಗಳ ಮುಕ್ತಾಯದಲ್ಲಿ ದೀಪಾರಾಧನೆ ಮಾಡಿ ಪದಕಟ್ಟಿ ನೆನೆಯುವ ಸ್ತೋತ್ರಗಳು ಮಂಗಳಾರತಿ ಪದಗಳೆನಿಸುತ್ತವೆ. ಜೈನ ಹಾಡುಗಳಲ್ಲಿ ತಮ್ಮ ಇಷ್ಟ ದಯವಗಳ ಮೇಲೆ ಮಂಗಳಾರತಿ ರಚಿಸಿ ಸ್ತುತಿಸಿದುದನ್ನು ಕಾಣಬಹುದು.

*ಚಾರುಸಿರಿಗೆ ತವರೂರಾದ ಬೆಳ್ಗೊಳ*
*ಧಾರುಣಿಧರದ ಮಧ್ಯದಿ ನೆಲಸಿ*
*ಚಾರುಕೀರ್ತಿ ಮುನಿ ಪಂಡಿತಾರ್ಯರಿಗುಪ*
*ಕಾರಿಯಾದ ಬ್ರಹ್ಮದೇವರಿಗೆ* //

ಆರತಿ ಬೆಳಗೀರೆಂದು ಹೇಳುವಲ್ಲಿ ಬೆಳ್ಗೊಳವು ಜಾರುಸಿರಿಗೆ ತವರೂರು, ಅಲ್ಲಿಯ ಚಾರುಕೀರ್ತಿ ಪಂಡಿತಾರ್ಯರಿಗುಪಕಾರಿಯಾದ ಬ್ರಹ್ಮದೇವ ಹೀಗೆ ಸ್ಥಳೀಯ ಸಂಸ್ಕೃತಿಯನ್ನು ಇಲ್ಲಿಯ ಹಾಡುಗಳು ಕಟ್ಟಿಕೊಡುತ್ತವೆ.

*ಹಾಗೆಯೇ 'ಬೆಳಗಪ್ಪ ಜಾವದಲಿ' ಹಾಡಿನಲ್ಲಿ*
*ಆದಿಶಾಸ್ತ್ರವ ಬಲ್ಲವ ಆಚಾರ್ಯರೈದು ಜನ*
*ಓದಿಸುವ ಮಕ್ಕಳೀರಾರು ಜನ*
*ಬೋಧಿಸುವ ಪಂಡಿತರು ನಾಲ್ಕಾರು ಜನ ಸಹಿತ*
*ಪಾದ ಮಾರ್ಗದಿ ಬರುವ ನಮ್ಮ ಮನೆಗೆ ||*

ಎಂಬುದಾಗಿ ಅಂದಿನ ಶಿಕ್ಷಕ, ಶಿಷ್ಯ, ಪಂಡಿತರುಗಳ ಪರಿಸರವನ್ನು ವಿವರಿಸಲಾಗಿದೆ. ಪುರಪರಮೇಶ್ವರ ಸುರನುತ'ನೆಂಬ ಹಾಡು ೨೫ ದ್ವಿಪದಿಗಳಲ್ಲಿ ೨೪ ತೀರ್ಥಂಕರರ ವರ್ಣನೆಯನ್ನು ಮಾಡಿದೆ. ಲಲಿತಾಂಗಿ, ಜಗದಾಂಬದೇವಿ, ಗೊಮ್ಮಟ, ಚಂದ್ರನಾಥ, ಶಾರದಾದೇವಿ, ಕೊಷ್ಮಾಂಡಿನಿ, ಪಾರ್ಶ್ವನಾಥ, ವೃಷಭನಾಥನಿಗೆ ಮೀಸಲಾದ ಹಾಡುಗಳಿದ್ದು ಬಹುತೇತ ಹಾಡುಗಳ ಕೊನೆಯಲ್ಲಿ ಆಯಾ ಆರಾಧ್ಯ ದೈವಗಳು ನೆಲೆಸಿರುವ ಸ್ಥಳ ಮಹಾತ್ಮೆಗಳ ನಿರೂಪವಿದೆ.

*ಕ್ಷಿತಿಯೊಳತ್ಯಧಿಕ ಬೆಳ್ಗೊಳದೊಳಗಿರುತಿಹ*
*ಅತಿಶಯದೊಳು ಚಂದ್ರಗಿರಿಯೊಳಪ್ಪವಗೆ*
*ಯತಿ ಪಂಡಿತಾರ್ಯರ ಕರುಣದಿ ರಕ್ಷಿಪ*
*ಅತಿಶಯ ಮೂತಿ ಪಾರೀಶ್ವ ದೇವನಿಗೆ ||*

ಹೀಗೆಯೇ ಬೆಳ್ಗೊಳದ ಕತ್ತಲೆ ಬಸದಿಯಲ್ಲಿ ನೆಲೆಸಿರುವ ಕೋಷ್ಮಾಂಡಿನೀ ದೇವಿಗೆ, "ವೇಣುಪುರದ ಭ್ಯಜನರ್ಗೆ ಯತಿಕುಲ ರನ್ನ ರನ್ನ ಪಂಡಿತಾಚಾರ್ಯ ರತಿ ಸೌಖ್ಯದಿಂದ ರಕ್ಷಿಪ ಚಂದ್ರನಾಥಗೆ" ಬೆಳ್ಗೊಳಗಿರಿಯ ವರಮುಕ್ತಿ ಮೇಲೆ ಗೊಮ್ಮಟ ಜಿನಪತಿಗೆ ಎಂದು ಮುಂತಾಗಿ ಗಮನಿಸಬಹುದಾಗಿದೆ.

**೭. ಸಂಕೀರ್ಣ ಹಾಡುಗಳು**

ತೀರ್ಥಂಕರ, ಯಕ್ಷಿಯರ, ಸ್ತುತಿಪರವಾದ ಹಾಡುಗಳಲ್ಲದೆ ತೀರ್ಥಯಾತ್ರೆ, ಬದುಕಿನ ಸಿದ್ಧಾಂತಗಳ ನೀತಿ-ಅನೀತಿಗಳಂತಹ ಮುಂತಾದ ಹಾಡುಗಳೆಲ್ಲ ಇಲ್ಲಿ ಸಂಗ್ರಹಿತವಾಗಿರುವುದರಿಂದ ಅವುಗಳನ್ನು ಸಂಕೀರ್ಣ ಹಾಡುಗಳೆಂಬ ಶೀರ್ಷಿಕೆಯಡಿಯಲ್ಲಿ ಸಂಕಲಿಸಲಾಗಿದೆ.

*ಇಬ್ಬರಂತೆಯರೊಳು ಒಬ್ಬ ಳುಳಿದಳು ಮ*
*ತ್ತೊಬ್ಬ ಳ ಕರೆಕರೆದಾರೆ ನಾ*
*ನಿರ್ಬುದ್ಧಿಯಿಂದ್ಯೆವರು ಮೈದುನರುಂಟು*
*ವಿಬುಧಿಯಿಲ್ಲೆನ್ನ ಬಾಳುವೆಗೆ*

ಎಂಬ ಬೆಡಗಿನ ಹಾಡಿನಲ್ಲಿ ಪಂಚೇಂದ್ರಿಯಗಳ ವಿಷಯ ವಾಸನೆಯಿಂದ ಆತ್ಮದ ಉನ್ನತಿ ಒಳಿತಿಲ್ಲದ ಸ್ಥಿತಿಯನ್ನು ವಿವರಿಸುತ್ತ ಕೊನೆಯ ಚರಣದಲ್ಲಿ

*ಅರ್ಹನಲ್ಲದೆ ಪರದೈವಕೆರಗೆನು*
*ಕೊರಟಗೆರೆಯ ಬ್ರಹ್ಮಸ್ವಾಮಿಯನು*

*ಸ್ಥಿರದಿಂದ ಬಲ್ಲಿದರೈವರ ಒಡಗೊಂಡು*
*ಬರುತಲವರು ತವರೂರಿಗೆ //*

ಎಂದು ನಂಬಿದ ದಯುವವನ್ನೆ ತನ್ನ ಕಷ್ಟಪರಿಹಾರಕ್ಕೆ ಗಟ್ಟಿಯಾಗಿ ಹಿಡಿವೆನೆಂಬ ದೃಢ ಸಂಕಲ್ಪವನ್ನು ಮಾಡಿಕೊಳ್ಳುತ್ತಾನೆ. ಜೀವನ ಬಾಧಿಸುವ ಪಾಪಾಸ್ತ್ರಗಳನ್ನು ತೊಲಗಿಸಲು

*ಧ್ಯಾನವೆಡೆ ಬಿಟ್ಟು ಧರ್ಮಶುಕ್ಲಗಳೆಂಬ*
*ಧ್ಯಾನವ ಮನದ ಕೊನೆಯೊಳಿರಿಸಿ*
*ಜಾನಂತ್ರಿ ಕೊಲ್ಲಿಪಾಕ ಪುರದಿ*
*ಜಿನೇಶನ ಜೀವ ನನ್ನಂತರಂಗದೊಳಿಟ್ಟು //*

ಪೂಜಿಸುವ ಪರಿಯನ್ನು ಸಾರುತ್ತಾನೆ. ಹಾಗೆಯೇ "ಜ್ಞಾನಿಹೊರಗೊಂದ ಚಿಂತಿಸದಿರು", "ನಾನಿರಬಂದೆನೇ ಎರವಿನ ಮನೆಯಲ್ಲಿ ಬಹುಚಿಂತೆ ನಮಗೇಕೆ", "ಕಷ್ಟ ಸಂಸಾರದೊಲಗೆ ನಾ ತೊಳಲುವೆ" ಎಂಬಂತಹ ಹೇಳಿಕೆಗಳು ಸಾಧಕನ ಸಾಧನೆಯ ಮಾರ್ಗದ ಪ್ರಾರಂಭದ ಸ್ಥಿತಿಗಳಾಗಿವೆ. ಇದರಿಂದ ಪಾರು ಮಾಡಲು

*ಪೊರೆಯೈ ಶ್ರೀಜಿನರಾಜ ಪೊರೆಯೈ*
*ಭುವಿಯೊಳು ನಾ ಜನಿಸಿ ಭವಸಾಗರದಿ ಮುಳುಗಿ*
*ಅವಿವೇಕಿಯಾದೆನ್ನ ಜವದಿಂದ ನೀ ಬಂದು //*

ಎಂಬ ಆತ್ಮನಾದದಲ್ಲಿ ಮೊರೆಯಿಡುತ್ತಾನೆ. ಆಗಲೂ ದೈವದರ್ಶನವಾಗದಾದಾಗ "ಕೃಪೆಯಿಲ್ಲವೇಕೋ ಎನ್ನ ಮೇಲೆ ದೇವದೇವನೇ ಅಪರಾಧಗಳನ್ನು ಕ್ಷಮಿಸಿ ಕಾಯೋ ಪಾರ್ಶ್ವನಾಥನೇ! ಗತಿಯು ನೀನೆ, ಹಿತರ ಕಾಣೆ ಪಿತನು ನೀನೆಂದು" ಅವನ ಚರಣಗಳನ್ನು ಸ್ತುತಿಸುತ್ತಾನೆ. ಅವನನ್ನು ಹುಡುಕಿಕೊಂಡು ಹೋಗುತ್ತಾನೆ.

*ಎಷ್ಟು ದೂರ ಬೆಳಗುಳ ಬಂದೆ ಇಷ್ಟರಲ್ಲೇ ಕಾಣತ್ತ ಬಂದೆ*
*ಮುಟ್ಟಿಜಿನರ ಪಾದವ ಕಂಡೆ ಪಾಪವೆಲ್ಲವ ಪರಿಹರಿಸೆಂದೆ //*

ಎಂದು ಬೇಡುತ್ತ ಪುಣ್ಯಕ್ಷೇತ್ರಗಳ ದರ್ಶನ ಮಾಡುವುದು. ಅಲ್ಲಿಯ ದೈವದ ಅತಿಶಯ ಗುಣಗಳನ್ನು ಕೊಂಡಾಡುವುದು ಇಲ್ಲಿನ ಬಹುತೇಕ ಹಾಡುಗಳ ಆಶಯವಾಗಿದೆ.

**ಜೈನ ಹಾಡುಗಳ ಪ್ರಕಟಣೆಯ ಇತಿಹಾಸ**

ಕನ್ನಡ ಜೈನ ಹಾಡುಗಳ ಪ್ರಕಟಣೆಗೆ ಸುಮಾರು ೯೦ ವರ್ಷಗಳ ಇತಿಹಾಸವಿದೆ. ಜೈನ ಸಾಹಿತ್ಯದಲ್ಲಿ ಅಪಾರವಾಗಿ ಸೇವೆ ಸಲ್ಲಿಸಿದ ಎರ್ತೂರ ಶಾಂತಿರಾಜಶಾಸ್ತ್ರಿಯವರು ೧೯೧೩ರಲ್ಲಿ ಜಿನಭಜನಸಾರ ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ಬಹುಶಃ ನಮಗೆ ಲಭ್ಯವಾದ ಮಾಹಿತಿ ಪ್ರಕಾರ ಜೈನ ಹಾಡುಗಳ ಮೊದಲ ಸಂಗ್ರಹ ಇದಾಗಿದೆ. ಇದರಲ್ಲಿ ಚತುರ್ವಿಶಂತಿ ತೀರ್ಥಂಕರರ ಸ್ತೋತ್ರ, ರಾಗ-ತಾಳಗಳ ಮೂಲಕ ರಚನೆಗೊಂಡ ಹಾಡುಗಳನ್ನು ಸಂಗ್ರಹಿಸಲಾಗಿದೆ. ಈ ಗ್ರಂಥ ಸುಮಾರು ಆರು ಬಾರಿ ಮರುಮುದ್ರಣಗೊಂಡಿರುವುದು ಇದರ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಇದರ ನಂತರ ೧೯೪೮ರಲ್ಲಿ ಬಂದ ಮೂಡಬಿದಿರೆಯ ಶ್ರೀ ವಿ. ಲೋಕನಾಥ ಶಾಸ್ತ್ರಿಗಳು ಸಂಪಾದಿಸಿದ ಜಿನಭಜನ ಸಂಗ್ರಹ. ಇದು ಸಹಿತ ಮೂರು ಬಾರಿ ಮರು ಮುದ್ರಣಗೊಂಡಿದ್ದರೂ ಮೊದಲ ಪ್ರಕಟಣೆ ಯಾವಾಗ ಆಗಿದೆ

ಎಂಬುದು ತಿಳಿದು ಬರುವುದಿಲ್ಲ. ಇದು ಜಿನ ನಾಮಸ್ಮರಣೆಗೆ ಸಹಾಯಕವಾಗುವ ಗ್ರಂಥ. ಇದರಲ್ಲಿ "ಗೃಹಸ್ಥನಿಗೆ ಪ್ರತಿನಿತ್ಯವೂ ಮಾಡುವುದಕ್ಕೆ ಅನುಕೂಲವಾದ ದೇವ ಅಭಿಷೇಕ, ಸಂಕ್ಷಿಪ್ತ ಪೂಜಾವಿಧಿ, ಸಂಗೀತದಿಂದ ಮಾಡಲ್ಪಡುವ ಸಾಮೂಹಿಕ ಪೂಜೆಗೆ ಯೋಗ್ಯವಾದ ಸಂಸ್ಕೃತ, ಹಿಂದಿ ಕನ್ನಡ ಅಷ್ಟಕಗಳು, ನೂತನವಾಗಿ ರಚಿಸಲ್ಪಟ್ಟ ಕನ್ನಡ ದೇವರ ಕೀರ್ತನೆಗಳು, ಮದುವೆ ಮೊದಲಾದ ಶೋಭಾನ ಕಾರ್ಯಗಳಲ್ಲಿ ಹಾಡುವುದಕ್ಕೆ ಯೋಗ್ಯವಾದ ಶೋಭನಗಳು, ತೀರ್ಥಂಕರರ ಪಂಚಕಲ್ಯಾಣ ಶೋಭನಗಳು, ದೇವರ ಉತ್ಸವ, ಶ್ರುತಪೂಜೆ ಮೊದಲಾದ ಕಾಲಗಳಲ್ಲಿ ಜಿನಭಜನೆಗನುಕೂಲವಾದ ಅಷ್ಟಾವಧಾನ ಪದಗಳು, ಸಮವಸರಣ ಮುಂತಾದವುಗಳ ಗುಣಕೀರ್ತಿನಾ ರೂಪವಾದ ಚೂರ್ಣಿಕ - ಗದ್ಯ ಮೊದಲಾದವುಗಳು ಸಂಗ್ರಹಿಸಲ್ಪಟ್ಟಿವೆ."

೧೯೬೭ರಲ್ಲಿ ಭುವನಹಳ್ಳಿ ಡಿ. ಶ್ರೀಪತಿ ಜೋಯಿಸ್ ಅವರು 'ರತ್ನಾಕರನ ಕೀರ್ತನೆಗಳು' ಎಂಬ ಸಂಪಾದನೆಯನ್ನು ಹೊರತಂದಿದ್ದಾರೆ. ಇದರಲ್ಲಿ ಜೈನ ಹಾಡುಗಳ ಮೊದಲ ರಚನಾಕಾರನಾದ ರತ್ನಾಕರನ ೧೪೪ ಹಾಡುಗಳಿವೆ. "ಇಲ್ಲಿರುವ ಕೀರ್ತನೆಗಳು ಅಚ್ಚಗನ್ನಡದಲ್ಲಿವೆ. ಶೈಲಿ ಮನಮುಟ್ಟುವಂತಹದುದು, ಸಂಗೀತ ಸುಮಧುರವಾದದು. ಸುಸ್ವರದಲ್ಲಿ ಹಾಡಿ, ಮನತಣಿಸಲು ತುಂಬಾ ಅನುಕೂಲವಾಗಿದೆ. ವಿಚಾರಗಳು ಎಷ್ಟು ಉದಾತ್ತವಾಗಿಯೋ ಅಷ್ಟೆ ವ್ಯವಹಾರ್ಯವಾಗಿವೆ. ಬೋಧಿಸಿದ ತತ್ತ್ವಗಳು ಅಮರವಾದವು. ಇವೆಲ್ಲವುಗಳನ್ನು ಸ್ವಾದಿಸಲು ಓದುಗರಲ್ಲಿ ಹಾಡುವವರಲ್ಲಿ ಬೇಕಾದುದು ನಿಷ್ಠೆ" ಎಂದು ಮುನ್ನುಡಿಯಲ್ಲಿ ಶ್ರೀ ತು.ಕು.ತುಕೋಲ ಅವರು ಹೇಳಿರುವುದು ಸಮಂಜಸವಾಗಿದೆ. ಇಂಥ ಉಪಯುಕ್ತ ಗ್ರಂಥವಾದ ರತ್ನಾಕರನ ಕೀರ್ತನೆಗಳು ೧೯೯೫ರಲ್ಲಿ ಹೊಂಬುಜ ಶ್ರೀ ಜೈನ ಮಠದ ಶ್ರೀ ಸಿದ್ಧಾಂತಕೀರ್ತಿ ಗ್ರಂಥಮಾಲೆಯಿಂದ ಮರುಮುದ್ರಣಗೊಂಡಿದೆ.

ಜೈನ ಸಾಹಿತ್ಯ-ಸಂಸ್ಕೃತಿಯಲ್ಲಿ ವಿಶೇಷ ಅಧ್ಯಯನ ಮಾಡಿದ ಡಾ.ಹಂಪ ನಾಗರಾಜಯ್ಯನವರು ೧೯೭೯ರಲ್ಲಿ ರತ್ನಾಕರನ ಹಾಡುಗಳು ಎಂಬ ಜನಪ್ರಿಯ ಆವೃತ್ತಿಯನ್ನು ಹೊರತಂದಿದ್ದಾರೆ. ತುಮಕೂರು ಜಿಲ್ಲೆಯ ಬಿದರೆ ಗ್ರಾಮದ ಸಿದ್ಧನಂದಿ ಗ್ರಂಥ ಭಂಡಾರದಲ್ಲಿ ದೊರೆತ ಓಲೆಗರಿ ಹಸ್ತಪ್ರತಿ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ಭಂಡಾರದಲ್ಲಿರುವ ಹಸ್ತಪ್ರತಿಗಳನ್ನು ಬಳಸಿಕೊಂಡು ಇದನ್ನು ಸಂಪಾದಿಸಲಾಗಿದೆ. ಇದರಲ್ಲಿ ೨೩೮ ಹಾಡುಗಳಿವೆ. ಪ್ರಸ್ತಾವನೆಯಲ್ಲಿ ಡಾ. ಹಂಪನಾ ಅವರು ರತ್ನಾಕರ ಕವಿಯ ಜೀವನ, ಕೃತಿಗಳ ಬಗೆಗೆ ಸ್ಥೂಲವಾಗಿ ವಿವರಿಸಿ, ಹಾಡುಗಳ ಮಹತ್ವವನ್ನು ಗುರುತಿಸಿದ್ದಾರೆ.

ಇದಾದನಂತರ ೧೯೯೯ರಲ್ಲಿ ಮೂಡಬಿದ್ರೆಯ ಶ್ರೀ ಎಂ.ಧರ್ಮರಾಜ ಇಂದ್ರ ಅವರು ಶ್ರೀ ಪಂಚಕುಲದೇವತಾ ಪೂಜಾ ಸಂಗ್ರಹ ಎಂಬ ಸಂಕಲನವೊಂದನ್ನು ಪ್ರಕಟಿಸಿದ್ದಾರೆ. ಇದರಲ್ಲಿ ೨೨೧ ಹಾಡುಗಳಿದ್ದು, ಅವು ಸಂಸ್ಕೃತ, ಕನ್ನಡ ಭಾಷೆಯಲ್ಲಿವೆ. ಜೊತೆಗೆ ಆಧುನಿಕ ಜೈನ ಕವಿಗಳು ರಚಿಸಿದ ಹಾಡುಗಳು ಇಲ್ಲಿ ಸೇರಿವೆ. ಹೀಗಾಗಿ ಇದೊಂದು ಸಂಕೀರ್ಣ ಸಂಪುಟವಾಗಿ ಮಾರ್ಪಾಡಾಗಿದೆ. ಅಷ್ಟವಿಧಾರ್ಚನೆ, ಷೋಡಶೋಪಚಾರ ಪೂಜೆಗೆ ಸಂಬಂಧಿಸಿದ ಗೀತೆಗಳ ಸಂಗ್ರಹ ಇದಾಗಿದೆ.

ಮೇಲೆ ಸೂಚಿಸಿದ ಗ್ರಂಥಗಳಲ್ಲದೆ, ಇನ್ನೂ ಬಿಡಿಬಿಡಿಯಾಗಿ ಜೈನ ಹಾಡುಗಳನ್ನು ನಾಡಿನ ವಿವಿಧ ಪತ್ರಿಕೆಗಳಲ್ಲಿ ವಿದ್ವಾಂಸರು ಪ್ರಕಟಿಸುತ್ತಾ ಬಂದಿದ್ದಾರೆ. ಇವೆಲ್ಲವುಗಳನ್ನು ಬಳಸಿಕೊಂಡು ಪ್ರಸ್ತುತ ಸಂಪುಟವು ಸಿದ್ಧಗೊಂಡಿದೆ.

**ಪರಿಷ್ಕರಣೆ**

'ಕನ್ನಡ ಜೈನ ಹಾಡುಗಳು' ಸಂಪುಟವನ್ನು ಕರ್ನಾಟಕದ ವಿವಿಧ ಹಸ್ತಪ್ರತಿ ಭಂಡಾರಗಳ ನೆರವಿನಿಂದ ಪರಿಷ್ಕರಿಸಿ ಸಿದ್ಧಪಡಿಸಲಾಗಿದೆ. ಜೊತೆಗೆ ಇಲ್ಲಿಯವರೆಗೂ ಪ್ರಕಟಗೊಂಡ ಜೈನ ಹಾಡುಗಳು ಸಂಗ್ರಹವನ್ನೊಳಗೊಂಡ ಪುಸ್ತಕಗಳನ್ನು, ಬಿಡಿ ಬಿಡಿ ರೂಪದಲ್ಲಿ ಪ್ರಕಟವಾದ ಹಾಡುಗಳನ್ನು ಬಳಸಿಕೊಳ್ಳಲಾಗಿದೆ. ಇದು ಜನಪ್ರಿಯ ಆವೃತ್ತಿಯಾಗಿದ್ದರಿಂದ ಅರ್ಥಕ್ಕೆ ಚ್ಯುತಿ ಬರದ ಹಾಗೆ ಸರಿಕಂಡ ಪಾಠಾಂತರವನ್ನು ಕೊಡಲಾಗಿದೆ. ಕೈಬಿಡಲಾದ ಪಾಠವನ್ನು ಅಡಿಯಲ್ಲಿ ಕೊಡದೆ ಕೈಬಿಡಲಾಗಿದೆ. ಹಸ್ತಪ್ರತಿಗಳು ಲಭ್ಯವಿಲ್ಲದ ಹಾಡುಗಳನ್ನು ಈಗಾಗಲೇ ಪ್ರಕಟವಾದ ಮೂಲಗಳಿಂದಲೇ ಎತ್ತಿಕೊಂಡು ದೋಷಗಳನ್ನು ಸರಿಪಡಿಸಿ ಸ್ವೀಕರಿಸಲಾಗಿದೆ. ಗ್ರಂಥ ಭಾಗ

ತ್ರುಟಿತವಾಗಿದ್ದಲ್ಲಿ x x x x x x x x x ಈ ಚಿಹ್ನೆಯನ್ನು ಹಾಕಲಾಗಿದೆ. ಸಂಪಾದನೆಗೆ ಬಳಸಿಕೊಂಡ ಹಸ್ತಪ್ರತಿ ಹಾಗೂ ಪುಸ್ತಕಗಳ ವಿವರಗಳನ್ನು ಅನುಬಂಧದಲ್ಲಿ ಕೊಟ್ಟಿದ್ದೇವೆ.

## ಕೃತಜ್ಞತೆಗಳು

೨೦೦೦-೨೦೦೧ರ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದ ಸಂಯುಕ್ತ ಯೋಜನೆಯಡಿಯಲ್ಲಿ 'ಕನ್ನಡ ಜೈನ ಹಾಡುಗಳು' ಕೃತಿಯನ್ನು ಸಂಪಾದನೆಗೆ ಕೈಗೆತ್ತಿಕೊಳ್ಳಲಾಗಿದೆ. ಯೋಗಾಯೋಗವೆಂಬಂತೆ ಈ ವರ್ಷ ಭಗವಾನ ಮಹಾವೀರನ ೨೬೦೦ನೆಯ ಜನ್ಮಕಲ್ಯಾಣೋತ್ಸವ ಸಂದರ್ಭ ಒಂದು ಕಡೆಯಾದರೆ, ಕನ್ನಡ ವಿಶ್ವವಿದ್ಯಾಲಯಕ್ಕೆ ಈಗ ದಶಮಾನೋತ್ಸವದ ಸಂಭ್ರಮ. ಇಂಥ ಒಂದು ಸುಸಂದರ್ಭದಲ್ಲಿ ಈ ಸಂಪುಟ ಪ್ರಕಟವಾಗುತ್ತಿರುವುದು ನಮಗೆ ಅತೀವ ಸಂತೋಷವನ್ನುಂಟು ಮಾಡಿದೆ. ಈ ಸಂತೋಷಕ್ಕೆ ಕಾರಣರಾದವರು ಹಲವರು. ಇಂಥದೊಂದು ಉಪೇಕ್ಷಿತ ಸಾಹಿತ್ಯದ ಬಗೆಗೆ ನಮ್ಮ ಗಮನವನ್ನು ಸೆಳೆದು ನಾಂದಿ ಹಾಡಿದವರು ಅಂದಿನ ಕುಲಪತಿಗಳಾಗಿದ್ದ ಡಾ.ಎಂ.ಎಂ.ಕಲಬುರ್ಗಿಯವರು. ಇಂದಿನ ಕುಲಪತಿಗಳಾದ ಡಾ. ಎಚ್.ಜೆ. ಲಕ್ಕಪ್ಪಗೌಡ ಅವರು ಈ ಯೋಜನೆಯು ಪುಸ್ತಕ ರೂಪದಲ್ಲಿ ಬರುವಂತೆ ಆಗು ಮಾಡಿದ್ದಾರೆ. ಇವರೀರ್ವರಿಗೂ ನಮ್ಮ ಅನಂತ ವಂದನೆಗಳು. ಹಾಗೆಯೇ ಅಂದಿನ ಕುಲಸಚಿವರಾಗಿದ್ದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಇಂದಿನ ಕುಲಸಚಿವರಾದ ಡಾ. ಕೆ.ವಿ. ನಾರಾಯಣ ಹಾಗೂ ಅಧ್ಯಯನನಾಂಗದ ನಿರ್ದೇಶಕರಾದ ಡಾ. ಹಿ.ಚಿ. ಬೋರಲಿಂಗಯ್ಯ ಅವರು ಈ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಿ ಸಹಕರಿಸಿದ್ದಾರೆ. ವಿಭಾಗದ ಮುಖ್ಯಸ್ಥರಾದ ಪ್ರೊ. ಎ.ವಿ. ನಾವಡ ಅವರು ವಿಶೇಷ ಮುತುವರ್ಜಿ ವಹಿಸಿ ಪ್ರೋತ್ಸಾಹಿಸಿದ್ದಾರೆ. ಇವರೆಲ್ಲರಿಗೆ ನಮ್ಮ ವಂದನೆಗಳು.

ಈ ಸಂಪುಟವನ್ನು ಸಿದ್ಧಪಡಿಸುವಲ್ಲಿ ಹಲವಾರು ಸಂಸ್ಥೆಯ ನೆರವನ್ನು ಪಡೆಯಲಾಗಿದೆ. ಶ್ರವಣಬೆಳಗೊಳದ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮಿಜಿಯವರನ್ನು ಭೇಟಿಯಾಗಿ ಯೋಜನೆಯ ಸ್ವರೂಪವನ್ನು ತಿಳಿಸಿದಾಗ ತುಂಬ ಸಂತೋಷಗೊಂಡು ತಮ್ಮಲ್ಲಿದ್ದ ಹಸ್ತಪ್ರತಿ ಭಂಡಾರವನ್ನು ಬಳಸಿಕೊಳ್ಳಲು ಅನುಮತಿ ನೀಡಿದ್ದಾರೆ. ಅಲ್ಲಿಯ ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನ ಕೇಂದ್ರದ ನಿರ್ದೇಶಕರಾದ ಡಾ. ಎನ್. ಸುರೇಶಕುಮಾರ, ಹಸ್ತಪ್ರತಿ ಭಂಡಾರರ ಮುಖ್ಯಸ್ಥರಾದ ಶ್ರೀ ಬಿ.ಎಸ್.ಸಣ್ಣಯ್ಯನವರ ಶ್ರವಣಬೆಳಗೊಳಕ್ಕೆ ಹೋದಾಗಲೆಲ್ಲ ನಮಗೆ ಎಲ್ಲ ರೀತಿಯ ನೆರವನ್ನು ನೀಡಿ ಸಹಕರಿಸಿದ್ದಾರೆ. ಸಂಪಾದನ ವಿಭಾಗದ ಶ್ರೀ ಕೆ.ಆರ್. ಶೇಷಗಿರಿಯವರು ಸಹ ನಮ್ಮ ಕಾರ್ಯಕ್ಕೆ ಬೆನ್ನುತಟ್ಟಿ ಹುರಿದುಂಬಿಸಿದ್ದಾರೆ. ಇವರೆಲ್ಲರಿಗೆ ನಮ್ಮ ಕೃತಜ್ಞತೆಗಳು. ಹಾಗೆಯೇ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಡಾ.ವೀರೇಂದ್ರ ಹೆಗ್ಗಡೆಯವರು ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನದ ಹಸ್ತಪ್ರತಿ ಭಂಡಾರವನ್ನು ಉಪಯೋಗಿಸಲು ಅನುಮತಿ ನೀಡಿದ್ದಾರೆ. ಪ್ರತಿಷ್ಠಾನದ ನಿರ್ದೇಶಕರಾದ ಪ್ರೊ. ಜಿ.ಎಂ.ಉಮಾಪತಿಶಾಸ್ತ್ರಿಗಳು ಜೈನ ಹಾಡುಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳನ್ನು ನೀಡಿ ಸಹಕರಿಸಿದ್ದಾರೆ. ಇವರಿಗೆ ನಮ್ಮ ವಂದನೆಗಳು. ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರ ಮೂಡಬಿದ್ರೆಯ ಶ್ರೀ ಜೈನಮಠ, ಹೊಂಬುಜದ ಶ್ರೀ ಜೈನಮಠಗಳಲ್ಲಿರುವ ಹಸ್ತಪ್ರತಿ ಭಂಡಾರಗಳನ್ನು ಬಳಸಿಕೊಳ್ಳಲು ಅವಕಾಶ ನೀಡಿದ ಆಯಾ ಮುಖ್ಯಸ್ಥರುಗಳಿಗೆ ನಮ್ಮ ಕೃತಜ್ಞತೆಗಳು.

ಈ ಸಂಪುಟವು ಸಾಕಾರ ರೂಪ ಪಡೆಯುವಲ್ಲಿ ಹತ್ತು ಹಲವು ವಿದ್ವಾಂಸರ ನೆರವನ್ನು ಪಡೆದಿದ್ದೇವೆ. ವಿಶೇಷವಾಗಿ ಡಾ. ಹಂಪನಾಗರಾಜಯ್ಯನವರು ತಮ್ಮಲ್ಲಿದ ಜೈನ ಹಾಡುಗಳನ್ನು ನೀಡಿ, ಸೂಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ನಂದಿಹಳ್ಳಿ ಸ್ನಾತಕೋತ್ತರ ಕೇಂದ್ರದ ಪ್ರಾಧ್ಯಾಪಕರಾದ ಡಾ.ಶಾಂತಿನಾಥ ದಿಬ್ಬದ ಅವರು ಹಸ್ತಪ್ರತಿಯನ್ನು ಸಮಗ್ರವಾಗಿ ಪರಿಶೀಲಿಸಿ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು. ಪುಸ್ತಕ ಪ್ರಕಟಣೆಯಲ್ಲಿ ವಿಶೇಷ ಆಸಕ್ತಿ ವಹಿಸಿದ ಪ್ರಸಾರಾಂಗದ ಸಹಾಯಕ ನಿರ್ದೇಶಕರಾದ ಶ್ರೀ ಸುಜ್ಞಾನಮೂರ್ತಿ ಹಾಗೂ ಅಂದವಾದ ಮುಖಪುಟವನ್ನು ರಚಿಸಿದ ಕಲಾವಿದ ಕೆ.ಕೆ.ಮಕಾಳಿಯವರಿಗೆ, ಡಿ.ಟಿ.ಪಿ.

ಸಂಯೋಜನೆ ಮಾಡಿದ ಸಂಧ್ಯಾ ಕಂಪ್ಯೂಟರ್ ಗ್ರಾಫಿಕ್ಸ್‌ನ ಶ್ರೀ ಸೋಮನಾಥರೆಡ್ಡಿ, ಅಂದವಾಗಿ ಮುದ್ರಿಸಿದ ತ್ವರಿತ ಮುದ್ರಣಾಲಯದ ಸಿಬ್ಬಂದಿಗಳಿಗೆ ನಮ್ಮ ನೆನಕೆಗಳು.

ನಮಗೆ ದೊರೆತ ಹಸ್ತಪ್ರತಿ ಮತ್ತು ಗ್ರಂಥಗಳಿಂದ ಪ್ರಸ್ತುತ ಸಂಪುಟವನ್ನು ರೂಪಿಸಲಾಗಿದೆ. ಇನ್ನೂ ವ್ಯಾಪಕವಾದ ಕ್ಷೇತ್ರಕಾರ್ಯವನ್ನು ಕರ್ನಾಟಕದ ಒಳಗೆ ಮತ್ತು ಹೊರಗೆ ಕೈಕೊಂಡಾಗ ಹೆಚ್ಚಿನ ಹಾಡುಗಳು ಸಿಗುವ ಸಾಧ್ಯತೆಯಿದೆ. ಕನ್ನಡ ಸಾರಸ್ವತ ಲೋಕ ನಮ್ಮ ಈ ಕಾರ್ಯವನ್ನು ಮುಕ್ತವಾಗಿ ಸ್ವಾಗತಿಸುತ್ತಾರೆಂದು ನಂಬಿದ್ದೇವೆ.

**ಡಾ. ಎಫ್.ಟಿ.ಹಳ್ಳಿಕೇರಿ**
**ಡಾ.ಕೆ.ರವೀಂದ್ರನಾಥ**
ವಿದ್ಯಾರಣ್ಯ
೧೬-೧೨-೨೦೦೧

## ೧. ರತ್ನಾಕರನ ಹಾಡುಗಳು

**೧. ಅಯ್ಯಯ್ಯೋಕಷ್ಟದ**

ಅಯ್ಯಯ್ಯೋ ಕಷ್ಟದ ಭವಬಂಧನಗೊಳಗೆ ನೀ
ನಯ್ಯೋ ಮೈಮರೆದೆ ಜೀವನೇ ॥ ಪಲ್ಲವಿ

ನಿನ್ನೆ ಬಂದುದಿಲ್ಲದೆ ತಾಯೊಡಲೆಂಬ ಸೆರೆಯೊಳು
ಮುನ್ನವೆ ಮಾಸಿವಿರ್ದು
ಇನ್ನೊಬ್ಬ ತಾಯ ಒಡಲಿಗೆ ನಾಳೆ ಹೋಹುದಿಲ್ಲವೆ
ನೀ ನಿನ್ನ ಕೇಡ ನೋಡಲಿಲ್ಲವೆ॥ ೧

ಕಾಣುವುದಿಲ್ಲವೆ ಮುಪ್ಪಿನವರು ಬಾಲಕರೆಂಬ
ಕೇಣವಿಲ್ಲದಳಿವರನು
ಪ್ರಾಣದ ಪಯಣವಿಂದು ನಾಳೆ ಎಚ್ಚರದೆ ನೀ
ಕೋಣನಂತೆ ಜಡನಹರೆ॥ ೨

ಬೇಗ ಮುಕ್ತಿಯಾಗಬೇಕೆ ತಪಸು ಮಾಡಲಾರೆಯಾ ಲೇ
ಸಾಗಿ ದಾನಪೂಜೆಯ ಮಾಡೋ
ಆ ಗುಣಕ್ಕುಹರುಗೆಟ್ಟರಪರಾಜಿತೇಶನ ಚೆ
ನ್ನಾಗಿ ನಂಬಿ ಜಪವ ಮಾಡೋ॥ ೩

## ೨. ಕಂಡರೆಕರ್ಮವಗೆಲ್ದ

ಕಂಡರೆ ಕರ್ಮವ ಗೆಲ್ದನಾಗಳೆ ಯೋಗಿ
ಕಾಣದವ ಭವರೋಗಿ॥ ಪಲ್ಲವಿ

ಹತ್ತು ಗಾಳಿಯ ಹೆಜ್ಜೆಯರಿದು ಜಯವ ಮಾಡಿ ಮೈ ಬಿಟ್ಟಾಡಿ
ನೆತ್ತಿಗೆರೆದ ಹೊಳೆ ಬ್ರಹ್ಮನೊಡಗೂಡಿ ಅದನೆ ಕೊಂಡಾಡಿ
ಸುತ್ತುವ ಮನಸಿಗೆ ಸಂಕೋಲೆಯನು ಹೂಡಿ ನೊಸಲಲ್ಲಿ ಕೂಡಿ
ಮತ್ತೆ ಕಂಗಳು ತುದಿಮೂಗಿನೊಳಗೂಡಿ ತನ್ನಲಿ ತಾ ನೋಡಿ॥ ೧

ಭದ್ರಾಸನವ ವಜ್ರಾಸನವ ಮೊದಲಾಗಿ ಆಸನ ಜಯವಾಗಿ
ನಿದ್ರೆಯನೀಗಿ ನಿರಾಹಾರ ನಿಜವಾಗಿ ಸಂತೋಷದಲಿ ತೇಗಿ
ರೌದ್ರತೆ ಗರ್ವ ವಂಚನೆಯಾಸೆ ಬಡವಾಗಿ ಶಾಂತಿಯಲಿ ಬೀಗಿ
ಚಿದ್ರೂಪನೊಂದನೆ ತಿಳಿದು ತೊನಲಿ ತೂಗಿ ನಿಶ್ಚಯವೆದೆತಾಗಿ॥ ೨

ಬುದ್ಧಿಯಲಂಗವ ದೇವಾಲಯವೆಂದು ಆತ್ಮನೆಂದು
ಶುದ್ಧನಿಶ್ಚಯವೆಂಬ ನಯಕೆ ತಾ ಸೆಲೆ ಸಂದು ಚಿನ್ಮಯನಿಹುದೊಂದು
ಸಿದ್ಧಸ್ವರೂಪಕೆ ಮನಮೆಚ್ಚಿ ಜಯವೆಂದು ಹರುಷಾಶ್ರು ಬಂದು
ಸಿದ್ಧಿಯಿನ್ನೆಂದಪರಾಜಿತೇಶ್ವರ ನೀನೆಂದು ತನ್ನಲಿ ತಾ ನಿಂದು॥ ೩

## ೩. ಬಿಡುಬಿಡುತನುವೆ

ಬಿಡು ಬಿಡು ತನುವೆ ನಡೆನಡೆವುವವೆ
ಬಿಡದೆ ನೀನೆನ್ನೋಡದಿಹುದಿನ್ನು ಗುಣವೇ॥ ಪಲ್ಲವಿ

ನನ್ನ ನಾನರಿಯದೆ ನಿನ್ನೊಡನಿರ್ದೆನು
ನನ್ನನೀಗ ಚೆನ್ನಾಗಿನರಿದು
ಪನ್ನಗಪತಿನುತನಂಘ್ರಿಯ ಪಿಡಿದೆನು
ನಿನ್ನ ಹಂಗೇತಕೆ ನನಗಿನ್ನು ತನುವೇ॥ ೧

ಸತಿಸುತಪಿತರೆಂದು ಮತಿಗೆಟ್ಟು ನಿನ್ನಿಂದ
ಗತಿಗತಿಯೊಳು ದುಃಖತತಿಯೊಳು ನೊಂದು
ಯತಿಪತಿನುತ ಜಿನಪತಿಯ ಪಾದವ ನಂಬಿ
ಯತಿಶಯವತಿಯಾದೆನೆಲೆ ವೈರಿ ತನುವೇ॥ ೨

ಕಪಟ ನಿನ್ನೊಡನಾಡಿ ಸುಪಥನರಿಯದೆ
ಕೂಪಥದೊಳಗೆ ತೊಳಲುತ ಪುಣ್ಯದಿಂದ
ಉಪಮಿಸಬಾರದ ಸುಖವಿತ್ತು ಪಾಲಿಸು
ವಪರಾಜಿತೇಶನ ಕೃಪೆಯ ಪಡೆದೆನು|| ೩

## ೪. ಆತ್ಮಧ್ಯಾನಿಸುನೀ

ಆತ್ಯಧ್ಯಾನಿಸು ನೀ ನಿಚ್ಚ ನಿನ್ನ ಮನ ಮೆಚ್ಚ
ಆತ್ಮಬಾಹ್ಯರ ಮಾತ ಕೇಳದಿರಾ|| ಪಲ್ಲವಿ

ಕಲಿವರು ಶಾಸ್ತ್ರವ ಕೆಲವರು ಮೈಯ
ಬಲಿದು ದಂಡಿಸುವರು ಕೆಲವರು
ಲಲಿತಾತ್ಮ ಧ್ಯಾನಕ್ಕೆ ಮುನಿವರು ಗರ್ವ
ಸುಲಭರವರು ಡಂಭಕವೇಕೆ ನಂಬೊ|| ೧

ಭವಿಗಾತ್ಮ ಧ್ಯಾನವು ಬಾರದು ಅನು
ಭವದ ಧ್ಯಾನಿಯ ಕಂಡು ಜರಿವರು
ಭವಿಗಳ ನಿಜ ಗುಣವಿದು ನಂಬು ನೀ
ನವರ ಲೆಕ್ಕಿಸದೆ ನಿನ್ನನೇ ನಂಬೊ || ೨

ಕಾಲವೆಲ್ಲೆಂಬರು ಕೆಲವರು ಗ್ರಹ
ಪಾಲಾಗಿಲ್ಲೆಂಬರು ಕೆಲವರು
ಸಾಲುಶಾಸ್ತ್ರವು ಬೇಕೆಂಬರು ಶಬ್ದ
ಮಾಲೆಯ ತೋರೆ ಧಾಳೈಸುವರು || ೩

ಕಲಿಕಾಲ ಉಂಟಾತ್ಮಧ್ಯಾನವು ಮುನಿ
ಗಳಿಗುಂಟು ಗೃಹವಂತರಿಗುಂಟು
ಬಲುಶಾಸ್ತ್ರ ಬಡಶಾಸ್ತ್ರಿಗಳಿಗುಂಟು ಭವ್ಯ
ತಿಲಕರಿಗುಂಟು ಭವ್ಯರಿಗಿಲ್ಲ|| ೪

ಸಾರಭವ್ಯರಿಗೆ ಧ್ಯಾನ ನಿಲ್ಲುವುದು ಮತ್ತೆ
ದೂರ ಭವ್ಯಗೆ ಅವಧಾನ ಮತ
ವೈರವಾಗಿಹುದು ನಿರ್ಭಾವ್ಯಗೆ ತತ್ವ
ಸಾರವಿದಪರಾಜಿತೇಶ ಮತ|| ೫

**೫. ಎತ್ತಲಿಂದಬಂದೆಇನ್ನೆತ್ತ**

ಎತ್ತಲಿಂದ ಬಂದೆ ಇನ್ನೆತ್ತ ಪಯಣ ಮುಂದೆ ನಿನಗೆ
ಮೊತ್ತದ ಹಗೆಗಳ ನಡುವೆ ಮೋಸವೇ॥ ಪಲ್ಲವಿ

ಹಿಂದುಳಿದೆನೋ ನಾನು ಹಿಂದುಳಿದೆನೋ
ಮುಂದಾದರೆಮ್ಮವರು ಮೋಕ್ಷಪುರಕೆ
ಎಂದಿಗೆಮ್ಮವರಂತೆ ಸುಖಿಯಾದೆನು॥ ೧

ಭರತೇಶನಂದು ಮುಕ್ತಿಗೆ ಹೋದನಾತನೊಳು
ಬೆರಸಿ ಮುಕ್ತಿಗೆ ಹೋದೆನೆ ಮತ್ತೆ
ವರಸುತರುಗೂಡಿ ಸಗರೇಂದ್ರ ಹೋಹಾಗಲ
ವರು ಕೂಡಿ ಹೋದನೆ ಭರದಿಂದ ಮಾಘವ
ಚಕ್ರೇಶನೈದಿದನವನ ನೆರವಿಯೊಳು ನಾ ಹೋದೆನೆ ಮತ್ತೆ
ಕರಚೆಲುವನೆನಿಪ ಸನತ್ಕುಮಾರೇಂದ್ರನೊಳು
ಸರಸವಾಡುತ ಹೋದೆನೆ॥ ೨

ವಿಮಲನಾಥನ ಕಾಲದದಿ ಮೇರು ಮಂದಾರೋ
ತ್ತಮರ ಸಂಗಡ ಹೋದೆನೆ ಬಳಿಕ ಕಮಲ ಚಕ್ರಿಯ ಕೂ
ಡೆ ಮಲ್ಲಿನಾಥನ ದಿನದೊಳಮಮ ನಾ ಪೋದೆನೊ॥ ೩

ವೀರನಾಥನ ಕಾಲದಲಿ ವಿಮಲವಾಹನನ
ಸಾರಥಿಯಾಗಿ ಹೋದನೆ ಅಯ್ಯಯ್ಯೋ
ಧೀರ ಜಂಬುಸ್ವಾಮಿಯೊಡನಾದರೂ ಮುಕ್ತಿ
ಗೋರಂತೆ ಲಂಘಿಸಿದನಾರು ಇಲ್ಲಿಗೆ ನಾನೆ
ಕಾರಿಯಾದೇನೋ ಕ್ರೂರಕಲಿಯುಗಕೆ ಸಿಕ್ಕಿ ನಿಜ
ದಾರಿ ತೊಳಲುತಿರ್ದವನ ಕೃಪೆಯೊಳು ವಿ
ಚಾರಿಸಪರಾಜಿತೇಶ ॥ ೪

**೬. ತೀರ್ಥವಂದನೆಗೇಳು**

ತೀರ್ಥವಂದನೆಗೇಳುದಯ ಕಾಲವಿದು ಪುಣ್ಯಕಾಲವಿದು ಪು
ಣ್ಯಾರ್ಥಕೊಳ್ಳಿತು ಪಡೆದ ಮನುಷ್ಯ ಜನ್ಮವನು
ವ್ಯರ್ಥಕೆ ನೀಗದಿರು ಭಾವಪೂಜೆಯ ಮಾಡಿ
ಭವಕೆಟ್ಟು ಮುಕ್ತಿಯಹುದು॥ ಪಲ್ಲವಿ

ಇದು ಭರತಭೂಮಿ ಇದರಲಿ ಜಿನವಾಸಗಳು
ಮೊದಲು ಕೃತಯುಗ ದ್ವಾಪರ ತ್ರೇತೆಯೆಂಬ ಕಾ
ಲದಲಿ ಲೋಕಾಶ್ಚರ್ಯವಾಗಿ ತೋರಿದವೀಗ ಕಲಿಯುಗದ ದೋಷದಿಂದ
ಸದರವಾದವು ಕಲಿಯುಗಂ ಹೋದ ಬಳಿಕ ಮುಂ
ಲೊದವಿ ಮುನ್ನಿನ ಹಾಗೆ ಮೆರೆವಂತಿರಲಿ ಕಾ
ಲದ ದೋಷ ಹೊದ್ದದೆ ಸಂತತಂ ಮೆರೆವ ಬಸದಿಗಳುಂಟು ಕೇಳೊರೆವೆನು ‖ ೧

ಕುಂದಣ ಮೇರುಗಿರಿ ಐದುಂಟು ಮತ್ತದರೊಳು
ಒಂದೊಂದರಲ್ಲಿ ಹದಿನಾರು ಜಿನಗೃಹಗಳುಂಟು
ಒಂದುಗೂಡಿದರೈದು ಮೇರುವಿಗೆ ಎಂಬತ್ತು ನಲಯವಾಯಿತವ ವಂದಿಸು
ಮುಂದೆಂಟನೆಯ ದಿವಿಯುಂಟು ಅದರ ನಾಲ್ದೆಸೆಯೊ
ಳೊಂದೊಂದು ದೆಸೆಗೆ ಹದಿಮೂರು ಗಿರಿ ನಾಲ್ದೆಸೆಯೊ
ಳೊಂದೊಂದು ಗೂಡಿದರೆ ಅಯಿವತ್ತೆರಡು ಗಿರಿಯಲ್ಲೈವತ್ತೆರಡು
ಬಸದಿಗಳುಂಟು ವಂದಿಸು ‖ ೨

ಮತ್ತೆ ಹಿಮವತ್ಪರ್ವತ ಮಹಾ ಹಿಮವಂತ
ಉತ್ತುಂಗ ನಿಷದಗಿರಿ ನೀಲಗಿರಿ ರುಗ್ಮಗಿರಿ
ಬಿತ್ತರದ ಶಿಖರಿಯೆಂದಾರು ಕುಲಗಿರಿಗಳು ಇವು ಮೇರುವಿಗೆ ಎಡಬಲದಲಿ
ಬಿತ್ತಿಯಂದದಿ ಮುಡು ಪಡುವಣ ಸಮುದ್ರಮಂ
ಪತ್ತಿರಾಜಿಸುತಿಹವು ಪಂಚಮೇರುವಿಗೆ ಮೂ
ವತ್ತು ಕುಲಗಿರಿಗಳುಂಟಲ್ಲಿ ಮೂವತ್ತು ಜಿನ ನಿಲಯವುಂಟು ವಂದಿಸು ‖ ೩

ವಿಜಯಾರ್ಧ ಪರ್ವತಗಳೆಮದು ನೂರೆಪ್ಪತ್ತು
ರಜತಗಿರಿ ಪರ್ವತಗಳುಂಟು ನೂರಿಪ್ಪತ್ತು
ಸುಜಿನ ವಾಸಗಳುಂಟು ಪೂಜಿಸೈ ನೀ ಮತ್ತೆ ನೂರುವಕ್ಷಾರ ಶೈಲಂ
ನಿಜದಲೊಪ್ಪುವವಲ್ಲಿ ನೂರು ಜಿನಗೃಹವುಂಟು
ಭಜಿಸಿವೆಲ್ಲವು ಕಲ್ಲು ಮರದ ಬಸದಿಗಳಲ್ಲ
ರಜತಮಯ ಹೇಮಮಯ ರತ್ನಮಯ ಬಸದಿಗಳು ನವರತ್ನ ದೇಹಾರವೂ ‖ ೪

ಮಾನುಷೋತ್ತರ ಗಿರಿಗೆ ನಾಲ್ಕು ಮತ್ತಿಕ್ಷುಕಾರ
ಸಾನು ನಾಲ್ಕಕ್ಕೆ ನಾಲ್ಕು ಜಂಬೂ ಶಾಲ್ಮಲಿ ತರು
ಸ್ಥಾನದಲಿ ಹತ್ತು ಕುಂಡಲ ಪರ್ವತಕೆ ನಾಲ್ಕು ರುಚಕ ಶೈಲದಲಿ ನಾಲ್ಕು
ಈ ನೆಲದ ಕೆಳಗಿಹುದು ಭುವನನಾಸಿಕ ಲೋಕ
ವಾನೆಲದೊಳೇಳೇಳು ಕೋಟಿಯೆಪ್ಪತ್ತೆರಡು ಲಕ್ಷ
ಜಿನೇಂದ್ರ ಗೃಹವುಂಟು ಪುಷ್ಪಗಂಧಾಕ್ಷತೆ ಫಲಗಳಂ ನೆನೆದರ್ಚಿಸು ‖ ೫

ಅದೆ ತೋರುತದೆ ನೋಡು ನಕ್ಷತ್ರಗಳ ಮೊತ್ತ
ವದನು ಜ್ಯೋತಿರ್ಲೋಕವೆಂಬರಲ್ಲಿಯ ವಿಮಾ
ನದಲಿ ತಪ್ಪದೆ ಜೀನಾಲಯವುಂಟು ಲೆಕ್ಕವಿಲ್ಲದಸಂಖ್ಯಾತಂಗಳೂ
ವಿದಿತ ವೆಂತರಲೋಕವುಂಟು ವೆಂತರಿಗರೆಂ
ಬುದು ಸುರರ ಭೇದ ಜ್ಯೋತಿರ್ಲೋಕದಂತೆ ಮ
ತ್ತದರಲ್ಲಿಯು ಲೆಕ್ಕವಿಲ್ಲದೆಯಸಂಖ್ಯಾತ ಜಿನನಿಲಯವುಂಟು ವಂದಿಸು ॥ ೬

ಮೇಲೆಸೆವುದುಮ್ಮ ವೀಶಾನಂ ಸನತ್ಕುಮಾ
ರಾಲಿಂದ್ರ ಬ್ರಹ್ಮಬ್ರಹ್ಮೋತ್ತರಂ
ಶ್ರೀಲಾಂತವಂ ಸುಕಾಪಿಷ್ಟ ಭ ಶುಕ್ರಂ ಮಹಾಸ್ರುತಂಸ್ಸತಾರವೆಂದೂ
ಸಾಲಿಂ ಸಹಸ್ರರಾನಂತಂ ಪ್ರಾಣತಂ
ಪೇಳಲಾರಣ ಮೆಚ್ಚುತ ಸ್ವರ್ಗ ಪದಿನಾರು
ಕಾಲಕ್ಷಮವೆಂಬತ್ತನಾಲ್ಕು ತೊಂಬತ್ತಾರು ಸಾವಿರದೇಳುನೂರು ಬಸದಿ ॥ ೭

ಅದರಿಂದ ಮೇಲೆ ಗ್ರೈವೇಯಕಂ ಮೊದಲಾದ
ತುದಿಗೆ ಸರ್ವಾರ್ಥ ಸಿದ್ಧಿಯ ಮುಟ್ಟು ಮುನ್ನೂರು
**x x x x** ಅರುಹು ಸಾಲೆವುಂಟು ಮನದಲ್ಲಿ ನೆನೆದರ್ಚಿಸು
ಅದರಿಂದ ಮೇಲೆ ಹನ್ನೆರಡು ಯೋಜನದಲ್ಲಿ
ಸದಮಳ ಸಲ್ಲಿಸಿದ ಭೂತಳವುಂಟು
ಅದರೊಳಗೆ ನೆಲಸಿಪ್ ಸಿದ್ಧಪರಮೇಷ್ಠಿಗಳ ನೆನೆದು ನೀ ಧ್ಯಾನಿಸುವರಾ ॥ ೮

ಎಲ್ಲವಂ ಬಲಗೊಂಡ ಬಳಿಕ ನಿನ್ನಯ ತನುವ
ಮೆಲ್ಲನೆ ಜಿನವಾಸವೆಂದು ನಿನ್ನಾತ್ಮನಂ
ಸಲ್ಲಲಿತ ಜಿನನೇ ಕಣ್ಮುಚ್ಚೆ ಸುಜ್ಞಾನ ದೃಷ್ಟಿಯಿಂದೊಳಗೆ ನೋಡು
ಅಲ್ಲಿ ತೋರ್ಪನು ಚಿದಂಬರ ಪುರುಷ ಮೊತ್ತಮೊದ
ಲಲ್ಲಿ ತೋರನನುದಿನಕ್ರಮದಿ ತೋರ್ಪನು ಕರ್ಮ
ವೆಲ್ಲಾ ಕೆಡುಗುಂ ಮುಕ್ತಿಯಹುದ ನೀನಭ್ಯಾಸಿಸಪರಾಜೀತೇಶನಾಣೆ॥ ೯

**<u>೭. ಪುತ್ಥಳಿಪುತ್ಥಳಿ</u>**

ಪುತ್ಥಳಿ ಪುತ್ಥಳಿ ತಿಂಗಳ ಬೆಳಕಿನ
ಪುತ್ಥಳಿ ನನ್ನ ಕಂಗಳಂ ಮನವ ನೀ
ಸೂರೆಗೊಂಡೆ ಬೆಳುದಿಂಗಳ ಬೆಳಕಿನ ಪುತ್ಥಳಿ ॥ ಪಲ್ಲವಿ

ಮಾಯದ ಪುತ್ಥಳಿ ಬೇರೊಬ್ಬ
ಕೈಯ ಮುಟ್ಟಿ ಮಾಡದ ಪುತ್ಥಳಿ
ಬಾಯಿ ಮಾತಲಿ ಹೇಳಬಾರದ ಪುತ್ಥಳಿ
ಅಯ್ಯಾ ಮಜ್ಜನಾದಿಯ ಪುತ್ಥಳಿ॥ ೧

ನುಡಿಗೆಟ್ಟ ಮೂಲೋಕದಲ್ಲಿ ಕಂಡ
ಕಡೆ ಹರಿದಾಡುವ ಪುತ್ಥಳಿ
ಕಡೆ ಮೊದಲೆ ಕಂಡದ ಪುತ್ಥಳಿ ಅವ
ಗಡ ನಿನ್ನ ರೂಪಿನ ಪುತ್ಥಳಿ॥ ೨

ಉಪಸಮ ತಿಲದ ಪುತ್ಥಳಿ ನೋದದ
ತ್ರಿಪುರದ ಸುಡುವೆನ್ನ ಪುತ್ಥಳಿ
ಅಪರಾಜಿತೇಶನ ರೂಪಿನ ಪುತ್ಥಳಿ
ಅಪವರ್ಗವೆಯ್ದುವ ಪುತ್ಥಳಿ॥ ೩

## ೮. ಸಾಧನೆಯಮಾಡು

ಸಾಧನೆಯ ಮಾಡು ಕಂಡ ಧೀರಯೋಗಿ ಬಂದು
ಮೂದಲಿಸಿ ಹಗೆಗಳು ಮುಟ್ಟಿ ಕೈ ಮಾಡದ ಮುನ್ನ ॥ ಪಲ್ಲವಿ

ಆಯುಷ್ಯದಂತ್ಯದೊಳು ಮುಪ್ಪು ತಬ್ಬುತ
ನೋಯಿಸುತ ನಿನ್ನ ಕೊಲ್ಲುವ ಮುನ್ನ
ಒಯ್ಯಾರದಿ ದಿನ ನೂಂಕದೆ ನಿಲುತಾರು ತಪದಲ್ಲಿ
ಕಾಯ ದಂಡನೆಗರಳೆಂಬ ಕರ್ಮವ ಗೆಲುಮಲ್ಲ ॥ ೧

ದುರ್ವಿಚಾರಗಳ ನಡೆನುಡಿಯಿಂದ ಸ್ವಸ್ಥವೆಂಬ
ಪರ್ವತವಲ್ಲಾಡಗೊಡದಿರು ದೃಢದಿಂ
ಸರ್ವರೊಳು ಸಮಚಿತ್ತವಿರಿಸಿ ಬಂದ ಕೋಪ
ಗರ್ವಮಾಯೆ ಲೋಭಗಳ ಕಳೆ ಕಠಾರಿಯಿಂ ॥ ೨

ಬೀಜ ಮಾಡಿ ಬೆಳೆದು ವಿಶೋಧ ತಪ್ಪಿದೊಡೆ ಮೋಹ
ರಾಜ ನಾಳೆ ಕೆರಳಿ ಕೈ ಮಾಡದಿರನು
ಗಾಜಗೋಜನುಳಿದು ಸನ್ನದ್ಧ ಚಿತ್ತನಾಗಿಯಪ
ರಾಜಿತೇಶ್ವರನ ಧ್ಯಾನವೆಂಬ ವಜ್ರಾಯುಧದಿಂದ ॥ ೩

**೯. ಅರಿಹಂತಅತಿಶಾಂತ**

ಅರಿಹಂತ ಅತಿಶಾಂತ ಕರುಣದಿಂದೆಮ್ಮ ನೋಡ|| ಪಲ್ಲವಿ

ಸಾವು ಹುಟ್ಟಿಗೆ ಸಿಕ್ಕಿದಾಹುತಿಗೊಂಬರ
ನೋವನುಗ್ಗೊತ್ತಿ ಸಂಭವಿಸಲಿಲ್ಲವೇ || ೧

ಕರ್ಮದೊಳಗೆ ಬಿದ್ದ ದುರ್ಮತಿಗಳನೆತ್ತಿ
ಧರ್ಮರೂಪಿನೊಳೆಮ್ಮ ನಿರ್ಮಿಸಲಿಲ್ಲವೇ || ೨

ಭವಸಾಗರದವರೆಗೆ ಧರ್ಮ ಹ
ಸ್ತವ ನೀಡಿ ತೆಗೆದುಸ್ತವ ಮಾಡಲಿಲ್ಲವೇ || ೩

ವಿಷಯದ ಸೊಕ್ಕೆಂಬ ವಿಷವೇರಿದವರಿಗೆ
ವಿಷ ಹರ ಕಿರನ ನಿರ್ವಿಷ ಮಾಡಲಿಲ್ಲವೇ|| ೪

ಕುಪಥಕ್ಕೆ ಬೀಳ್ವರ ಸುಪಥಕೆ ಪಿಡಿದೆತ್ತಿ ನ
ನ್ನಪರಾಜಿತೇಶನ ನೀ ಕೃಪೆದೋರಿಲ್ಲವೇ|| ೫

**೧೦. ಬದ್ದುಬಸ್ತಿಯಹೋಗು**

ಬದ್ದು ಬಸ್ತಿಯ ಹೋಗು ಬಾಳದೆ ಹೋಗು ಬಾಳು
ತಿರ್ದ್ದು ಬಸ್ತಿಯ ಹೋಗು ಮನುಜಾ
ಇದ್ದೊಮ್ಮೆ ಬಾಳಲಾರದೆ ಹೋಗು ನಾಲ್ಕಿವು
ಹೆದ್ದಾರಿಗಳು ಮೋಕ್ಷ ಪುರಕೆ ನಡೆ ಮನುಜಾ|| ಪಲ್ಲವಿ

ನಾಲ್ಕು ತೆರದಲಿ ಬಸ್ತಿಯ ಹೊಕ್ಕವಗೆ ದೀಕ್ಷೆ ಮೂರು
ನಾಲ್ಕು ಜಲ್ಮಕೆ ಮುತಿಯಹುದು
ನಾಲ್ಕು ತೆರದಲಿ ಬಸ್ತಿಯ ಹೋಗುವಂದವ
ನಾಲ್ಕನು ಕೇಳೆ ಹೇಳುವನು || ೧

ಪೊಕ್ಕು ಸಂಸಾರವ ಜವ್ವನರಿವನ್ನಕ ಸುಖಿಸಿ ಮ
ತ್ತಕ್ಕಾರು ಮಿಗೆ ದೀಕ್ಷೆಗೊಂಡು
ಚೊಕ್ಕ ತಪಸು ಮಾಡಿದರೆ ಬದ್ದು ಬಸ್ತಿಯ
ಹೊಕ್ಕನವ ಮುಂದೆ ಮುಕ್ತಾ || ೨

ಜಾಳು ವಿಷಯವಾವ ಸುಖವೆಂದು ಜವ್ವನ
ಕಾಲದೊಳೆ ದೀಕ್ಷಯನಾಂತು ಸಂಸಾರದೆ
ಬಾಳ ಬಸ್ತಿಯ ಹೊಕ್ಕನವನಿನ್ನು ನೀ
ನಾಳೆಯ ಮೋಕ್ಷದ ಪಟ್ಟದರಸು ಕಾಣಾ ॥ ೩

ಸತಿಸುತ ಧನಕನಕಾದಿ ಸಂಪದದೊಳು
ಕ್ಷಿತಿ ಮೆಚ್ಚುವೊಲು ತಾನು ಬಾಳುತಲಿದ್ದು
ಯತಿ ಸನಿಹವ ಸಾರಿ ದೀಕ್ಷೆಯಾಂತವ ಬಾ
ಳುತ ಬಸ್ತಿಯ ಹೊಕ್ಕನವ ಮುಕ್ತ ॥ ೪

ಸಾಲ ಶೂಲದಿ ಬಡತನ ಸತಿಸುತರ ಹೊಯಿ
ಮಾಲೆಗೆ ತಳೆ ತುಂಬಿಟ್ಟವನು
ಬಾಳಲಾರದೆ ಬಸ್ತಿಯ ಹೊಕ್ಕನವ ಮುಂದೆ
ಮೂಲೋಕ ಪದವವನಾಳುವೆನು ॥ ೫

ಆವ ಪರಿಯಲಾದರೂ ಹೊನ್ನು ಹೆಣ್ಣು ಮ
ಣ್ಣ ವಿಧಿ ಮೂರನು ತೊರೆದು
ಜೀವಿಸಿದವಗೆ ಜಿನನಾಥನ ರೂಪಾಂತ
ಜೀವನವೇ ಜೀವರತ್ನ ॥ ೬

ತಪಸಿಯಾಗಲಿ ಗೃಹವಂತನಾಗಲಿ ದೇಹ
ದುಪಭೋಗಗಳು ಮುಳುಗಿರಲಿ
ಸ್ವಪರ ತತ್ವವನರಿದಾತ್ಮನ ಕಂಡಡೆ
ಅಪರಾಜಿತೇಶ ಮೆಚ್ಚುವನು॥ ೭

**೧೧. ಹಂಸೆಹಾರಿದೇಕೊ**

ಹಂಸೆ ಹಾರಿದೇಕೊ ಮನವೆಂಬ
ಹಂಸೆ ಹಾರಿದೇಕೊ
ಮಾಂಸಮಯ ತನು ಸುಖದ ಕೆಸರಲ್ಲಿ
ಕಾಂಸೆಯೇತಕೆ ಬೇಡ ಬಿಡುಬಿಡು॥ ಪಲ್ಲವಿ

ಆವಾವ ವಸ್ತುಗಳನು
ಸೇವಿಸಿದ ಮೇಲೆ ನಷ್ಟ

ಆವಕಾಲಕು ತಿದ್ದಿ ಕೆಡದ ಸಂ
ಜೀವನಮೃತವನೆ ಏನು ನಿಚ್ಚ ‖ ೧

ಮೂರು ತನುಗಳ ಬೇರು ಮಾಡು
ಬೇರೆ ಜಾತಿ ರೂಪನೊಳು
ಮೀರಿ ಕಡು ಸವಿದೋರುತಿದೆಡೆಗೆ
ಯಾರುವಂತೆ ಕೊಳತಾಮೃತವ ‖ ೨

ಮೂಜಗದೊಳಗೆ ಸುತ್ತಿ
ಈ ಜನ್ಮ ಕೊಜಗಳನ್ನು
ಮಾಜ ಸವಿಗಂಡೆಯೂ ಅಪ
ರಾಜಿತೇಶನ ಕರುಣಾಮೃತ ತೀವಿದ ‖ ೩

## ೧೨. ಆಡಿಬಾಆಡಿಬಾ

ಆಡಿ ಬಾ ಆಡಿ ಬಾ ಆಡಿ ಬಾ
ಆಡಿ ಬಾ ನೀ ಹಂಸೆ ಬೆಂದ
ಗೂಡು ನಿಜವಲ್ಲ ಮೇಲು
ನಾಡಿಗೆ ನೀ ಹೋಗಿ ‖ ಪಲ್ಲವಿ

ಆಯಿದು ಹೊನ್ನ ಬೆಟ್ಟಗಳ ಪೂರ್ವ ಪಶ್ಚಿಮದಲ್ಲಿ
ಈರೈದು ದೇವ ದಶದಿಕ್ಕು ತಪ್ಪದೆ ಮತ್ತಲ್ಲಿ
ಮಯಿದೋರಿದ ಸಿದ್ಧರುಂಟು ನೀನವರ ಸುಧೆಯೆಂಬ
ನೆಯ್ದಿಲುಗಳ ಹೊಕ್ಕು ಹೂವಿನ ವಸಂತವಾ ‖ ೧

ಮೇರುವಿದೇಹದಿ ಸಾರು ಸರ್ಗಕ್ಕೆಲ್ಲಾಗಿಸಿ ಮೇಲೆ
ಭೂರಿ ವಿಮಾನವ ದಾಂಟಿ ಮುಂದೆ ಮುಕ್ತಿಪುರದ
ಸಾರ ಸುಖಿಗಳ ಸಂಗವೆಂಬ ಪಾಲ್ಗಡಲಲ್ಲಿ
ಸಾರಿ ಮೂಡಿ ಮುಳುಗಿ ನಿನ್ನ ಮೃತದೋಕುಳಿಯಾ ‖ ೨

ಹೋಗಿ ಬಂದು ನಿಚ್ಚದಾರಿಗಂಡಿದ್ದರೆ ಜವನೆಂಬ
ಬೇಗೆಯಟ್ಟಿದಾಗಲತ್ತ ನೋಡಿ ಬಾಳಬಹುದು
ಆಗೀಗಿವೆಂದೆನ್ನದೆ ನಿನಗಪರಾಜಿತೇಶ್ವರನ
ರಾಗರಸರಂಜಿತ ಪಾದಾಂಬುಜಗಳಲ್ಲಿ ‖ ೩

## ೧೩. ವೈದ್ಯವಿದೇಕೊಕೂಡೊಂದು

ವೈದ್ಯವಿದೇಕೊ ಕೂಡೊಂದು ವಶ್ಯಗಳು ಧ
ರ್ಮದೊಳವೆ ಮನಸಿಗೆ ವೇದ್ಯ ವಾ
ದುದ ಮಾಡಿಕೂಳಲೆ ಮನುಜಾ || ಪಲ್ಲವಿ

ನಾನಾ ವಿಧಿಗೈವ ಪಾಪವೆಂಬರ್ಥದಲಿ
ಬೇನೆಗೆ ಜಪವೆಂಬ ಲೇಪವಿದೆ
ಮೇನಕೆ ರಂಭೆಯರೊಲಿಯಬೇಕಾದರೆ ನೂ
ರು ನೋಂಪಿಯ ಸ್ತ್ರೀವಶ್ಯವಿದೇಕೊ|| ೧

ದಾರಿದ್ರ್ಯವೆಂದೆಂಬ ಕ್ಷಯರೋಗಕೆ ಸಿಂ
ಧೂರವಿದೇಕೊ ವ್ರತ ಶೀಲವೆಂಬಾ
ಧೀರ ನೀ ಲೋಕದ ವಾಸ ಮಾಡಿಕೊಂಬರೆ
ಈರಾರು ತಪವೆಂಬ ಜಪವಿದೇಕೊ|| ೨

ಜ್ಞಾನತತ್ವವ  ಕಾಣೇ ಸದಮೋಹವೆಂಬ ಕ
ಣ್ಬೇನೆಗೆ ಗದ್ಯಾತ್ಮಂಜನವಿದೇಕೊ
ನೀನಪರಾಜಿತೇಶನನೊಲಿಸುವರಾತ್ಮ
ಧ್ಯಾನವೆಂಬುತ್ತಮ ರಾಜವಶ್ಯವಿದೇಕೊ|| ೩

## ೧೪. ಕೆಳಗೆಬಿದ್ದುಕುಳಿಕುಂಡು

ಕೆಳಗೆ ಬಿದ್ದು ಕುಳಿಕುಂಡು ಮೊಗ ಬಾಡಿ ಸವೆವರಯ್ಯ|| ಪಲ್ಲವಿ

ಆಳುದ್ದವಾದ ರೂಪಳಿಯದಗಲ ತಪ ಶೀಲಗೆಡಿಸಿದ ನೆಯ್ದದೆ
ಬಾಳು ವಿಷಯಕಿಕ್ಕಿ ಗೇಣುದ್ದವಾಗಿನ್ನು
ನಾಳೆ ತಾಯೊಡಲೊಳಗೆ ಬಾಳುವರೆಂತು|| ೧

ನೆರೆಸಂದಿಸಿತು ನರರಲ್ಲಿ ಕುಟ್ಟಿಯ ಹುಳು ತೋರಿದ
ಕ್ಕರಗಳಂತೆ ಅರಿದಲ್ಲಿ ಮುಕ್ತಿ ಸಂಪದವ
ಸಾಧಿಸದಿನ್ನು ಮರದು ಹಲವು ಯೋನಿಗೆ ಬೀಳುವರಿಂತು|| ೨

ತಪಕಾರಿದರೆ ದಾನಪೂಜೆಯುಂಟೆಷ್ಟ
ರ ಪುಣ್ಯವಿಲ್ಲದಿರೆ ನಮ್ಮ ಅಪರಾಜಿತೇಶನ
ಜಪಿಸಿ ಸುಖಿಗಳಾಗದೆ ನೋವವರಿಂತು||  ೩

**೧೫. ಹೆಚ್ಚುಬದುಕಿನರರಾಯುಷ್ಯ**

ಹೆಚ್ಚಿ ಬದುಕಿ ನರರಾಯುಷ್ಯ ನೂರು
ವೆಚ್ಚದಾದಲ್ಲಿ ನೋಡಿದರೇರುಪೇರು॥ ಪಲ್ಲವಿ

ತೊಡಗಿ ಹನ್ನೆರಡಬ್ದ ಸೀಮೆಯೆಂಬ ತಪ್ಪು
ಗಡೆಗಡೆವತ್ತರಿಂ ನಾಲ್ವತ್ತು ಮುಪ್ಪು
ನಡುವೆ ಇಪ್ಪತ್ನಾಲ್ಕು ನಿದ್ರೆಗೆ ಮುಪ್ಪು
ಕಡು ಬದ್ಧರೆಪ್ಪತ್ತನಾಲ್ಕರಿಂದೊಪ್ಪು ॥ ೧

ಅದು ತಾನು ಸ್ಥಿರವಲ್ಲ ಸ್ಥಿರವಾದೊಡೆ
ಕದನ ಲೋಕವಿಯೋಗ ರೋಗದ ಸೊಮ್ಮು
ಎದ್ದರು ತಪ್ಪದಿರೆ ತೆರಬಲ್ಲೆ
ಇದರೊಳಗೇತಕೊ ಭೋಗದ ಹೆಮ್ಮೆ॥ ೨

ಸಟೆಯೊ ಸಿರಿಯೊದಾತ್ಮ ನಿನಗೇಕೊ ನಂಟು
ನಟುದೆರವಾದಪರಾಜಿತೇಶ್ವರನುಂಟು
ಕುಟಿಲ ವಿಷಯಗಳ ಗೆಲ್ವುದೆ ಬಂಟು
ಪಟುವಾಗಿ ಜಲ್ಮ ಸಮುದ್ರವ ದಾಂಟು॥ ೩

**೧೬. ಲೋಕಭರಿತನೀ**

ಲೋಕಭರಿತ ನೀ ಸಲ್ವಕೆ ಬಂದೆಯಾ ಪರಮಾತ್ಮ
ಜಗದ್ಗುರವೇ ನೀ ಎನಗೆ ಸಂದೆಯಾ ಪರಮಾತ್ಮ
ಪಾಪಹರವೇ ನೀ ಭವದಲ್ಲಿ ನೊಂದೆಯಾ ಪರಮಾತ್ಮ॥ ಪಲ್ಲವಿ

ಜಗದುಷ್ಟ ತೆರೆಪಡುವುಳ್ಳನ ನೀನು ಸೊಗಸು ಪವಿತ್ರ ಮಾ
ರಗಲದ ಮೈಯೊಳಡಗಿದೆಯಾ ಪರಮಾತ್ಮಾ॥ ೧

ಅಂಬುಜ ಸುಖಕೋಜ ಕಿರಣಾತ್ಮ ಕರ್ಮ
ವೆಂಬರುಹುಗೊಳಗಾಡಿಯೂ ಸೊಗಸು ಪರಮಾತ್ಮ॥ ೨

ಪವಿತ್ರ ರೂಪಾತ್ಮ ಹಸಿದೊಗಲದ ಕಂತಿಯ
ಹೇಸದಾಂತೆಯಾ ಪರಮಾತ್ಮಾ॥ ೩

ಆವ ಭಾಧೆಯು ತಾಗಬಾರದ ಮಹಾ
ದೇವ ಮೃತ್ಯುವಿಗೆ ತುತ್ತಾದೆಯಾ ಪರಮಾತ್ಮಾ|| ೪

ರಾಜಿಸಿ ನಿನ್ನ ನೀ ನೋಡದೆ ಅಪ
ರಾಜಿತೇಶಗೆ ದೂರ ಹೋದೆಯಾ ಪರಮಾತ್ಮಾ|| ೫

## ೧೭. ಸಾಕಿನ್ನುಹಲವುಹಂಬಲಿನಾಸೆ

ಸಾಕಿನ್ನು ಹಲವು ಹಂಬಲಿನಾಸೆ ದೇವಾ ನೀ
ಸಾಕಿದಂದದೊಳೊಪ್ಪೆಯಪರಾಜಿತೇಶಾ ||     ಪಲ್ಲವಿ

ಕಾಡಿದೆನಯ್ಯಾ ನಾ ಕರಕರಸಿದು ನಿಂದು
ಬೇಡಿದೆ ಬೆರೆದೆ ದೇವ ನಿಂದು
ನಾಡ ಮಾತೇಕೆನ್ನ ಪದಕೆ ಜಯ
ನೋಡದೆ ನಿಮ್ಮ ಗುಣವ ಮೆರೆ ಕರುಣೆ || ೧

ತನ್ನ ಮೋರೆಯ ಕಂದನರಿಯದೆ ಮುನ್ನಲೊಬ್ಬ
ಕನ್ನಡಿ ಕಷ್ಟವೆಂದಿಡಿಸಿದಂತೆ
ತನ್ನ ದುಃಖ ತನಗಾರುಗೊಳಿಸಿದರೆ
ನಿನ್ನ ಮೇಳಲಿ ನೊಂದಿಸು ಪರಮಾತ್ಮಾ|| ೨

ಮೂಜಗದೊಳಗುಳ್ಳ ಸಕಲ ಸಂಪದ ನಿಮ್ಮ
ಪೂಜಿಸಿದವರಿಗೆ ತೃಣಮಾತ್ರವಯ್ಯ
ಮಾಜಲೇಕದರಿಂದ ನಮಗಿನ್ನಮೋನಮೋ ಅಪ
ರಾಜಿತೇಶ್ವರನೆಂಬ ಭಕ್ತಿಯೆ ಮುಕ್ತಿ||               ೩

## ೧೮. ಏನೆಂದುಹೇಳಲಿಸುಖ

ಏನೆಂದು ಹೇಳಲಿ ಸುಖವಾದೊಂದು ಸುಖವ
ಏನೆಂದು ಹೇಳಲಿ ಆತ್ಮಾಭಿಮುಖವ || ಪಲ್ಲವಿ

ನನ್ನಲ್ಲಿ ನಾನಡಗಿ ಕಣ್ಮುಚ್ಚಿ
ನನ್ನಿಂದ ನಾ ನೋಡಿದರೆ
ಮುನ್ನ ನಾ ಕಂಡು ಕಳೆದುದಲ್ಲಿ ನವಸುಖ

ತನ್ನ ತಾ ಹೊಳೆವುತಿದೆ ಪ್ರಭೆ
ಬಿನ್ನನೋ ಬೆಳಗುತಿದೆ ಅಂತರಂಗವು ತೊಳೆವುತಿದೆ ‖ ೧

ಇಂಗಡಲೊಳು ಮುಳುಗಿದ
ಹೊಂಗದ ಬೆಳುದಿಂಗಳೊಳಡಗಿದಂತೆ
ಹಿಂಗದೆ ಸಿದ್ಧರಸದೊಳೈಕ್ಯವಾದಂತೆ
ಮಂಗಲದೋರುತಿದೆ ಅಂತ
ರಂಗ ತಂಪೇರುತಿದೆ ಸರ್ವಸಂಗ ಮೈಚಾರುತಿದೆ ‖ ೨

ಉಂಡುದಣಿಯಬಹುದಲ್ಲದೆ ಸುಖವ
ಕೊಂಡು ಸುಯಲರಿದು
ಕಂಡವರ್ಗವಲ್ಲದೆ ಬಾರದು ಒಬ್ಬ ಸು
ಪಂಡಿತನಿಗೆ ಬಹುದು ದೇಹ
ಮಂಡಲದೊಳಗಿಹುದು ಸ್ವರ್ಗ
ಖಾಂಡ ತಾನಾಗುತಿಹುದು ‖ ೩

ಸಲೆ ಜಿಹ್ವೆ ನಯನ ನಾಸಿಕ ಕರ್ಣ ತೆರ ಸೋಂಕಿ
ನಲಿ ಮುನ್ನ ಕಂಡೆ ಸುಖ
ಹುಲು ಮಾನವರಿಗೆ ಕಾಣಿಸುತದೆ ಹೊಸತಾಗಿ
ಬಲು ಸುಖ ಹುಟ್ಟುತದೆ ಮುಕ್ತಿಲಲನೆಯ ಮುಟ್ಟುತದೆ ‖ ೪

ಹರಿವ ಹೊಳೆವ ಜಯ ಮಾಡು ಪ್ರಾಕೃತವೆಂಬ
ಪರಮಾಗವ ನೋಡು ತಿರುಗಿ ಚಿದಂ
ಬರ ಪುರುಷನ ಕಾಣ್ಬಸ
ತ್ಪುರುಷನೊಬ್ಬನೆ ಧನ್ಯ ಮುನಿ
ವರೊಳಾತ್ಮನೆ ಮಾನ್ಯ ನಾಳೆ ಜಿನನ ಮನೋಶೂನ್ಯ ‖ ೫

## ೧೯. ಸುಜ್ಞಾನಿಯಲ್ಲವೆ

ಸುಜ್ಞಾನಿಯಲ್ಲವೆ ಪರಮಾತ್ಮನು
ಅಜ್ಞಾನದಲ್ಲಿ ಸುಳಿವರೇ ‖ ಪಲ್ಲವಿ

ಎಲು ಚರ್ಮ ಮಾಂಸ ಮಲದ ಮೈಯೊಳನಿರ್ದು
ಚೆಲುವನೆಂದು ಗರ್ವಿಸುವರೆ

ಹಲವು ಯೋನಿಯೊಳಗೆ ಹುಟ್ಟಿ ಬರುತಿರ್ದು
ಕುಲವಂತ ತಾನೆಂದು ನಡೆವರೇ ॥ ೧

ಆಹಾರೊಂದಿನ ತಪ್ಪಿದರೆ ಬೀಳ್ವೆ
ಸಾಹಸಿಯೆಂದು ಬೀಗುವರೇ?
ದೇಹದಾಸೆಯೊಳಗಾದ ಬಾಳಿಗೆ
ನೀ ಹೀಗೆ ಹೇಸದಿರುವರೇ ॥ ೨

ಮುಗಿಲೊಳಗಿರ್ದ ರವಿಯಂತೆ ಅಲ್ಲಿಯೆ
ಮಗೆ ಚಿದಂಬರ ಪುರುಷನ
ಬಗೆಗಂಡು ನೋಡಿ ಕರ್ಮವ ಸುಟ್ಟು ನೀ ಮುಕ್ತಿ
ಹೋಗುವಲ್ಲಿ ತಡೆವರೇ ॥ ३

## <u>೧೦. ನಿನಗೆಸೋತೆನಿಲ್ಲಿ</u>

ನಿನಗೆ ಸೋತೆನಿಲ್ಲಿ ನಲ್ಲ ನಾಳೆ ನಾಳೆದ್ದು ನಿಂದ
ಮನೆಗೆ ಹಂಸಕಾಂತ ಬಹುಚಿಂತೆ ಬೇಡ ಭಾವಕಿ ॥ ಪಲ್ಲವಿ

ಕಂಡು ಬಂದೆನವನ ಪರಿಯ ಕೇಳು ಪೇಳ್ವೆನು ಮಾಂಸ
ಪಿಂಡವೆಂದು ತನ್ನ ತನುವಿಗೋಚರಿಸಿದನು
ಭಂಡರೆರಗಿ ಮುಗಿಲೊಡಗಿದಂತೆ ತಾನೆಂದು ತನ್ನ
ಕಂಡು ಮೈಯ ಮರೆಯೊಳಾತ್ಮ ರೂಪ ಹಿಡಿದನು ॥ ೧

ರತಿ ವಿಷಾದವೆಂಬ ಕುಂದಣಿಗಳು ನಿನ್ನನು ನಾಲ್ಕು
ಗತಿಯ ಹೆಂಗಳೆಡೆಗೆ ಕರೆವರೆಂದು ಬಿಟ್ಟನು
ನುತ ವಿರಕ್ತಿ ಕ್ಷಮೆಗಳೆಂಬ ನಿನ್ನ ಸುಖಿಯರ ಕೂಡೆ
ಅತಿ ವಿನೋದ ಮಾಡುತಾತ್ಮ ಪುರದೊಳೈದನೆ ॥ ೨

ದುರಿತ ಮಲಿನ ಹಿಂಗುವಂತೆ ಧ್ಯಾನ ಜಲದಲಿ ಮಿಂದು
ವರಗುಣಂಗಳಿಂದ ತೊಟ್ಟು ಸೊಬಗು ಸೂಸೂತ
ಮರಣವೆಂಬ ನೆವದಿ ಹೊತ್ತ ಮೈಯ ಬೀಸಾಡಿ ಚಿದಂ
ಬರ ಪುರುಷ ಬಹನು ಚಿಂತೆ ಬೇಡ ಮುಕ್ತಿಕಾಮಿನಿ ॥ ३

**೧೧. ಸುಮತಿಸುಮತಿಯೆಂದು**

ಸುಮತಿ ಸುಮತಿಯೆಂದು ನನ್ನ ಕರೆದು
ಸಮರತಿ ಕುಟಿಲ ರಮಣ ಹಂಸವೀರನನಗಿದೇಕೆ ತೋರದೆ ॥ ಪಲ್ಲವಿ

ಮೂರು ಯೋಗವ ಬಲ್ಲಿದ ಮೈಯೊಳವನ ನೋಡುವೆ ದೇಹ
ಮೂರು ಸೋಂಕದೆ ತೊಳೆತೊಳೆಸುತ ಕಾಣಿಸಿಕೊಂಬನ
ತೋರುವಾಗಳೆ ಮೈಯ ಹೋಗು ಕೂಡೆ ತೋರುವಾ ದಾಳಿ
ಗಾರನಲ್ಲವೇ ಅವನನೆಂತು ಗೆಲುವ ನಾ ಕಾಣೇ ॥ ೧

ಕಂಡ ಮಾತ್ರದೊಳೊಂದು ಸುಖಮೈರುಮ್ಮು ತೊಟ್ಟುತಿದೆ ಮುಂ
ಕಂಡು ಕೇಳಿ ಸುಖದಂತಲ್ಲ ಪರಮಸುಖವಿದು
ಉಂಡು ದಣಿಯಬಹುದು ನುಡಿವೆನೆಂದರೆ ಬಾರದು ಸವಿಯ
ಕಂಡು ನನಗಾಕಾಂಕ್ಷೆ ಬಿಡದು ಕೈವಶವಾಗದು ॥ ೨

*ಪರಮಾಣು ಮಾತ್ರವಾದರೂ ಸ್ನೇಹಮೋಹ*
*ವೈರವ ಮತ್ತೆ ಪರವಸ್ತುವಿನಲ್ಲಿ ಮಾಡದೆ ಪ್ರಾಕೃತ ಪಾಪಾಸ್ರವ*
*ಮರುತನ ಜಯಿಸಿ ಕಣ್ಮುಚ್ಚಿ ಮೌನವಿಡಿದು ಕುಳಿ*
*ದಿರೆ ಚಿದಂಬರ ಪುರುಷ ತಾನೇ ಮೆಚ್ಚಿ ಬಂದಳಂಗನೆ ॥ ೩*

**೧೨. ಇದನೀವುಕಣ್ಣಾರೆ**

ಇದ ನೀವು ಕಣ್ಣಾರೆ ಕಾಬುದಿಲ್ಲವೆ ಕ
ರ್ಮದಾಟವ ಸಂಸಾರದ ಮಾಟವ ದುಃಖದ ಕಾಲ ಕೂಟವ ॥ ಪಲ್ಲವಿ

ಆಳುದ್ದವಾದ ರೂಪು ಅಳೆದು ಹೋಹ ನಾಳೆ ಗೇಣುದ್ಧವಾಗಿ
ಬಾಳುತಲದೇಕೊ ಮತ್ತೊಬ್ಬ ತಾಯೊಡಲೆಂಬ
ಜಾಳು ಸೆರೆಯಲ್ಲಿ ಮಲಮೂತ್ರದ ಕೆರೆಯಲ್ಲಿ ಮಾಸಿನ ಮುಸುಕು ಮರೆಯಲ್ಲಿ ॥ ೧

ಪ್ರಾಯದಿ ಮೋಹಿಸಿದ ತನ್ನಯ ಕಾಯವೆ ಮುಪ್ಪಾಗಿ
ಹೇಯದೋರುತಲ್ಲದೆ ಮುನ್ನಿನ ಸೊಬಗೆಲ್ಲ
ಮಾಯವಾಗುತದೆ ತಲೆ ಕೈ ನಡುಗಿ ತೂಗುತಿದೆ ॥ ೨

ಕಾಯ ಬೇರಾತ್ಮ ಬೇರೆ ಒರೆಯೊಳಿದ್ದಾ ಯುಧದಂತೆಂದು
ಈ ಯುಕ್ತಿಯರಿದು ಚಿದಂಬರ ಪುರುಷನ ಕಾಯದಲಿ ನೋಡಿ ಕರ್ಮವನಿರ್ಜ
ರೆಯ ಮಾಡಿ ನೀವೆಲ್ಲ ಮುಕ್ತಿಯಲಿ ಕೂಡಿ ॥ ೩

**೧೩. ಅಜ್ಞಾನಿಬಳಲಿಯೂ**

ಅಜ್ಞಾನಿ ಬಳಲಿಯೂ ಬಂಧ ಮುಕ್ತನಹನೆ
ಸುಜ್ಞಾನಿಯೆ ಮುಕ್ತನಹನೈ ॥ ಪಲ್ಲವಿ

*ಊಡಿ ಸುಟ್ಟಾಡುವ ಕಾರುಕರೆಲ್ಲ ರಸ*
*ವಾಡಿಯಂತಪರಂಜಿ ಮಾಡುವರೇ*
*ಓದುವರೆಲ್ಲ ತಮ್ಮಾತ್ಮನ ಬಲ್ಲರೇ*
*ಭೇದ ವಿಜ್ಞಾನಿಯೇ ಬಲ್ಲನೇ ॥ ೧*

*ಬೇಸರದೆಗೆವಡರು ನಿಧಿಗಾಣ್ಬರೆ*
*ಭಾಷೆ ರಂಜನ ಸಿದ್ಧಕಾಣ್ಬನೆ*
*ಏಸು ತಪಸು ಮಾಡಿಯೂ ಭವಿ ನಿಜ ಕಾಣಾ*
*ಆಸನ್ನ ಭವ್ಯ ತಾನೊಬ್ಬ ಕಾಣ್ಬನೈ ॥ ೨*

ತನು ಮನವೆಂಬಷ್ಟರಲಿ ಶಿವಭೂತಿಗೆ
ಹಾಸಲೊಚ್ಚಲಿ ಭರತೇಶಗೆ
ವಶವಾಯಿತು ಮುಕ್ತಿ ಚಿದಂಬರ ಪು
ರುಷನ ಅಸಮಗುಣವನರಿದೀಕ್ಷೆ ॥ ೩

**೧೪. ಸುಖವಬಯಸಿಸುಖ**

ಸುಖವ ಬಯಸಿ ಸುಖದೊಳಗೆ ಕಾಣದೇ ಹೋದೆ

ಮುಖದಿಂದ ನೋಡುವರೆ ಮನವೇ ॥ ಪಲ್ಲವಿ

ನೆರೆ ಕಬ್ಬನೊಳಿರ್ದ ರಸವ ಕಾಣದೆ
ಕುರಿ ಹೊರಗೆ ಸೋಗೆಯ ತಿಂಬಂತೆ
ಉರಿ ಮೈಯೊಳಿಹ ಪರಮಾತ್ಮಾಮೃತವ ಬಿಟ್ಟು
ಬರಿ ಮೈಯ ಸುಖಕೆ ಸೋಲುವರೇ ॥ ೧

ರಸದಾಳೆ ಕಬ್ಬಿನ ಸೋಗೆಯ ಬಿಟ್ಟೊಳಗಿರ್ದ
ರಸವ ಕೊಂಬಾನೆಯಂತೆ ವಿಷಯ
ದಾಸೆಯ ಬಿಟ್ಟು ನೆಚ್ಚಲು ಬ್ರಹ್ಮಾನಂದ
ರಸವ ಸೇವಿಸಲಿಲ್ಲವೇ ॥ ೨

ಮೊದಲೊಂದಿಸೆಂಬರಿಸಹುದು ಮತ್ತಾ ಸುಖ
ತುದಿಗಾತ್ಮ ಸಿದ್ಧಿಯಕ್ಕು ಅದರಿಂದ
ಚಿದಂಬರ ಪುರುಷನನ ನೋಡು ಬಾ
ಹೃದೊಳಾಡಿ ಭ್ರಮಿಸುವರೇ ॥ ೩

**<u>೧೫. ಯೋಗವೆಭೋಗವಯ್ಯ</u>**

ಯೋಗವೆ ಭೋಗವಯ್ಯ ತಿಳಿದರೆ
ಯೋಗವೆ ಭೋಗವಯ್ಯ ತಿಳಿಯದಿರೆ ತನ್ನ
ಯೋಗವೆ ರೋಗವಯ್ಯ ತಿಳಿದರೆ ॥ ಪಲ್ಲವಿ

ಈರೈದು ಹಳೆಯ ಸಾಧ್ಯ ಮಾಡಿದರೆ
ಶರೀರಕೆ ಲಘು ಮನಸ್ಥಿರವಹುದು
ಸಾರುವುದಾತ್ಮನು ಭವದಲ್ಲಿದ್ದೊಡೆ ಮೈಗೆ
ಭಾರ ತಪ್ಪುದು ಮನತೊಟ್ಟು ನೆಚ್ಚಲು ಮೆಚ್ಚಿ ಚಿದಂ
ಬರ ಪುರುಷನನೊಳವದಾಗಿ ॥ ೧

ಅಸನ ಜಯವುಪವಾಸ ಜಯವು ನಿ
ದ್ರಾಸತಿ ಜಯವಾದಡಾನಂದವ

ಸೂಸುತ ಧ್ಯಾನ ನಿಲ್ಲುವುದಲ್ಲದೊಡೆ ಮೈಗೆ
ಬೇಸರ ಬಳಲಿಕೆ ಬೆಳೆದಿಹುದಾಗಿ ॥ ೨

ಹಂಬಲವೆಲ್ಲವ ಬಿಟ್ಟು ನಿಚ್ಚಲು ನಚ್ಚಿ ಚಿ
ದಂಬರ ಪುರುಷನ ನೋಡಿರೊ
ಬಿಂಬಿಸುತಿಹುದು ಸುಜ್ಞಾನವಲ್ಲದೊಡೇಕೆಂ
ದೆಂಬಂಗಜ್ಞಾನ ಕವಿದಿಹುದಾಗಿ ॥ ೩

**<u>೧೬. ಸುಜನಸುಜ್ಞಾನಜಿನಾನಂದ</u>**

ಸುಜನ ಸುಜ್ಞಾನ ಜಿನಾನಂದ ರೂಪನೇ ಜಾಣರ ದೇವ
ತ್ರಿಜಗದ್ಗುರುವೇ ನಿರಂಜನ ಸಿದ್ಧನೇ ಜಾಣರದೇವ ॥ ಪಲ್ಲವಿ

ತನು ಮೂರು ಹೊದ್ದಿಯೂ ಹೊದ್ದದೆ
ನೀನದರಿಂದ ಭವ್ಯ
ಜನರಿಗಲ್ಲದೆಯಭವ್ಯರಿಗೆ
ಕಾಣಿಸಿಕೊಳ್ಳ ಜಾಣರದೇವ ॥ ೧

ಷಡುದರುಶನಕೆ ಬಹುಮತಕೆ ನೀನಿದ್ದಿಲ್ಲ ಕೈಗೆ
ಹಿಡಿದರೆ ನಿಲ್ಲೆ ಧ್ಯಾನದಲಿ ನೀ ಸಿಕ್ಕುವೆ
ಬಿಡದೆ ಧ್ಯಾನಿಸಿದರೆ ಕೊಡುವೆ ಕೈವಲ್ಯವ ನಿನ್ನ
ನಡು ಮೋಕ್ಷಗಾಮಿ ಮೆಚ್ಚೆ ಮೂಢಗಹುದು ॥ ೨

ಪರಮ ಚಿನ್ಮಯ ಮೂರ್ತಿಯಂಬರದಂತೆ ನೀ ಸಿದ್ಧ
ಪುರುಷಕಾರನೇ ಮೂರು ಬೇಹವನಾಂತೆ
ಗುರುದೈವ ಶಾಸ್ತ್ರ ತೀರ್ಥಂಗಳ ಫಲ ನೀನೆ ನಿಜ
ಗುರುವೇ ಚಿದಂಬರ ಪುರುಷ ನೀನೊಬ್ಬನೇ ॥ ೩

<u>೨೭. ಸಾಕುಸಾಕುಸವಿ</u>

ಸಾಕು ಸಾಕು ಸವಿಗೆಟ್ಟಿತು ನನಗಿನ್ನು
ಸಾಕಾಯಿತೀ ಸಂಸಾರದ ಸುಖವು ॥ ಪಲ್ಲವಿ

ಸಂಜೀವನವನವ ಕಂಡಮೇಲೆ
ಗಂಜಿಗಾಸೆ ಮಾಡುವರೇನಣ್ಣ?
ರಂಜಿಸುವ ಪರಮಾತ್ಮನ ಕಂಡಮೇಲೀ
ಗಂಜಿನ ಮೈಸುಖದಾಸೆಯೇಕಣ್ಣ ॥ ೧

ಹಾಲು ಸಮುದ್ರವ ಕಂಡಮೇಲೆ ಪಶು
ಜಾಲವ ಕಾಯ್ವರೇನಣ್ಣ?
ಲಾಲಿಸುವ ನಿಜಾತ್ಮನ ಕಂಡಮೇಲೀ
ಜಾಳುವಿಷಯದಾಸೆಯೇಕಣ್ಣ ? ॥ ೨

ಪರುಷದ ಪರ್ವತನ ಕಂಡಮೇಲಾ ಹೊನ್ನ
ನೊರಜಿನಾಶೆ ಮಾಡುವರೇನಣ್ಣ ?
ಗುರುಚಿದಂಬರ ಪುರುಷನ ಕಂಡಮೇಲೀ
ಶರೀರದ ಹಂಗೇತಕಣ್ಣ? ॥ ೩

## ೧೮. ಸುವಿಚಾರವೊಂದಕೇಳು

ಸುವಿಚಾರವೊಂದ ಕೇಳು ಸುವಿಚಾ
ರವೊಂದ ಕೇಳೆಂದರಾತ್ಮನಿಗೆ ಭವವೊಂದೆ ದಿ
ವ್ಯವದು ಕೃತಯುಗಂ ಮೊದಲಾಗಿ
ಹವಣರಿದು ಕಲಿಕಾಲ ಮುಟ್ಟಿ ಸಂದಿತು ಸಂದವಿಪ ತಾನೆಂದೆಂದರೆ ॥ ಪಲ್ಲವಿ

ಆವೇಶ ಮೊದಲು ವೀರೇಶ ಕಡೆಯಾಗಿ ಜಂಬೂ
ದೇವ ಭದ್ರಬಾಹು ಸ್ವಾಮಿ ಕಡೆಯಾಗಿ ಅದರುಂಡಖಿಲ
ಕೈವೋದಾಢ್ಯರುಂ ತ್ರತಯೋಗ ಸಂಪನ್ನರುಂ ॥ ೧

ಆದರಹುದಮೃತಕ್ಕೆ ಹೋದರವರಿಂದ ಬಳ
ರೆದುಷ್ಟ ಕಲಿಯೊಳೆಂಬಹು ಶಾಸ್ತ್ರಿಗಳು ಹಲಬ
ರಾದರಹುದಾದರೆನವರಲ್ಲಿ ಪರಮಾತ್ಮ ವೇದಿಗಳು ಹಲಬರಿಲ್ಲ ॥ ೨

ಕುಂದಕುಂದಾಚಾರ್ಯ ಪೇಳ್ದನಾ ಮತದೊಳಗೆ
ಕಂಡಮೃತ ಚಂದ್ರಸೂರ್ಯರು ಟೀಕು ಮಾಡಿದಂ
ಕಂಡಕಂಡವರೆಲ್ಲ ನೋಡಿವರೆದು ಸೂರೆಯ ॥ ೩

ಉಂಡುಟ್ಟ ಕಾವ್ಯಕಥೆಯ ಸುಡುಗಾಯೊಳಡಗಿಸಿದ ವೃತಾಬ್ಧಿಯಂತೆ ಚಿ
ತ್ಪಿಂಡ ಜಗಧ್ಧರಿತನಾತ್ಮ ನೀ ಬಡ ಮೈ ಕ
ರಂಡಗೆಯೊಳೆದ್ದ ಪನ್ನಂಬು ತಿಳಿನೆಲವನೊಳು ಮೂರು ರತ್ನ ಕಾಣಾ ॥ ೪

ತಣ್ಣಿತ್ತು ಬೆಳೆದು ಸಿಹಿಕಂಪು ಪಾಲಿಂಗೆ ಕೆಂ
ಬಣ್ಣ ಪ್ರಭೆ ಉರಿ ಹವಿಗೆ ರವಿಗೊಪ್ಪುವವೊಲು ಮೊದಲು
ಬಣ್ಣಿಸಿದ ಗುಣವೆಂಟು ನಿನ್ನೊಳುಂಟೆಂದು ಕರ್ಮದೊಳು ಕವಿದಿರ್ದಪೈ ॥ ೫

ಕಣ್ಣಿಟ್ಟು ನೀರಿನ ನಿರ್ಮಲನೆಂದು ನೋಡುತಿರುವ
ಮಣ್ಣಬೆನಕಗೆ ಮಜ್ಜನವೇ ಮರಣವೆಂಬಂತೆ
ಮಣ್ಣು ಜರೆವುದು ಚಿದು ಚಿದಂಬರ ಪುರುಷ ಪದವಿಯಲಿ
ತಣ್ಣನಿರಬಹುದು ಕಾಣಾ ॥ ೬

## ೧೯. ಯೋಗಿಯೆಂಬೆನೋ

ಯೋಗಿಯೆಂಬೆನೋ ಆತ್ಮನೇ
ತ್ಯಾಗಿಯೆಂಬೆನು ಆತ್ಮಯೋಗವರಿತಡೆ ॥ ಪಲ್ಲವಿ

ಈರೈದು ಹೊಳೆಯ ಜಯಿಸಿ ಧರ್ಮ ಸದಾ ಸಂ
ಚಾರವ ತಡೆದವನಾ
ನೀರ ಸುಳಿದು ಹಂಸೆ ಹಾಲ ಕೊಂಬಂತೆ
ಶರೀರವ ತೊರೆದವನ ಆತ್ಮ
ಸಾರವ ಪಿಡಿದವನ ಧ್ಯಾನ ಪಾರಗನಾದವನ ॥ ೧

ಜ್ಞಾನವೆಂಬಕ್ಷಿಯಲ್ಲಾತ್ಮನ ನಿಜ
ವ ನೀಡಾಡಿಸಿ ಕಾಣ್ಬದರ್ವ
ತಾನೆ ತನ್ನೊಳಗಾತ್ಮಾಮೃತ
ವನೆ ನಿಚ್ಚವಾಸವ ಮಾಡುವ
ವನ ಒಳಗಾನಂದವೇ ಇ
ದನ ಹೊರಗೇನೆಂದರಿಯದವನ ॥ ೨

ಅಣು ಮಾತ್ರವಾದರೂ ವಿಷಯ ಕಷಾಯದ
ಕುಣಿಕೆಗೆ ಸಿಲುಕದನ
ಕ್ಷಣವು ಚಿದಂಬರ ಪುರುಷಧ್ಯಾನ ಲ
ಕ್ಷಣದಿಂದ ತೊಲಗದನ ಕರ್ಮ
ಗುಣವ ಸುಟ್ಟರುಹುವನ ಸಿದ್ಧ ಗಣದೆಣಿಕೆಗೆ ಬಂದವನ ॥ ೩

**<u>೩೦. ಆರೈದುಹೇಳಿರಣ್ಣಾತ್ಮ</u>**

ಆರೈದು ಹೇಳಿರಣ್ಣಾತ್ಮ ಯೋಗಿಯ ವ್ಯವ
ಹಾರದುದ್ಯೋಗದೋಲಗದ ಗುಣಗಳ ॥ ಪಲ್ಲವಿ

ನೀರ ಬೊಬ್ಬುಳಿಯಂತೆ ತೋರಿಯಡಗುವ
ಶರೀರವ ತಪಸಿಗೆ ಮಾರುಗೊಂಡು
ಓರಂತೆ ಕೆಡದ ಮುಕ್ತಿ ಕೊಂಬವನ ವ್ಯವ
ಹಾರವೆಂಬುದು ಮಹಾ ಲಾಭವೋ ನಷ್ಟವೋ ॥ ೧

ಆಧ್ಯಾತ್ಮದಲ್ಲಿ ಧ್ಯಾಣಿಸಿದಲಾತ್ಮ ಭೂಮಿಯ
ಆಧ್ಯಾತ್ಮವರಿತು ಸಾಧಿಸಿಗೆಯ್ದು
ವಿದ್ಯಮಯದ ಬೆಲೆಸಿರಿ ಬೆಳೆವವನ
ಉದ್ಯೋಗವದು ಸಫಲವೋ ನಿಃಫಲವೋ ॥ ೨

ನಾಲಿಗೆ ಕೈಕಾಲು ಬಳಲಲಿಂ ಒಮ್ಮೆಗೆ
ಸೂಲವಿಲ್ಲ ನುಡಿಗೆ ನೆಲವುಂಟು
ಮೇಲುಂಟು ಮುಕ್ತಿ ಚಿದಂಬರ ಪುರುಷನ
ಓಲೈಸುವುದು ವಿಶಿಷ್ಟವೋ ಕಷ್ಟವೋ ॥ ೩

## ೩೧. ಭಾವಿಸಿಹೇಳಿರಣ್ಣಾತ್ಮ

ಭಾವಿಸಿ ಹೇಳಿರಣ್ಣಾತ್ಮ ದೇಹದ
ಭಾವನೆಯುಳ್ಳವ ದೇವನೋ ಜೀವನೋ ॥ ಪಲ್ಲವಿ

ಮನದೊಡನೈದಿಂದ್ರಿಯಗಳನಡಗಿಸಿ
ತನು ಮೂರನೆರಡ ನುಡಿಯನಗಲಿ
ತನಗೆ ತಾ ತನ್ನಲಿ ಬ್ರಹ್ಮಾನಂದವ
ಅನುಭವಿಸುವವ ಯೋಗಿಯೋ ಅಯೋಗಿಯೋ ॥ ೧

ಬೋಧನೆ ನಾನೆಂದು ನಾನೆಂಬುದಳಿದು ಸ
ಮಾಧಿಯೊಳಗೆ ನಿಂತ ಸಮಯದಲ್ಲಿ
ವ್ಯಾಧಿ ಹಸಿವು ತೃಷೆ ಮೊದಲಾದ ಕವಿದ
ಬಾಧೆಗಳೆಲ್ಲವು ತನುವಿಗೋ ತನಗೋ ॥ ೨

ಪರಮ ಸಂದರೆಯ ತೊಲಗಿಸಿ ಕರ್ಮಗಳ ನಿ
ಜ್ಜಾರಿಸುತಾಕ್ಷಣಾತ್ಮನೊಳು
ಬೆರಸುವ ಬೆಳಗ ನಿಟ್ಟಿಸುತ ಚಿದಂಬರ
ಪುರುಷನಾದವ ಭವಹರನೋ ಹರನೋ ॥ ೩

## ೩೨. ನಿನ್ನವನೆಂದೆನ್ನಮನ್ನಿಸಾ

ನಿನ್ನವನೆಂದೆನ್ನ ಮನ್ನಿಸಾ ದೇವರ ದೇವ ॥ ಪಲ್ಲವಿ

ಸಂದ ಮಾಯಾ ಮೋಹವೆಂಬ ಕನಕದ ಕಾಯ ಮೆದ್ದು
ಮಂದವಾಗಿ ಭಾಷ್ಯಕೆ ಬಿದ್ದು ನೊಂದಿಸು ನಾ
ನೊಂದ ನೋವು ನಿನಗಲ್ಲದಾರಿಗೆ ಮುದ್ದು
ಬಂಧುವೆ ಸಲಹೋಗಿನ್ನು ನೀನಿಂದು ॥ ೧

ಮೆಲ್ದನರಿಯದೆ ಮುನ್ನ ನಾ ಮಾಡಿದ ಕರ್ಮದಿಂದ
ತಾಳಿದೆನು ಹಲವು ರೂಪ ಸಾರಿದೆ ಸಂಸಾರ
ದಲ್ಲಿ ನಾ ಮುನ್ನ ನೊಂದ ಸಂತಾಪ
ಪಾಲಿಸಾ ಪರಂಜ್ಯೋತಿಯ ಚಿದ್ರೂಪ ॥ ೨

ಆ ಭಾವದನ್ನ ಚಿಂತೆ ನನಗೊಂದು ತೋರಿದ ವರುಷ
ಸ್ಥಿರ ನಿಮ್ಮ ಚಿಂತೆ ಹರುಷ ಅರರೆ
ಮೂರು ಜನ್ಮಲೋಕಕೆ ನೀನೊಂದು
ಪರುಷ ಪಾಲಿಸೋ ಗುರುವೇ ಚಿದಂಬರ ಪುರುಷ ॥ ೩

## ೩೩. ದಾನಿಯಸಂಪತ್ತುಜಗದ

ದಾನಿಯ ಸಂಪತ್ತು ಜಗದ ಪೀಡೆಗೆ ಮಿತ್ತು ಸು
ಜ್ಞಾನಿಗೆ ನೀಡಿದಾ ತುತ್ತು ಸ್ವರ್ಗ ಸುಖದ ಬಿತ್ತು ॥ ಪಲ್ಲವಿ

ಬಡವನ ದಾನ ಶಶಿ ಮರ್ತ್ಯಕನ ಸಮಾಧಾನ
ಕಡು ಶುಚಿಯುಳ್ಳನ ವ್ರತದ ವಿಧಾನ
ದೃಢ ಭಕ್ತಿಯುಕ್ತಿ ದೀಕ್ಷೆವಡೆದನ ಸುಜ್ಞಾನ
ನುಡಿ ಜಾಣನ ಮೌನ ಮುಕ್ತಿಗೆ ಸೋಪಾನ ॥ ೧

ದೊರೆಯ ವಿವೇಕ ಯುಕ್ತಿ ಶಕ್ತಿ ಭಕ್ತಿ
ಸಿರಿ ಸೊಬಗುಳ್ಳನ ವಿಷಯ ವಿರಕ್ತಿ
ಗುರುವಿಗೆ ತೃಪ್ತಿಮಾಡಿ ತಾನುಂಬ ಸುಭಕ್ತಿ
ಪರಮಾತ್ಮಧ್ಯಾನ ವ್ಯಕ್ತಿನೇಮದಿಂದ ಮುಕ್ತಿ ॥ ೨

ಮೊದಲಧ್ಯಾತ್ಮದ ಪಾಠ ಶುಭವೆರ ಕೂಡ
ಇದು ಪರವಿದು ನನ್ನದೆಂದರಿವಭೇದ
ಇದಕೆ ಮೈ ಬೇರಾತ್ಮನೊಳು ನಲಿದಾದ
ಚಿದಂಬರ ಪುರುಷನನೋದ ಕರ್ಮದೋರಾ ॥ ೩

## ೩೪. ಸುಖವೆಂಬೆನನ್ನಸೊಬಗೆಂಬೆ

ಸುಖವೆಂಬೆ ನನ್ನ ಸೊಬಗೆಂಬ ನನ್ನ
ಅಖಿಳ ಸಂಪದವೆಂಬೆ ಗುರುವೇ ನಾ ನಿನ್ನ ॥ ಪಲ್ಲವಿ

ಮುಕ್ತಿಯೆಂಬೆ ಮುಕ್ತಿಯ ದಾರಿಯೆಂಬೆ
ಮುಕ್ತಿಯ ಸುಖವೆಂಬೆ ಶಕ್ತಿ
ಯುಕ್ತಿಯ ನೆಲೆಯೆಂಬೆ ತಾ ಬಳಿಕ ನನ್ನ
ಭಕ್ತಿಯಿಂದ ನಿನ್ನನೆ ನಾಥನೆಂಬೆ ॥ ೧

ಜ್ಞಾನನೆಂಬೆ ಜ್ಞಾನದರುಶನನೆಂಬೆ
ಜ್ಞಾನದರುಶನ ಚಾರಿತ್ರ ನೀನೆಂಬೆ
ಜ್ಞಾನದರುಶನ ಚಾರಿತ್ರ ತಪಂಗಳು ನೀನೆಂಬೆ
ನೀನೆ ನಾನೆಂಬೆ ಗುರುವೇ ॥ ೨

ಗುರುವೆಂಬೆ ದೇವನೆಂಬೆ ಸಿದ್ಧಾಂತದ
ತಿರುಳೆಂಬೆ ತೀರ್ಥವೆಂಬೆ ನಾ ನಿನ್ನ
ಪರಿಪರಿಯೊಳಗಿಂತು ಕಂಡು ಚಿದಂಬರ
ಪುರುಷನೆಂಬೆ ನಿನ್ನೊನೊಳು ನೆಲೆಗೊಂಬೆ ॥ ೩

**೩೫. ದೇಹಕೆಟ್ಟರೆನಾಕೆಟ್ಟೆ**

ದೇಹ ಕೆಟ್ಟರೆ ನಾ ಕೆಟ್ಟೆನೆಂದೆಂಬವ ಮೂಢ
ದೇಹ ಕೆಟ್ಟಡೆ ನಾ ಕೆಡೆನೆಂಬವ ಪ್ರೌಢ ॥ ಪಲ್ಲವಿ

ತಿತ್ತಿಯೊಳಗೆ ಗಾಳಿಯ ಕೂಡಿ ಬಾಧಿಸುವಂತೆ ಮೈಯ
ಸುತ್ತಿನೊಳೆದಾತ್ಮನ ನೋಯಿಸುವರೋರಂತೆ
ತಿತ್ತಿ ಹರಿದ ಮೇಲೆ ಗಾಳಿಕೈವಶವಾಗದಂತೆ ಮೈಯ
ಪತ್ತುಗೆಯಿಂದಗಲಿದ ಮೇಲೆ ಮತ್ತಾ ಚಿಂತೆ ॥ ೧

ತನಗಿಚ್ಚಾದರೆ ಭಸ್ಮವಹುದು ಮನೆಯೆಲ್ಲಾ
ಮನೆಯೊಳಗಿರ್ದ ತಾಪಕೆ ಶಕೆ ತಾಗಲಿಲ್ಲಾ
ಅನಲ ಖಡುಗ ವ್ಯಾಧಿ ಮೊದಲಾದ ಬಾಧೆಗಳೆಲ್ಲಾ
ತನ್ನ ತನುವಿಗಲ್ಲದೆ ಆತ್ಮನಿಗಾವ ಬಾಧೆಗಳಿಲ್ಲ ॥ ೨

ಇದನರಿದಂತಾತ್ಮ ಬಾಧೆಗಳಿಲ್ಲವೆಂದು
ಬೆದರದೆ ತನ್ನಾತ್ಮ ಭಾವನೆಯೊಳಗೆ ತಾನಿದ್ದು
ಕ್ಷುದೆ ತೃಷೆ ಮೊದಲಾದ ಬಾಧೆಗಳೆನಗಿಲ್ಲವೆಂದು
ಚಿದಂಬರ ಪುರುಷನ ಧ್ಯಾನಿಸುವನೊ ಗುಣಸಿಂಧು ॥ ೩

**೩೬. ಸಾವಾರಿಗೆಹುಟ್ಟಾರಿಗೆ**

ಸಾವಾರಿಗೆ ಹುಟ್ಟಾರಿಗೆ ಸಂಸಾರದ ಬದುಕ್ಯಾರಿಗೆ
ಜೀವಗಿಲ್ಲವಿವು ಮೈಯ ಸಂಬಂಧದಿಂದಲ್ಲದಣ್ಣ ॥ ಪಲ್ಲವಿ

ದೇಹವೆಂಬ ಚೋಹ ತೊಟ್ಟಿದರಿದು ಬದುಕೆಂಬರು
ದೇಹವ ಬಿಟ್ಟರೆ ಸಾವೆಂಬರು ಮತ್ತೊಂದು
ದೇಹವ ತೊಟ್ಟರೆ ಹುಟ್ಟೆಂಬರಾತ್ಮನೊಂದು ಮೈಯ
ಚೋಹವ ಹೊಗದೆ ನಿಂದರದು ಮುಕ್ತಿಯೆಂಬರಣ್ಣ ॥ ೧

ಮನೆಯಿಂದ ಮನೆಗೆ ಹೋಹಂತೆ ಜೀವಕಾಲ ತೊಟ್ಟು
ತನುವಿರದ ತನುವಿಗೆ ಹೋಗುತಿಹನು
ತನುವಗೆಡಿಸಿ ಮುಕ್ತಿಗೆ ಇದುವೆ ತಂತ್ರವ ತಾ
ನೆನೆಯದೆ ಮೈಮರೆದು ನೋವುತಿಹ ಕಾಣಿರಣ್ಣ ॥ ೨

ಮರದಗ್ನಿ ಹೊಸೆದರೆ ತಾಗಿರ್ದ ಹೆ
ಮ್ಮರನ ಸುಟ್ಟುರುಹುವಂತಾತ್ಮನ ಧ್ಯಾನಿಸಿ ತನ್ನಿಂದ
ಶರೀರ ಮೂರನು ಸುಟ್ಟು ಮುಕ್ತನಹುದು ಚಿದಂ
ಬರ ಪುರುಷನ ನೆಚ್ಚಿ ನಂಬಿ ನಿಚ್ಚ ಧ್ಯಾನಿಸಿರಣ್ಣ ॥ ೩

**೩೭. ಚಂದಮಾಚಂದಮಾ**

ಚಂದಮಾ ಚಂದಮಾ ಏನೆಂಬೆನಾತ್ಮನ ಪರಿಣಾವ
ಚಂದಮಾ ಚಂದಮಾ ಬ್ರಹ್ಮಾಂಡಯೋಗಿಯ ನಡೆದಂದವೆಲ್ಲಿಯೂ ॥ ಪಲ್ಲವಿ

ಕಣ್ಣ ಮುಚ್ಚೆಯು ಸೂಕ್ಷ್ಮಾರ್ಥ ಸೂ
ಕ್ಷ್ಮಾಣು ರೇಣಹುದು ಚಂದಮಾ
ಐದು ಬಣ್ಣವಳಿದು ಹೊಸ ಬಣ್ಣದೊಳೆ ಹೊಸೆದು ಚಂದಮಾ
ಬಣ್ಣಗಳಡಗಿಯು ಮಾಸದೆ ಇಹನದು ಚಂದಮಾ ಉಂಡ
ಉಣ್ಣದುಣ್ಣದನುಂಡು ತೃಪ್ತನಾಗಿ ಹಸಿದು ಚಂದಮಾ ॥ ೧

ಪೊಳೆಯಿಂದಾನೆಯ ಪಿಡಿದು ಕಟ್ಟುವನದು ಚಂದಮಾ ಹತ್ತು
ಹೊಳೆಯಿಂದೊಳಗನ್ನೈಯ್ಸಿಕೊಂಡಿಹನದು ಚಂದಮಾ
ಒಂದು ಪಕ್ಷವಿಲ್ಲದಂಬರನೊಳಾಡುತಿಹನದು ಚಂದಮಾ

ಮೋಕ್ಷ ಸಂಹರೆ ನಿರ್ಜರೆಯ ಪಿಡಿಹನದು ಚಂದಮಾ
ಯೋಗ ಲಕ್ಷಣವಿದು ಚಿದಂಬರ ಪುರುಷನೆ ಬಲ್ಲ ಚಂದಮಾ ॥ ೨

## ೩೮. ಏನ ಕಂಡು ಮೆಚ್ಚಿದೆ

ಏನ ಕಂಡು ಮೆಚ್ಚಿದೆ ನೀನೀ ಸಂಸಾರವ
ಅನುಭಾವ ನಿನಗಿದು ತರವೇ ನಿಜಾತ್ಮಾ ॥ ಪಲ್ಲವಿ

ನಿರ್ಮಲ ಭಾವದ ನಿನ್ನ ಚಿನ್ಮಯ ರೂಪೆತ್ತ ಮಾಂಸ
ಚರ್ಮಮಯವಾಗಿ ನಿಂದ ನಿಲವಿದೆತ್ತ
ಧರ್ಮವೇ ಸ್ವರೂಪವಾದ ನಿನ್ನ ನಿಜವೆತ್ತ ಕಷ್ಟ
ಕರ್ಮಗಳ ಶಯವಶಲಾಡುವುದೆತ್ತ ॥ ೧

ಮೂಲೋಕವ ಮುಸುಕುವ ನಿನ್ನ ಕರವೆತ್ತ ಸೆರೆ
ಸಾಲೆಯ ಸಂಕೋಚದಲಿ ಬಾಳುವುದೆತ್ತ
ಮೇಲೆ ನಿತ್ಯಾನಂದದ ಸಂಪದವೆತ್ತ ಪಂಚೇಂದ್ರಿಯ
ದೊಲನಡಿ ಬಾಳ್ವ ಬಡತನವಿದೆತ್ತ ॥ ೨

ಕಾಮಿಸಿದರ್ಥವ ಲೋಕಕೆರೆವ ನಿನ್ನ ಗುಣವೆತ್ತ
ಪಾಮರನಂತಾಸೆಯಲ್ಲಿ ಬಾಳುವುದೆತ್ತ
ಶ್ರೀಮಂದರಸ್ವಾಮಿಯ ಕುಹೂರಕನಿದೆತ್ತ ಬಹು
ನಾಮದಲ್ಲಿ ಹುಟ್ಟಿ ಹೊಂದುತಿಹುದಿದೆತ್ತ ॥ ೩

## ೩೯. ಒಲ್ಲೆನುನಿನ್ನಾತ್ಮಧ್ಯಾನವ

ಒಲ್ಲೆನು ನಿನ್ನಾತ್ಮ ಧ್ಯಾನವ ಸ್ವಾಮಿ ನಿಮ್ಮಲ್ಲಿಯೆ ಸುಳಿವೆನೆಂಬೆ
ಮೆಲ್ಲನೆ ಶ್ರೀಮಂದರಸ್ವಾಮಿ ತತ್ತವ ಸ್ತುತಿಸಿದೆ ಕೇಳಿರೋ ॥ ಪಲ್ಲವಿ

ಶಿಲೆಯಲ್ಲಿ ಕಂಚು ಬೆಳ್ಳಿ ರತ್ನದಲಿ ಇಂಥ ಚೇತನದಿ
ಸೆಲೆ ನನ್ನನರ್ಚಿಸಿ ಭವ್ಯರು ಸ್ವರ್ಗಾದಿ ಫಲವ ಪಡೆಯುತಿಲ್ಲವೆ
ಎಲೆ ಭವ್ಯ ನಿನ್ನ ಚೇತವಹಾತ್ಮನೊಳೆನ್ನ
ನೆಲೆಗೊಳಿಸಿದರೆಂದು ಫಲದೊಳದುತ್ಕೃಷ್ಟ
ಧ್ಯಾನಿಸೆಂದಾಚೆಯ ಕಳಿಸಿದನೇಕಾಂತದಿ ॥ ೧

ಸ್ವಾಮಿ ನಿನ್ನಂಗವಿದ ಶುಭ ನಾನಿನ್ನನತಿ ಮಹಿಮನೆಂದೆನೋ
ಆ ಮಾತು ಬೇಡವಯ್ಯೆಂದು ಶ್ರೀಮಂದರಸ್ವಾಮಿ ಮತ್ತಿಂತೆಂದನು
ಈ ಮಾತು ಬಿಡು ತನುವಿಂ ನೆರದೊಳಗೊಂಡು ಮೂರು ಮೈ ಸೋಂಕದೆ
ತಾ ಮನದೊಳಗಿಪ್ಪ ಶುದ್ಧಾತ್ಮದೊಳಗೆನ್ನ ನಮಿಸೆಂದರುಹಿದನು ॥ ೨

ನನ್ನರೆಷ್ಟು ಕಂಡರೆ ಭಿನ್ನಭಕ್ತಿ ನಿನ್ನೊಳೆನ್ನನೆ ಕಂಡರೆ
ಭಿನ್ನವಿಲ್ಲ ಭಕ್ತಿಯದರಿಂದ ಮುಕ್ತಿ ಇಂ
ದೆನ್ನಾಜ್ಞೆ ಮಗನೆಯೆಂದು ತನ್ನ ಹಸ್ತವ
ನನ್ನ ಮಂಡೆಯ ಮೇಲೆಯಿರಿಸಿ ನನ್ನಂತೆ
ನೀನಾಗೆಂದು ಚೆನ್ನಾಗಿ ಹರಸಿ ಮಂದರಸ್ವಾಮಿ
ತಾನೆನ್ನನುದ್ಧರಿಸಿದನು ॥ ೩

## ೪೦. ಮುಕ್ತಿಯೆಂಬುದುಲಿಹೊ

ಮುಕ್ತಿಯೆಂಬುದುಲಿಹೋ ಆತ್ಮ
ಶಕ್ತಿಯನರಿದು ಧ್ಯಾನಿಸಬಲ್ಲ ಸುಖಿಗೆ ॥ ಪಲ್ಲವಿ

ಮರದೊಳಿದ್ದ ಕಿಚ್ಚು ಮರನ ಸುಡವ ಶಕ್ತಿ ಇರುತದೆ
ಇರ್ದು ತಾ ಹೊಸೆಯದೆ ಸುಡದು ಹೆಮ್ಮರದಿಂದ ಬಿಡದು ॥ ೧

ತನು ಮೂರು ಸುಟ್ಟು ಮುಕ್ತಿಗೆ ಹೋಹ ಶಕ್ತಿ ಆ
ತ್ಮನೊಳಗುಂಟು ಧ್ಯಾನವಿಲ್ಲದ ಕಥನದಿಂದ ಪಾ
ಳ್ಮನೆಯಲ್ಲಿ ನಿನ್ನ ದುಃಖದಲಿಂತು ನೊಂದಾ ॥ ೨

ಧ್ಯಾನಿಸುವರಾರು ಕೆಲಬರುಂಟು ತದ್ಭಾದ ಹಾನಿಯನರಿತು
ಧ್ಯಾನಿಸಿದೊಡೆ ಹೊಲ್ಲ ಅಮೃತಕ್ಕೆ ಸಲ್ಲ ಮಂದರಸ್ವಾಮಿ ಬಲ್ಲ ॥ ೩

## ೪೧. ನೀನೆನೀನೆನೀನೆ

ನೀನೆ ನೀನೆ ನೀನೆ ಚಿನ್ಮಯ ರೂಪ
ನಾನಾ ಸಂಕಲ್ಪವೆನ್ನೆ ಮೆಚ್ಚೆನೋ ಭಯ ಲೋಪ ॥ ಪಲ್ಲವಿ

ಶಶಿರವಿಗಧಿಕ ಕೋಟಿ ಕಾಂತಿ ನಿನ
ಗೆಸೆವ ಚೆಲ್ವಿಕೆಯ ಸುಪಂತಿ

ಹೆಸರುಗೊಂಡರ ಕರ್ಮಶಾಂತಿ ಪೂ
ಜಿಸುವಗಿನ್ನೆತ್ತಳ ಭ್ರಾಂತಿ ॥ ೧

ತ್ರಿಜಗಕೆ ಸೂತ್ರಧಾರ ಪಾಪ
ರಜಕೆ ನೀನೆ ಮೃತಾವತಾರ
ಭಜಕರ ಸುಖದಾತರ ನಿನ್ನ
ನಿಜರೂಪ ಪುತ್ರಾಂಗರಹರಾ ॥ ೨

ಕ್ಷೇಮಕ್ಕೆ ನೀ ಜನ್ಮಭೂಮಿ ನಿನ್ನ
ಕಾಮಿಸಿದವರಿಗೆ ಕಾಮಿ
ಶ್ರೀಮಂದ್ರ ಜಿನಸ್ವಾಮಿಯೆಂಬ
ನಾಮದಿ ನಾ ಪರಿಣಾಮಿ ॥ ೩

**೪೨. ಮುಕ್ತಿಬೇಕಾದರೆ**

**ರಾಗ : ಕೇತಾಳಗೌಳ**

ಮುಕ್ತಿ ಬೇಕಾದರೆ ಪ್ರೀತಿ ಕೋಪವ ಸರ್ವ
ಶಕ್ತಿಯೊಳಗೆ ಬಿಸುಡು ಸಿದ್ಧ
ಭಕ್ತಿಯೊಂದನೆ ಹಿಡಿ ಮತ್ತೆ ಸರ್ವ ವಿ
ರಕ್ತನಾಗಮಲಾತ್ಮನೇ ॥ ಪಲ್ಲವಿ

ಒಮ್ಮೆ ಬಾಲಕರು ಬಾನಿನಲ್ಲಿದ್ದ ಚಂದ್ರನ ತಮ್ಮ
ಸಮ್ಮುಖಕೆ ಕಂಡು ಇದು ನಮ್ಮೂರ ಚಂದ್ರ
ತಮ್ಮೂರ ಚಂದ್ರಮನೆಂದು ಸಂಬಂಧ ಮಾಡುವಂತೆ
ನಾವೊಂದು ಹೊದ್ದರ ಪರಮ ನಿನ್ನನುಪಯ್ಯ
ಸಂಬಂಧದಲಿ ನರರು ಈತ ನಮ್ಮಾತ
ತಮ್ಮಾತನೆಂಬೆರಸಲಿ ನಿನ್ನ ನೆಮ್ಮಿಸಿ ಸುಮ್ಮನಿರು ॥ ೧

ಮಕ್ಕಳು ಬಿಸಿಲಲ್ಲಿ ನೊಂದು ಕುಂಬದಾ ನೀರೊ
ಳರ್ಕ್ಕನ ರೂಪು ಕಂಡು ಆಹಾ
ಸಿಕ್ಕದ ಹಾಗೆಯೆಂದು ಬೈದು ಹೊಯ್ದಡೆಯಲ್ಲ
ನೆಕ್ಕಾಡುವಂದದಲಿ ಬಕ್ಕ ಬಯಲ ಸ್ವರೂಪ ನಿನಗೆ ಕಡು
ಸೊಕ್ಕಿದವರು ಮುನಿದುದು ಹೊತ್ತ
ಡೊಕ್ಕೆಯ ಬೈವರು ಹಾಯಿವರದಕೆ ನಿನ್ನ ದಿಕ್ಕಿಂದ ಸಡಿಲದಿರು ॥ ೨

ಬಾರದ ಯೋನಿ ಮೆದ್ದದ ಭೂಮಿ ಕೊಳದಾ
ಹಾರವಿಲ್ಲೆಂಬದಿನೆಯ ಮಾಡು ಶ್ರೀ ಮಂ
ದರೇಶನ ಸಾರುವೆ ಬೇಗದಲಿ ‖ ೩

## ೪೩. ಎಲ್ಲರೂಭಾವಿಸಿನೋಡಿರೋ

ಎಲ್ಲರೂ ಭಾವಿಸಿ ನೋಡಿರೋ ಸಂಸಾರ ಸುಖ
ವೆಲ್ಲವೂ ಬಲು ಭ್ರಾಂತಿ ಕಾಣಿರೋ ನಂಬಿರೋ ‖ ಪಲ್ಲವಿ

ಬಾಲಕಗೆ ಹಣ್ಣಕೊಟ್ಟು ನಗಿಸಿ ಮೆಲ್ಲ
ವೇಳೆಯಲಿ ಹರಿದುಕೊಂಡು ಬಾಲಕನ
ಗೋಳಿಡಿಸಿವಂದ ಕಾಣಿರೋ ಈ ಸುಖ
ನಾಳೆ ಕಾಲನಿಂದ ದುಃಖ ಕಾಣಿರೋ ‖ ೧

ಇಂದ್ರ ಜಾಲದಲ್ಲಿ ತೋರಿದ ಮಾಮರದೊಳಾ
ಇಂದ್ರಿಯರ್ಥಿಯೊಬ್ಬ ಹಣ್ಣನು ಮೆದ್ದಂತೆ
ಇಂದ್ರನಿಷ್ಟ ಭೋಗವು ಹಾಗೆ ಸೊಬಗು ತಾನೆ
ಇಂದ್ರಚಾಪದಂತೆ ಕಾಣಿರೋ ‖ ೨

ಮುಕ್ತಿಯೊಂದೆ ಸುಖಕಾಣಿರೋ
ಮುತ್ತೆಲ್ಲಿಯೂ ಸುಖದರ್ಥಿಯೆಂಬುದಿಲ್ಲ ಕಾಣಿರೋ
ಮುಕ್ತಿಬೇಕು ತಪಸುಬೇಕು ಅಲ್ಲದೆ ಪೂಜೆ
ಭಕ್ತಿ ಬೇಕು ಶ್ರೀಮಂದರಸ್ವಾಮಿಯಲ್ಲಿ ‖ ೩

## ೪೪. ಮನದಂತೆಮಂಗಲ

ಮನದಂತೆ ಮಂಗಲ ನೆನೆದಂತೆ ಕಾರ್ಯವೆಂದು
ಮನುಜರಾಡುವ ಗಾದೆ ಭವ್ಯಗಾತ್ಮ ಬೋಧೆ ‖ ಪಲ್ಲವಿ

ಕೋಪ ಗರ್ವ ಲೋಭ ಮಾಯಾ ಮೋಹ ಹೊದ್ದಿದಾ ಮನ
ಪಾಪವನೆ ತಡೆವುದಾ ಮನವೆ ತಾ ತಿಳಿದು
ಸ್ತ್ರೀ ಪುರಾಣ ದಾನ ಪೂಜೆ ಜಪದರ್ಥಿಯ
ಲಿ ಪುಣ್ಯರೂಪಹುದು ಮನದಂತೆ ಮಂಗಲಾರ್ಥವಿದು ‖ ೧

ಕರ್ಮಬದ್ಧನೆಂದು ತಾನು ತನ್ನ ನಡೆ ಕಂಡಡೆ
ಕರ್ಮಬದ್ಧನಾಗಿ ನೋವನು ನಿಶ್ಚಯದಲಿ
ನಿರ್ಮಲ ಸ್ವರೂಪನೆಂದು ನೆನೆದು ಕಂಡಡೆ ತಾನು
ನಿರ್ಮಲನಹನು ನೆನೆದಂತೆ ಕಾರ್ಯದರ್ಥ ॥ ೨

ಜನವೆಂಬೆರಡರಿಂದೇನ ಮಾಡಿದರು
ಮನಸಿಜನ ಪರಿಣಾಮಯೊಂದೆ ಮುಖ್ಯ
ಪಾಪ ಪುಣ್ಯಕು ಮೋಕ್ಷ ಚರಿತಕೂ
ಶ್ರೀಮಂದರಸ್ವಾಮಿಯ ಮತದಲಿ ॥ ೩

**೪೫. ಮೂರುರತ್ನವೆನಾನಿಂದು**

ಮೂರು ರತ್ನವೆ ನಾನಿಂದು
ಮೂರು ದೇಹವ ಬೇರ್ಪಡಿಸಿ
ಮೂರು ಯೋಗವ ಬಲಿದಾತ್ಮನ ನೋಡದೆ
ಸೂರೆಯ ಮುಕ್ತಿ ತನತನಗೆ ॥ ಪಲ್ಲವಿ

ಶ್ರಾವಕನಾಗಲಿ ಯತಿಯಾಗಲಿ ಆತ್ಮ
ಭಾವನೆಯುಳ್ಳವನೆ ಧನ್ಯನು
ಭಾವಶುದ್ಧನೆ ಮುಕ್ತ ದ್ರವ್ಯ ತಾಪಸನಾಗಿ
ದಾವತಿ ಬಿಟ್ಟರೇನಾಯಿತು ॥ ೧

ನಿಶ್ಚಯದಲಿ ಸಂವರೆ ನಿರ್ಜರೆ ಮೋಕ್ಷ
ನಿಶ್ಚಲವಾಗಿಯಾತ್ಮನೊಳಿಹವು
ಆಶ್ಚರ್ಯವಿದಾ ಸಂಸ ಭವ್ಯಗೆ ಸಿಹಿ
ಕುಶ್ಚಿತ ಭವ್ಯಗೆ ಹಾ ಕಹಿ ॥ ೨

ಬಂದರೆ ಧ್ಯಾನಿಸಬೇಕು ಬಾರದಿರೆ ತಂತಾ
ನೆಂದಿದ ನಂಬಬೇಕು
ನಿಂದಿಸಿದರೆ ಭವಪಾಶ ಹಿಂಗದು ಶ್ರೀ
ಮಂದರಸ್ವಾಮಿಯ ಮತವಿದು ॥ ೩

## ೪೬. ಆತ್ಮನಕಲೆಯೆಂಬುದದು

ಆತ್ಮನ ಕಲೆಯೆಂಬುದದು ವಿಕ
ಳಾತ್ಮರಿಗಾರಿಗೂ ತಿಳಿಯದು
ಆತ್ಮವಿಮುಖರಿಗೆ ತೋರದು ನಿಲ್ಲದು
ಆತ್ಮರಾಮರ ಸೊಮ್ಮದು ॥ ಪಲ್ಲವಿ

ಬಯಲಾಗಿಹುದು ರೂಪಾಗಿಹುದುಂಟೆಲ್ಲ
ಸ್ವಯದಲಿ ಶುದ್ಧವದೊಮ್ಮೆ ಬದ್ಧಾ
ಅಯುತಂ ನಿಯುತಂ ನ್ನೆರತೆ ಕೀರ್ತಿಯೆಂಬ
ನಯ ಭೇದವನೊಳಕೊಂಡಿಹುದು ॥ ೧

ಹುಟ್ಟುವುದಳಿವುದು ಕೆಡವುದು ಪೊರೆವುದು
ತೊಟ್ಟನೇಕಾಂತ ಮತಿಗಳಿಗೆ
ಹುಟ್ಟುಗುರುಡರೆಂಟು ಮಂದಿಯೊಂದಾನೆಯ
ಮುಟ್ಟೆ ನಿಚ್ಚೈಸಿದ ಹಾಗಿಹುದು ॥ ೨

ಕೋಮಲ ಶಾದ್ವಾದವ ಬಿಟ್ಟು ಕುಡಿದರೆ
ಸೀಮೆಗೆತ್ತರ ತತ್ತರನಹುದು
ಶ್ರೀಮಂದರಸ್ವಾಮಿಯ ಶಾದ್ವಾದ
ಸೀಮೆಗೆ ತಾ ನೆರವಾಗಿಹುದು ॥ ೩

## ೪೭. ಜಲಗಾರನಜಲಗಾರನ

ಜಲಗಾರನ ಜಲಗಾರನ ಜಾಣತನವ ನೋಡಾ
ಸುಲಭದಿ ಚಿನ್ನವ ತೆಗೆದ ನೋಡಾ ॥ ಪಲ್ಲವಿ

ಡೋಣಿ ಗುದ್ದಲಿ ಹಾರೆ ಮಕ್ಕರಿಯಿಂದ
ಕ್ಷೋಣಿಯ ಮಣ್ಣ ಶೋಧಿಸಿ ಮತ್ತೆ
ಡೋಣಿ ಮುಂತಾದವ ಮಣ್ಣನು ಬಿಟ್ಟು
ಜಾಣ ಚಿನ್ನವನೊಂದನೆ ಪಿಡಿದಾ ॥ ೧

ಪುಸ್ತಕ ಕಂಠ ಸಂಘಜ ನೋಟ ನುಡಿಯಿಂದ
ವಸ್ತುಗಳಾರನು ಶೋಧಿಸಿ

ಪುಸ್ತಕ ಮೊದಲಾದ ಚಿಂತೆಯ ಬಿಟ್ಟಾತ್ಮ
ವಸ್ತುವೊಂದನು ಪಿಡಿದನು ಜಾಣ ॥ ೨

ಹಲವು ಶಾಸ್ತ್ರವನೋದಿ ಹಲವು ಚಿಂತಿಸಿದಾತ್ಮ
ಕಲೆಯನೊಂದನೆ ಧ್ಯಾನಿಸೆಂಬುದು
ಚೆಲುವ ಶ್ರೀಮಂದರಸ್ವಾಮಿ ಶಾಸನ ಈ
ಜಲಗಾರನದಕೆ ತಾ ದೃಷ್ಟಾಂತ ॥ ೩

**೪೮. ಎಂತು ಮರೆವೆ ಎಂತು**

ಎಂತು ಮರೆವೆ ಎಂತು ಮರೆವೆ ನಿಜ
ಶಾಂತ ಸದಾನಂದ ಪರಮಾತ್ಮನ ॥ ಪಲ್ಲವಿ

ಮೂರು ರನ್ನಮೂರ್ತಿಯ ನೋಡಿದೆ
ಮೂರು ಲೋಕದೊಳಗತಿ ದುರ್ಬಲ ನಾ
ಮೂರು ಜನ್ಮದಾ ಮುಕ್ತಗಲ್ಲದೆ ನಿಜ
ದೋರದು ಮಹಾತ್ಮದ ಪರಂಜ್ಯೋತಿಯಾ ॥ ೧

ಅಂತರಂಗದ ಕೋಣೆಯೊಳಗೆ ನೋಡಿ
ಚಿಂತಿಸಿದಾಗಲೆ ನಿಜದೋರುವನಾ
ಕಾಂತಿಮಯನ ಚಿನುಮಯನ ಬೇಡ
ಲಂತಿಂತೆನ್ನ ಬಾರದ ಸುಖನೀವನಾ ॥ ೨

ಅನುಭವಕಗಮ್ಯವಾದನ
ತನುಮಯ ಕಾಯ ವಚನಕೆ ಸಿಲುಕದನಾ
ತನುಮಾತ್ರನ ವಿಶ್ವರೂಪನ ಚೆಲ್ವ
ನನುಪಮ ರೂಪನ ಶ್ರೀಮಂದರೇಶನ ॥ ೩

**೪೯. ಬಂದರೆಮನೆಹೋದರೆ**

ಬಂದರೆ ಮನೆ ಹೋದರೆ ತನ್ನ ಹೊಲನಾಗಿ ಬಾಳುವಾತಗೆ ಆವ
ದಂದುಗವಿಲ್ಲೆಂಬಗಾದೆ ಬಲ್ಲವಗಾತ್ಮ ಸಿದ್ಧಿಕಂಡಾ ॥ ಪಲ್ಲವಿ

ತನುವೆಂಬುದಿ ಮನೆ ಜೀವ ನೀನೊಬ್ಬ ಸತ್ಪುರುಷ ಕಂಡಾ! ಕೆಟ್ಟ
ಮನದಿಂದಲತ್ತಿತ್ತ ಹರಿದರೆ ಶಂಕಿಸಬಹುದು ಕಂಡಾ

xxxxxxxxxxxxxxxx
ಜನವೆಲ್ಲ ಜಪಗೆ ತುತ್ತಾದರವರಿಗಂಜಬೇಡ ಕಂಡಾ ‖ ೧

ಹೋಗಬೇಕಾದರೆ ಹೊಲನೊಂದೆರಡು ನಿನಗುಂಟು ಕಂಡಾ
ಆಗಸದೊಳಗೊಂದು ಜಗದ ತುದಿಯಲೊಂದಿಹುದು ಕಂಡಾ
ಆ ಗಗನದೊಳಪರಾಜಿತೇಶ್ವರನೆಂದು ಭಜಿಸಿ ಕಂಡಾ! ಮೇಲೆ
ಭಾಗೆಯೊಳಗೆ ಶುದ್ಧ ಚಿನ್ಮಯ ರೂಪನೆಂದಿಹನು ಕಂಡಾ ‖ ೨

ಸೀಮ್ಗೆಯೆರಡು ಮನೆಯಲ್ಲದಿನ್ನೊಂದು ಬೇಡ ಕಂಡಾ! ನಿನ್ನ
ಸೀಮೆಯ ಬಿಟ್ಟನ್ಯ ಸೀಮೆಗೆ ಹೋದರೆ ನೋವು ಕಂಡಾ
ಶ್ರೀಮಂದರಸ್ವಾಮಿಯ ನೀನಿದರಿಂದ ಕಾಣು ಕಂಡಾ! ಲೋಕ
ಸ್ವಾಮಿಯ ಸಮುದ್ರಾದಿ ಪರಮೇಶನಾಜ್ಞೆಯೊಳಾಡು ಕಂಡಾ ‖ ೩

## ೫೦. ಹೋದರೆಹೋಗು

ಹೋದರೆ ಹೋಗು ಹೋಗದಿದ್ದರೆ ಇರು ನನಗದರಿಂದ ನಷ್ಟವಿಲ್ಲ
ಖೇದ ಹುಟ್ಟಿದ ಬಳಿಕ ಬೆರಸುವನೇ ತನುವೇ ‖ ಪಲ್ಲವಿ

ಜಡೆ ಸುಡಿಸಿರ್ದಡೆ ದಂಡೆ ಹೊತ್ತು ತೊಳತೊಳದು
ಪಿಡಿದಿರ್ದರು ಕಡೆಗೆನಳಿಯದುಳಿಯ
ಕೆಡರೊಡನಾಡಿದೊಬ್ಬ ಕೆಡುವನು ಕೆಟ್ಟೆನೆಂಬ
ನುಡಿಯಹನೆ ಸಾಕು ತನುವೇ ‖ ೧

ಏನು ಗುಣಕೊಲಿವೆನುಸುರುಸುರು ತಾಯಿತಂದೆಗಳ
ಹೀನ ದುಃಖದೊಳುಬ್ಬಿ ಬೆಳೆದರೆ ಸುಕುಳವೇ
ಭಾನು ಬಿಂಬಕೆ ಕವಿದ ಕಳಾಹೀನಯೆಂತೆನ್ನ
ಜ್ಞಾನ ಗುಣಗಗಳಾಡೈಸಿ ಮದವೆದ್ದೆಯೆಲ್ಲಾ ‖ ೨

ಎಂದಿದ್ದರೂ ಎರವಲ್ಲದೆ ನೀನಾರು ನಾನಾರು
ಬಂದು ಹೋದ ಒಡಲೆಷ್ಟು ನಿನ್ನಂತೆ ತನುವೇ
ಇಂದುತನಕ ಮೋಹಮೂರ್ಛೆಯೊಳಿರ್ದೆ ಸಕಲ ಶ್ರೀ
ಮಂದರಸ್ವಾಮಿಯ ಕೃಪೆಯ ನಾನಿಂದು ಕಂಡೆ ‖ ೩

**೫೧. ಆತ್ಮನೆಲೋಕವೆಲ್ಲವು**

ಆತ್ಮನೆ ಲೋಕವೆಲ್ಲವು ಸಲೆಯ ಸಂಭ್ರಮಕೆ ಮರುಳಾಗಿ
ವ್ಯಾಕುಲದೊಳೊತ್ತಿ ನೋವುದೆ
ಆತ್ಮನ ನೀ ಕಂಡ ಕಳೆಯು ಮತ್ತಿಲ್ಲ ತಡೆವರೆ ಸಾಕೇಳು
ಮುಕ್ತಿಗೆ ನಿಜಾತ್ಮ ॥ ಪಲ್ಲವಿ

ಆತ್ಮನೆ ಭರತೇಶ್ವರನು ಮುನ್ನ ತನ್ನದೆಂದಾಗಿ ಧರೆಯ
ಮತ್ತಾಳ್ದ ಸಗರೇಂದ್ರ ಆತ್ಮನೆ ಪರಮ ರಾಮನು
ಸುಜಾಮನು ರಾವಣನು ರಘುದೇವರ ಪಾಂಡು
ಪುತ್ರರಾಳಿದರು
ಆತ್ಮನೆ ನೆರೆದಾಳ್ದ ರಾಜವಿದರುಗಳೆಲ್ಲ ಹೋದರು
ದೊರೆಯೆಂಬಗ್ಗಳಿಕೆ ಹೋಯಿತಲ್ಲ
ಅತ್ತನೆ ಅರರೆ ಮತಿಗಳು ನನಗೆ ತನಗೆಂದವಳೆ
ನಿಂದೆರೆದಾಡುತಿರ್ದ ಲೋಕವೆಲ್ಲ ॥ ೧

ನೂರ ಗಳಿಸಿದೊಡೆ ಸಾವಿರದಾಸೆ ಸಾ
ವಿರವು ತೊರೆದಡೆ ಲಕ್ಷಕೋಟಿಗಳು ಆತ್ಮನೆ
ಮೆರೆವುದು ಧನದಾಸೆ ಅಗ್ನಿಂಧನದಷ್ಟ
ಪೊರೆದಷ್ಟಕೆ ಹೆಚ್ಚುವಂತೆ ಆತನೆ
ನೂರು ವರುಷದ ಮೇಲೆ ನರರಿಗಿರವಿಲ್ಲ ತನು
ಬೇರಹುದು ಜೀವ ಬೇರಹುದು ಆತ್ಮನೆ
ಮೂರು ದಿನದ ಬದುಕಿಗಾರು ತೋಡಿಟ್ಟವಳದೂಡಿ
ಗೊಳೆಗಾದಗದಿರು ಕಂಡಾ ॥ ೨

ಇಂದಾದಯೋ ನಿನ್ನೆ ಮೊನ್ನೆಯಾದಯೋ ನಿನಗೆ
ಹಿಂದಾದ ಯುಗಕೆ ಗಡಿಯಿಲ್ಲ ಆತ್ಮನೆ
ಅಂದಿಂದ ಹೊತ್ತ ಮೈ ಸತಿಸುತರು ಸಿರಿ ಕನಸಿ
ನಂದದೊಳು ಮಾಯವಾದುದರೆಯೂ ಆತ್ಮನೆ
ಮುಂದೆ ಭಕ್ತಿ ಪರಬ್ರಹ್ಮ ಪಾಹೃತಶಾಸ್ತ್ರ
ದಂದದೊಳು ತಪಸು ಮಾಡೇಳು ಆತ್ಮನೆ
ಮುಂದೆ ಕರ್ಮಗಳಳಿದು ಕೈವಲ್ಯವಹುದು ಶ್ರೀ
ಮಂದರಸ್ವಾಮಿ ಮೆಚ್ಚುವನು ॥ ೩

**೫೧. ಹಲಹಲವಚಿಂತಿಸದಿರು**

ಹಲ ಹಲವ ಚಿಂತಿಸದಿರು ಅತ್ತ
ಕಲೆಯ ನೋಂಪಿಯ ಪಿಡಿದಿರು ಯೋಗಿ ॥ ಪಲ್ಲವಿ

ಉಂಗುಷ್ಠದಿಂದುತ್ತಮಾಂಗ ಪರಿಯಂತ ಸ
ರ್ವಾಂಗ ಪರಿಪೂರ್ಣವಾಗಿ
ಅಂಗದೊಳಗಿಹನಾತ್ಮ ಸಂಗವಿಲ್ಲಾತ್ಮ ನಿ
ರಂಗ ಸುಜ್ಞಾನಾಂಗನು ಹೊದ್ದೆ
ದಂಗ ಸೋಂಕಿಯೂ ಸೋಂಕನು ತಾಳೆ
ಸಂಗದಾಕಾರ ಕಾಣಾ ಯೋಗಿ ॥ ೧

ನೀರಿಂದ ನೆನೆಯ ಕಿಚ್ಚಿಂದ ಬೇಯನು ಖಡ್ಗ
ಧಾರಿಗಳವಡುವನಲ್ಲ
ನೀರು ಕಿಚ್ಚು ಯುದ್ಧದಾ ಬಾಧೆ ಮೈಗಲ್ಲದೆ
ಧೀರಕೆದಾತ್ಮನಿಗಲ್ಲ ದೇಹ
ಧಾರುಣಿಯ ಹಾಗೆ ನಿಜಾತ್ಮ ಕಾಣಾ ಯೋಗಿ ॥ ೨

ಇಂಧನದೊಳಿರುದಗ್ನಿ ಹೊಸೆದೊಡೆದು ತಾನಿರ್ದ
ಇಂಧನವ ಸುಡುವದರಿಯ
ನಿಂದು ದೇಹವ ಸುಟ್ಟು ಮುಕ್ತಿಗೈವನಾತ್ಮ
ನಿಂದೊಳಗೆ ಧ್ಯಾನಿಸಿದೊಡೆ ಧ್ಯಾನ
ಮಂದಿರದೊಳಿರುತಿಹನು ಶ್ರೀ
ಮಂದರ ಸ್ವಾಮಿಯಾಣೆ ಯೋಗಿ ॥ ೩

**೫೨. ಸುಖಿಸಲಿಲ್ಲವೆನಿಚ್ಚ**

ಸುಖಿಸಲಿಲ್ಲವೆ ನಿಚ್ಚ ಸುಖಿಸಲಿಲ್ಲವೆ
ಅಖಿಳ ಚಿಂತೆಯ ನೀಗಿ ಧ್ಯಾನ
ಮುಖದಲೊಸರುವಾತ್ಮ ಸುಖವ ॥ ಪಲ್ಲವಿ

ಕಂಗಳು ಮನವ ಕಟ್ಟಿಯಂತ
ರಂಗದೊಳಗೆ ನೋಡಿದರೆ
ಉಂಗುಷ್ಠದಿಂದ ನೆತ್ತಿ ಮುಟ್ಟಿ ಸ
ರ್ವಾಂಗ ತುಂಬಿ ಹೊಳೆವ ॥ ೧

ಸುಖಮ್ಯತಾದ ಭವ್ಯರಿಗೆ
ಯಗಮ್ಯವಾದ ದಿವ್ಯ
ಸುಖವ ತಾನೆ ತನ್ನೊಳು ಸು
ವ್ಯಕ್ತವಾಗಿ ನಿಂತು ನಿಚ್ಚ ॥ ೨

ಇಂದು ಬ್ರಹ್ಮಾನಂದದ ಸವಿಯ ತೋರಿ
ಮುಂದೆ ಮುಕ್ತಿ ಸುಖವ ತೋರುವ
ಸಂದಾತ್ಮ ಸುಖವ ಕರುಣದಿಂದ ಶ್ರೀ
ಮಂದರಸ್ವಾಮಿಯ ಮೇಲೆ ॥ ೩

**೫೪. ಎಂದಿಗೆಹಿಂಗುವುದೊ**

ಎಂದಿಗೆ ಹಿಂಗುವುದೊ ಸಂಸಾರ ಪಾಶ ಶ್ರೀ
ಮಂದರ ಜಿನೇಶ ಕಾಯೋ ಪಾಪನಾಶ ॥ ಪಲ್ಲವಿ

ದಾಹವೆಂಬ ಸೆರೆಮನೆಗೆನ್ನ ಕೂಡಿ ಮಾಯಾ
ಮೋಹವೆಂಬ ಸೊಕ್ಕಸವಿಗೆ ಮಾಡಿಯೂಡಿ
ರೂಹುಗೆದ್ದ ಕಾಮನಂಬಿಗೀಡು ಮಾಡಿ ಎನ್ನ
ಮೋಹರಿಸಿ ಕಾಡುತಿದೆ ಕಾಯೋ ನೋಡಿ ॥ ೧

ಉಂಡು ಉಂಡು ಉದರಾಗ್ನಿ ಕೆಟ್ಟುದಿಲ್ಲ ಕೇಡ
ಕಂಡುಕಂಡು ಹೇಯ ಮನ ನಟ್ಟಡಿಲ್ಲ
ಕೊಂಡುದನೆ ಕೊಂಬುದನೆ ಬೇರೊಂದಿಲ್ಲ ಕರ್ಮ
ದಂಡಣೆ ನೀನೆ ಸುಧಾಯ ಜಿನಮಲ್ಲಾ ॥ ೨

ಈ ಮೈ ಬೇರೆ ನಾ ಬೇರೆ ನೋಡೆನ್ನ ಭಿನ್ನ ನಿ
ನ್ನ ಮೆಚ್ಚಿದ ನಡೆ ಕಲ್ಲೋಳಿಹ ಚೆನ್ನ
ಹೇಮ ಸಿದ್ಧನೆಂದು ಬಲ್ಮೆನ್ನೈ ನಿನ್ನ ಕಾಯೋ
ಶ್ರೀಮಂದರಸ್ವಾಮಿ ತಳುಮಾಡದೆನ್ನ ॥ ೩

**೫೫. ಕ್ಷೇಮವೇಮತ್ತೂಕ್ಷೇಮವೇ**

ಕ್ಷೇಮವೇ ಮತ್ತೂ ಕ್ಷೇಮವೇ ನಿಮ್ಮ
ಸೀಮೆಗೆ ನೀ ಹೋದಂದಿಂದ ಪರಿ
ಣಾಮವೇ ಹೇಳು ನನ್ನಾಣೆ ಹಂಸಾ ॥ ಪಲ್ಲವಿ

ಹೋಗದ ಠಾವಿಲ್ಲವಿಲ್ಲದತ್ತಿತ್ತ ಮುನ್ನ
ಹಗಲಿರುಳೆನ್ನದೆ ಸುತ್ತುತ್ತಿದ್ದೆ
ಅಗೆದು ನೆಟ್ಟಂತೆ ನಿಂದೆ ನಿನ್ನಲಿ ಮೂರು
ಜಗದ ವಿಶಾಲವ ಕಂಡೆ ಹಂಸಾ ॥ ೧

ಬಾಯಿಗೆ ಬಂದುದ ನುಡಿದು ಕಣ್ಣಿಗೆ ಮನ
ಮೈಯ ಮೆಚ್ಚಿದಾಟವನಾಡುತಿದ್ದು
ಸುಯಿಗಳ ಬಾಧೆ ಸುಮ್ಮನಿರ್ದಪೆ ನೀನು
ಕೈವಲ್ಯನಾದೆ ಹಂಸಾ ॥ ೨

ದಂದುಗದೊಳಗಾಗಿ ದಾವುತಿಬಟ್ಟೆ
ಕುಂದುತ ಹೆಚ್ಚುತಲ್ಲದೆ ನೀ ಮುನ್ನ
ಮಂದರರದಂತೆ ಮಹಿಮೆಯ ಪಡೆದೆ ಶ್ರೀ
ಮಂದರಸ್ವಾಮಿಯೊಲಿದನೆ ಹಂಸಾ ॥ ೩

**೫೬. ಪಾಡಿರೆಲ್ಲರೂದೇವನ**

ಪಾಡಿರೆಲ್ಲರೂ ದೇವನ ನೋಡಿರೆಲ್ಲರೂ ಕೊಂ
ಡಾಡಿರೆಲ್ಲರೂ ನಾಡ ಮಾತುಬೇಡ ಭಕ್ತಿ
ಗೂಡಿ ಸಮುದ್ರಾಧೀಶ್ವರನಾ ॥ ಪಲ್ಲವಿ

ಹೊಳೆಯ ಲವಣವಾರ್ಧಿಯ ನಡುವೆ
ಅಳತೆಯಾದುದ ಮವತೆನ್ನ x x x x x ನಿರ
ಯೊಳೆ ನಿರಂತ ಮಾಳ್ಪ ದೇವನಾಂ ॥ ೧

ಏನೆಂಬೆನಯ್ಯಾ ಹಲವು
ಮೀನ ಮೊಸಳೆ ಸರ್ಪಂಗಳು
ಜ್ಞಾನಿಗಳಂದದಲಿ ಬಲಗೊಂಬುವನಾ ॥ ೨

ಹಲವು ಹಡಗು ಹೋಗುವಲ್ಲಿ
ಬಲಕಿಕ್ಕಿದರೆ ಲಾಭ ಎಡಕೆ
ತೊಲಗಿದರೆ ನಷ್ಟ ಕಂಡ
ಬಲಗೊಳೆ ಬಲ್ಲವರು ‖ ೩

ಅಂದೊಬ್ಬ ಸುರಿತಾಣ ಭಕ್ತಿ
ಯಿಂದ ಭುಜವನಳವುತಿರಲು
ತಂದ ಪಟ್ಟು ಸೂತ್ರಕೆ ಮೂರೊಂ
ದೊಂದುಬ್ಬಿ ಬೆಳೆವ ದೇವನಾ ‖ ೪

ದ್ವಾರಾವತಿಯೊಳೊಂದು ಬಲ
ನಾರಾಯಣರ ಪಾರವನ ಶೃಂ
ಗಾರ ಕವೀಂದ್ರನ ಸ್ವಾಮಿ
ಬಾರಾ ಸಮುದ್ರಾಧೀಶ್ವರನಾ ‖ ೫

**<u>೫೭. ಕರುಣದೋರುಕರುಣದೋರು</u>**

ಕರುಣದೋರು ಕರುಣದೋರು
ದುರಿತ ವಶವಾಗಿ ನೊಂದೆ ಪುರುಜಿನ ಚಂದ್ರಾ ‖ ಪಲ್ಲವಿ

ಹಸಿಯ ಚರ್ಮದೊಂದು ಮಯ್ಯ ತಳೆದು ತಾಯ
ಬಸಿರ ಹೊಕ್ಕು ಪೆಸರಲ್ಲಿ ಬೆಳೆದು
ಮುಸುಕಿ ಮತ್ತೆ ಭೂಮಿಗೊಯ್ಯನಿಳಿದು
ಕಿಸುಕೊಳದೊಳೆಂತು ಬಾಳ್ವೆನಯ್ಯ ನೀನೆ ತಿಳಿದು ‖ ೧

ನೋಡಿ ನೋಡಿಂತುಟಾ ಕಷ್ಟವಲ್ಲದೆ ಪುಟ್ಟಿ
ಯಾಡಬೇಕು ಹೀಗೆ ಲೆಕ್ಕವಿಲ್ಲದೆ
ಕೊಡಬೇಕು ಕೂಡಿ ಹೊದ್ದಿನಿಲ್ಲದೆ ನಿನ್ನ
ಬೇಡಿಕೊಂಬೆನಯ್ಯ ಜಿನ್ನಯ್ಯ ತಳುವಿಲ್ಲದೆ ‖ ೨

ಶಾಂತಿಯಂತೆ ಮಾಡುವ ಕರ್ಮದ ಪಡೆಯ ಸಾ
ಕಿನ್ನು ದಂಡಿಸಯ್ಯ ಜವನಗಡಿಯಾ
ಕಿನ್ನರಿ ಸಾವಂತರಾಯನೊಡೆಯ ಸುಪ್ರ
ಸನ್ನ ಸಮುದ್ರಾಧಿಪ ಬಿಡೆ ನಾ ನಿಮ್ಮಡಿಯ ‖ ೩

**೫೮. ಸಾರಿದೆನಿಮ್ಮಡಿಗಳನು**

ಸಾರಿದೆ ನಿಮ್ಮಡಿಗಳನು ದೇವಾ ॥ ಪಲ್ಲವಿ

ನಾನಾ ಗರ್ಭದಿ ಪುಟ್ಟಿ ಹೊಂದಿನೊಂದ ನೂಕುತ
ನಾನೊಲ್ಲೆನೀ ಸಂಸಾರ ಸಾಕು
ಏನಯ್ಯ ಏನಯ್ಯ ಸ್ವಾಮಿ ನಿನಗೆನ್ನ ಬಿನ್ನಹ ಪರಾಕು
ನೀನೆನ್ನ ಸಾಕೆಂದು ಮನ್ನಿಸಬೇಕು ॥ ೧

ಕರುಣಾಳುವೆಂದೆಂಬ ಪೆಸರುಳ್ಳರೆನ್ನ
ಮರುಹ ಅರುಹನಾದೊಡೆನ್ನ ನಿನ್ನದು
ದುರಿತ ವೈರಿಯೆಂಬ ಬಿರಿದು ಕರ್ಮವ ಸೀಳಿ
ಬಿರಿದೊಂದೆಸೆ ನೀನೊಂದೆಸೆಯೊಪ್ಪುದು ॥ ೨

ಸೇವಕತನ ಸಲುಗೆ ಎಲ್ಲೆನಭಯ ಬಂತು
ದೇವಾ ನಿಮ್ಮನೊತ್ತುವ ಮಾತಾ
ಆವಾಗ ಸಮುದ್ರಾಧಿಪ ತ್ರಾಹಿಯೆಂಬ
ಈ ವಾಕ್ಯ ಸಂಸಾರ ವಾರ್ಧಿಗೆಸಿತು ॥ ೩

**೫೯. ಚಿತ್ರವಕಂಡುದಿಲ್ಲವೆ**

ಚಿತ್ರವ ಕಂಡುದಿಲ್ಲವೆ ನೀವು ಹೊಸ
ಚಿತ್ರವ ಕಂಡುದಿಲ್ಲವೇ ಪ
ಮಿತ್ರ ಪುರುಷನೊಬ್ಬನಾಟದ ವಿ
ಚಿತ್ರವ ಕಂಡುದಿಲ್ಲವೇ ॥ ಪಲ್ಲವಿ

ಕಿರಿದಿನೊಳಣು ಮಾತ್ರದ ರೂಪಾದ
ನೆರೆದು ಸಾಸಿರಗಾವುದ
ನೆರೆ ಮೈದೋರುವ ನಡುವಿನ ನಾನಾ
ತೆರೆದಲಡಕದಲಾಡುವ ॥ ೧

ಹಿಡಿದ ಮೈ ತುಂಬಿಹನು ಆ ಮೈಗಿಷ್ಟು
ಕಡಿಮೆಯಹನು ತುದಿಗೆ
ಪೊಡವಿ ಮೂರನು ತುಂಬುವನು ಕಡೆಗೆ
ಪೊಡವಿಯ ಕಡೆಗಂಡು ನಿಂದಿಹನು ॥ ೨

ಭವಪಕ್ಷ ಮೋಕ್ಷಪಕ್ಷ ಗುಣವಸ್ತು
ಧ್ರುವಲಯ ಜನ್ಮಪಕ್ಷ
ಇವರವರಿಗೆ ತಿಳಿಯದು ನಮ್ಮ ಕಡಲಾದಿ
ಶಿವನ ಸ್ಯಾದ್ವಾದ ಚಿತ್ರವಿದು ॥ ೩

**೬೦. ಇಲ್ಲಿಯೇನಿನಗೆನಿತ್ಯಪದ**

ಇಲ್ಲಿಯೇ ನಿನಗೆ ನಿತ್ಯಪದವಾದುದು ಪರ
ಗಲ್ಲದರೆ ಧರ್ಮವನೆ ಮರೆದೆ ಹೇಯ ಮನವೇ ॥ ಪಲ್ಲವಿ

ಈ ನರಲೋಕದ ಬಾಳುವಯ್ಯ ಹೆಂಗಳಾಟವೆ ಮ
ಹಾನಂದವಾಗಿ ಪರಿಣಮಿಸಿತಲ್ಲದೆ
ದಾನ ಪೂಜೆಗಳ ಫಲದಿಂದ ದೊರೆಕೊಂಬ ರಂಭೆ
ಮೇನಕೆಯರಾಟ ಕಡು ಮೋಸವಾಯಿತಲ್ಲದೆ ॥ ೧

ತಾಳೆದೊಂದು ಧರ್ಮದ ಶರೀರವಂ ನೇತಾಂಬ್ರದ ಕ
ಪಾಲವೆಂದು ಕಡುಬೇಡೊ ಚಿತ್ತೈವಿಡಿದೆ
ಯಲ್ಲದೆ ಶೀಲ ವೃತಗಳಿಗೆ ಮೈಯೊಡ್ಡಿದ
ಫಲದಿ ಬಹು ನಾಳೆನ ದಿವ್ಯ ದೇಹವಾಯಿತಲ್ಲದೆ ॥ ೨

ತಾದೊಂದತ್ತತ್ತ ಮೊದಲಾಗಿ ನೀನಾಡಿದಕ್ಕೆ
ಹೋದರಾವು ಹೊತ್ತ ಮೈಗೆ ಕಡೆ ಮೊದಲುಂಟೆ
ಓದಿ ಮರುಳಾದರೆಂಬ ಗಾದೆಗೆ ಈಡಾಗದೆ ಸ
ಮುದ್ರಾಧೀಶನೆ ಶರಣೆಂದು ಸಾಧಿಸು ಮುಕ್ತಿಯನು ॥ ೩

**೬೧. ತನ್ನನರಿದಮೇಲೆಜಗವೆಲ್ಲ**

ತನ್ನನರಿದ ಮೇಲೆ ಜಗವೆಲ್ಲ
ತಾನೆ ಮತ್ತಿನ್ನೊಂದು ನೋಡಬೇಕೆಂಬಾಸೆಯುಂಟೆ ॥ ಪಲ್ಲವಿ

ಮೂಡಗಿರಿಯೊಳೆದ್ದು ಕ್ಷಣದಲ್ಲಿ ದಶದಿಕ್ಕು
ಗೂಡಿ ಲೋಕವ ಬೇಧಿಸುವ ಸೂರ್ಯನಂತೆ
ಕೂಡಿ ದೇಹವ ಜೋರು ಮಾಡಿ ತನ್ನೊಳೆಸೆದು
ಒಡನೆ ಸಕಲ ವಸ್ತುವನೊಂದಬೇಕು ॥ ೧

ಮೇರುವನೇರಿದವಗೆ ಮಿಕ್ಕ ಗಿರಿಗಳ
ತೋರಿದೊಡೆ ಚುಳುಕಾಗಿ ಕಾಂಬಂತೆ
ವೈರಾಗ್ಯಧಾತ್ರ ಭಾವನೆಯೊಳಗಿರ್ದವಗೆ ಸಂ
ಸಾರಿಗಳೊಡೆ ಸದ್ಭಾವವಾಗಿರದೇ ॥ ೧

ತೊಟ್ಟ ಚೋಹವನೊಂದನಿಳುಹಿ ಕಲ್ಮಷವನು
ಸುಟ್ಟು ಬೂದಿ ಮಾಡಬೇಕೆಂಬಾ
ದೃಷ್ಟಿಯಲ್ಲದೆ ಬೇರೆ ಮನದಿಚ್ಛೆಯುಂಟೆ ಕ
ಣ್ಣೆಟ್ಟು ಸಮುದ್ರಾಧೀಶನ ಕಂಡವಗೆ ॥ ೨

**<u>೬೧. ಬಣ್ಣಿಸಬಲ್ಲವರೆ</u>**

ಬಣ್ಣಿಸಬಲ್ಲವರೆ ಲೋಕದಲ್ಲಿ ತಮ್ಮ
ಕಣ್ಣಿಗೆ ಕಾಣ್ಬದುದಿ ಆವಾಸರೆಯೋ ॥ ಪಲ್ಲವಿ

ದಿನದಿನ ಬಿಡದೂಟ ಪಾಯಸಂ ಓಗರಂ
ಮನೆದೊರಕಿದೊಡರ್ತಿಯಾಗುತಲಿದ್ದು
ನೆನೆದೊಮ್ಮೆ ದೊರಕದೊಡುಬ್ಬೆಯ ಪೊಡುವ
ಮನುಜರ ಸಿರಿಯಿದು ಭೋಗರೋಗವ ॥ ೧

ಬಿಸಿಲಾಗಲಿ ಬೆಳದಿಂಗಳಾಗಲಿ ಸವಿ
ರಸವಾಗಲಿ ವಿರಸವಾಗಲಿ
ನಸುನೋಟಗಾಣದೆ ಪರಿಣಾ
ಮಿಸುತಿಹರು ಜಗದ ಯೋಗವೋ ರೋಗವೋ ॥ ೧

ಮರಣವಾಹರ ಕಂಡು ಮಹಿಜಗಳ್ಬುದ ಕಂಡು
ವರುಷಗಳೆಣಿಸಿ ಹೋಹುದನೆ ಕಂಡು
ಪರಮ ಸಮುದ್ರಾಧೀಶನ ಸಾರಿದ
ನರರ ಬಲ್ಲವಿಕೆ ತಾನರಿವೋ ಮರೆವೋ ॥ ೨

**<u>೬೨. ಸಾಮಾನ್ಯನಲ್ಲಲ್ಲಕಾಣಿರೋ</u>**

ಸಾಮಾನ್ಯನಲ್ಲಲ್ಲ ಕಾಣಿರೋ ಆತ್ಮಯೋಗಿ
ಭೂಮಿಯೊಳು ದೇವ ಕಾಣಿರೋ ॥ ಪಲ್ಲವಿ

ಪುಣ್ಯ ಕಾಲಕಸ ಕಾಣಿರೋ ಅವಗೆ ಪಾಪಾ
ರಣ್ಯದೊಳೆ ಕೋಟಿ ಕಾಣಿರೋ
ಗಣ್ಯವವಗಿಲ್ಲ ಕಾಣಿರೋ ಸುಜ್ಞಾನವ ಲಾ
ವಣ್ಯವಾದ ಶಿವಕಾಣಿರೋ ॥ ೧

ವಿಷ ತಾನು ಪಥ್ಯ ಕಾಣಿರೋ ಅವಗೆ
ಬ್ರಹ್ಮರುಚಿ ಮಾತು ಸಿದ್ಧಿ ಕಾಣಿರೋ
ತುಷಮಾಸದಷ್ಟ ಕಾಣಿರೋ ಭವಗೆ
ವಿಷಯಾತ್ಮ ಭೇದ ಕಾಣಿರೋ ॥ ೨

ಸುರಲೋಕ ತೃಣಕಾಣಿರೋ ಅವಗೆ ಮುಕ್ತಿ
ಕರತಳವಶ ಕಾಣಿರೋ
ಎರಡೊಂದೆ ಭವ ಕಾಣಿರೋ ಕಡಲಾಧಿಪ
ಪರಮೇಶ ತಾನೇ ಕಾಣಿರೋ ॥ ೩

## ೬೪. ನಿಮ್ಮನಾಮನಮ್ಮಪರಿಣಾಮ

ನಿಮ್ಮ ನಾಮ ನಮ್ಮ ಪರಿಣಾಮ
ನಮ್ಮ ಪರಿಣಾಮ ಸಮುದ್ರಾಧೀಶ ॥ ಪಲ್ಲವಿ

ಶಿಸುವಿನಕ್ಕರಿಗೆ ಸಿಹಿಯ ವಸ್ತುವಿನ ನಾಮ
ವಿಷ ಮುಟ್ಟಿದಾತಗೆ ಗರುಡನ ನಾಮ ॥ ೧

ಬಡವನಿಗೊಬ್ಬ ಬಲ್ಲಿದನಾದನ ನಾಮ
ಎಡರು ಬಂತಾಗೆ ಗುರುವಿನ ನಾಮ ॥ ೨

ಹಾದಿ ಸುಂಕಿಗಗೆ ರಾಜನ ನಾಮ ಸಮು
ದ್ರಾಧೀಶನ ನಾಮ ನಮಗೆ ಕ್ಷೇಮ ॥ ೩

## ೬೫. ಇಂದ್ರನಾಥನೆಶೃಂಗಾರ

ಇಂದ್ರನಾಥನೆ ಶೃಂಗಾರ ಕವೀಂದ್ರನ ದಿವ್ಯಗುರು ದೇ
ವೇಂದ್ರ ಕೀರ್ತಿಯೋಗಿ ರಾಯನ ಸುಜ್ಞಾನಾಂಬುಧಿಗೆ
ಚಂದ್ರನೋ ಸಮುದ್ರಾಧೀಶನ ॥ ಪಲ್ಲವಿ

ಶತರುಚಿ ಸೂರ್ಯಕೋಟಿ ನೂತನ ಪ್ರಕಾರದ ಮಹಾ
ಅತಿಶಯವಾದ ಕಾಂತಿಯ ದಿವ್ಯ ಪರಂಜ್ಯೋತಿಯೇ ಬಾ ॥ ೧

ಮಣಿಮಾಲೆ ವಸ್ತ್ರಗಳೆಣಿಸದೆ ಕಾಂತಿಯ ತಿಂ
ಥಿಣಿಗೊಂಡ ಚೆಲ್ವರೂಪಿನಾ ಮೂಲೋಕದ ಭೂಷಣನೇ ಬಾ ॥ ೨

ಉಡದೆ ತೊಡದೆ ಕಾಂತಿ ಕಡೆಗೆ ಸೂಸುವ ಚೆಲ್ವ
ಬಿಡದೆ ಥಳಥಳಿಸುವ ಮಾಣಿಕ್ಯದ ಕನ್ನಡಿಯೇ ಬಾ ॥ ೩

ಬೆಳುದಿಂಗಳಂತೆ ನೋಡ ಕಳವಟ್ಟು ಪಿಡಿಯೆ ಕೈ
ಗೊಳಗಾಗದಿಹ ರೂಪಿನಾ ಸುಜ್ಞಾನದ ಪುತ್ಥಳಿಯೇ ಬಾ ॥ ೪

ಮಣಿಯನರಸುವ ನಾಗಗಣಕೆ ಸುಖವ ಚಿತ್ತ
ದಣಿವಂತೆ ಕರುಣಿಸುವ ದೇವ ಶಿರೋಮಣಿಯೇ ಬಾ ॥ ೫

ಭವಸಮುದ್ರದಲಿ ತೇಲುವರಿಗೆ ಧರ್ಮದ ಹ
ಸ್ತವ ನೀಡಿ ಮೇಲೆ ತೆಗೆವನಾಥರ ಬಂಧುವೇ ಬಾ ॥ ೬

ಕಾಳಕೂಟ ವಿಷದಂತೆ ಗೋಳುಗುಟ್ಟಿಸುವ ಪಾಪ
ಜಾಳಿಸಿ ಭಕ್ತರ ಕಾವ ಕರುಣಾಳುವೇ ಬಾ ಸಮುದ್ರಾಧೀಶ ॥ ೭

## ೬೬. ಭಿಕ್ಷೆಮಾಡಿಯೂನಿಚ್ಚ

ಭಿಕ್ಷೆ ಮಾಡಿಯೂ ನಿಚ್ಚ ಜ್ಞಾನಿಗುಪವಾಸ ತನು
ಸಾಕ್ಷಿಗಂಬರವಿದ್ದು ನಿರ್ವಾಣಿಯೇ ॥ ಪಲ್ಲವಿ

ಕೂರ್ಮೆ ಮುನಿಸೆಂಬೆರಡ ಬಿದ್ದು ಸೂಷುಪ್ತಿಯಲಿಹುದು
ಕರ್ಮದೊಳೆಯದುಣ್ಣದುಪವಾಸವು
ಕರ್ಮದಾವರನೋವನೆ ತೊಲಗಿ ನಿಜಾತ್ಮನಾ
ನಿರ್ಮಡಿ ಕಂಡರದು ನಿರ್ವಾಣವೇ ॥ ೧

ಅನ್ನವಂ ತೋರುವುದುಪಚಾರದಿಂದುಪವಾಸ
ಚಿನ್ನ ವಸ್ತ್ರವ ಬಿಡುವುದಂದುವೆ ಹೇಗೆ
ತನ್ನನರಿದಾತ ನೀವು ಮೋಕ್ಷ ಸಹಕಾರಿಗಳು
ಸನ್ಯಾಸರಿದವನೆ ಹಿಡಿದರೆ ಸ್ವರ್ಗವು ॥ ೨

ಹೊದಲೆಲ್ಲ ಹಸಿದಿರ್ದ ಶಾಸ್ತ್ರಗಳ ಕಲಿತೆಯೆಂದಿ
ರದಲ್ಲಿ ದಣಿಯದಿರು ನಿನ್ನ ನೋಡು

ಅದನರಿದು ತಪಸು ಮಾಡಮೃತವಹುದೆಂಬು
ದಿದು ಶಾಸನ ಸಮುದ್ರಾಧೀಶನ ‖ ೩

**೬೭. ತಾಲೆಲ್ಲೆಲೆಲ್ಲೆಲ್ಲೆಮಾಯಿ**

ತಾಲೆಲ್ಲೆ ಲೆಲ್ಲೆಲ್ಲೆ ಮಾಯಿ
ತಾಲೆಲ್ಲೆ ಲೆಲ್ಲೆಲ್ಲೊ ತಾಲೆಲ್ಲೆ ‖ ಪಲ್ಲವಿ

ವೇದ ಸಿದ್ಧಾಂತಗಳೊಡೆಯನ ದೃಷ್ಟಿ
ವಾದಕೆ ಸಿಲುಕದ ಮಹಿಮನ
ಮೂದೇವನ ಜಗದೀಶನ ಸ
ಮುದ್ರಾಧೀಶನ ಭಂಟಿ ನಾನೆಲೋ ‖ ೧

ಉಪ್ಪುಗಡಲೊಳಿರ್ದ ನೀರನು ತ
ನ್ನೊಪ್ಪುವನೆ ಜಲ ಸೋಂಕಿದಲಿ
ಸಿಪ್ಪನೆ ಸಿಪ್ಪನ್ನೆ ಮಾಡುವ ಜಿ
ನ್ನಪ್ಪ ನಮೋ ಸಾಧು ನಾನೆಲೋ ‖ ೨

ಉಡಿಯ ಪುಟ್ಟುವ ಲವಣಾಬ್ಧಿಯು ಮುಗಿ
ಲೆಡೆಯ ಮುಟ್ಟುವ ಉತ್ತುಮಾಂಗದ ನಗೆ
ನೋಟ ಸ್ಫಟಿಕದ ಕಾಂತಿಯು ಜಗ
ದೊಡೆಯ ನಮೋ ಸಾಧು ನಾನೆಲೋ ‖ ೩

ಡಿಳ್ಳಿಯ ಸುರಿತಾಳ ಭುಜಗಳಾವಂದು
ಸಲ್ಲಿಲೆ ಇಂದವೆಯಳೆಯಲು
ಅಲ್ಲಿಗಲ್ಲಿಗೆ ಮೂರು ಹೆಜ್ಜೆ ವಾಜಿತ
ಮಲ್ಲಸಮ ಸಾಧು ನಾನೆಲೋ ‖ ೪

**೬೮. ಏತರವಿವೇಕಏತರಜನ್ಮ**

ಏತರ ವಿವೇಕ ಏತರ ಜನ್ಮ ತಮ್ಮ ಕಾ
ರ್ಯ್ಯಾತುರವ ಮರೆದು ಮರುಳಾಗುವವರಿಗೆ ‖ ಪಲ್ಲವಿ

ಮನವಿತ್ತ ತನುವಿರಲ್ಕೆ ಬಹಿರಂಗ ವ
ರ್ತನೆಯಲ್ಲಿ ನಡೆದರೇನಾಯಿತೆಂದು
ನೆನಪ ಈ ಮೂಲೋಕದ ತುಟ್ಟತುದಿಗೇರಿಸಿದ್ದ
ಪದವನ ಜಗದೋದ್ಧಾರಿದಾಡುತಿರಬೇಡವೇ ‖ ೧

ಕನಸಿನಲಿ ಮನಸಿನಲಿ ರಾಗದಲಿ ರೋಗದಲಿ
ಮನಸಂದು ನುಡಿವ ಮಾತುಗಳೆಡೆಯೊಳು
ತನಗೆ ತಾನಡಿಗಡಿಗೆ ನಾಲಗೆಯ ತುದಿಗೆ ಸು
ಮ್ಮನೆ ಪಂಚಪದವೊದಗುತಿರಬೇಡವೇ ‖ ೧

ಅಂಗವಿದು ನನ್ನದೆಲ್ಲೆನಗೆರೆವ ಕಾಣ್ಬ ಎರ
ಡಂಗ ಉಂಟೆಂದು ಭವವರಿವತನಕ
ಶೃಂಗಾರಕವಿವೊಡೆಯ ಸಾಗರಾಧಿಪನ ಮ
ತಂಗದೊಳು ಮತಿಭೇದಾಗುತಿರಬೇಡವೇ ‖ ೨

## ೬೯. ಇದ್ದಿತುಎದ್ದಿತುಬಿದ್ದಿತಲ್ಲಾ

ಇದ್ದಿತು ಎದ್ದಿತು ಬಿದ್ದಿತಲ್ಲಾ ಕೂಡೆ
ಉದ್ದವನೇರಿತು ಮನವೆಂಬ ಹುಸಿ ‖ ಪಲ್ಲವಿ

ನೋಡಿರೆ ಮೋಸದಲ್ಲಿ ಆಡುತ ಕರ್ಮವೆಂಬ
ಬೆಡಗ ಸಿಕ್ಕಿತು ಬೇಂಟೆಯಲ್ಲಿ
ಕೂಡೆ ಸಲಹುತಿಹ ನಿಚ್ಚಲೊಂದೊಂದು ಮೈಯ್ಯ
ಗೂಡ ಹೊಕ್ಕಾಡಿತು ಗುಟ್ಟಿನ ಹಂಸೆ ‖ ೧

ಸೆರೆಯಲ್ಲಿ ಸಿಕ್ಕಿದೆನಲ್ಲಾ ಪೆಣ್ಣಿಂಕೆಯ
ಮರದು ಮತಿಗೂಡನ ಮೆಚ್ಚಿ
ತೊರೆದದು ಕಾಲದ ಮೇಲೆ ತನ್ನಿಂದ ತಾನೆ ಎ
ಚ್ಚರಿಂದೊರೆಯದೆ ಹಾರುಗೊಂಡಿತು ಹಂಸೆ ‖ ೧

ಭೇದಿಸಿ ನೋಡಿ ನೋಡಿ ಗೂಡಿನಿಂ
ದದಲಿ ಹಾರಾಡುವ ಹಾಗೆ ಕಂಡಿತು ಹರು
ಷದಲಿ ಶೃಂಗಾರಕವಿಯ ಪಾಲಿಪ ಸ
ಮುದ್ರಾಧೀಶನ ಪಾದಂಬುಗಳಲಿ ‖ ೨

## ೭೦. ದೀಪಜತನವಯ್ಯ

ದೀಪ ಜತನವಯ್ಯ ಪರಂಜ್ಯೋತಿ
ರೂಪು ಜತನವಯ್ಯ
ಭಾಪುರೆ ಕತ್ತಲೆ ಬಟ್ಟೆಗಾಣಿಸದು ಸಿ
ದ್ಧಾಪುರವ ಸೇರಬೇಕು ನಮಗಿನ್ನು ‖ ಪಲ್ಲವಿ

ಕಾಳಿಕೆ ಕಗ್ಗುಡಿಗಳ ತೆಗೆ ತೆಂಕಣ
ಗಾಳಿ ಬಂದಾಗ ಕದಲದಂತೆ ಪಿಡಿದಿರೋ ॥ ೧

ಮುಂಗುಡಿಯೊಳು ನುಗ್ಗಿ ಬರುತಿರುವ ನಾಲ್ಕು ಪ
ತಂಗಗಳ ಹೊರ್ದಲಿದೆ ಪಿಡಿದಿರೆ ॥ ೨

ಹಣತೆ ಉರಿದು ಬತ್ತಿ ಬಯಲಾಗಿದೆ ಪಾ
ಕ್ಷಾಣ ಸಮುದ್ರಾಧೀಶನ ಕೂಡುವೆನುತಾಗಿ ॥ ೩

## ೭೧. ದೇವನಮೋಜಿನದೇವ

ದೇವ ನಮೋ ಜಿನದೇವ ನಮೋ ವಿಶ್ವ
ಜೀವ ರಕ್ಷಕ ಸಂಜೀವ ನಮೋ ॥ ಪಲ್ಲವಿ

ಮಾತಿನಾ ಮಾಲೆಯಲ್ಲಿ ಬರಿದೆ ಹೊತ್ತುಗಳೆ
ದೇತಕ್ಕೆ ಕೆಟ್ಟು ಹೋಗುತಿಹರಯ್ಯ
ವೀತರಾಗ ನಿಮ್ಮ ನಾಮವ ನೆನೆದರೆ
ಪಾತಕ ಕೋಟಿ ಪರಿಹಾರವಯ್ಯ ॥ ೧

ಅರುಹದೇವ ನಮೋ ಅಬ್ಜಕರ್ಣಿಕೆಗೆ ನಾ
ಲ್ವೆರಳಷ್ಟು ಸೋಂಕದಿರ್ಪ್ಪ ಮುಖಗೆ ನಮೋ
ನರ ಸಾರೋರನ ರಾಜರಾಜೀ ಮಕುಟಮಣಿ
ಕಿರಣ ರಂಜಿತ ಪದಪದ್ಮ ನಮೋ ॥ ೨

ದೇವೋತ್ತಮ ನಮೋ ದಿವ್ಯವಾಕ್ಪತಿ ನಮೋ
ದೇವದೇವೇಶ ವಂದಿತನೇ ನಮೋ
ದೇವಗಿರಿಯಲಂದು ಪಾಲುಗಡಲು ಮಿಂದ
ದೇವ ಶಿರೋಮಣಿ ನಮೋ ನಮೋ ॥ ೩

ಕೋಟಿ ಚಂದ್ರಾರ್ಕರ ಕಾಂತಿಯ ಮಿನುಪ ಅ
ಪೂಟ ಪರಂಜ್ಯೋತಿ ರೂಪ ನಮೋ
ಲೂಟಿವರಿವ ಘಾತಿಕರ್ಮ ಸಂತತಿಗೆ ನೇ
ರ್ದ್ದಾಟಿ ನಮೋ ನಿರಪೇಕ್ಷ ನಮೋ ॥ ೪

ಮಂಗಲಮಯವಾದ ಸೊಬಗಿನ ದಿವ್ಯ ಮು
ಕ್ತಾಂಗನೆಯರಸನೆ ನಮೋ ನಮೋ

ಶೃಂಗಾರಕವಿ ಹಂಸರಾಜನೊಡೆಯ ನಿರ್ಮ
ಲಾಂಗ ಸಮುದ್ರಾಧೀಶ ನಮೋ ನಮೋ ॥ ೫

## ೬೨. ಏನೆಂಬೆನೋಡುನರರ

ಏನೆಂಬೆ ನೋಡು ನರರ ಬಾಳ್ಗೆಲ್ಲ ವೃ
ತಾನಿಂದ್ರಜಾಲವಾಗಿದೆ ॥ ಪಲ್ಲವಿ

ಮರೆವಲ್ತು ಮುದ್ದುದೋರಿದೇಕೆಂಬಲ್ಲ
ಹೊರಹುದೋರಿ ಮೋಹಿಸುತಿದೆ
ಘಳಿಲನೆ ಬಾಡುವಾಯಿ ವಿಳ್ಯವ
ದೋರಿ ಹಲಬರ ನಗಿಸುತಲಿದೆ ॥ ೧

ಬರುಮೊರೆ ಮುದ್ದುದೋರಿದೆ ಎಳಮಿಸಿ
ಸರಿದೊರೆದುರೆ ಮರೆಮಾಸುತಿದೆ
ಮರೆಯೇಕೆ ಮತ್ತೆ ಕರಿದು ಬಿಳಿದುವಾಗಿ
ಸಿರ ಮಂಡಿಗೆ ಸವಿಗೆಡುತಿದೆ ॥ ೨

ಆಡುತಾಡುತಲಿರ್ದು ಬಯಲಾಗಿ
ಕೂಡೊಂದು ರೂಪದೋರಿದೆ
ನೋಡಿರೆ ಸಮುದ್ರಾಧೀನಾಥನ ಪೂಜೆ
ಮಾಡದೆ ದುಃಖಬಡುತಿದೆ ॥ ೩

## ೬೩. ಎಂತಾಗಲಿರುವೆನಾ

ಎಂತಾಗಲಿರುವೆ ನಾ ನಿನ್ನೆಂತು ಮರೆವೆ
ಚಿಂತಿಸಿದರ್ಥವನೀವ ನಿರಂಜನ ಸಿದ್ಧನ ॥ ಪಲ್ಲವಿ

ಉಡದೆ ತೊಡದೆ ಸೊಬಗನ ಚೆಲುವನ ದೇಹ
ವಿಡಿದು ನಿರ್ದೆಹಿಯಾದ ಚಿನ್ಮಯಾಂಗನ
ಪಿಡಿದು ಧ್ಯಾನಿಸುತಿಹ ತನ್ನೊಳಿರ್ದ ಮೂರು ದೇಹವ
ಸುಡುವ ಸಾಮರ್ಥ್ಯವುಳ್ಳ ಪರಂಜ್ಯೋತಿ ಜಾತನ ॥ ೧

ಮೂರು ರತ್ನ ಪನ್ನೆರಡು ತಪಸು ಪಂಚಾ
ಚಾರದಿ ಬೇರಿಟ್ಟು ಮೊದಲು ತೋರಿ ಮತ್ತೆ ತನ್ನೊಳು
ಬೇರಾಗದೆ ಕಾಣಿಸಿ ತನ್ನಿಂದ ತನ್ನನೆ ನೋಳ್ಪ
ಮೂರು ಲೋಕದ ವಿಸ್ಮಯ ಪರಂಜ್ಯೋತಿ ರೂಪನ ॥ ೨

ಸರ್ವಥಾ ಮುಖನ ಸರ್ವತೋದಯನ ಸುಖ
ಸರ್ವಾಂಗ ತುಂಬಿ ತೋರುವ ಪರಂಜ್ಯೋತಿಯ
ಸರ್ವಜ್ಞನ ಶಾಂತನ ನಿಶ್ಚಿಂತನ ಸುಖಾಂತನ ಸು
ಪರ್ವರಾಜ ಪದವಿಯ ಮೀರಿ ಮುಕ್ತಿಗೇರುವನಾ ॥ ೩

**೭೪. ಹಾಹಾಕಷ್ಟಜ್ಞಾನದೇಹಿ**

ಹಾಹಾ ಕಷ್ಟ ಜ್ಞಾನದೇಹಿ ಭ್ರಾಂತಿ ಸಿಕ್ಕದ ನೋಡಾ ॥ ಪಲ್ಲವಿ

ಪೇಳಲಂಬರದಂತಿಹಾತ್ಮನ ಕರ್ಮ
ದೊಳಿಯೊಳಾರು ಹೂಳಿದರಯ್ಯಾ ॥ ೧

ತಾನೆ ತನ್ನೊಳು ನಿಂದರಮೃತಕೆ ಹೋಹ
ಶ್ರೀನಿರಂಜನ ಸಿದ್ಧಗಿಂತಾಯಿತೆ ॥ ೨

**೭೫. ಗೆದ್ದೆಹೋಗೂಮ್ಮೆಯೊಳೆದ್ದ**

ಗೆದ್ದೆ ಹೋಗೂ ಮ್ಮೆಯೊ
ಳೆದ್ದ ಜಾತಿಯ ಕಂಡು ಮಾಯೆಯು ॥ ಪಲ್ಲವಿ

ಶಬ್ದಭ್ರಾಂತಿಗೆ ಸಿಕ್ಕಿ ಮರುಗದೆ ನಿಃ
ಶಬ್ದ ನಿಶ್ಚಿಂತ್ವಂತ ರೂಪಿನೊಳಾಡೆ ॥ ೧

ತನು ಕಂಗೆಡಿಸಿತಪ್ಪಾರಾದೆ ನಿನ್ನ
ಮನವ ದಂಡಿಸಿ ನಿಜದೊಳು ಕೂಡಿ ॥ ೨

ರಂಜನ ಲೌಕಿಕತೆ ಆಗದೆ ನಿ
ರಂಜನ ಸಿದ್ಧನನ ಮೆಚ್ಚಿ ॥ ೩

**೭೬. ಭೇದವಿಜ್ಞಾನರಾಜ್ಯ**

ಭೇದ ವಿಜ್ಞಾನ ರಾಜ್ಯದೊಳು
ವೇದನೆಯ ತಾಳು ಸುಬೋಧೆ ಇದು ಕೇಳು ॥ ಪಲ್ಲವಿ

ನುಡಿ ಮನಸೇಂದ್ರಿಯ ಶ್ವಾಸ ನಿಶ್ವಾಸ ಮೂ
ರೊಡಲು ಬೇಧವು ಜಾತಿ ನಿನ್ನವಲ್ಲ ಕರ್ಮ
ದೊಡವೆಯಲ್ಲ ಇದ್ದರೂ ನೀರಸಲ್ಲ ॥ ೧

ಮೇಣ ಸೋರಿದೊಂದು ಮೂಷಿಯೊಡಲಬನಾದಂತೆ
ಕೋಣೆಯೊಳಗಿರ್ದನೆಂದು ನಿನ್ನ ನೋಡಿ ಸುಖ
ಶ್ರೇಣಿಗಿದು ಬಿಡು ಕರ್ಮವ ಕ್ಷೀಣವ ಮಾಡು ‖ ೨

ಧ್ಯಾನವೊಂದಲ್ಲದೆ ಮಿಕ್ಕವೇನೂ ನನ್ನವಲ್ಲೆಂದು
ಧ್ಯಾನದಲಿ ನೋಡು ನಿರಂಜನ ಸಿದ್ಧನ ಯಜ
ಮಾನ ಬುದ್ಧನಾ ಸರ್ವಸ್ಥಾನ ಶುದ್ಧನಾ ‖ ೩

<u>೭೭. ಜಿನರೆನ್ನುನಿಚ್ಚಜಿನ</u>

ಜಿನರೆನ್ನು ನಿಚ್ಚ ಜಿನರೆನ್ನು ನಿಚ್ಚ
ಜಿನ ಜಿನಸಿದ್ಧರೆಂದೆನ್ನು ಕಂಡು ಮನವೇ ‖ ಪಲ್ಲವಿ

ಜಿನಜಿನರೆಂದು ಜಿನುಗುವ ಮನುಜನ
ಮನದೊಳು ಹೊರಗೆಲ್ಲ ಮಂಗಳ ಕಂಡಾ ‖ ೧

ಕನಸಿನೊಳಗೆ ಕಳವಳವೆಂಬುದಾಗದು
ನೆನೆದ ಕಾರ್ಯಕೆ ನಿಮಿಷದಿ ಸಿದ್ಧಿ ಕಂಡಾ ‖ ೨

ಬದ್ಧಕರ್ಮಕೆ ಸಿಕ್ಕಿ ಬಳಲುವವರಿಗೆ ಜಿನ
ಸಿದ್ಧನಾಮವೆ ಜೀವನ ಸಿದ್ಧಿ ಕಂಡಾ ‖ ೩

ಆಗಮ ತತ್ವದ ತಿರುಳಿದು ಶ್ರೀ ವೀತ
ರಾಗ ವಿದ್ಯಾನಂದ ಜಯವೆನ್ನು ಮನವೇ ‖ ೪

ಭ್ರಾಂತಿಯ ಕೆಡಿಸುವ ಬಲು ಮಂತ್ರವಿದು ಅರಿ
ಹಂತರಿರ್ಪ ಅಸಿ ಆಉಸಸಾಯೆನ್ನು ‖ ೫

ನಿದ್ರೆ ಪೊರೆವದು ನಿರಾತಂಕವಹುದು ಸ
ಮುದ್ರಾಧಿ ಪರಮೇಶ ಶರಣೆನ್ನು ಮನವೇ ‖ ೬

ಬಂಧನವಳಿದು ಬೇಗ ಶಿವಪದವಹುದು ಶ್ರೀ
ಮಂದರಸ್ವಾಮಿ ನಮೋ ನಮೋ ಎನ್ನು ‖ ೭

ತಪಸು ಮಾಡಿದ ಫಲ ತನ್ನ ತಾ ದೊರೆಕೊಂಬು
ದಪರಾಜಿತೇಶ್ವರ ಜಯವೆನ್ನು ಮನವೇ ‖ ೮

ಅಂಬರ ಚಿನ್ಮಯ ಪುರುಷಾಕಾರ ಚಿ
ದಂಬರ ಪುರುಷ ನಮೋ ನಮೋಯೆನ್ನು ॥ ೯

ದಂಸಣಾನೊ ಚರಿಂತೆ ಮೂರೆ ಗುರು
ಹಂಸನಾಥ ನಮೋಯೆನ್ನು ಮನವೇ ॥ ೧೦

ಅಂಜನವೆನಿಪ ಕರ್ಮಾಂಜನವಳಿದ ನಿ
ರಂಜನ ಸಿದ್ಧ ನಮೋಯೆನ್ನು ॥ ೧೧

**೭೮. ಅರಿದರಿದೆಜಿನತಪಸು**

ಅರಿದರಿದೆ ಜಿನ ತಪಸು ಅರರೆ ಮತ್ತೆ
ಡರೊಳಗಾತ್ಮ ಧ್ಯಾನವೆಂಬುದ
ನರಿದೆನೊಳರಿದೆ ತತ್ವದಲಿ ಹಿರಿದಿಗೆ
ಹಿರಿದು ಕರ್ಮವೆಂಬ ಅರಿಗೆದ್ದು ತೊಟ್ಟ ಬಿರುದು ॥ ಪಲ್ಲವಿ

ಹಲವು ಶಾಸ್ತ್ರವನೋದಬಹುದು ನುಡಿಯಿಂದ
ಹಲಬರ ತಲೆದೂಗಿಸಬಹುದು
ಹಲವು ಕಡೆಗೆ ಹೋಹ ಮನವೆಂಬ ಮರ್ಕಟವ
ನಿಲಿಸುವುದರಿದು ತನ್ನಲ್ಲಿ ತಾ
ನೆಲೆಗಾಣ್ಬುದರಿದು ಆತ್ಮಧ್ಯಾನ
ದಲ್ಲಿ ನಿಲ್ಲ ಯೋಗ ಪರಿವಿದೂ ॥ ೧

ತನುವ ತಾ ದಂಡಿಸಲಿಬಹುದು ತೀರ್ಥಜಾತ್ರೆ
ಯನು ದೇಶವ ಸುತ್ತಬಹುದು ಆತ್ಮ
ಧ್ಯಾನದಲಿ ನಿಲ್ಲು ಯೋಗವರಿದು
ಮನವ ದಂಡಿಸಲರಿದೊಡಲೊಳಾಧ್ಯಾತ್ಮ ದೇ
ವನ ನೋಡಲರಿದು ತನ್ನಲ್ಲಿ ತಾ
ಮನೆ ಮಾಡಲರಿದು ಬಾಹ್ಯ ಚಿಂತನೆಯ ತಾ ತೋರುವುದರಿದು ॥ ೨

ಒಡಕಾಗಿಹುದು ಕೈಧ್ಯಾನ ಆತ್ಮಧ್ಯಾನ
ತುಡುಕಿ ಸಾಧಿಸುವಾಗ ಬೆರೆದು
ಬಿಡದೆ ವಿಸ್ತಾರದ ಪೊಡವಿಯಿಪ್ಪುದ್ದ ಮೂರಂಗದ
ನಡುವಿದು ಶುದ್ಧ ಧ್ಯಾನಿಸಿದವ
ಕಡೆಗೆ ನಿರಂಜನ ಸಿದ್ಧ ॥ ೩

**೭೯. ನಿನ್ನಹೆಸರೇನೊ**

ನಿನ್ನ ಹೆಸರೇನೊ ನಿನ್ನ
ಮುನ್ನ ಕಂಡುದಿಲ್ಲ ಇಂದು ಕಂಡೆನಾ ‖ ಪಲ್ಲವಿ

ಪಂಚವರ್ಣ ನಿನಗಿಲ್ಲ ಪ್ರಕಾಶವೇ ರೂಪಾಗಿಸಿದೇಕೊ
ಪಂಚೇಂದ್ರಿಯವೆಲ್ಲ ಸುಖ ಸೊಂಪಾಗಿದೆ ಜ್ಞಾನ ಪೆಂಪಾಗಿದೆ ‖ ೧

ಗಂಧವಿಲ್ಲ ರಸವಿಲ್ಲ ಮೈಯೊಳಿರ್ದು ಮೈಯಸಂ
ಬಂಧವಿಲ್ಲ ಮಾತು ಮನ ನಿನಗಿಲ್ಲ ಚೋದ್ಯವು ಜಗಕೆಲ್ಲ ‖ ೨

ಅಂಜನವೆಂದರೆ ಕರ್ಮ ಕರ್ಮಂಜನ ಹೊದ್ದದೆ ನಿ
ರಂಜನ ಸಿದ್ಧವೆಂದಲ್ಲವೆ ನಿನ್ನ ನಾಮ ಅದು ನನ್ನ ಕ್ಷೇಮ ‖ ೩

**೮೦. ಒಳಗೆಬೇಧಿಸಬೇಕು**

ಒಳಗೆ ಬೇಧಿಸಬೇಕು ನಿಚ್ಚ ‖ ಪಲ್ಲವಿ

ಧ್ಯಾನವಿಲ್ಲದೆ ಮುಕ್ತಿಯಹುದೆ
ತನ್ನ ತಾ ನೋಡದವನ ಬಲ್ಲವ
ನೆನ್ನಬಹುದೆ ಜ್ಞಾನವೆಂಬುದು ಹೊರಗಿಹುದೆ
ಮೈಯ ಬೇನೆ ಬಿಡಿಸಲದು ಮೋಕ್ಷಕೇತಹುದೇ ‖ ೧

ತನುವ ದಂಡಿಸಿದೊಮ್ಮೆ ಮಾಣಾ
ನಿನ್ನ ಮನವ ದಂಡಿಸಿ ಪರಮಾತ್ಮನ ಕಾಣಾ
ನೆನಹು ಸುತ್ತುವುದಾವ ಜಾಣಾ ಮುಕ್ತಿ
ನಿನ್ನಗಿನ್ನು ದೂರವಲ್ಲಲ್ಲೊಂದೆ ಕಾಣಾ ‖ ೨

ತನ್ನ ಕಂಡವಗೆ ಕೇಡಿಲ್ಲ ಮುಕ್ತಿ
ಕನ್ನೆಗಾತನೇ ಮೆಚ್ಚಿದನಲಿ
ಭಿನ್ನ ವಸ್ತುವ ಸರಸಲ್ಲಿ ಸುಪ್ರ
ಸನ್ನ ನಿರಂಜನ ಸಿದ್ಧನೇ ಬಲ್ಲ ‖ ೩

**೮೧. ಹೀಗೆಮೈಮರೆದಿಹರೆ**

ಹೀಗೆ ಮೈ ಮರೆದಿಹರೆ ಮೈಮರೆಯೊಳೆದಾತ್ಮನ
ನೋಡಲಿಲ್ಲವೆ ನೀವು ನೋಡಲಿಲ್ಲವೇ ನಿಚ್ಚ
ನೋಡಲಿಲ್ಲವೇ ‖ ಪಲ್ಲವಿ

ನಿಮ್ಮ ನಮ್ಮ ದೇಹವೆಂಬ ದೇಗುಲದೊಳಗೆ ತುಂಬಿ
ನಿಮ್ಮಾತ್ಮನೆಂದೆಂಬ ದೇವರುಂಟು ನೋಡಿರೋ
ಗೂಢದೊಳಾಡಿರೋ ಧ್ಯಾನವ ಮಾಡಿರೋ ॥ ೧

ಧ್ಯಾನ x x x ಕರ್ಮವ ಸುಡುವ ಸಾಮರ್ಥ್ಯ ನಿಮ್ಮಾ
ತ್ಮನಿಗುಂಟು ನಂಬಿರೆಲ್ಲರೂ ಭವ್ಯರೆ ಬಲ್ಲರು
ನಿರ್ಭಾವ್ಯರೊಲ್ಲರು ॥ ೨

ಜಿನನ ಸಿದ್ಧನೆಂದು ಶುದ್ಧನೆಂದು ಕಣ್ಮುಚ್ಚಿ ನಿರಂ
ಜನ ಸಿದ್ಧನ ನೋಡಿ ಧ್ಯಾನಿಸಿರೋ ಕರ್ಮ
ವ ನೀಗಿರೋ ಮುಕ್ತಿಗೆ ಹೋಗಿರೋ ॥ ೩

**೮೨. ತೊಳಲದಿರುಕಂಡಕಡೆಗೆ**

ತೊಳಲದಿರು ಕಂಡಕಡೆಗೆ ಚಿದ್ರೂಪ
ನೊಳಗೆ ನೀ ನಿಂತು ಸುಖಿಸಾ ಮನವೇ ॥ ಪಲ್ಲವಿ

ಲಿಪಿಯೊಳಖಿಳವ ಚಿಂತಿಸಿ ಕೊನೆಕೊನೆಗೆ
ಕಪಿಯಂತೆ ಹರಿದಾಡದೆ ಮನವೇ
ವಪುವಿನೊಳಗಿರ್ದಾತ್ಮನ ನೀ ನೋಡಿ
ಅಪರಮಿತ ಸುಖವ ಸುಖಿಸಾ ಮನವೇ ॥ ೧

ನಾನಗರಸುರ ಲೋಕವ ನೆನೆನೆನೆದು
ಕಾಗೆಯಂತೆಡೆಯೊಡದೆ ಮನವೇ
ರಾಗರೋಷವ ತೊಲಗಿಸಿ ಪರಮಾತ್ಮ
ಯೋಗದೊಳಗಿಂತು ಸುಖಿಸಾ ಮನವೇ ॥ ೨

ಪರರಿಗಿದ ಸೂಚಿಸದಿರು ಸಿದ್ಧಾಂತ
ಪರಮ ತತ್ವದ ತಿರುಳದು ಮನವೇ
ಗುರು ನಿರಂಜನ ಸಿದ್ಧನ ಧ್ಯಾನಿಸೈ
ಸಿರಿಯಹುದು ಮುಕ್ತಿಯಹುದು ಮನವೇ ॥ ೩

**೮೩. ಒಸಗೆಯಹೇಳುಕಂಡಾ**

ಒಸಗೆಯ ಹೇಳು ಕಂಡಾ ನಿನ್ನಾಣೆ ಸೂರ್ಯ
ಹುಸಿಯಲ್ಲ ಹೋಗಿ ನಮ್ಮವರ ಕಂಡರೆ ನೀನೊಂ
ದೊಸಗೆಯ ಹೇಳು ಕಂಡಾ ॥ ಪಲ್ಲವಿ

ಇಂದು ನೀನಲ್ಲದ್ದು ನಾಳೆ ಪೂರ್ವವೀದೇಹ
ವೆಂದೆಂಬ ಕ್ಷೇತ್ರಕೆ ಹೊಹೊಹೊ ಹೋಗಾ
ಗಂಧಕುಟಿಯಲಿ ನಮ್ಮವರ ಕಂಡರೆ ನಿಮ್ಮ
ಬಂಧುವ ಕಂಡುಬಂದೆನು ಕ್ಷೇಮವೆಂದು ॥ ೧

ಭರತ ಭೂಮಿಯಲ್ಲಿ ತಾನಿದ್ದನೆಂದೆನ್ನು
ಬರುತ ಕಂಡೆನು ಬಹಿರಂಗಕ್ಕೆ ಬೀಳಾ
ಪರಮಾತ್ಮ ಯೋಗದೊಳಿರ್ದನೆಂದೆನ್ನು ಬಾ
ಪುರೆ ಎಮ್ಮ ಕೊಂಡಾಡಿ ಹರುಷ ಮಾಡುವರು ॥ ೨

ಧ್ಯಾನಿಸಿ ಧ್ಯಾನಿಸಿ ತನ್ನ ಮೈಯೊಳಗಾತ್ಮ
ಭಾನುವ ಕಂಡೆನುಂಡೆನು ದಿವ್ಯವ್ರತವ
ನಾನೆನ್ನ ಬರುತಿರಲೆನ್ನ ಕರೆದು ನಿಮ
ಗಾನಂದಮಪ್ಪ ಹೇಳೆಂದನೆಂದು ॥ ೩

ಕರ್ಮಸಡಿಲವಾಯಿತು ಕಾಯ ಮುಪ್ಪಾಯಿತು
ಧರ್ಮ ಸುಸ್ತಿರವಾಯಿತಾತ್ಮಗೆ ಪ್ರಾಯವೇರಿತು
ಕರ್ಮಣಾಂಗವನು ತ್ಯಜಿಸಿ ದೇಹವನು ಧ್ಯಾನ
ಧರ್ಮದಿಂದೊಯ್ಯನೆ ಸುಡುತಿರ್ದನೆಂದು ॥ ೪

ಮರಣದಾ ನೆವದಿಂದ ಬಿಸುಟು ಸ್ವರ್ಗ
ದರಸಾಗಿ ಬಂದು ನಿಮ್ಮೆಲ್ಲರ ಕಂಡು
ಪರಮ ಮುಕ್ತಿಗೆ ಹೋಹನವನ ಹೆ
ಸರು ರತ್ನಾಕರ ಸಿದ್ದನನ್ನು ಎಮ್ಮವರು ಮೆಚ್ಚುವರು ॥ ೫

## <u>೮೪. ಸುಖಿಸಲಿಲ್ಲವೆನಿಜ</u>

ಸುಖಿಸಲಿಲ್ಲವೆ ನಿಜ ಸುಖಿಸಲಿಲ್ಲವೆ
ಅಖಿಳವಾಡುವೆ ಆತ್ಮಧ್ಯಾನದೊಳಗೆ ನಿಂದು
ಸುಖಿಸಲಿಲ್ಲವೆ ॥ ಪಲ್ಲವಿ

ನಾನಾ ಚಿಂತೆಯ ಬಿಟ್ಟು ತನು ಬೇರೆಂದು ಪರ
ಮಾನಂದಮಯನೆಂದಾತ್ಮನೊಳಗೆ ನಿಂದು
ಜ್ಞಾನವೆಂದೆಂಬ ಪಾಲ್ಗಡಲೊಳು ನಿಂದು ಸುಖಿಸಿದೆನಯ್ಯ ಬರಿ
ದೆ ನೋಡೆಯೆಂದೆಂದೂ ॥ ೧

ಘಾಟಪಟ ಕಂಬ ಕುಂಬಗಳ ಬಹುಚಿಂತೆ ಶಬ್ದ
ದಟು ಮಡುವೆಲ್ಲ ವಿಕಲ್ಪದ ಸಂತೆ
ಸ್ಪಟಿಕದೊಳೆಸೆವ ಜಿನಪ್ರತಿಮೆಯಂತೆ ದೇಹದಲ್ಲಿ
ಹೊಳೆವಾತ್ಮನನೋರಂತೆ ॥ ೨

ಮತಿಶಾಸ್ತ್ರ ಮೊದಲಾದ ಪಂಚ ಕೆಟ್ಟು ವಿಶುದ್ಧ
ನುತ ಬೋಧ ಸೂರ್ಯ ಮಾಡುವನು ಶುದ್ಧ
ಅತಿವಾದ ಬೇಡ ಧ್ಯಾನಿಸು ಪ್ರಬುದ್ಧಾ
ಆತ್ಮಹಿತ ಇವನೊಲಿದು ನಿರಂಜನ ಸಿದ್ಧಾ ॥ ೩

**ೞ೫. ನಿನ್ನೊಳಗೆನೀನಿಂತು**

ನಿನ್ನೊಳಗೆ ನೀನಿಂತು ನಿಜಸುಖವನಾಡಿಸಿದೆ
ಭಿನ್ನ ಪದಾರ್ಥದೊಳೇತಕೆ ತೊಳಲುವೆ
ಬಿಡು ಬಿಡು ಸುಜ್ಞಾನಿ ॥ ಪಲ್ಲವಿ

ಕೈಯ್ಯೊಳೊಸ್ತುವ ಪಿಡಿದು ಕಾಡೊಳರಸುವಂತೆ
ಮೈಯ್ಯೊಳುಗಾತ್ಮನ ನೋಡದೆ ಲೋಕದ ಮಾಯೆಯ ಬಳಲುವರೆ
ಅಯ್ಯಯ್ಯೋ ಆತ್ಮನೆ ಆರೆಂದು ಕಂಡಿರ್ದ್ದೆ
ಸಯ್ಯರಿದೊಳಗೀಕ್ಷಿಸಿದೊಡೆ ಕರ್ಮವ ಸಂಹರಿಸುವೆ ಕಾಣಾ ॥ ೧

ಚರ್ಮಾಕ್ಷಿಗಳ ಮುಚ್ಚಿ ಚಲಿಸಿದೆ ಭಾವದಿ ನೋಡು
ಕಾರ್ಮುಗಿಲೊಳಗಣ ರವಿಯಂತಾತ್ಮನು ಕಾಯಾಗಿ ತೋರುವನು
ಕರ್ಮದೊಳು ದುರುತದಿ ತನಗೆ
ಧರ್ಮದೊಳಗ್ಗಳವಿದು ಕೈವಲ್ಯಕ್ಕೆ ದಾರಿ ಕಾಣಾ ಸುಮ್ಮಖಾ ॥ ೨

ನೋಡಿದರೊಂದೆ ದಿನಕನೋದದಿ ಕಾಣಿಸನಾತ್ಮ
ಕೂಡೆ ಕೂಡಲಸದೆ ಪರಿಭಾವಿಸುತಿರೆ ಕುಶಲ ತೋರುವನು
ನಾಡೆಲ್ಲರ ಕೇಳದಿರು ನಂಬು ನೀ ಚೆನ್ನಾಗಿ ನಂಬು
ನಿರಂಜನ ಸಿದ್ಧನ ಮುಕ್ತಿಗೆ ನೋಯದೆ ಹೋಗಣ್ಣಾ ॥ ೩

**ೞ೬. ಆರುಂಟುಕರುಣಿಗ**

ಆರುಂಟು ಕರುಣಿಗ
ಳಾರುಂಟು ಜಗದ್ದುಪಕಾರಿಗಳು ಮ
ಹಾಋಷಿ ಮಹೇಂದ್ರಕೀರ್ತಿ ಮುನೀಂದ್ರ ಮ
ನೋರಥನಾಯಕನೇ ॥ ಪಲ್ಲವಿ

ನೆಲ್ಲಿಯ ಕಾಯಿ ಸವಿದು ನೀರ್ಗುಡಿದರೆ
ಬೆಲ್ಲವೆನಿಸುವಂದದಿ ಕರ್ಮಗಳು ತ
ನ್ನಲ್ಲಿರ್ದುದ ದಂಡಿಸಿದ ಸಂಸಾರವಿದೆಲ್ಲವ ಹಿತವಲ್ಲದೆ
ಎಲ್ಲಿಯಡಿ ಸುಖವಾತ್ಮಗೆಲಿವ ಸುಖವಲ್ಲದೆ ಸುಖ
ವಿಲ್ಲ ಕಾರಣ ನೀವಿಲ್ಲಿಯೆ ಮುಳುಗದಲ್ಲಿಗೆ ಮೋಹಿಸಿರೋ ಎಂ
ದಲ್ಲಿಗರುಹಿದಯ್ಯಾ ಗುರುವೇ ॥ ೧

ಮದ್ದುಗುಣಿಕೆಯನು ಮೆದ್ದವನಿಗೆ ಮ
ಣ್ಣಿದ್ದಲು ಮರನೆಲ್ಲವು ಹೊಂಬಣ್ಣದ
ಹೊದ್ದಿಗೆಯೆನಿಸುವ ಪರಿಯಲಿ ತನ್ನೊಳ
ಗಿದ್ದ ಕರ್ಮಂಗಳಿಂದ ಹೊದ್ದಾ
ರಥೆಯ ತೊಗಲೆಲುವಿನ ಮೆದೆಯಲಿ
ತಿದ್ದಿದ ಹೆಂಗಳು ಸುರನಾರಿಯರಂತೆ
ಮುದ್ದಿಸಿ ಮೋಹಿಸಿಕೊಂಡರಲ್ಲಯೆಂದು
ಬಿದ್ದರೆ ನೆನಹಿಯ್ಯೆ ಗುರುವೇ ॥ ೨

ಅಂಗವನೆಚ್ಚದೆ ಆತ್ಮನ ಮರೆಯದೆ
ಕಂಗಳು ಹರಿದತ್ತಮನ ಹರಿದಾಡದೆ
ಸಂಗಡಿಸಿದ ಸುವ್ರತಗಳ ಬಿಡದೆ ಸು
ಸಂಗದೊಳಿರೆಂದು ಹಂಗುದೊರೆದು ಲೋಕವ ಸುಖಿ ಮಾಡಿ
ಶೃಂಗಾರಕವಿ ಹಂಸರಾಜ ಗುರುವೇ ಕೃ
ಪಾಂಗನೇ ಮಹೇಂದ್ರಕೀರ್ತಿ ಮುನೀಂದ್ರ ಗು
ಣಂಗಳ ಕಾಯೆ ಗುರುವೇ ಗುರುವೇ ॥ ೩

## ೮೭. ಬಲ್ಲೆನೆಂಬವರುಸುರುಬಣ್ಣ

ಬಲ್ಲೆನೆಂಬವರುಸುರು ಬಣ್ಣಗಾರಿಕೆಯಲ್ಲಾ
ಎಲ್ಲರ ಸಮ್ಮತವಲ್ಲದೆ ಏಕಾಂತವಲ್ಲ ॥ ಪಲ್ಲವಿ

ನಾಟಕದ ಮೊದಲೇನೋ ನರ್ತನದ ಕಲೆಯೇನೋ
ವಿಟನ ಸುಖದೆಡೆಗೈವ ಸಖಿಯರ ಕುರುಹೇನೋ
ನೋಟದಲ್ಲಿ ಹುಸಿಯೇನೋ ನೋಡಿದಾ ಬಗೆಗೆ ದಿಟವೇನೋ
ಕೂಟದಿಂದ ನೋಯಿಸಬಲ್ಲ ಹೆಣ್ಣಿನ ಹೆಸರೇನೋ ॥ ೧

ಕೆಡದ ಭೂಷಣವೇನೋ ಕೇಡಿಲ್ಲದ ಸಿರಿಯೇನೋ
ಒಡನೋಡನಾಡುತ ಸುಡುವ ಪಂಚಾಗ್ನಿಗಳೇನೋ

ಕಡೆಗೆ ಮತ್ತಾಕಿಚ್ಚ ನಂದಿಸುವ ನದಿಯೇನೋ
ನುಡಿವಾತನ ರೂಪೇನೋ ನೋವಿನಾ ಕಲೆಯೇನೋ ॥ ೧

ಮನಸಿಗೆ ಸಂಗಡವೇನೋ ಸಂಗಡದಲ್ಲಿ ಹಿತವೇನೋ
ಅನುದಿನ ತೊಳಲುವ ಸಾಕಾರದ ನಿಲುಗಡೆಯೇನೋ
ಕನಸಿನ ಫಲವೇನೋ ಶೃಂಗಾರ ಕವಿ ಹಂಸರಾ
ಜನಪತಿ ಕಡಲೋದೀಶನನೊಲಿಸುವ ಗುಣವೇನೋ ॥ ೨

**೮೮. ಕೇಡಿನೊಳಗಾದನಾಡಿ**

ಕೇಡಿನೊಳಗಾದ ನಾಡಿ ನಾಟ್ಯವ
ನಾಡಿ ಹೊರಹೊರಗಾಡಿ ಬೊಂಬಲು
ಬಾಡಿ ಮತಿಯನೀಗಾಡಿ ಇಹದಾವ
ಗಾಡಿ ತನ್ನಾತ್ಮನ ನೋಡಬೇಡವೇ ॥ ಪಲ್ಲವಿ

ಹಲವು ಚಿಂತೆಯ ತೋರದೇಕಾಂತದ
ಸ್ಥಳದೊಳಗೊಬ್ಬನೆ ಕುಳಿತು
ಸಲೆ ತನ್ನಾತ್ಮನ ಭಾವಿಸಿ ನೋಡಲು
ಹಳಚುವ ಕಂಗಳ ಮುಚ್ಚಿ ಆಸೆಯ ಕೊಚ್ಚಿ ಮನ
ದೊಳು ಹೆಚ್ಚಿ ಮುಕ್ತಿಯನಚ್ಚಿ ನೋಡಬೇಡವೇ ॥ ೧

ಉದ್ದಿನೊಳಗೆ ಬೆಳೆಯ ತುಂಬಿದೊಳೆದ್ದ ಸ್ಫಟಿಕದ ಗೊಂಬೆಯು
ಹೊದ್ದಿಯೂ ಹೊದ್ದ ಮೈಯೊಳು ಸುಪ್ರಭೆ
ಇದ್ದಂತೋರುವರಾಗ ಕರ್ಮವಿಭಾಗ ಧ್ಯಾನ
ದುದ್ಯೋಗ ಇದು ಶಿವಯೋಗಿ ನೋಡ ಬೇಡವೇ ॥ ೧

ದೇಹಿಗಳೆಲ್ಲರ ಮೈದಪ್ಪದೆ ಶ್ರೀ ಹಂಸೇಶ್ವರ
ನಿಹನಿಹನು ಭಾವಿಸಿ ನೋಡಿ ಬಾಹ್ಯವಿರಾಗಿ
ಮೋಹಿದ ಕರ್ಮವಿನಾಶ ಕೆಡದ ಸಂತಾಪ
ಮುಕ್ತಿ ನಿವಾಸ ನೋಡಬೇಡವೇ ॥ ೨

**೮೯. ಸಂಸಾರಸುಖದೊಮ್ಮೆ**

ಸಂಸಾರ ಸುಖದೊಮ್ಮೆ ಒಳಿತೊಳೆತು ಕೇಳಿ
ಸಂಸಾರ ಸುಖವೆಂಬುದುತ್ತಮ ಸಾರ
ಹಂಸನನರಿದು ಭಾವಿಸುವುದೇ ಸಂಸಾರ
ಹಂಸನನರಿಯದ ಸುಖವೇ ದುಃಸ್ಸಾರ ॥ ಪಲ್ಲವಿ

ಆತ್ಮನನರಿದು ಭೋಗಿಪಭೋಗ ಸಂಭೋಗ
ಆತ್ಮನನರಿಯದ ಭೋಗದುಬ್ಬೇಗ
ಆತ್ಮನನರಿದು ಕೂಡುವ ಯೋಗ ಸಂಯೋಗ
ಆತ್ಮನನರಿಯದ ಯೋಗ ಕುಂಯೋಗ ॥ ೧

ಸುಜ್ಞಾನಿಗೆ ಬಂದ ಸಿರಿಯೆಲ್ಲ ಸಂಪತ್ತು
ಅಜ್ಞಾನಿಗೆ ಬಂದ ಸಿರಿಯೆಲ್ಲ ವಿಪತ್ತು
ಸುಜ್ಞಾನಿ ಮೋಹಿಪುದೆಲ್ಲ ಸಮ್ಮೋಹ
ಅಜ್ಞಾನಿಯ ಮೋಹವೆಲ್ಲ ದುರ್ಮೋಹ ॥ ೨

ತನ್ನ ಬಲವನ ಜೀವನವೇ ಸಂಜೀವನ
ತನ್ನನರಿಯದಿರ್ದಡದು ದುರ್ಜೀವನವು
ತನ್ನ ತಾನರಿದಾಳ್ವ ರಾಜ ಸಾಮ್ರಾಜ್ಯ
ತನ್ನ ತಾನರಿಯದಿರ್ದಡದು ಕಷ್ಟ ರಾಜ್ಯ ॥ ೩

ಆಧ್ಯಾತ್ಮ ಮುಟ್ಟಿ ಹಾಡುವ ಗೀತ ಸಂಗೀತ
ಆಧ್ಯಾತ್ಮ ಮುಟ್ಟಿ ಹಾಡದ ಗೀತ ದುರ್ಗೀತ
ಆಧ್ಯಾತ್ಮ ಮುಟ್ಟಿದ ಬೋಧೆ ಸುಬೋಧೆ
ಆಧ್ಯಾತ್ಮ ಹೊರತಾದ ಬೋಧೆ ದುರ್ಬೋಧೆ ॥ ೪

ಭರತ ಚಕ್ರೇಶ್ವರ ರಾಜ್ಯ ಪಟ್ಟಣದೊಳಿರ್ದು
ವಿರತ ಭಾವನೆಯಿಂದ ಮುಕ್ತಿಗೆ ಸಂದನು
ನರಕಕ್ಕಿಳಿದನು ಸುಭೌಮನು ಚಕ್ರೇಶ್ವರ
ಗುರು ಚಿದಂಬರ ಪುರುಷನ ಬಿಡದಿರಾ ॥ ೫

## ೯೦. ನಾನಾವಸ್ತುವಿಗೊಂದೂರ

ನಾನಾ ವಸ್ತುವಿಗೊಂದೂರ ಹಂಗು ಹಂಸ
ನೀ ನೋಂದನು ಹೊರೆಯ ಪಾಂಗು ॥ ಪಲ್ಲವಿ

ಲೋಕವೆಲ್ಲವೊಂದೊಂದರ ಆಧಾರದೊಳಿಹುದೈಸೆ
ಆಕಾಶಕ್ಕೆ ಯಾವುದರಾಧಾರ ನೋಡ
ವಾಕಾಶಕ್ಕೆ ನೀನತಿ ವಿಸ್ತಾರ ನೀ
ಲೌಕಿಕ ದೃಷ್ಟಾಂತ ಉಪಚಾರ ॥ ೧

ಆರ್ಯರ ಬೀಡಿಗೆ ರಾಜರ ಮನೆ ದೀಪವುಂಟು
ಸೂರ್ಯನ ಚಾವಡಿಗುಂಟೆ ದೀಪ ನೀನು

ಸೂರ್ಯಗೆ ಹೆಚ್ಚಿನ ಕಾಂತರೂಪ ನಿನ್ನ
ಕಾರ್ಯವರ್ಗ್ಗೆ ಗೋಚರ ನಿರ್ಲೇಪ ॥ ೨

ಯತ್ನದೆಣ್ಣೆ ಹಣತೆ ಬತ್ತಿ ಹೊರೆದಾ ದೀಪದಂತಲ್ಲ
ರತ್ನದೊಂದು ದೀಪದಂದದಲಿರುವೆ ನೀನು
ರತ್ನಾಕರ ಸಿದ್ಧನ ಶ್ರೀಗುರುವೆ ದೇವ
ರತ್ನ ಹಂಸೇಶ್ವರ ಸುಜ್ಞಾನದ ತರುವೇ ॥ ೩

## ೯೧. ನೋಡಿರೆಲ್ಲನೋಡಿರೆಲ್ಲ

ನೋಡಿರೆಲ್ಲ ನೋಡಿರೆಲ್ಲ ವರಮತಿ ಹೊರ
ಗಾಡ ಸಲ್ಲ ಶರೀರದ ಮೂರು ಗೂಡು ಹೊಲ್ಲ ಹೊಲ್ಲ ॥ ಪಲ್ಲವಿ

ಏಕಾಂತದೊಳಗೊಮ್ಮೆ ಕುಳಿತೊಮ್ಮೆ ನಿಂದು
ಜೋಕೆಯಿಂ ಕಣ್ಮುಚ್ಚಿ ಮನದೊಳ ಸಂದು
ಈ ಕಾಯ ಬೇರೆ ತನ್ನಾತ್ಮ ಬೇರೆಂದು
ತಾ ಕೂತು ನೋಡಲು ಬೆಳಗಹುದೊಂದು ॥ ೧

ಕೊಡ ತುಂಬಿದೊಂದು ತಂಪಿನ ದೀಪದಂತೆ
ಒಡಲ ಒಡಲಲ್ಲಿವೀಮಾತ್ಮ ತಾ ತೋರ್ಪನಂತೆ
ಕೆಡುವುದು ಕರ್ಮ ಸೇರದು ಬಾಹ್ಯ ಚಿಂತೆ
ಕಡೆಗೆ ಕಣ್ಣುಟ್ಟು ಸೋಲ್ವಳು ಮುಕ್ತಕಾಂತೆ ॥ ೨

ನೆಲ್ಲಕ್ಕಿಯೊಳಗೊಬ್ಬನಹುದಹುದೆನಂ
ಮೆಲ್ಲಮೆಲ್ಲನೆ ಸಾಧ್ಯವಹುದು ಸನ್ಮಾನ
ಎಲ್ಲ ಶಾಸ್ತ್ರದ ತಿರುಳದು ಮುಕ್ತಿಸ್ಥಾನ
ಒಳ್ಳಿತು ಗುರು ಹಂಸನಾಥನ ಧ್ಯಾನ ॥ ೩

## ೯೨. ಕರೆತಂದರಾರೋನಿನ್ನ

ಕರೆತಂದರಾರೋ ನಿನ್ನ ನರಜನ್ಮವೆಂ
ಬರೇಕೆ ಹಲವರಿಂದ ॥ ಪಲ್ಲವಿ

ಮರವಾಗಿ ಕಲ್ಲಾಗಿ ಹುಲ್ಲಾಗಿ ಲತೆಯಾಗಿ
ಎರೆಹುಳು ಉಡ ಓತಿಯಾದಾಗ ನಿನಗೆ
ಗುರುದೈವವೆಂಬರಿಕೆಯಿಲ್ಲವಂದಿನ ಪಾಪಿ
ಹರೆಂದು ದಾರಿಂದಿತ್ತಲಾರ್ತಂದರೋ ॥ ೧

ನರಜನ್ಮವದು ಹಲವು ಬಾರಿ ಪಡೆದೆಯೊ ಮುನ್ನ
ಸುರನಾದೆ ಮರನಾದೆ ನರಕನಾದ್ಯೆ
ತಿರುಗಿ ಮತ್ತಾ ಕಲ್ಲು ಪುಳು ರೂಪಾದೆ
ಕರುಣದಿಂದೆತ್ತಿತ್ತಲೊರ್ತ್ತಂದರೋ ॥ ೧

ಕರ್ಮವ ಕೊಂಡೊಯ್ವುದಲ್ಲಿಗೆ ಮತ್ತೆ
ಕರ್ಮವೆ ತಂದುದಿಲ್ಲಿಗೆ ನಿನ್ನನು
ಕರ್ಮ ಬೇರನು ಬೇರೆಂದು ತಿಳಿಯದೆ ನೀನು
ಕರ್ಮಕ್ಕೊಳಗಾಗಿಹರೆ ಕರ್ಮವೈರಿ ॥ ೨

ತೋರುತಿಹ ತನು ತಾನೆ ಕರ್ಮವ
ದರೊಳಗೆರಡು ಕೂರುಗೊಂಡಿಹುದು ತನು
ಮೂರು ಕರ್ಮಮೂರು ದೇಹದೊಳಡಗಿ ನೀ
ನಿರ್ದೆ ನಿನ್ನ ಕಣ್ಣಾರೆ ನೋಡೈ ಕರ್ಮ ನಾಶವಹುದು ॥ ೪

ಗುರು ದೈವವೆಂದು ಪೂಜಿಸಿ ನರಂಮರನಾದೆ
ಗುರುವ ನಿಂದಿಸಿ ಹುಲ್ಲು ಹುಳುವಾದೆಯ್ಯೆ
ಗುರುದೈವಗಳ ಬಿಟ್ಟು ಹಂಸನಾಥನ ಪಿಡಿಯೆ
ತಿರುಗದ ಕೈವಲ್ಯವಹುದು ॥ ೫

**<u>೯೩. ಜಪತಾನೆಬಲು</u>**

ಜಪತಾನೆ ಬಲು ತಪತಾನೆ ತನ್ನ
ವಪುವಿನೊಳಾತ್ಮನ ನೋಡಿದರೆ ಒಡಗೂಡಿದರೆ
ರತಿಯಾಡಿದರೆ ॥ ಪಲ್ಲವಿ

ಬ್ರಹ್ಮವೆಂದರೆ ತನ್ನತ್ಮಾನ ಹೆಸರು
ಬ್ರಹ್ಮದೊಳಗೆ ಮನ ಬೆರಸಿದರೆ
ಬ್ರಹ್ಮಚಾರಿಯವ ಬ್ರಹ್ಮವ್ರತವದು
ಬ್ರಾಹ್ಮಣನವ ಪರಬ್ರಹ್ಮವದೂ ॥ ೧

ನಿರ್ಮಲನೆಂದಾತ್ಮ ರೂಪ ಧ್ಯಾನಿಸುವಾಗ
ಕರ್ಮರಜಸುವೊಳ ಹೋಗಲಿಲ್ಲ
ಕರ್ಮಾಹಾರವ ಕೊಳದಾಚರಿಸುವ
ನೂರ್ಮಡಿ ಗುಣದುಪವಾಸವದೂ ॥ ೨

ಕವಿದೆಂಟು ಕರ್ಮದ ವಸ್ತ್ರವ ಧ್ಯಾನನು
ಭವದಲ್ಲಿ ಓಲಗಿಸಿ ನೋಡಿದರೆ
ನವಪ್ರಭೆ ಮೈಯಾಗಿ ತೋರುವನಾತ್ಮನ
ಸುವಿವೇಕಿಯ ನಿರ್ಮಾಣವದೂ ॥ ೩

ಜ್ಞಾನವೆ ಮೈ ದರ್ಶನವೆ ಮೈಯದಾತ್ಮ
ಸ್ಥಾನದಲ್ಲಿಯೇ ಮನ ಚರಿಸಿದರೆ
ಜ್ಞಾನವೆಂದರು ತಾನೆ ದರುಶನವೆಂದರು
ತಾನೆ ಚರಿತ್ರವೆಂದರು ತಾನೆ ॥ ೪

ಪರಮ ರಹಸ್ಯವಿದಾಸನ್ನ ಭವ್ಯ ಜೀ
ವರಿಗಲ್ಲದುಳಿದರ್ಗೆಗಮ್ಯವಲ್ಲ
ಗುರು ಹಂಸನಾಥನ ಧ್ಯಾನವೊಂದಲ್ಲದೆ
ಎರಡಿಲ್ಲ ಮುಕ್ತಿಗೆ ನೆರೆನಂಬೋ ॥ ೫

**೯೪. ನೋಡುವಾಗೆನಿನ್ನ**

ನೋಡುವಾಗೆ ನಿನ್ನ ಕೂಡಿಕೊಂಡ
ಮೋಡದಂದದಿ ನೀನು ಸೂರ್ಯದಂದದಿ ನಾನು
ಕೂಡುವುದೇ ತಡದೂ ಕರ್ಪ್ಪ
ಮಾಡಿದ ಪುರುಳು ಮಾಡಾ ಮಯ್ಯೊಳಾಡುವುದಿದುವೇ ಜಾಣಾ ॥ ಪಲ್ಲವಿ

ಕರ್ಮವೇ ತನ್ನ ಬಾಳಿನ ಮೂಲ ನಿರುಪಮ
ಧರ್ಮವೇ ಸಂಸಾರ ಮೂಲ
ದುರ್ಮೋಹವೆಂಬುದು ತನ್ನ ಕತ್ತಿನಡಿನ ನಿರ್ಮೋಹವೆನ್ನ ಕತ್ತು
ಕೂರ್ಮೆ ಕೋಪವೇ ತನಗಾಸೆ ನಿನಗಕ್ಷಮ್ಯ
ನಿರ್ಮಮಕಾರ ವಾಸಿ ಚರ್ಮ ಮಾಂಸದಿ ತ
ನ್ನ ರೂಪು ಸುಜ್ಞಾನ ಜ್ಯೋತಿರ್ಮೂರ್ತಿ ನಿನ್ನ ರೂಪು ॥ ೧

ಆವಾವ ಬಾಧೆಗೆ ತಾನೊಳಗಹುದು ನಾ
ನೋವಿಗೆ ಸಿಕ್ಕುವೆನೆ ಜಾರಿದೆ ಮನ ಬೆಂದ
ಮನೆಯೊಳಗಣ ಗೋಡೆ ಬೇವುದೆ ಬೆಂಕಿಯಿಂದ
ಮೂವಿಧಿಗೊಳಗಾದ ದೇಹದ ಸೋಂಕಿರದ ದಾವುತಿ ಬಟ್ಟೆ ನಾನು
ಗಾವಿಲರೊಡನಾಡಿಗರುವನು ಕೆಟ್ಟನೆಂ
ದಿ ವಾಕ್ಯ ತೋರಿತಲ್ಲ ॥ ೨

ದೇಹ ಬೇರೆ ದೇಹದೊಳಗೆ ನಾನಿದ್ದೆನೆಂ
ದು ಹೇಸಿ ಧ್ಯಾನಿಸದೆ
ಆಹಾ ನಾನಿಷ್ಟು ದಿನವೂ ದುರಿತಗ್ನಿಯ
ದಾಹದಿಂ ಕಡುನೊಂದೆನು
ಹೋಹೋ ಇನ್ನೇಕೆ ನಾನಾ ಚಿಂತೆ ನನಗಿನ್ನು
ಸಾಹಸಿಯಾಗಿ ನಿಂದೆ ಶ್ರೀ ಹಂಸನಾಥನ ನೋಡಿ
ದೇಹವ ನೀಗಿ ಹೋಹೆನು ಕೈವಲ್ಯಕೆ ‖ ೩

**೯೫. ಇಹಪರವೆರಡರಚಿಂತೆ**

ಇಹಪರವೆರಡರ ಚಿಂತನೆಯಿಲ್ಲದೆ
ಬಹುಚಿಂತೆಯ ಮಾಡಿ ಫಲವೇನೋ ‖ ಪಲ್ಲವಿ

ತಾನುಣ್ಣ ಪರರಿಗಿಕ್ಕದೆ ಹೊನ್ನ ಕಾದಿದ್ದ
ಹೀನನ ಸಿರಿಯಿದ್ದು ಫಲವೇನೋ? ಸ್ನಾನಕೆ
ಪಾನಕೆ ಸಲ್ಲದ ಕೊಳ ನೀರು ಕಾನನ ತುಂಬಿದ್ದು ಫಲವೇನೋ?
ಏನೆಂದು ತನ್ನ ಶುದ್ಧಾತ್ಮನನರಿಯದೆ
ನಾನಾ ಶಾಸ್ತ್ರವನೋದಿ ಫಲವೇನೊ?
ಹೀನ ನಿಧಿಯ ಕಾಣದಡವಿಯೆನಗದಾ
ವನೋವನುಂಡ ಫಲವೇನೊ? ‖ ೧

ದಿನ ಬಂಜೆಯಿಲ್ಲದೆ ಧರ್ಮವ ಗಳಿಸದೆ
ಮನುಜ ಜನ್ಮಕೆ ಬಂದು ಫಲವೇನೋ?
ಧನವನೆಲ್ಲವು ಗಳಿಸುವ ಪೇಟೆಗೆಯ್ದು ಸು
ಮ್ಮನೆ ಕುಳಿತಿರ್ದಲ್ಲಿ ಫಲವೇನೋ?
ಮನಮನ ದಂಡಿಸಿ ತನ್ನ ನೋಡದೆ ಮೈಯ
ಯನುದಿನ ದಂಡಿಸಿ ಫಲವೇನೋ? ಘನ ವಿಷವುಳ್ಳ ಸ
ರ್ಪನ ಬಡಿಯದೆ ಹುತ್ತವ ನಿಚ್ಚ ಬಡಿದಲ್ಲಿ ಫಲವೇನೋ? ‖ ೨

ನಾಳೆ ಸಾವುಂಟೆಂದು ಬಲ್ಲರೆಲ್ಲರು ಸಾವ
ಬಾಳನಚ್ಚಿರಲಲ್ಲಿ ಫಲವೇನೋ?
ಬೀಳುವ ಮರದೊಳುಯ್ಯಾಲನಾರೆ
ಹೂಳಿಟ್ಟನದರಲ್ಲಿ ಫಲವೇನೋ
ಕಾಲಕರ್ಮವ ಗೆಲ್ವ ಕಾರ್ಯ ಸಜ್ಜಾಗಿದೆ
ಯಾವ ಕಾರ್ಯವ ಮಾಡಿ ಫಲವೇನೋ?
ಆಲಿ ಮುಗಿದು ಹಂಸನಾಥನ ನೋಡದೆ
ಆಲಸ್ಯದೊಳಗಾಡಿ ಫಲವೇನೋ ‖ ೩

## ೯೭. ಬ್ರಹ್ಮಯೋಗವೇಸುಖ

ಬ್ರಹ್ಮಯೋಗವೇ ಸುಖವೃದ್ಧಿ ಪರ
ಬ್ರಹ್ಮವೊಂದನೆ ಸಾಧಿಸೆಲ್ಲವು ಸಿದ್ಧಿ ॥ ಪಲ್ಲವಿ

ವಾಯುಗಳಿರೈದ ಜಯಿಸು ಮತ್ತೆ
ವಾಯುವೆರಡ ತನು ಬಂಧಿಕೆಗೆಯಿಸು
ವಾಯುವ ಗಗನಕೊಟ್ಟಿಸು ಮಾಯ
ವಾಯವಗಿದು ಉಪಚಯಿಸು ॥ ೧

ಕಮಲಗಳೇಲೊಳಗುಂಟು ಒಂದು
ಕಮಲದೊಳಮೃತವುಂಡದನೊಲಿದಂದು
ಕಮಲವೇಳಕೆ ಒಂದೆದಂಟು ಆರು
ಕಮಲ ಲಿಪಿಯ ನೋಡು ವಿದ್ಯೆ ಕೈಗಂಟು ॥ ೨

ಹಂಸನಂದದಿ ಜಾಣನಾಗು ಶುದ್ಧ
ಹಂಸನ ಪಿಡಿಯುವ ಆಸೆಗೆ ನಾಗ
ಹಂಸನಾಥನ ನೋಡಿ ಮುಕ್ತಿಗೆ ಹೋಗು
ಹಂಸನ ಪಿಡಿ ಮುಕ್ತಿಗೆ ಹೋಗು ॥ ೩

## ೯೮. ತನ್ನಾತ್ಮನತಾನೇ

ತನ್ನಾತ್ಮನ ತಾನೇ ನೋಡಬೇಕು ಮುಕ್ತಿ
ಗಿನ್ನೊಂದ ಪೇಳ್ವರ ಮಾತು ಸಾಕು ॥ ಪಲ್ಲವಿ

ಆನೆ ಕೆಸರಲ್ಲಿ ಬಿದ್ದರೆತ್ತುವರಾರುಂಟು
ತನ್ನ ತಾನೇ ಧೈರ್ಯವಿಡಿದೇಳುವಂತೆ ಆತ್ಮ
ಧ್ಯಾನವ ಮಾಡುವುದೋರಂತೆ ಕರ್ಮ ಹೋಗಿಯಹು
ದೆನ್ನ ಅನ್ಯ ಚಿಂತೆ ॥ ೧

ಸುಜ್ಞಾನ ಸ್ವರೂಪ ನಾನು ಅಜ್ಞಾನರು ಪೊಡಲೆಂದು
ವಿಜ್ಞಾನಿ ತನ್ನ ತಾ ಕಂಡು ಧ್ಯಾನ
ಯಜ್ಞವ ಮಾಡುವೆ ನಿಗಗೊಂಡು ಸುಯೋ
ಗಜ್ಞಗಂಜುವುದು ಕರ್ಮದಾ ಹಿಂಡು ॥ ೨
ಸಂಸಿದ್ಧಿ ಸುಪಾಯದಷ್ಟ ಪೇಳನ್ನೆಸಿ ಗುರು ತನ್ನ
ಸಂಸಾರವ ತಾನೇ ಕೆಡಿಸಬೇಕು ಇದಕೆ
ಸಂಶಯ ಬಿಟ್ಟವನ ಯೋಗ ಕಾಕು ಗುರುವಾರ ಹಂಸನಾಥ ಬರೆದ ತತ್ವದ ಟೀಕು ॥ ೩

**೯೮. ದೇವಕಂಡೆನುನಿಮ್ಮನು**

ದೇವ ಕಂಡೆನು ನಿಮ್ಮನು ನೀನೆ
ಪಾವನ ಪರಂಜ್ಯೋತಿ ಪರಂಧಾಮ ‖ ಪಲ್ಲವಿ

ಅಂಗದೇಶದೊಳಗೆ ಸಮ್ಯಕ್ತ ಪರ್ವತದ ಮೇಲಾಂತ
ರಂಗ ಶುದ್ಧವೆಂಬ ಜಿನವಾಸದಲ್ಲಿ ಸಿಂಹಪೀಠದಲ್ಲಿ
ಸುವಿಲಾಸದಲ್ಲಿ ‖ ೧

ಜ್ಞಾನವೇ ಮೈಯಾಗಿ ಶಕ್ತಿಯಾಭರಣವಾಗಿ ಸುಖ
ತಾನೇ ವಜ್ರವಾಗಿ ಪೊಳೆ ಮೆರೆವೆನ್ನ ಪ್ರಭೆಯು
ಕರೆವನ್ನ ಸೊಬಗು ಮೆರೆವೆನ್ನ ‖ ೨

ನೋಡುವ ಭಕ್ತನು ತಾನೇ ನೋಡಿಸಿಕೊಂಬ ದೇವನು
ಕೂಡೊಂದಾಗಿ ಇದು ಚೋದ್ಯ ಹಂಸನಾಥ ದಿವ್ಯಗುಣ
ಯೂಥಾ ಶುದ್ಧಾ ನವರೂಢಾ ‖ ೩

**೯೯. ಸಾಕುಹೋಗುನಿಲ್ಲು**

ಸಾಕು ಹೋಗು ನಿಲ್ಲು ಮೋಹಾಸುರ
ಸಾಕು ಹೋಗು ನಿಲ್ಲು
ಏಕಿನ್ನು ಮರೆ ನಿನ್ನ ಪರಿಯ ನಾನರಿತೆನು ‖ ಪಲ್ಲವಿ

ಸ್ನೇಹಕೋಪವೆಂಬೆರಡು ನಿನ್ನ ದಾರಿಗಳು ಮೂರು
ದೇಹವೆಂಬುವು ರಾಕ್ಷಸ ನಿನ್ನ ಹೊಳಲಲ್ಲವೇ
ನೀ ಕಾಣಲಿಲ್ಲವೇ ಕರ್ಮಗಳೇಳು ಪರಿವಾರವಲ್ಲವೇ
ಅವು ನನ್ನ ಗೆಲಲಿನ್ನು ಬಲ್ಲವೇ ‖ ೧

ದೇಹವನೆ ನಾನೆಂದೆಂಬ ಬಹಿರಾತ್ಮರ ತಿಂದ
ಸಾಹಸದೆ ಸೊಕ್ಕು ನನ್ನೊಳು ಸಲ್ಲದಾತ್ಮ ವಿಜ್ಞಾನಿ
ನಾನು ಅದರಿಂದೆನಗಿದಿರಲ್ಲ ನೀನು ಸುಮ್ಮ
ನೇ ಹೋಗು ಹಲವು ಮಾತೇನು ‖ ೨

ಇರಬೇಡ ಹೋಗು ಹೋಗದಿರ್ದೆಯಾದರೆ ಶ್ರೀ
ಗುರು ಹಂಸನಾಥನಾಣೆ ನನ್ನಾತ್ಮ ಧ್ಯಾನವೆಂಬ
ಉರಿಗಣ್ಣ ತೆರೆವೆ ನಿನ್ನನು ನಿನ್ನ ಬಲ್ಲವರ
ಸುಡುವೆ ಮುಕ್ತಿಗೆ ಕೂಡೆ ನಾ ದಾಳಿಯಿಡುವೆ ‖ ೩

## ೧೦೦. ಆನಂದಯೋಗಿಆಧ್ಯಾತ್ಮ

**ರಾಗ: ಪರಜು**

ಆನಂದಯೋಗಿ ಆಧ್ಯಾತ್ಮ ಯೋಗಿ
ಜೈನಾಗಮಯೋಗಿ ಜಯ ಸಿದ್ಧಯೋಗಿ ॥ ಪಲ್ಲವಿ

ಪವನ ವಿಜಯ ಯೋಗಿ ಪರಮಾತ್ಮಯೋಗಿ
ಜವನ ದಾಳಿಯ ಗೆಲ್ದ ಜಗದೇಕಯೋಗಿ ॥ ೧

ಧೈರ್ಯಜಾರದ ಯೋಗಿ ದಯವುಳ್ಳಯೋಗಿ
ಸೂರ್ಯ ಪ್ರಕಾಶದ ಸುಜ್ಞಾನಯೋಗಿ ॥ ೨

ಗಗನದೊಳಾಡುವ ಗಂಧರ್ವಯೋಗಿ
ಸುಗುಣಮಣಿಯ ತೊಟ್ಟ ಶೃಂಗಾರಯೋಗಿ ॥ ೩

ಅಕ್ಷರಾಭರಣದ ಅಸಮಾನ ಯೋಗಿ
ಮೋಕ್ಷಕಾಂತೆಗೆ ಸೋತ ಮೋಹಗಾರ ಯೋಗಿ ॥ ೪

ಮೋಹಶೂರನ ಗೆಲ್ದ ಮೊನೆಗಾರಯೋಗಿ
ಶ್ರೀ ಹಂಸನಾಥನ ಸಿದ್ಧಾಂತಯೋಗಿ ॥ ೫

## ೧೦೧. ಸಾಲದೆಶುದ್ಧಾತ್ಮಯೋಗ

ಸಾಲದೆ ಶುದ್ಧಾತ್ಮಯೋಗ
ಲಾಲಿಸಿ ನೋಡುವಾಗ
ಡಾಳಿಸಿಯೇಳ್ವದಸುರಾಗ
ಪಾಲುಂಡು ಮೇಲುಂಬುದಾವ ಭೋಗ ॥ ಪಲ್ಲವಿ

ನೆಲಮಾಳಿಗೆಯೊಳು ಬೆಳಗಿನಾ ದೀಪದಂತೆ
ಹೊಳೆವಾತ್ಮನ ಕಣ್ಣಮುಂದೆ ಧ್ಯಾನದಲ್ಲಿ
ಹೊಳೆದಿಹನದನೋರಂತೆ ಅಲ್ಲಿ ಮನ
ಮುಳುಗಿದಡಾವ ಚಿಂತೆ ॥ ೧

ಧರೆಯ ಮನೆಯೊಳೆಷ್ಟರಗಿಸದೊಂದು ಬಿಡು
ಜರಿವುದು ಕರ್ಮದ ಗೂಡು ಜ್ಞಾನದಲ್ಲಿ
ಹೊಳೆದಿಹದನೆ ನೋಡು
ನಾಳೆ ಮುಕ್ತಿಪುರವೆಲ್ಲ ನಿನ್ನ ನಾಡು ॥ ೨

ಸುಜ್ಞಾನಿಗೆ ಕರ್ಮ ಮೇಲೊಂದು ಮಣ್ಣ ಹಿಂ
ದೆ ಜ್ಞಾನವೇ ವಜ್ರದ ಕೊಂಡೆ ಪರಸಂಗ
ದಾನದೊಂದೆನಂದೆ ಹಂಸ
ನಾಥನ ಧ್ಯಾನವರಿಯುವಂತೆ ॥ ೩

## ೧೦೨. ಬುದ್ಧಿಸದರವೆಯೆಲ್ಲಕೆ

ಬುದ್ಧಿ ಸದರವೆಯೆಲ್ಲಕೆ ಬುದ್ಧಿ ಸದರವೇ
ಬದ್ಧಕರ್ಮವ ಬಯಲು ಮಾಡಿ
ಸಿದ್ಧಪದವಿಗೆ ಧ್ಯಾನಿಸುವ ॥ ಪಲ್ಲವಿ

ಒಡಲೊಡವೆ ಗೊರವಿನಾಂ
ತೊಡಗೆಯೊಂದು ಕಂಡಿರಬೇಕು
ಬಿಡದೆ ಮೂರು ರತ್ನವನು ತ
ನ್ನೊಡವೆಯೆಂದು ಕಂಡಿರಬೇಕು ॥ ೧

ಹೆಣ್ಣ ತೊರೆಯಬೇಕು ಮತ್ತೊಂದು
ಹೆಣ್ಣಿನಾ ಕೂಟಕ ಮೋಹಿಸಬೇಕು
ಕಣ್ಣಿಗೆ ಕಾಣಿಸಿಕೊಳ್ಳದ ತನ್ನಂ
ಬಣ್ಣವ ಭಾವಿಸಿ ಕಾಣಬೇಕು ॥ ೨

ಚಂದ್ರನಂತೆ ಶಾಂತನಾಗಿ
ರುಂದ್ರ ಶೃಂಗಾರಕವಿಯ ಗುರು ಮ
ಹೇಂದ್ರ ಕೀರ್ತಿಯಾಗಿಹಂತೆ
ಇಂದ್ರಿಯ ವಿಜಯಿಯಾಗಬೇಕು ॥ ೩

## ೧೦೩. ಆದಿಜಿನೇಶಜಿನನಾದರೋ

ಆದಿ ಜಿನೇಶ ಜಿನನಾದರೋ ಎಂಥವನು
ಆದಿ ಜಿನೇಶ ಆದಿ ಜಿನೇಶ ಅಘುಕುಲ ನಾಶ ॥ ಪಲ್ಲವಿ

ನಿರ್ಮಲ ರೂಪ
ನಿರ್ಜಿತ ಕೋಪ
ಧರ್ಮ ದೀಪ ಪಾಪ ವಿಲೋಪ ॥ ೧
ನಿರ್ಜಿತ ಮದನ
ಸದ್ಗುಣ ಸದನ
ಸ್ಫೂರ್ಜಿತ ಜ್ಞಾನ ವರ್ಜಿತ ಕದನ ॥ ೨

ಶಕ್ತಿ ನಿಭವದನ
ಮುಕ್ತಿ ನಿವಾಸಾಧೀಶ
ಭಕ್ತಾಬ್ಜ ವಂದಿತ ವ್ಯಕ್ತ ಕಡಲಾಧೀಶ ‖ ೩

## ೧೦೪. ಆರುಕಾಣರುದೇವನಾ

ಆರು ಕಾಣರು ದೇವನಾ ಮೋಕ್ಷಾರ್ಥವೀವನಾ ‖ ಪಲ್ಲವಿ

ತನುವೆಂಬ ಚೈತ್ಯಾಲಯದೊಳಗಿಪ್ಪನಾ
ತನುಸೋಂಕಿಯು ಸೋಂಕದವನಾ
ತನುವಿಲ್ಲದ ಪರಮನಾ ಸುಜ್ಞಾನವೇ
ತನುವಾದನುಪಮನಾ
ಶಾಶ್ವತ ಪೂರ್ಣವಾಗಿಹನಾ ನಿರಂಜನ ಪುರುಷಾಕಾರನಾ ‖ ೧

ಕನಕ ಕಲ್ಲೊಳು ಕಾಷ್ಠದೊಳಗ್ನಿ ಪಾಲೊಳು
ಮಿನುಗುವ ಘೃತವಿರ್ಪಂತೆ
ತನುವಿನೊಳಿರ್ದಾತ್ಮನ ಕಣ್ಮುಚ್ಚಿ ಮೆ
ಲ್ಲನೆ ತೋರುವನಾ
ಪಳುಕಿನ ಬೊಂಬೆಯಂತಿಹನಾ
ಬೆಳಕಿನ ಬಿಂಬವಾಗಿಹನಾ ‖ ೨

ನಾನಾ ನಯನಿಕ್ಷೇಪ ಪ್ರಮಾಣ ವಿಧಾನದಿಂದಗಲ್ದವನಾ
ಆನಂದ ರೂಪ ಚಿದಂಬರ ಪುರುಷನ
ಸ್ವಾನುಭಾವಕೆ ಗಮ್ಯನಾ ಭವ್ಯಮಾನಸ ಶ್ರೀ ಹಂ
ಸನಾಥನನ ಸ್ತುತಿಸೈ ‖ ೩

## ೧೦೫. ಇಷ್ಟಕಾಣಿರೋಮುಕ್ತಿಗೆ

ಇಷ್ಟ ಕಾಣಿರೋ ಮುಕ್ತಿಗೆ ಇಷ್ಟ ಕಾಣಿರೋ
ದೃಷ್ಟಿಗಳೆರಡು ಮುಚ್ಚಿ ತನ್ನಾತ್ಮನ ತಾ ಕಾಂಬುದು
ಇಷ್ಟ ಕಾಣಿರೋ ಮುಕ್ತಿಗಿಷ್ಟ ಕಾಣಿರೋ ‖ ಪಲ್ಲವಿ

ಸಿದ್ಧಾಂತ ವೇದಾಗಮದ
ಸುದ್ದಿಯೆಲ್ಲ ಪರಚಿಂತೆ
ಸಿದ್ಧರಂತೆ ತನ್ನತಾನೆ
ಬದ್ಧಿಸಿ ಕಾಬುದೊ ಹೆಚ್ಚು ‖ ೧

ಮೈಯ ದಂಡಿಸಿದೊಡಿಲ್ಲಾ
ಕೈಯಾಸೆಯ ಬಿಟ್ಟೊಡಿಲ್ಲಾ
ಮೈಯೊಳಿರ್ದಾತ್ಮನ ತಾ
ವೊಯ್ಯನೆ ಕಾಬುದೆ ಹೆಚ್ಚು ॥ ೧

ತನ್ನ ಧ್ಯಾನವೊಂದೆ ಮುಖ್ಯ
ಇನ್ನಿದಿವೆಲ್ಲವುಪಚಾರ
ರನ್ನ ಮೂರು ತಾನೆ ಸುಪ್ರ
ಸನ್ನ ಹಂಸನಾಥನಾಣೆ ॥ ೨

## ೧೦೬. ಎಂದಿಗಹುದೋ

ಎಂದಿಗಹುದೋ ಎನಗೆಂದಿಗಹುದೋ
ಸಂದ ಸಂಸಾರದ ನೋವ ನಂದಿಸಿ ನಲಿವ ಸುಖ ॥ ಪಲ್ಲವಿ

ಹಸಿಯ ಚರ್ಮದ ಪೈರಣೆಯೆ
ಬಿಸುಟು ಎನ್ನ ದಿವ್ಯಕಾಂತಿ
ಎಸೆವ ಚಿನ್ಮಯ ರೂಪನ
ಪಸರಿಸುವ ಪರಿಣಾಮ ॥ ೧

ಕಾಡುವ ದುಃಖ ಕರ್ಮಂಗಳ
ನೀಡಾಡಿ ಸುಜ್ಞಾನದಲ್ಲಿ
ಕೂಡೆ ಮುಕ್ತಿ ಸುಖದೊಳೋ
ಲಾಡುವ ಮೋಹವಿಲಾಸ ॥ ೨

ಕ್ರೋಧಾದಿ ಕಷಾಯಂಗಳ
ಬೂದಿ ಮಾಡಿ ಮುಂದೆ ಸಮು
ದ್ರಾಧಿ ಪರಮೇಶ ಶ್ರೀ
ಪಾದವನೆ ಕಾಣ್ಬ ಭಾಗ್ಯ ॥ ೩

## ೧೦೭. ಎಚ್ಚರಿಕೆಜತನಎರವಿನ

ಎಚ್ಚರಿಕೆ ಜತನ ಎರವಿನ ತನುವ ನೀ
ನೆಚ್ಚಿ ಬರಿದೇಕೆ ಕೆಡುವೆ ಜಗದ
ಹುಚ್ಚರಿಗೆ ಪರಮ ಗುರುವೆ ಜವನ
ರೆಚ್ಚಿಗೊಳಗಹುದು ತರವೆ ಮನುಜಯೆಚ್ಚರಿಕೆ ಜತನಾ ॥ ಪಲ್ಲವಿ

ಗಳಿಗೆಗಳಿಗೆಗೆ ವಿಕಾರವನೈದಿ ನಿಮಿಷ
ದೊಳಗಳಿಪುತಿದೆ ನಿತ್ಯವೆಂದು
ತಿಳಿದು ನಿಶ್ಚಿಂತನಾಗದೆ ಬಹಳ ಭ
ಗಳೊಳು ಸುಳಿಸುಳಿದು ನೀನೋವರೆ
ಬಲು ವಿಷದಳದ ಕಿಚ್ಚಲಿ ಬೇವರೆ
ವೊಳವೊಳಗೆ ಸುಮ್ಮನೆ ಸಾವರೆ
ಮನುಜ ಎಚ್ಚರಿಕೆ ‖ ೧

ಹೇಸಿಕೆಯ ಸುತ್ತ ಅಪವಿತ್ರದಾ
ವಾಸನೆಯ ದುರ್ಗಂಧವೆಂದೂ
ಮಾಸು ಮೈ ಮುಸುಕು
ಕಿಸುಕುಳದ ಹಂಗಿನ ದೇಹ
ದಾಸೆಯಿಂದೇನು ಸಿದ್ಧಿ ಜವನ
ಮಿಸಲಾಗದಿರು ಮುಂದೆ
ಮೋಸಹೋಗದಿರು ನೀ ಬುದ್ಧಿಯೆಚ್ಚರಿಕೆ ‖ ೨

ನುಂಗಿ ನೀರ್ಗುಡಿದು ನಿಶ್ಚಿಂತನಾಗದೆ ಭವಭ
ವಂಗಲೊಳು ನೀ ಕೆಡದಿರು ಕಾಯ
ಜಂಗೆ ಸಲುಗೆಯ ಕೊಡದಿರೋ ಜಿನರ
ಸಂಗನೊಂದನು ಬಿಡದಿರೂ ‖ ೩

## ೧೦೮. ಎಚ್ಚರೆಚ್ಚರವಿರಲಿ

ಎಚ್ಚರೆಚ್ಚರವಿರಲಿ ಅನುದಿನದಲ್ಲಿ ಎಚ್ಚರೆಚ್ಚರವಿರಲಿ ‖ ಪಲ್ಲವಿ

ಬಲ್ಲಿದ ತಾನೆಂದು ಬಡವನ ಬಾಯ್ಗಳ ಬಡಿಯದಿರೆಚ್ಚರಿಕೆ
ಎಳ್ಳಷ್ಟು ತಪ್ಪಿ ನೀ ನಡೆದರೆ ನರಕವ ಪೋಗುವೆ ಎಚ್ಚರಿಕೆ ಹೇ ಮನುಜಾ ‖ ೧

ಮಾಡು ದಾನವ ಧರ್ಮ ಪರ ಉಪಕಾರವ ಮರೆಯದಿರೆಚ್ಚರಿಕೆ
ಕೇಡು ಬಯಸದಿರು ನಂಬಿದೆಡೆಗೆ ಬೇಗ ಕೆಡುವೆ ನೀ ಎಚ್ಚರಿಕೆ ಹೇ ಮನುಜಾ ‖ ೨

ನಾಡಿನ ಜನರನ್ನು ನೋಡಿ ನಡೆಯೋ ಮುಂದೆ ನಟನೆ ಬೇಡೆಚ್ಚರಿಕೆ
ಬೇಡಿ ಪಡೆಯವನ್ಯ ವಸ್ತುವ ವಂಚನೆ ಮಾಡದಿರೆಚ್ಚರಿಕೆ ಹೇ ಮನುಜಾ ‖ ೩

ಹೆಣ್ಣು ಹೊನ್ನು ಮಣ್ಣು ನಿನ್ನ ವಂಚಿಸಿಬಿಟ್ಟು ಪೋಗುವುದೆಚ್ಚರಿಕೆ
ಮುನ್ನ ಮಾಡಿದ ಪುಣ್ಯದಿಂದೀಗ ಬಂದಿಹುದು ಮುಂದಕ್ಕೆ ಎಚ್ಚರಿಕೆ ಹೇ ಮನುಜಾ
ಚೆನ್ನಾಗಿ ಗಳಿಸಿಯು ಬದುಕುವೆ ನಾನೆಂಬ ಚೇಷ್ಟೆ ಬೇಡೆಚ್ಚರಿಕೆ ‖ ೪

## ೧೦೯. ಎಲ್ಲೆಲ್ಲಿಯುನಿಲಬಹುದು

ಎಲ್ಲೆಲ್ಲಿಯು ನಿಲಬಹುದು ತನ್ನಾತ್ಮನಲ್ಲಿ ತಾ ನಿಲಲರಿದೂ ॥ ಪಲ್ಲವಿ

ನೆಲದ ಮೇಲಿರಬಹುದೂ ಅಂಬರದೊಳಗಾಗಿರಬಹುದೂ
ಹಲಬರೊಳಿರಬಹುದೂ ತನ್ನಾತ್ಮನ ನೆಲೆಯ ಕಂಡಿರಲರಿದೂ ॥ ೧

ಹರಿಣಗೆ ಭೂಗಮನಾ ಹಂಸೆಗೆ ಹರುಷ ಅಂಬರ ಗಮನಾ
ಪರದೃಷ್ಟಿ ಭವಿಗಳಿಗೆ ಆತ್ಮಲಾಭದ ದಷ್ಟಿ ಭವ್ಯರಿಗೆ ॥ ೨

ಭೇದವಿಜ್ಞಾನವಿದೂ ಮುಕ್ತಿಗೆ ಹೋಗಿ ಸಂಶಯ ಬೇಡ
ವಾದವಲ್ಲಾತ್ಮಹಿತ ಇದು ಸಮುದ್ರಾಧೀಶನ ಮತಾ ॥ ೩

## ೧೧೦. ಏಕಯ್ಯಹೀಗೆನ್ನನೋವ

ಏಕಯ್ಯ ಹೀಗೆನ್ನ ನೋವ ನೀ ನೋಡುವೆ
ಸಾಕೆನ್ನಲಾಗದೇ ಅಪರಾಜಿತೇಶ್ವರಾ ॥ ಪಲ್ಲವಿ

ಹಗಲಿರುಳೆನ್ನದೆ ಹಲವ ಹಂಬಲಿಸಿ ದಂ
ದುಗದಲ್ಲಿ ದಾವತಿಗೊಂಬವನಾ x x x x
x x x x x x x ಗುಡವ
ತೆಗೆದರೆ ನಿಮಗೆ ಕೊರತೆಯೇ ಸ್ವಾಮಿ ॥ ೧

ಕಂಡುದ ಕಣ್ಣಿಟ್ಟು ಬಾರದಿರ್ದುದ ಬಯಸಿ
ಬೆಂಡಾಗಿ ಬೆದೆಬೆದೆಗೊಂಬುವನ
ಕಂಡು ಕರುಣದಿಂದ ಕಾಮಿತವಿತ್ತ ಸ್ವಾಮಿ ॥ ೨

ಅಂಗಜ ತಾಪದಿಂದಳಲುತ್ತ ಬಳಲುತ್ತ ನಿಮ್ಮ ಪಾ
ದಂಗಳನು ಒಮ್ಮೆ ನೆನೆವನಾ
ಶೃಂಗಾರ ಕವಿಹಂಸರಾಜ ಬಾರೆಂದೊಡೆ ನಿಮ್ಮ
ಭಂಗಾರವೇನು ಬರಿದಪ್ಪುದೆ ಸ್ವಾಮಿ ॥ ೩

## ೧೧೧. ಏಥರವನಾನಿಂತು

ಏಥರವ ನಾನಿಂತು ಉಸುರಲಿ ಜಗ
ನ್ನಾಥ ಮಾಡಿದ ನಮ್ಮ ನರರೂಪಾ ॥ ಪಲ್ಲವಿ

ಇಂದ್ರಿಯ ಸೂತತ ದುರ್ಗಂಧ ಮಲಮೂತ್ರ
ನಿಂದನಿಂದ ಠಾವಿನಲಿ ನಿಜವ ನಾನರಿಯೆ
ಒಂದೆ ಬಚ್ಚಲ ಕುಳಿಯೊಳು ತಿಂದೆ ಮೊಲೆಮಾಂಸವ ಇಂತಾ
ಅಂಧಕ ಹೊಲೆಯರಿಗೆ ತಮಗೆಲ್ಲಿಯ ಕುಲವೋ ॥ ೧

ಒಂಭತ್ತು ವೆಜ್ಜದೊಳು ನಾರುವ ಹೊಲಸಿನೊಳು
ತುಂಬಿ ತುಂಬಿ ನೋಡು ತುಳುಕುತಿದೆ
ಇಂಬಿಲ್ಲ ಇದರ ಪುಳಕದಂದವ ನೋಡು ತಾ ಇಂಥಾ
ಡಂಬಕ ಹೊಲೆಯರಿಗೆ ತಮಗೆಲ್ಲಿಯ ಕುಲವೊ ॥ ೨

ಕರುಳ ಖಂx x x ನರರೊಹಿತ ಪಂಜರ
ಹುರುಳಿಲ್ಲವೋ ಎನ್ನ ಕುಲವ ಕೇಳಾ
ಎಲುಚರ್ಮ ಮಾಂಸದ ಪೊಡ್ಡು ತಿರುಗುವ ಮನುಜರ ಇಂಥಾ
ಕುಲಗೆಟ್ಟ ಹೊಲೆಯರಿಗೆ ತಮಗೆಲ್ಲಿಯ ಕುಲವೋ ॥ ೩

ಮೆಟ್ಟಿ ಮುಟ್ಟುವ ಬಾರವಾಗಿx x x xಡ್ಡಿಯೊಳು
ಕಟ್ಟಿ ಕಾಪಾಲ ಬೊಕ್ಕಣದ
ಇಷ್ಟರೊಳಗೆ ಇದ್ದು ಇರುವ ತಾವರಿಯರಾ ಇಂಥಾ
ಭೃಷ್ಠ ಹೊಲೆಯರಿಗೆ ತಮಗೆಲ್ಲಿಯ ಕುಲವೊ ॥ ೪

ಹಚ್ಚಡವ ಹೊದ್ದ ಮೇಲೆ ಲಕ್ಷಣವಿಟ್ಟಂತಾಯಿತು
ಹೆಚ್ಚು ಕಡಿಮೆಯೆಂದು ಹೆಣಗುತಿದೆ
ನಿಶ್ಚಿಂತನಾಗಿ ನಿರ್ಮಲ ನಿರಂಜನ ಸಿದ್ಧನಿಗಲ್ಲದೆ
ಹುಚ್ಚು ಹೊಲೆಯರಿಗೆ ತಮಗೆಲ್ಲಿಯ ಕುಲವೋ ॥ ೫

**೧೧೨. ಏದೂರವಲ್ಲಮುಕ್ತಿಸಾರಾತ್ಮ**

ಏದೂರವಲ್ಲ ಮುಕ್ತಿಸಾರಾತ್ಮ ಜ್ಞಾನಿಗೆ ॥ ಪಲ್ಲವಿ

ಆವ ಲೋಹವು ಕೂಡಿದರೆ ಚೆನ್ನ ಕೀಳಾಗುವದು
ತವೆ ಪುಟವಿಟ್ಟಾಗ ಅಪರಂಜಿಯಹುದು
ಭವದ ಬಾಳಿಕೆಯಂತಿಹುದೂ ಕೆಟ್ಟರೆ ಶಿವವಹುದೂ ॥ ೧

ತನುಕೋವೆ ತಪಸುಳಿಗಳ ಹೋಲಿಕೆ
ಇನಿತು ಧ್ಯಾನಾಗ್ನಿ ಮೂರು ನನ್ನ ಮೂಲಿಕೆ
ಕುನಯ ಕಮ್ಮದ ಕಾಳಿಕೆ ಕೆಟ್ಟರೆ ಭವದ ಬಾಳಿಕೆ ॥ ೨

ಬೇಸರದೆ ನಿಚ್ಚ ಧ್ಯಾನಿಸುವದು ಯುಕ್ತಿ
ಲೇಸೆಂದು ಚಿದಂಬರ ಪುರುಷನ ಭಕ್ತಿ
ಭಾಸುರದ ಮುಕ್ತಿ ಜಿನ ಶಾಸನದ ಸೂಕ್ತಿ ‖ ೩

## ೧೧೩. ಏನಯ್ಯಗುರುವೆನಿಮಗಿಷ್ಟು

ಏನಯ್ಯ ಗುರುವೆ ನಿಮಗಿಷ್ಟು ಪರಾಕೂ
ನಾನಿನ್ನು ಬಹಳ ಬೇಡಿ ಕರಕರಿಸಿದೆನೆ ‖ ಪಲ್ಲವಿ

ನಿನ್ನಲಿ ನಾನೈಕ್ಯವಾಗಬೇಕೆಂದೆನಲ್ಲದೆ ಬೇರೆ
ಹೊನ್ನು ಹೆಣ್ಣು ಮಣ್ಣು ನಿಲಿಸಿಕೊಡೆಂದೆನ್ನೈಸೆ
ಪನ್ನಗ ನರಾಸುರರ ಪದವ ಬೇಡಿದೆನೆ ‖ ೧

ಮೂರಂಗವೈದಂಗ ಹಲವಂಗವಾದ ಮೈಯ ಸೋ
ಲಾರೆನೆಂದೆನ್ನೈಸೆ ದೇಹ ಬೇಕೆಂದೆಂದೆನೆ
ಮೂರು ರನ್ನವಾದಾತ್ಮ ಸುಖವು ಬೇಕೆಂದೆನ್ನೈಸೆ
ಬೇರೊಂದು ಸುಖವ ಬೇಡಿ ಬೇಸರ ಮಾಡಿದೆನೆ ‖ ೨

ನೀನೆ ನಾನು ನಾನೇ ನೀನು ನೀನೆಂದರು ನಾನೆಂದರು
ತಾನೊಂದು ಮಾತು ಎನಿಸೆ ಸಾಕೈಸೆ ಬೇರೆ
ಏನು ಬೇಡ ಗುರುವೆ ಚಿದಂಬರ ಪುರುಷ ನನ್ನ
ಧ್ಯಾನದೊಳಗಿರು ಕೈಮುಗಿದು ಬೇಡಿಕೊಂಬೆನು ‖ ೩

## ೧೧೪. ಏನಿಂತುಮದದಿಮೈಮರದೆ

ಏನಿಂತು ಮದದಿ ಮೈಮರದೆ ನಿಜಾತ್ಮ
ನೀನಾರು ಸಂಸಾರವಾರು ನಿಜಾತ್ಮ ‖ ಪಲ್ಲವಿ

ಗಳದಾರವಂದು ಕಿಕ್ಕಿರಿಪೂರ್ಣನೆಂಬಾ
ಕಲೆ ನಾಲ್ಕರಲ್ಲಿ ಮೂಜಗವನೊಳಕೊಂಬ
ಬಲಿಮೆಯುಳ್ಳವನಿಬವುಡದೇಹವೆಂಬ
ನೆಲೆಗೊಂಡು ನಲಿವರೆ ವಿಶ್ವಕದಂಬ ‖ ೧

ಜಗದೊಳಗು ಹೊರಗನೆಲ್ಲವನು ಕಾಲ
ಜಗುಳವರಿವುದು ಕಾಬುದು ನಿನ್ನ ಶೀಲಾ

ಜಗವನೆತ್ತುವ ಶಕ್ತಿ ಸುಖವು ವಿಶಾಲಾ
ಬಗೆಯದೆ ಬಡವಂತಿಹರೆ ನಿರಾಳಾ ‖ ೨

ಶಕ್ತಿಯೊಳಗೆ ಸರ್ವಗುಣದೊಳುತ್ಕರುಷಣ
ವ್ಯಕ್ತಿಗುಪಾಯಮುಂಟಾನಂದ ವರುಷಾ
ವ್ಯಕ್ತಿದಿ ನಿನ್ನ ನೋಡು ಜಿತರೋಷ ಹರುಷಾ
ಮುಕ್ತಿಗೇಳೇಳು ಚಿದಂಬರ ಪುರುಷಾ ‖ ೩

## ೧೧೫. ಏನುಸವಿಮತ್ತಿನ್ನೇನು

ಏನು ಸವಿ ಮತ್ತಿನ್ನೇನು ಸವಿ
ತಾನೆ ತನ್ನಾತ್ಮನ ಕಂಡು ಮೇಲವಗಿ
ನ್ನೇನು ಸವಿ ಮತ್ತಿನ್ನೇನು ಸವಿ ‖ ಪಲ್ಲವಿ

ಪಂಚೇಂದ್ರಿಯ ಸುಖ ಪರವಶವದರಿಂದ
ಕಿಂಚಿತ ಪ್ರೀತಿಯು ತನಗಾಗದು
ಸಂಚಲಚಿತ್ತವ ಕಳೆದಾತ್ಮನೊಳು ಪ
ಳಂಚದಿರ್ದವಗಾತ್ಮ ಸುಖವೆ ಸವಿ ‖ ೧

ಸುರಲೋಕ ನರಲೋಕದ ದುಃಖ
ತಿರುಗಿ ಹಲವುಬಾರಿ ಕಂಡುಂಡದು
ಸರಿ ತನಗದರಿಂದ ಸುಖವೆಲ್ಲವು ತ
ನ್ನಿರವ ಕಂಡವಗಾತ್ಮ ಸುಖವೆ ಸವಿ ‖ ೨

## ೧೧೬. ಏನುಹೋಗದುಹೊತ್ತು

ಏನು ಹೋಗದು ಹೊತ್ತು ನಿಮಗೆ ನಮಗೆ
ಹೋ ನಿಲ್ಲಿ ಮುಟ್ಟದಿರಿ ಕರ್ಮಿಗಳಿರಾ ‖ ಪಲ್ಲವಿ

ನೀವಾರು ನಾವಾರು ನಿಮ್ಮ ಗುಣವಂದನೂ
ನಾವು ಸೆಳಕೊಳ್ಳಲಿಲ್ಲಾ ನಮ್ಮ ಗುಣವಾ
ನೀವು ಸೆಳಕೊಳ್ಳಲರಿದೂ ಬರಿದೆ ಸೂರ್ಯಗೆ ಕವಿದು
ಹಾವು ಕಡಿವಂತೆ ಕಾಣಿರೊ ‖ ೧

ರಸರೂಪುಗಂಧ ಮೊದಲಾದವೆಮ್ಮವಲ್ಲಾ
ಸುಸೂತಸುಜ್ಞಾನ ಮೊದಲಾದ ಗುಣ ನಮ್ಮವಿದೂ
ಸುಸುತ ಮೊದಲಾದ ಗುಣ ನಿಮ್ಮವಲ್ಲಾ ‖ ೨

ಅಂಬರಕ್ಕೆ ಸರಿ ನಾವು ಭೂಮಿಗೆಣೆ ನೀವು ನೋ
ಡಂಬರಕ್ಕೆ ಭೂಮಿಗೊಡ ಗೂಟವುಂಟೆ
ಡೊಂಬಿ ಬೇಡಯಿತ್ತ ಬರದಿರಿ ನಿಲ್ಲಿ ಹೋಗಿ ಚಿ
ದಂಬರ ಪುರುಷನಾಣೆ ಕೆಡುವಿರಿನ್ನು ‖ ೩

## ೧೧೭. ಏನೆನ್ನಬಹುದುನಿಜಾತ್ಮನ

ಏನೆನ್ನಬಹುದು ನಿಜಾತ್ಮನ ಮಹಿಮೆಯ ಚಂದಮಾಮಾ । ಪರ
ಮಾನಂದ ಯೋಗಿಯ ನಡೆ ಚಂದ ನುಡಿ ಚಂದ ಚಂದಮಾಮ ‖ ಪಲ್ಲವಿ

ಕಣ್ಣ ಮುಚ್ಚೆಯು ಸೂಕ್ಷ್ಮಾರ್ಥವ ಕಾಣುತಿಹನಾರು ಚಂದಮಾಮ । ಐದು
ಬಣ್ಣವಳಿದು ಹೊಸ ಬಣ್ಣವಾಗಿಹನಾರು ಚಂದಮಾಮ । ದೇಹ
ಮಣ್ಣೊಳಡಗಿಯು ಮಾಸದಿಹನಾರು ಚಂದಮಾಮ
ಉಣ್ಣದೆ ಉಂಡು ತೃಪ್ತನಾಗಿಹನಾರು ಚಂದಮಾಮ ‖ ೧

ಗಾಳಿಯಿಂದಾನೆಯ ಕಟ್ಟಿ ಪಿಡವನಾರು ಚಂದಮಾಮ । ಹತ್ತು
ಗಾಳಿಯ ಧೂಳಿಯ ಗ್ರಹಿಸಿಕೊಂಡಿಹನಾರು ಚಂದಮಾಮ
ಗಾಳಿಯನೇರಿಸಿ ಬೆಳಗು ಕಾಣುತಿಹನಾರು ಚಂದಮಾಮ । ಇದು
ಕೇಳುವರಿಗೆ ಚಿತ್ರ ಮುನಿಗಣುಮಾತ್ರ ಚಂದಮಾಮ ‖ ೨

ಅಕ್ಷರದಿಂದ ಸಿಂಗರಿಸಿಕೊಂಡಿಹನಾರು ಚಂದಮಾಮ
ಪಕ್ಷವಿಲ್ಲದೆ ಅಂಬರದೊಳಾಡುತಿಹನಾರು ಚಂದಮಾಮ
ಮೋಕ್ಷ ಸಂಜರೆಯ ನಿರ್ಜರೆವಡೆದಿಹನಾರು ಚಂದಮಾಮ । ಯೋಗ
ಲಕ್ಷಣವಿದು ಚಿದಂಬರ ಪುರುಷನೆ ಬಲ್ಲ ಚಂದಮಾಮ ‖ ೩

## ೧೧೮. ಏನಮ್ಮಹೆಸರೇನೆಂದ್ಕೆಯ

ಏನಮ್ಮ ಹೆಸರೇನೆಂದ್ಕೆಯ ದೇವಾ
ಧ್ಯಾನದಲಿ ಕಂಡೆ ನೀನಾರು ಸ್ವಾಮಿ ‖ ಪಲ್ಲವಿ

ಕರಿದು ಕೆಂಪು ಹಳದಿ ಪಚ್ಚೆ ಬಿಳುಪು ವರ್ಣಗಳೆಂದು
ಕರೆವೆನೆ ಆ ವರ್ಣವೊಂದು ನಿಮ್ಮಲ್ಲಿ ಕಾಣೆ ಸ್ವಾಮಿ
ಹರಿಹ x x x x x x x x x x x x x
ಸಿರ ನಾಲ್ಕು ನಾಲ್ಕು ಭುಜಗಳೈದು ಮೊಗ ನಾಲ್ಕು ನಿಮಗಿಲ್ಲ ಸ್ವಾಮಿ ‖ ೧

ರಾಗವಂತ ಮೋಹಿ ಕೋಪಿಯೆಂದು ಕರೆವೆ ನಿಮ್ಮ
ಆ ಗುಣವಂತನು ನಿಮ್ಮಲ್ಲಿ ಕಾಣೆ ಸ್ವಾಮಿ

ನಾಗ ನರ ಸುರರೂ x x x x x x x
ರೋಗ ಮರಣಾದಿ ಚಿಹ್ನ ನಿಮಗಿಲ್ಲ ಸ್ವಾಮಿ ॥ ೨

ಅಂಬರದಂತೆ ಚಿನ್ಮಯ ಪುರುಷಾಕಾರ
ಯೆಂಬ ಮೂರು ತಲೆಯ ನಿಮ್ಮಲ್ಲಿ ಕಂಡು ಸ್ವಾಮಿ
ನಂಬಿದೆ ನೀ ಹೇಳಿದೊಡೆ x x x x x x x ಚಿ
ದಂಬರ ಪುರುಷನೆಂದು ಬಲ್ಲೆನಯ್ಯ ಸ್ವಾಮಿ ॥ ೩

**೧೧೯. ಕಂಡುಕಾಣಲಿಲ್ಲಅಕಟ**

ಕಂಡು ಕಾಣಲಿಲ್ಲ ಅಕಟ ತಾನದ
ನುಂಡು ದಣಿಯಲಿಲ್ಲ ॥ ಪಲ್ಲವಿ

ನಾಡು ಬೀಡು ಪರ್ವತ ಪಟ್ಟಣಂಗಳ ನೋಡು
ನೋಡಿ ಹೊತ್ತುಗಳದೆಯಲ್ಲಾ
ಕೇಡಿನೊಳಗಣ ತನುವಿನೊಳಿಹ ನಿನ್ನ
ಗಡಿಯೆಂತುಟೆಂದು ಬಲ್ಲೆಯಾ ॥ ೧

ಪುಷ್ಟಿಯಾಗುವೆನೆಂದಾಸೆಯಿಂದುಂಡುಂಡು
ನಷ್ಟವನಿತಂ ಇಷ್ಟೆಡೆಯಲ್ಲದೆ
ಸಾಕೆಂದು ಹವಣಿಸಿಕೊಂಡು ವಿ
ಶಿಷ್ಠ ವ್ರತಗಳ ನೀನಾಂತೆಯಾ ॥ ೨

ಹೋದ ಹೋದ ಹರಟೆಗಳನಾಡುವೆಯಲ್ಲದೆ
ಮಾದೇವನ ದಿವ್ಯ ಸುಚರಿತ್ರಂಗಳಾ
ಓದಿಯು ಶೃಂಗಾರ ಕವಿಯ ಪಾಲಿಪ ಸಮು
ದ್ರಾಧೀಶನ ಕಾಣದಾದೆಯಲ್ಲಾ ॥ ೩

**೧೨೦. ಕರುಣದೋರೋಕಡಲಾದಿ**

ಕರುಣದೋರೋ ಕಡಲಾದಿ ಶಿವನೆ ನಿಜ
ಶರಣ ರಕ್ಷಕ ಮೂಲೋಕ ಬಾಂಧವನೆ ॥ ಪಲ್ಲವಿ

ಹೆಂಗಳ ಮೋಹಕೆ ಮರುಳಾಗಿ ಕಡೆ
ಗಂಗಳ ನೋಟಕೆ ಮಾರುವೋಗಿ ನಸು
ಹಿಂಗಿರಲಾರದಂತಿಂತಾಗಿ ನೊಂದೆ
ನಂಗಜ ಬಾನವೆನ್ನ ತಾಗಿ ॥

ಕಂಡರೆ ಕೂಡುವೆನೆಂಬಾ ಚಿಂತೆ ಸವಿ
ಗಂಡರೊಲಿಸುವೆನೆಂಬಾ ಭ್ರಾಂತೆ ಸರಿ
ಮಿಂಡಿ ಸೋತರೂವಿದಕಾವ ಚಿಂತೆ ನಿನ್ನ
ಕಂಡುದಿಲ್ಲ ಸುಜ್ಞಾನಿಗಳಂತೆ ॥ ೨

ಸಾಯದ ಸವಿದು ಮಾಯದ ವೇಷ ಹೀಗೆ
ಕಾಯದ ಹಿಸುತಲಿದೇಕೊ ಮೋಹಪಾಕಾಯೇನು
ದಾಯವಿದಕಿನ್ನು ಜಗದೀಶಾ ಎನ್ನ
ಕಾಯ ಸಮುದ್ರಾಧಿ ಪರಮೇಶ ॥ ೩

<u>**೧೨೧. ಕಾಯವದಂಡಿಸಬೇಕಾದರೂ**</u>

ಕಾಯವ ದಂಡಿಸಬೇಕಾದರೂ
ಪಾಯ ಬೇಕು ತಪಸೀ ॥ ಪಲ್ಲವಿ

ದೇಹ ಬಡವಾಗಬೇಕು ಶಕ್ತಿಗೆಡಬಾರದೊಮ್ಮೆ x x x
ತಾ ಹೆಚ್ಚಲಿ ಜಡ ಭಾರವಿರಬಾರದು
ವಾಹಕರು ದಂಡಿನ ಕುದುರೆಯ ಸಲಹುವಂತೆ
ಸಾಹಸಗುಂದದೆ ತಪಸು ಮಾಡಬೇಕು ॥ ೧

ನೋಡಿದರಿಗುಗ್ರ ತಪವಾಗಿ ಕಾಣಿಸಬೇಕು ತಾ
ಮಾಡುವ ತಪಸು ಲೀಲೆಯಾಗಬೇಕು ತನಗೆ
ನೋಡಿದರಂಜಿದರು ಹಾವಾಡಿಗನಂಜದೆ ಹಾವ
ನಾಡಿಸಿದಂದದೊಳು ತಪಸು ಮಾಡಬೇಕು ॥ ೨

ಶಕ್ತಿಗೆ ತಕ್ಕಷ್ಟು ವಿರಕ್ತಿಗೂಡಿ ತಪಸು ಮಾಡಬೇಕು ಕ್ರಮದಿ
ವ್ಯಕ್ತನಾಗಿ ನೋಡುತಿರಬೇಕು ಪರಂಜ್ಯೋತಿಯನು
ಮುಕ್ತಿ ಮಾರ್ಗವಿದು ಶ್ರೀ ಮಂದರಸ್ವಾಮಿಯಾಣೆ ॥ ೩

<u>**೧೨೨. ಕಾವುದೆನ್ನಶ್ರೀಹಂಸ**</u>

ಕಾವುದೆನ್ನ ಶ್ರೀ ಹಂಸನಾಥ ॥ ಪಲ್ಲವಿ

ಅಕ್ಷರಭರಣ ನಿರಕ್ಷರ ಭೋದಪ ಪಕ್ಷಯ ಪಾವನಗಂಗಾ
ಲಕ್ಷ ಕೋಟಿಕೋಟಿ ಸೂರ್ಯ ಪ್ರಕಾಶ ಕಟಾಕ್ಷಿತ ತೇಜೋ ರಂಗಾ
ಮೋಕ್ಷ ಕಾರಣ ರೂಪ ಮೋಕ್ಷ ಸನ್ಮುನಿಗಳ ಸುಕ್ಷೇಮ ಹೃದಯ ಸಂಗಾ
ದಕ್ಷರದಕ್ಷ ದೇವರದೇವ ಜಯ ಜಯ ರಕ್ಷಿಸು ಪ್ರಾಣಲಿಂಗ ಸ್ವಾಮಿ ॥ ೧

ಕಾಲನಗಂಡ ಕಾರ್ಯದ ಮಿಂಡ ಕ್ರೋಧ ಶಾರ್ಧೂಲ ಮರ್ದನ ವೈಭವ
ಲೀಲೆ ಯೌವ್ವನ ಜರೆ ತ್ರಿಪುರ ನಿರ್ಧೂಮ ಧ್ಯಾನಾಲಿಲಿಥಾ ಸುಖ ಪ್ರಭಾವ
ಕಾಳಕೂಟೋಪಮ ವಿಷಯವನುಂಡು ಮೂರ್ಛಾಲಂಬನ ಗೆಟ್ಟಭಾವ
ಲೀಲಾ ಮಾತ್ರದಿ ಮೋಕ್ಷ ದುರ್ಗವನಾಗಳೆ ಕೋಳುಗೊಂಡತಿ ವೈಭವವಾ ॥ ೨

ಪರಮಾತ್ಮ ಪರಮೇಶ ಪರಬೊಮ್ಮ ಪರಶಿವ ಪರವಸ್ತು ಚಿನ್ಮಯನೆ
ಸ್ಮರಹರ ಭವಹರ ಸಂಹರ ದುರಿತಂಜಯನೆ
ಶರಣಾಗು ಸಲಹು ಪ್ರಸನ್ನನಾಗೆನ್ನನುದ್ಧರಿಸು ನಿಶಾಮಯನೆ
ಗುರು ಹಂಸನಾಥ ರತ್ನಾಕರಸಿದ್ಧನ ಗುರುವೇ ಮೃತ್ಯುಂಜಯನೆ ಸ್ವಾಮಿ ಕಾವುದೆನ್ನ ॥ ೩

## <u>೧೨೩. ಕುರುಹಹೇಳಿನೂಬಾ</u>

ಕುರುಹ ಹೇಳಿನೂ ಬಾ ಕುರಿತುದ ಹೇಳಿನೂ ಬಾ
ಕೊರವಂಜಿಯಲ್ಲ ನಾ ಸರಸತಿ ಕಾಣಯ್ಯ ॥ ಪಲ್ಲವಿ

ಕೇಳಕ್ಕ ನೀನು ಉತ್ತಮ ಸತಿಯಹುದು ಇಂದು
ಬಾಲಕಿಯರಂತೆ ನೀ ಹೊರಗಾಡ ಸಲ್ಲಾ
ಮೂಲೋಕದರಸನಲ್ಲಾ ನಿನ್ನರಸ ತನುವೆಂಬ ನಿ
ನ್ನಾಲಯದೊಳಗೈದನೆ ನೀನೋಡಿರುದುಂಡಿ ॥ ೧

ಅಕ್ಕ ನೀನೆಂದೆಂದು ನಿನ್ನರಸನ ಅಗಲದಿರು ಮುಂದೆ
ಮಿಕ್ಕಿದಾವಧಿಜ್ಞಾನ ಸುಜ್ಞಾನರೆಂಬ
ಮಕ್ಕಳ ನಿನಗಿಹರು ಸಂಪತ್ತಿನೊಳೋಲಾಡುವೆ ಪೇ
ಳಕ್ಕ ತಲೆ ಮಣಿಯ ಸಿರಿವಂತೆ ಗುಣವಂತೆ ॥ ೨

ಅದರಿಂದ ಮುಂದೆ ನಿನಗೆ ಅಡಿಗಡಿಗೆ ಸಿರಿಯದು
ದದನು ಹೇಳಿನು ಚನ್ನಾಗಿ ಕೇಳಮ್ಮಾ
ಪುದಿದ ಔಷಧಿ ಋದ್ಧಿ ಚಾರಣತೆ ಮೊದಲಾದ ಸಂ
ಪದವಹುದು ಕಾಣೆ ಪ್ರವೀಣೆ ನಿನ್ನಾಣೆ ॥ ೩

ಅಂಬರದಂದಲಿ ಬಯಲಾ
ದಂಬರ ಸುಜ್ಞಾನಿಯಹುದು
ತುಂಬಿದ ಚಿನ್ಮಯನು ಪುರುಷಾಕಾರನಿಂದೂ
ಚಿದಂಬರ ಪುರುಷಾಕಾರ ಕೆಟ್ಟು ॥ ೪

ಉರ್ವಿಯೊಳವರಿವರ ಜಾಳಿಸಿ ಹೊಟ್ಟೆಯ ಹೊರೆವ
ಪೂರ್ವದಲಿ ಬಂದ ಕೊರವಂಜಿಯಲ್ಲಾ

ಪೂರ್ವವಿದೇಹದೊಳೆಸೆವ ಶ್ರೀಮಂದರಸ್ವಾಮಿಯ ವಾ
ಕ್ಪೂರ್ವೆಯಲಿ ಬಂದವಳು ನಂಬೆನ್ನ ಮಾತಾ ॥ ೫

**<u>೧೨೪. ಕೊಲೆಹುಸಿಯುಕಳವು</u>**

ಕೊಲೆ ಹುಸಿಯು ಕಳವು ಪರದಾರ ಅತಿಕಾಂಕ್ಷೆಗಳ
ಸಲೆ ವಿಸರ್ಜಿಸಿ ಸಮುದ್ರಾಧಿ ಪರಮೇಶ್ವರನ
ನಲವಿನಲಿ ಧ್ಯಾನಿಸಲು ಸ್ವರ್ಗಾದಿ ಮೋಕ್ಷಗಳ
ಸುಲಭದಲಿ ಪಡೆಯಬಹುದೈ ಮನುಜ ॥ ಪಲ್ಲವಿ

ಕೊಲೆಯೆಂಬುದೀಗ ತನ್ನಯ ಕೊಲೆಗೆ ಕೊಟ್ಟ ಬೆಲೆ
ಕೊಲೆ ತನ್ನ ಕೊರಳೆದೆಯ ಬಿಡದೊತ್ತಿ ಕೊಲುವ ಕೊಲೆ
ಕೊಲೆಯು ಹಿಂಸಾವೃತ್ತಿ ಚರಣಕ್ಕೆ ಹೊತ್ತ ಹೊಲೆ
ಕೊಲೆಯು ಅಂತಕನ ಸಂಕೋಲೆ ॥ ೧

ಕೊಲೆ ಕರ್ಮರಾಜನೆಂದೆಂಬ ಲುಬ್ಧಕನ ಬಲೆ
ಕೊಲೆ ಘೋರ ದುರಿತ ದುಷ್ಟ ಮೃಗಗಳಿಪ್ಪ ಮಲೆ
ಕೊಲೆ ನಿಗೋದತ್ಯಂತ ಬಹುಘೋರ ನರಕ ನೆಲೆ
ಕೊಲೆಯನದರಿಂದ ನುಳಿಯೈ ಆತ್ಮಾ ॥ ೨

ಪುಸಿ ತನ್ನ ಮುರಿದು ನುಂಗುವ ಮೃತ್ಯುದೇವಿಯಸಿ
ನಿಜೈಶ್ವರ್ಯ ಲಕ್ಷ್ಮೀ ಮುಖಾಂಬುಜಕೆ ಶಶಿ
ಪುಸಿಯು ಸುಜ್ಞಾನರಮನೆಗೆಡರಾದ ರಕ್ಕಸಿ
ಪುಸಿ ಪುಣ್ಯ ಮಾರ್ಗದಲಿ ನೆಟ್ಟ ಕಬ್ಬಿಣದರಸಿ
ಪುಸಿಯಲಾಗದದು ನಂಬಿಸಿ ॥ ೩

ಪುಸಿ ವಿಮಲಕೀರ್ತಿ ಕಾಂತೆಯ ಮುಖಕೆ ತೊಡೆದದ ಮಸಿ
ಪುಸಿ ಸಕಲ ಸುವ್ರತದ ಫಲವವ ಕೆಡಿಸುವುದು ಈ
ಪುಸಿ ಪೊಲ್ಲಮೆಂದು ಮನದೊಳಗೆ ನಿಶ್ಚೈಸಿ ನೀ
ಪುಸಿಯೆ ಕನಸಿನಲಿ ಮರೆಯೈ ಆತ್ಮಾ ॥ ೪

ಕಳವು ತನ್ನಲ್ಲಿ ಪೊಕ್ಕದೆಯಲ್ಲಿ ಕಳಕಳವು
ಕಳವು ಕೇಳಿದ ಕಂಡೆಯಾ ಲೋಕಲೋದಳಿವು
ಕಳವು ಕೈಕಾಲು ಕಿವಿ ಮೂಗು ಕಣ್ಗಳ ಅಳಿವು
ಕಳವು ವರ್ಣಗಳ ಸುಳಿವು ॥ ೫

ಕಳವು ಕಡುದುಃಖದಾವಾಗ್ನಿಗೊಡ್ಡಿದ ವನವು
ಕಳವು ಸಂಸಾರ ಘೋರಾಂಬುರಾಶಿಯ ಸೆಳವು
ಖಳ ಕಳವು ಕಡುಪೊಲ್ಲಮೆಂದಾತ್ಮ ತತ್ವಗಳಿವು
ಕಳವನದರಿಂದನುಳಿಯೈ ಆತ್ಮಾ ॥ ೬

ಪರದಾರರೊಳು ಸ್ನೇಹ ಪರಮ ಪಾಪದ ಗೇಹ
ಪರನಾರಿಯರ ಸಂಗ ಪರಮಾಯುಷ್ಯಕೆ ಭಂಗ
ಪರವನಿತೆಯರ ಕೂಟ ಪರಗತಿಗೆ ತೆಗೆದೋಟ
ಪರಸತಿಯ ನಗೆಯು ಬಲು ಹಗೆಯು ॥ ೭

ಪರವೆಣ್ಗಳಿಗೆ ಸೋಲ ಪ್ರತ್ಯಕ್ಷ ಎದೆಶೂಲ
ಪರನಾರಿಯರ ಮೇಳ ಪತಿತ ಕೊರಳಾ ಗರಳ
ಪರಮಾತ್ಮವಿದನರಿತು ಪರವೆಳ್ಗಳಂ ತೊರೆದು
ಪರಿಶುದ್ಧನಾಗಿ ಬಾಳೈ ಆತ್ಮಾ ॥ ೮

ಅತಿಕಾಂಕ್ಷೆ ಯಾವಂಗೆ ಅತಿಕ್ಲೇಶ ಆತಂಗೆ
ಅತಿಕಾಂಕ್ಷೆ ಯಾವಂಗೆ ಅತಿ ದುಃಖ ಆತಂಗೆ
x x x x x x x x x x x x x x
ಅತಿಕಾಂಕ್ಷೆಯಾಗದೆಂದು ॥ ೯

ಕ್ಷಿತಿಯೊಳಗೆ ಬಹಳ ಸನ್ಮತಿಯುತರು ಮೆಚ್ಚುವಂ
ತತಕಾಂಕ್ಷಿಯಂ ಬಿಟ್ಟು ಮತಿ ಬುದ್ಧಿಗಳವಟ್ಟು
ಪ್ರತಿಯಾಗಿ ಪಡೆದಾದಿ ಹಂಸನಂ ಭಜಿಸಿ ಸ
ದ್ಗತಿಪಡೆದು ಮುಕ್ತನಾಗೈ ಆತ್ಮಾ ॥ ೧೦

## ೧೨೫. ಚಿದ್ರೂಪನಧ್ಯಾನವೆಂಬ

ಚಿದ್ರೂಪನ ಧ್ಯಾನವೆಂಬ ಹಡಗನೇರಿ ಸಂಸಾರ
ಸಮುದ್ರವನೆ ದಾಂಟಿ ಮೋಕ್ಷದ್ವೀಪಗೆ ಹೋಗಾತ್ಮನೆ ॥ ಪಲ್ಲವಿ

ಸಾವುಹುಟ್ಟುಗಳೆಂಬೆರಡು ಹೆಣ್ಣು ಗಂಡು ತೆರೆಗಳು
ಆವಾಗ ತಾವು ಮಕ್ಷುಧೆಯೆಂಬ ವಡಬಾಗ್ನಿ
ತೀವಿದ ಸಂಸಾರವೆಂಬ ಮೀನು ಮೊಸಳೆ ಸರ್ಪಂಗಳು
ಈ ವಿಕಾರವೆಂಬ ಕರ್ಮಕಡಲೊಳೇಕೆ ಮುಳುಗಿದೈ ॥ ೧

ನಿನ್ನಾತ್ಮವೆಂಬ ಹಡಗಿಗೈವತ್ತೇಳು ಛಿದ್ರವುಂಟು
ಚೆನ್ನಾಗಿ ತ್ರಿಷಷ್ಟಿಗಳಿಂ ಛಿದ್ರವನೆ ನೀ ಮುಚ್ಚಿ
ಮುನ್ನ ಹೊಕ್ಕ ಪಾಪವೆಂಬ ನಿರನಾತ್ಮ ಧ್ಯಾನವೆಂಬ
ಹೊನ್ನ ತಟ್ಟೆಯಲಿ ಚೆಲ್ಲಿ ವೋಜೆಯಿಂದ ನಡೆಸೊ ॥ ೨

ಹೀಗೆ ಆತ್ಮಧ್ಯಾನವೆಂಬ ಹಡಗನೇರಿಕೊಂಡು ಹೋಗು
ಹೋಗಲಾ ದಾರಿ ಮೋಕ್ಷವೆಂಬ ದ್ವೀಪಕ್ಕೆ ಹೋಗುವದು
ರೋಗ ಮುಪ್ಪು ಸಾವು ಹುಟ್ಟು ಆವ ಬಾಧೆ ಇಲ್ಲದಲ್ಲಿ
ಶ್ರೀ ಗುರುಚಿದಂಬರ ಪುರುಷನಾಣೆ ಮಹಾನಂದಾ ॥ ೩

## ೧೨೮. ಜ್ಞಾನಿಹೊರಗೊಂದ

ಜ್ಞಾನಿ ಹೊರಗೊಂದ ಚಿಂತಿಸದಿರಾ ಹೊರಗೊಂದ
ಚಿಂತಿಸದಿರೆರಡು ಕಂಗಳ ಮುಚ್ಚಿ ಮಿರುಪ ಸು
ಜ್ಞಾನ ದೃಷ್ಟಿಯಲಿ ನಿನ್ನಯ ಮಯ್ಯ ಮರೆಯಲಿರ್ದಮಲಾತ್ಮನಂ
ನೋಡು ಭವಪಾಶ ಪರಿಪಟ್ಟು ಮುಕ್ತಿಯಹುದೂ ॥ ಪಲ್ಲವಿ

ಉತ್ತಮಾಂಗಂ ಎನ್ನಂ ನಿಚ್ಚಮೆಂಬೀ ಭೇದ ಮೈಗೈಸಿ ನಿನಗವಿಲಾ
ನೆತ್ತಿಯಿಂದುಂಗುಷ್ಟ ತನಕ ಸರ್ವತ್ರ ನೀ
ನುತ್ತಮಾಂಗನೆ ಪ್ರಾಕಾನಾಂಗನೆ ಶುಭಾಂಗನೆ
ವೃತ್ತದ್ರಧ್ಯೋದ ಶಕ್ಯವಗಹನೆ ಸೂಕ್ಷ್ಮ ನಿರ್ಲೇಪ x x x ಬಾದಾಂಗನೈ ॥ ೧

ಉಂಗುಷ್ಟ ಮೊದಲಾಗಿ ನೆತ್ತಿ ಕಡೆಯಾಗಿ ಸರ್ವಾಂಗದಲಿ ನೋಡು ಸ
ರ್ವಾಂಗದಲ್ಲಿ ತಿಳಿದು ಸರ್ವಾಂಗದಲಿ ಸುಖಿಸಿದು ನಿಜಾನುಭಾವರಮ್ಯ ಚಿತ್ತಾತ್ಮಾ
ಸಂಧಾನ ರಮ್ಯಂ ಕಂಗಳೆರಡರ ಬೊಂಬೆಯೊಳಗೆಷ್ಟ ಕಾಣ್ಬೆ ಹೃದ
ಯಾಂಬು ಜಡಜಡ ಮನದೊಳೆಷ್ಟು ತಿಳಿವೆ ಭಂಗುರದ ॥ ೨

ಪಂಚೇಂದ್ರಿಯದೊಳಷ್ಟು ಸುಖಿಸುವೈ ಬಿಡುಬಿಡಿದು ಪಿಸುಣರಂಗಂ
ಇಂದಿಷ್ಟು ಮರತೆ ನೆನಲೇಕೆ ನೀನು ಧ್ಯಾನಿಸಲು ನಿನ್ನಂದೆನಗೆ
ಮುಕ್ತಿಯೇ ಅಲ್ಲಲ್ಲಾ ನನಗೆ ನಿನ್ನಿಂದ ಶಿವದಾದರೇನು ಜಿನಮತ
ಯಥಾರ್ಥದೊಪ್ಪುದದರ ಸಹಜಾ ಸಂದೇಹ ಬೇಡ ನಂಬೆನ್ನಾಣೆ ॥ ೩

ನಿನ್ನಾಣೆ ಮುಂದೆನ್ನ ಗುರು ಚಿದಂಬರ ಪುರುಷನಾಣೆ ಎಂದ
ಭಯವಿತ್ತನೆನ್ನಪ್ಪಾಜಿ ಪರಮ ಶ್ರೀ ಮಂದರಸ್ವಾಮಿಯಾಣೆ ॥ ೪

## ೧೨೭. ಜಿನಜಿನಜಿನಎನ್ನಿರೋ

ಜಿನಜಿನ ಜಿನ ಎನ್ನಿರೋ ನೀವೆಲ್ಲರು
ಜಿನಜಿನ ಜಿನ ಎನ್ನಿರೋ
ತನುಮನ ವಚನವ ವ್ಯರ್ಥಕ್ಕೆ ನೀಗದೆ ॥ ಪಲ್ಲವಿ

ಜವನ ಬಾಧೆಗಳನ್ನು ಜಯಿಸಬೇಕಾದರೆ
ಜಿನಜಿನ ಜಿನ ಎನ್ನಿರೋ
ಭವಣೆ ಪಡಿಸುವ ಪಾಪವ ಪರಿದಿಡುವರೆ
ಜಿನಜಿನ ಜಿನ ಎನ್ನಿರೋ ನೀವೆಲ್ಲರು ॥ ೧

ಶಿವ ಪದವಿಯ ನೀವು ಪಡೆಯಬೇಕಾದರೆ
ಜಿನಜಿನ ಜಿನ ಎನ್ನಿರೋ
ಭವರೋಗ ಕೆಡಿಸುವ ಹಿರಿದಾದ ಜಪವಿದು
ಜಿನಜಿನ ಜಿನ ಎನ್ನಿರೋ ನೀವೆಲ್ಲರು ॥ ೨

ಆಗಮ ಸಿದ್ಧಾಂತಗಳ ಮುಖ್ಯ ಜಪವಿದು
ಜಿನಜಿನ ಜಿನ ಎನ್ನಿರೋ
ನಾಗೇಂದ್ರ ಬಣ್ಣಿಸಲರಿಯದ ಜಪವಿದು
ಜಿನಜಿನ ಜಿನ ಎನ್ನಿರೋ ನೀವೆಲ್ಲರು ॥ ೩

ಉಪಮೆಗೆ ನಿಲುಕದ ಸುಖವೀವ ಜಪವಿದು
ಜಿನಜಿನ ಜಿನ ಎನ್ನಿರೋ
ಜಪಿಸುವರಿಗೆ ಆತ್ಮ ಸಿದ್ಧಿಯ ಜಪವಿದು
ಜಿನಜಿನ ಜಿನ ಎನ್ನಿರೋ ನೀವೆಲ್ಲರು ॥ ೪

ಅಪರಾಧ ಕೋಟಿಗೆ ಪರಿಹಾರ ಜಪವಿದು
ಜಿನಜಿನ ಜಿನ ಎನ್ನಿರೋ
ಅಪರಾಜಿತೇಶನ ಕಾಣಬೇಕಾದರೆ
ಜಿನಜಿನ ಜಿನ ಎನ್ನಿರೋ ನೀವೆಲ್ಲರು ॥ ೫

## ೧೨೮. ತಾನುತನ್ನರೂಪು

ತಾನು ತನ್ನ ರೂಪು ತನ್ನ ಧ್ಯಾನದಿಂದ ಕಂಡ ಮೇಲಿ
ನ್ನೇನು ಬೇಕೊ ಮತ್ತಿನ್ನೇನು ಬೇಕೊ ॥ ಪಲ್ಲವಿ

ಆಸೆ ರೌದ್ರ ದುರ್ಮೋಹನಂಗಳ ಕಡೆಗೊತ್ತಿ ಸೂಸಿ
ಸೂಸುವ ಸುಜ್ಞಾನ ರೂಪ ಶುದ್ಧನಾಗಿ ಕಂಡ ಮೇಲಿನ್ನೇನು ಬೇಕೊ ‖ ೧

ಕಂಗಳ ಮಾನವನೊಮ್ಮೆ ಭಾರಿ ಸೂರೆಗೊಂಬೊ ಬೆಳ
ದಿಂಗಳ ಬೊಂಬೆಯ ತನ್ನ ಕಣ್ಣ ತುಂಬ ಕಂಡ ಮೇಲಿನ್ನೇನು ಬೇಕೊ ‖ ೨

ಸೋಜಿಗವಿದೊಂದು ಮುನ್ನ ಕಂಡುದಿಲ್ಲಿಲ್ಲವಾದಿ ಅಪ
ರಾಜಿತೇಶ್ವರನ ರೂಪು ತನ್ನೊಳಗಿಂತು ಕಂಡ ಮೇಲಿನ್ನೇನು ‖ ೩

## ೧೨೯. ತುಂಬಿದಪಟ್ಟಣವನು

ತುಂಬಿದ ಪಟ್ಟಣವನು ಪೊಕ್ಕು ನೀವೆಲ್ಲ ನಡುವೆ ತುಂಬಿ
ತುಂಬಿದವರು ಮೂರು ಮನೆಯೊಳಗೆಲ್ಲ ತುಂಬಿ ‖ ಪಲ್ಲವಿ

ಕರಿದು ಬಿಳಿದು ಕೆಂಪು ವರ್ಣವಾಗಿಹುದೊಂದು ತುಂಬಿ
ತಿರುಗುತಿಹುದು ಈರೇಳು ಲೋಕವನೆಲ್ಲದೊಂದು ತುಂಬಿ
ಬೆರಸದರ್ಭನಂತೆ ನಾನಾ ವರ್ಣದೊಂದು ತುಂಬಿ
ತರುಣಿಯರಾರು ಮಂದಿಯ ಭೋಗಿಸುತಿಹುದೊಂದು ತುಂಬಿ ‖ ೧

ಮೂರು ಮುಖವು ಅಯಿದು ಬಾಯೊಳಗುಂಬುವದೊಂದು ತುಂಬಿ
ತೋರುತಿಹವು ಕವಿಯೆಂಟು ಕಾಲೆಳರದೊಂದು ತುಂಬಿ
ಮೂರು ಹಸ್ತವು ನಾಲ್ಗಣ್ಣಿಂದ ಮೆರೆವುದೊಂದು ತುಂಬಿ
ಹಾರುವ ಹತ್ತು ರೆಕ್ಕೆಗಳಿಂದ ಮೆರೆವುದೊಂದು ತುಂಬಿ ‖ ೨

ತುಂಬಿಯನರಸ ಹೋದವರಾರು ಮಂದಿಯ ಹೊಟ್ಟೆ ತುಂಬಿ
ತುಂಬಿಗಲ್ಲದೆ ಮತ್ತಾರಿಗೂ ತಿಳಿಯದು ಪ್ರಾಣ ತುಂಬಿ
ತುಂಬಿಯನರಿವರೆ ಶ್ರೀಮಂದರೇಶನವೊಲಿವೆ ತುಂಬಿ
ತುಂಬಿಯ ನರಸುವ ಹಂಬಲ ಮರೆಯಿರೊ ನೀವೆಲ್ಲಾ ನಡುವೆ ತುಂಬಿ ‖ ೩

## ೧೩೦. ತೋರವ್ವಕೆಳದಿ

ತೋರವ್ವ ಕೆಳದಿ ಸಾರಾತ್ಮರೊಡೆಯನ
ಕಾರುಣ್ಯರೂಪನ ತೋರವ್ವ ಕೆಳದಿ
ವಿರಕ್ತಿಯ ತೊರೆದನ ಮುಕ್ತಿಯ ರಮಣನ
ಮಂದರವಾಸನ ಕಂದರ್ಪ ವಿಜಯನ
ಅಂಗಜ ವಿಜಯನ ಮಂಗಲ ಮಹಿಮನ ತೋರವ್ವ ಕೆಳದಿ ‖ ಪಲ್ಲವಿ

ಚಂದಿರ ರವಿ ಶತಕೋಟಿ
ಸೌಂದರೆಗಾವುದು ಸಾಟಿ
ದಂದುಗಾಂಬುಧಿಯನು ದಾಂಟಿ
ನಿಂದಿಹ ನಿತ್ಯಾನಂದನ ಬೇಗದಿ ॥ ೧

ಜ್ಞಾನಸುಧಾಂಬುಧಿ ಚಂದ್ರ
ಭೂನುತ ಸದ್ಗುಣ ಸಾಂದ್ರ
ಧ್ಯಾನದರ್ಪಕಹಮಿಂದ್ರ
ಶ್ರೀನಿಧಿ ಸಂಸುಖ ಪೀನಪಯೋನಿಧಿಯೆ ॥ ೨

ಕ್ರೂರಾತ್ಮರಿಗತಿ ತಪ್ತ
ಮೂರು ಲೋಕಕೆ ತಾನಾಪ್ತ
ಯಾರಿಗೂ ತೋರದ ಗುಪ್ತ
ಸಾರಥಿಯಪ್ಪೊಲು ಬಾರದಿ ಬೇಗದಿ ॥ ೩

ನಿರ್ಮಲ ಸುಜ್ಞಾನ ರೂಪ
ದುರ್ಮತಿ ತಿಮಿರ ಪ್ರದೀಪ
ಕರ್ಮವ ಗೆಲಿದ ಪ್ರತಾಪ
ಮರ್ಮವ ತೋರ್ವ ಸದ್ಧರ್ಮ ಚಕ್ರೇಶನ ॥ ೪

ವರವೇಣುಪುರಿಯೊಳು ನೆಲಸಿ
ಚಿರಭವ್ಯರಿಷ್ಟವ ಸಲಿಸಿ
ನಿರುತದಿ ಸ್ತುತಿಗಳ ಕಲಿಸಿ
ನೆರೆದಿಹ ನಿತ್ಯನಿರಂಜನ ಸಿದ್ಧರಾ ॥ ೫

## ೧೩೧. ದುರಿತಾರಿತ್ರಿಜಗದುನ್ನತದ

ದುರಿತಾರಿ ತ್ರಿಜಗದುನ್ನತದ ಭಾಗ್ಯದ ನಿಧಿಯೆ
ಪರಮ ಸುಖ ಸಂಪದವನೀವ ಚಿಂತಾಮಣಿಯೆ
ವರಮೋಕ್ಷ ಲಕ್ಷ್ಮೀಪತಿಯೆನಿಪ ನಿರ್ದೋಷಿಯನು
ದೋಷಿಯೆಂಬರು ಮೂಢಜನರು ॥ ಪಲ್ಲವಿ

ಆದಿಯೊಳುತ್ಪನ್ನನಾದ ಕಾರಣದಿ ಸುಬೋಧ ನಿಧಿ ವೃಷಭವಾಹನವನೇ
ರಿದೆಯಾಗಿ ಭೇದಿಸಿ ನಿನ್ನ ಚರಣವ ಕಾಣಲರಿಯದೆ ಬಳಲುತಿವೆ ಹರಿವಿರಂಚಿ
ಮೇದಿನಿಯೊಳಗೆ ಹದಿನೆಂಟು ದೋಷಂಗಳನು ಬಾಧೆಯಿಲ್ಲದೆ ಗೆಲ್ದು ಸರ್ವಜ್ಞಾನಿ
ಯಾದೆ ಸಾಧಿಸಿ ಚವುರಾಸೀತಿ ಲಕ್ಷಗುಣಗಳ ತಳೆದ ದೇವಾದಿದೇವ ನೀನೇ ॥ ೧

ಸಲೆ ಲೋಕದ ವಸ್ತು ವಿಸ್ತಾರದಾ ಅಳುವಿಲ್ಲದಾಗಮ ತತ್ವನಿರ್ಣಯದನಿಧಿ
ವಿಲಸಿತಾ ವಾಗ್ವಧೂಮುಖದೊಳುದಯಿಸಲರ್ಧನಾರೀಶನೆಂದೆನಿಸಿದ್ಯೆ
ಅಳಿವಿಲ್ಲದ ಶಾಶ್ವತಾಮೃತದ ಶರಧಿ ತಾನೊಲಿದು ಸುದತಿಯ
ರೂಪವನಾಂತು ಬಂದಳು ಕಂಡೂ
ಘಳಿಲನೆ ತೆಗೆದುತ್ತಮಾಂಗದಲಿ ಧರಿಸಿ ಗಂಗಾಧರನೂ ನೀನಾದೆಯ್ಯ ॥ ೧

ಅಷ್ಟ ವಿಧ ಕರ್ಮಂಗಳನು ಗೆಲಲು ನೀ ಪರಮ
ನಿಷ್ಠೆಯಿಂದಲಿ ತಪಸು ಮಾಡುತ್ತವಿರಲಾಗಿ
ಬಿಟ್ಟ ಕೇಶವು ಬೆಳೆದು ಜೆಡೆಗಳಾದವು ಜಟಾಮುಕುಟಧರನೆಂದೆನಿಸಿದ್ಯೆ
ಉಟ್ಟುದನೂ ತೊರೆದು ಇಂದ್ರಿಯ ವಿಷಯ ವ್ಯಸನಗಳ
ಸುಟ್ಟು ಮುರುಳ್ಗಳ ಕೂಡಾಡುತ್ತ ಮಿರಲಾಗಿ
ಕಷ್ಟ ಭವಗೆಡಿಸಿ ತಿರಿದುಂಡನೆಂಬರು ಜಗದಕರ್ತ ಸರ್ವಜ್ಞ ನಿನ್ನ ॥ ೩

ಅಷ್ಟಮದವೆಂಬ ಗಜಾಸುರನ ಸಮರದಲಿ
ಮೆಟ್ಟಿ ಮೂದಲಿಸಿ ತಿವಿದಾಳ್ದುದೆಲೆ ಗಜಚರ್ಮ
ವುಟ್ಟು ಮೆರೆದನುಯೆಂದು ಜಡರು ಬಣ್ಣಿಪರು ಮದವೈರಿ ಹರನೆ ನಿನ್ನಾ
ದುಷ್ಟ ಮನಸಿಜನ ತಪವೆಂಬ ತೀವ್ರಾಗ್ನಿಯಿಂ
ಸುಟ್ಟರುಹಿ ಕಳೆದು ಭುವನಕೆ ಅತಿಧೀರ ನೀ ಭಸ್ಮ
ವಿಟ್ಟಕಾರಣದಿ ವಿಭೂತಿಭೂಷಣನಾದೆ ಶಂಭು ಜಗವಂದ್ಯ ನೀನೇ ॥ ೪

ಎಸೆವ ಜ್ಞಾನೋದಯದಿ ನೊಸಲ ಕಣ್ಣುದಯಿಸಲು
ವಿಷಮ ಜಾತಿ ಜರಾಮರಣ ತ್ರಿಪುರಗಳನುರುಪಿ
ಅಸದಳವೆನಿಪ ಅಜ್ಞಾನಂಧಕಾಸುರನ ಮೆಟ್ಟಿ ನಾಟ್ಯವನಾಡಿದ್ಯೆ
ಮಿಸುಪ ತ್ರಿಜ್ಞಾನ ತ್ರಿಶೂಲವನೂ ಪಿಡಿದು ನೀ
ವಸುಧೆಯೊಳಗುಳ್ಳ ಜೀವಂಗಳನೆಲ್ಲವನು ತ
ನ್ನಸುವ ಕಾಯ್ವಂತೆ ಕಾಯ್ದನುಯೆಂದು
ಪಸರಿಸಿತು ಮೃಡನ ಢಮರುಗದ ಧ್ವನಿಯೂ ॥ ೫

ಸುರನರೋರಗ ಖಚರ ಜ್ಯೋತಿಷ್ಕರಾದಿ ಕಿನ್ನರರು ಕಿಂಪುರುಷರಂ
ಗರುಡ ಗಂಧರ್ವರಂ ನೆರೆದು ಬಂದರು ಪರಮ
ಹರುಷದಿಂದಲೆ ಸದಾಶಿವನ ಬಲಗೊಂಡು ಪೂಜಿಸಲೆಲ್ಲರೂ
ಹರುಷದಿಂದೆರಗೆ ಮಣಿಮುಕುಟರಂಜಿತಕಿರಣ ಹರನ ತನು ಪ್ರಭೆಯೊಳಗೆ
ಶಿರದ ಗೊಂಚಲ ಎಸೆಯೆ ಧರೆಯೊಳಗೆ ರುಂಡಮಾಲಾಧರನು ಯೆಂ
ಬರೆಲೆ ನಿರ್ದೋಷಿ ರುದ್ರ ನಿನ್ನಾ ॥ ೬

ಉರವಣಿಸಿ ಜಾತಿಜರಾಮರಣಗಳ ಸಂಹರಿಸಿ
ಹರನಾದೆ ಶಾಶ್ವತ ಮುಕ್ತಿ ಲಕ್ಷ್ಮಿಗೆ ನೀನು ವರನಾದ ಕಾರಣದಿ ನಿತ್ಯ

ನಿರಂಜನನು ನಿರ್ಭಯ ಸದಾಶಿವನ ನೀನಾದೆಯ್ಯೆ
ಹರಿಹರನು ಅಜನು ಅರುಹನಾದೊಡಾಗಲಿ
ತಿರುತ ಹದಿನೆಂಟು ದೋಷವ ಗೆಲಿದವನೆ ದೇವರ ದೇ
ವರದಾದಿ ಶಿವನು ಜಾಯಣ್ಣನಾಧಾರ ತ್ರಿಜಗಾಧಿಪತಿಯು ನೀನೆ ॥ ೬

## ೧೩೨. ದೇಗುಲವನೆಪೂಜಿಸುತಹರೆ

ದೇಗುಲವನೆ ಪೂಜಿಸುತಹರೆ ದೇವನಾರು ಕಾಣರಲ್ಲಿಯೋ ॥ ಪಲ್ಲವಿ

ಒಂದು ದೇಗುಲವೆರಡು ದೇಗುಲ ರೂ
ಪಂದ ನುಂಗಿತು ಮೂರು ದೇಗುಲವು
ಒಂದುಗೂಡಿಕೊಂಡು ದೇವನ ನುಂಗಿದ
ಪಿಂದಿದನಾರು ತಿಳಿಯರಯ್ಯೋ ॥ ೧

ಆವರುಂಟು ಕೆಲಬರು ಸಾಮರ್ಥ್ಯವ ಪಿರಿದು ಮಾಡಿ
ದೇವನ ಕಾಣುತಲಿಹರೆ
ಕುರುಬರೊಂದು ಕನ್ನಡಿ ಹುಲ್ಲುಗಿರಿ ತನ್ನ
ಮರಿಯೆಂದು ಮುಟ್ಟಿ ಕೊಡುವಂದದಲಿ ॥ ೨

ಉಂಟೆಲ್ಲಾ ಹಲವುವೊಂದು ಹಿರಿದು ಕಿರಿ
ದುಂಟೆರಡು ಗುಣದೊಳಗರಿದೂ
ವಂಟಿಗಾರಿಕೆಯಲ್ಲಿ ನಿನ್ನ ಕಂಡವ
ರುಂಟು ಮುಕ್ತಿ ಚಿದಂಬರ ಪುರುಷಾ ॥ ೩

## ೧೩೩. ದೊರೆತನವೆನಿನಗೆ

ದೊರೆತನವೆ ನಿನಗೆ ಎನ್ನೊಡನೆ ಭಾಕ್ತಿಕ ರನ್ನ
ಸರಿಯೆಂದು ಭಾವಿಸದೆರವು ಕಾಣುವರೆ ॥ ಪಲ್ಲವಿ

ಉತ್ತಮ ನಿಮ್ಮಲಿರುವ ಚಿತ್ತದ ಕೊನೆಯೊಳಗಿರಿಸಿ
ಮತ್ತನ್ಯ ವಸ್ತುವ ಕೈವಿಡಿಯದ ಸಜ್ಜನರು
ಹೊತ್ತರಿದು ನಿಮ್ಮ ಹಾದಿಯ ನೋಡುತಹರೆ
ತೆತ್ತರ ನಿಮಗೇನು ತೆರದಿದ್ದರೆ ॥ ೧

ಭಕ್ತಿಯಿಂದ ಪೂಜಿಸಿ ಮೋಕ್ಷದೊಳಗಿಷ್ಟ ಸುಖ ಭೋಜನವ
ನಿಪ್ಪತ್ತು ನಿಮ್ಮ ಸನ್ನಿಧಿಯೊಳುಣುತ ಹರೆ

ವೊಪ್ಪತ್ತೆ ಸಾಕು ನಿಮ್ಮ ರಮನೆಯ ತೂಂಭಾರ
ಕಪ್ಪಣೆಯ ಪಾಲಿಸೂ ಕೃಪೆಯಿಂದೆನಗೊಲಿದರುಹಾ ॥ ೨

ಒಡೆಯನಿಲ್ಲದ ಬಂಟನಲ್ಲ ನಿಮ್ಮಯ ಗುಣವ
ಬಿಡದೆ ನೋಡಿದೆನು ಮಾಹೇಂದ್ರ ಕೀರುತಿಯಾ
ವೊಡನೆ ಬಂದರೆ ನಿಮ್ಮೂರ ಹೆಬ್ಬಾಗಿಲೊಳು ತಡೆ
ವುದಕೆ ಸೇಂಗೆಯುಂಟೆ ನಿನಗೆಯಾಧೀಶಾ ॥ ೩

<u>೧೩೪. ಧರ್ಮವೆಬಲ್ಲಿತಲ್ಲಾಬಹು</u>

ಧರ್ಮವೆ ಬಲ್ಲಿತಲ್ಲಾ ಬಹು
ಕರ್ಮವ ಕೆಡಿಸಿ ಮೋಕ್ಷ ಮನೆಯೊಳಿರಿಸುವ ಜಿನ
ಧರ್ಮವೇ ಬಲ್ಲಿತಲ್ಲಾ ॥ ಪಲ್ಲವಿ

ಉಂಡಾಕ್ಷಣ ಭಸ್ಮವಹ ರೋಗದಿಂದ ಜಗ
ಭಂಡನಾದಾರ್ಯನು ನಂದೀಶನೂ
ಕಂಡು ಕೈವಿಡಿದೆತ್ತೀಶ ಸರ್ವರ ಕೈಯಲಿ
ಕೊಂಡಾಡಿ ಸಿದ್ಧರೆನಿಸಿತಾ ಹೊ ॥ ೧

ಸಿದ್ಧಾಂತಿತಾನಹ ಮಾಘಣಂದೀಶನು
ದೊಡ್ಡೆಗಳಂತೆ ಮೋಹಕೆ ಸಿಲುಕಿ
ಬಿದ್ದನ ಮೈ ಹೊಯಿದೆಬ್ಬಿಸಿ ಮೊದಲಂತೆ
ಸಿದ್ಧಾಂತಿಕರೆಂದೆನಿಸಿತಾ ಹೊ ॥ ೨

ದೇವ ಸಮಂತಭದ್ರಾರ್ಯನುದರದೊಳು
ತೀವಿದಸನ ಲಯವಾಗುತಿರೆ
ಭಾವಿಸಿ ನೋಡಿ ಕಾಂಚಿಪುರದೊಳಾಗದಿ
ರಾವರು ಸರಿಯಿಲ್ಲೆಂತೆನಿಸಿತಾ ಹೊ ॥ ೩

ಎಲ್ಲಾ ಶ್ರಾವಕಯೆಲ್ಲಾ ಮುನಿಜನ
ವೆಲ್ಲ ಭವ್ಯ ಸಮ್ಮೋಹಗಳೂ
ಕೊಲ್ಲದ ಜೀವದಯಾಪರ ಸಮಯದ
ಯೆಲ್ಲರು ತಮ್ಮ ವರೆನಿಸಿತಾ ಹೊ ॥ ೪

ಕ್ರೋಧ ಮೋಹ ಮಾಯಲೋಭವೆನ್ನಯ
ಬೋಧವಡಂಗಿದ ವೇಳೆಯೊಳು

ಓದುವರೋದನಾಲಿಸಿ ಇಂದಿನದೊಂದು
ದಾರಿಯ ತೋರಿ ಸಂತೈಸಿತಾ ಹೊ ॥ ೫

ಜಿನಮತದೊಳು ಇನಿತುಂಟು ಭವ್ಯರು
ಮುನಿಜನರುಂಟೆನಿತನಿತೂ
ನೆನೆವೆನು ನಿತ್ಯ ನಿರಂಜನ ಸಿದ್ಧನ
ತನುಜ ರತ್ನಾಕರ ಸಿದ್ಧನಾ ಹೊ ॥ ೬

ಸತ್ಯದಾಚಾರ ಸದ್ಧರ್ಮವೆ ಶರಣೆಂದು
ಉತ್ತಮ ಜಿನಕುಲದೊಳಗೆ ಪುಟ್ಟಿ
ನಿತ್ಯ ನಿರಂಜನನ ಪಾದವ ನೆನೆಯದೆ
ಯತ್ತಲಲ್ಲದೆ ನಾನು ಕೆಟ್ಟಿಹೆನಲ್ಲ ಹೊ ॥ ೭

**೧೩೫. ನಗೆಯಲ್ಲವೆಇದು**

ನಗೆಯಲ್ಲವೆ ಇದು ನಗೆಯಲ್ಲವೆ
ಸುಗುಣರೆಲ್ಲರು ಕೇಳಿ ನಗರೆ ಗುರುವೇ ॥ ಪಲ್ಲವಿ

ಅವರೆಂಟು ಮಂದಿಯು ಹೆಡ್ಡರು ಕುರುಡರು
ಅವರವ್ವೆ ಹೆಡ್ಡೆ ಕುರುಡಿಯಲ್ಲೈಯ
ಅವರ ತಾಯಿಗೆ ಮೂವರು ಮಕ್ಕಳ
ಅವರು ಹೆಡ್ಡರು ಕುರುಡಲಾರದರಲ್ಲೈಯಾ ॥ ೧

ಹೆಡ್ಡರು ಕುರುಡರು ಕೂಡಾಡಿ ಮತ್ತೊಬ್ಬ
ದೊಡ್ಡ ಸುಜ್ಞಾನಿ ತಾನೆ
ಹೆಡ್ಡಾದ ಕುರುಡಾದ ವೊಂದು ಕಡ್ಡಿಗೆ
ಕಡೆಯಾಗಿ ಬಳಲಿದೆ ಗುರುವೆ ॥ ೨

ಅವರನರಸಲಾಗಿ ಅವರ ತಡೆಯಲಾಗಿ
ಅವರ ಮೈಯಿಂದ ತನ್ನವರು ಪುಟ್ಟಿದರು
ಅವರು ಮೂವರು ಬೇಟಕ್ಕೆ ಹೋದರು
ಭವ ಮುಕ್ತಿ ಚಿದಂಬರ ಪುರುಷನ ॥ ೩

**೧೩೬. ನನ್ನಮಾತಕೇಳು**

ನನ್ನ ಮಾತ ಕೇಳು ನನ್ನ ಮನವೆ ಕೇಳ್ದ
ಡಿನ್ನು ನಿಜಾನಂದವನೇ ಘನವ ॥ ಪಲ್ಲವಿ

ಹತ್ತು ಗಾಳಿಗಳ ಸಾಧ್ಯ ಮಾಡು ನಡು
ನೆತ್ತಿಗೆ ವಾಯುವ ತಂದು ಕೊಡು
ಮತ್ತೆ ಕಣ್ಮುಚ್ಚಿ ಆತ್ಮನ ನೋಡು ಪ್ರಭೆ
ಮೊತ್ತದಲ್ಲಿ ಮೂಡಿ ಮೊಳಗಾಡು ॥ ೧

ಜುಮ್ಮುದಟ್ಟುತಿದಕೊ ಸರ್ವಾಂಗವೊಳ
ಗುಮ್ಮುರೆದೆಕೊ ಸುಜ್ಞಾನಂತರಂಗ
ವೊಮ್ಮೆಯು ಸೇರದು ಬಹಿರಂಗಾ ಪರ
ಬೊಮ್ಮವಿದು ಮುಕ್ತಿ ಪ್ರಸಂಗಾ ॥ ೨

ಧ್ಯಾನವೊಂದರಿಂದ ಆತ್ಮ ಶುದ್ಧ ಜಲ
ಸ್ನಾನದಿಂದ ಮೈಗೆ ಪ್ರಸಿದ್ಧ
ಧ್ಯಾನಿಸಿ ನೋಡಲ ಸ್ವಯಂ ಬುದ್ಧ ಆತ್ಮ
ತಾನೆ ಗುರು ನಿರಂಜನ ಸಿದ್ಧ ॥ ೩

## ೧೩೭. ನಮ್ಮವರೆಲ್ಲರುಹೋದ

ನಮ್ಮವರೆಲ್ಲರು ಹೋದ ಹಾದಿಯಲಿ ನಾವು
ನಮ್ಮ ಸೀಮೆಗೆ ಹೋಹರೇನಂಜಿಕೆ ॥ ಪಲ್ಲವಿ

ಸಪ್ತ ವ್ಯಸನದಲಿ ನಡೆದಾಡಿ ಲಲಿತಾಂಗವಾ
ತಪದಲ್ಲಿ ಮುಕ್ತನಾಯಿತಲ್ಲಲ್ಲ
ಗುಪ್ತಿಗಳ ಪಾರಿಷೇಣ ಕುಮಾರ ಸು
ಖಾಪ್ತಿಯನಂದು ಪಡೆದತ್ತಿಲ್ಲವೆ ॥ ೧

ಯುಕ್ತಿಗೆಂದಲ್ಲ ವಿದ್ಯಾರ್ಥಕೆ ಮುನಿಯಾಗಿ
ಮುಕ್ತನಾಯಿತಲ್ಲವೆ ರವಿಮಿತ್ರನೂ
ಶಕ್ತಿಯೊಂದಾಚಮನವೆಂಬ ನೋಂಪಿಯ ನೋಂತು
ವ್ಯಕ್ತನಾಯಿತಿಲ್ಲವೆ ಶಿವಕುಮಾರ ॥ ೧

ಮಿಗೆ ವಜ್ರಜಂಘರು ತೊಂಭತ್ತೆಣ್ಬರು
ಸುಗಮ ತಪದಿಂದ ಮುಕ್ತರಾಗಿಲ್ಲವೆ
ಸಗರ ಕುಮಾರರು ನೂರರುವತ್ತನಾಲ್ಕು ಸಾವಿರ
ಸಗರನೊಡನೆ ಮುಕ್ತರಾಯಿತಲ್ಲವೆ ॥ ೨

ಕಪಟವಾಹನ ತಮ್ಮ ನೊಂದವರಾಗನು
ತಪಸಿನಿಂದ ತಾ ಸುಖಿಯಾಯಿತಲ್ಲವೆ

ಅಪರಾಜಿತೇಶ್ವರ ಮೆಚ್ಚಲು ಭೀಮಯೋಗಿಯ
ನ್ನ ಪವರ್ಗದ ಪಡೆಯಿತಲ್ಲವೆ x x x ॥ ೩

## ೧೩೮. ನೆಮಿನಮಿಸಿಎಡೆಬಿಡದೆ

ನೆಮಿನಮಿಸಿ ಎಡೆಬಿಡದೆ ನೆನೆವೆ ಜಿನಪತಿಯ
ಶ್ರೀಮದಮರೇಂದ್ರ ನಾಗೇಂದ್ರ ಚಕ್ರೇಶ್ವರ ॥ ಪಲ್ಲವಿ

ಸ್ತೋಮ ಮಣಿಮಕುಟ ಕೀಲಿತ ದಪಯುಗಲು
ಸಾಮಚಾಂಕ ಪೀಠವಾಂತ ಛತ್ರತ್ರಯವು
ಚಾಮರ ವ್ರಜ ದಿವ್ಯ ಶಬ್ದ ಹೂಮಳೆಯು
ವ್ಯೋಮದಿಂ ಕರೆವ ನಿರಂಜನ ಸಿದ್ಧ ॥ ೧

ದುಂದುಭಿಯು ಕಂಕೇಲಿ ತರು ಪ್ರಭಾಮಂಡಲಗ
ಳೆಂದೀ ಮಹಾಪ್ರಾತಿಹಾರ್ಯ ರಂಜಿಸುವ
ಸಂದ ಶಂಭರಾರಿ ತ್ರಿಜಗದಿಂದ ಪೂಜಿತನಾದ
ಸುಂದರಾಂಗನಿಗೆ ನಲವಿಂದ ವಂದಿಪೆನು ॥ ೨

ಪಂಚ ಕಲ್ಯಾಣಗಳ ತಾಳೀ ಮೂಲೋಕ ಪ್ರ
ಪಂಚ ಕಾಲತ್ರಯವನರಿದು ತನ್ನೊಳಗೆ
ಪಂಚಮ ಜ್ಞಾನ ಸಂಪನ್ನ ಮೂರ್ತಿ
ಪಂಚ ಸಂಸಾರವನು ಕಳೆದು ರಕ್ಷಿಪುದು ॥ ೩

ಸಹಜದೊಳು ಬಂದವತಿಶಯ ಹತ್ತು ಘಾತಿಗಳ
ದಹನದಿಂ ಹತ್ತು ದೇವೋಪನೀತಾ
ವಹವು ಪದಿನಾಲ್ಕಿಂತು ಮೂವತ್ತನಾಲ್ಕು ಭರ
ಸಹಿತ ಮೆರೆವಮಲ ಸಂಪದನೆ ರಕ್ಷಿಸುವುದು ॥ ೪

ಜ್ಞಾನ ದರ್ಶನ ವೀರ್ಯ ಸುಖವನಂತಗಳುಳ್ಳ
ಭಾನು ಶಶಿಕೋಟಿ ಸಂಕಾಶ ನಿರ್ಮೋಹ
ಧ್ಯಾನಕಳವಟ್ಟು ಬಂದೆನ್ನ ಮನದೊಳು ನಿಂದು
ಶ್ರೀ ನಿರಂಜನ ಕಡಲ ಶಿವನೇ ರಕ್ಷಿಪುದು ॥

## ೧೩೯. ನಮೋನಮೋನಮೋ

ನಮೋ ನಮೋ ನಮೋ ನಮೋ ಸ್ವಾಮಿ ನಮೋ ಗುರುದೇವ ನಮೋ
ನಿಮ್ಮ ಮಹಾತ್ಮ್ಯಕೆ ಸರಿಯುಂಟೆ ಸ್ವಾಮಿ ಕುಮಾರ ಯೋಗೀಂದ್ರ ॥ ಪಲ್ಲವಿ

ಅಗ್ನಿರಾಜನ ಕುಮಾರ ನಗ್ನ ವೇಷಧಾರಿ ಶುಭ
ಲಗ್ನದೆ ಕರ್ಮವ ಧ್ಯಾನದಗ್ನಿಯಿಂದ ಸುಟ್ಟೆಯಲ್ಲ ॥ ೧

ಸಿರಿದೆಂಟು ಪ್ರಾಯದ ಕುಮಾರ ಮುನಿ ತಪಸೆಯಿಂದ
ಕಾರುಣ ದೀಪ ಕುಮಾರಾದಿಯೆಂದಾಯಿತಲ್ಲಾ ॥ ೨

ಬಿಸಿರಹಳ್ಳಿಯ ಬೆಟ್ಟದಲ್ಲಿ ಹೊಸ ಮಲೆಯೆ ಗುಹೆಯಲ್ಲಿ
ಎಸೆದಿರ್ದ ಕಾರಣ ನಿನ್ನ ಹೆಸರು ಕೀರ್ತಿವಾಯಿತಲ್ಲಾ ॥ ೩

ತ್ರಾಂಬೆನಾರೋಹಿಳು ಸುರದಿ ಮುಂಚೆ ನವಿಲೇಟೆಕಾಯ
ಕೈಯನಿಳುಹಿ ಮೋಕ್ಷದಂಚೆಗೆ ಬಾಗಿಸಿದೆಯಲ್ಲಾ ॥ ೪

ಕೀರ್ತಿಸಲಳವೆ ಪುಣ್ಯಮೂರ್ತಿ ರತ್ನಾಕರನ ಸಂ
ಪೂರ್ತಿಯ ಗುರುವೇ ಸ್ವಾಮಿ ಕಾರ್ತೀಕ ಯೋಗೀಂದ್ರ ॥ ೫

## ೧೪೦. ನಾನಾರುನಾನಾರುದೇಹ

ನಾನಾರು ನಾನಾರು ದೇಹವಾರು ಜ್ಞಾನವೆ ನಾನು
ನಾನೆಲೆ ಜ್ಞಾನ ತನುವೆ ಮತ್ತೇನು ನನ್ನದಿಲ್ಲ ॥ ಪಲ್ಲವಿ

ದೇಹಮುಂತರದೆ ಬಾಹ್ಯ ಸಂಗದ ಸ್ನೇಹದಿಂದೆನಗೆ ಮೋಹರಿಸಿತ್ತೈಸೆ
ಕರ್ಮ ನಾನೆಂದು ನಿರ್ಮೋಹಿಯಾದ ಮೇಲೆ ॥ ೧

ಹೊರಗನೆ ಮೆಚ್ಚಿ ಹುಚ್ಚನಾಗಿ ಮುಂದರಿಯದಿಷ್ಟುದಿನ ನಾ
ನೆರೆ ನೊಂದನ್ನೈಸೆ ನಾನಿನ್ನು ಜೀವವೆಂದರಿದು ಕೊಂದ ಮೇಲೆ ನಾನಾರು ॥ ೨

ಪರವಿದೆನ್ನಯದೆಂಬ ತತ್ವದ ಪರಿಯನರಿಯದೆ ತಿರುಗಿದೆನ್ನೈಸೆ
ಗುರು ಚಿದಂಬರ ಪುರುಷನಾದ ಮೇಲೆ ನಾನಾರು ॥ ೩

## ೧೪೧. ನಾನಾವರ್ಣಗಳಿಂದ

ನಾನಾ ವರ್ಣಗಳಿಂದ ನುತಿಸಿಕೊಂಬಾತನು
ನೀನೆ ನೀನೆ ನೇಮಿನಾಥ ನೀನೆ ನೀನೇ ॥ ಪಲ್ಲವಿ

ಹರಿಹರ ಶಂಭು ಸ್ವಯಂಭು ಶಂಕರ ಸರ್ವ
ಪುರುಷೋತ್ತಮ ಪುಣ್ಯ ಪುರುಷನೆಂಬಾತನು ನೀನೇ ನೀನೆ ॥ ೧

ಕೃಷ್ಣ ಕೃಷ್ಣಾಂಬುಧಿ ವಿಷ್ಣು ಜಗನ್ನಾಥ
ವಿಷ್ಣು ಸದ್ಧರ್ಮ ಚಾರಿಷ್ಣು ಎಂಬಾತನು ನೀನೆ ನೀನೆ ॥ ೨

ನಿರಘ ನಿಶ್ಚಲ ನಿತ್ಯ ನಿರುಪ ಬೋಧನೆ
ಗುರು ಹಂಸನಾಥ ಸದ್ಗುರುಯೆಂಬಾತನು ನೀನೇ ನೀನೆ ॥ ೩

ಬದ್ಧ ಕರ್ಮವ ಗೆಲಿದು ಶುದ್ಧ ಚಿನ್ಮಯನಾದ
ಬುದ್ಧ ನಿರಂಜನ ಸಿದ್ಧನೆಂಬಾತನು ನೀನೆ ನೀನೆ ॥ ೪

ಧರೆಯೊಳಮ್ಮಿನಭಾವಿ ಅರಸು ಹೊಬ್ಬಾಂಬುಧಿ
ಬಿರುದಾಂಕ ಬಾಲಕನ ಬ್ರಹ್ಮಕುಲ ಸ್ವಾಮಿ ನೀನೆ ನೀನೆ ॥ ೫

## ೧೪೨. ನಿಚ್ಚಪುಟವಿಕ್ಕುದೇಹ

ನಿಚ್ಚ ಪುಟವಿಕ್ಕು ದೇಹ ಘಟದಲ್ಲಿ ಮಾಡಿದ ಚಿನ್ನವಾ ॥ ಪಲ್ಲವಿ

ಕೇಳಾತ್ಮನೆಂದೆಂಬ ಚಿನ್ನ ಕರ್ಮದ ಕಟ್ಟಾ
ಕಾಳಿಕೆ ಕೂಡಿ ಕೀಳೆನಿಸಿತೂ
ಮೇಲು ಚೆನ್ನವ ಮಾಡು ತ್ಯೆರ
ತ್ನ ಲತೆಯೆಂಬ ಮೂಡಲಿಕೆ ರಸವೆರದೊಳಗಿಕ್ಕೂ ॥ ೧

ತಪದಿಂದ ನಾದ ನುಡುವಿರಿಸಿ ಮೈ ಗೋವೆಯ
ಪಿಪುಲಾತ್ಮದ ಧ್ಯಾನಾಗ್ನಿಯ ಹೊತ್ತಿ ಸೂ
ಸ್ವಪರ ವಿವೇಕ ಜಾರದಹಾಗೆ ಯಾತ್ಮನೆಂ
ಬಪರಂಜಿಯ ನೋಡುತಿರು ಕಂಡಾ ॥ ೨

ಕರ್ಮ ಕಲಂಕವೆಲ್ಲವು ಭಸ್ಮವಹುದೂ
ನಿರ್ಮಲಾತ್ಮನೆಂಬಪರಂಜಿ
ಕಾರ್ಮುಗಿಲೊಳಗಿರ್ದ ಸೂರ್ಯನಂತೆ ಸವುದು
ಪೆರ್ಮೆಯ ಸಿರಿ ನನಗಹುದಾಗಾ ॥ ೩

ತನು ಕೋವೆಯದು ಪುರುಷಾಕಾರದೊಳಗಿರ್ದ
ಕನಕಪುರುಷಾx x x x ರಾ
ತನು ಮೂರ ಸುಟ್ಟು ಪರಂಜ್ಯೋತಿರೂಪ ತೊ
ಟ್ಟನೆ ಲೋಕಾಗ್ರದಗೆನೆಗೆವಾನು ॥ ೪

ಉರಿ ಚಿನ್ನ ಮೂಲಿಕೆ ನುಡಿವಾಗ ಬೆರವುದೆ
ದೆರವಿಲ್ಲ ದೊಡ್ಡಾತ್ಮನೊಳೈಕ್ಯ

ಪರಮ ಚೋದ್ಯದ ವಸ್ತುವಿದು ಶಂಕೆಗೊಳದೆ
ಗುರು ಹಂಸನಾಥನೆನಿಸುವನೂ ॥ ೫

## ೧೪೩. ನಿನ್ನನಾನೆಂತುಚೋಪಾನ

ನಿನ್ನ ನಾನೆಂತು ಚೋಪಾನ ಮಾಡುವೆಯೆ ಗಿಣಿಯೇ ನಿನ
ಗುನ್ನತ ಬಲು ಕಂಟಕ ಬರುತ್ತದೆ ಗಿಣಿಯೇ ಗಿಣಿಯೇ ॥ ಪಲ್ಲವಿ

ಅಳವಲ್ಲದ ಮೂರು ಬಲೆ ನಿನಗೊಡ್ಡಿವೆಯೇ ಗಿಣಿಯೇ ಗಿಣಿಯೇ
ಕಳವಳಿಸದೆ ಅದರೊಳು ಬೀಳದಿರು ಕಂಡಾಯೇ ಗಿಣಿಯೇ ಗಿಣಿಯೇ
ಸುಳಿದರೆ ಮುರಿದು ನುಂಗುವೆನೆಂಬ ಬಲು ಬೆಕ್ಕುಯೇ ಗಿಣಿಯೇ ಗಿಣಿಯೇ
ಎರಡು ದಿಕ್ಕಿಲಿ ಎಂಟು ಮದಗಜ ಕಟ್ಟಿವೆಯೇ ಗಿಣಿಯೇ ಗಿಣಿಯೇ
ನಿನ್ನ ಮೀಂಟಿಯೆಲೆಚ್ಚಿ ಕೊಲ್ಲುವೆನೆಂತೆನುತಹರೆ ಗಿಣಿಯೇ ಗಿಣಿಯೇ
ಬಂಟರೈವರು ಬಲು ಸಾಹಸಿಗಳು ಕಂಡಾಯೇ ಗಿಣಿಯೇ ಗಿಣಿಯೇ । ನಿನ್ನ
ಬೇಂಟೆಯನಾಡಿ ಕೊಲುವೆನೆಂದನುತಿಹರೆ ಗಿಣಿಯೇ ಗಿಣಿಯೇ
ಒಂಭತ್ತು ಬಾಗಿಲೊಳು ಸುಳಿದಾಡದೆಯೆ ಗಿಣಿಯೇ ಗಿಣಿಯೇ । ಗಗ
ನಾಂಬರ ಪಂಜರದೊಳಗೆ ನೀನಿರು ಕಂಡಾಯೇ ಗಿಣಿಯೇ ಗಿಣಿಯೇ
ತುಂಬಿರ್ದ ಅಮೃತದ ಸವಿದುಂಡಾನಂದದಿಯೇ ಗಿಣಿಯೇ ಗಿಣಿಯೇ
ಚಿದಂಬರ ಪುರುಷನ ಧ್ಯಾನದೊಳಿರು ಕಂಡಾಯೇ ಗಿಣಿಯೇ ಗಿಣಿಯೇ

## ೧೪೪. ನಿನ್ನನುನಾನೇನೆಂಬೆ

**ರಾಗ: ಪೂರ್ವಿಕಲ್ಯಾಣ ತಾಳ: ಆದಿತಾಳ**

ನಿನ್ನನು ನಾನೇನೆಂಬೆ ಸದ್ಗುರುವೆ
ಕೃಪೆಯಾ ಸಮುದ್ರನೆಂಬೆ ಸೌಖ್ಯದ ನಿಧಿಯೆಂಬೆ
ಅಪರಾಜಿತೇಶ್ವರಾ ನಿನ್ನ ನಾನೇನೆಂಬೆ ॥ ಪಲ್ಲವಿ

ಭಕ್ತವತ್ಸಲನೆಂಬೆ ಭವರೋಗ ಹರನೆಂಬೆ ವಿ
ರಕ್ತರ ಮನದ ವಿಲಾಸನೆಂಬೇ
ಮುಕ್ತಿಯ ಮೊದಲೆಂಬೆ ಮೂಜಗದ ಅರಸನೆಂಬೆ
ಮುಕ್ತಿ ರಮಣಿ ಕೈಯ ಪಡಿದ ನಿನ್ನ ನಾನೇನೆಂಬೆ ॥ ೧

ಮಂಗಲ ರೂಪನೆಂಬೆ ಕಂಗಳ ಕಾಂತಿಯೆಂಬೆ
ರಂಗು ಥಾಳಿಪ ರತ್ನ ರೂಪನೆಂಬೆ
ಶೃಂಗಾರದ ಶಿಖಾಮಣಿಯೆಂಬೆ ಎನ್ನಂತ
ರಂಗವ ಬೆಳಗುವ ಮಣಿದೀಪ ನಿನ್ನ ನಾನೇನೆಂಬೆ ॥ ೨

ದುರಿತದಲ್ಲಣನೆಂಬೆ ಪುಣ್ಯಶರಣ್ಯನೆಂಬೆ
ನರಸುರ ಫಣಿರಾಜರೊಡೆಯ ನೀನೆಂಬೆ
ಅರಿತಿಹೆ ಅಪರಾಜಿತೇಶ ನಿನ್ನನು ರತ್ನಾ
ಕರ ಬ್ರಹ್ಮಚಾರಿಯ ಪ್ರಾಣೇಶ ನೀನೆಂಬೆ ॥ ೩

**೧೪೫. ನೀನುತ್ರಿಭುವನಸಾರ**

ನೀನು ತ್ರಿಭುವನ ಸಾರನಲ್ಲವೆ ನನ್ನ ಗುರುವೆ ಸುಭವ್ಯರ
ಮನದೊಳಗಿರುವೆ ಅಭವ್ಯರಿಗೆ ನೀನೇಕೆ ಬರುವೆ ॥ ಪಲ್ಲವಿ

ಚರ್ಮ ನೇತ್ತರು ಮಾಂಸದ ಕೆಚ್ಚಲೊಳು ನಿರ್ಮಲ ಪಾಲಿಪಂತೆ
ಕರ್ಮ ಕಷಾಯದ ಕಷ್ಟದ ಮೈಯಲಿ ರತಿ ನಿರ್ಮಲನು ನೀನು
ಮೋಡದ ಮರೆಯೊಳಿಹ ಭಾನು ನೀನೆ ನಾನು ನಾನೇ ನೀನು ॥ ೧

ಉರಿ ಪ್ರಭಕೆಂಬ ವೃತ್ತ ಸೂರ್ಯನೊಳು ಎರವಿಲ್ಲದೆಸೆವಂತೆ
ದರುಶನ ಜ್ಞಾನ ಚಾರಿತ್ರ್ಯ ತಪಸು ನಿನ್ನೊಳೆರವಿಲ್ಲದಿಹ
ಮುನ್ನ ಗುರುಶಾಸ್ತ್ರ ತಪಸಹುದು ಮತ್ತೆ ನಿನ್ನ ಸ್ವರೂಪದೊಳಗಿಹವೂ ॥ ೨

ಮರದೊಳಗ್ನಿ ಹೊಸೆದರೆ ಮರವ ತಾ ಸುಡುವಂತೆ
ಪರಮಾತ್ಮ ನಿನ್ನ ಧ್ಯಾನಿಸುತ ಮೂರು ಭರದಿಂದ ನೀ ಸುಡುವೆ
ಕೋಟಿ ಸೂರ್ಯ ಪ್ರಕಾಶವ ಪಡೆವೆ ಮುಕ್ತಿಗೆ ಲಂಘಿಸುವೆ ॥ ೩

ಬಿಳಿದು ಸಿಹಿಯು ಶೈತ್ಯರಸ ತಂಪು ಸಲೆ ಪಾಲೊಳೆಸೆವಂತೆ
ಚೆಲುವ ಸಂಪದ ಶಕ್ತಿ ಸುಖ ಸುಜ್ಞಾನಿಗಳು ನಿನ್ನೊಳಗೆ ಕೂಡಿಹವು
ನೋಡಿದರೆ ಭೇದವಾಗಿಹವು ನೋಡಿದರೆ ತಾನೆಯಾಗಿಹವು ॥ ೪

ಪದುಳದಂಬರದಂತೆ ಬಯಲ ನೀನದರಲ್ಲಿ ಚಿನ್ಮಯನೂ
ಸದಮಲ ಪುರುಷಾಕಾರನಿದರಿಂದ ಚಿದಂಬರ ಪುರುಷಾ
ನಿರ್ಮಲಾಕಾರ ಸತ್ಪುರುಷ ಜಯಜಯ ಪರಮಾತ್ಮಾನಂದ ಪುರುಷಾ ॥ ೫

**೧೪೬. ನೀನೇಕೆಹೊರಗಾಡುವೆ**

ನೀನೇಕೆ ಹೊರಗಾಡುವೆ ಆತ್ಮ
ಧ್ಯಾನದೊಳಗೆ ನಿಂದು ಸುಖಿಸಬೇಡವೆ ಭವ್ಯ ॥ ಪಲ್ಲವಿ

ನಾನಾ ಚಿಂತೆಯ ಬಿಟ್ಟು ಬೇರೆಂದು ಪರ
ಮಾನಂದಮಯನೆಂದಾತ್ಮನೊಳು ನಿಮ್ಮ

ಜ್ಞಾನವೆಂದೆಂಬ ಪಾಲ್ಗಡಲ ಮಿಂದು ಸುಖಿಸಿ
ದೇನಯ್ಯ ಬರಿದೆ ನೀ ನೋವೆಯೆಂದೆಂದೂ ‖ ೧

ಘಟ ಘಟ ಕುಂಭಂಗಳ ಬಹು ಚೆಂತೆ ಶಬ್ದ
ಮಟವೆಲ್ಲ ವಿಕಲ್ಪದ ಸಂತೆ
ಸ್ಫಟಿಕದೊಳೆಸೆವ ಜಿನ ಪ್ರತಿಮೆಯಂತೆ ದೇಹ
ಘಟದಲ್ಲಿ ಹೊಳೆವಾತ್ಮನನೋರಂತೆ ‖ ೨

ಮತಿ ಶಾಸ್ತ್ರ ಮೊದಲಾದ ಪಂಚ ವಿರುದ್ಧ ಕೆಟ್ಟೆ
ನುತ ಬೋಧ ಸೂರ್ಯ ಮಾಡುವ ನೀತಿ ಶುದ್ಧ
ಅತಿವಾದ ಧ್ಯಾನಿಸು ಪ್ರಬುದ್ಧ ಆತ್ಮ
ಹಿತವ ನಿರಂಜನ ಸಿದ್ಧ ‖ ೩

## ೧೪೭. ನೀವುನಿಮ್ಮಹಾಗೆ

ನೀವು ನಿಮ್ಮ ಹಾಗೆ ನಾನು ನಮ್ಮ ಹಾಗೆ
ನೀವು ಕರ್ಮಿಗಳು ನಾವು ಕೂಡುವಂದ ಹೇಗೆ ‖ ಪಲ್ಲವಿ

ನಿಮ್ಮ ರೂಪು ಬಹು ಪರಮಾಣುಗಳ ಕೂಟ
ನಿಮ್ಮ ರೂಪು ನಿರ್ಮಲವಾದ ಕೆಂಡದ ಕೂಟ
ನಿಮ್ಮ ರೂಪು ಬಹುಪx x x ನಮ್ಮ ಸಾಹಸ ಜನ ಬೇಂಟ
ನಮ್ಮ ಕೂಟವೆಂಬುದಿದು ಮರುಳಾಟ ‖ ೧

ಸಿರಿ ಬಿಸಿಟೆಂಬ ಗುಣ ನಿಮಗೆರಡುಂಟೂ
ನೆರೆ ಪ್ರೀತಿ ಕೋಪದಿಂದ ನಿಮ್ಮ ನಮ್ಮ ಗಂಟೂ
ಅರಿಯದಿಂದೊತ್ತಿ ತಮ್ಮ ನಿಮ್ಮ ನೆನೆಯಂಟೂ
ಅರಿದೇವಿನ್ನೇಕೊ ನಿಮಗೆಮ್ಮ ಕೂಡೆ ಬಂಟೂ ‖ ೨

ಹೇಗೆ ನೋಡಿದರು ನಿಮ್ಮೊಳು ಲೇಸ ಕಾಣೆ
ಹೇಗೆ ಭೇದ ಹುಟ್ಟಿಯ ನೀವಿಹುದೊಂದು ಜಾಣೆ
ಹೋಗಿರೊ ನಾ ನಿಮ್ಮನೆಂತು ಕೆಡಿಸದೆ ಮಾಣೆ
ಶ್ರೀ ಚಿದಂಬರ ಪುರುಷನ ಬಿಡರಿರಾ ‖ ೩

## ೧೪೮. ನೋಡಬೇಡವೆತನ್ನಾತ್ಮನ

ನೋಡಬೇಡವೆ ತನ್ನಾತ್ಮನ ನೋಡಬೇಡವೇ
ಕೇಡಿನೊಳಗಣ ನಾಡಿನಾಟ್ಯವ ಹೊರ ಹೊರ

ಗಾಡಿ ಬೊಂಬಿಲು ಬಾಡಿ ಮತಿಯ ನೀ
ಗಾಡಿಯಹುದಾವ ಪ್ರಹುಡೀ ॥ ಪಲ್ಲವಿ

ಹಲವು ಚಿಂತೆಯ ತೊರೆದೇಕಾಂತ ಸ್ಥಳದೊಳಗೊಬ್ಬನೆ ಕುಳಿತು
ಸಲೆ ತನ್ನಾತ್ಮನ ಭಾವಿಸಿ ನೋಡಲು ಹಳಚುವ ಕಣ್ಗಳು ಮುಚ್ಚಿ
ಅಸಿಯ ಕೊಚ್ಚಿ ಸುಖದಲ್ಲಿ ಹೆಚ್ಚಿ ಮುಕ್ತಿಯ ನೆಚ್ಚಿ ॥ ೧

ಉದ್ದಿನೊಳಗಣ ಬೆಳೆಯ ಕಂಭದೊಳಿದ್ದ ಸ್ಫಟಿಕದ ಬೊಂಬೆಯು ಬೊಂಬೆಯಲಿ
ಹೊದ್ದಿಯ ಹೊದ್ದದೆ ಮೈಯೊಳು ಸುಪ್ರಭೆಯದಂತೋರುವುದಾಗ
ಕರ್ಮ ವಿಭಾಗ ಬಾಹ್ಯ ವಿರಾಗ ಧ್ಯಾನದುದ್ಯೋಗಯಿದು ಶಿವಯೋಗ ॥ ೨

ದೇಹಿಗಳೆಲ್ಲರ ಮೈಮೈದಪ್ಪದೆ ಶ್ರೀ ಹಂಸೇಶ್ವರನಿಹನು ನಿಹನು ನಿಹನು
ಬಾಹ್ಯ ವಿಭಾಗ ಭಾವಿಸಿ ನೋಡಲು ಮೋಹಿದ ಕರ್ಮ ವಿನಾಶ ಜ್ಞಾನಪ್ರಕಾಶ
ಕೆಡದ ಸಂತೋಷ ಪರಮ ವಿಲಾಸ ಮುಕ್ತಿ ನಿವಾಸ ॥ ೩

## ೧೪೯. ನೋಡಿರೆಲ್ಲರುಕೊಂಡಾಡಿರೆಲ್ಲರು

ನೋಡಿರೆಲ್ಲರು ಕೊಂಡಾಡಿರೆಲ್ಲರು ನಾಡು ಮಾತು
ಬೇಡ ಭಕ್ತಿಗೂಡಿ ಸಮುದ್ರಾಧೀಶ್ವರನಾ ॥ ಪಲ್ಲವಿ

ಹೊಳೆವ ಲವಣ ವಾರ್ಧಿಯ ನಡುವೆಯಳತೆಯಾದುದ ಮಹಾತ್ಮನ
ನೆಳಲು ಸೋಂಕಿದುಪ್ಪು ನೀರ ಎಳೆನೀರಂತೆ ಮಾಳ್ಪ ದೇವನ ॥ ೧

ಏನೆಂದೆಂಬೆನೈಯ ಹಲವು ಮೀನು ಮೊಸಳೆ ಸರ್ಪಂಗಳು
ಜ್ಞಾನಿಗಳಂದದಲಿ ಕೂಡೆ ಆನಂದದಲಿ ಬಲಗೊಂಬುವನ ॥ ೨

ಅಂದೊಬ್ಬರಿಸುರಿತಾಳ ಭಕ್ತಿಯಿಂದ ಭಾಜವನೆಳೆಯುತಿರಲು
ತಂದೆಷ್ಟು ಪಟ ಸೂತ್ರಕ್ಕೆ ಮೂರೊಂದೊಂದುಬ್ಬಿ ಬೆಳೆವ ದೇವನ ॥ ೩

ಹಲವು ಹಡಗು ಹೋಗದಲ್ಲಿ ಬಲಕಿಕ್ಕಿದರೆ ಲಾಭ ನಿಲದೆಯೆಡಕೆ
ತೊಲಗೆ ನಷ್ಟಂ ಬಲಗೊಳ್ಳಿರೊ ಬಲ್ಲವರೂ ॥ ೪

ದ್ವಾರಾವತಿಯೊಳಂದು ಬಲನಾರಾಯಣರ ಪೊರೆದವನ ಶೃಂ
ಗಾರ ಕವೀಂದ್ರನ ಸ್ವಾಮಿ ಚಾರು ಸಮುದ್ರಾಧೀಶ್ವರನಾ ॥ ೫

## ೧೫೦. ನೋಡುನೋಡುತನು

ನೋಡು ನೋಡು ತನುವೆನ್ನ ಕೂಟ ಕಂಡಾ
ಮೋಡದಂದದಿ ತಾನು ಸೂರ್ಯನಂದದಿ ನಾನು
ಕೂಡುವುದೇರಾಟ ಕರ್ಮ ಮಾಡಿದ ಮರುಳು ಮಾಟ ಮೈಯೊ
ಳಾಡುವದಿದು ಪೇಚಾಟ ‖ ಪಲ್ಲವಿ

ಕರ್ಮವೇ ತನ್ನ ಬಾಳಿನ ಮೂಲ ನಿರುಪಮ ಧರ್ಮವೇ ನನ್ನ ಮೂಲಾ
ಕೂರ್ಮೆ ಕೋಪವೆ ತನಗಾಸೆ ನನಗೆ ಕ್ಷಮೆ ನಿರ್ಮಮಕಾರವೈಸೆ
ದುರ್ಮೋಹವೆಂಬುದು ತನ್ನ ತತ್ತಿನ ದಿನ ನಿರ್ಮೋಹ ನನ್ನದಲ್ತು
ಚರ್ಮ ಮಾಂಸವೆ ತನ್ನ ರೂಪು ಸುಜ್ಞಾನ ಜ್ಯೋತಿರ್ಮಯ ನನ್ನ ರೂಪು ‖ ೧

ಆವಾನ ಬಾಧೆಗೆ ತಾಳೊಳಗಹುದು ನಾನ್ನೋವಿಗೆ ಸಿಲುಕುವೆನೆ
ಬೇವುದು ಮನ ಬೆಂದ ಮನೆಯೊಳಗಣ ಬಾ ಬೇವುದೆ ಬೆಂಕಿಯಿಂದ
ಮೂವಿಧಿಯೊಳಗಾದ ದೇಹದ ಸೋಂಕಿಂದ ಧಾವತಿಪಟ್ಟವನು
ಗಾವಿಲರೊಡನಾಡಿ ಗರ್ವನು ಕೆಟ್ಟೆನೆಂಬ ವಾರ್ತೆ ತೋರಿತಲ್ಲಾ ‖ ೨

ದೇಹ ಬೇರೆ ದೇಹದೊಳಗೆ ನಿಲಿಸಿರ್ದೆಯೆಂದೂಹಿಸಿ ಧ್ಯಾನಿಸದೆ
ಹಾಹಾ ನಾನಿಷ್ಟು ಕಾಲವು ದುರಿತಾಜ್ಞೆಯಿಂದಾವತಿ ಪಟ್ಟೆ ನಾನೂ
ಹೋಹೋ ಇನ್ನೇಕೆ ನಾನಾ ಚಿಂತೆ ನಮಗಿನ್ನೂ ಸಾಹಸಿಯಾಗಿ ನಿಂದು
ಶ್ರೀ ಹಂಸನಾಥನ ನೋಡು ಕರ್ಮವ ನೀಗಿ ಹೋಹೆನು ಕೈವಲ್ಯಕೆ ‖ ೩

## ೧೫೧. ಪಾರಿತಾತ್ಮನೆಚ್ಚರಿಕೆ

ಪಾರಿತಾತ್ಮನೆಚ್ಚರಿಕೆ ‖ ಪಲ್ಲವಿ

ಮೂರು ಕೋಣೆಯ ದಾಂಟಿ ಸಿರಿ ತನ್ನ ವಕ್ಕಿ
ಆರೇಳರ ಬೇಳುವೆಯ ತಳಿದು
ಮೂರು ಕೋಣೆಯ ರತ್ನವ ಕಳಬಂದರು
ಆರು ದಳದ ತಳವಾರರೆಚ್ಚರಿಕೆ ‖ ೧

ಹತ್ತು ಮಗ್ಗಲ ದಾಂಟಿ ಸುತ್ತ ತನ್ನವನಿಕ್ಕಿ
ಹತ್ತೆಂಟರ ಬೇಳುವೆಯ ತಳಿದು
ಮತ್ತೆ ಬಚ್ಚಿಟ್ಟು ರತ್ನ ಕಳ ಬಂದರು
ಹತ್ತು ದಳದ ತಳವಾರರೆಚ್ಚರಿಕೆ ‖ ೨

ಹದಿನೆಂಟು ಮಾಯದ ಹೊಗರುಗತ್ತಲೆಯೊಳು
ಸದಮಲ ಜ್ಯೋತಿಯ ಬೆಳಕ ತುಂಬಿ
ವಿಧವನರಿದು ಹರಿಧನಕೊಳಗಾದರು
ಚದುರ ನೀ ಕಾಯೊ ಚಿದಂಬರ ಪುರುಷಾ ॥ ೩

<u>೧೫೨. ಪುಣ್ಯಫಲಾಆಹಾ</u>

**ರಾಗ: ನಾದನಾಮಕ್ರಿಯಾ ತಾಳ: ಆದಿತಾಳ**

ಪುಣ್ಯಫಲಾ ಆಹಾ ಪುಣ್ಯಫಲಾ
ನರದೇಹ ಪಿಡಿದು ಜಿನಮತದೆ ಜನಿಸುವುದು ॥ ಪಲ್ಲವಿ

ಸೇವ್ಯಾಸೇವ್ಯವನರಿತಿರಬಹುದು ಸು
ಭವ್ಯರ ಗೋಷ್ಠಿಯೊಳಿರಬಹುದು
ದಿವ್ಯ ವ್ರತವನಾಂತು ನೋಡಲುಬಹುದು ಮುಂ
ದಿವ್ಯಯ ಪದವನು ಪಡೆಯಲುಬಹುದು ॥ ೧

ಸಿರಿವಂತ ದಾನವ ಮಾಡಲುಬಹುದು ಶಾಸ್ತ್ರ
ಪರರಿಗೆ ಉಪದೇಶಿಸಬಹುದು ಇನಿತು
ದೊರೆಯದಿರ್ದೊಡೆ ಮಾಳ್ಪ ಜನರ ಪೂಜೆಯ ಕಂಡು
ಪರಿಣಾಮ ಶುದ್ಧಿಯ ಪಡೆಯಲುಬಹುದು ॥ ೨

ಪೂವಿಂದ ಪರಮನ ಪೂಜಿಸಬಹುದು ಒಮ್ಮೆ
ಭಾವನೆಯಿಂದಲಿ ಭಾವಿಸಬಹುದು
ಜೀವಶುದ್ಧಿಯ ಮುಂದೆ ಕಾಣುವ ಪದಿನಾರು
ಭಾವನೆಗಳನು ಭಾವಿಸಬಹುದು ॥ ೩

ಭೋಗದಿ ವಿರಕ್ತಿಯದೋಲು ಯೋಗಿಯಾಗಿ ಮ
ಹಾಗುಣ ಪಡೆದು ನಡೆಯಲುಬಹುದು
ಆಗಮ ಸಂಸಿದ್ಧನಾದರೆ ಮಹಾಯೋಗಿ
ಯಾಗಿ ಕರ್ಮಗಳ ಖಂಡಿಸಬಹುದು ॥ ೪

ಮಂಗಲ ರತ್ನತ್ರಯ ದೊರಕಿದರೆ ಮು
ಕ್ತ್ಯಾಂಗನೆಯೊಡನೆ ಮೋಹಿಸಬಹುದು
ಶೃಂಗಾರ ಕವಿಯಾಣ್ಮ ಕಡಲಾದಿ ಜಿನರಾಜ
ಸಂಗದೊಳೈಕ್ಯವಾಗಿ ಬಾಳಲುಬಹುದು ॥ ೫

## ೧೫೩. ಬಯಿದವರಾರೊನಿನ್ನ

ಬಯಿದವರಾರೊ ನಿನ್ನ ಪಾಪವವೊಯಿದು ನೋಯಿಸಿತೊ ನಿನ್ನ ದಿಟಕೆ
ಬಾಯಿದೆರೆದು ನುಡಿದರೆನ್ನ ಆತ್ಮಾ ಬಯಿದವರಾರೊ ನಿನ್ನ ॥ ಪಲ್ಲವಿ

ಹೊಲೆಯನೆಂದೊಬ್ಬನು ಬೈದರೆ ನಿನಗದು
ಬಲುದೋಷವೆಂದು ನೋವೆ
ಹೊಲೆಗೊಂಡ ತಾಯ ಗರ್ಭದಲಿ ಜನಿಸಿ ಮುನ್ನ
ಹೊಲಸಿನೊಳಿರ್ದೆಯಲ್ಲೋ
ಮಲದ ಕುಳಿಯೊಳಿರ್ದೆಯಲ್ಲೋ ಜವನ
ಕೊಲೆಗೆ ನೀ ಸಂದೆಯಲ್ಲೋ ಆತ್ಮ ॥ ೧

ಹಲಬರಿಗೆ ಹುಟ್ಟಿದೆಯೆಂದೊಬ್ಬ ಬೈದರೆ
ಹಲುಬಿಂದ ಮೊರೆದೇಳುವೆ
ಎಲೆ ಜೀವ ಎಂಭತ್ತು ನಾಲ್ಕು ಲಕ್ಷ ಯೋನಿ
ಯೊಳಗೆ ನೀ ಬಿದ್ದೆಯಲ್ಲೋ
ತೊಟ್ಟಿಲೊಳು ಕಡು ಬಾಳ್ದೆಯಲ್ಲೋ
ದುಃಖದಲಿ ಕಡುನೊಂದೆಯಲ್ಲೋ ॥ ೨

ಹಳಿದಾಡೆ ಹೊಗಳಿದೊಡತ್ತಿತ್ತ ನೋಡದೆ
ಒಳಗೆ ನಿನ್ನಡಿ ನೀ ನೋಡು
ತಳತಳಿಸುವ ಹಂಸನಾಥ ನಿನ್ನೆದೆ ತುಂಬಿ
ಬೆಳಗಾಗಿ ತೋರುವನೂ
ಬೇಗದಿ ಮುಕ್ತಿಗೇರುವನೂ ॥ ೩

## ೧೫೪. ಬರಿಯಬೊಮ್ಮದಮಾತು

ಬರಿಯ ಬೊಮ್ಮದ ಮಾತು ಕೇಡು । ಗುರುವಾರ
ಕರುಣವಿಡಿದು ಪರಮಾತ್ಮನ ನೋಡು ॥ ಪಲ್ಲವಿ

ದಳ ನಾಲ್ಕರಲಿ ಜನ್ಮವಾಡು ಮುಂದೆ
ದಳವಾರರುಂಟಲ್ಲಿ ನೀ ತಿರುಗಾಡು
ಒಳಗೆ ಯೋಚಿಸಿ ನಿನ್ನ ನೋಡು ತಿಳಿ
ಗೊಳನುಂಟಲ್ಲಿ ನೀ ಮುಳಿದಾಡು ॥ ೧

ವಾಯು ಮನವನೊಂದು ಮಾಡು । ನಿನ್ನ
ಕಾಯವಿಡಿದು ಪರಮಾತ್ಮನ ನೋಡು

ಮಾಯ ಪಾಶವ ಹೋಗಲಾಡು ನಿನ
ಗಾಯುಷ್ಯವುಂಟಲ್ಲಿ ಇಲ್ಲಿಲ್ಲ ನೋಡು
ಬ್ರಹ್ಮನಾಳವ ಪೊಕ್ಕು ನೋಡು । ಪರಿ
ಬ್ರಹ್ಮಮಂಪಟದೊಳಗಾನಂದವಾಡು ॥ ೨

ಧರ್ಮ ಗುರುವನೊಮ್ಮೆ ಪಾಡು ನಮ್ಮ
ನಿರ್ಮಲ ಗುರು ನಿರಂಜನ ಸಿದ್ಧನ ಕೂಡು ॥ ೩

**<u>೧೫೫. ಬರೆದದೆಬರೆದದೆ</u>**

ಬರೆದದೆ ಬರೆದದೆ ಅಂಜದಿರು
ಬರೆದ ಬರಹ ತಪ್ಪದಂದದಿ ॥ ಪಲ್ಲವಿ

ತಾನೆಸಸಿದ ಹಾಗೆ ತನಗಾಗಲರಿಯದು
ಹೀನ ಮನವ ನೆಚ್ಚಿ ಮರುಗದಿರಾ
ಏನಹುದೊ ಎದೆ ಹಾರುಗೊಳ್ಳದೆ
ತಾನೆ ಬಪ್ಪದು ತಪ್ಪದಂಜದಿರೂ ॥ ೧

ಉದಯಾಸ್ತಮಾನವು ಕುದಿದು ಕೋಟಲೆಗೊಂಡು
ಎದೆ ಹಾರು ತಪ್ಪದು ಅಂಜದಿರು
ಮೊದಲೆ ಆಯುಷ್ಯ ಕರ್ಮವು ಇಷ್ಟೊಂದು
ವಿಧಿ ಮುನ್ನ ಬರೆದಿದೆ ಅಂಜದಿರು ॥ ೨

ಮನವೊಂದು ಚಿಂತಿಸಿ ಮರುಗಿ ಕೋಟಲೆಗೊಂಡು
ಅನುದಿನದಲಿ ನೊಂದು ಕುದಿಯದಿರು
ತನುವ ದಂಡಿಸಿ ಪರಮಾತ್ಮನ ಧ್ಯಾನಿಸಿ
ಧರೆ ಗುರು ಹಂಸನಾಥಗೆ ಶರಣಾಗು ಮನವೆ ॥ ೩

**<u>೧೫೬. ಬಿಡದುಕಾಣಯ್ಯಚೆನ್ನಯ್ಯಾ</u>**

**ರಾಗ: ಶಂಕರಾಭರಣ ತಾಳ: ಮಿಶ್ರಚಾಪುತಾಳ**

ಬಿಡದು ಕಾಣಯ್ಯ ಚೆನ್ನಯ್ಯಾ ನೀ ಎನ್ನ
ಬಿಡಿಸು ಬಿಡಿಸು ದಮ್ಮಯ್ಯ
ಒಡನಾಡುತ್ತಾಡುತ್ತನಂತ ಕಾಲದಿ ಕರ್ಮ
ಪಿಡಿದು ಜಡಿದು ಅಂಟಿ ಅಡರಿಕೊಂಡೆನ್ನ ॥ ಪಲ್ಲವಿ

ಹಿಂದೆನ್ನ ಕಾಯ ಗರ್ಭದೊಳಿಕ್ಕಿ
ಮುಂದಕ್ಕುಪಾಯದಿಂದಲಿ ಹೊಂದಿಸಿ
ಇಂದಿಲ್ಲಿ ಹುಟ್ಟಿ ಬೆಲೆದು ಜವ್ವನವಾಂತು
ಮುಂದೂ ಕೆಡಿಸಿ ಮುದ್ದು ಮಾಡಿ ಕೆಡಿಸಿತೆನ್ನಾ ॥ ೧

ಜರೆಯ ತೋರಿತು ಸರ್ವಾಂಗ ಆವರಿಸಿತು
ಕರಿಯ ಕೂದಲು ಬಿಳಿದಾಗಿ ಹಾಸಿಗೆಯಲ್ಲಿ
ಹೊರಳಿ ಹೊರಳಿ ಮುಂದೆ ಹೊಮ್ಮಿದ ರೋಗಗಳು
ಕೆರಳಿ ಕೆರಳಿ ಮತ್ತೆ ನರಳಿ ಕೆಡಿಸಿತೆನ್ನ ॥ ೨

ಮರಣ ವೇದನೆಗಳ ತೋರಿಸಿ ಸದ್ಗುರು
ಚರಣಾರಾಧನೆಯನ್ನು ಮರೆಸಿ ಮಮತೆಯೊಳು
ಬೆರಸಿ ದುರ್ಗತಿಗೆನ್ನ ಗುರಿಮಾಡಿ ಸದ್ಗುಣ
ಚರಿತವನಡಗಿಸಿ ಕೆಡಿಸಿತು ಇಂದೆನ್ನ ॥ ೩

ಹೀಗೆನ್ನ ಪೀಡಿಸಿ ಅನಂತ ಕಾಲದಿ ಕರ್ಮ
ಹೋಗಿಲ್ಲ ಕರ್ಮ ನಿರ್ಜರೆಯಿಲ್ಲಾ
ಹೇಗಿನ್ನುಪಾಯವ ಪೇಳು ನಿನಗೆ ತಲೆ
ಬಾಗಿದೆ ಶ್ರೀ ಗುರು ಚರಣಂಗಳಾಣೆ ॥ ೪

ಬಂದೆ ನಿಮ್ಮೆಡೆಗೆ ನಾ ಎನ್ನ ಭವಾಬ್ಧಿಯ
ಕುಂದಿಸು ನೀ ಬೇಗ ಅಡಿಗಡಿಗೆ
ಹೊಂದಿಸು ರವಿ ಇಂದು ಕಿರಣನೆ ನಿನ್ನ ನಾ
ನೆಂದಿಗು ಬಿಡೆ ಶ್ರೀ ಗುರು ಹಂಸನಾಥ ॥ ೫

<u>೧೫೭. ಮಂಗಳನಿಜ</u>

ಮಂಗಳ ನಿಜ ಪರಂಜ್ಯೋತಿಗೆ ಜಯ
ಮಂಗಳ ಗುರು ಹಂಸನಾಥನಿಗೇ ॥ ಪಲ್ಲವಿ

ಪದಿನೆಂಟು ದೋಷವ ಗೆಲಿದಷ್ಟಕರ್ಮವ
ಸದೆದಷ್ಟ ಗುಣ ವಿಶ್ವರೂಪಾದಗೇ
ಮದನ ವಿಜಯನಿಗೆ ಮಂಗಳ ಮೂರ್ತಿಗೆ
ಮುದಿತ ಬೋಧಾಮೃತದರಹಂತಗೇ ॥ ೧

ಬದ್ಧ ಕರ್ಮಾರಿ ಪ್ರಬುದ್ಧ ಸುಜ್ಞಾನ ಸ
ಮೃದ್ಧ ನಿರಂಜನ ಸಿದ್ಧರಿಗೇ

ಶುದ್ಧ ರತ್ನತ್ರಯ ರೂಪಾತ್ಮನಾದ ಪ್ರ
ಸಿದ್ಧ ಬೋಧದಾಚಾರ್ಯರಿಗೇ ॥ ೨

ಸುರನರ ನಾಗೇಂದ್ರರಿಗುಪದೇಶವ
ಪರಿಪಾಲಿಸಿದುಪಾಧ್ಯಾಯರಿಗೆ
ಪರಮ ಸಂಪದವೀವ ಸರ್ವ ಸಾಧುಗಳಿಗೆ
ವರ ವೇಣುಪರಿ ಪರಬ್ರಹ್ಮನಿಗೇ ॥ ೩

**೧೫೮. ಮಹಾನವಮಿಯಮಾಡಿದ**

ಮಹಾನವಮಿಯ ಮಾಡಿದನೋರ್ವ ಮುನಿರಾಯ
ಇದು ನವ ಚೋದ್ಯವಮ್ಮಾ ॥ ಪಲ್ಲವಿ

ಲಕ್ಷಣವಿಡಿದಾತ್ಮ ಪುರದೊಳೆಂಭತ್ತುನಾಲ್ಕು
ಲಕ್ಷ ಗುಣಗಳೆಂಬ ತೇಜಿಗೆ
ರಕ್ಷೆಗಟ್ಟಿಸಿದರೆ ಕರ್ಮಗಳೆಂಬನ್ಯ
ಪಕ್ಷದ ಧರೆಯೆಲ್ಲ ನಡುಗಿತು ॥ ೧

ಹದಿನೆಂಟು ಸಾವಿರ ಶೀಲಗುಣಗಳೆಂಬ
ಮದದಾನೆಯೊಡ್ಡುತಾ ಕಾದಾ
ಮದನಗೆ ಜವನಗೆ ಮೋಹತಾಕ್ಷರಸನೆನೆ
ಯೆದೆ ದಮ್ಮದುಡುಕು ಜಗ್ಗೆಂದಿತೂ ॥ ೨

ಅಷ್ಟಾಂಗ ಯೋಗವೆಂದೆಂಬ ರಥಗಳನು
ತ್ಕೃಷ್ಟವೆರಸಿತಾ ಕಾಬಾಗ
ಕಷ್ಟ ಜನನ ಮೃತ್ಯು ಮುಪ್ಪು ರೋಗಂಗಳ
ದುಷ್ಟರ ಸೇನೆ ಕಂಗೆಟ್ಟಿತೂ ॥ ೩

ನೂರುಹನ್ನೆರಡು ಕೋಟಿಯು ಲಕ್ಷವೆಂಭತ್ತು
ನೂರು ಆಯಿವತ್ತೆಂಟು ಸಾವಿರದೈದೆಂಬ
ತೋರಿದಾಗ ಮದಸೇನೆಯ ತಾ ಕಾಬಾ
ನೂರು ಮಿಥ್ಯಾತ್ಮತ್ವದೇಳ್ಳೆಸಿತೂ ॥ ೪

ಜ್ಞಾನತನುವಿಲ್ಲಾತ್ಮ ಧ್ಯಾನ ಬಾಣವ ತೊಟ್ಟು
ತಾನಿಂದೊಡಾತ್ಮ ವೈರಿಗಳೆಲ್ಲ
ಸ್ಥಾನಗೆಟ್ಟೋಡಿದರೊಳಗಾಯಿತು ಮುಕ್ತಿ ಸು
ಜ್ಞಾನ ಚಿದಂಬರ ಪುರುಷಗೆ ॥ ೫

## ೧೫೯. ಮಿಂದುಬಾಮಿಂದು

ಮಿಂದು ಬಾ ಮಿಂದು ಬಾ ಮಿಂದು ಬಾ ಕಂದಾ
ಅಂದದ ಶ್ರೀ ಜಿನಮತವೆನಿಪ ಗಂಗೆಯಲ್ಲಿ ॥ ಪಲ್ಲವಿ

ಮೂರು ಮೂಢಗಳೆಂಬ ಹೊಗೇರಿಯಲ್ಲಿ
ಆರನಾಯತನವೆಂಬ ಬೇಡರ ಹಳ್ಳಿಯಲ್ಲಿ
ಮೀರಿದೆಂಟು ಮದಗಳ ಕಾಳಗುಡಿಗಳಲ್ಲಿ
ಸೇರಿಪಾಡುವ ಗೋಷ್ಠಿಯೊಳಿದ್ದೆಯಲ್ಲಾ ॥ ೧

ಏಳು ವ್ಯಸನವೆಂಬ ಕೀಳು ಕುಲದವರ
ಮೇಳದಲ್ಲಿ ಶಂಕಾದಿ ಮಲದೋಷಗಳಲಿ
ಏಳು ಭಯಗಳೆಂಬ ಮಸಣದೊಳಿರುತಿಹ
ಧೂಳಿನೊಳಗಾಡುತ್ತ ನೀ ಬಂದೆಯಲ್ಲಾ ॥ ೨

ಕಡು ಪಂಚಪಾತಕರೊಡನಾಡಿ ಬಂದೆ । ಕೈ
ಪಿಡಿದೆ ದುಷ್ಕುಲ ಕಾನನದ ಕನ್ಯೆಯರಾ
ಮಡಗಿದೆ ಕಲೆಯುಳ್ಳ ಮರಣವೆಂಬ ರನ್ನಗ
ನ್ನಡಿಯ ತಾರದೆ ಅರಮನೆಗೆ ಬಾರದಿರು ॥ ೩

ಮಿಂದು ನೀನು ಶುದ್ಧವಾದಲ್ಲದೆ ನಮ್ಮ ಶಿವಪುರ
ದೊಂದು ಸಣ್ಣ ಪಿಳ್ಳಕೋಟೆಯ ಮುಟ್ಟಲುಬಾರದು
ಇಂದು ನಮ್ಮಯ ಮಾತ ಲಾಲಿಸಿ ಕೇಳದಿರ್ದೊಡೆ ಹಿಂದಿನಂತೆ
ಮುಂದಕೂ ದುರ್ಗತಿಗಳು ತಪ್ಪದಯ್ಯಾ ನಿನಗೆ ॥ ೪

ಷೋಡಶ ಭಾವನೆಗಳು ಎಂದು ಕಂಗೊಳಿಸುವ
ಷೋಡಶಾಭರಣಗಳ ತೊಟ್ಟು ಕ್ಷತ್ರಿಯರಾ
ಕೂಡಿ ನಿರ್ವಾಣ ಸಾಮ್ರಾಜ್ಯವನು ಆಳಿ
ಕೂಡಬಹುದು ಶ್ರೀಮಂದರಸ್ವಾಮಿಯ ಸಂಪದವನು ॥ ೫

## ೧೬೦. ಮೋಸದಿಂದಾದಪಾಪಕೆ

ಮೋಸದಿಂದಾದ ಪಾಪಕೆ ಬೆಚ್ಚಲೇಕೆ ಜಿ
ನೇಶನ ಮತದೊಳುಂಟದು ಪರಿಹಾರ ॥ ಪಲ್ಲವಿ

ಕೆಟ್ಟ ವಾಸನೆ ತೀಡೆ ನಶಿಸಿ ಪರಿಹಾರ
ಮುಟ್ಟೆ ಸೋಂಕಲು ಗಂಧೋದಕ ಪರಿಹಾರ

ಪುಟ್ಟಿದ ಪೊಲ್ಲನೋಟಕೆ ಅನುಬಿಂಬವ
ದಿಟ್ಟಿಸಿ ನೋಡಲಂತದು ಪರಿಹಾರ ॥ ೧

ಅಪಶಬ್ದ ಶತವ ಕೇಳಿದಡೊಮ್ಮೆ ಜಿನಪದ
ವಿಪುಳ ನಾಮವ ಕೇಳಲದು ಪರಿಹಾರ
ಕೃಪೆ ಹೀನರೊಡನೆ ಮಾತಾಡಲಂತರುಹನ
ಜಪಿಸಿ ನೋಡಲಂತದು ಪರಿಹಾರ ॥ ೨

ಪರುಷ ವಿಷಯದಲ್ಲಿಯು ಏನಾದಡೂ
ದುರುದುಃಖವ ಬಂಧವ ಮಾಡಿಕೊಂಡದಕೆ
ನಿರುತ ಶೃಂಗಾರ ಕವಿಯ ಸ್ವಾಮಿಯ ಜಲಧಿಯ
ಪುರ ಜಿನೇಶನ ಧ್ಯಾನವೊಂದೆ ಪರಿಹಾರ ॥ ೩

<u>೧೬೧. ರಾಜನೀತಿಯಕೇಳಿನಡೆದರೆ</u>

ರಾಜನೀತಿಯ ಕೇಳಿ ನಡೆದರೆ ಸುಲೋಕ ಪೂಜಿತನಾಗುವನು ಆತ್ಮ
ರಾಜ ನೀನು ತಪೋರಾಜ್ಯದೊಳಗೆ ಯೋಗದೋಜೆಯ ಕೇಳಿ ನಡೆ ॥ ಪಲ್ಲವಿ

ಪ್ರಾಣಯಾಮವೆಂದೆಂಬ ಪ್ರಧಾನಿಯ ಕ್ಷೀಣವ ಕಾಣದಿರೂ ಸರ್ವ
ತ್ರಾಣಿ ಪ್ರತಾಹಾರವೆಂಬ ಸೇನಾಪತಿ ಹೊಣೆಯ ಮಾಡಿದರೂ
ಮಾಣದೆ ಕರಣೇಂದ್ರಿಯವೆಂಬ ಮಲ್ಲರ ಕೂಡೆ ಹೊಣೆ ಸಾಧನೆಯ ಮಾಡೂ ಮೈ
ರೇಣು ಹೋಹಂತೆ ಸುಜ್ಞಾನ ಜಲದಲ್ಲಿ ನಿರ್ವಾಣ ಮಜ್ಜನವ ಮಾಡೂ ॥ ೧

ಚೀನಾಂಬರವ ಹೊದ್ದೆ ಕ್ಷಮೆಯೆಂಬ ವೈರಾಗ್ಯ ದಾನ ಭೂಷಣವಾಗಿ ಬ್ರಹ್ಮ
ಸ್ಥಾನದ ಬಾಗಿಲ ತೆಗೆದು ಚಿನ್ಮಯನ ಬ್ರಹ್ಮಾನಂದದಲಿ ಪೂಜಿಸೂ
ಮೌನವ್ರತಗಳೆಂಬ ಹಿತವರೆಂದೆಂಬಾ ಪ್ರಧ್ಯಾನ್ಯವೆಂಬಮೃತವನೂ ರಮ್ಯ
ಸ್ಥಾನದೊಳಗೆ ಕುಳಿತಾರೋಗಣೆಯ ಮಾಡು ಜ್ಞಾನಿಗಳಂಗವಿದೂ ॥ ೨

ಸಾಮಭೇದದಲಿ ದಾನದಾಕಾಂಕ್ಷೆಯಲಿ ಈ ಮೈಯ ಭೇದದಲಿ ಕಷ್ಟ
ನಾಮಕಷಾಯಂಗಳ ದಂಡವಿವ ನಾಲ್ಕ ನೀ ಮನವರಿತು ಮಾತೂ
ಪ್ರೇಮರವುದರೆಂಬ ದುಷ್ಟರಿಬ್ಬರ ನಿನ್ನ ಸೀಮೆಯ ಸೊಗಸದಿರೂ ಆತ್ಮಾ
ರಾಮನಾಗಿರು ಚಿದಂಬರ ಪುರುಷರ ಸಿರಿ ನೇಮದೊಳಗಿಹುದಾತ್ಮನೆ ॥ ೩

## ೧೬೨. ವೀತರಾಗವೀತರಾಗ

ವೀತರಾಗ ವೀತರಾಗ ವೀತರಾಗ ವೀತರಾಗ ॥ ಪಲ್ಲವಿ

ಆದಿಜಿನೇಶನಮಿತ ಕರ್ಮ ನಿಶ್ಯೇಷನಮಿತ ಮುನೀಶ ಶರಧಿ ಪೂರ್ಣಚಂದ್ರ
ವೃಷಭ ಜಿನೇಶ ತ್ರಿಜಗಧೀಶ ವಿಜಿತ ಮನೋಹರ ಸದಯಾಮೂಲ ॥ ೧

ಪದ್ಮಾಶ್ರಯ ಪಾದ ಪಂಕಜಯುಗಲಕೆ ಸದ್ಭವ್ಯನಮಿಥೆ ಸಾರುಸು ಖೋಷ
ಮೋಕ್ಷಲಕ್ಷ್ಮಿ x x x x ಸ್ತೂಪರ ಸ ಅಕ್ಷಯ ಸುಖವೀವ ಆದಿಜಿನೇಶ ॥ ೨

ನಿತ್ಯಾನಂದ ನಿರ್ಮಲ ಕಾರ್ಯ ಅತ್ಯಂತ ಬೋಧಸ್ತ್ರೀ ಮುನಿಜನವಂದ್ಯ
ಮುಕ್ತಿನಿವಾಸ ಮನ್ಮಥ ನಾಶ ಸ್ತ್ರೀಕಾಂತ ವಾಣಿ ಸತ್ಪ್ರಥಮ ಜಿನೇಶ ॥ ೩

ದೇವದೇವೇಶ ತಮುನೀಶ ಭಜಿತ ಸಕಲ ಜನ ಕುವಲಯಚಂದ್ರ
ಕ್ರಮ ಕಲ್ಯಾಣಿ ಪಂಚಕರಾಜ ಸದ್ಧರ್ಮ ಪ್ರತಿಪಾಲಕ ತೇಜ
ರಂಗಪುರೀಶ ದೊಷ ವಿನಾಶ ಪಲ್ಯಂಕಾಸನ ಅಪರಾಜಿತೇಶ ॥ ೪

## ೧೬೩. ಶರಣಾಗುನಿಜಪರಮಾತ್ಮ

ಶರಣಾಗು ನಿಜ ಪರಮಾತ್ಮ ಎನ್ನೊಳಿಹ
ಕರ್ಮವಿಷಕೆ ನಿಜಾತ್ಮಾ ॥ ಪಲ್ಲವಿ

ಧ್ಯಾನವೆಂಬುದೆ ನೀತಿ ತನ್ನ
ತಾನರಿಯದುದಾವ ರೀತಿ
ಹೀನವಾಯಿತೆನ್ನ ಪ್ರೀತಿ ಎನ್ನ
ಧ್ಯಾನದೊಳಿರು ಪರಂಜ್ಯೋತಿ ॥ ೧

ತನಗೆ ತನ್ನಾತ್ಮಚಾರ್ಯ ತನ್ನ
ಘನವರಿವುದೆ ದೊಡ್ಡ ಕಾರ್ಯ
ನಿನಗೊಲಿದವ ಜಿತವೀರ್ಯ ಎನ್ನ
ಮನವ ಬೆಳಗು ಜ್ಞಾನಸೂರ್ಯ ॥ ೨

ನುಡಿವಾಗ ತಾ ಕರ್ಮಬದ್ಧವ ಮನ
ವಿಡಿದು ಧ್ಯಾನಿಸುವಾಗ ಶುದ್ಧ
ಕೊಡಲೇಸು ಎನಗೆ ಸುಬದ್ಧ ಭವ್ಯ
ರೊಡೆಯ ನಿರಂಜನ ಸಿದ್ಧ ॥ ೩

**೧೬೪. ಶುದ್ಧನಾಗಿಬದುಕೆಂದು**

ಶುದ್ಧನಾಗಿ ಬದುಕೆಂದು ಹೇಳಿದೆ ನಾನು ಅಪ್ರ
ಬುದ್ಧನಾಗಿ ಕೆಡದಿರು ಆತ್ಮ ನೀನು ॥  ಪಲ್ಲವಿ

ದಾನದರ್ಮವೆಂಬ ಕಟ್ಟಾಂಗಾರವನಿಟ್ಟು ಸು
ಜ್ಞಾನವೆಂಬ ವಜ್ರದಾ ಪಂಜರವ ತೊಟ್ಟು
ಹೀನಮಾನವೆಂಬ ನೀಚಾಂಗನೆಯನು ಬಿಟ್ಟು ಆತ್ಮ
ಧ್ಯಾನಿಯಾಗಿ ದುಷ್ಟ ಕರ್ಮಾರಣ್ಯವ ಸುಟ್ಟು ॥  ೧

ಸತ್ಯವೆಂಬ ತಾಯಿ ಮಾತ ಮೀರದಿರಯ್ಯ ಜಿನ
ಸ್ತುತ್ಯವೆಂಬ ತಂದೆಯೊಡನೆ ಕೂಡಿ ಬಾಳಯ್ಯ
ನಿತ್ಯ ಶಾಂತಿಯೆಂಬ ಸುದತಿಯೊಡನೆ ಸರಸವಾಡಯ್ಯ ಪ್ರೌಢ
ಪ್ರತ್ಯಕ್ಷ ಸುತನ ಪಡೆದು ಸುಖದಿ ನಿತ್ಯ ಬಾಳಯ್ಯ ॥  ೨

ಬಾಳುವಾಗ ಸರ್ವಜನರು ಬರುತಲಿಹರಲ್ಲ ಕೆಳ
ಗಿಳಿದು ಹರಿಯುವಾಗ ಮಾತನಾಡುವರಿಲ್ಲ
ಗೋಳು ತುಂಬಿದ ಈ ಸಂಸಾರ ಮುಂದೆ ಸ್ಥಿರವಲ್ಲ ಮುಕ್ತಿ
ಯಾಳುವಾ ನಿರಂಜನ ಜಿನ ಸಿದ್ಧನೆ ಬಲ್ಲ ॥  ೩

**೧೬೫. ಸದರವೆಂದಿರಬೇಡಾ**

ಸದರವೆಂದಿರಬೇಡಾ ಪಂಚ ನಮಸ್ಕಾರಾ
ಅದು ಮಹಾಮಂತ್ರ ಕಂಡಾ
ಅದರಿಂದ ಹಲಬರು ಸುಖಿಯಾದವರುಂಟೆ
ಅದರ ಮಹಿಮೆಯ ಲಾಲಿಸು ॥  ಪಲ್ಲವಿ

ಕೇಳಿ ಅಂಜನ ಚೋರ ದೊರೆಯ ಕೂಡುಂಡು ಸೂಲಕ್ಕೆ ಗುರಿಯಾದನು
ಮೂಲ ಮಂತ್ರವ ಜಿನದತ್ತ ಪಾಲಿಸಲಾಗ ಸ್ವರ್ಗಕ್ಕೆ ಸಂದನು
ಕೇಳುತದಕೆ ರಾಯ ಜಿನದತ್ತ ಶೆಟ್ಟಿಯ ಮೇಲೆ ಮುನಿದನಾಗಳ ಸ್ವರ್ಗ
ಪಾಲ ತಾನೆ ಬಂದು ಜಪದ ಫಲವ ತೋರಿ ಆ ಲೋಕಕ್ಕೆದಿದನು ॥  ೧

ಆಡುವ ಮಕ್ಕಳಟ್ಟಿದರೊಂದು ಶ್ವಾನ ಕೆಟ್ಟೋಡಿ ಬಾವಿಯ ಬೀಳದ
ನೋಡಿ ಜೀವಂಧರ ತೆಗೆಸಿ ಮಂತ್ರವ ಕೃಪೆಮಾಡಿ ಹೇಳಿದನದಕೆ
ಕೂಡಿ ದೇಹವ ಬಿಟ್ಟು ಸುರನಾಯಿತು ಸುರರು ಕೊಂಡಾಡೆ ಜೀವಂಧರನಾ ತನ್ನ
ಬೀಡಿಗೆ ಕರೆದೊಯಿದು ಹಲವು ವಿದ್ಯವ ಮಯ್ಯಮಾಡಿ ತಾ ಕಳುಹಿದನು ॥  ೨

ಕ್ರೂರ ದಂಡಕ ಭೂಪ ಮಡಿದು ಹಾವಾಗಿ ಭಂಡಾರವ ಕಾಯ್ದಿರ್ದನೂ ಆದ
ಚಾರಣರಲಿ ಕೇಳಿ ಬಂದು ಮತ್ತವನ ಕುಮಾರನರ್ಚಿಸಿ
ಸಾರಮಂತ್ರವ ಹೇಳಿದರೆ ಕೇಳಿ ಸ್ವರ್ಗವ ಸಾರಿದಂದದೊಳು ಬಂದು ಉಪ
ಕಾರವ ಮರೆಯದೆ ಬಂದಾಗಳೆ ಮಗನ ಕೈಯಾರೆ ಪೂಜಿಸಿ ಪೋದನು ॥ ೩

ಪಂಚಾಗ್ನಿ ಮಧ್ಯದ ತಪಸಿ ಹೊಯಿದರೆ ಹರಿಹಂಚಾದ ಪಾವೆರಡೂ ಕೂಡೆ
ಪಂಚ ಮಂತ್ರವ ಕೇಳಿ ಧರಣೇಂದ್ರ ಪದದೊಳು ಸಂಚಲಿಸದೆ ನಿಂದವೂ
ಮುಂಚೆ ವಿಜಯಯೋಗಿಗುಪಸರ್ಗ ಬಂದಾಗ ಮಿಂಚಿನಂದದಲಿ ಬಂದು
ವಂಚಿಸಿ ಬಾಧೆಯ ತೊಲಗಿಸಿ ತಾವಲ್ಲಿ ಸಂಚಿತಾರ್ತಿಗಳಾದೆವು ॥ ೪

ತುರುವ ಕಾಯ್ದುವನೊಬ್ಬ ಚಾರಣ ಮುನಿತನಗರುಹಿದ ರೀತಿಯಲಿ
x x x x x x x x x x x x x x x x x x x x x
ಎರಗಿ ನಮೋ ಅರಹಂತಾಣಯೆಂಬಷ್ಟ ಮೆರೆದು ಮುಕ್ತಿಗೆ ಸಂದನು
ಮರೆಯದೆ ಜಪಿಸಿರೋ ಶ್ರೀಮಂದರೇಶನು ನೆರೆ ಮುಕ್ತಿ ಪದವೀವನು ॥ ೫

**೧೬೬. ಸಲ್ಲದು ನುಡಿ ನಿಮಗೆ**

ಸಲ್ಲದು ನುಡಿ ನಿಮಗೆ ಜಿನಾಭವ ವಲ್ಲಭರಿಗೆ ॥ ಪಲ್ಲವಿ

ಅಲ್ಲದ ರೋಗ ಜನಿಸಿದಲ್ಲಿ ತಾನೊಂದಲ್ಲದನು
ಮಾಡಿದನೆಂದು ಆಡಿದರೆಂದು ನುಡಿದರೆಂದು ॥ ೧

ಸಿದ್ಧಾಂತವನು ದೂಷಿಸಿದನೆಂದೂ ಇಲ್ಲದ್ದು
ಬದ್ಧವಾಡಿದನುಸುರಿದರಾರು ಬಿಸುಡಿದನಾರು ಆಡಿದನಾರೋ ॥ ೨

ಉಪಗುಹ ಸ್ಥಿತಿ ಕರಣಗಳನೂ ಮಾಡಲಪವರ್ಗವಹುದಾವ ಕರುಣಿಗಳು
ಭಾವಿಸಿ ರತ್ನಾಕರನು ಹೇಳಿದನು ಓದುವದಿದನು ॥ ೩

**೧೬೭. ಸಸ್ಸಾರಾನಿಸ್ಸಾರಾ**

ಸಸ್ಸಾರಾ ನಿಸ್ಸಾರಾ ಸಸ್ಸಾರಾ ನಿಸ್ಸಾರಾ
ನಿನಗೂ ನನಗೂ ಅದಾವ ಸಂಬಂಧ ತನುವೇ ಸಾರತ್ತ ನೀ
ಎನ್ನ ಜತೆ ನೀನಿಹುದು ಏನು ಚಂದಾ ಅ
ದೇನು ಚಂದಾ ಸಸ್ಸಾರಾ ನಿಸ್ಸಾರಾ ॥ ಪಲ್ಲವಿ

ಅರಿವ ಗುಣ ಕಾಣ್ಬಗುಣ ನನ್ನ ಸೊಮ್ಮು ತನುವೇ
ಮರೆತು ಮುಂಗಾಣದಿಹುದು ನಿನ್ನ ಸೊಮ್ಮು

ಉರುಶಕ್ತಿ ನಿತ್ಯಾನಂದ ನನ್ನ ಸೊಮ್ಮು ತನುವೇ
ನೆರೆ ನಿಃಶಕ್ತಿ ದುಃಖಗಳು ನಿನ್ನ ಸೊಮ್ಮು ನಿನಗೂ ನನಗೂ ॥ ೧

ಸುಪವಿತ್ರ ಸುಪ್ರಕಾಶ ನನ್ನ ಸೊಮ್ಮು । ತನುವೇ
ಅಪವಿತ್ರ ಕಲ್ಮಷಗಳು ನಿನ್ನ ಸೊಮ್ಮು
ಸ್ವಪರಘಾತವಾದ ಗುಣ ನನ್ನ ಪಕ್ಷ ನಿನಗೂ ನನಗೂ ॥ ೨

ಮುಪ್ಪು ಸಾಪು ಹುಟ್ಟು ಜಾತಿ ಇಲ್ಲ ಎನಗೆ ತನುವೇ
ಮಪ್ಪು ಸಾವು ಹುಟ್ಟು ಜಾತಿ ಉಂಟು ನಿನಗೆ
ಅಪ್ಪಾಜಿ ಶ್ರೀಮಂದರೇಶನೊಬ್ಬ ಎನಗೆ ತನುವೆ
ಅಪ್ಪಂದಿರೆಂಭತ್ತನಾಲ್ಕು ಲಕ್ಷ ನಿನಗೆ ನಿನಗೂ ನನಗೂ ॥ ೩

## ೧೬೮. ಸುಜ್ಞಾನಿಸ್ವರೂಪನೀನು

ಸುಜ್ಞಾನಿ ಸ್ವರೂಪ ನೀನು ಅಜ್ಞಾನದೊಳು ಇರುವರೆ
ವಿಜ್ಞಾನಿ ತನ್ನಾತ್ಮನ ಕಂಡೂ ಧ್ಯಾನ
ಯಜ್ಞವ ಮಾಡುವನೀಗ ಕಂಡಸೂಯೊ
ಯಜ್ಞಕಂಜುವ ದುಃಖ ಕರ್ಮದ ಹಿಂಡೂ ॥ ಪಲ್ಲವಿ

ಆನೆ ಕೆಸರಲಿ ಬಿದ್ದರೆತ್ತುವರಾರುಂಟೂ ತನ್ನ
ತಾನೇ ಧೈರ್ಯವಿಡಿದೇಳುವಂತೆ ಆತ್ಮ
ಧ್ಯಾನವ ಮಾಡುವರೋರಂತೆ ಕರ್ಮ
ಹಾನಿಯಹುದಿನ್ನೇಕನ್ಯಚಿಂತೆ ॥ ೧

ಸಂಸಿದ್ಧಿ ಗುಪಾಯದಷ್ಟ ಪೇಳ್ವೆನೈಸೆ ಗುರು
ಸಂಸಾರವೆ ತಾನೆ ಜಯಿಸಬೇಕು ಇದಕೆ
ಸಂಶಯ ಬಿಟ್ಟವನ ಯೋಗ ಕಾಕು ಗುರು
ಹಂಸನಾಥ ಬರೆದಿಟ್ಟುಕೊ ॥ ೨

## ೧೬೯. ಸುತ್ತಬೇಡಸುತ್ತಮುತ್ತಲು

ಸುತ್ತಬೇಡ ಸುತ್ತಮುತ್ತಲು ಚಲಿಸದೆ ಆತ್ಮಧ್ಯಾನವ ಮಾಡಿ ॥ ಪಲ್ಲವಿ

ದೇಹ ದೇಗುಲ ತುಂಬಿ ದೇವರುಂಟೆಲ್ಲ ನಂಬಿ
ಬಾಹಿರ ದಕ್ಷೆಯ ಮುಚ್ಚಿ ಭಾವದಲಿ ನೋಡಿ ಮುಚ್ಚಿ ॥ ೧

ಛಾಯಾಪ್ರತುಮೆಯದೊಂದು ಛಾಯಾಭಾವಕೆ ಬಂx x x
ಛಾತ್ಮನ ರೂಪು ಕಣ್ಣೊಪ್ಪುತಿದೆ ಭಾಪೂ ॥ ೨

ಸೋಮ ಸೂರ್ಯರ ಕೋಟಿ ಶೋಭಿತಾನವ ದಾಟಿ
ಹಾ ಮಜ್ಞ ಭಾಪುರೆ ಹಂಸನಾಥ ಚಾಣುರೇ ಸುತ್ತಬೇಡಾ ‖ ೩

**<u>೧೭೦. ಸುಪ್ರಸನ್ನಹಂಸನಾಥ</u>**

ಸುಪ್ರಸನ್ನ ಹಂಸನಾಥ ನೀಯೆನ್ನಳೊಳಿರ್ದಡೆ ಸಾಕು ಇನ್ನೇನು ಬೇಕು ನೀನಲ್ಲದೆ
ಸಂಪನ್ನಯೋಗ ಕಾಕೂ ಕಾಯೊ ಎನ್ನೇಕೋ ಪರಾಕೂ ‖ ಪಲ್ಲವಿ

ಭಕ್ತರ ಭಾಗ್ಯವೆ ನಿನ್ನ ಭಾವನೆಯೊಳಿರ್ದವಂಗೆ
ಮುಕ್ತಿಪಟ್ಟವಹುದು ಸ್ವರ್ಗದ ದಾರಿ ಸಂಬಳವಲ್ಲವೇ ‖ ೧

ಕಲ್ಪವೃಕ್ಷ ಚಿಂತಾಮಣಿಯು ಕಾಮಧೇನುಗಳು ನಿನ್ನ
ಬಲ್ಲು ನೋಡುವನ ಮನೆಯ ಬಾಗಿಲ ಕಾಯ್ದು ಇಹವಲ್ಲವೇ ‖ ೨

ಅಣಿಮಾಡಿ ಸಂಪದವೆಲ್ಲ ಅಣುಮಾತ್ರ ನಿನ್ನ ಕೂಡುವರಿಗೆ
ಗುಣವೆಂಟು ರೂಪಾದನಂಗ ಗುರುವೇ ಚಿದಂಬರ ಪುರುಷ ‖ ೩

**<u>೧೭೧. ಹಾರಿತುಉದ್ದಕೆ</u>**

ಹಾರಿತು ಉದ್ದಕೆ ಹಾರಿತು ಹಂಸ
ಮೀರಿದ ಪರಮಾನಂದದ ಸುಖತಲೆ
ಗೇರಿದ ಬಳಿಕಲದೇಕೆ ನಿಲ್ಲುವದು ‖ ಪಲ್ಲವಿ

ತನುವವಿನ ಸುಖವೆಂಬ ಅಸುಖವನೆ
ಅನುದಿನ ತಾನುಂಡು ಚಿನುಮಯ ರೂಪ ಸೀಮೆಯ ಸುಗ್ಗಿಯ

ತನಿಪಾಲನೆ ಕಂಡುದಕೆ ನಿಲ್ಲುವದು ‖ ೧
ಸಾರವಲ್ಲದ ಬಯಲಾಭವ ಕಾಂ
ತಾರದಿ ತಿರುತಿರುಗಿ ಸೇರಿದುರುವೆಂಬ ಬೆಟ್ಟವನಮೃತ ಶೃಂ
ಗಾರವ ಕಂಡೊಳಿದಕೆ ನಿಲ್ಲುವದು ‖ ೨

**<u>೧೭೨. ಹೆಸರೇನೂನಿನ್ನ</u>**

ಹೆಸರೇನೂ ನಿನ್ನ ಹೆಸರೇನೂ ಮುನ್ನ ಕಂಡುದಿಲ್ಲ
ಇಂದು ಕಂಡೆ ನಾನೂ ‖ ಪಲ್ಲವಿ

ಪಂಚ ವರ್ಣ ನಿನ್ನೊಳುಯಿಲ್ಲ ಪ್ರಕಾಶವೆ ರೂಪಾಗಿದೇಕೊ
ಪಂಚೇಂದ್ರಿಯವಿಲ್ಲ ಸುಖ ಸೊಂಪಾಗಿದೆಕೋ ರೂಪು
ತಂಪಾಗಿದೆ ಜ್ಞಾನ ಪೆಂಪಾಗಿದೆ ॥ ೧

ಗಂಧವಿಲ್ಲ x x x ಮೈಯೊಳಿರ್ದು ಮೈಯ್ಯ ಸಂ
ಬಂಧವಿಲ್ಲ ಮಾತುಮನ ನಿನಗಿಲ್ಲ ನುಡಿಗಳವಲ್ಲ
ಚೋದ್ಯ ಜಗಕೆಲ್ಲಾ ॥ ೨

ಅಂಜನವೆಂದೊಡೆ ಕರ್ಮಾಂಜನವು ಹೊದ್ದದ ನಿ
ರಂಜನಸಿದ್ಧನೆಂದೆಲ್ಲಾ ನಿನ್ನ ನಾಮಾ ಅದು ನನ್ನ
ಕ್ಷೇಮಾ ಶುದ್ಧ ಪರಿಣಾಮಾ ॥ ೩

**<u>೧೬೩. ಹೇಗೆಭೋಗಿಸುವಿರಿ</u>**

ಹೇಗೆ ಭೋಗಿಸುವಿರಿ ದುರ್ವಿಷಯದ ಮಾತು ಕಿಡಿ
ದಾಗಿದಾಗ ಎದೆ ಧಿಗಿಲೆನುತಿದೆ ಅಕಟಾ ॥ ಪಲ್ಲವಿ

ಬಾಳಿನ ಬಾಯಧಾರೆಯಲ್ಲಿ ತೊಡೆದ ಜೇನೆಯ ನೆಕ್ಕೆ
ನಾಲಿಗೆ ನೀಗುವರಂದದಿ ಕಾಮಸುಖಕ್ಕೆ
ಬೇಳಾಗಿ ಬೆರೆದು ಬಂದಂತೆ ನಡೆದು ನಾಳೆ
ಬೀಳುವರೊ ನರಕಕುಂಡಕೆ ಜಡರಕಟಾ ॥ ೧

ಸುಣ್ಣದ ಬಿಳುಪ ನೋಡಿ ಕೈದುಡಿಕಿ ಹೊಸ
ಬೆಣ್ಣೆಯೆಂದು ಮೆದ್ದು ಮರಗುವ ಮಕ್ಕಳಂದದಿ
ಹೆಣ್ಣು ಹೊನ್ನು ಮಣ್ಣಿನಿಂದ ಸುಖವೆಂದು ಹೊದ್ದಿಸುಡುವ
ಸುಣ್ಣದಂತೆ ಕುಡಿವರೊ ಜಡರಕಟಾ ॥ ೨

ಬೀಜವ ಸುಟ್ಟಾಗಳೆ ವೃಕ್ಷವು ಕೆಡುವಂದದಿ
ಮಾಜಿ ವಿಷಯವ ಬಿಟ್ಟವಗೆ ಪಾಪವಿಲ್ಲಾ
ಈ ಜೋಕೆಯನರಿದು ಜಿತೇಂದ್ರಿಯರಾಗಿ ಅಪ
ರಾಜಿತೇಶ್ವರನ ಸನ್ನಿಧಿಯ ಸಾರಲೊಲ್ಲದೆ ॥ ೩

**<u>೧೬೪. ಹೇಳಬೇಕೆಂದೊಮ್ಮೆ</u>**

ಹೇಳಬೇಕೆಂದೊಮ್ಮೆ ಹೇಳಿದೆನ್ನೈಸೆ
ಕೇಳದಿರ್ದರೇನಾಯಿತೊ ನನಗೇನು ನಷ್ಟ ॥ ಪಲ್ಲವಿ

ಎಲೆ ಜೀವಗಳಿರಾ ಈ ತನು ನಿತ್ಯವಲ್ಲಾ ನಿ
ಚ್ಚಲು ದಾನಧರ್ಮವ ಮಾಡಿರೋಯೆಂದೆ
ಛಲವ ತೊಟ್ಟೆಲ್ಲರು ಕೇಳದಿರ್ದೊಡೆ ನಾಳೆ
ಹಲವು ಜನ್ಮಕೆ ಬಿದ್ದರೆಮಗೇನು ನಷ್ಟ ॥ ೧

ಹಗಲಿರುಳೆರಡು ಬಳ್ಳದಲಾಯುಷ್ಯದ ರಾಸಿ
ತೆಗೆದಳವುತಲಿದೆ ತೀರದ ಮುನ್ನ
ಮಿಗೆ ಪುಣ್ಯ ಸಂಗ್ರಹಗಳ ಮಾಡಿರೆಂದೆ ಸು
ಮ್ಮನೆಯಿದ್ದು ಕೆಟ್ಟಡೆಮಗೇನು ನಷ್ಟ ॥ ೨

ತನುವಿಗೆ ಕೇಡಿಲ್ಲದಾತ್ಮಗೆ ಕೇಡಿಲ್ಲ
ಮನುಜರಲ್ಲಾತ್ಮ ಸಿದ್ಧಿಯ ಮಾಡಿರೆಂದೆ
ಜನರು ಚಿದಂಬರ ಪುರುಷನ ಮರೆದು ಮೈ
ಯ ನೆಚ್ಚಿ ಹುಚ್ಚಾದರೆಮಗೇನು ನಷ್ಟ ॥ ೩

**೧೭೫. ಹೋಯಿತುಹೋಯಿತು**

ಹೋಯಿತು ಹೋಯಿತು ಹೋಯಿತಿನ್ನೆತ್ತಳ ಕಾಂಸೆ
ಮಾಯದ ತಂತ್ರವ ಮೀರಿ ಮಗುಳದ ಪದವಿಗೆ ಹಂಸಾ ॥ ಪಲ್ಲವಿ

ತೊಗಲ ಬೊಂಬೆಯ ಹೊಕ್ಕಾಡಿದ ಎದೆ
ಧಿಗಿಲೆಂದೊಡನೆ ಭೀತಿ ಮಾಡಿ ಮಾಡಿ
ಹಗೆಗಳ ಹರಿಹಂಚ ಮಾಡಿ ನಸು
ನಗುತಿತ್ತು ಹೊಮ್ಮರಿದಾಡಿ ॥ ೧

ನಾಲ್ಕು ಗತಿಗೆ ಮುನ್ನ ಹೋಗಿ ಹಲ
ವಾಕಾರದಿ ತೂಗಿ ನೀಗಿ
ಶೋಕದಿ ತಳುವೆಳಗಾಗಿ ಇನ್ನು
ಸಾಕೆಂದು ತಲೆದೂಗಿ ಬಾಗಿ ॥ ೨

ಈ ಜನ್ಮವ ಮರಣ ವಾರುಧಿಗೆ ಮೋಹ
ಬೀಜವಂದಿಲ್ಲದಾ ನಿಧಿಗೆ
ವೋಜೆಯಿಂ ಸೌಖ್ಯಾಂಬುಧಿಗೆ ಅಪ
ರಾಜಿತೇಶ್ವರನ ಸನ್ನಿಧಿಗೆ ॥ ೩

## ೧೬೬. ಹೋಹೋಪುರೇ

ಹೋ ಹೋ ಪುರೇ ಪುರೇ ಸಾಕು ಇನ್ನು
ಮೋಹ ಮಲ್ಲನ ನೂಕು ತಾಕು
ಶ್ರೀಹಂಸನಾಥನ ದಿನ ಕಾಣಬೇಕು ಕೂಡೆ
ಸ್ನೇಹ ವೈರವ ಬಿಡಬೇಕು ॥ ಪಲ್ಲವಿ

ಕಡಲ ಹೀರುವ ತೃಷೆಯಷ್ಟು ಕೆ
ಟ್ಟೊಡಲ ಸುಖದ ಸವಿಯಿಷ್ಟು
ಬಿಡದೆ ಭೋಗಗಳನುಂಡಷ್ಟು ತೃಷೆ
ಕಡಮೆಯಾಗದು ಈ ದೇಹದ ಗುಟ್ಟು ॥ ೧

ವಲ್ಲಭೆಯರೊಳೊಡನಾಟ ಅದು
ಬೆಲ್ಲಗೂಡಿಹ ಕಾಲಕೂಟ
ಕೊಲ್ಲುವ ವೆಂಚಿಪ ನೋಟ ಇದು
ಬಲ್ಲವರಿಗೆ ಮರುಳಾಟ ॥ ೨

ಅಂಗನೆಯರೊಳಗಾದ ಸರಸ ಕುರು
ವಿಂಗಳಕೆರೆದ ಪಾದರಸ
ಹಿಂಗಿ ಪೋಪುದು ಆತ್ಮ ಧರ್ಮರಸ ಇದ
ಪಿಂಗಿಸು ಅಪರಾಜಿತೇಶಾ ॥ ೩

## ೧೬೭. ಲೋಕವೆಲ್ಲವುಸಟೆ

ಲೋಕವೆಲ್ಲವು ಸಟೆ ಸಂಭ್ರಮಕೆ ಮರುಳಾಗಿ
ವ್ಯಾಕುಲದೊಳಾಡುತಿದೆ ಕಂಡ
ನೀ ಕಂಡು ತಿಳಿ ಮತ್ತಿಲ್ಲಿ ತಡೆವರೇನೋ?
ಸಕೇಳು ಮುಕ್ತಿಗೆ ನಿಜಾತ್ಮ ॥ ಪಲ್ಲವಿ

ಭರತೇಶ್ವರ ಮುನ್ನ ತನ್ನದೆಂದಾಳ್ದನೀ
ಧರೆಯ ಮತ್ತಾಳ್ದ ಸಗರೇಂದ್ರ
ಪರಶುರಾಮನು ಸುಭೌಮನಾರಾವಣರಘು
ಜರು ಪಾಂಡವರು ಆಳಿದರು ॥ ೧

ನೆರೆದಾಳ್ದ ರಾಜವಿಟರುಗಳೆಲ್ಲ ಹೋದರೂ
ಧರೆಯೆಂಬ ಗಣಿಕೆ ಹೋಗಲಿಲ್ಲೈ

ಅರರೆ ಮತ್ತೀಗಳೂ ಎನಗೆ ತನಗೆಂದೊದ
ರಿರಿದಾಡುತಿದೇಕೊ ಜಗವೆಲ್ಲ ॥ ೨

ನೂರಗಳಿಸಿದೊಡೆ ಸಾವಿರದಾಶೆ ಸಾವಿರವು
ತೋರುವುದು ಲಕ್ಷಕೋಟಿಯನು
ಮೀರುವುದು ಧನದಾಶೆ ಅಗ್ನಿಗೆ ಕಾಷ್ಠವನು
ತೋರಿದಷ್ಟಕೆ ಹೆಚ್ಚುವಂತೆ ॥ ೩

ನೂರು ವರುಷದಮೇಲೆ ನರರಿಗಿರವಿಲ್ಲ ತನು
ಬೇರಹುದು ಜೀವ ಬೇರಹುದು
ಮೂರು ದಿನದ ಬದುಕಿಗಾರು ದಿನಕರೆಯದೆ
ದೂರಿಗೊಳಗಾಗದಿರು ಕಂಡ ॥ ೪

ಇಂದಾದೆಯೊ? ನೆನ್ನೆ ಮೊನ್ನೆಯಾದೆಯೋ? ನೀ
ಹಿಂದಾದ ಯುಗಕೆ ಗಡಿಯಿಲ್ಲ!
ಅಂದಿಂದ ಹೊತ್ತ ಮೈ ಸತಿಸುತರು ಸಿರಿ ಕನಸಿ
ನಂದದಿ ಮಾಯವಾದುದರಿಯ ॥ ೫

ಮುಂದಾದರೆಚ್ಚರೈ ನೀ ಪರಬ್ರಹ್ಮ ಪ್ರಾಭೃತ
ದಂದವರಿತು ತಪಸಮಾಡು
ಕರ್ಮಗಳಳಿದು ಕೈವಲ್ಯ ತಾನಹುದು ಶ್ರೀ
ಮಂದರಸ್ವಾಮಿ ಮೆಚ್ಚುವನು ॥ ೬

<u>**೧೭೮. ಆರಿಗಾರುಬಹರು**</u>

ಆರಿಗಾರು ಬಹರು ಸಂಗಡ? ಮೀರಿ ನಡೆಯಬೇಡ
ಧರ್ಮಸಾರವೊಂದೇ ನಿನಗೆ ಸುಮುಂಗಡ ॥ ಪಲ್ಲವಿ

ಸತಿಯು ಸುತಸಮಸ್ತ ಮಿತ್ರರತಿಶಯ
ದ ತಂದೆ ತಾಯಿ ವಿನೋದದ ಬಾವಮೈದುನ
ಜತನವೆಂಬತ್ತೆ ಮಾವ ಜತೆಯೊಳುದಿಸಿದ
ಣ್ಣ ತಮ್ಮರು ನೀ ಮೃತಿಯೈದಲೊಡನಿಹರೆ? ॥ ೧

ಬರೆಹ ತೊಡೆದಮೇಲೆ ಕರೆದೊಡನೆ ನೀ ಪೋಗೆ
ಭರದಿ ಬಂದಾ ಬಂಧುವರ್ಗ ಮುತ್ತಿ ಕುಳಿತು
ಇರಿಸಬೇಡ ಸುಡುಸುಡೆಂಬರು ಸುಟ್ಟೊಡನೆ
ಭರದಿ ಉಂಬರು ಪಾಪಿಸುತ್ತ ತರುಣಿ ಕೆಟ್ಟಳೆಂಬರು ॥ ೨

ಎಷ್ಟು ಬದುಕೆಷ್ಟು ಜನರು ಕಷ್ಟ ಬಂದರಿಲ್ಲ
ಇಷ್ಟರು ಕೂಡ ಸೃಷ್ಟಿಯೊಳು ಬರುವರುಂಟೆ?
ಭ್ರಷ್ಟ ನಿನಗೇಕಾಸೆ? ದಿಟ್ಟನಾ ಧರ್ಮವೊಂದ
ಕಟ್ಟಿಕೊ ಹೋಗು ಮುಟ್ಟಿಸುವುದು ಮುಕ್ತಿ ಪುರಕೆ ॥ ೩

**೧೭೯. ಆರದೆಂದಾರ್ಜಿಸಿಡುತಿಹೆ**

ಆರದೆಂದಾರ್ಜಿಸಿಡುತಿಹೆ ಧನವ ಮನುಜ?
ಆರಿಗೂ ಸ್ಥಿರವಲ್ಲ ಯಾಕೆ ಬರಿಯಾಸೆ? ॥ ಪಲ್ಲವಿ

ದಾಯಾದ್ಯರೆಳೆಯಲುದ್ಯೋಗಿಪರು ತಸ್ಕರರು
ನೋಯಿಸೆಳೆದೊಯ್ಯಲೆಣಿಸುತ್ತಿಹರು
ನ್ಯಾಯವಿಲ್ಲದೆ ತೆಗೆಯ ಬಗೆಯ ಯೋಚಿಸುತಿಹ
ರಾಯನಗ್ನಿಯು ಸುಟ್ಟು ಭಸ್ಮ ವೈದಿಪುದು ॥ ೧

ನೀರದೆಳೆವುದು ಭೂಮಿತಾನೆ ಮರೆಸುವುದು
ಯಾರು ಕಂಡರೂ ಒಡನೆ ಅಪಹರಿಸುತಿಹರು
ಜಾರಿಸುವರದನು ನಿನ್ನವರು ಕಾದುಕೊಂಡಿದ್ದು
ಯಾರಿಗಹುದೋ ಮುಂದೆ ನೀ ಪಡೆದ ಕಾಸು ॥ ೨

ಹಲಬರಾದಿಯಾದರ್ಥವದು ಬಂದಲ್ಲಿ
ನಿಲ್ಲದು ಧರ್ಮಕೆಳಸದು ಪಡೆಸುವ
ಕಲಿಲಹರ ಅಪರಾಜಿತೇಶನ ಶ್ರೀ ಪಾದ
ಜಲರುಹಂಗಳ ನಂಬಿ ಭಜಿಸನುದಿನವು ॥ ೩

**೧೮೦. ಆತ್ಮನಂಬದಿರುಸಿರಿ**

ಆತ್ಮ ನಂಬದಿರು ಸಿರಿ ನೆಲೆಯೆಂದು ಪರ
ಮಾತ್ಮನ ನಂಬಿಪಡೆ ಮುಕ್ತಿಯನು ಸುಗುಣ ಸಿಂಧು ॥ ಪಲ್ಲವಿ

ಬುದ್ಧಿಯಿಲ್ಲದೆ ನಾನು ಸದ್ಧರ್ಮವರಿಯದೆ ವಿ
ರುದ್ಧ ಶಾಸ್ತ್ರವನೋದಿ ಭ್ರಷ್ಟನಾಗಿರ
ಲುದ್ಧರಿಸಿ ದರ್ಶನಾಮೃತವರೆದೆನಗೆ
ಶುದ್ಧ ಸುಜ್ಞಾನವನಿತ್ತೆ ದೇವನೆ ॥ ೧

ಭವರೋಗ ನಾಶಮಾಗಲೌಷಧಿಗೊಟ್ಟು
ಅವಿವೇಕಿಯಾದೆನ್ನ ಭ್ರಮೆಯ ಬಿಡಿಸಿ

ಶಿವಲೋಕದ ದಾರಿಕವಿದ ಕರ್ಮವ ತೂರಿ
ಜವನಲ್ಲಿಗೇರು ನೀನೆಂದೆ ಗುರುವೆ ‖ ೨

ರಾಗ ರೋಷವ ಬಿಡುಮಗನೆ ಕ್ಷಮೆದಮೆಯಿಂದಾ
ಯೋಗಗಳ ಕೂಡಾಡಿ ನಿನ್ನೊಳಗೆ ನೋಡಿ
ಸಾಗರಾಧೀಶ್ವರನ ಸಮಯದೊಳಗೋಲಾಡಿ
ಶ್ರೀಗುರು ಜಿನನ ಕೂಡೆಂದೆ ಬಂಧುವೆ ‖ ೩

**<u>೧೮೨. ತಿಳುಹಿದರಿಲ್ಲಯ್ಯ</u>**

ತಿಳುಹಿದರಿಲ್ಲಯ್ಯ ನನ್ನವರಾಗಿ
ತಿಳುಹಿದರಿಂದುತನಕ ತೊಳಲುವೆನೆ ‖ ಪಲ್ಲವಿ

ಹೀನವಿಷಯ ಸುಖವಿಷವೆಂದು ಭಾವಿಸೋ
ಜ್ಞಾನರಸವನೆ ಸೇವಿಸೋ
ತಾನೆ ಕೆಡುವ ಮೈಯ ತಪಕಾಗಿ ಸಲಿಸಿ ನಿ
ತ್ಯಾನಂದ ಪದವಿ ಪಡೆಯೆಂದು ‖ ೧

ಕಾಕು ಕಥೆಗೆ ಕಿವಿಗೊಡದಿರು ದೇವ ಶ
ಲಾಕರ ಕಥೆ ನೀ ಕೇಳು
ಸಾಕು ಮನವ ಬರಿದೆ ಬಳಲಿಸದೆ ರ
ತ್ನಾಕರಾಧೀಶನ ಭಜಿಸೆಂದು ‖ ೨

ರಾಗರೋಷವ ಬಿಡುಕಂದ ಕಡುಶಾಂತ
ನಾಗಿ ಕರ್ಮವ ನೀ ಗೆಲ್ಲೆಂದ
ಯೋಗಿ ಮಹೇಂದ್ರಕೀರ್ತಿಯಂತೆ ಕೃಪೆವಂತ
ನಾಗಿ ಕರ್ಮಾರಿಗೆಲ್ಲೆಂದು ಸದ್ಧರ್ಮವ ‖ ೩

**<u>೧೮೩. ನಮ್ಮಮನೆಯೊಳಿಂದು</u>**

ನಮ್ಮ ಮನೆಯೊಳಿಂದು ಹಬ್ಬ ನಮಗೆ ಸಂದಣಿಬಹಳ
ನಿಮ್ಮನುಡಿಸುವರೆ ಹೊತ್ತಿಲ್ಲ ಹೋಗಿ ವಿಷಯಗಳಿರ ‖ ಪಲ್ಲವಿ

ತನುವೆಂಬ ಮನೆಯೊಳು ಪರಮಾತ್ಮನೆಂದೆಂಬ
ಮನೆಯದೇವರ ಹಬ್ಬ ಆ ಹಬ್ಬಕಿಂದು
ನೆನೆಯದೆ ಮೀಯಬೇಕು ನಡೆಯದೆ ಬಲಗೊಂಡು
ನೆನಹಿನಮೃತಾನ್ನದುಪಹಾರವಿಡಬೇಕು ‖ ೧

ನೆರವಿಯಿಂದಗಲದೇಕಾಂತದೊಳಿರಬೇಕು
ಮೆರೆಯಬೇಕಮಲಗುಣವೆಂಬ ವಸ್ತುಗಳ
ಪರಿಹರಿಸಿ ಕಳೆಯಬೇಕನ್ಯ ಚಿಂತೆಗಳ
ಎರಡಿಲ್ಲದೊಂದು ಮನದಲ್ಲಿ ಭಜಿಸಬೇಕು ॥ ೨

ನೋಡದೆ ಕಂಡು ನುಡಿಯದೆ ಪೊಗಳಿ ಬಾಯ್ದೆರೆದು
ಬೇಡದೆ ಪರಮಪದವಿಯ ಪಡೆಯಬೇಕು
ನಾಡಾಡಿ ದೈವವಲ್ಲವಸಮಾನವದು ಧ್ಯಾನ
ರೂಢಿಯೊಳು ಹಂಸನಾಥನ ಭಜಿಸಬೇಕು ॥ ೩

## ೧೮೪. ಘನವೆನಿನಗೆಮನವೇ?

ಘನವೆ ನಿನಗೆ ಮನವೇ? ಇದು ಬಹು ಘನವೇ?
ತನು ಸುಖಕಾಡುತ ಜಿನಪನ ಮರೆವುದು ಘನವೇ ॥ ಪಲ್ಲವಿ

ಅನುದಿನ ಎಡೆಬಿಡದನಘ ಜಿನಪನೆ ಶರ
ಣೆನುತ ಸದ್ಧರ್ಮವ ತಳೆಯದೀ ಬುದ್ಧಿ ॥ ೧

ವಿಷಯದಾಶೆಯಿಂ ಮನದೊಳು ಕೋಟಲೆಗೊಂಡ ಸ
ದೃಶ ಧ್ಯಾನವು ಪುಸಿಯೆಂಬೀ ಮಾಯೆ ॥ ೨

ಹಂಬಲಿಸುತೆ ಹಲವನು ಮನದೊಳಗೆ ಚಿ
ದಂಬರ ಪುರುಷನ ನೋಡಲೆಳಸದಿಹುದು ॥ ೩

## ೧೮೫. ಶೃಂಗಾರವಾಗಾತ್ಮಸುಮ್ಮನೇಕೆ

ಶೃಂಗಾರವಾಗಾತ್ಮ ಸುಮ್ಮನೇಕೆ ಇದ್ದೆಯ್ಯೆ? ಮು
ಕ್ತ್ಯಂಗನೆಯ ಮದುವೆ ಶುಭಲಗ್ನ ಬಂದಿತು
ಚೆನ್ನವೆಂಬ ಕೆಂಪಿನಕಲ್ಲ ತೊಡಲವಳು ಮೆಚ್ಚಳು
ರನ್ನ ಮೂರರ ಭೂಷಣವ ತೊಡೆಲೋ ಮದುವಣಿಗ ॥ ಪಲ್ಲವಿ

ನಿರ್ಜರೆ ಸಂವರೆಯೆಂಬ ಕುಂಡಲವ ಧರಿಸು
ನಿರ್ಜಿತಾತ್ಮನೆಂಬ ಚೊಕ್ಕ ತಿಲಕವನಿಕ್ಕು
ಊರ್ಜಿತ ಮೌನವೆಂಬ ಕಂಕಣಕಟ್ಟು ಸಂಗ
ವರ್ಜಿತ ಬಾಸಿಂಗವ ಕಟ್ಟೆಲೋ ಮದುವಣಿಗ ॥ ೧

ಪರಮಧೈರ್ಯವೆಂಬ ಕಠಾರಿಹಿಡಿ ರಾಗ
ರೋಷ ಹಾವುಗೆ ಮೆಟ್ಟಿನಡೆ ಆತ್ಮ ಮಂಟಪಕೆ

ಧೀರ ಚಿದಂಬರ ಪುರುಷನ ನೋಡಿ ಕರ್ಮವೆಂಬ
ತೆರೆ ಜಾರಿತು ಮುಕ್ತಿ ಕೈವಿಡಿ ಶೋಭನ ಶೋಭನ ॥ ೨

**<u>೧೮೬. ಸರಸ್ವತಿಧವಲವಕೊಡು</u>**

ಸರಸ್ವತಿ ಧವಲವ ಕೊಡು ಲಕ್ಷ್ಮೀ ಶೋಭನವ ಪೇಳು
ಪರಮಾತ್ಮ ರಾಜನಿಗೆ ಮುಕ್ತಿಕನ್ನೆಯೊಡನಿಂದು ಮದುವೆ ॥ ಪಲ್ಲವಿ

ದ್ವಾದಶಾನುಪ್ರೇಕ್ಷೆಯೆಂಬ ಹನ್ನೆರಡು ಕಂಬದಲ್ಲಿ
ಆದರಿಸಿ ಮದುವೆಯ ಮಂಟಪ ರಾಜಿಸಿತು
ಆದರ್ಶಭಕ್ತಿಗಳೆಂಬ ಬಂಧುಗಳು ಬಂದಾರು ಸು
ನಾದ ಬಿಂದು ಬಿಂದುವೆಂಬ ವಾದ್ಯ ಮೊಳಗಿತು ॥ ೧

ಷಡ್ದ್ರವ್ಯ ಪಂಚಾಸ್ತಿಕಾಯ ಸಪ್ತತತ್ವ ನವಪದಾರ್ಥ
ಬಿಡದೆಣಿಸಲಿಪ್ಪತ್ತೇಳು ತಾರಾಬಲಕೂಡಿತು
ಒಡನೆ ಶುಕ್ಲ ಧ್ಯಾನವೆಂಬ ಚಂದ್ರ ಬಲಸೇರಿತು ಕೈ
ವಿಡಿದನಹೋ ಚಿದಂಬರ ಪುರುಷ ಮುಕ್ತಿಕಾಂತೆಯನು ॥ ೨

**<u>೧೮೭. ಚಿದ್ರೂಪನಮರೆಯದಿರು</u>**

ಚಿದ್ರೂಪನ ಮರೆಯದಿರು ಮನವೆ ಉ
ಪದ್ರವಕೆ ಬೆಚ್ಚದಿರು ತನುವೆ ॥ ಪಲ್ಲವಿ

ಕೋಪಕ್ಕೆ ಗರ್ವಕ್ಕೆ ಹಾನಿಬಹುದು ಲೋಭ
ರೂಪಿಗೆ ಮಾಯಕ್ಕೆ ನಾಶವಹುದು
ಪಾಪ ಪುಣ್ಯವೆರಡಕ್ಕೆ ಕೇಡಹುದು ಜ್ಞಾನ
ದೀಪವೊಂದೆ ಆರದಿರುತಿಹುದು ॥ ೧

ಮೋಹದ ಶಕ್ತಿಗೆ ಮುಪ್ಪಹುದು ಕೊಂ
ಬಾಹಾರ ಔಷಧವಾಗುತಿಹುದು
ಸ್ನೇಹ ಕೋಪಂಗಳಿಗೆ ಭಂಗವಹುದು ಸಿ
ದ್ಧೋಽಹಂ ಭಾವನೆಯೊಂದಿಹುದು ॥ ೨

ಕೀರ್ತಿಯಾಶೆ ಲಾಭದಾಶೆ ಮುಗಿದು ಲೋಕ
ವರ್ತನೆಯ ಭ್ರಾಂತೆನಿಸಿಹುದು

ಮಾರ್ತಾಂಡನ ಮಿಗುವ ಬಲುತೇಜವದು ತೀರ್ಥ
ನಾಥ ಚಿದಂಬರನ ಪೆಂಪಹುದು ‖ ೩

**೧೮೮. ಕೂಸಕಂಡರಿಯಿರೊ**

ಕೂಸ ಕಂಡರಿಯಿರೊ ಬಲ್ಲವರೆಲ್ಲ
ಸಾಸಿರನಾಮದ ಶಶಿಕೋಟಿ ತೇಜವ
ಸೂಸುವ ಸುಜ್ಞಾನದ ಸುಖದ ನಿಧಾನದ ‖ ಪಲ್ಲವಿ

ಜ್ಞಾನ ಸಮುದ್ರದೊಳಾಡುವ ಕೂಸು
ಜ್ಞಾನಿಯ ಹೃದಯದೊಳಡಗಿಹ ಕೂಸು
ಏನೆಂದು ನುಡಿಯದುಮ್ಮೌನದ ಕೂಸು
ತಾನೇ ಬಲ್ಲದು ತನ್ನ ಮಹಿಮೆಯ ಕೂಸು ‖ ೧

ಲೋಕತ್ರಯವೆಲ್ಲ ನೋಡುವ ಕೂಸು
ಬೇಕಾದ ಮುನಿಗಳೊಳಾಡುವ ಕೂಸು
ಆಕಾರವುಂಟು ನಿರಾಕಾರ ಕೂಸು
ಸಾಕಾರ ದೃಷ್ಟಿಗೆ ತೋರದ ಕೂಸು ‖ ೨

ತನುವಾಂತ ಮನೆಯೊಳು ಕುಳಿತಿರ್ಪ ಕೂಸು
ಘನ ಮೈಯನುಳ್ಳ ಚೆಲುವಾದ ಕೂಸು
ಬಿನಗು ಬುದ್ಧಿಗಳಿಗೆ ಸಿಲುಕದ ಕೂಸು
ಜಿನನಾಥ ತ್ರಿಜಗದೊಲ್ಲಭ ಕೂಸು ‖ ೩

**೧೮೯. ಬಲ್ಲಿದನೀನೆಂದುಬಡವರ**

ಬಲ್ಲಿದ ನೀನೆಂದು ಬಡವರ ಬಾಯ್ಗಳ ಬಡಿಯದಿರೆಚ್ಚರಿಕೆ
ಜಳ್ಳಷ್ಟು ತಪ್ಪಿದರೆ ಖಳನರಕವ ಹೋಗುವೆ ನೀನೆಚ್ಚರಿಕೆ ‖ ಪಲ್ಲವಿ

ಮಾಡು ದಾನಧರ್ಮ ಪರೋಪಕಾರವ ಮರೆಯದಿರೆಚ್ಚರಿಕೆ
ಕೇಡ ಬಯಸಿದರೆ ನಂಬಿದವರೊಳು ಕೆಡುವೆ ನೀನೆಚ್ಚರಿಕೆ
ಮೂಢರೊಳೊಡನಾಡಿ ಮುಂದುವರಿದು ಮುಳುಗಾಡದಿರೆಚ್ಚರಿಕೆ
ನಾಡೊಳು ಸುಜನರ ನೋಡಿ ನಡೆಮುಂದೆ ನಟನೆ ಬೇಡೆಚ್ಚರಿಕೆ ‖ ೧

ಹೊನ್ನು ಹೆಣ್ಣು ಮಣ್ಣು ನಿನ್ನನೆ ವಂಚಿಸಿ ಹೋಗುವುದೆಚ್ಚರಿಕೆ
ಚೆನ್ನಾಗಿ ಗಳಿಸಿ ನಾ ಬದುಕಿದೆನೆಂದೆಂಬ ಚೇಷ್ಟೆ ಬೇಡೆಚ್ಚರಿಕೆ

ಮುನ್ನ ಮಾಡಿದ ಪುಣ್ಯ ಫಲದಿಂದ ಬಂದಿತು ಬೆರೆಯದಿರೆಚ್ಚರಿಕೆ
ಬೆನ್ನನೊದೆವ ಯಮದೂತರು ಬರುವರು ಮುಂದೆ ನೀನೆಚ್ಚರಿಕೆ ॥ ೨

ಬಾಳು ಬದುಕು ಬಲದಿ ತಂದೆ ತಾಯ್ಗಳ ಬೈಯದಿರೆಚ್ಚರಿಕೆ
ಹಾಳು ಬದುಕಿಗಾಗಿ ಹಲಬರ ಕೂಡಣ ಹಗೆ ಬೇಡೆಚ್ಚರಿಕೆ
ಕಾಲನವರು ಬಂದು ಆವಾಗ ಕರೆವರೊ ಕಾಣೆಯದೆಚ್ಚರಿಕೆ
ಮೂಲೋಕಪತಿ ಶ್ರೀಮಂಧರೇಶನ ಚರಣವ ಮರೆಯದಿರೆಚ್ಚರಿಕೆ ॥ ೩

## ೧೯೦. ನಿಜವರಿಯದಮನುಜ

ನಿಜವರಿಯದ ಮನುಜ ದನುಜ
ಸುಜನರಲ್ಲದವನ ಸಂಗ ಭಂಗ ದೇವ ॥ ಪಲ್ಲವಿ

ದರುಶನವಿಲ್ಲದ ಮಾನವ ದಾನವ
ಪರಿಣಾಮವಿಲ್ಲದ ವ್ರತವು ವ್ಯರ್ಥ
ಕರುಣವಿಲ್ಲದ ಧರ್ಮ ಕರ್ಮ ಮನದಲ್ಲಿ
ಮರುಕವಿಲ್ಲದನಂಟು ಬರಿಯಗಂಟು ॥ ೧

ಒಕ್ಕಲಗೋಳು ದೊರೆಗೆ ಹಾಳು ಮನೆಯೊಳು
ಮಕ್ಕಳಿಲ್ಲದ ಬಾಳು ವಂಶಹಾಳು
ರೊಕ್ಕವಿಲ್ಲದ ಶೆಟ್ಟಿ ಮಾಳ್ಪಬಿಟ್ಟಿ ಕರೆ
ದಿಕ್ಕದುಣ್ಣುವ ಕೂಳು ಬರಿಯ ಧೂಳು ॥ ೨

ಖ್ಯಾತಿಯಿಲ್ಲದ ಬಾಳು ನೋಡೆ ಹಾಳು ಬಹು
ಪ್ರೀತಿಯಿಲ್ಲದ ಗಂಡ ಬೆಂಕಿ ಕೆಂಡ
ನೀತಿ ನಿಧಾನವಿಲ್ಲದ ನಾರಿ ಹೆಮ್ಮಾರಿ ಹಿರಿಯರ
ಮಾತ ಕೇಳದ ಬಂಟ ತಾನೆ ತುಂಟ ॥ ೩

ದಾನವಿಲ್ಲದ ಭವನ ವನ ಮನದೊಳು
ಜ್ಞಾನವಿಲ್ಲದ ಪಾಠ ಬರುಡು ಓಟ
ಹೀನಮಾಡುವ ಪುಣ್ಯ ಕಳ್ಳನಾಣ್ಯ ತನ್ನ
ತಾನರಿಯದ ತಾಣ ಎಮ್ಮೆ ಕೋಣ ॥ ೪

ಭಂಡನ ಶೀಲವೆದೆಯಶೂಲ ಚೆನ್ನಾಗಿ
ಖಂಡಿತವಿಲ್ಲದವನ ಮಾತು ತೂತು
ಉಂಡು ದೂರುವನವನೆ ಭಂಡ ಜೀವ ನೆರೆ
ಪಂಡಿತರಿಲ್ಲದಾ ಸ್ಥಾನ ಹೀನ ॥ ೫

ಅಧಿಕವಿಲ್ಲದ ಗುಣ ಕಪಿಗಣ ಸಮರಕೆ
ಹೆದರುವ ವೀರ ಪಾಪಿ ಘೋರ
ಮದದಿಂದ ತನ್ನತಾ ಹೆಚ್ಚೆಂಬುದೇ ಹುಚ್ಚು
ಬಂಧನಲ್ಲದನ ಮೆಚ್ಚು ಹೊಟ್ಟೆಕಿಚ್ಚು ॥ ೬

ಗುರುವ ನಿಂದಿಪ ದೋಷ ತನಗೆ ನಾಶ ತನ್ನ
ಹಿರಿಯರ ಶಾಪ ಘೋರಪಾಪ
ತರುಣಿಗೊಲಿದ ಗಂಡ ಬಲುಭಂಡ ಬಲು
ಮರುಳರ ಕೂಟವೆ ದಯ್ಯಕಾಟ ॥ ೭

ವಂಚನೆಮಾಡುವ ಮಿತ್ರ ಶತ್ರು ಕೊಟ್ಟ
ಲಂಚದಾಸೆಯ ಭೂಪ ವ್ಯಾಘ್ರರೂಪ
ಹಿಂಚು ಮುಂಚರಿಯದ ಕೋಪಿ ತಾಪಿ ಗುರು
ಪಂಚಕವರಿಯದವನಸುವೆ ಪಶು ॥ ೮

ಬಿಡದ ಕಷಾಯ ಸಂಯುತಯೋಗಿ ಭವರೋಗಿ
ಕಡು ದಯೆಯಿಲ್ಲದ ನರ ಪಾಮರ
ಅಡಿಗಡಿಗಾತ್ಮನ ಪೊಗಳದ ಕವಿ ತಾನೆ ಭವಿ
ಪಡೆಯದೆ ಬಯಸುವ ಸುಖಿಯೆ ದುರ್ಮುಖಿ ॥ ೯

ಧರ್ಮವನೊಲ್ಲದ ಜನ ಭೂಮಿಗೆ ವಜನ
ದುರ್ಮತಿಗಳ ನೋಟ ಕರ್ಮದಾಟ
ಮರ್ಮಹೃದಯರ ನಗೆಯ ಹಗೆ ಜನಕೊಂದೆ
ಸ್ವರ್ಮೋಕ್ಷಪತಿ ನಿನ್ನ ಪಾದವೆ ಗತಿ ॥ ೧೦

ಬರಿಯ ಡಂಬದಗುಟ್ಟು ಬೂದಿಯ ಹಿಟ್ಟು ಪುಣ್ಯ
ವರಿಯದವರ ತ್ರಾಣ ಮರುಳಗಾಣ
ಎರವಿನ ಸಿರಿ ಮಾತಿಗೆ ಗುರಿ ತಾನೀ
ನರರ ಹಮ್ಮಿನ ಬಾಳು ಕೊನೆಗೆ ಗೋಳು ॥ ೧೧

ಅರುಹ ನಿನ್ನಯ ನಾಮವೆನಗೆ ಕ್ಷೇಮ ನಿನ್ನ
ಚರಣಕಮಲ ಭಕ್ತಿ ತಾನೆ ಮುಕ್ತಿ
ಪರಮ ಚಿದಂಬರಗೆರಗದ ಜೈನ ಪರಮಹೀನ
ನಿರಂಜನ ಸಿದ್ಧನೇ ಗುಣಬದ್ಧ ॥ ೧೨

**೧೯೧. ಹೊರಹೊರಗಾಡಿದರೇನುಂಟು?**

ಹೊರ ಹೊರಗಾಡಿದರೇನುಂಟು? ಒಳ
ವರಿದು ನೋಡಿದರಲ್ಲವೆ ದೇವನುಂಟು ॥ ಪಲ್ಲವಿ

ಹರಿಹಂಚಾಗಿ ಹೊರಗೆ ಸುಳಿದಾಡಲು
ಕೆರೆಮನೆ ಹೊಲನಲ್ಲದೇನುಂಟು?
ತರುಬಿ ತನ್ನ ಮನವ ಮೈಯೊಳಿರಬಿಟ್ಟು
ಅರಸಿ ನೋಡಿದರಾದೇವನುಂಟು ॥ ೧

ಧ್ಯಾನ ಒಂದಲ್ಲದೆ ಬರಿಸ್ನಾನವ ಮಾಡಲು
ನಿನ್ನ ಮೈಸುಖವಲ್ಲದೇನುಂಟು ?
ಧ್ಯಾನಪೂರಿತನಾಗಿ ಜಪವ ಮಾಡಲು ಮ
ಹಾನುಭಾವನ ಮುಂದೆ ಕಾಣಲುಂಟು ॥ ೨

ಅಂಗವ ನೋಡಲೆಲುಬು ರಕ್ತ ಮಾಂಸ ಚರ್ಮದ
ಬೊಂಬುಳಿಯಲ್ಲದೇನುಂಟು?
ಅಂಗಬೇರಾತ್ಮ ಬೇರೆಂದು ನೋಡಿದರಲ್ಲಿ ಬೆಳ
ದಿಂಗಳ ಬೊಂಬೆಯಂತಾ ದೇವನುಂಟು ॥ ೩

ಗುರುದೇವರೆಂದಿದಿರಿಟ್ಟು ನೋಡಿದರಲ್ಲಿ
ಸುರಪದ ಸುಖವಲ್ಲದೇನುಂಟು?
ಗುರುಹಂಸನಾಥನ ಧ್ಯಾನಮಾಡಲು ಇರದೆ
ಪರಮ ಮುಕ್ತಿ ಸುಖವ ಕಾಣಲುಂಟು ॥ ೪

**೧೯೨. ಮನುಜಜನ್ಮಕೆಬಂದು**

ಮನುಜ ಜನ್ಮಕೆ ಬಂದು ಮೈಮರೆದಿರಬೇಡಿ
ಜಿನ ಜಿನ ಎನ್ನಿರೋ ॥ ಪಲ್ಲವಿ

ತನು ಮನ ವಚನ ವ್ಯರ್ಥಕೆ ನೀಗದೆ
ಜಿನ ಜಿನ ಎನ್ನಿರೋ
ಜವನ ಬಾಧೆಯ ಜಯಿಸಬೇಕಾದೊಡೆ
ಜಿನ ಜಿನ ಎನ್ನಿರೋ ॥ ೧

ಭವನಕ್ಕೆ ಬಲ್ಲಿದರಾಗ ಬೇಕಾದೊಡೆ
ಜಿನ ಜಿನ ಎನ್ನಿರೋ ಬೇಗ

ಶಿವಪದವಿಯು ನೀವು ಸೇರಬೇಕಾದೊಡೆ
ಜಿನ ಜಿನ ಎನ್ನಿರೋ ॥ ೨

ಆಗಮ ಸಿದ್ಧಾಂತ ಮುಖ್ಯದ ಜಪವಿದು
ಜಿನ ಜಿನ ಎನ್ನಿರೋ ಭವ
ರೋಗವ ಕೆಡಿಸುವ ಬಲುಮೆಯ ಜಪವಿದು
ಜಿನ ಜಿನ ಎನ್ನಿರೋ ॥ ೩

ನಾಗೇಂದ್ರ ಬಣ್ಣಿಸಲರಿದ ಜಪವಿದು
ಜಿನ ಜಿನ ಎನ್ನಿರೋ ನಿತ್ಯ
ರಾಗ ಬೇಕಾದೊಡೆ ನೇಮದ ಜಪವಿದು
ಜಿನ ಜಿನ ಎನ್ನಿರೋ ॥ ೪

ಉಪಮಿಸಬಾರದ ಸುಖವೀನ ಜಪವಿದು
ಜಿನ ಜಿನ ಎನ್ನಿರೋ ನಂಬಿ
ಜಪಿಸುವರಿಗೆ ಆತ್ಮ ಸಿದ್ಧಿಯ ಜಪವಿದು
ಜಿನ ಜಿನ ಎನ್ನಿರೋ ॥ ೫

ಅಪರಾಧಕೋಟಿಗೆ ಪರಿಹಾರ ಜಪವಿದು
ಜಿನ ಜಿನ ಎನ್ನಿರೋ ನೀವು
ಅಪರಾಜಿತೇಶನ ಕಾಣಬೇಕಾದೊಡೆ
ಜಿನ ಜಿನ ಎನ್ನಿರೋ ॥ ೬

**೧೯೩. ಇಂದೇಮುಕ್ತನವಂ**

ಇಂದೇ ಮುಕ್ತನವಂ ನಿರ್ಮಲ ಮನ
ದಿಂದ ನಿಜಾತ್ಮ ತತ್ವದೊಳಡಗಿದೊಡೆ ॥ ಪಲ್ಲವಿ

ಹಳಿದೊಡೆ ಹೊಗಳಿದೊಡುಂಡೊಡೆ
ತಿಳಿಯುವುದಾದೊಡೆ ಸವಿಯಾದೊಡೆ
ಮಳೆಗೆ ಹೆಚ್ಚದೆ ಬೇಸಿಗೆಗೆ ಕುಂದದೆ ಮಹಾ
ಜಲನಿಧಿಯೊಳು ಸಹಜದೊಳಿಹನಾದೊಡೆ ॥ ೧

ರೋಗ ಬಂದೊಡೆ ಉಪಸರ್ಗ ಬಂದೊಡೆ ಕಡು
ಬೇಗದಿಂ ಮರಣವೇ ದೊರಕೊಂಡೊಡೆ
ಲೋಗರ ನೋವ ನೋಡುವನಂತುದಾಸೀನ
ಸಂಗದ ಬುದ್ಧಿಯೊಳಿಹನಾದೊಡೆ ॥ ೨

ಇವರವರೆನ್ನವರೆಂಬ ಪಕ್ಷವ ಬಿಟ್ಟು
ತವಕದಿಂದಲಿ ವಿಷಯದಾಶೆಯ ಸುಟ್ಟು
ಶಿವಪದದೊಳು ನಿಚ್ಚ ಸುಖಿಸುವ ಕಡಲಾದಿ
ಶಿವ ತಾಂ ಸುಳಿದಂತೆ ತೋರುವನಾದೊಡೆ ॥ ೩

## ೧೯೪. ಊರಿಗೆಹೋಗುವಬನ್ನಿ

ಊರಿಗೆ ಹೋಗುವ ಬನ್ನಿ ಕಾಡ ಈ
ದಾರಿ ಸಂಸಾರ ಮಾರ್ಗವಲ್ಲೆನ್ನಿ ॥ ಪಲ್ಲವಿ

ಕ್ರೋಧದಾವಾಗ್ನಿ ಹತ್ತಿಹುದು ಮುಂದೆ
ಹೋದರೆ ಮಾನಪರ್ವತ ಕಾಣಗೊಡದು
ಬಾಧಿಪ ಕಾಮೇಭವಿಹುದು ಬಂದು ತಾ
ಕಾದಿಕೊಲ್ಲುವ ಮಾಯಾಮೃಗವಿಹುದು ॥ ೧

ಭೋಗೋಪಭೋಗ ಕೀಟಕವು ಬಂದು
ತಾಗಿ ವೇದನೆಯ ಮಾಡುವ ಖಗಗಣವು
ರಾಗ ಚಿತ್ತವು ಸುತಾದಿಗಣ ತಾ ತಲೆ
ಬಾಗಿಪ ವಿಷಯ ವಜ್ರದುಂಬಿಗಳು ॥ ೨

ಈ ಸಂಸಾರ ನೀ ಬಿಟ್ಟು ಜಿನ
ಶಾಸನಮಾರ್ಗದಿ ತಪಕಳವಟ್ಟು
ಲೇಸಾಗಿ ಕರ್ಮವಸುಟ್ಟು ಮುಕ್ತಿ
ವಾಸರಾಗಿ ನಿರಂಜನನೊಳು ಮನವಿಟ್ಟು ॥ ೩

## ೧೯೫. ಕೊಡಗೈಯವನಲ್ಲಜಿನ

ಕೊಡಗೈಯವನಲ್ಲ ಜಿನ
ರಡಿಗಳ ನಂಬದೆ ನಾ ಕೆಟ್ಟೆನಲ್ಲ ॥ ಪಲ್ಲವಿ

ದೇವ ಜಿನ ನಂಬೆ ಒಪ್ಪುದಲ್ಲ ಮುಂದೆ
ದೇವೇಂದ್ರನಾಗಿ ನಾನಿರ್ಪೆನಲ್ಲ
ಭೂವಲಯಕೆ ಚಕ್ರಿಯಪ್ಪೆನಲ್ಲ ನೆರೆ
ಭಾವಿಸೆ ಜಿನನೆ ನಾನಪ್ಪೆನಲ್ಲ ॥ ೧

ಐದು ಕಲ್ಯಾಣವ ಪಡೆವೆನಲ್ಲ ನಾನು
ಐದಾಚಾರದಿ ನಡೆವೆನಲ್ಲ

ಐದು ಸಂಸಾರವ ಸುಡುವೆನಲ್ಲ ಮ
ತ್ತೈದನೆ ಜ್ಞಾನವ ಪಡೆವೆನಲ್ಲ ॥ ೨

ಧರ್ಮ ಶುಕ್ಲಧ್ಯಾನವಿಡಿವೆನಲ್ಲ ಅಷ್ಟ
ಕರ್ಮಗಳ ಬೇರ ಕಡಿದಿಡುವೆನಲ್ಲ
ನಿರ್ಮಲ ಸೌಖ್ಯವ ಪಡೆವೆನಲ್ಲ ಜ್ಯೋ
ತಿರ್ಮಯ ಶ್ರೀಯ ಕೈವಿಡಿವೆನಲ್ಲ ॥ ೩

## ೧೯೭. ಗುರುಪಾದವಿರಲಿಕೆಪರದೈವ

ಗುರುಪಾದವಿರಲಿಕೆ ಪರದೈವ ದಾರಿಯಾಕೊ?
ವರಮಾಣಿಕವಿರೆ ಕಲ್ಲಿನ ಚೂರು ಬಯಸಲೇಕೊ? ॥ ಪಲ್ಲವಿ

ಹೆತ್ತ ಮಾತಾಪಿತರ ಮಾತ ಕೇಳದ ಪುತ್ರನೇಕೊ? ತನ್ನ
ಚಿತ್ತಪಲ್ಲಟದಂತೆ ತಿರುಗುವ ಸತಿಯ ಸಂಗವೇಕೊ?
ಉತ್ತಮ ಗುರುವ ನಿಂದಿಸಿ ಮಾತನಾಡುವ ಶಿಷ್ಯನೇಕೋ
ಶಕ್ತಿಹೀನನಾಗಿ ಸರ್ವಜನರ ಕೂಡೆ ಕ್ರೋಧವೇಕೊ? ॥ ೧

ಭಾಷೆಯ ಕೊಟ್ಟು ತಪ್ಪುವ ಪ್ರಭುವಿನೊಳಿನ್ನಾಸೆ ಏಕೋ?
ವೇಶ್ಯೆಯ ನೆಚ್ಚಿ ವರನಾರಿಯ ಬಿಡುವಂಥ ಪುರುಷನೇಕೋ?
ಕಾಸಿಗೆ ಕಷ್ಟಪಡುವ ಲೋಭಿಯೊಡನುಂಬ ಗೆಳೆಯನೇಕೋ? ತನ್ನ
ಹಾಸಿಗೆಯರಿತು ಕಾಲುಗಳನೀಡಲರಿಯದ ಮನುಜನೇಕೋ? ॥ ೨

ಚೆನ್ನಾಗಿ ಬಾಳ್ವಾಗ ಧರ್ಮವ ಮಾಡದ ಜನವಿನ್ನೇಕೋ?
ಮುನ್ನ ಪಡೆಯದೆ ಲಾಭವ ಬಯಸುವ ಪ್ರೌಢನೇಕೊ?
ತನ್ನ ತಾನರಿದಾತ್ಮ ಧ್ಯಾನವ ಮಾಡದ ಯೋಗಿಯೇಕೊ?
ಸನ್ನುತ ಶ್ರೀಮಂಧರೇಶನ ನೆನೆಯದ ಮನುಜನೇಕೊ? ॥ ೩

## ೧೯೮. ಗ್ರಂಥವನೋದಿಗ್ರಂಥ

ಗ್ರಂಥವನೋದಿ ಗ್ರಂಥವಬಿಟ್ಟ ಮುನಿಗಳ
ಪಂಥವ ಕೇಳ್ದುದಿಲ್ಲವೇ ಭವಿಗಳಿರಾ ॥ ಪಲ್ಲವಿ

ದಶವಾಯುಗಳ ಗೆಲಿದು ನವರಂಧ್ರಗಳ ಬರಿದು
ವಿಷಯ ವೇದನೆಯ ಸೆರೆಮಾಡುವ ಪಂಥ
ವಶಗೊಳದತ್ತಿತ್ತ ಹರಿವ ದುರ್ಮನವ
ಮಿಸುಕಲೀಯದೆ ನಿಲಿಸುವಾ ಪರಿ ಪಂಥ ॥ ೧

ವೀರಾಸನ ಕುಕ್ಕುಟಾಸನದೊಳು ನಿಂದು ಶ
ರೀರದ ಜಾಡ್ಯವನು ಕೆಡಿಸುವ ಪಂಥ
ಮಾರನನ್ನಟ್ಟಿ ಮೃತ್ಯುವಮೆಟ್ಟಿ ಕರ್ಮ
ಬೇರೆಲ್ಲವನು ಸುಟ್ಟುರುಹುವ ಪಂಥ ॥ ೧

ಇಂದು ಹೊತ್ತಿರ್ದ ದೇಹವ ಬಿಸುಟು ಬಳಿಕ
ಮುಂದೊಬ್ಬ ತಾಯ ಹೊಟ್ಟೆಯ ಹೋಗದ ಪಂಥ
ನಿಂದು ಚಿದಂಬರ ಪುರುಷನ ಧ್ಯಾನದೊಳು
ಕುಂದದೆ ಮೋಕ್ಷಪಟ್ಟವನಾಳುವ ಪಂಥ ॥ ೨

**೧೯೮. ಚಿಂತೆಯಮೇಲೆಚಿಂತೆ**

ಚಿಂತೆಯ ಮೇಲೆ ಚಿಂತೆಬಹುದು ನಿ
ಶ್ಚಿಂತನಾಗಿರು ಮನವೆ ॥ ಪಲ್ಲವಿ

ಬಡತನವಾದಂದು ಉಣಬೇಕು
ಉಡಬೇಕೆಂಬ ಚಿಂತೆ
ಉಂಡು ಉಡಲಾದ ಬಳಿಕ ಮತ್ತೊಬ್ಬ
ಮಡದಿ ಬೇಕೆಂಬ ಚಿಂತೆ ॥ ೧

ಮಡದಿಯಾದ ಬಳಿಕ ಮಕ್ಕಳ
ಪಡೆಯಬೇಕೆಂಬ ಚಿಂತೆ
ಪಡೆದ ಬಳಿಕಾ ಮಕ್ಕಳ ಮದುವೆಗೆ
ಒಡೆವ ಬೇಕೆಂಬ ಚಿಂತೆ ॥ ೨

ಪರರಿಗೆ ಚಿಂತಿಸಿ ನಿನ್ನ ಮೈ
ಜರಿವುದು ಕಾಂಬುದಿಲ್ಲ
ಎರಡು ಘಳಿಗೆಯಾದರೂ ಮಿಗೆ ಚಿದಂ
ಬರ ಪುರುಷನ ಧ್ಯಾನಿಸು ॥ ೩

**೧೯೯. ಜಯತುಜಯತು**

ಜಯತು ಜಯತು ಜಗತ್ರಯಾರ್ಚಿತ
ಜಯತು ಮುನಿಜನ ಸೇವಿತ
ಜಯತು ಶಾಶ್ವತ ಸೌಖ್ಯದಾಯಕ ವಿನುತ
ಜಯತು ರಕ್ಷಿಸು ಸಂತತ ॥ ಪಲ್ಲವಿ

ನಿನ್ನ ನಂಬದೆ ಹಲವು ಚಿಂತಿಸಿ
ಮುನ್ನ ಕೆಟ್ಟುದು ಸಾಲದೆ
ಭಿನ್ನ ಬುದ್ಧಿಗೆ ಸಿಲುಕಿ ನೊಂದೆನು
ಎನ್ನ ಸಲಹು ದಯಾನಿಧೆ ॥ ೧

ಜ್ಞಾನವಿಲ್ಲದೆ ಲೋಕಮೂಢದಿ
ಹೀನನಾದೆನು ಕುರುಡನು
ಭಾನುಬಿಂಬವ ಕಾಣದಂದದಿ
ನಾನು ತೊಳಲದೆ ಭವದೊಳು ॥ ೨

ಸ್ವಾನುಭವಾಮೃತವ ಕಾಣಿಸಿ
ನೀನು ರಕ್ಷಿಸದಿರ್ದೊಡೆ
ಮಾನವತ್ವವು ವ್ಯರ್ಥವಪ್ಪುದು
ನೀನೆ ರಕ್ಷಿಸಿ ತೋರೆಡೆ ॥ ೩

ಬಾಳುವಾಗಲು ಬದುಕುವಾಗಲು
ಮೇಳದೊಳಗಿಹ ನೆಂಟರು
ಆಲಿಪರೀಗಲಾರೂ ಬಾರರು
ಘಾಳಿಗೊಡ್ಡಿದ ಮೇಘವು ॥ ೪

ಜಾಳು ಸಂಸಾರವನು ನಂಬಿ ನಿ
ರಾಳವಿಲ್ಲದೆ ಕೆಟ್ಟೆನು
ಶೀಲ ಸುಗುಣವನಿತ್ತು ಸಲಹು ಕೃ
ಪಾಳು ನಾ ಶರಣಾದೆನು ॥ ೫

ಮಡದಿ ಮಕ್ಕಳು ಒಡನುದಿಸಿಹರು
ಎಡೆಯ ನೇಹಿಗರಿಪ್ಪರು
ಕೊಡುವ ಕಾಲದಿ ಸ್ವಾಮಿ ನೀನೆ
ನ್ನೊಡಯನೆಂದೋಲಿಪರು ॥ ೬

ಬಡವನಾಗಿಯು ತಿರುಗು ವೇಳೆಗೆ
ನುಡಿಸಿ ನೋಡರು ಕುಡರು
ಅಡಿಗಡಿಗೆ ನಾ ನೆನೆರವೆ ರಕ್ಷಿಸು
ಬಿಡದೆ ಪುರುಪರಮೇಶ್ವರ ॥ ೭

ಹರಿಹರಾಮಲ ಸಿದ್ಧಶಂಕರ
ಪುರುಷರೊಳಗುತ್ತಮ

ಕರುಣನಿಧಿ ಶಿವಶಂಭು ರಕ್ಷಿಸು
ನಿರಂಜನ ಸಿದ್ಧ ಗುಣಧಾಮ ॥ ೮

## ೧೦೦. ಜಾಣರದೇವಾಜಿನಪತಿ

ಜಾಣರ ದೇವಾ ಜಿನಪತಿ ಜಾಣರ ದೇವಾ
ಏಣಾಕ್ಷಿಯರ ಲಾವಣ್ಯಕ್ಕೆ ಸಿಲುಕದ ಜಾಣರ ದೇವ ॥ ಪಲ್ಲವಿ

ತನು ಮೂರ ಹೊದ್ದಿಯೂ ಹೊದ್ದೆ ನೀನದರಿಂದ ಜಾಣರದೇವ ಭವ್ಯ
ಜನರಿಗಲ್ಲದೆ ಅಭವ್ಯರಿಗೆ ಕಾಣಿಸಿಕೊಳ್ಳೆ ಜಾಣರದೇವ
ಜನನ ಮರಣ ಮುಪ್ಪು ಮುಟ್ಟಿಯೂ ಮುಟ್ಟೆ ನೀ ಜಾಣರದೇವ
ಜಿನಯೋಗ ಶಿವಯೋಗ ಸಿದ್ಧಯೋಗಕೆ ನಿಂತೆ ಜಾಣರದೇವ ॥ ೧

ಷಡುದರುಶನ ಬಹುಮತಕೆ ನೀನೊಬ್ಬನೇ ಜಾಣರದೇವ ಕೈಯ
ಹಿಡಿದರೆ ಸಿಕ್ಕೆ ಧ್ಯಾನಕ್ಕೆ ಸಿಕ್ಕುವೆ ಜಾಣರದೇವ
ಬಿಡದೆ ಧ್ಯಾನಿಸಿದರೆ ಕೊಡುವೆ ಕೈವಲ್ಯವ ಜಾಣರದೇವ ನಿನ್ನ
ನಡೆ ಮೋಕ್ಷಗಾಮಿಗೆ ಮೆಚ್ಚು ಮೂಢಗೆ ಹುಚ್ಚು ಜಾಣರದೇವ ॥ ೨

ಪರಮಚಿನ್ಮಯ ರೂಪು ಅಂಬರದಂತೆ ನೀ ಜಾಣರದೇವ ಶುದ್ಧ
ಪುರುಷಾಕಾರ ನೀ ಮೂರು ರನ್ನಗಳಂತೆ ಜಾಣರದೇವ
ಗುರುದೈವ ಶಾಸ್ತ್ರ ತೀರ್ಥಂಗಳ ಫಲ ನೀನೆ ಜಾಣರದೇವ ನಿಜ
ಗುರುದೇವ ಚಿದಂಬರ ಪುರುಷ ನೀನೊಬ್ಬನೇ ಜಾಣರದೇವ ॥ ೩

## ೧೦೧. ಜಿನರಾಜನೀನೆಜಯಶೀಲ

ಜಿನರಾಜ ನೀನೆ ಜಯಶೀಲನೆಂಬುದಕೆ
ಜನನಾದಿ ಪದಿನೆಂಟ ಜಯಿಸಿದುದೆ ಸಾಕ್ಷಿ ॥ ಪಲ್ಲವಿ

ಧರೆಗೆ ನಿರ್ಭಯ ದಯಾಪರನು ನೀನೆಂಬುದಕೆ
ಕರದೊಳಾಯುಧವಿಲ್ಲದಿರುವುದೆ ಸಾಕ್ಷಿ
ನರ ಸುರೋರಗರಾಜರೊಡೆಯ ನೀನೆಂಬುದಕೆ
ಶಿರದ ಮೇಲಿಹ ಮೂರು ಸತ್ತಿಗೆಯ ಸಾಕ್ಷಿ ॥ ೧

ಪೊಡವಿಗನುಪಮದಮಲ ಮೂರ್ತಿ ನೀನೆಂಬುದಕೆ
ಒಡವೆ ವಸ್ತ್ರಗಳಿಲ್ಲದಿರುವುದೇ ಸಾಕ್ಷಿ
ಸಡಗರದೊಳನಂತ ಸುಖ ನಿನ್ನೊಳುಂಟೆಂಬುದಕೆ
ಮಡದಿಯರನಗಲಿಹ ಮಹಿಮೆಯೇ ಸಾಕ್ಷಿ ॥ ೨

ಆದೀಶ ನೀನಲ್ಲದಿನ್ನಿಲ್ಲವೆನಗೆಂಬುದಕೆ
ಈ ಧರೆಗೆ ಪಶ್ಚಿಮಾಂಬುಧಿಯೆ ಸಾಕ್ಷಿ
ಈ ದೇಹ ವಿಡಿದಿರ್ಪ ಆಸನ್ನ ಭವ್ಯರಿಗೆ
ನೀ ದೇವನೆಂಬುದಕೆ ನಿಜರೂಪೆ ಸಾಕ್ಷಿ ॥ ೩

## ೧೦೧. ತನ್ನಿಂದತಾಸುಖಿ

ತನ್ನಿಂದ ತಾ ಸುಖಿ ತನ್ನಿಂದ ತಾ ದುಃಖಿ
ಚೆನ್ನಾಗಿ ನಂಬಿರೋ ಪರಮಾತ್ಮನ ॥ ಪಲ್ಲವಿ

ದಾನಪೂಜೆಗಳಲಿ ನೋಂಪಿಗಳಲಿ ಕೃತಕಾರಿ
ತಾನಂದದಲಿ ವ್ರತ ಜಪಂಗಳಲಿ
ತಾನೆ ಪುಣ್ಯವಮಾಡಿ ಸ್ವರ್ಗಕ್ಕೆ ಹೋಹಾಗ
ಹೋ! ನಿಲ್ಲು ಬರಬೇಡ ಎಂಬುವರುಂಟೆ? ॥ ೧

ಪರಮ ಧರ್ಮವ ಬಿಟ್ಟು ವ್ಯಸನದೆ ಮನವಿಟ್ಟು
ಸುರೆ ಮಾಂಸ ಪರಸತಿಯಾಸೆಯಲಿ
ಹಿರಿದು ಪಾಪವ ಮಾಡಿ ನರಕಕ್ಕೆ ಬೀಳ್ವಾಗ
ಭರದಿ ಬಂದಲ್ಲಿ ಹಿಡಿದೆತ್ತುವರುಂಟೆ? ॥ ೨

ಪಾಪಪುಣ್ಯವನಾತ್ಮಯೋಗದಿ ಸುಟ್ಟು ನಿ
ರ್ಲೇಪದೀ ಒಡಲ ಬಿಸುಟು ಮುಕ್ತಿಗೆ
ತಾ ಪುಟನೆಗೆವಾಗ ತಡೆಯುಂಟೆ ಪರಮ ಪ್ರ
ತಾಪಿ ನಮ್ಮ ಚಿದಂಬರ ಪುರುಷನಿಗೆ ॥ ೩

## ೧೦೨. ತಾರಮ್ಯ್ಯಜಿನಪತಿ

ತಾರಮ್ಯ್ಯ ಜಿನಪತಿಗಾರು ವಸ್ತುಗಳು ॥ ಪಲ್ಲವಿ

ಬಲವನೆ ಕೊಡುವ ನಿರ್ಮಲ ತೀರ್ಥಾಂಬುವ
ಮಲಯಜ ಮಿಶ್ರತ ಜಲದ ಕುಂಭಗಳ ॥ ೧

ಚಂದನ ಹಿಮಕುಂಕುಮ ಸಂಮಿಶ್ರದೊಳು
ಬಂಧುರವಾಗಿಹ ಗಂಧದ ತಟ್ಟೆಯನು ॥ ೨

ಸುಕ್ಷೇತ್ರದೆ ಬೆಳೆದಕ್ಷಯ ಪರಿಮಲ
ದಕ್ಷೂಣಾಮಲದಕ್ಷತೆ ಪುಂಜವ ॥ ೩

ಪರಿಮಳಮಲ್ಲಿಗೆ ಜಾಜೀ ಚಂಪಕಪುಷ್ಪ
ದರಳು ಸರಂಗಳನಿರಿಸಿದ ತಟ್ಟೆಯನು ‖ ೪

ಮಿರುಗುವ ಘೃತಪಾಯಸ ಎಗ್ಗೂರಿಗೆ ಬಹು
ಪರಿಮಳ ಭರಿತದ ಪರಮಾನ್ನಗಳ ‖ ೫

ಪಾಪವ ಕೆಡಿಸಿದಿಗ್ವ್ಯಾಪಿ ಸಮುಜ್ವಲ
ರೂಪಿನ ಕರ್ಪೂರದೀಪದಾರತಿಯ ‖ ೬

## ೧೦೪. ದಯೆವೆಲಸೆನ್ನಿದಾರಿಗೆ

ದಯೆವೆಲಸೆನ್ನಿ ದಾರಿಗೆ ಬನ್ನಿ
ಜಯ ಜಯ ಅಪರಾಜಿತೇಶನೆಂದೆನ್ನಿ ‖ ಪಲ್ಲವಿ

ತನು ನಿತ್ಯವಲ್ಲ ಜವನಿಗಿದಿರಿಲ್ಲ
ಕನಸಿನ ಬಾಳಿದು ಗರ್ವವು ಸಲ್ಲ ‖ ೧

ಇಂದ್ರನಿಗೆರವು ಇನ್ನಾರಿಗಿರವು
ಚಂದ್ರನ ಕಲೆಯಂತೆ ಸಿರಿಯಿನ್ನೆರವು ‖ ೨

ಅಪರಾಜಿತೇಶ ಅಧಿಕಪ್ರಕಾಶ
ಜಪಿಸಿರೋ ಕಾಡುವ ಕರ್ಮನಾಶ ‖ ೩

## ೧೦೫. ದಾನಕೆಸಲ್ಲದಸಿರಿ

ದಾನಕೆ ಸಲ್ಲದ ಸಿರಿ ಇದ್ದೇನಿಲ್ಲದೇನು? ಆತ್ಮ
ಧ್ಯಾನಕೆ ಬಾರದ ಬುದ್ಧಿ ಇದ್ದೇನಿಲ್ಲದೇನು ‖ ಪಲ್ಲವಿ

ಪರಹಿತಕಾಗದ ಬಲವಿದ್ದೇನು? ಇಲ್ಲದೇನು? ವ್ರತವ
ಧರಿಸಿ ನಡೆಯದ ದೇಹವಿದ್ದೇನು? ಇಲ್ಲದೇನು?
ಕರುಣೆಗೆಟ್ಟು ತಪವು ತಾನಿದ್ದೇನು? ಇಲ್ಲದೇನು ಬಂಧು
ವೆರಸಿ ಭೋಗಿಸದ ಭೋಗವಿದ್ದೇನು? ಇಲ್ಲದೇನು? ‖ ೧

ಚಿಂತೆವೆರಸಿದ ರಾಜ್ಯವಿದ್ದೇನು? ಇಲ್ಲದೇನು ಕಾಮ
ತಂತ್ರಕೊಳಗಾದ ವಿದ್ಯೆ ಇದ್ದೇನು ಇಲ್ಲದೇನು?
ಭ್ರಾಂತರೊಳಗಣ ಗೋಷ್ಠಿ ಇದ್ದೇನು? ಇಲ್ಲದೇನು? ಅನ್ಯ
ಕಾಂತೆಗೊಲಿದನ ಬಾಳು ಇದ್ದೇನು? ಇಲ್ಲದೇನು? ‖ ೨

ವಾದಿಸುವ ಬಂಟ ತಾನಿದ್ದೇನು? ಇಲ್ಲದೇನು? ತಪ್ಪ
ಸಾಧಿಸುವ ಒಡೆಯ ತಾನಿದ್ದೇನು? ಇಲ್ಲದೇನು?
ಕಾದು ಗೋಳಿಡುವ ಕಾಂತೆ ಇದ್ದೇನು? ಇಲ್ಲದೇನು? ಸಮು
ದ್ರಾಧೀಶನಲ್ಲದ ದೇವನಿದ್ದೇನು? ಇಲ್ಲದೇನು? ‖ ೩

## ೧೦೬. ನಾನೊಬ್ಬರಹಾಗಿಲ್ಲ

ನಾನೊಬ್ಬರ ಹಾಗಿಲ್ಲ ನನಗೊಬ್ಬರ ಒಲವಿಲ್ಲ
ನಾನು ನಾನಲ್ಲದೆ ಪರರಾರು ನನಗಿಲ್ಲ ‖ ಪಲ್ಲವಿ

ಬಡಕೆಂದಾತ್ಮನ ಕಂಡು ಬಹುಕಾಲ ಬಳಲಿದೆನು
ಮಡಿಯುತ ಹುಟ್ಟುತ ಹಲವು ಜನ್ಮದಿ ತೊಳಲಿದೆನು
ನುಡಿಗೆ ಗೋಚರವಾದ ಪರಬೊಮ್ಮನೇ ತಾನಾಗಿದ್ದು
ನುಡಿಸದೆ ಎನ್ನೊಳು ನಿಂತು ನೋಡುವೆನೀಕ್ಷಣದಿ ‖ ೧

ಹಾಲು ನೀರೊಡಗೂಡಿದ ಹಾಗೆನ್ನ ಜೀವನವು
ಮೇಳವಿಸಿದ ತನುವೆರವು ಇನ್ನುಳಿದವರೇನು?
ಸಾಲುಕರ್ಮವ ಸುಡುವ ಶಕ್ತಿಯುಂಟಾತ್ಮನೊಳು
ಬೀಳುವ ಚಿತ್ತವ ತರುಬಿ ನೋಡುವೆನೀಕ್ಷಣದಿ ‖ ೨

ಅರಿಯದವರಿಗೆ ದೇವ ಅಲ್ಲಲ್ಲಿ ಹೊರಗಿಹನು
ಅರಿತಮೇಲಾ ದೇವ ಹೊರಗಿಲ್ಲೊಳಗಿಹನು
ಅರಿವುದು! ಕಾಂಬುದು! ಸುಪ್ರಭೆ ತಾನಾಗಿ
ಮೆರೆವ ಚಿದಂಬರ ಪುರುಷನ ನೋಡುವೆನೀಕ್ಷಣದಿ ‖ ೩

## ೧೦೭. ಪಾಪಿಬಲ್ಲನೇಪರರ

ಪಾಪಿ ಬಲ್ಲನೇ ಪರರ ಸುಖದುಃಖದಿಂಗಿತವ?
ಕೋಪಿ ಬಲ್ಲನೇ ನಿಜದಿ ಮನುಜರಂತರಂಗವ ‖ ಪಲ್ಲವಿ

ಕತ್ತೆ ಬಲ್ಲುದೇ ಹೊತ್ತ ವಸ್ತುಗಳ ಬೆಲೆಗಳನು?
ಮೃತ್ಯುಬಲ್ಲುದೇ ತಾನು ದಯಾದಾಕ್ಷಣ್ಯವ?
ತೊತ್ತುಬಲ್ಲಳೇ ತನ್ನ ಮಾನ ಮಾರ್ಗಂಗಳನು?
ಬೆಕ್ಕುಬಲ್ಲುದೇ ಹಾಲು ಮೀಸಲೆಂಬುದನು? ‖ ೧

ಹೇನು ಬಲ್ಲದೇ ಮುಡಿದ ಪರಿಮಳದ ವಾಸನೆಯ?
ಶ್ವಾನ ಬಲ್ಲುದೇ ತಾನು ರಾಗ ಭೇದಂಗಳನು?

ಮೀನು ಬಲ್ಲುದೇ ನೀರ ಸವಿ ಸ್ವಾದವೆಂಬುದನು?
ಮಾನ ಹೀನಬಲ್ಲನೇ ಭಕ್ತಿ ವಿಶ್ವಾಸವನು? ‖ ೧
ಹೇಡಿ ಬಲ್ಲನೇ ರಣದ ಹಿಮ್ಮೆಟ್ಟು ಕುಂದೆಂಬುದನು?
ಕೋಡಗ ಬಲ್ಲುದೇ ತಾನು ರತ್ನದ ಬೆಲೆಗಳನು?
ಬೇಡಿದೊಡೆ ಗುಣವೀವ ಕಡಲಾದಿ ಜಿನನಲ್ಲದೆ ಮಿಕ್ಕ
ನಾಡಾದಿ ದೈವಗಳೆಲ್ಲ ತಾವು ಕೊಡಬಲ್ಲವೇನು? ‖ ೨

## ೧೦೮. ಭಜನೆಮಾತ್ರಸಾಲದೆ?

ಭಜನೆ ಮಾತ್ರ ಸಾಲದೇ? ಆ ಜಿನೇಂದ್ರನ
ಸುಜನ ಸುಜ್ಞಾನ ಜನಾನಂದರೂಪನ
ನಿಜಗುಣ ರತ್ನತ್ರಯನಪ್ಪ ಜಿನೇಂದ್ರನ ‖ ಪಲ್ಲವಿ

ಪಿಂತಣಭವಂಗಳೊಳು ಅಂಟಿದಕರ್ಮ
ಸಂತತಿ ಜಯಿಸುವಲ್ಲಿ
ಅಂತರಂಗದ ಶುಕ್ಲಧ್ಯಾನವಾಸದೊಳರ
ಹಂತನೇ ತನ್ನಾತ್ಮನೆಂದು ಭಾವಿಸುವಂಥ ‖ ೧

ಕುಟಿಲ ವಿಧಿಯಾಟದ ನರ್ತನದಲ್ಲಿ
ಘಟಿಸುವ ಪಾಠಕದ
ಪಟುತರ ಕೆಡುವ ರಕ್ಷೆಯ ಭಕ್ತಿಯೊಳು ಕರ್ಮ
ಭಟರಗೆಲಿದ ನಿರಂಜನ ಸಿದ್ಧರಡಿಗಳ ‖ ೨

ದುರ್ವಾರ ದುಃಖದೊಳು ವ್ಯಂತರ ಗ್ರಹ
ಪರ್ವಿದ ಸಮಯದೊಳು
ಗರ್ವಿತ ನೃಪ ಚೋರವ್ಯಾಘ್ರ ದುಃಖಂಗಳೊಳು
ನಿರ್ವಾಣಪತಿ ಸರ್ವತೋಮುಖ ಸಲಹೆಂಬ ‖ ೩

ಭವರುಜೆಯಡಿಸಿದಾಗ ಅಂತರ ಚಾರರು
ಕವಿದು ಕಾಲ್ಗೆಡಿಸುವಾಗ
ಧ್ರುವಚಿತ್ತವಿಡಿದಾತ್ಮ ಯೋಗಭಾವದೊಳು
ರವಿಕೋಟಿದ್ಯುತಿಭಾಸಮಾನ ಸರ್ವಜ್ಞನ ‖ ೪

ಯೋಗಾಭ್ಯಾಸವ ಮಾಳ್ಪಾಗ ಮಾರ ನಿದ್ರೆ
ರಾಗ ಸಂಭವಿಸುವಾಗ

ರಾಗಾದಿ ದೋಷವ ನೀಗಿದ ನಿತ್ಯಾತ್ಮ
ಶ್ರೀಗಧಿನಾಥ! ಮಾಂ ಪಾಹಿ ಭಗವಾನೆಂಬ ॥ ೫

## ೧೦೯. ಮಾನವಜನ್ಮಕೆಬಂದು

ಮಾನವ ಜನ್ಮಕೆ ಬಂದು ಮುಕ್ತನಾಗದೆ ವ್ರತವಿ
ಧಾನದಿಂದ ಶುದ್ಧನಹರೇನಾಯ್ತು? ॥ ಪಲ್ಲವಿ

ನಾಕು ಸಂಘಕೊಲಿದು ನಾಕುದಾನವಕೊಟ್ಟು ಇರದ
ನೇಕ ಫಲಗಳ ಪಡೆವರೇನಾಯ್ತು?
ಜೋಕೆಯಿಂದ ಒಂದೆರಡು ನೋಂಪಿಯ ನೋಂತು ಸ್ವರ್ಗ
ಲೋಕದ ಪಟ್ಟವನಾಳವೊಡೇನಾಯ್ತು? ॥ ೧

ಇರುಳೂ ಹಗಲು ಒಡಲ ಸುಖಕೆ ಕುಡಿಯುತಿದ್ದೆಯ್ಯೆ ಸಂಜೆ
ಎರಡರೊಳಗೆ ಜಪವ ಮಾಡುವೊಡೇನಾಯ್ತು?
ಪರಮ ಭಕ್ತಿಯಿಂದ ಒಂದೆರಡು ಘಳಿಗೆಯಾದರೂ ಪುಣ್ಯ
ಚರಿತೆಯನಿರದೇ ಕೇಳುವೊಡೇನಾಯ್ತು? ॥ ೨

ಈ ಮೈ ಬೇರೆ ನೀ ಬೇರೆಂದು ನಿಮಿಷವಾದರೂ ಆತ್ಮಾ
ರಾಮನಾಗಿ ಶುದ್ಧನಹರೇನಾಯ್ತು
ಶ್ರೀಮಂದರಸ್ವಾಮಿ ನೀನೆ ಶರಣೆಂದು ಆ ಮೋಕ್ಷ
ಸೀಮೆಗಧಿನಾಥನಹರೇನಾಯ್ತು? ॥ ೩

## ೧೧೦. ಲಾಭಲಾಭದಿನದಿನಕೆ

ಲಾಭ ಲಾಭ ದಿನದಿನಕೆ ಲಾಭ ಕಾಣಿರೋ
ಪ್ರಾಭೃತವನೋದಿ ಧ್ಯಾನಕೆ ಮನವಿಟ್ಟಂದಿನಿಂದ ॥ ಪಲ್ಲವಿ

ಪೊಲ್ಲದೊಡಲ ತಪಸಿಗೊಡ್ಡಿ ಇಂದು ನಾಳೆ ಸ್ವರ್ಗ
ದಲ್ಲಿ ದಿವ್ಯ ದೇಹವಹುದು ಲಾಭ ಕಾಣಿರೋ
ಬಲ್ಲಿದ ನೀನಾತ್ಮ ಯೋಗ ಕೂಡಲು ಮತ್ತಾಸ್ವರ್ಗ
ದಲ್ಲಿಂದ ಬರಲಾತ್ಮ ತನು ಮೃತಲಾಭ ಕಾಣಿರೋ ॥ ೧

ಪವನಯೋಗದಿ ಮನವ ಜಯಿಸಿ ಎನ್ನೊಡಲ ರೋ
ಗವನೊತ್ತಿ ಕಳೆವೆ ತಾನದು ಲಾಭ ಕಾಣಿರೋ
ಭವ ಭಯವನಳಿವ ಕಲೆಯನೆಳಿಸುವೆ ನಿಂದು ನಾಳೆ
ಜವನ ತೊತ್ತಳಿದುಳಿವೆನದು ಲಾಭ ಕಾಣಿರೋ ॥ ೨

ನಿಚ್ಚ ನಿಚ್ಚ ಧ್ಯಾನ ಖಡ್ಗದಿಂದ ಕರ್ಮಗಳನು
ಕೊಚ್ಚಿ ಕೊಚ್ಚಿ ಕಳೆವೆ ತಾನದು ಲಾಭ ಕಾಣಿರೋ
ಮೆಚ್ಚಿ ನಿರಂಜನಸಿದ್ಧನ ನೆನೆವೆ ನಾನಿನ್ನು
ಅಚ್ಯುತಾತ್ಮ ಸಿದ್ಧ ನನಗೆ ಲಾಭ ಕಾಣಿರೋ ॥ ೩

<u>೨೧೧. ಲೀಲೆಲೀಲೆದಿನದಿನಕೆ</u>

ಲೀಲೆ ಲೀಲೆ ದಿನದಿನಕೆ ಲೀಲೆ ಕಾಣಿರೋ
ಜೋಲಿ ಮಾಲೆಗಳನು ಬಿಟ್ಟು ತನ್ನ ತಾನು ನೋಡಿದಂದಿಗೆ ॥ ಪಲ್ಲವಿ

ಕಂಡ ಕಂಡ ಕಡೆಗೆ ಹರಿವ ಮನವೊಂದು ಹುಚ್ಚು ಕುದುರೆ
ಚಂಡಿಗೆಯೊಳಗೆ ಇರ್ದುದದು ಲೀಲೆ ಕಾಣಿರೋ
ಮಂಡಿತಾತ್ಮರೂಪೆಂಬ ಬಟ್ಟಬಯಲೊಳದನೇರಿ
ಕೊಂಡು ವೈಹಾಳಿ ಮಾಳ್ಪುದದು ಲೀಲೆ ಕಾಣಿರೋ ॥ ೧

ಹಗೆಗಳುಳ್ಳವರಂತೆ ಹಲವ ಚಿಂತಿಸಿ ಕುದಿವ
ಬೆಗಡವನು ತೊಲಗಿಸುವುದದು ಲೀಲೆ ಕಾಣಿರೋ
ಹಗಲಿರುಳು ಪರಮಾತ್ಮ ಧ್ಯಾನವೆಂಬಮೃತವನು
ಮೊಗೆ ಮೊಗೆದು ಸುಖಿಸುತಿಹುದು ಲೀಲೆ ಕಾಣಿರೋ ॥ ೨

ಸ್ವಸ್ಥಗೆಟ್ಟ ಬಾಹ್ಯ ತಪದೊಳು ಸಿಕ್ಕದ ಪರಮ ವಿ
ರಕ್ತಿಯ ತಪವೆ ತಾನಿದು ಲೀಲೆ ಕಾಣಿರೋ
ಭಕ್ತಿಯಿಂದ ಹಂಸನಾಥನೊಳಿಹೆನು ಇಂದು ನಾಳೆ
ಮುಕ್ತಿಕಾಂತೆ ಎನಗೆ ಒಲಿವಳಿದು ಲೀಲೆ ಕಾಣಿರೋ ॥ ೩

<u>೨೧೨. ಸಂಗವತೊರೆವುದೆ</u>

ಸಂಗವ ತೊರೆವುದೆ ದೀಕ್ಷೆ ಅಂತ
ರಂಗ ಶುದ್ಧಾತ್ಮನೆ ರಕ್ಷೆ ॥ ಪಲ್ಲವಿ

ಶುಚಿಯಾನುಕೂಲ ಸನ್ಯಾಸ ಅದ
ಕುಚಿತಾತ್ಮ ಯೋಗದಭ್ಯಾಸ
ವಚನಗುಪ್ತಿಯೆ ಸುಖವಾಸ ತನ್ನ
ಶುಚಿಯೊಂದೆ ಪರಮವಿಲಾಸ ॥ ೧

ಪರಮ ಪ್ರಾಭೃತವೆ ಸಿದ್ಧಾಂತ ಅದ
ಪರಿಭಾವಿಸಿದರಾಧ್ವಾಂತ
ಪರಮಾತ್ಮ ರಚನೆ ನಿಶ್ಚಿಂತ ತ
ನ್ನಿರವೆಲ್ಲ ತಾನನೇಕಾಂತ ॥ ೨

ಪರಿತೃಪ್ತಿ ನಿಜಸುಖದರ್ಥ ಭವ
ಜ್ವರಹರ ಸ್ಮರಿಪೆನನಾಥ
ಸುರುಚಿರ ಶೀಲಸನಾಥ ಸ್ವಾಮಿ
ಪರಮ ಶ್ರೀ ಗುರುಹಂಸನಾಥ ॥ ೩

## ೨೧೩. ಸಂತಸಬರುತಿದೆನಿನಗೆ

ಸಂತಸ ಬರುತಿದೆ ನಿನಗೆ ಹೇಳುವೆ ಮುಕ್ತಿ
ಕಾಂತೆಯೆ! ಕಾದಲ ಬರುವನು ನಿನ್ನ ಮನೆಗೆ ॥ ಪಲ್ಲವಿ

ಇತ್ತಲೀ ದೇಶದಲಿ ಎರಡೂವರೆ ದ್ವೀಪದಲಿ
ಉತ್ತುಂಗ ಗಿರಿಯಲ್ಲಿ ವನದಲ್ಲಿ ಕಡಲೊತ್ತಿನಲಿ
ಸುತ್ತುತಲಿಹನು ನಿನ್ನ ವಿರಹದೊಳೇಕಾಕಿಯವನು
ಮತ್ತೊಂದು ಹೆಣ್ಣ ನೋಡನು ನುಡಿಸನು ತಾನು ॥ ೧

ಜಾಣರದೇವನು ಚೆಲುವನು ಮೂಜಗವನು ಪಿಡಿದೆತ್ತುವ
ತ್ರಾಣಿಯು ಜಗದೊಳಗನು ಹೊರಗನು ನಿಚ್ಚವರಿವ
ಕಾಣುವಧ್ಯಕ್ಷನು ಕಡುಸುಖಿ ತನ್ನಿಂದಲೇ ತನ್ನನು
ಕಾಣುತಲಾತ್ಮಧ್ಯಾನದ ಕೋಣೆಯೊಳಿರುತಿಹನು ॥ ೨

ಎಂದಿಗೆ ಬಂದಪನೆಂದು ಕೈಹೊಸೆದು ಶೋಕಿಸದಿರು
ಒಂದು ಎರಡು ಮೂರೆ ಭವದಲಿ ಭವವಳಿದು
ಇಂದು ರವಿಕೋಟಿ ಪ್ರಭೆಯಾಂತ ಚಿದಂಬರ ಪುರುಷನು
ಇಂದೆ ಬರುತಹನೆ ಸಿಂಗರಿಸಿ ನಿಲ್ಲು ಲಂತಾಗಿ ॥ ೩

## ೨೧೪. ಸಾಧನೆಯಮಾಡುಕಂಡ

ಸಾಧನೆಯ ಮಾಡು ಕಂಡ ಧೀರ ಯೋಗಿ
ಬಾಧಿಸುವ ಹಗೆಗಳು ಮುಟ್ಟಿ ಮೀರದ ಮುನ್ನ ‖ ಪಲ್ಲವಿ

ಆಯುಷ್ಯದಂತ್ಯದೊಳು ಮುಪ್ಪು ತಬ್ಬುತ
ನೋಯಿಸುತ ನಿನ್ನ ಕೊಲ್ಲುವ ಮುನ್ನ
ಒಯ್ಯಾರದಿ ದಿನ ನೂಂಕದೆ ನಿಲುತಾರು ತಪದಲ್ಲಿ
ಕಾಯ ದಂಡನೆಗಳೆಂಬ ಕರ್ಮವ ಗೆಲುಮಲ್ಲ ‖ ೧

ದುರ್ವಿಚಾರಗಳ ನಡೆನುಡಿಯಿಂದ ಸ್ವಸ್ಥವೆಂಬ
ಪರ್ವತವಲ್ಲಾಡಗೊಡದಿರು ದೃಢದಿಂ
ಸರ್ವರೊಳು ಸಮಚಿತ್ತವಿರಿಸಿ ಬಂದ ಕೋಪ
ಗರ್ವ ಮಾಯೆ ಲೋಭಗಳ ಕಳೆ ಕಠಾರಿಯಿಂ ‖ ೨

ಬೀಜಮೂಡಿ ಬೆಳೆದು ವಿಶೋಧ ತಪ್ಪಿದೊಡೆ ಮೋಹ
ರಾಜ ನಾಳೆ ಕೆರಳಿ ಕ್ಕೆ ಮಾಡದಿರನು
ಗಾಜಗೋಜನುಳಿದು ಸನ್ನದ್ಧ ಚಿತ್ತನಾಗಿಯಪ
ರಾಜಿತೇಶ್ವರನ ಧ್ಯಾನವೆಂಬ ವಜ್ರಾಯುಧದಿಂದ ‖ ೩

## ೨೧೫. ಸುವ್ವಲಾಲೀಸುವ್ವಿ

ಸುವ್ವಲಾಲೀ ಸುವ್ವಿ ಸುವ್ವಲಾಲೀ ‖ ಪಲ್ಲವಿ

ಆರು ತಪದೊಳೊಣಗಿ ಸುಮ್ಮನೆ
ಮೂರು ದೇಹವೊರಳೊಳಿಟ್ಟು
ಚಾರುಧ್ಯಾನದೊನಕೆ ಪಿಡಿದು
ಕೇರು ಬೇಗ ಬುದ್ಧಿಯ ಮೊರದಿ ‖ ೧

ದ್ರವ್ಯಭಾವ ಕರ್ಮವೆಂಬ ಆ
ಸವ್ಯತೃಷೆ ತವಡು ಹೋಗೆ
ನವ್ಯ ಪ್ರಭೆಯಾತ್ಮ ತುಂಡುಲ
ದಿವ್ಯವಾಗುವಂತೆ ಚಲಿಸು ‖ ೨

ತಕ್ಕ ಗುಣವ ಪಿಡಿಯುತಾತ್ಮನು
ಚೊಕ್ಕವಾಗಿ ಮತ್ತ ಜನುಮವಿಲ್ಲವು
ಸಕ್ಕ ನೊಗದ ಮುಕುತಿ ಮಾತಿಗೆ
ಹೊಕ್ಕ ಹೋ! ಚಿದಂಬರ ಪುರುಷನು ‖ ೩

<u>೧೧೬. ಸಾಲದೇನಿನ್ನಕಲ್ಯಾಣ</u>

ಸಾಲದೇ ನಿನ್ನ ಕಲ್ಯಾಣ ಭಾವನೆಯೊಂದೇ? ಮೇಲಾದ ಶಿವಪದಕೆ!
ಮೂಲೋಕ ನಾಯಕ! ನಮಗನ್ಯ ಚಿಂತೆಯ ಮಾಲೆಗಳಿನ್ಯಾತಕೋ ‖ ಪಲ್ಲವಿ

ಧರೆಗೆ ನಿನ್ನಯ ಬರವಾರುದಿಂಗಳೆಂದಾಗ ಸುರರಾಜನವಧಿಯಿಂದ
ಕರೆದು ಕುಬೇರಗೆ ಬೆಸಸಲವನು ದಿನದೊಳು ಮೂರು ಸಂಜೆಯಲಿ
ಅರಮನೆಯಂಗಣದಲಿ ಮೂರುವರೆಕೋಟಿ ನವರತ್ನದ ಮಳೆಯ ನಿನ್ನ
ಚರಣ ಕಾಂಬನ್ನಗಂ ಕರೆದ ತೆರನನವ ಧರಿಸಿದವನೆ ಧನ್ಯನು ‖ ೧

ಅಂಬರೇಚರ ನರಸುರ ನಾಗರಾಜ ಕದಂಬವೆಲ್ಲವು ನೆರೆನೆರೆದು
ತೊಂಬತ್ತೊಂಬತ್ತು ಸಾಸಿರ ಗಾವುದದ ಹೊಂಬೆಟ್ಟದೊಳು ನಿನ್ನನು ಒಡನೆ
ಇಂಬುಗೊಳಿಸಿ ಪಾಲ್ಗಡಲಮೃತವ ತುಂಬಿತುಂಬಿ ಪೊಸಗೊಡಗಳ ತಂದು
ಬೆಂಬಡದಂದು ನಿನಗೆ ಮಾಡಿದಭಿಷವದಿಂಬನೇ ನೆನೆವನೇ ಸುಖಿ ‖ ೨

ಪೇಳಲೇನಮರಲೋಕದ ಚೀನ ಚಮರದುಡಿಗೆಯಿಂ ಸಿಂಗರಿಸಿ ತಂದು
ಮೇಳದಿಂದಲಿ ನಿನ್ನನು ಬಿಜಯಂಗೈಸಿ ಬಾಳೆಂದು ಹರಿಸಿ ನಮಿಸುತ
ಏಳೇಳು ಹೆಜ್ಜೆಯೊಳು ಮನುಜ ಖೇಚರ ಸುರವ್ಯಾಲಿರಾಜರು ನೆರೆದು ತಾವು
ಲೀಲೆಯಿಂದರರದಾಂತು ಕೊಂಡೊಯ್ದು ಮಹಿಮೆಯ ಕೇಳಿದವನೇ ನಿತ್ಯನು ‖ ೩

ನೆಲದಿಂದ ಮೇಲ್ಐದುಸಾಸಿರ ಬಿಲ್ಲುದ್ದದಲಿ ರನ್ನವಪರಂಜಿಯೊಳು ಯಕ್ಷ
ರಲಸದೆ ರಚಿಸಿದ ದ್ವಾದಶ ಯೋಜನವಲಯದಾವತ ವಡೆದ
ಪೊಳೆವ ಸಮವಸರಣದ ನಟ್ಟನಡುವೆ ಪಜ್ಜಳಿಪ ಸಿಂಹಾಸನದಿ
ನಳಿನಕೆ ನಾಲ್ವೆರಳುದ್ದದೊಳಿದ್ದ ನಿನ್ನಳವ ಧ್ಯಾನಿಪನೆ ತಾ ಸುಖಿಯು ‖ ೪

ಹಿಂಗದೆ ನಿಜಪದಯುಗವನೋಲೈಸುವ ಬೆಡಂಗಿನೊಳಿದ್ದವರ
ಸಂಗವನೆಲ್ಲವ ತೊರೆದದ್ದು ಕರ್ಮದ ತೊಗಲ ಪರಿದೀಡಾಡಿ ಉರೆ
ಲಂಘಸಿ ಮೂಲೋಕದ ತುತ್ತತುದಿಯ ಮುಕ್ತ್ಯಂಗನೆಯೊಳು ನೆರೆದ
ಶೃಂಗಾರಕವಿಯ ನೆಚ್ಚಿನಸ್ವಾಮಿ! ಕಡಲೊಳು ಕಣ್ಗೆಸವಾದಿ ಜಿನ! ‖ ೫

## ೧೧೭.ಹಂಗುಬೇಡವಿನ್ನೆನಗೆ

ಹಂಗು ಬೇಡವಿನ್ನೆನಗೆ ಪರರ ನಿ
ಸಂಗ ವೃತ್ತಿವಿರಕ್ತಿ ಕ್ಷಮೆ ಮೂರು
ಹಿಂಗದಿದ್ದರೆ ಸಾಕು ಮುಕ್ತಿ ಎನ್ನಂಗಣದ ಜಗುಲಿ ‖ ಪಲ್ಲವಿ

ಬಂದು ಷಟ್ಖಂಡ ಭುವನವೆಲ್ಲ ಜೀ
ಯೆಂದು ಬೆಸೆಗೆಯ್ಯುತಿರೆ ಇದು ನನ್ನ
ದೆಂದು ಮನದೊಳು ಬಗೆಯದವ ಮುಂದೆ ಮೋಕ್ಷಗೊಂಡು
ಒಂದು ಚಣದೊಳೆ ಕರ್ಮವ ಸುಟ್ಟು
ನಿಂದ ಭರತೇಶನೊಲು ಪರರನು
ಹೊಂದಿ ಹೊದ್ದದ ನಿಸ್ಸಂಗವೃತ್ತಿಯೆಂದು ಗಳಿಸುವೆನೋ? ‖ ೧

ಪ್ರಾಯದೊಳು ತಪವು ಸಲದೆಂದು
ತಾಯಿ ತಂದೆಯರಿರದೆ ನಾಲ್ವರು
ಸ್ತ್ರೀಯರನು ತಂದು ಮದುವೆ ಮಾಡಿದರಾ ಇರುಳಿನೊಳು
ಸ್ತ್ರೀಯರಿಗು ತಾಯಿಗೊರ್ವಕಳ್ಳಗು
ಹೇಯದೋರಿದ ಜಂಬುಸ್ವಾಮಿಯ
ನ್ಯಾಯದಂತೆ ವಿರಕ್ತ ಎನಗೆ ಸಹಾಯವೆಂದಹುದೋ? ‖ ೨

ದುರ್ನಯದಸುರಗೈದುಪಸರ್ಗ
ಘೂರ್ಣನೆ ಬೆಚ್ಚದಿನಿಸು ಮುನಿಯದೆ
ನಿರ್ಣಯಿಸಿ ಬೇಗ ಸಿದ್ಧವಡೆದ ಸುವರ್ಣ ಭದ್ರನೊಲು
ಪೂರ್ಣ ಕ್ಷಮೆ ಮೇಣ್ ಧ್ಯಾನದಿಂದಲಿ
ವರ್ಣ ಕರ್ಮವ ಕೊಡಹಿ ನಿಂದ ಸು
ಖಾರ್ಣವ ಚಿದಂಬರ ಪುರುಷನನು ಚಣಾರ್ಧದೊಳು ಕಾಣ್ಬೆಂ ‖ ೩

## ೧೧೮. ಹೆಚ್ಚುಬಾಳ್ವರೆ

ಹೆಚ್ಚು ಬಾಳ್ವರೆ ನರರಾಯುಷ್ಯನೂರು
ವೆಚ್ಚತಾನುಂಟಲ್ಲಿಯು ನೋಡು ರೂಪಾರು ‖ ಪಲ್ಲವಿ

ತೊಡಗೆ ಪನ್ನೆರಡರ್ಧ ಶಿಶುವೆಂಬನೆಪ್ಪು
ಕಡೆಗೆ ಎಪ್ಪತ್ನಾಲ್ಕು ನಿಲ್ಬುದದು ಮುಪ್ಪು
ನಡುವೆ ಇಪ್ಪತ್ನಾಲ್ಕು ನಿದ್ದೆಗೆ ನೆಪ್ಪು
ಕಡು ಬಾಳ್ದರೆಪ್ಪತ್ನಾಲ್ಕರಿಂದೊಪ್ಪು ‖ ೧

ಅದು ತಾನು ಸ್ಥಿರವಲ್ಲ ಸ್ಥಿರವಾದರೊಮ್ಮೆ
ಕದನ ಬಂಧುವಿಯೋಗ ರೋಗದ ಸೊಮ್ಮು
ಎದೆಗೆಡುವುದಡಿಗಡಿಗೆ ಇದೇತರ ಬಲ್ಮೆ
ಇದರೊಳಗೆ ನಿನಗೇಕೆ ಭೋಗದ ಹೆಮ್ಮೆ ॥ ೧

ಕಟ್ಟಿದ ಸಿರಿಯೊಳಾತ್ಮ ನಿನಗೇಕೆ ನಂಟು?
ಕುಟಿಲ ವಿಷಯಗಳ ಬೆಳಿವುದಾಗಂಟು
ದಿಟವಾಗಿ ಭವಾಂಬುಧಿಯನಿರದೆ ದಾಂಟು
ದಿಟ್ಟನಪರಾಜಿತೇಶ ನಲ್ಲೆ ನಿನಗುಂಟು ॥ ೩

## ೧೦೯. ಹೊರಹೊರಗಾಡಿಮೈಮರೆತಿದೆಲೋಕವೆಲ್ಲಆತ್ಮನ

ಕುರುಹ ತಾವರಿತಿಲ್ಲ ಶರೀರದ ಸೆರೆಗಾದರೆಲ್ಲ ॥ ಪಲ್ಲವಿ

ಒಡಲೆಂಬ ವಾದ್ಯವ ಜೀವನೆಂದೆಂಬ ವಾದ್ಯಕಾರನು ತಾ
ನುಡಿಸುತಿಹ ನಾಲಗೆಯೆಂಬ ಕುಡುಹಿಂದ
ನುಡಿಸುತಿರ್ದು ಕಡೆಗದ ಬಿಟ್ಟು ಹೋಹನು ಒಡನೆ ಮತ್ತೊಂ
ದೊಡಲ ಹೊಕ್ಕು ಕುಳಿತಿಹನಯ್ಯಯ್ಯೋ ॥ ೧

ದೇಹವೆಂಬ ಚರಚೋಹವ ಜೀವನೆಂಬ ಅತಿಹಳಬ
ಚೋಹಕಾರ ತಾ ತೊಟ್ಟಾಡುತಲಿರ್ದು ಕಡೆಗೆ
ಹೋಹನಿರದೊಮ್ಮೆ ಬಾರನೀ ಕಡೆ ಧರಿಸಿ ತನಗೊಂದು
ಚೋಹದ ಹೊಸ ತೊಡಿಗೆಯ ತೊಟ್ಟು ಅಯ್ಯಯ್ಯೋ ॥ ೨

ಮಾಂಸ ರಕ್ತದ ಮೈಯ ಸೋಂಕಿಯ ಸೋಂಕದಿಹ
ಹಂಸನಾಥನ ನೋಡಿ ಕೂಡಿರೋ ನಿಜವ ನೀವರಿತೆಲ್ಲ
xxxxxxxxxxxxxxxxxxxx
ಸಂಸಿದ್ಧಿಯಲ್ಲಿ ತನುವ ದೂಡಿ ನಿಲ್ಲಿರಯ್ಯೋ ॥ ೩

## ೧೧೦. ಹೊಯ್ಯೋಡಂಗೂರವ

ಹೋಯ್ಯೋ ಡಂಗೂರವ ಜಿನ್ನಯ್ಯಗಲ್ಲದೆ ಬೇರೆ
ಬಯಲು ಬಿನುಗುದೈವಕೆರಗೆ ನಾನೆಂದು ॥ ಪಲ್ಲವಿ

ಕಾಡುವ ಕರ್ಮವ ನಿಲಗೊಡದೋಡಿಸುವ
ಬೇಡದ ಗುಣವ ಬೋಧಿಸಿ ಬೇಗ ಕೊಡುವ

ರೂಢಿಗೊಡೆಯ ಜಿನ್ನಯ್ಯನಿಗಲ್ಲದೆ ಮಿಕ್ಕ
ನಾಡಾಡಿದೈವಕೆ ಕೈಯ ಮುಗಿಯೆನೆಂದು ॥ ೧

ಜನನ ಮರಣಕೆ ದೂರದೂರ ನೀ ದೇವ
ನೆನೆವ ಭವ್ಯರ ಮನದೊಳಗೇ ಇರುವ
ವನಿತೆ ವಸುಧೆಯಿಂದ ತಾ ದೂರನಿರುವ
ಜಿನಗಲ್ಲದೆ ಮಿಕ್ಕಿದೈವಕೆರಗೆನೆಂದು ॥ ೨

ಉಪ್ಪುಗಡಲ ನಡುಮಧ್ಯದಿ ಬಲುತಪ
ಕೊಪ್ಪಿ ನಿಂದಾದಿ ಜಿನೇಶನ ಪದಯುಗಕೆ
ಎಪ್ಪತ್ತೆರಡು ತೀರ್ಥಂಕರಿಗಲ್ಲದೆ ಬಿಡು
ತಪ್ಪಿಯಾದರೂ ಮಿಕ್ಕ ದೈವಕೆರಗೆನೆಂದು ॥ ೩

## ೨೨೧. ಹೋ! ಹೋ! ಭೋಗಬಾಳು

ಹೋ! ಹೋ! ಭೋಗಬಾಳು ಸಾಕು ಇನ್ನು
ಮೋಹಮಲ್ಲನ ನೀ ನೂಕು ನೂಕು
ಶ್ರೀ ಹಂಸನ ಕಾಣಬೇಕು ಕೂಡೆ
ಮೋಹಮಾಯೆಯ ನೀ ಬಿಡಬೇಕು ॥ ಪಲ್ಲವಿ

ಕಡಲ ಹೀರುವ ತೃಪೆಯಷ್ಟು ಕೆ
ಟ್ಟೊಡಲ ಸುಖದ ಪರಿಯೆಷ್ಟು
ಒಡಲು ಭೋಗವನುಂಡಷ್ಟು ತೃಷೆ
ಯಡಗದು ಸುಡು ಪಣತೊಟ್ಟು ॥ ೧

ವಲ್ಲಭಯರೊಡನಾಟವದು
ಬೆಲ್ಲಗೂಡಿದ ಆಕಾಶಕೂಟ
ಕೊಲ್ಲದುಳಿಯದ ಈ ಬೇಟ ಇದ
ಬಲ್ಲವರೆಂಬರು ಮರುಳಾಟ ॥ ೨

ಅಂಗನೆಯರೊಡೆ ಸರಸ ಉರು
ಪಿಂಗಳಕೆರೆದ ಪಾದರಸ
ಹಿಂಗಿಹೋಹುದು ಧರ್ಮರಸ ಇದ
ಪಿಂಗಿಸೋ ಕಾಂಬ ಶ್ರೀಮಂಧರೇಶ ॥ ೩

**೧೧೧. ಎತ್ತಣಿಂದಬಂದೆಯಿನ್ನೆತ್ತ**

ಎತ್ತಣಿಂದ ಬಂದೆಯಿನ್ನೆತ್ತ ಪಯಣ ಮುಂದೆ
ಮೊತ್ತದ ಪಗೆಗಳ ನಡುವೆ ಮೋಸವೇಕಾತ್ಮ ॥ ಪಲ್ಲವಿ

ಕಟ್ಟಿದಾಯುಷ್ಯ ಕೈಯೊಳಾಂತ ನೀರಂತೆ ಸೋರುತಿವೆ
ಕೆಟ್ಟಮನ ವಿಷವೆಂಬ ವಿಷವನುಣುತಿದೆ ಕೊ
ಕುಟ್ಟೆಗೊಂಡ ಮರದಂತೆ ಮೈಸಡಲುತಿದೆ ಬೇಗೆಯ
ಬೆಟ್ಟದ ಮೇಲ್ಮಲಗಿ ಮರೆವರೇಕಾತ್ಮಾ ॥ ೧

ವ್ರತದ ಲಾಭವೆ ಲಾಭ ಜಪವೆ ತಪ ಮೋಹವನು
ಗತಿಗೆಡಿಸುವದೆ ಪಂಥ ಸಕಲ ಜೀವಗಳ
ಪ್ರತಿಪಾಲಿಪುದೆ ಧರ್ಮ ಮೈಯ ಭೇದವೆ ಬೋಧ
ಧೃತಿ ವಿರಕ್ತಿಯ ಮುಕ್ತಿ ಹಲವೇನು ಆತ್ಮಾ ॥ ೨

ಇಂದ್ರಜಾಲದೊಡ್ಡಣೆಯ ಸಿರಿಗೆ ಮರುಳಾಗದೆ ಮಾ
ಹೇಂದ್ರ ಕೀರ್ತಿಯಂತೆ ಧೀರನಾಗಿ ಸಕಲ
ಇಂದ್ರಿಯಂಗಳ ಜಯಿಸಿ ಶಾಂತರಸ ವಾರಿಧಿಗೆ
ಚಂದ್ರನಂತೆ ಸಾರು ಶ್ರೀ ಮಂದರಸ್ವಾಮಿಯನು ॥ ೩

**೧೧೨.ಬೇಡಿಕೊಂಬೆನುನಿಮ್ಮ**

ಬೇಡಿಕೊಂಬೆನು ನಿಮ್ಮ ಬಡವ ನಾ ನಿಮ್ಮ
ಮಾಡುವ ಪೂಜೆಗೆ ಮೈಗೊಡು ಗುರುವೇ ॥ ಪಲ್ಲವಿ

ಭರತೇಶ ರಾಮಚಂದ್ರರ ವಜ್ರದೇಹವೆಂ
ಬರವನೆಗೆಯ್ದಿ ಪೂಜಿಸಿಕೊಂಡ ಸ್ವಾಮಿ
ಹುರುಡಿಲ್ಲದೀ ದೇಹವೆಂಬ ಹುಲ್ಮನೆಗೆನ್ನ
ಗುರುವೇ ನೀನೊಯ್ಯನೆ ಚಿತ್ತೈಸಬೇಕು ॥ ೧

ಸಗರ ಚಕ್ರಿಯ ಪದ್ಮಚಕ್ರಿಯ ಮನದ ಗ
ದ್ದುಗೆಯಲ್ಲಿ ನೆಲಸಿ ಪೂಜಿಸಿಕೊಂಡ ಸ್ವಾಮಿ
ಬಡವನ ಮನವೆಂಬ ಮ
ನೆಗೆ ಮೆಲ್ಲನೆ ಬಿಜಯಂ ಮಾಡೊ ಕೃಪೆಯಿಂದ ಗುರುವೇ ॥ ೨

ಅಷ್ಟವಿಧದ ಭಾವಪೂಜೆಯ ಮುನಿಗಳು
ಶಿಷ್ಟಗಾಲದಲಿ ಮಾಡಿದರಂದು ನಿಮಗೆ
ಕಷ್ಟಗಾಲವಿಂದು ನಾನು ಮಾಡುವೆನು ಸಂ
ತುಷ್ಟನಾಗಿ ಭಾವಪೂಜೆಗೆನ್ನೊಡೆಯ ॥ ೩

ಮೂವರು ಕುಂದಿದ ನವಕೋಟಿ ಮುನಿಗಳು
ಭಾವ ಪೃಥವನನಭಿಷೇಕ ಮಾಡಿದರು
ದೇವ ನಾ ನಿಮಗೆ ಬ್ರಹ್ಮಾನಂದ ರಸವ
ದ್ಭಾವಲಭಿಷೇಕವೆರೆವೆ ಚಿತ್ತೈಸೊ ॥ ೪

ರತ್ನನಿವಾಳಿ ಪುಷ್ಪಂ ಜಾಜಿಗಳ ಯೋಗಿ
ರತ್ನರಂ ನಿನಗೆ ಭಾವದಲ್ಲಿ ಮಾಡುವರು
ರತ್ನ ಮೂರು ನೀನೆ ನಿಗೆ ನೀ ಜಯ ಜಯ
ರತ್ನಾಕರ ಸ್ವಾಮಿ ನಿಜಂ ಪರಂಜ್ಯೋತಿ ॥ ೫

## ೧೧೪.ಧೀರನೆಂದೆನ್ನಿತ್ರಿಭುವನ

ಧೀರನೆಂದೆನ್ನಿ ತ್ರಿಭುವನ ಸಾರನೆಂದೆನ್ನಿ
ಆರೊಳು ಬೆರಸದ ಪರಮಾತ್ಮನ ಕಂಡು
ಸಾರಿ ಸದಾ ಸುಖಿಯಾದ ಶಾಶ್ವತನ ॥ ಪಲ್ಲವಿ

ಹಂಸೆ ಹಾಲನೆಳೆದು ಕುಡಿದು ನೀ
ರಂ ಸೇವಿಸದೆ ಉಳಿಸುವಂದದಿ
ದಂಸಣ ಙಾಣ ಚರಿತವ ತಾ ಹೊಂದಿ
ಹಂಸನ ಪಿಡಿದಂಗವ ತೊರೆದವನ ॥ ೧

ಬಹುಚಿಂತೆಯೊಳಗೆ ಸುಟ್ಟು ಹೊರಗಷ್ಟು
ಕಹಿಯನೆಲ್ಲವ ತಾ ಬಿಸುಟು
ಅಹಮೇವ ಮಮ ನಹಿ ಸುಹೃದಪರೋ ಎಂದು
ಸಿಹಿಯೇರುವ ಚಿತ್ರದ ಪಿಡಿದವನ ॥ ೨

ವಾಕುಮ್ಮೆ ಮನಕಂ ತೃಣ ಸಹ
ಸೋಕದಿಹ ನಿರಾಕಾರ ಪರಬೊಮ್ಮ
ಏಕೋಹಂ ನಿರ್ಮಲ ಎನುತ ರ
ರತ್ನಾಕರ ಸ್ವಾಮಿಯ ಮತವಿಡಿದವನ ॥ ೩

## ೨೨೫.ಯಾಕೆಮೈಮರೆದೆತನು

ಯಾಕೆ ಮೈಮರೆದೆ ತನು ಕೆಡದಿರದು ವಿಷಯ ರತಿ
ಸಾಕು ದಾನಾರ್ಚನೆಯು ಶೀಲವುಪವಾಸಗಳೆಂಬೀ
ನಾಲ್ಕರಲಿ ನಡೆ ತಪಸ ಮಾಡು ಮುನ್ನದರಿಂದ ಆ
ನೇಕ ಫಲಗಳ ಪಡೆದರು ಭವ್ಯಾ ॥ ಪಲ್ಲವಿ

ಕಡುಬಡವನೊಬ್ಬ ಬ್ರಾಹ್ಮಣನೊರ್ವ ಜಿನಮುನಿಯ
ತಡೆದು ಮೂರೆ ತುತ್ತನಿತ್ತ ಭಕ್ತಿಗೆ ಮೆಚ್ಚಿ
ಒಡನೆ ಜಯಜಯವೆಂದು ಸುರರು ಪೂಮಳೆ
ಗರೆದರದು ಪಾತ್ರದಾನ ಮಹಿಮೆಯೆಂದು ॥ ೧

ಒಡನೆ ಪುಷ್ಪವ ಕಚ್ಚಿ ಕೊಂಡೊಂದು ಕಪ್ಪೆ ಜಿನ
ರಡಿಗಳು ಪೂಜಿಸಲು ಬರುತಿರ್ದು ಗಜ ಮೆಟ್ಟಿ ಮರಣ
ವೆಡೆಗೊಂಡು ಜಿನಸಭೆಗಾಕ್ಷಣವೆ ಬಂದಿತದು
ಜಿನಾರ್ಚನೆಯ ಮಹಿಮೆಯೆಂದು ॥ ೨

ವಿನುತ ಶ್ರೀ ಪಂಚಮಿಯ ಉಪವಾಸವನು ಕೈಕೊಂಡು
ತನುವಿಗತಿ ಕ್ಷುಧೆಯಾಗಿ ತಾಯಿ ತಂದೆ ಪೇಳಿದರುಣ್ಣನು
ಅನುನಯದೊಳಳಿದು ಸುರನಾದ ನಾಗಕುಮಾರ
ರನುಪವಾಸದತಿಶಯ ಮಹಿಮೆಯೆಂದು ॥ ೩

x x x ತಾನಿರ್ದಂತೆ ಕಿರಿಯ ಗೈಯ್ಯ **x** ರುದನೆಂದು
**x x x** ಕಡು ನಾಚ್ಚಿ ಮುನಿವರನಾ ಅಂದಿನಿರುಳು
ಪರಿದಿಡುವ ಪುತ್ತದಲಿ ಪಾವು ಕಚ್ಚಿ ಮರಣವೆಡೆಗೊಂಡು ಖೇ
ಚರನಾಗಿ ಸುರನಾಗಿ ಮಹಿಮೆಯೆಂದು ॥ ೪

ವರಮುಕ್ತಿಯನು ಕೇಳ ಬೇಡ ಕಾಗೆಯ ಮಾಂಸವನು
ತೊರೆದ ಫಲದಿ ಯಕ್ಷಿಗೆ ಗಂಡನೆಂದು ಮೈದುನ
ಪೇಳೆ ಪಂಚವ್ರತವನು ಕೈಕೊಂಡು
ಸುರನಾಥನದು ವ್ರತದ ಮಹಿಮೆಯೆಂದು ॥ ೫

ಈ ನರ ಜನ್ಮವನು ಬರಿದೆ ನೀಗದಿರು ಅಪರಾಜಿತೇಶ್ವ
ರನ ಸನ್ನಿಧಿಯ ಸಾರಾ ॥ ೬

# ೨. ತೀರ್ಥಂಕರರ ಹಾಡುಗಳು

## ೧. ಶ್ರೀಮದಮರಪತಿನರ

ಶ್ರೀಮದಮರಪತಿ ನರಸುರ ವಂದ್ಯೆಗೆ
ಸೋಮಾರ್ಕಕೋಟಿ ತೇಜನಿಗೆ
ಕಾಮಿತಾರ್ಥವನಿತ ವೃಷಭ ಜಿನೇಶಗೆ
ಪ್ರೇಮದಿಂದಲಿ ವಂದಿಸುವೆ ॥ ೧

ಭಜಿಸುವ ಭಕ್ತಿಯಿಂದಲಿ ನಾನೊಮ್ಮೆ
ಅಜಿತಜಿನರ ಪಾದಯುಗವಾ
ರುಜನ ಕೆಡಿಸಿದಾರು ಹುಲ್ಲದೆವಾಗಿ
ನಿಜಬಕ್ತಿಯಿಂದ ವಂದಿಸುವೆ ॥ ೨

ತುಂಬಿದ ಸುಖಗಳ ಶಂಭವ ಜಿನರಿಗೆ
ನಂಬಿದವರಿಗೆ ಇವಲೇಸ
ಸಂಭ್ರಮದಿಂದಲಿ ಸಲಹುವ ದೇವಾಗಿ ಗು
ಣಾಂಬುಧಿಯನೀವ ಸರ್ವೇಶಾ ॥ ೩

ಉಭಯ ಲಕ್ಷ್ಮಿಯ ನೆರೆ ತಾಳಿದವಾಗಿ
ಶುಭಲಕ್ಷಣಾಂಗ ಮೂರುತಿಗೆ
ಅಭಿನಂದನ ಜಿನರೆಡೆಗಳ ನೆನೆವೆನು
ಶುಭಮತಿ ಎನಗಾಗಲೆಂದು ॥ ೪

ಮಮತೆಯಿಂದಲಿ ಸರ್ವಜನರನು ಸಲಹುವ
ಸುಮತಿ ಜಿನರ ಪಾದ ಮುಗಿವಾ
ಕ್ರಮದಿಂದ ನೆನೆವೆನು ಅನುದಿನ ನಿಮ್ಮನು
ಕ್ರಮದ ದೋಷವು ಕೆಡಲೆಂದು ॥ ೫

ಪದ್ಮಾವಶಾಂತದ ಪಾವನದ ತಳೆದ
ಪ್ರದ್ಮಪ್ರಭಾರೆ ನಿಮ್ಮಡಿಯ
ಬುದ್ಧಿಯಿಂದಲಿ ನೆನೆವೆನು ಬದ್ಧಸುಖಗಳ
ಹೊದಿಸಲೆಂದು ಬೇಗದೊಳು ॥ ೬

ಸುಖವಿತ್ತು ಸಲಹುವ ಸುಪಾರ್ಶ್ವ ಜಿನೇಶಗೆ
ಸುಖದುಃಖಗಳನರಿದವಗೆ

ಸುಖದೋರಿಸ್ಯೆಂದೊರಗುವೆನು ನಿಮ್ಮಡಿಗಳ
ಸುಖವೆನಗಾಗದು ಸುರಪದವಿ ॥ ೭

ಚಂದ ಚಂದನದಿಂದ ಬೆಸಗೆಯ್ದೆ ನಿಮ್ಮಡಿಗಳ
ಬಂದ ಭವರ ಕೆಡಲೆಂದು
ಹೊಂದೆನೀ ಸಂಗದೆ ನೆನೆವೆನಾ ಮನದೊಳು
ಚಂದ್ರಪ್ರಭರೆ ನಿಮ್ಮಡಿಯಾ ॥ ೮

ಅಲ್ಪಸುಖವ ಬಿಟ್ಟು ಅಮೃತಾಂಗನೆಯೊಳು
ನಿಲ್ವಗೆ ನಿಂದ ದೇವನಿಗೆ
ಪುಷ್ಪದಂತ ಜಿನರಡೆಗಳ ನೆನೆವೆನು
ತಪ್ಪದೆ ನನಗಣುವ್ರತವಾ ॥ ೯

ಜಾತಿ ಚೋರ ಮರಣವ ತಾಳದೆ ನಿಜ
ಜಾತರೂಪವ ತಾಳಿದವಗೆ
ಪಾತಕವೆಲ್ಲವ ಪರಿದೀಡಾಡಿದ
ಶೀತಳ ಜಿನರೆ ನಿಮ್ಮಡಿಯ ॥ ೧೦

ಕಾಮಿತ ಫಲವನು ಕೊಡುವ ತಾನಿಹನು
ಸ್ವಾಮಿ ಶ್ರೇಯಾಂಶ ಜಿನಪನು
ನಿಮ್ಮಡಿ ನಮಿಸುವೆ ಮುಕ್ತಿಕಾಮಿನಿ ಸುಖ
ಪ್ರೇಮದಿಗೀಯಲೆಂದು ॥ ೧೧

ಲೇಸದೋರಿಸಿ ಆ ಭೀತಿಯ ಬಿಟ್ಟು
ಲೇಸಾ ಭಕ್ತಿಯೊಳು ನಾ ನಿಮ್ಮ
ವಾಸುಪೂಜ್ಯನೆ ದೇವನೆಂದು ನಂಬಿದೆನು
ದಾಸೀನ ಬೇಡೆನ್ನೊಡೆಯ ॥ ೧೨

ವಿಮಲಜಿನರ ಪಾದಕಮಲವ ನೆನೆವೆನು
ಅಮರಗತಿಯ ಕೊಡಲೆಂದು
ಕ್ರಮದಿಂದ ಕೈವಲ್ಯ ಸಾಧಿಸಬೇಕೆಂದು ಕರ
ಕಮಲವ ಮುಗಿದೆರಗುವೆನು॥ ೧೩

ಭ್ರಾಂತನುಳಿದು ಭವಭವದೊಳು ಸುಖವುಂಡು
ಚಿಂತಿಯಲಾದ ರಾಜ್ಯನಾಣೆ
ಮುಂತಾಗಿ ಮುಕ್ತಿಯ ಪಡೆದೆ ಬೇಗದಿ ಆ
ನಂತ ಜಿನರೆ ಸಲಹೆನ್ನ ॥ ೧೪

ಕರ್ಮವನೆರೆ ಸುಟ್ಟು ನಿರ್ಮೂಲ ಮಾಡಿದೆ
ದುರ್ಮತಿಗಳ ಕೆಡಲೆಂದು
ಧರ್ಮವ ಧರೆಯೊಳುದ್ಧರಿಸಿ ಭಾವರ್ಗ್ಗೆ
ಧರ್ಮ ಜಿನರೆ ಸಲಹುಯೆನ್ನ ‖ ೧೫

ಅಂತಿಂತು ಎನ್ನದೆ ಅಗಣಿತ ಸುಖಗಳ
ಮುಂತಾಗಿ ಮುಕ್ತಿಗಳ ಪಡೆದೆ
ಶಾಂತಿ ಜಿನರೆ ನಿಮ್ಮಡಿಗಳ ನೆನೆವೆನು
ಸಂತೋಷಯೆನಗಾಗಲೆಂದು ‖ ೧೬

ಕಂಥುರಾಜನ ನೆರೆಗೆಲ್ದ ತಾಳದೆ
ಭ್ರಾಂತನುಳಿದು ಭವನಾಶ
ಕುಂತು ಜಿನರೆ ನಿಮ್ಮಡಿಗಳ ನೆನೆವೆನು
ಅಂತಾದಯನಾಗಲೆಂದು ‖ ೧೭

ಮರೆಯದೆ ನೆನೆವೆನು ಅರಜಿನ ಪತಿಯನು
ಚರಣ ಎನಗೆ ಶರಣೆಂದು
ಧರೆಯ ಜನರನೆಲ್ಲ ಸಲಹುವ ದೇವನೆ
ಕರುಣವಿಲ್ಲವೆ ಎನ್ನ ಮೇಲೆ ‖ ೧೮

ಎಲ್ಲ ದೇವರ ದೇವನಲ್ಲ ನಿಮ್ಮೊಳು
ಚಲ್ಲಾಟವಲ್ಲ ನಿಮ್ಮೊಡನೆ
ಬಲ್ಲವ ನಾನು ಲೋಭವಕೊಳಗಾದೆನು
ಮಲ್ಲಿಜಿನರೆ ಸಲವೆನ್ನ ‖ ೧೯

ಕನಸು ಮನಸಿನೊಳು ಕಾಡುವ ಕರ್ಮವ
ಇನ್ನು ಸುಳಿಯದೆ ಕೆಡಿಸುವ
ಅನುಪಮ ಮತಿಗಣ ವೀತರಾಗಯೆಂಬರು
ಮುನಿ ಸುವ್ರತರೆ ಸಲವೆನ್ನ ‖ ೨೦

ತಮತಮಗೆಲ್ಲರೂ ತಮ್ಮೊಳು ನೋಡದೆ
ಕ್ರಮದಿಂದ ತೋರಿದೆ ನೀ
ಪ್ರೇಮದಿ ನೆನೆವೆನು ಕ್ಷೇಮದಿ ಸಲಹೆಂದು
ಕೋಮಲಾಂಗನೆ ನೇಮಿಸು ನಮಿಜಿನೇಶಾ ‖ ೨೧

ಘೋರುಪಸರ್ಗವನರಿದೆ ತಾಳದೆ
ಧರೆನಹುದು ಧರೆಯೊಳಗೆ

ಸೇರಿದವರೆಗೆವ ಪಾರ್ಶ್ವಜಿನೇಶ
ತೋರಿಸು ಮೋಕ್ಷ ಸಂಪದವ ॥ ೧೧

ಸದ್ಭದಿ ನೆನೆವೆನು ವರ್ಧಮಾನ ಸ್ವಾಮಿಯ
ಸಿದ್ಧಪದವಿ ಕೊಡಲೆಂದು
ಸಿದ್ಧರಸವ ಸೋಂಕಿದ ಲೋಹದಂತಾತ್ಮ
ಸಿದ್ಧಿಯ ಪಡೆವುದೊಂದರುವೆ ॥ ೧೨

ತಪ್ಪದೆ ನೆನೆವೆನು ಇಪ್ಪತ್ತು ನಾಲ್ವರ
ಅಲ್ಪಮತಿಯೊಳು ನಾ ನಿಮ್ಮ
ತಪ್ಪಿದೆನಾದರೆ ತರಳೆ ನಾ ಮಾತಿಗೆ
ಒಪ್ಪುಗೊಳಿರೈ ಸ್ವಾಮಿಗಳರೈ ॥ ೧೪

## ೧.ಉದಯಕಾಲದೊಳೆದ್ದು

**ಉದಯ ರಾಗ**

ಉದಯ ಕಾಲದೊಳೆದ್ದು ಮುದದಿ ಸ್ನಾನವ ಮಾಡಿ
ಮೃದುವಚನದಿಂದ ಶ್ರೀ ಜಿನರ ಪಾದವ ನೆನೆಯೈ
ಸದಮಲ ಯೋಗ್ಯ ಸಂಪದವಿತ್ತು ಕಡೆಯಲ್ಲಿ
ಮುಕ್ತಿಮಾರ್ಗವ ತೋರುವಾ ॥ ಪಲ್ಲವಿ

ಹೆಸರಾದ ಪೆನಗೊಂಡೆ ಪಚ್ಚಪಾರೀಶ್ವೇಶ ಹರದ
ಬಸದಿಯ ಪಾರೀಶ್ವಮತಿಯ ಕೂಡೆ
ಹಸನಾದ ಗುಡಿಬಂಡೆ ಚಂದ್ರನಾಥಸ್ವಾಮಿ
ಕುಸುಮಶರಣ ಗೆಲಿದ ಪಾರೀಶ್ವಜಿನರ ನೆನೆಯೈ ॥ ೧

ಪೊಡವಿಗಗ್ಗಳವದ **x x x x x x x x**
ಮಿಡಿಗರಸಿ ಚಂದ್ರಜಿನ ಕಂಡ ಅನಂತ ಜಿನಪ
ಪೊಡಮಡುವೆ ಎಡಬಿಡದೆ ನಿಲ್ಲು ಪಾರೀಶ್ವ ಎ
ನ್ನೊಡೆಯ ಸಲಹು ಬೇಗ ರತ್ನಗಿರಿ ಜಿನರ ನೆನೆಯೈ ॥ ೨

ನಾಮಸಾಸಿರದೊಡೆಯ ನಾಮಗೊಂಡಲ ಅನಂತಜಿನಪ
ಪ್ರೇಮದಿಂ ಸಲಹೆನ್ನ ಗಗನಗಿರಿ ಮಲ್ಲಿನಾಥ
ಕಾಮಿತಾರ್ಥವ ಕೊಡುವ ರಾಂಪುರದ ಆದೀಶ್ವರ
ಸ್ವಾಮಿ ರಕ್ಷಿಸು ಬೇಗ ಹಿರಿಯೂರ ಜಿನರ ನೆನೆಯೈ ॥ ೩

ನಿಚ್ಚ ವೈಭವದೊಳೆಸೆವ ವೇಣುಪುರಿ ಚಂದ್ರಜಿನ
ಆಶ್ಚರ್ಯವಾದಂಥ ಅಗಳಿವಾಸೂಕುಚ್ಚಂಗಿ ಪಾರೀಶ್ವ
ಹೆಚ್ಚಿನ ಜಿನರಾಜ ಪಂಚಬಾನನ ಗೆಲಿದ ಅಂದ
x x x x x x x x x ಪುರಿ ಜಿನರ ನೆನೆಯೈ ॥ ೪

ಇಳಿಯೊಳಧಿಕವಾದ ಬೇಳೂರು ವಿಮಲಜಿನ ಕೂ
ಡಲೂರು ಅನಂತಜಿನಪ ಪೊಡಮಡುವೆ ಎಡ
ಬಿಡದೆ ನಿಡಗಲ್ಲು ಪಾರೀಶ್ವ ಎನ್ನೊಡೆಯ ಸಲಹು ಬೇಗ
x x x x x x x x x ರತ್ನಗಿರಿ ಜಿನರ ನೆನೆಯೈ ॥ ೫

ಜಗದೊಳತಿಶಯವಾದ ಶಿರ್ಯದ ಬಸದಿಯೊಳು
ನಗೆಮುಖದ ಶಾಂತಿಜಿನರಾಜನನು ಬಗೆ
ಬಗೆಯ ಮಂಟಪದ ವಾದಿಗಳು ನೀ ತಂದು
ಸುಗುಣ ಮನದಲಿ ತನದರ್ಚಿಸೋ ॥ ೬

ಇಷ್ಟದೈವರನೆಲ್ಲ ಮುಟ್ಟಿ ಪೂಜಿಸು ನೀನು
ಬ್ರಷ್ಟ ಸಂಸಾರವನು ಸುಟ್ಟುಬಿಟ್ಟು ಅಷ್ಟದಶ
ದೋಷ ಚಿಂತನೆನಿಸುತ್ತಿಹ ನಿಟ್ಟೂರ ಶಾಂತಿ ಜಿ
ನ ಶ್ರೀ ಚರಣವನು ಗಟ್ಯಾಗಿ ನೀ ನಂಬಿ ಮುಕ್ತನಾಗು ॥ ೭

ಅತ್ಯಧಿಕ ಭಕ್ತಿಯಲಿ ನಿತ್ಯವಂದನೆ ಮಾಡು
ನಿತ್ಯನಿಧಿ ಲಕ್ಷ್ಮೀಶಯನೈಶ್ವರ್ಯಂಗೆ
ಅರ್ಥಿಯಿಂದಲಿ ನೀನು ಓದಿಸುವ ಮನದಣಿಯ
ಮುಕ್ತಿಮಾರ್ಗವ ತೋರಿಸೈ ॥ ೮

ಚಪ್ಪನ್ನದೇಶದೊಳಗಿಪ್ಪ ಜಿನಗೇಹದೊಳು
ಇಪ್ಪತ್ತನಾಲ್ಕು ಜಿನಬಿಂಬಗಳಿಗೆ
ಪುಷ್ಪಗಂಧಕ್ಷತೆಯ ಫಲಗಳಿಂದರ್ಚಿಸು ಚಂ
ಪಪುರಿ ಚನ್ನಗಿರಿ ಜಿನೇಶ ಮುಕ್ತಿಮಾರ್ಗವ ತೋರಿಸೈ ॥ ೯

## ೩.ಪರಮಪರಂಜ್ಯೋತಿಕೋಟಿ

ಪರಮ ಪರಂಜ್ಯೋತಿ ಕೋಟಿ ಚಂದ್ರಾದಿತ್ಯ
ಕಿರಣ ಸುಜ್ಞಾನ ಪ್ರಕಾಶ

ಸುರರ ಮಕುಟಮಣಿರಂಜಿತ ಚರಣಾಬ್ಜ
ಶರಣಾಗು ಪ್ರಥಮ ಜಿನೇಶ ॥ ೧

ನಿಲಲಿ ಶಕಮಾತು ಹದಿನಾರು ಸ್ವಪ್ನದ
ಫಲವ ನಿರೂಪಿಸೆಂದೊಡನೆ
ತಲೆಮಣಿಧಾರೆಯ ನುಡಿಯುತಿರ್ದನು ಸ್ವಾಮಿ
ತಿಳಿವುದನೇನು ಬಣ್ಣಿಪೆನೋ ॥

ಒಂದೊಂದು ಸಿಂಹದೊಳ್ಕೂಡೆ ಹಲವು ಸಿಂಹ
ಸಂದಣಿಸಿಯೇ ಪೋಗುತಿರ್ಪ
ಚಂದದಿಂದಿಪ್ಪತ್ತಮೂರು ಸಿಂಹವ ಕಂಡೆ
ಮುಂದಾ ಫಲಗಳಿಂದ ॥ ೩

ನಾವು ಮುಂತಾಗಿ ತೀರ್ಥಂಕರಿಪ್ಪತ್ತ
ಮೂವರ ಕಾಲಕ್ಕೆ ಕುಮುತಾ
ಜೀವದೊಳ್ಪುಟ್ಟಿಯು ಹೆಚ್ಚಾದ ಜಿನಧರ್ಮ
ದಾವಾಲ್ಯಬಹುದೆಂದನಭವಾ ॥ ೪

ಕಂಡೆನೊಂದು ಸಿಂಹದೊಳ್ಬಹು ಮೃಗವ್ಯೈದಿವೆ
ಸಿಡಿದು ಪೋಪುದ ಕಂಡೆನೆನಲು
ಕಡೆಯ ತೀರ್ಥೇಶನ ಕಾಲಕ್ಕೆ ಕುಮುತರ
ಪಡೆಯೊಳುದೆಂದೆನಾ ಸ್ವಾಮಿ ॥ ೫

ಆನೆಯನೇರಿ ಕೋಡಗವಿಪ್ಪುದೊಂದು ಕ
ಟ್ಟಾನುಗತಿಯ ಕಂಡೆನೆನಲು
ಮಾನಿತ ಕ್ಷತ್ರಿಯ ಕುಲಗೆಟ್ಟು ಕಡೆಯೊಳು
ಹೀನರೇ ನೃಪರಹರೆಂದಾ ॥ ೬

ಜಲ ನಟ್ಟನಡುವೆ ಭಾರತ ಕಡೆಯೊಳು ನಿಂದ
ಬಲು ಕಟಕವ ಕಂಡೆನೆನಲು
ಕಲಿಕಾಲ ಜಿನಧರ್ಮ ನಡುನಾಡೊಳ್ನಿರಂತರದೊಳು
ನಿಲ್ಲುದೆಂದನಾ ಸ್ವಾಮಿ ॥ ೭

ಹೋತಗಳೆಳೆ ಮೇವ ಬಿಟ್ಟೋತೆರನ ಬಾ
ಯಾಂತು ಮೇವುದೊಡನೆನಲು
ಜಾತಿವರ್ತನೆಯ ಸ್ತ್ರೀಪುರುಷರಲ್ಲದೇ ವಿಪ
ರೀತ ಮತಿಗೆ ಸಲ್ಲುದೆಂದ ॥ ೮

ಎಲೆಯ ದುರಿತ ತರುಗಳ ಕಂಡೆನೆಂದನು
ಕಲಿಕಾಲದೊಳು ಸಿರಿಬರಲು
ಫಲಿಸುವರಲ್ಲ ನಾನ್ಗೆಟ್ಟು ಮೈಸಿರಿಗೆಟ್ಟು
ಸುಳಿವರು ಮಾನವರೆಂದ ‖ ೯

ವಸುಧೆಯೊಳೆತ್ತ ನೋಡಿದತ್ತೆರಗಿಪ್ಪ
ರಸವೀ ಪರಿದಿರ್ದುನೆನಲು
ರಸಹೀನ ವಸ್ತುವೇ ಉಪಭೋಗ ಪರಿಭೋಗ
ಪರಗಣ್ಣಿಂಗೆ ಸಲ್ಲುದೆಂದ ‖ ೧೦

ಮರುಳು ಶೃಂಗರಿಸಿಬಪ್ಪುದು ಕಂಡೆನೆನನೆಂ
ದರ ನಾಮ ಬಿಟ್ಟು ನರ
ಹುರುಳುಗೆಟ್ಟತ್ತರ ತೆತ್ತರ ನಾಮವ
ಧರಿಸುವರೆಂದನಾ ಸ್ವಾಮಿ ‖ ೧೧

ಪೊಂಬರಿವಾಣದೊಳಗೆ ಶ್ವಾನ ತಾಯ್ವಾಲ
ನುಂಬುದ ಕಂಡೆನೆನಲು
ಡಂಭತಾ ಬಿನುಗಾರು ಕಡೆಯ ಕಾಲಕೆ ಪೂಜೆ
ಗೊಂಬರೊಳಿತನುಂಬರೆಂದ ‖ ೧೨

ಕಾಗೆ ಗೂಗೆಗಳೆದ್ದು ರಾಜ ಹಂಸೆಯ ಪಿರಿ
ದಾಗಿ ಬಾಧಿಸುವ ಕಂಡೆನೆನಲು
ರಾಗ ರೋಷಗಳನು ಹಂಸಯೋಗಿಯ ಹಂಸ
ಯೋಗಿಯ ನಿಂದಿಪುದೆಂದ ‖ ೧೩

ವಿಧಿವಶದಿಂದಾನೆ ಹೊರುವರಂಜಿಕೆಯ ಸ
ನ್ನಿಧಿಯಶ್ವ ಹೊತ್ತು ಹೊಯೆನಲು
ಅಧಿಕಾರ ಧರಿಸುವ ಜೈನಧರ್ಮವ ಕಡೆ
ಗಧಮರ ಧರಿಸುವರೆಂದ ‖ ೧೪

ಚಿಕ್ಕಬಸವನೊಂದು ಹಿಂಡಾನ ಕಲಿಘಟ
ಕಿಕ್ಕುತ್ತೈದಾ ಕಂಡೆನೆನಲು
ಬೆಕ್ಕೊಂದು ದೀಕ್ಷೆ ಪೊಡೆಯರ ಬಹಳ ಪ್ರಾಯ
ಮಿಕ್ಕು ದೀಕ್ಷೆತರಲ್ಪದೆಂದ ‖ ೧೫

ಎರಡು ಗೂಳಿಗಳೊಂದು ಕೂಡಿ ಭೂತಳದಲ್ಲಿ
ಚರಿಸುತಿರ್ದುದ ಕಂಡೆನೆನಲು

ಗಿರಿವನ ಗುಹೆಗಳೊಬ್ಬರೆ ಗೋಷ್ಠಿ
ವೆರಸಿ ತಾಪ ಪರಿಹಾರೆಂದ ‖ ೧೬

ಪಸರಿಹ ಪ್ರಭೆಯೊಳ ರತ್ನರಾಸಿಗೆದೊಳು
ಕೂಸಾಗಿ ಕೊಂಡುದ ಕಂಡೆನೆನಲು
ರಸ ಬುದ್ಧಿಗಳು ಮೊದಲಾದ ಬುದ್ಧಿಗಳು ತಾ
ಪಸರಿಗೊಂದುದಯಿಸದೆಂದ ‖ ೧೭

ಧವಲ ಪ್ರಕಾಶದ ಚಂದ್ರಂಗೆ ಪರಿವೇಶ
ದವಿದುದ ಕಂಡೆ ನಾನೆನಲು
ಅವಧಿಜ್ಞಾನ ಚಿತ್ರಜ್ಞಾನ ಒಂದು ಸಂ
ಭವಿಸದು ಮುನಿಗಳಿಗೆಂದ ‖ ೧೮

ದೇವರದೇವ ಚಿತ್ತೈಸು ಸೂರ್ಯಗೆ ಮುಗಿ
ಲಾವರಿಸಿದ ಕಂಡೆನೆನಲು
ಕೇವಲ ಬೋಧವಾಗಲು ಕಲಿಯುಗದೊಳು
ಭಾವಿಸೆಂದನು ಬಲಾಂತಕನು‖ ೧೯
ಆ ಉಗ್ರ ಕಲಿಯುಗವೆಂಬುದಿಪ್ಪೊಂದು
ಸಾವಿರ ವರ್ಷ ಮುಂದೆತ್ತ
ಆವ ಧರ್ಮದಸೋಂಕ ಸುಳಿಯದಿಪ್ಪತ್ತೊಂದು
ಸಾವಿರ ವರುಷ ಸಾಗುವುದು ‖ ೨೦

ಪ್ರಳಯವಹುದು ಮತ್ತೆ ಪ್ರಳಯವಾಗದು ಮುನ್ನ
ಮೇಳಹುದು ಧರ್ಮಕರ್ಮಗಳು
ಬೆಳೆದು ಮರ್ತ್ಯಂತದೊಳು ಕೆಡುತ ಕೊಂಡಾಡುತ
ಸುಳಿವುದೀ ಪರಿಯಂತನುಭವ ‖ ೨೧

**<u>೪. ಏಳುಮನೋಹರಜಾವ</u>**

**ಉದಯ ರಾಗ**

ಏಳು ಮನೋಹರ ಜಾವದಲ್ಲಿ ಕೇವಲ ಜ್ಞಾನ
ವೇಳೆಯಾಯಿತು ವ್ಯರ್ಥದಲಿ ದಿನ
ಗಳೆಯಬೇಡ ಶಜಕುಜಲ ಧ್ಯಾನ ಕಪಟ
ಗಳೆಲ್ಲವ ಬಿಟ್ಟು ಜಿನರ ಧ್ಯಾನಿಸು ಸ್ತುತಿಸು ಭವ್ಯಾ ‖ ಪಲ್ಲವಿ

ಕೈಲಾಸಗಿರಿಯಲ್ಲಿ ಆದಿ ಜಿನದೇವಂಗೆ ಚಂಪಾಪುರದ
ವಾಸುಪೂಜ್ಯನಾಥನು ಮತ್ತು ಪಾವಾಪುರದ ವರ್ಧಮಾನ
ಉಜಂತಗಿರಿ ನೇಮಿಜಿನರ ವಂದಿಸುತ ಸಮ್ಮೇದ ಶಿಖರದಲಿ
ಇಪ್ಪತ್ತು ಚೂಳಿಕೆಯ ಇಪ್ಪತ್ತು ತೀರ್ಥಂಕರು ಮೊದಲಾಗಿ
ಅಗಣಿತರು ಲೆಕ್ಕವಿಲ್ಲದ ಅಸಂಖ್ಯಾತ ಮುಕ್ತಿಗೆ ಹೊಂದವರ
ಮಹಿಮೆಯನು ಧ್ಯಾನಿಸು ಭವ್ಯಾ ‖ ೧

ರಾಮಪುತ್ರಾದಿ ಮೊದಲಾದ ಪಾವಗಿರಿ ಸ್ಥಾನದಲಿ
ಒಂದು ಕೋಟಿ ಜನರು ಉಜಂತಗಿರಿಯಲ್ಲಿ ಶಂಭುಕುಮಾರಾದಿ
ಕೋಟಿಯು ಎಪ್ಪತ್ತೇರಡು ವರದತ್ತ ಸಾಗರದತ್ತಾಗಿ ಮುನಿಗಳು
ತಾರಾಗಿರಿ ಶಿಖರದಲ್ಲಿ ಮೂರುವರೆ ಕೋಟಿ ಬಲಭದ್ರ ಮೊದಲಾಗಿ
ಯಾದವಂಶವು ಎಂಟುಕೋಟಿ ಗಜಪಂಥದಲ್ಲಿ ಭವ್ಯಾ ‖ ೨

ಪಾಂಡವರು ಮೂವರು ಮೊದಲಾಗಿ ಶತ್ರುಂಜಯ ಗಿರಿಯಲ್ಲಿ
ಎಂಟುಕೋಟಿ ಸಿದ್ಧರು ರಾಮ ಸುಗ್ರೀವ ಹನುಮಂತ
ಮಹಾನಿಳಾದಿ ತೊಂಬತೊಂಬತ್ತು ಕೋಟಿಯು ತುಂಗ
ಗಿರಿಯಲ್ಲಿ ಸಂದರು ನಾಗಕುಮಾರಾದಿ ವ್ಯಾಲ ಮಹಾ
ಮೇಧಾಬೇಧ್ಯಾಧಿಗಳು ಕೈಲಾಸಗಿರಿಯಲ್ಲಿ ಎಪ್ಪತ್ತು
ಸಾವಿರಕೆ ಮಲ್ಲಿಗಳಿಗೆ ವಂದಿಸು ಭವ್ಯಾ ‖ ೩

ಅಂಗವಂಗಾದಿ ಒಂದೂವರೆಕೋಟಿ ಉ
ತ್ತುಂಗ ಶ್ರವಣಗಿರಿಯಲ್ಲಿ ನಿಂತು ತಪ್ಪದೆ ನಿಂದು
ಕರ್ಮದೂರಾಗಿ ದಹಮುಖರಾಯ ಮೊದಲಾಗಿ
ಒಂದೂವರೆ ಕೋಟಿ ತಾವುಭಯ ತಟದಿ ರೇವತ
ತೀರದಲ್ಲಿ ಶಂಭುನಾಥಗೆ ಕೇವಲ ಜ್ಞಾನ ಮೂರುವರೆಕೋಟಿ
ಸುಖಮಯರಾಗಿ ರೇವತ ಪಾದಾಕ್ಷಣ ಪಚ್ಚ ಮಹಾಭೋಗ
ಕೋಟಿ ಸಿದ್ಧರು ಮುಕ್ತಿಗೆ ಸಂದರು ಭವ್ಯಾ ‖ ೪

ರೇವ ತೀರದ ಪಶ್ಚಿಮ ದಿಸೆಯಲ್ಲಿ ಕೋಟಿಸಿದ್ಧರು ಅಂಗ
ವಂಗಾದಿ ನಗರದ ದಕ್ಷಿಣ ದಿಸೆಯಲ್ಲಿ ಚೂಳಕಿಯ ವಾಸದಲ್ಲಿ
ಇಂದ್ರಜಿತು ಕುಂಭಕರ್ಣಾದಿಗಳು ಪಾವಗಿರಿ ಸ್ಥಾನದಲಿ
ಚಲಣಾ ನದಿ ತಡೆಯಲ್ಲಿ ಸುವರ್ಣ ಭದ್ರಾದಿ ನಾಲ್ವರು ಸಿದ್ಧರು
ಪಲಹಟ ಗ್ರಾಮದ ಪಶ್ಚಿಮ ದೆಸೆಯಲ್ಲಿ ದ್ರೋಣಾಗಿರಿ
ಗುರುದತ್ತ ಮೊದಲಾದವರು ಭವ್ಯಾ ‖ ೫

ಅಚಲಾಪುರದ ದೆಸೆಯ ಈಶಾನ್ಯ ಮೆಡ್ರುಗಿರಿ
ಮೂರುವರೆಕೋಟಿ ವರಮುಕ್ತನಾಗಿ ವಂಶಸ್ಥಲ ನಗರ

ಪಶ್ಚಿಮ ದೆಸೆಯಲ್ಲಿ ಕುಂತುಗಿರಿ ಕುಲದೇಶಭೂಷಣನು
ಜೆಸುರಾಯ ಮೊದಲಾಗಿ ಕಾಳಿಂಗ ದಶಕೋಟಿ ಶಿಲಾಕೋಟಿ
ಮುನಿಕರ್ಮರಹಿತನಾಗಿ ಗುರುದತ್ತ ವರದತ್ತ
ಮುನಿಪಂಚಸಿದ್ಧಗಿರಿ ಸ್ಥಾನದಲಿ ತಾವು ಮುಕ್ತನಾಗಿ ॥ ೭

ವಿಂದ್ಯಾಚಲದಲಿ ಜಂಬುಸ್ವಾಮಿ ಮತ್ತೆ ಮೇಘನಾಥನು
ಮೇಘವರ ಮುಕ್ತನಾದವರ ಮುಖದಲ್ಲಿರುವ ಅಕ್ರತಿಮ
ಜಿನಾಲಯಕ್ಕೆ ವಂದಿಸುವೆನು ಭಕ್ತಿಯಲ್ಲಿ ಭಾವಪೂಜೆಯ
ಮಾಡಿ ಸುಖಿಯಾಗಿ ಯುಕ್ತಿಯಲ್ಲಿ ಧ್ಯಾನಿಸಿ ನಿಮ್ಮಂತರಂಗದಲ್ಲಿ
ಜ್ಞಾನಸಾಗರ ಕರುಣಿಸು ಭವ್ಯಾ ॥ ೮

## ೫. ಕಲಿಯುಗದೊಳಗೊಂದು

ಕಲಿಯುಗದೊಳಗೊಂದು ಲಲಿತದೊಳಿರುತಿಹ
ಸಾಧು ಸಜ್ಜನ ಪ್ರಿಯನೂ
ಲಲಿತದಿ ಅಷ್ಟಮ ಚತುರ್ದಶಿ ನಡಸುತ ಸು
ಲಲಿತದೊಳಿಹರು ॥ ಪಲ್ಲವಿ

ಜಿನಸಮಯಯೆಂಬುದಿ ಚಾರು ಚಂದ್ರಮರು
ಘನಶೀಲದೊಳಿಹರು
ಘನತರದೊಳಗಕ್ಷತದಿಗೆಯ ತಿಥಿಯನು
ಮನವೊಲಿದೆಸಗುವರು ॥ ೧

ಹರುಷದಿ ಬೈಸಜ್ಜ್ಯ ಶಾಸ್ತ್ರ ಅಭಯ ದಾನವನು
ಉರು ಮುದದಲಿ ಮಾಳ್ಪರು
ಕರುಣದಿ ಮುನಿಗಳಗಹರಥವನು
ಮರುಕದೊಳಗೆ ಮಾಳ್ಪರು ॥ ೨

ಘನತರವಾಗಿಹ ನೋಂಪಿ ವ್ರತಗಳ
ಅನುನಯನದಲಿ ಮಾಳ್ಪರು
ಜನಕ ತುಂಕಪ್ಪನು ಜನನಿ ಪದ್ಮವ್ವನು
ತನುಜ ಶಾಂತಪ್ಪನತಿ ಚೆಲುವನು ॥ ೩

ಅನಂತನಾಥನ ನೋಂಪಿಯೊಳಗೆ ಬಹು
ಜನರನು ಮನ್ನಿಹರು

ಜನನುತ ಪಂಚಮಿಯ ತಿಥಿಯೊಳ್ಬಹು
ಜನರಿಗೌತಣ ಮಾಳ್ಪರು ॥ ೪

ಶಾಂತಿನಾಥನು ಕರುಣದಿ ಸತಿ
ಸುತ ಮಿತ್ರರು ಸಹಿತರ್ಪರು
ಅತಿಶಯದ-ಖಾನಾಪುರದೊಳ
ಗತಿಶಯದ ಸುಖವಿರ್ಪರು ॥ ೫

**<u>೬. ರಕ್ಷಿಸೊಎನ್ನನುತವನಿಧಿ</u>**

**ರಾಗಃ ಶಾನರಾಗ**

ರಕ್ಷಿಸೊ ಎನ್ನನು ತವನಿಧಿರಾಯನೆ
ದುಷ್ಟವ್ಯಸನದಿಂದ ಬ್ರಷ್ಟಾಗಿ ತೊಳಲಿದೆ
ಕಷ್ಟವ ಹರಿಸೆನ್ನ ಸಲಹೆನ್ನ ತಂದೆ ॥ ಪಲ್ಲವಿ

ಕಮಲಲೋಚನನೆ ನೀ ಕರುಣಸಮುದ್ರನೆ
ಕಮಲಪೀಠದೊಳಿಹ ಶ್ರೀ ಜಿನನೇಕ್ಷನೇ
ಕರುಣಿಸು ದಯದಿಂದ ವರಗಳ ಬೇಗ ॥ ೧

ಭಕ್ತರಪಾಲನೆ ನೀ ಭವಹರನೇಕ್ಷನೆ
ಭಕ್ತಿಯಿಂದಲಿ ನಿಮ್ಮ ಪಾದವ ಸ್ಮರಿಸುವೆ
ರಕ್ಷಿಸು ನೀಯೆನ್ನ ಮಾಣು ಪ್ರಿಯನೇ ॥ ೨

ಗಿರಿಯೊಳಗಿರುವೆ ನೀ ನೆನೆದಾಗ ಬರುವೆ
ಧರೆಯೊಳು ಕೀರ್ತಿಯ ಮೆರೆಸುತಲಿರುವೆ
ಕರುಣಿಸು ದಯದಿಂದ ನೀಯೆನ್ನ ಬಿಡದೆ ॥ ೩

ಭೂತಬೇತಾಳದವ ನೀ ಬೆದರಿಪ ದೇವನೆ
ಭೂತಳದೊಳು ಶ್ವೇತ ತರಗ ವಿಭೂಷಣ
ಪ್ರೀತಿಯಿಂ ಮತಿಯಿತ್ತು ಸಲಹೆನ್ನಿದಾತ ॥ ೪

ತನನಿಧಿ ಗಿರಿಯೊಳು ನೀ ತವಕದಿಂದಿರುವನೆ
ತವಕದಿ ನಂಬಿದ ಜನರನು ಸಲಹುವ
ಕರುಣಾಮೂರ್ತಿ ಎನ್ನ ತವಕದಿ ಸಲಹೊ ॥ ೫

## ೭. ಸ್ತುತಿಸಲೆನ್ನಳವೆಸ್ತುತಿ

ರಾಗಃ ನಾಟಿ

ಸ್ತುತಿಸಲೆನ್ನಳವೆ ಸ್ತುತಿಸಲೆನ್ನಳವೆ
ಜಿನಸಮವಸರಣಗಳನ್ನು
ಅತಿಶಯದೊಳಿಪ್ಪತ್ತು ಜಿನರ ಸ್ತುತಿಗಳನು ॥ ಪಲ್ಲವಿ

ಜಂಬೂದ್ವೀಪದೊಳಗಿರುವ ನಾಲ್ಕು ಸಮವಸರಣ
ಕುಂಭಿನಿಯೊಳೆಸೆದಿರುವ ಜಿನರ ನಾಮಗಳ
ಬೆಂಬಿಡದೆ ಭಜಿಸುವೆನು ಭವತಾಪ ಕೆಡಲೆಂದು
ಶಂಬರಾರಿಗಳದ ಜಿನರ ಸಭೆಯನ್ನು ॥ ೧

ಭವತಾಪ ಹರಿಸಿರುವ ಶ್ರೀಮಂದರಾದಿ ಜಿನ
ಭಾವಜನ ಭಂಗಿಸಿದ ಯುಗಮಂದರೇಶಾ
ಭವದೋಷವನು ಗೆಲಿದ ಶ್ರೀ ಬಾಹುಜಿನರಾಜ
ಭವ್ಯ ಜನರಿಗೆ ಪ್ರಿಯ ಸುಭಾಹು ಜಿನದೇವಾ ॥ ೨

ದಾತಕಿ ಖಂಡದೊಳಗಿರುವ ಸಮವಸರಣ
ಪ್ರೀತಿಯಿಂದಷ್ಟರೊಳಗಿರುವ ಜಿನರನ್ನು
ಅತುಳ ಭವಗಳ ಹರಿಸಲೆಂದು ಕೊಂಡುಡುವೆನು
ಅತಿಶಯದ ನಾಮಗಳ ಮನವಚನದಿಂದ ॥ ೩

ಅಷ್ಟಕರ್ಮವ ಗೆಲಿದ ಶ್ರೇಷ್ಠಸಂಜಾತ ಜಿನ
ಅಷ್ಟಮಹಾ ಸುಖಕೊಡೆಯ ಸ್ವಯಂ ಪ್ರಭುದೇವ
ಅಷ್ಟಮಹಾ ಪ್ರತಿಹಾರ್ಯ್ಯ ವೃಷಭಾನಂದ ಜಿನ
ಶ್ರೇಷ್ಠ ಮುಕ್ತಿಗೆ ಒಡೆಯ ವಿಶಾಲಜಿನದೇವ ॥ ೪

ನರಸುರೋರಗ ವಂದ್ಯ ಅನಂತವೀರ್ಯ ಜಿನ
ವರಭವ್ಯ ಜನಪಾಲ ಸೂರ್ಯ ಪ್ರಭುದೇವಾ
ನರಪತಿ ಸುತ ಪಾದ ವಿಜಯಂದರ ಸ್ವಾಮಿ
ಪರಮ ಪಾವನಮೂರ್ತಿ ಚಂದ್ರಾನಂದ ಸಲಹೆನ್ನ ॥ ೫

ಪುಷ್ಕರಾರ್ಧ ದ್ವೀಪದೊಳಗಿರುವ ಜಿನಸಭೆಯ
ಪುಷ್ಕಳದೊಳಿಹ ಎಂಟು ಜಿನರ ಸ್ತುತಿಗಳನು
ಪುಷ್ಕಳಾಗಿಹ ಕರ್ಮ ಕೆಡಲೆಂದು ಪೂಜಿಸುವೆ
ದುಃಷ್ಕಲದೊಳಗೆನ್ನ ಸಲಹೊ ಜಿನತಂದೆ ॥ ೬

ಸೂರ್ಯಕೋಟಿ ಪ್ರಕಾಶ ಚಂದ್ರಬಾಹು ಜಿನೇಂದ್ರ
ಧೈರ್ಯಪತಿ ತ್ರಿಭುಜಂಗದೇವ ಗುರುರಾಯ
ಸೂರ್ಯದಿಂ ಕರ್ಮವನು ಗೆಲಿದ ಈಶ್ವರಸ್ವಾಮಿ
ಕಾರ್ಯಕರ್ತಕನಾದ ನೇಮಿ ಪ್ರಭುದೇವಾ ॥ ೭

ಮಾರವರ್ಧನನಾದ ವೀರ್ಯ್ಯಸೇನಸ್ವಾಮಿ
ಪರಮಗುಣಗಣಾಧೀರ ಮಹಾಭದ್ರದೇವ
ಈರಾರು ತಪಕೊಡೆಯ ದೇವ ಭದ್ರಸ್ವಾಮಿ
ಉರುಮುಕ್ತಿಪತಿ ಅಜಿತವೀರ್ಯ ಜಿನದೇವಾ ॥ ೮

ಕ್ಷಿತಿಯೊಳತಿಶಯವಾದ ಎರಡೂವರೆ ದ್ವೀಪದೊಳು
ಅತಿಶಯದಿ ನೆಲೆಸಿರುವ ಇಪ್ಪತ್ತು ಜಿನರ
ನುತಿಪ ಶ್ರೀಗುರು ಪಂಡಿತಾರ್ಯರನು ಭವ್ಯರನು
ಅತಿಶಯದಿ ಸಲಹುತಿಹ ಜಿನರೆನ್ನ ರಕ್ಷಿಪುದು ॥ ೯

ಲ. ಶ್ರೀಮಂದಾರಸ್ವಾಮಿಆದಿ

ಶ್ರೀಮಂದಾರಸ್ವಾಮಿ ಆದಿ ಅಜಿತವೀರ್ಯ್ಯಸ್ವಾಮಿ
ಸಮವರಸರಣವು ಇಪ್ಪತ್ತು
ಸೋಮಾರ್ಕಸಂತ ಪ್ರಭೆಯೊಳಾತ್ಮ ಪಾದವ
ಪ್ರೇಮದಿ ನಮಿಸಿ ಪೇಳುವೆನು ॥ ೧

ಜಂಬೂದ್ವೀಪದ ನಾಲ್ಕು ಸಮವಸರಣದೊಳು
ಸಂಭ್ರಮದಿಂದೊಳ ಹೊಕ್ಕು
ಉಭಯ ಕರ್ಮಗಳಲ್ಲಿ ಕೆಡವು ಸತ್ತದೆಂದು
ಶುಭ ಮನದಿಂ ಪೂಜಿಸುವೆನು ॥ ೨

ಶ್ರೀಮದಮರಪತಿ ವೃಂದ ವಂದಿತವಾದ
ಸೋಮಸೂರ್ಯಕೋಟಿ ತೇಜ
ಪ್ರೇಮದಿ ನೆನೆವೆನು ಅನುದಿನ ನಿಮ್ಮಯ
ಶ್ರೀಮಂದಾರಸ್ವಾಮಿ ಸಲಹು ॥ ೩

ಅಗಣಿತ ಮಹಿಮನೆ ಜಗಕೆ ಪ್ರಸಿದ್ಧನೆ
ಜಗಜಗಿಸುವ ಪಾದಪದ್ಮ

ಹಗಲಿರುಳೆನ್ನದೆ ಭಜಿಸುವೆ ಮನದೊಳು
ಯುಗ ಮಂದಾರಸ್ವಾಮಿ ಸಲಹು ॥ ೪

ಬಹುಕಾಲ ತಿರುಗುತ ಭವ ಅಗ್ನಿಯಿಂ ಬೆಂದೆ
ಮೋಹದೆ ನಿಮ್ಮನರಿಯದೆ
ಮಹಾಪಾದ ನಿಮ್ಮಯ ನಂಬಿದೆ ನಾನೀಗ
ಬಾಹುಸ್ವಾಮಿ ರಕ್ಷಿಸೆನ್ನ ॥ ೫

ಶುಭ ಅಶುಭ ಎಣಿಸುತ್ತಿದೆ ಮೂಲೋಕ
ಅಭವ ನಿಮ್ಮ ನಾ ಭಜಿಸದೆ
ಬೊಬ್ಬನಂದದಿ ಬಾಧೆ ಬಿಟ್ಟಿದೆ ನೀವೀಗ
ಸುಬಾಹು ಸ್ವಾಮಿ ಸಲಹೆನ್ನ ॥ ೬

ದಾತಕಿ ಖಂಡದೊಳೆಂಟು ಸಮವಸರಣ
ಜ್ಯೋತಿ ರೂಪರ ಕಂಡು ಪೂಜೆ
ಪ್ರೀತಿಯನ್ನಲಿದಾಡೆ ಹೊಗಳುವೆ ಜಿನರನೂ
ನೀತಿ ಸಜ್ಜನರು ಪಾಲಿಪುದು ॥ ೭

ಸಂಜಾತಸ್ವಾಮಿ ಪಾದಕಂಜ್ಯ ಕಾಣದೆ
ಭಂಜಿಸಿದೆನು ಬಹುಕಷ್ಟ
ಅಂಜಲಿಯನು ಮುಗಿದೆರಗುವೆ ಈಗೆನ್ನ
ಅಂಜಿಕೆ ಬಿಡಿಸೆನ್ನ ತಂದೆ ॥ ೮

ಭಾವಜ್ಯ ಭಂಜನೆ ಸ್ವಯಂ ಪ್ರಭುಸ್ವಾಮಿ ನೀಂ
ಪಾವನ ಚರಣವನರಿಯದೆ
ಭವ ಅಂಬುದಿಯೊಳು ಮುಳುಗಿದೆ ನಾನೀಗ
ದೇವ ಆಲಿಸು ಎನ್ನ ಗುರುವೇ ॥ ೯

ಶಶಿರವಿ ಅಗಣಿತ ಪ್ರಭೆಯೊಳಾ ನಿಮ್ಮ ಪಾದ
ಹಸನಾಗಿವಳವನ ಕಾಣದೆ
ಅಸಮ ಸಂಸಾರಾಬ್ದಿ ಸುಳಿಯೊಳು ಸಿಲ್ಕಿದೆ
ವೃಷಭಾನಂದ ಸ್ವಾಮಿ ಸಲಹು ॥ ೧೦

ಆಶಾಪಾಶದೊಳು ವಶವಾಗಿ ನಿಮ್ಮ ಪಾದ
ಮಾಡಿಸಿದ ಮತಿಯಿಂದ ಮರೆದು
ದೋಷದಿ ಒಳಗಾಗಿ ಹೇಸದೆ ತಿರುಗಿದೆ
ವಿಶಾಲಸ್ವಾಮಿ ಎನ್ನ ಸಲಹು ॥ ೧೧

ಅನಂತಕಾಲಷ್ಟಮದಗೂಡಿ ನಿಮ್ಮಯ
ಉನ್ನತ ಚರಣವ ನೆನೆಯದೆ
ಘನಗತಿಶಯಮಂ ಬೆನ್ನತ್ತೆಂಬುದು
ಅನಂತವೀರ್ಯ್ಯಸ್ವಾಮಿ ಬಿಡಿಸೊ॥ ೧೨

ಕಲಿಲ ಹರನೆ ನಿಮ್ಮನರಿದು ನಾ ಸ್ಮರಿಸದೆ
ಬಲೆಯೊಳು ಸಿಲ್ಕಿದೆ ಮನ
ಉಳುವವರಿಲ್ಲೆಂದು ಕಾಲಿಗೆರಗಿದೆ ನಿಂದು
ಪಾಲಿಸು ಸೂರಿಪ್ರಭುಸ್ವಾಮಿ ॥ ೧೩

ಭಜಿಸುವೆ ಭಯಭಕ್ತಿಯಿಂದಲಿ ನಾನೀಗ
ವಿಜಯಂದರ ಸ್ವಾಮಿಯ ಪದವ
ವೃಜಿನ ಹರನೆ ತ್ರಿಜಗವಂದ್ಯ ನೀವೆನ್ನ
ನಿಜದೊಳು ಸದಾ ಕಾಣಬೇಕು ॥ ೧೪

ಇಂದ್ರಚಂದ್ರ ಧರಣೇಂದ್ರವಂದಿತ ಪಾದ
ಚಂದ್ರನಾ ಕಂಡ ಕಡಲಂತೆ
ಸಾಂದ್ರ ಸುಗುಣದಿಂದ ಉಬ್ಬಿ ನಾ ಪೂಜಿಪೆ
ಚಂದ್ರಾನಂದ ಸ್ವಾಮಿ ಸಲಹೊ ॥ ೧೫

ಅಷ್ಟಸಮೂಹ ಶರಣ ಪುಷ್ಕರಾರ್ಧದರೊಳು
ಅಷ್ಟ ಶೋಭೆಯಲಿರುತಿಹರು
ಶ್ರೇಷ್ಠ ಜನರ ಪಾದಕೆರಗಿ ನಾ ಹೊಗಳುವೆ
ಸ್ಪಷ್ಟಾಗಿ ತಿಳಿರಿ ಸಜ್ಜನರೊ ॥ ೧೬

ಚೆಂದಚೆಂದದಿ ಸ್ಮರಿಸುವೆ ನಿಮ್ಮಡಿಗಳ
ಬದ್ಧಭವವೆಲ್ಲ ಕೆಡಲೆಂದು
ಹೊಂದಿ ನಿಃಸಂಗದಿ ನೆನೆವೆನು ಮನದೊಳು
ಚಂದ್ರಬಾಹು ಸ್ವಾಮಿ ಸಲಹೊ ॥ ೧೭

ತ್ರಿಭುವನ ಜೈಸಿದು ಗತಿಯನು ಪಡೆದಂಥ
ಪ್ರಭುವೆ ನಿಮ್ಮರಿಯದೆ ದುಃಖ
ಅಂಬುಧಿಯೊಳು ಬಿದ್ದ್ದ ಉಂಬೋದು ಈ ಕಷ್ಟ
ತ್ರಿಭುಜಂಗಸ್ವಾಮಿ ಭರಿಸು ॥ ೧೮

ಸುಳ್ಳು ಸ್ವಪ್ನವ ಕಂಡು ಮರುಳಾಗಿ ಮರುಗುತ
ಮುಳ್ಳೊಳು ಬಿದ್ದು ಹೊಳ್ಳ್ಯಾಡಿದೆನು

ಅಳತೆಯಿಲ್ಲದ ಸುಖ ಕೊಡಬೇಕೆಂದೆರಗಿದೆ
ಮಲಹರ ಈಶ್ವರ ಸ್ವಾಮಿ॥ ೧೯

ಪ್ರೇಮದಿ ನೆನೆವೆನು ಮರೆಯದೆ ಸಲಹೆನ್ನ
ಕೋಮಲಾಂಗನೆ ಕೋಪರಹಿತ
ಕಾಮಿತಫಲವಿತ್ತು ಕರುಣಿಸೆಂದೆರಗಿದೆ
ನೇಮ ಪ್ರಭುಸ್ವಾಮಿ ಪದಕೆ॥ ೨೦

ವರಜ್ಞಾನನಂತ ಚತುಷ್ಟಯ ಪಡೆದಂಥ
ಪರಮ ಪಾವನ ಪಾದಕ್ಕೆರಗಿ
ವರಮುಕ್ತಿ ಸ್ಥಿರಪಥ ಬೇಕೆಂದು ಪೂಜಿಸಿದೆ
ವೀರಸೇನಸ್ವಾಮಿ ಪದವ॥ ೨೧

ಮಹಾಮಾರಿ ಜೈಸಿ ಮಹಾದೇವನೆಂದೆನಿಸಿದ
ಮಹಾಪಾದಪೂಜೆಯ ಮಾಡದೆ
ಮಹಾದುಃಖ ನನಗಿಂದು ಮಹಾಸುಖಕೊಟ್ಟು ನೀ
ಮಹಾಭದ್ರಸ್ವಾಮಿ ಕರುಣಿಸೊ॥ ೨೨

ದೇವಾಧಿದೇವ ನಿಮ್ಮಯ ಪಾದಪದ್ಮವ
ಭಾವಶುದ್ಧಿಯೊಳನವರತ
ಭಾವಿಸಿ ನೆನೆವೆನು ಅನುದಿನ ನಿಮ್ಮಯ
ದೇವ ಭದ್ರಸ್ವಾಮಿ ಸಲಹೊ॥ ೨೩

ಭಜಿಸುವ ಭಯಭಕ್ತಿಯಿಂದತಿ ನಾನೀಗ
ಅಜಿತವೀರ್ಯ್ಯಸ್ವಾಮಿ ಪದವ
ನಿಜದೊಳು ನೆಲಸಿ ಅರದರೆ ಸದಾಕಾಲ
ನಿಜಲಕ್ಷ್ಮಿ ತಾನೆ ಒಲಿದಳೊ॥ ೨೪

ಇಪ್ಪತ್ತು ಜಿನರನೂ ನೆಪ್ಪಿಟ್ಟು ನೆನೆದರ
ತಪ್ಪದೆ ಅಲ್ಲಿ ಪುಟ್ಟುವರು
ಅಪ್ಪಪ್ಪ ಅಲ್ಲಿಯಾ ಸುಖವೇನು ಹೇಳುವೆ
ಮಲ್ಲಪುರಕೊಡೆಯರಾಗುವರೂ ॥ ೨೫

ವೃಷಭಾದಿ ವೀರಜಿನ ವರಪಾದವನೂ
ನಿಶಿ ದಿನದೊಳು ಭಜಿಸುವೆನು
ಅಸಮದರ್ದ್ದರ ಕರ್ಮದಿಂದಹವಹುದೆಂದು
ಸೂಸಿದೆ ಶಿರವ ವರ ಪದಕೆ ॥ ೨೬

ಪನ್ನೆರಡಂಗ ಪದಿನಾಲ್ಕು ಪೂರ್ವ್ವಗಳ
ಚೆನ್ನೆಪುರದ ನಿಮ್ಮ ಪದವ
ಸನ್ನುತ ಪೂಜೆಯ ಮಾಡುವೆನನುದಿನ
ಉನ್ನತ ಮತಿಯಿತ್ತು ಸಲಹೊ ॥ ೧೭

ನೀತಿ ಕ್ಷಿತಿಯಿಂದ ಮುಕ್ತಿಗೆ ಹೋಹುವ
ಯತಿ ಪುಂಗ ಪದಕಮಲವನು
ಚಿತ್ತದೊಳಿರಿಸಿ ಅಲ್ಲಿ ಉತ್ಸಾಹದಿಂದ
ನತನಾದೆನು ಮರಳಿ ಮರಳಿ ॥ ೧೮

ವರಸ್ತುತಿಯದು ಮತ್ತರಿದ ಅಂತರದೊಳು
ಪರಮ ಭಕ್ತಿಯಲಿ ಮಾಡುವರ್ಗೆ
ಭರದಿಂದ ಪೂರ್ವವೀ ದೇಹ ಸುಖವುಂಡು ಕಡೆಯೊಳು
ಸೇರುವರು ವರಮುಕ್ತಿ ಪುರವಾ ॥ ೧೯

<u>**೯.ವಸುಧೆಗಧಿಕವಾದದೇವ**</u>

ವಸುಧೆಗಧಿಕವಾದ ದೇವಕಾಣಮ್ಮ
ಕುಸುಮಬಾಣನ ಮರ್ಧಿಸಿದ ಕಾಣಮ್ಮ
ವಸುಧೆಯ ಭವ್ಯರ ಭಾಗ್ಯ ಕಾಣಮ್ಮ
ಶಶಿಮುಖಿಯರು ನೋಡುವ ಬನ್ನಿರಮ್ಮ ॥ ೧

ಮೇರುಗಿರಿಗೆ ದಕ್ಷಿಣ ಭಾಗವನ್ನು
ಭರತಕ್ಷೇತ್ರದ ಆರ್ಯ್ಯಖಾಂಡವಮ್ಮ
ಸುರಚಿರ ಕೌಶಲ್ಯ ದೇಶದೊಳಮ್ಮ
ಸಿರಿವೆತ್ತ ಅಯೋಧ್ಯನಗರಿ ಕಾಣಮ್ಮ ॥ ೨

ಸುರುಪತಿ ನಿರ್ಮಿತ ಪಟ್ಟಣವನ್ನು
ದೊರೆ ಸಿಂಹಸೇನ ಮಹಾರಾಜನಮ್ಮ
ಅರಸಿ ಜಯ ಪತಿದೇವಿ ಕಾಣಮ್ಮ
ಸ್ಥಿರಸಾಮ್ರಾಜ್ಯದೊಳಿರುತಿರ್ದರಮ್ಮ ॥ ೩

ಇನ್ನಾರುದಿಂಗಳಿಗುದಯಿಪನಮ್ಮ
ಮುನ್ನ ದೇವೇಂದ್ರ ತಾನರಿದ ಕಾಣಮ್ಮ

ರನ್ನದಾ ಮಳೆಯ ನೀ ಕರೆದು ಬಾರೆಂದು
ಚೆನ್ನ ಕುಬೇರಗೆ ಕಳುಹಿದನಮ್ಮ ॥ ೪

ಅಂದು ಜಿನೇಂದ್ರನುದಯವಾಗಲೆಮ್ಮ
ಇಂದ್ರಗಾಸನ ಕಂತನವಾಗಲಮ್ಮ
ಒಂದಾಗಿ ಸುರರೆಲ್ಲ ಕೂಡಿದರಮ್ಮ
ಬಂದು ರಾಜಾಂಗಣದೊಳು ನಿಂದರಮ್ಮ ॥ ೫

ಮಡದಿಗೆ ಸ್ವಾಮಿಯ ತರ ಹೇಳಲಮ್ಮ
ಸಡಗರದೊಳು ತಂದು ಕೊಡುವಾಗಲಮ್ಮ
ಕೊಡೆಯ ನೀಶಾನೇಂದ್ರ ಪಿಡಿದ ಕಾಣಮ್ಮ
ಒಡನೆ ಸುರರು ಜಯ ಮೊಳಗಿದರಮ್ಮ ॥ ೬

ಸುರಲೋಕದ ವಾದ್ಯ ಮೊಳಗಿದವಮ್ಮ
ಸುರಸತಿಯರು ನರ್ತಿಸುತಿರ್ದ್ದರಮ್ಮ
ಸುರ ಶೈಲದ ಮೇಲಕ್ಕೆ ತಂದರಮ್ಮ
ಸುರುಚಿರ ಸುರಪತಿವೊಂದಿತನಮ್ಮ ॥ ೭

ಹೇಮಶೈಲದ ಪೀಠಾಗ್ರದೊಳಮ್ಮ
ಸ್ವಾಮಿಯ ಬಿಜಯಂಗೈಸಿದರಮ್ಮ
ಹೇಮಘಟದೊಳಮೃತನ ತಂದರಮ್ಮ
ಸ್ವಾಮಿಗೆ ಅಭಿಷೇಕವ ಮಾಡಿದರಮ್ಮ ॥ ೮

ಮಾರವಿಜಯನಶ್ವಗೇರಿಸಿದರಮ್ಮ
ಮೇರು ವಿಂದ್ಯಾಯೋಧ್ಯಕ್ಕೆ ತಂದರಮ್ಮ
ಚಾರು ಸುರತ್ನಾಪೀಠಾಗ್ರದೊಳಮ್ಮ
ಕಾರುಣ್ಯನಿಧಿಯ ಕುಳ್ಳಿರಿಸಿದರಮ್ಮ ॥ ೯

ಶ್ರೀಮದನಂತ ಜಿನೇಶ್ವರನೆಂದು
ಸ್ವಾಮಿಗೆ ಅಮರಪತಿ ಪೆಸರಿಟ್ಟನಮ್ಮ
ಸ್ವಾಮಿಯ ಸೇವೆಯ ಮಾಡಿ ನೀವೆಂದು
ನೇಮಿಸಿ ಸುರ ನಿಲ್ಲಿಸಿ ಹೋದನಮ್ಮ ॥ ೧೦

ಅರ್ಹ ಅನಂತ ಜಿನೇಶ್ವರನೆಂದು
ಸುರಪತಿ ಪಟ್ಟವ ಕಟ್ಟಿದರಮ್ಮ
ಧರಣಿಯನೊಲಿದು ನರ್ಚಿಸುತಿದ್ದರಮ್ಮ
ಅರಸಿ ಜಯಾಕ್ಷಿಯಕುಮಾರ ಕಾಣಮ್ಮ ॥ ೧೧

ದೇವಗೆಯಪ್ಪನ ಉದಯವಾಗಲಮ್ಮ
ಭಾವಕಿಯರು ರತ್ನ ಮಾಲೆಯ ತಂದರಮ್ಮ
ಭೂವಳಯದ ದೊರೆಗಳಮ್ಮ
ದೇವಗೆ ಮದುವೆಯ ಮಾಡಿದರಮ್ಮ ‖ ೧೨

ಮನದೊಳು ಹೇಯವ ಕುದಿಸಿದರಮ್ಮ
ತನುಜಗೆ ಮಜ್ಜನವ ಮಾಡಿದರಮ್ಮ
ಅನುಮಿಷರಾಜರಾಗಳೇ ಬಂದರಮ್ಮ
ಘನಪುಣ್ಯಮೂರ್ತಿಯ ಕೊಂಡೊಯ್ದರಮ್ಮ ‖ ೧೩

ಹದಿನಾಲ್ಕು ನದಿಯ ತೀರ್ಥವ ತಂದರಮ್ಮ
ಪದನವಿಜಯಗೆ ಸ್ವಪನ ಮಾಡಿದರಮ್ಮ
ಸದಮಲ ದೀಕ್ಷೆಯ ಧರಿಸಿದರಮ್ಮ
ಮುದದಿಂದ ಇಂದ್ರನೆರಗಿ ಹೋದನಮ್ಮ ‖ ೧೪

ಸ್ಥಿರವಾಗಿ ಕುಳಿತು ಧ್ಯಾನದ ಮಾಡಲಮ್ಮ
ಪರಮಶುಕ್ಲ ಧ್ಯಾನ ಉದಯಿಸಿತಮ್ಮ
ಧರೆಯಿಂದ ಗಗನಕ್ಕೆ ನೆಗೆದ ಕಾಣಮ್ಮ
ಸುರನರೋರಗಣ **x x x** ಧರಮ್ಮ ‖ ೧೫

ದೇವಗಾಸನ ಕಂಪನ ಉದಯವಾಗಲಮ್ಮ
ದೇವ ಕುಭೇರಗೆ ಬೆಸಸಿದನಮ್ಮ
ಸ್ವಾಮಿಗೆ ಸಮವಸರಣವಾಗಲೆಮ್ಮ
ದೇವರ್ಕಳೆಲ್ಲಾ ನೆರೆದು ಬಂದರಮ್ಮ ‖ ೧೬

ಮುತ್ತಿನ ಸತ್ತಿಗೆ ಮೂರು ಕಾಣಮ್ಮ
ಮುತ್ತುರತ್ನದ ಮೂರು ಪೀಠ ಕಾಣಮ್ಮ
ಹೊತ್ತಿಯಲಿ ಅಶೋಕ ವೃಕ್ಷಕಾಣಮ್ಮ
ಚಿತ್ತಜ ವಿಜಯನೋಲಗವಾದನಮ್ಮ ‖ ೧೭

ಹೇಮ ವರ್ಣದ ದಿವ್ಯದೇಹ ಕಾಣಮ್ಮ
ಸ್ವಾಮಿಗೆ ಇನ್ನೂರು ವಂಶಕಾಣಮ್ಮ
ಭೂಮಂಡಲ ಪುಷ್ಪವೃಷ್ಟಿ ಕಾಣಮ್ಮ
ಚಾಮರದಿವ್ಯ ನಿನಾದ ಕಾಣಮ್ಮ ‖ ೧೮

ದೇವಗೆ ಇಕ್ಷ್ವಾಕು ವಂಶ ಕಾಣಮ್ಮ
ಮೂವತ್ತು ಲಕ್ಷದಾಯುಷ್ಯ ಕಾಣಮ್ಮ

ಐವತ್ತು ಧನುವಿನುತ್ಸೈದೆ ಕಾಣಮ್ಮ
ಮೂವತ್ನಾಲ್ಕು ಅತಿಶಯವುಳ್ಳವರಮ್ಮ ॥ ೧೯

ಧರ್ಮೋಪದೇಶ ಮಾಡಿದರಮ್ಮ
ಸಮ್ಮೇದಗಿರಿಗಾಗಿ ತೆರಳಿದರಮ್ಮ
ನಿರ್ಮಲ ಧ್ಯಾನದೊಳಿರುತಿರ್ದರಮ್ಮ
ಘಮ್ಮನೆ ಮುಕ್ತಿವಲ್ಲಭರಾದರಮ್ಮ ॥ ೨೦

ಶರನಿಧಿಯೊತ್ತಿನನಗಿರಿ ಕಾಣಮ್ಮ
ಸಿರಿವೆತ್ತಮಂಡಿತ ಪುರದೊಳಗಮ್ಮ
ಕರವೈರಿ ಪೀಠದೊಳ್ನೆಲಸಿದನಮ್ಮ
ಅರ್ಹ ಅನಂತ ಜಿನೇಶನಮ್ಮ ॥ ೨೧

ಬಲದೊಳು ಪಾತಾಳ ಯಕ್ಷ ಕಾಣಮ್ಮ
ಎಡದೊಳನಂತಮತಿ ಯಕ್ಷೆ ಕಾಣಮ್ಮ
ಕೆಲದೊಳು ಬಲ್ಲು ಕಾಲಾಂಚನವಮ್ಮ
ಒಲಿದವರಿಗೆ ವರವೀವನಮ್ಮ ॥ ೨೨

ಗುರುಚಾರುಕೀರ್ತಿ ಪಂಡಿತರಾಯಗಮ್ಮ
ವರಮುಕ್ತಿ ಪದವಿಯ ಕೊಡುವ ಕಾಣಮ್ಮ
ದೊರೆ ಚಿಕ್ಕರಾಯ ಭೂಪಾಲನಗಮ್ಮ
ಹಿರಿದು ಸಂಪದವಿತ್ತು ಸಲಹುವನಮ್ಮ ॥ ೨೩

ಪಾರ್ಥಿವವೆಂಬ ಸಂವತ್ಸರವಮ್ಮ
ಕಾರ್ತೀಕ ಮಾಸದಷ್ಟಾನೀಕವಮ್ಮ
ಕರ್ತೃ ಅನಂತ ಜಿನೇಶಗಮ್ಮ
ಮುಕ್ತಿ ಸುಖವ ಶಾಂತಿ ಮುನಿಗೀವನಮ್ಮ ॥ ೨೪

ಈ ಪದಗಳನೋದಿ ಕೇಳ್ದವರಿಗಮ್ಮ
ಪಾಪವೆಲ್ಲವು ಪರಿಹಾರವಾಗಲಮ್ಮ
ರೂಪು ಸೌಭಾಗ್ಯ ಸಂಪದವಾಗಲಮ್ಮ
ಯಾವತ್ತೂ ಸುಖದೊಳೊಲಾಡುವರಮ್ಮ ॥ ೨೫

## ೧೦.ಆದಿಜಿನೇಶ್ವರನಮೋ

ಆದಿಜಿನೇಶ್ವರ ನಮೋ ನಮೋ
ಭೇದವಾದಿಗೆ ಸಿಲುಕದ ಪ್ರಥುಮೆ ನಮೋ ॥ ಪಲ್ಲವಿ

ಅಜಿತಶಂಭವ ಅಭಿನಂದನ ಸುಮತೀಶ
ತ್ರಿಜಗವಂದಿತ ಪಾದಪದ್ಮ ನಮೋ
ಸುಜನವಂದಿತ ಸುಪಾರೀಶ್ವಚಂದ್ರಪ್ರಭ
ನಿಜಗುಣಿಪುಷ್ಪಶೀತಳರೇ ನಮೋ ॥ ೧

ಶ್ರೇಯೋ ಜಿನವಾಸುಪೂಜ್ಯ ವಿಮಲ ಜಿನ
ಆಯತಮುಕ್ತಿ ಅನಂತನಮೋ
ಕಾಯಜ ಜಯಧರ್ಮ ಶಾಂತಿ ಜಿವನೇ
ಕುಂಥು ಕಾವುದೆನ್ನನು ಅರೆಸ್ವಾಮಿ ನಮೋ ॥ ೨

ಮಲ್ಲಿಜಿನೇಶ್ವರ ಮುನಿಸುವ್ರತ ಮುಕ್ತಿ
ವಲ್ಲಭನಮಿನೇಮಿ ಪಾರೀಶ್ವನಮೋ
ಬಲ್ಲಿದ ವೀರಜಿನೇಂದ್ರ ಚೌವೀಶ ನಿ
ಮ್ಮೆಲ್ಲಡಿಗಳಿಗೆರಗುವೆನು ನಮೋ ॥

## ೧೧.ಮಾನಿನಿರನ್ನಳೆನೋಡೆ

ಮಾನಿನಿ ರನ್ನಳೆ ನೋಡೆ ಶ್ರೀ ನೇಮಿ
ಜಿನೇಶನನು ಕಾಮಿನಿಯ ದಶಗುಣ ಭಾವೆ ನೀ ನೋಡೆ ॥ ಪಲ್ಲವಿ

ಶ್ರೀಮದಮರೇಂದ್ರ ವಂದ್ಯನ ಕೋಮಲಾಂಗಿ ನೋಡೆ
ಮುಕ್ತಿ ಭಾಮಿನಿಯ ದಶಗುಣದಾಮನ ನೋಡೆ
ತಾಮರಸ ನೇತ್ರನೋಡೆ ಸೋಮಾರ್ಕಕೋಟಿ ಪ್ರಕಾಶ
ದಾ ಮಹಿಮ ನೇಮಿಸ್ವಾಮಿಯ ಕಾಮಿನಿ ನೋಡೆ ॥ ೧

ಶ್ರೀವಾರನ್ನೋಡೆ ಸರ್ವಜೀವ ಬಂಧುವನ್ನ ನೋಡೆ
ಪಾಲಿಸುವ ಜನರ ಪಾಲಿಪ ದೇವನ್ನ ನೋಡೆ
ಭಾವಜನ ಗೆಲ್ದನೋಡೆ ಪಾವನಮೂರ್ತಿಯ ನೋಡೆ
ತಿವಿದ ಸುಜ್ಞಾನಂಬುಧಿಯ ಭಾವ ನೀ ನೋಡೆ ॥ ೨

ಸದ್ಧರ್ಮವನೆಯ್ದು ಜಗದೊಳು ಧರಿಸಿದನ್ನ ನೋಡೆ
ಶುದ್ಧ ಪರಂಜ್ಯೋತಿಯ ವಿದಗ್ದೆ ನೀ ನೋಡೆ

ಶ್ರದ್ಧೆಯಿಂದೆರಗಿಪಂ ಬದ್ಧಕರ್ಮಗಳನ್ನು
ದಗ್ಧ ಮಾಡುವ ದೇವನ ನೋಡೆ ॥ ೩

## ೧೨.ಆದಿಜಿನೇಶ್ವರನಮೋ

ಆದಿ ಜಿನೇಶ್ವರ ನಮೋ ನಮೋ
ಶುದ್ಧ ಬೋಧದರ್ಶನ ಚಿನ್ಮಯಾಂಗ ನಮೋ ನಮೋ ॥ ಪಲ್ಲವಿ

ಅಜಿತ ಜಿನೇಶ್ವರ ಗಜಲಾಂಛನ ನಮೋ
ವಿಜಿತ ಮದನ ಶಂಭವೇಶ ನಮೋ
ಗಜರಿಪುವಿಷ್ಟರ ಅಭಿನಂದನ ನಮೋ
ತ್ರಿಜಗವಂದಿತ ಸುಮತೀಶ ನಮೋ ॥ ೧

ವಾರಿಜ ಪ್ರಭಜಿನ ಮಾರವಿಜಯ ನಮೋ
ಕಾರುಣ್ಯನಿಧಿ ಸುಪಾರೀಶ್ವ ನಮೋ
ತಾರಾದ್ರಿ ನಿಭ ದೇಹ ಚಂದ್ರನಾಥನೇ ನಮೋ
ಭೂರಿವೈರಿಭವ ಪುಷ್ಪದಂತ ನಮೋ ॥ ೨

ಶೀತಳ ಜಿನಪತಿ ಭೂತಹಿತನೆ ನಮೋ
ಜಾತರೂಪನೇ ಶ್ರೇಯಾಂಶ ನಮೋ
ಪ್ರಾತಿಹಾರ್ಯ್ಯನ್ವಿತ ವಾಸುಪೂಜ್ಯನೇ ನಮೋ
ವೀತರಾಗನೆ ವಿಮಲೇಶ ನಮೋ ॥ ೩

ಅಂತಕವಿಜಯ ಅನಂತಜಿನನೇ ನಮೋ
ಗ್ರಂಥರಹಿತಮರ್ಧನಾಥ ನಮೋ
ಶಾಂತಿ ಜಿನೇಶ್ವರ ಸದ್ಗುಣ ನಿಧಿ ನಮೋ
ಕಂತು ವಿಜಯ ಕುಂಥುನಾಥ ನಮೋ ॥ ೪

ಅರಜಿನ ಪತಿಪರಮಾತ್ಮ ರೂಪನೇ ನಮೋ
ದುರಿತ ವಿಜಯ ಮಲ್ಲಿನಾಥ ನಮೋ
ಸುರನರವಂದಿತ ಮುನಿಸುವೃತ ನಮೋ
ವರಗುಣನಿಧಿ ನೇಮಿಸ್ವಾಮಿ ನಮೋ ॥ ೫

ನೇಮಿ ಜಿನೇಶ್ವರ ಕಾಮಿತಾರ್ಥನೇ ನಮೋ
ಸ್ವಾಮಿ ಪಾರೀಶ್ವ ಜಿನೇಶ ನಮೋ

ಸೋಮಕೋಟಿ ಪ್ರಕಾಶ ಸಾಸಿರದಷ್ಟ
ಕೊಡೆಯ ವೀರನಾಥ ನಮೋ ॥ ೬

ಅರ್ಹಸಂತತಿ ನಮೋ ಸಿದ್ಧನಿಕರ ನಮೋ
ನಿರುತಮಾಚಾರ್ಯ್ಯರಾ ಗಣವೇ ನಮೋ
ಪರಮ ಧರ್ಮೋಪದೇಶಕ ಸಂಘವೇ ನಮೋ
ವರ ಸರ್ವಸಾಧು ಸಮೂಹವೇ ನಮೋ ॥ ೭

**<u>೧೩. ವೃಷಭಜಿನೇಶನೇ</u>**

ವೃಷಭ ಜಿನೇಶನೇ ಸುಷುಮ ಶರೀರನೆ
ಕುಸುಮ ಬಾಣನ ಗೆಲಿದವನೆ
ವಿಷಮ ಭವಾಂಬುಧಿಯನು ದಾಂಟಿರುವನೇ
ಅಸಮಾನನು ನೀನೇ ॥ ೧

ಪೂಜಿನ ಸಂತತಿಯ ತ್ಯಜಿಸಿರುವವನೇ
xxxxxxxxxx
ಅಜಿತ ಜಿನೇಶನ ಭಿಜಿಸುವವರ ಮನು
ಭಜಕರ ಸಲಹುವವನೇ ॥ ೨

ಶಂಭವ ಜಿನಪನೇ ನಂಬಿದೆ ದುರಿತ ವಿ
ಡಂಬಿಪನಘ ನೀನೇ
ತುಂಬಿದ ಸಿರಿಯೊಳಗಿಂಬುದೋರಿಪನೇ
ಸಂಭ್ರಮದೊಳಗಿಹನೇ ॥ ೩

ಅಭಿನಂದನ ಜಿನಶುಭ ಪರಿಣಮಣಿ
ವಿಭುದಾರ್ಚಿತ ಪದನೇ
ಕುಭವದಿ ಪುಟ್ಟುತ ನೊಂದೆನು ದೇವನೇ
ವಿಭವದೊಳ್ಪಟ್ಟವನೇ ॥ ೪

ಸುಮತಿನಾಥ ಜಿನ ಕುಮತವ ಖಂಡಿಸಿ
ದಮಲಜ್ಞಾನ ನೀನೇ
ಕಮಲನಾಭನ ಬಾರ್ಮುಖವನು
ವಿಮುಖ ಮಾಡಿದವನೇ ॥ ೫

ಪದ್ಮಪೀಠ ಪದಪದ್ಮ ವಿರಾಜನೇ
ಪದ್ಮಪ್ರಭ ಜಿನನೇ
ಬದ್ಧ ಕರ್ಮವ ಭೇದಿಸಿ ಕಳೆದನೇ
ಶುದ್ಧ ಭಾವದನೇ ॥ ೬

ವಿಮಳ ತೇಜೋಮಯ ಸುಪಾರೀಶ್ವರನೇ
ಅಪವರ್ಗದೊಳಿಹನೆ ಕು
ಸುಮ ಬಾಣನ ಸಂಶ್ರುತಿಯ ಬೈಧಿಸದನೇ
ಜಪಿಸುವೆನಾವನೇ ॥ ೭

ಚಂದ್ರಲಾಂಛನನೇ ಚಂದ್ರ ಜಿನೇಶನೇ
ಇಂದ್ರನಿಲ ತೇಜನೇ
ಮಂದರಾದ್ರಿಯೊಳು ಮಿಂದ ಸುರಾಸುರ
ವೃಂದಪೂಜ್ಯ ಮಹಿಮನೇ ॥ ೮

ಪುಷ್ಪದಂತ ಜಿನರಾಜನೇ ಜಗತು
ತ್ಕೃಷ್ಟನಾಗಿ ಶ್ರುತಿಹನೇ
ದುಷ್ಟ ಭವಾಂಬುಧಿ ತಡಿಗೈಸು ದಯ
ವಿಟ್ಟು ಪಾಲಿಸರುಹನೇ ॥ ೯

ಘಾತಿ ಅಘಾತಿಯ ಘಾತಿಸಿದಾತಗೆ
ಜಾತರೂಪಧರನೇ
ಭೂತ ದಯಾದೊಳತಿ ಪ್ರೀತಿಯುಳ್ಳವನೇ
ಶೀತಳ ಜಿನವರನೇ ॥ ೧೦

ಶ್ರೇಯಾಂಸ ಪದವಸುಗತಿಗೆ ತೋರುವ
ಶ್ರೇಯಾಂಸನು ನೀನೇ
ಮಾಯಾಮೋಹ ಮಾತ್ಸರ್ಯಗಳನು
ಜಯಸಿರುತಹನೇ ॥ ೧೧

ವಸುಮತಿಯೊಳು ಜಸಪಸ
ರಿಸಿ ಮುಕ್ತಿಯ ವಚನಗೈದಿರುವವನೇ
ವಾಸುಪೂಜ್ಯ ಜಿನನೇ ವಿಷಯವ ಕಳೆದ
ಅಸಮಬಲನು ನೀನೇ ॥ ೧೨

ಅಮಲದೀಪ್ತಿಮಯ ವಿಪುಲ ಜಿನೇಶನೇ
ಕಮಲ ಪೀಠದವನೇ

ನಮಿಸುವ ಭವ್ಯರ ಶ್ರಮವ ಹರಿಸುವವನೇ
ಮಮ ಹೃದಯದೊಳಿಹನೇ ॥ ೧೩

ಘನಸಂಪತ್ತಿಯ ವಿನಯದಿಂದ ಕೊಡುವನ
ಘನನಂತ ಜಿನನೇ
ಮನದಿ ಧ್ಯಾನಿಸುವ ಚಿನುಮಯ ರೂಪನೇ
ಮುನಿಜನನತಪದನೇ ॥ ೧೪

## ೧೪.ಅಮರವಂದಿತನಾದ

ಅಮರವಂದಿತನಾದ ಸುಮತಿ ಶ್ರೀ ಜಿನಪತಿಗೆ
ಅಮಿತಗುಣಿ ಶ್ರೀ ಪದ್ಮಪ್ರಭೇಶ್ವರನಿಗೆ
ಸುಮನ ಸಾರಾಧ್ಯ ಸುಪಾರ್ಶ್ವ ಜಿನಪತಿಗೆ
ಮಮಟವನಾದ ಶ್ರೀ ಚಂದ್ರ ಜಿನನಿಗೆ ॥ ೧

ಪುಷ್ಪನಾಯಕ ವಿಜಯ ಪುಷ್ಪದಂತೇಶ್ವರಗೆ
ನಿಷ್ಪನ್ನ ಹೃದಯ ಶೀತಳ ಜಿನನಿಗೆ
ಒಪ್ಪುತಿಹ ಶ್ರೇಯಾಂಸು ವಾಸುಪೂಜೇಶ್ವರಗೆ
ದರ್ಪಕಾಲಾತಿ ಶ್ರೀ ವಿಮಲ ಜಿನಗೆ ॥ ೨

ಅಂತಕಾಂತಕನೆನಿಪನಂತ ಶ್ರೀ ನಿಜಪತಿಗೆ
ಕಂತುಮದಹರ ಧರ್ಮಶಾಂತಿ ಜಿನಗೆ
ಕುಂಥು ಅರಮಲ್ಲಿಮುನಿ ಸುವ್ರತಗೆ
ಚಿಂತಿತಾರ್ಥವನೀವ ನೇಮಿ ಜಿನಗೆ ॥ ೩

ಪರಮ ಪಾರ್ಶ್ವ ಜಿನಮಹತಿ ಮಹಾವೀರನಿಗೆ
ಧರೆಗೆ ಬೆಳ್ಗೊಳದ ಭಂಡಾರಿ ಗೃಹದ
ಹರಿಪೀಠದೊಳು ನೆಲಸಿ ಪಂಡಿತಾರ್ಯರಿಗೆ
ನಿರುತ ಸುಖವೀವ ಚತುರ್ವಿಂಶತಿ ಜಿನರ್ಗೆ ॥ ೪

## ೧೫. ಶ್ರೀಜಗತ್ರಯಭವ್ಯಸಂಚಯ

ಶ್ರೀಜಗತ್ರಯ ಭವ್ಯಸಂಚಯ ಪೂಜಿಪ
ಶ್ರೀ ಚಾ x x x x x x x x ಜಿನರಂ
ರಾಜರೆಮಗೊಲಿದು ಸುಖಮಯದ ಅ x x x x ಪದವಿಯನು ॥ ಪಲ್ಲವಿ

ಪುರುಜಿನೇಶ್ವರ ನಿಮ್ಮ ಕಮಲ
ಚರಣಸರಸಿಜ ಯುಗಮ ನಿಮ್ಮಯ
ಸರಸ ಮಾನಸು ಮಧ್ಯ
ವರ್ತಿಯ ಮಾಡು ನಾಭಿಯನು
ಪರಮಗುಣನಿಧಿ ಅಜಿತ ಜಿ
ವರ ನಿರಘ ಶಂಭವ
ಭೂತ್ರಯಾಟಿ ತಾ ಪಿರಿದು ಕೃಪೆಯಿಂ
ಪಾಲಿಸೆಮಗಭಿನಂದನ ಜಿನೇಂದ್ರಾ ॥ ೧

ಕೂಮತವನ ತರುದಾವ ಪಾವಕ
ಸುಮತಿ ವಲ್ಲಭ ಶಂಕರ
ಕಮಲಲೋಚನ ಪದ್ಮಲಾಂಛನ ಪದ್ಮಾವತಿ ಜಿನಪ
ಅಮರಪತಿನುತ ಪದವಿ ಪಾರಿಶ್ವ
ಭ್ರಮರ ಸನ್ನಿಭ ಕುಜಲ ಕುಂತಳ
ಕಮಲಪಾವನ ಚಂದ್ರ ಜಿನಪತಿ ನೀವು ಶರಣೆಮಗೆ ॥ ೨

ಅವನತಾಪುರ ಮಕುಟ ಮಣಿರುಚಿ
ನಿವಹ ಚುಂಬಿತ ಚಾರು ಪದಯುಗ
ಸುವಿಧಿ ಸೀತಳ ಮಹಾಶ್ರೇಯಾಂಸು ವಾಸುಪೂಜ್ಯರನು
ವಿಮಳ ನಿಪುಣಾನಂತ ಜಿನರಂ
ಭವನ ಪತಿಯಂ ಧರ್ಮಾದವ
x x ವ ಭಯೋರ್ಜಿತ ಶಾಂತಿ ಕುಂತು ಮಲ್ಲಿಮುನಿ ಸುವ್ರತ ॥ ೩

ಕನಕಗಿರಿ ಸಮಧೀರನಮಿಯಂ
ವನದೇವಿ ಜಯಪ x x x x ಮಿಯ
ಧನುಜಪತಿ ನುತ ಪಾರಿಶ್ವನಾಥನು ವೀರಜಿನಪತಿಯ
ಕನಕಭಾಜನದಲ್ಲಿ ರತ್ನದ
ಘನನಿವಾಳಿಯನೆತ್ತಿ ಪೂಜಿಸಿ
ವಿಜಯ ಪೂರ್ವಕದಿಂದ ವಂದಿಸಿ ಮೂರು ಸಂಧಿಯಲಿ ॥ ೪

ನಳಿನ ವದನದ ಕುಲಿಶದಂತದ
ನಳನಳಿಪ ನಳಿತೋಳ ಜಘನದ
ಲಲಿತ ಪರಿಮಳ ಕಲಿತ ಕಾಯದ ಲಾವಣ್ಯ ರಸದ

ಸುಳಿದ ಗುಳಿಯಂತೆಸೆವ ನಾಭಿಯ
ಚೆಲುವಿನಾಲಯದಖಿಲ ಜಿನರು
ಗಳೊಲಿದ ಮಹಾಕಲ್ಯಾಣಕೀರ್ತಿ ಪದವಿಯನು ‖ ೫

ಅಸಿಯನ x x x ನ ದೆಸೆವ ಶಂಕರಿ
ವಸುಧೆಯೊಳಗಣ ರಂಗಮಂಟ
ಪ ಸರಸಿಯೊಳೊಪ್ಪುವ ಪಂಚವರ್ಣದ ರಂಗವಲಿಯಿಕ್ಕಿ
ಮಿಸುಪ ಜನರಂ ನುಡಿಸಿ ನಿಚ್ಚಂ
ಕುಸುಮ ಶರಹರ ಮುನಿಯ ಸೇವೆಯ
ನುಸಿದು ಮಾಳ್ಪಳು ಭಕ್ತಿಭರದಿಂ ಪೂವಲಿಯ ಸೂಸಿ ‖ ೬

ಕೋವಿದಮರ ನಾಗವಂದಿತ
ಪಿವರಾದ್ಭೂತ ಕರ್ಮಕಾನನ
ದಾವ ಪಾವಕ ನಿತ್ಯನಿರ್ಮಲ ಭವ್ಯ ಜನ ಬಂದು
ಕೋವಲಾಮಲ ಮುಕ್ತಿವಲ್ಲಭ
ದೇವ ಜಿಯಾ ಜಿಯಾ ಭೂತ್ರಯಾಧಿಪ
ಪಾವನ ಮ x x x x x x ಕಾರಣ ಪಾಹಿ ಗುಣಸಿಂಧು ‖ ೭

ನಳಿನ x x x x x ಜಿನರ ನುತಿಸಿ
ಒಲಿದು ವಜ್ರದ ಪಡಿಗಳೆರಗಿ
ಬಲದ ಕರದಿಂ ಮುಟ್ಟಿದಾಗಳೆ ಕೀಲುಚ್ಚಿ ತೆರೆಯೇ
ತೊಳಗಿ ಬೆಳಗುವ ಬಿಂಬಶತಮಂ
ಹಲವು ಪರಿಯಲಿ ನುತಿಸಿ ವಂದಿಸಿ
x x x x x x x x x x x x x ಕೃತಕೃತ್ಯನಾದನು ‖ ೮

ಆಗಳೆ ಜಿನ ಭವನಪಾಲಕ
ನಾಗದತ್ತನು ದತ್ತಚಿತ್ತನು
ರಾಗರಸದಿಂ ನಮಿಸಿಧೀರನು x x x x x x ನಿಂತೆಂದು
ಶ್ರೀ ಗುಣೋಜ್ವಲ ಭಕ್ತ ಬರ x x x
x x x x x ಜಿನಗ್ರಹದ ಪಡಿಗಳು
ಬೇಗದಿಂದಲಿ ತೆರೆದ ಸುಕೃತದ ಫಲವನು ಕೇಳ್ಕೈ ‖ ೯

**೧೬. ದೇವ ಪಾಲಿಸು ಎನ್ನ**

ದೇವ ಪಾಲಿಸು ಎನ್ನ ಪಾರಿಶ್ವನಾಥ
ಭವತಾಪದೊಳು ನಾನು ತೊಳಲುವೆನಯ್ಯ ‖ ಪಲ್ಲವಿ

ಮೂರು ಮೂಢವ ಗೆಲ್ದು ಮೂರು ರತ್ನವ ಸೆಳೆದು
ಮೂರಾರು ದೋಷದ ಬೇರನು ಹರಿದು
ಮೂರು ಮೂಢದಿ ನಾನು ತೊಳಲುತಲಿರುವೆನು
ಮಾರಮರ್ದನ ಬಂದು ಸಲಹೊ ನೀನಿಂದು ॥ ೧

ನಾಲ್ಕು ಗತಿಯ ಗೆಲಿದೆ ನಾಲ್ಕು ಪದವಿಯ ಪಡೆದೆ
ನಾಲ್ಕೇಶನಾಗನಿಂ ಪೂಜೆ ತೆಗೆದಿರುವೆ
ನಾಲ್ಕು ಗತಿಗೆ ಸಿಲ್ಕಿ ನಿನ್ನ ನಾ ಮರೆದೆ
ನಾಲ್ಕರದಿಂದೆನ್ನ ಸಲಹೊ ಜಿನತಂದೆ ॥ ೨

ಪಂಚಸಂಸಾರವ ಸಂಚಿನಿಂ ಗೆಲಿದೆ
ಪಂಚಾಸ್ತಿಕಾಯದ ಭೇದವ ತಿಳಿದೆ
ಪಂಚಬಾಣನ ಬಾಧೆಯೊಳು ನಾ ಸಿಲ್ಕಿದೆ
ಪಂಚತ್ವಹರಿಸೆನ್ನ ಸಲಹೊ ನೀ ಮುಂದೆ ॥ ೩

ಹತ್ತೆಂಟು ದೋಷವ ಹತಮಾಡಿ ಇರುವೆ ನೀ
ಜ್ಯೋತಿ ರೂಪನು ತಾಳಿ ಮುಕ್ತಿಯೊಳಿರುವೆ
ಹತ್ತೆಂಟು ದೋಷದಿ ಸಿಲುಕಿ ನಾನಿರುವೆ
ಮತಿಯಿತ್ತು ಎನ್ನನು ಸಲಹೊ ನೀ ಬಿಡದೆ ॥ ೪

ಕಮಠೊಪ ಸ್ವರ್ಗವ ಜಯಿಸಿದ ದೇವನೆ
ಕಮಲನಾಭನ ಹಮ್ಮು ಮುರಿದವ ನೀನೆ
ಕಮಲ ಪದ್ಮಾಸನಕೆ ರತ್ನ ಖಚಿತ ನೀನೆ
ಕಮನಿಯ ಶ್ರೀ ಮುಕ್ತಿ ಲಕ್ಷ್ಮಿಯರಸನೇ ॥ ೫

ಉರಗಲೋಕಕೆ ಕರ್ತೃ ಧರಣೇಂದ್ರನೊಡೆಯನೆ
ಅರಸಿ ಪದ್ಮಾವತಿದೇವಿ ಸೇವಾಲಂಕೃತನೇ
ಸುರನರವಂದಿತ ಚರಣ ಸಂಪದನೆ
ಸ್ಥಿರದಿಂದ ಭವ್ಯರ ಸಲಹೊ ಜಿನಪನೆ ॥ ೬

ಕ್ಷಿತಿಯೊಳುನ್ನತವಾದ ಬೆಳ್ಗೊಳದೊಳಗಿಹ
ಅತಿಶಯ ಶ್ರೀಚಂದ್ರಗಿರಿಯೊಳಿಪ್ಪವನೆ
ಯತಿ ಪಂಡಿತಾರ್ಯರ ರಕ್ಷಿಪ ದೇವನೆ
ಮತಿಯಿತ್ತು ಸಲಹಯ್ಯ ಪಾರಿಶ್ವ ಜಿನನೆ ॥ ೭

## ೧೭. ಪುಷ್ಪಕ್ಹೋಗುವಬನ್ನಿ

ಉದಯ ರಾಗ

ಪುಷ್ಪಕ್ಹೋಗುವ ಬನ್ನಿ ಸತ್ಯಶ್ರಾವಕರೆಲ್ಲ
ತಪ್ಪದೆ ಜಿನಂಗರ್ಚಿಸುವ ಬನ್ನಿ ॥ ಪಲ್ಲವಿ

ಅರಳಿದಾ ತಾವರೆ ಮುಳುಗು ಹೊಂಗೇದಿಗೆ
ಇರುವಂತಿಗೆ ಜಾಜಿ ಶಾವಂತಿಗೆ
ಪರಿಮಳವುಳ್ಳಂಥ ಪಾರಿಜಾತದ ಪುಷ್ಪ
ಅರುಹನ ಚರಣಗರ್ಚಿಸುವ ಬನ್ನಿ ॥ ೧

ಮರುಗಮಲ್ಲಿಗೆ ಜಾಜಿ ಸುರಗಿ
ಶಾವಂತಿಗೆ ಥಳಥಳಿಸುವ ಗಿಳಿ ಅಕ್ಷತೆಯು
ಪುಲ್ಲಾಶರನ ಗೆಲಿದ ಆದಿ ಜಿನೇಶನೆ
ಮಲ್ಲಿಗೆ ಅರಳ ಅರ್ಚಿಸುವ ಬನ್ನಿ ॥ ೨

ಬಂದಾರು ಮುದದಿಂದ ಇಂದುವದನೆಯರು
ಚಂದದಿಂದಾರತಿಗಳ ಹಿಡಿದು
ಮಂದರಾಗಿರಿಯಲ್ಲಿ ನಿಂದರು ಸುರರೆಲ್ಲ
ಬಂದು ಹೊಕ್ಕರು ಜಿನಮಂದಿರವ ॥ ೩
ತಪ್ಪದೆ ಬಲಗೊಳಿವಪ್ಪವುಳ್ಳವರೆಲ್ಲ
ಇಪ್ಪತ್ತನಾಲ್ವರ ತೀರ್ಥಂಕರ
ಸರ್ಪನಾ ಹೆಡೆಗಳಿಗಿಪ್ಪ ಜಿನೇಶನೇ ಎತ್ತುವೆ
ಕರ್ಪುರದಾರತಿಯು ॥ ೪

ಭೂತಳದೊಳಗುಳ್ಳ ವೀತರಾಗನೆ ದೇವ
ಖ್ಯಾತಿವಡೆದ ಮರಣಾತಕಿನ್ನು
ವೀತನಲ್ಲದೆ ವರದೇವರು ನಮಗಿಲ್ಲ
ಲೇಸಾಗಿ ಸಲಹು ಶ್ರೀ ಆದಿಜಿನೇಶ ॥ ೫

_

## ೧೮. ತೋರಿಸೊದೇವಾ

ತೋರಿಸೊ ದೇವಾ ತೋರಿಸೊ ಭವ
ವಾರಿಧಿಯೊಳು ಕಷ್ಟಪಡುತ್ತಿದ್ದೆನಯ್ಯ ॥ ಪಲ್ಲವಿ

ತಾಯಿತಂದೆಯ ಬಸಿರಲ್ಲಿ ಹುಟ್ಟಿದೆಯೆನ್ನ
ಕಾಯಕೆ ವರಸುಖ ಕೊಡಲಿಲ್ಲವೊ
ಪ್ರಾಯ ಕಂಡೆನಗೊಂದು ಹೆಣ್ಣಕೊರಳಿಗೆ ಕಟ್ಟಿ
ಮಾಯದ ಸಂಕೋಲೆ ಹಾಕಿದರಯ್ಯ ‖ ೧

ಸಿಲ್ಕಿ ಸಂಸಾರ ಸಮುದ್ರದೊಳಗೆ ನಾನು
ಲೆಕ್ಕವಿಲ್ಲದೆ ದುಃಖಬಡುತಿರಲು
ಮಕ್ಕಳೆಂಬ ಬೆಜ್ಜ ಮೈಮೇಲೆ ಬೀಳಲು
ಕಕ್ಕಸವಾಯಿತು ಸೈರಿಸಲಾರೆ ‖ ೨

ತಂದೆತಾಯಿಯು ಸತಿಸುತರು ಬಂಧುಗಳೆಲ್ಲ
ಮುಂದಣಗತಿಯನು ಕೆಡಿಸುವರಲ್ಲದ
ಳಂದದಿ ಸುಖವಿವರೊಬ್ಬರ ಕಾಣದೆ
ಬಂದೆವೊ ನಿಮ್ಮ ಪಾದಬ್ಜದ ಬಳಿಗೆ ‖ ೩

ಹಂಗಿಲ್ಲದವ ಬಂದು ಲಿಂಗದೊಳು ಸೇರಲು
ಕಂಗಳು ಹೊಕ್ಕವು ಕುಚಗಿರಿಯೂ
ಮುಂಗಾಣದೆ ಮನಮೈಯೊಳು ಬೀಳಲು
ಹಿಂಗಿಪರಿಲ್ಲದೆ ಮುಳುಗಿದೆನಯ್ಯ ‖ ೪

ರಾಗದಿಂ ಭಜಕರ್ಗೆ ಸೌಖ್ಯದಾಯಕನೆಂದು
ಕೂಗುತ ಆಗಮ ಸಿದ್ಧಾಂತವು
ಭೋಗದಿ ಸಲಹೆನ್ನ ಸ್ಥಿರಸುಖವನು ಕೊಟ್ಟು
ಬೆಳ್ಗುಳಪುರದ ಶ್ರೀ ಆದಿ ಜಿನೇಂದ್ರಾ ‖ ೫

## ೧೯. ಪಾಲಿಸೆನ್ನಪರಮದೇವ

ಪಾಲಿಸೆನ್ನ ಪರಮದೇವ ಸುರನರೇಂದ್ರ
ಯಾಲವಂದ್ಯಮನುಭಾವಾ
ಪಾಲಿಪಂತೆ ನೀನು ಎನ್ನ ಮೇಲೆ
ಪೂರ್ಣಪ್ರೀತಿಯಿಟ್ಟು ‖ ಪಲ್ಲವಿ

ಕಾಲವಿಜಯ ನಿನ್ನ ನಾನು ಅರಿಯದೆನ್ನ
ನಾಲಿಗಿದ್ದು ಸ್ವಾರ್ಥವೇನು
ಬಾಲತನದಿ ಚರಿಸುತಿರುವ

ಕಾಲಕೆನಗೆ ತಿಳಿಯಲಿಲ್ಲ
ಮೇಲೆ ಬುದ್ಧಿಗಲಿತು ನಿನ್ನ ಪಾದಕೆರಗಿ
ಸ್ಮರಿಸುತಿಹೆನು ‖ ೧

ಕರುಣ ದೃಷ್ಟಿಯಿಂದ ನೋಡಿ ಮೋಕ್ಷವನ್ನು
ಶರಣು ತೋರಿ ಕೃಪೆಯ ಮಾಡಿ
ತರುಣಿ ಸೋಮಕೋಟಿ ಕಿರಣ
ಚರಣನಭವಿರಾಜಿತೆನ್ನ ಜನನ
ಮರಣ ಹರಣ ಮಾಡು ಕರುಣನಿಧಿಯೇ
ಶರಣು ಶರಣು ‖ ೨

ಪರಮಭವ್ಯ ಕುಮುದವಿಂದು ಮುನ್ನ
ನರಿಯದೆ ದೊಡ್ಡ ದೇವನೆಂದು
ಅರಿದೆ ಇಂದು ಮೂರು ಲೋಕದೊಡೆಯ ಸಲಹೆನ್ನ
ಧರೆಯೊಳಧಿಕ ಬೆಳ್ಗುಳದಿ
ಪುರದೊಳೆಸೆವ ಆದಿನಾಥ ‖ ೩

## <u>೨೦. ಸಾಕಿನ್ನುಸಂಸಾರ</u>

ಸಾಕಿನ್ನು ಸಂಸಾರ ನಾನುನೊಲ್ಲೆನು ನಾನು
ಚಂದ್ರನಾಥನ ಪರಾಕು ಮಾಡದೆ ಎನ್ನ
ಸಂಶಯ ಬಿಡಿಸಯ್ಯ ಚಂದ್ರನಾಥ ‖ ಪಲ್ಲವಿ

ಕರ್ಮರಾಜನೆಂಬ ಕಾಳೋರಗ ಸರ್ಪ ಚಂದ್ರನಾಥ
ದೊಡ್ಡ ವರ್ಮದಿಂದಾತನಟ್ಟುತ ಬರುತಾನೆ ಚಂದ್ರನಾಥ ‖ ೧

ಧರ್ಮವೆನಿಪ ಕೋಟೆಯ ಮರೆಗೊಂಡೆನು ಚಂದ್ರನಾಥ
ನಿಮ್ಮ ಸನ್ಮಾರ್ಗವ ಕಾಣದೆ ಸಿಕ್ಕಿದೆ ನಾನು ಚಂದ್ರನಾಥ ‖ ೨

ಕಷ್ಟಕಾಲಕೆ ಕೆಟ್ಟ ದೇಹದೊಳು ಹೊರಳುವೆ ಚಂದ್ರನಾಥ
ಬಹುದುಷ್ಟಯಮನ ಬಾಧೆಗೆ ಸಿಕ್ಕಿದೆ ನಾನು ಚಂದ್ರನಾಥ ‖ ೩

ಮೆಟ್ಟನೆ ಮುಕ್ತಿಯ ಮೆಟ್ಟಿನೊಳಗೆ ನಾನು ಚಂದ್ರನಾಥ
ನಿಮ್ಮ ಮುಟ್ಟಿ ಪೂಜಿಪ ಪುಣ್ಯ ಎಂದಿಗೆ ಪಡೆದೆನೋ ಚಂದ್ರನಾಥ ‖ ೪

ಆದಿಕಾಲದಿ ನಿನ್ನ ಪದವ ಕಾಣದೆ ಚಂದ್ರನಾಥ
ಇಳೆಯೊಳಗಜ್ಞಾನದಿ ತೊಳಲಿದೆ ಚಂದ್ರನಾಥ ॥ ೫

ಮೇದಿನಿಗತಿಶಯ ವೇಣುಪುರದಲ್ಲಿ ಚಂದ್ರನಾಥ
ನಿಮ್ಮ ಪಾದವ ಕಂಡೆನು ಸಲಹೋ ಚಂದ್ರನಾಥ ॥ ೬

## ೨೧. ದಳಂದಳಾಂದುಳಂ

ದಳಂದಳಾಂದುಳ ಧುಮುಕೆನುತಾ
ನಳಿನವದನೆ ಕಡೆದಳು ದಧಿಯಾ ॥ ಪಲ್ಲವಿ

ಪಂಚರತ್ನದ ಮಂಟಪದೊಳು ಪವಳಧ
ಮಿಂಚುವ ಕಂಬ ಬೆಳ್ಳಿಯ ಮಂಥಣಿ
ಪಂಚಾಮೃತವೆನಿಸುವ ದಧಿಯೊಳು ಸತಿ
ಕಾಂಚನಮಯ ಕಡೆಗೋಲನಿಳುಹಿದಳು ॥ ೧

ಪಟ್ಟಾವಳಿನರಿವಿಡಿದೊಂಟಳು ಸತಿ ಹೊಂ
ಬಟ್ಟೆಯ ತೆಗೆದು ನೆಣನ ಪಿಡಿದು
ಹುಟ್ಟುಗೆ ಜಿನರಂತ ಮಾಲೆಯ ಪಾಡುತ
ಗಟ್ಟಿ ಮೊಸರ ಕಡೆದಳು ಮಂಥಣಿಗೆಯೊಳು ॥ ೨

ಭೃಂಗಕುಂತಳೆ ನೊರೆನೊಸಲು ಬಿಂಬಾಧರ
ಅಂಗಜಬಾಣ ನಯನವೆನಿಪ
ತುಂಗಕುಚಕ್ಕೆ ಸೆಳೆನಡು ಬಳುಕಲು ದೇ
ವಾಂಗನೆ ಮೊಸರ ಕಡೆದಳು ಮಂಥಣಿಗೆಯೊಳು ॥ ೩

ತೊಡೆಸಂಚಳಿಸಲು ನಡುಬಳುಕಲು ತೊ
ಳೆಡೆಯಾಡಲು ಪಯೋದರವಲುಗೆ
ಮುಡಿ ಸಡಿಲಲು ಕುಂತಣ ಮೊರೆ ನೊಸಲೊಳು
ಕಡುವಿಡಿದಾಡೆ ಬೆಮರು ಬಿಂದುಗಳಿಂದ ॥ ೪

ಮಾಳವಿ ಭೈರವಿ ಕಾಮೋದರಿ ಪಾಂ
ಚಾಳ ದೇಶಿರಾಗಗಳಿಂದ ಮಾಳ ವಿ
ಮಲ ಹರಿ ಗುರ್ಜರಿಯಿಂದ
ಲೋಲಲೋಚನೆ ಪಾಡಿದಳತಿ ಹರುಷದಿ ॥ ೫

ಚರಣದಂದಗೆ ನೋಪುರ ಕಟಿಸೂತ್ರವು
ವರಜಘನದ ಕಿಂಕಿಣಿಧ್ವನಿಯು
ಕೊರಳ ಪದಕ ಹಾರಗಳೋಲೆದಾಡಲು
ಬೆರಳುಂಗುರ ಜಝ್ಝುಗೊರೆನಲು ॥ ೬

ಕ್ಷಿತಿಯೊಳು ಕುಂತಣ ವಿಷಯದೊಳೊಪ್ಪುವ
ಪತಿಕೊಪಣದ ಚಂದ್ರಪ್ರಭರ
ಕೃತಿಗರ್ಚನೆಗಭಿಷೇಕಕೆ ಮಾನಿನಿ
ಘೃತಬೇಕೆಂದು ಕಡೆದಳತಿ ಹರುಷದಿ ॥ ೭

## **೨೨. ಲೆಲೆಲೊಲೆಲೆಲೊಲೆಲೆಲೊ**

ಲೆಲೆಲೊ ಲೆಲೆಲೊ ಲೆಲೆಲೊ ಲೆಲೆಲೊ
ಲೆಲೆಲೊ ಲೆಲೆಲೊ ಲೆಲೆಲೊ ॥ ಪಲ್ಲವಿ

ಪುರಪರಮೇಶನ ವರಶಾಸನ ವಸು
ಶರದೊಳು ನೋಡಿ ಸಂಭ್ರಮದಿಂದ
ಬರಿದಾನಂದದೊಳಿರವೋಲಾಡುವ
ಗುರುಮಹಿಮೆಯ ಹಾ ಸಂಬಂಧಾ ॥ ೧

ಹಿಮ್ಮೆಟ್ಟಿದ ದರುಶನಕರವಾದಾಂತು
ಹೆಮ್ಮೆಯ ತಪವೆಂಬ ತಳನೇರಿ
ಘಮ್ಮನೆ ದುರಿತವೆಂಬರಿಗಳ ಜಯದೊಳು
ಗಿಮ್ಮಡಿಸುವ ಕಲಿ ಹಾ ಸಂಬಂಧಾ ॥ ೨

ಜಿನರೂಪಿನ ಹೊಸ ದೊರೆಗಳನೊಲೈಸಿ
ಮನವೊಲಿದೆರಗಿ ಮಜ್ಜರೆಡಿಂದಾ
ಕನಲಿ ಬದ್ಧದ ಮನುಜ ನಿಜಸೇವೆಯ
ನನುಗೋದಿಸುವ ಕಲಿ ಹಾ ಸಂಬಂಧಾ ॥ ೩

ಸಲೆ ಜಿನರಾಜ ಎನ್ನೊಡೆಯನೆ ಗತಿಯೆಂದು
ತೊಲಗೆಲಾ ತೊಂತುಪ ಕಂಡಕವೆಂಬ
ಬಲುಗಯ್ಯ ಬಂಡನ ಗೆಲಿದು ಗಂಡೇರುವ
ಸಲೆ ಬಿರುದಿನ ಕಲಿ ಹಾ ಸಂಬಂಧಾ ॥ ೪

ಕುಂದದೆಸೆ ನೆಗೆವದಾ ಪಟ್ಟಾಂಬರಕೆ
ಚಂದಿರ ಲಕ್ಷ್ಮಿಸೇನ ಒರೆವ
ಚಂದದಿಂದ ಕೊಪಣದಿ ಆರಾಧಿಸುವ
ಚಂದ್ರನಾಥನ ಹೊಸ ಹಾ ಸಂಬಂಧಾ ॥ ೫

## ೧೩. ಬಂದುನೋಡಿರೆಲ್ಲನಿಂದು

ಬಂದು ನೋಡಿರೆಲ್ಲ ನಿಂದು ಪಾಡಿರೆಲ್ಲ
ಇಂದ್ರವಂದ್ಯ ಚಂದ್ರನಾಥನ ಚರಣಕಮಲವ ॥ ಪಲ್ಲವಿ

ಜಾತಿಜರಾಮರಣವೆಂಬ ಪಾತಕದ ತ್ರಿಪುರವನ್ನು
ಓತು ಸುಟ್ಟು ಮೂಲೋಕವಂದ್ಯನೆನಿಸಿದ ವೀತರಾಗನ
ಘಾತಿಕರ್ಮವನು ಗೆಲಿದ ಅನಂತವೀರ್ಯ್ಯನ ॥ ೧

ಇಂಗಡಲ ಚೆಲ್ವ ಸ್ತರಂಗ ಮಾಲೆಗಳನೆ ಪಾ
ಲ್ವಂಗರುಚಿಯೊಳಖಿಲ ಪಾಶಾಂಧಕಾರಮಂ
ಹಿಂಗಿಸಿದ ಅಂಗಜಾರಿಭವ ವಿದೂರ ಮೂರ್ತಿಯನ್ನು ॥ ೨

ರಾಗರೋಷರಹಿತನೇ ಶ್ರೀಗದೀಶ ನಮಿತ ಚರಣ
ರೋಗ ನಾಶದುರಿತ ಹಾರಿದ ವಿಜಯವಂದಿತ ಅಘಹರನ
ಬೇಗಬಂದು ನುತಿಸಲವರ ಪಾದ ಹಿಂಗುವುದು ॥ ೩

ಇಂದು ಕೋಟಿ ಸೂರ್ಯತೇಜ ಮಂದರಾದ್ರಿ ಧೈರ್ಯಧೀರ
ಕಂದರ್ಪ ವಿಜಯ ಸಕಲ ಗುಣ ವಿಭೂಷಿತ
ಸೌಂದರಾಂಗನ ಕಂದದಖಿಲ ಭಕ್ತಿಯಿಂದ ಭಜಿಸಿರರುಹನಾ ॥ ೪

ಮಲೆಯ ದೇಶದೊಳಗೆ ಮೆರೆವ ಸುಲಭ ಪುತ್ತಂಗಡಿಯ ಹೊರದೊ
ರಲಿದು ಪಾಲಿಸುವನಂತ ಸೌಖ್ಯನ
ಚೆಲುವ ಮೂರ್ತಿಯ ಒಲಿದು ಭಜಿಸಿರೆ ॥ ೫

## ೧೪. ಪಾಲಿಸೆನ್ನಚಂದ್ರನಾಥ

ಪಾಲಿಸೆನ್ನ ಚಂದ್ರನಾಥ ಕರುಣದಿಂದ
ಲೋಲಮೋಕ್ಷ ಲಕ್ಷ್ಮಿಕಾಂತಾ ॥ ಪಲ್ಲವಿ

ಪಾಲಿಸೆನ್ನ ಪ್ರೀತಿಯಿಂದ
ಬಾಲೆ ಲಕ್ಷ್ಮಣ ಪುತ್ರ
ಲೀಲೆಯಿಂದ ಸಲಹುಯೆನ್ನ
ಕಾಲಕಾಲ ಬಳಲಿ ಬಂದೆ ಪಾಲಿಸೆನ್ನ ॥ ೧

ಚಂದ್ರಪುರದಧಿನಾಥ ಇಂದು ವರ್ಣ
ದಿಂದಲಿರುವ ಚಂದ್ರನ ಶಾಂತ
ಇಂದುವದನ ಮಹಾಸೇನ ವೃಂದ ನೃಪನ ಪುತ್ರಾ
ಕಂದನಂತೆಯೆನ್ನ ಸಲಹೆ ನೂರೈವತ್ತು ಬಿಲ್ಲುತ್ಸೇದಾ॥ ೨

ಹತ್ತು ಲಕ್ಷ ಪೂರ್ವಕಾಲ ರಾಜ್ಯದೊಳಿದ್ದು
ಮತ್ತೆ ಕರ್ಮರಿಪುವ ಗೆಲಿದು
ಸತತ ಮೋಕ್ಷ ಪುರದೊಳಿರುವವ
ಅತಿಶಯದ ಚಂದ್ರನಾಥ ಮತಿಯನಿತ್ತು ಎನ್ನ ಸಲಹೊ॥ ೩

ಚಂದ್ರಸೂರ್ಯಕೋಟಿ ತೇಜ
ಇಂದ್ರಲೋಚನದಿಂದ ಮೆರೆವ
ಚಂದ್ರನ ತೇಜ ಇಂದ್ರನಾಗೇಂದ್ರ ನ
ರೇಂದ್ರ ವಂದಿತ ಪಾದಪದ್ಮ ಎಂದು ಅರಿಯೆ
ಇಂದು ಕಂಡೆ ಭವದ ಹರಿಸೊ ಎನ್ನ ತಂದೆ ॥ ೪

ಜನನ ಮರಣ ಹರಣ ಜೈಸಿದೆ
ಜನಕನಂತೆ ಜನರಿಗುಪದೇಶ ಮಾಡಿದೆ
ಜನನ ಮರಣದೊಳಗೆ ಸಿಲ್ಕಿ ಬಹಳ ಕಾಲ ತೊಳಲಿ ಬಂದೆ
ಜನನ ಮರಣವನ್ನು ಹರಿಸಿ ಮೋಕ್ಷವನ್ನು ತೋರಿನಿಂದೆ ॥ ೫

ಪರಮಭವ್ಯಜನಕೆ ಚಂದ್ರಾ ನಿನ್ನ ನಾನು
ಅರಿಯೆ ಗುಣಗಣ ಸಮುದ್ರ
ಅರೆದೆಯೆಂದು ಮೂರು ಲೋಕ ತುದಿಯ ತೋರಿ ಸಲಹು ತಂದೆ
ಧರೆಯೊಳಧಿಕ ಬೆಳಗೊಳದ ಮಠದೊಳಿರುವ ಚಂದ್ರನಾಥ ॥ ೬

**<u>೧೫. ಜಿನನೆಬಾರೋಜಿನಚಂದ್ರನೇ</u>**

ಜಿನನೆ ಬಾರೋ ಜಿನಚಂದ್ರನೇ ಜಿನನೇ ಜಿನನೆ ಬಾರೋ ಜಿನಚಂದ್ರನೇ ಬಾರೋ
ಕನಕಚಂದ್ರಮುನಿಯ ಗುರುವೇ ಅನಂತನಾಥ ಬಾರೋ ॥ ಪಲ್ಲವಿ

ಜ್ಞಾನಸಾಗರ ಚಂದ್ರನೇ ಮಾನಗರ್ವರಹಿತನೇ
ಜ್ಞಾನದಿಂದ ಮುಕ್ತಿಯೊಡಗೂಡಿದಪನೇ ಏನ ಹೇಳುವೆ
ಭಾನುಕೋಟಿ ತೇಜ ಅನಂತನಾಥ ಬಾರೋ ॥ ೧

ಅಷ್ಟಗುಣವ ಧರಿಸಿದವನೇ ಸೃಷ್ಟಿಗೊಡೆಯ ನಾಥನೇ
ಕಷ್ಟವಾದವೆಂಟುಗುಣವ ಬಿಟ್ಟವನೇ ನೆಟ್ಟನವನು
ದಿಟ್ಟಕಾಮವನ್ನು ಗೆಲಿದನಂತನಾಥ ಬಾರೋ ॥ ೨

ಅರೆಯ ಪಾತೆಯೊಳಗೆ ಮೆರೆವ ಪರಮಪುರುಷನಂತೆ ನಾಥ
ಧರೆಗೆ ಪೊಸತಾದ ಕನಕಚಂದ್ರಮುನಿಯ ಅರರೆ ಪಾಲಿಸಾ
ವರವನಿತ್ತು ಭವ್ಯರನ್ನು ಪೊರೆವೆ ಬಾರೋ ॥ ೩

## ೧೬. ಭಜಿಸಿರೋಭವ್ಯರೆಲ್ಲ

ಭಜಿಸಿರೋ ಭವ್ಯರೆಲ್ಲ ಭವಹರನಾ ॥ ಪಲ್ಲವಿ

ಮುಗುಳು ನಗೆಯು ಮುದ್ದು ಮುಖದಾತನ
ಮಗಮಗಿಸುವ ಪುರ್ಬು ನೊಸಲಿನಾತನ
ಜಗಕೆ ಮೋಹನ ರೂಪ ಮಲ್ಲಿನಾಥನ
ಮುಗುಳೆಂಬನ ಗೆಲಿದ ಮೋಹನ ದೇವನ ॥ ೧

ಪದ್ಮಪೀಠದಲಿ ನೆಲಿಸಿದ ಜೀವನ
ಕೂಡೆ ಬದ್ಧ ಕರ್ಮಗಳ ಗೆಲಿದಾತನ
ಶುದ್ಧ ಸುವರ್ಣ ಸುಮನ ಬಾಣನ ನಮ್ಮ
ನುದ್ಧರಿಸುವ ಜಿನ ಶಾಸ್ತ್ರಪಾಲನ ॥ ೨

ಭಂಗಭೂಪಾಲ ರಕ್ಷಿಪುದನಾ
ಹಿಂಗಿತ ಜನರೆಲ್ಲ ಮೋಹದೇವನ
ಶೃಂಗಾರಹಾರನುಳಿದಾತನ ನಮ್ಮ
ಭಂಗವಾಡಿಯ ಶಾಂತಿ ಜಿನರಾಜನ॥ ೩

## ೧೭. ಕರುಣಿಸೆನ್ನನುಶಾಂತಿ

ಕರುಣಿಸೆನ್ನನು ಶಾಂತಿ ಜಿನನಾಥ ಬೇಗ
ಕರುಣಿವಿಲ್ಲದೆ ಮೋಹಾಸುರ ಎನ್ನ ಕೊಲ್ಲುವಾ ॥ ಪಲ್ಲವಿ

ಮೂರು ಮೂಢವ ತುಳಿದೆ ಮೂರು ರನ್ನವ ತಳೆದೆ
ಮೂರಾರು ದೋಷಗಳ ಬೇರ ಹರಿದೆ
ಮೂರು ಮೂಢದಿ ಬಿರ್ದ್ದು ದೇವ ನಾ ಮರೆದೆ
ಮೂರಾರು ಭವದೊಳಗೆ ಸಲಹೆನ್ನ ತಂದೆ ॥ ೧

ನಾಲ್ಕು ಗತಿಯನು ತಡೆದೆ ನಾಲ್ಕು ಪದವಿಯ ಪಡೆದೆ
ನಾಲ್ಕೇಶ ನಿಂ ಪೂಜೆ ತಳೆದು ನೀನಿರುವೆ
ನಾಲ್ಕು ಗತಿಯೊಳು ಸಿಲ್ಕಿ ತೊಳಲಿ ಬಳಲುತ ಬಂದೆ
ನಾಲ್ಕಾರು ಭವದೊಳಗೆ ಕಡೆ ಹಾಯೊ ಮುಂದೆ ॥ ೨

ಪಂಚಾಸಂಸಾರವನು ಸಂಚಿನಿಂದಲಿ ಗೆಲಿದೆ
ಪಂಚಸ್ತಿಕಾಯಗಳ ಬೇಧವನು ತಿಳಿದೆ
ಪಂಚಸಂಸಾರವೆಂಬಗ್ನಿಯೊಳು ನಾ ಬಹು ಬೆಂದೆ
ಪಂಚಮ ಚಕ್ರಿ ಕಡೆಹಾಯೊ ಜಿನತಂದೆ ॥ ೩

ಅರನಾಯತ ಸೇವೆ ಸಪ್ತ ವ್ಯಸನವ ಹರಿದೆ
ದೂರದಿಂ ಅಷ್ಟಮದಗಳನು ನೀ ಗೆಲಿದೆ
ದುರುಳತನದಲಿ ನಾ ಸಪ್ತವೆಸನದಲಿ ಸಿಲಿಕಿರುವೆ
ಸಾರಸಜ್ಜನ ಪ್ರಿಯನೆ ಸಲಹೆನ್ನ ಜಿನರಾಜ ॥ ೪

ಕ್ಷಿತಿಯೊಳತಿಶಯವಾದ ಕಾನಪುರದೊಳಗೆಸೆವ
ಅತಿಶಯದೊಳಗೆಸೆದಿರುವ ಬಸದಿಯೊಳು ನೆಲೆಸಿ
ಮತಿಯಿತ್ತು ಭವ್ಯರಿಗೆ ಕೃಪೆಯಿಂದ ಸಲಹುತಿಹ
ಅತಿಶಯದ ಶಾಂತಿ ಜಿನ ನೀಯೆನ್ನ ಸಲಹೊ ॥ ೫

## ೨೮. ಶ್ರೀನೆಯ್ಯೆನೆರಿಸುವ

ಶ್ರೀನೆಯ್ಯೆನೆರಿಸುವ ಬನ್ನಿರೊ ಶ್ರೀ ನೇಮಿ
ಜಿನರಿಗೆ ಶರಣು ಶರಣೆಂಬ ಮುತ್ತೈದೆಯರು ನೆಯ್ಯೆನೇರಿಸು ಬನ್ನಿರೋ ॥ ಪಲ್ಲವಿ

ಹಸ್ತಿನಿ ಚಿತ್ತಿನೀ ಮತ್ತೆ ಶಂಕಿನಿ ದೇವ
ಉತ್ತಮಾಪದ್ಮಿನಿ ಭೂಮಿದೇವಿ
ರತ್ನದ ಹೊಂಬಟ್ಟಲೊಳೊಮ್ಮೆಣ್ಣೆ ತಕ್ಕೊಂಡು ‖ ೧

ಇಂದು ಮುತ್ತೈದೆಯರು ಮಿಂದು ಮಜ್ಜನವಾಗಿ
ಗಂಧಕದಂಬವ ಮೈಯಸೂಸಿ
ಮಂದಾರಮಲ್ಲಿಗೆಯ ತಂದು ತುರುಬಿಗೆ ಸೂಡಿ ‖ ೨

ಪದಕಮಣಿ ಚಿಂತಾಕುಪದ್ಮರಾಗದ ವಾಲೆ
ಒದಗಿದ ಮುತ್ತಿನ ಬೊಟ್ಟನಿಕ್ಕಿ
ಮಂದ ಗಜಗಮನೆಯರು ನಡುಸಣ್ಣ ಜಾಣೆಯರು ‖ ೩

ನೆನಗಡಲೆ ತಂಬಿಟ್ಟು ಗೊನೆಯ ಬಾಳೆಯ ಹಣ್ಣು
ಶ್ರೀನೇಮಿಜಿನರಿಗೆ ಮನದಿ ಭಜಿಸಿ
ಕನ್ನೆಮುತ್ತೈದೆಯರ್ಗೋಲಿದು ಬಾಗಿನವ ಕೊಟ್ಟು ‖ ೪

ಗುರುಗುಂಜಿ ಬೆಟ್ಟದಲಿ ನವಿಲುಗಳು ನಲಿವಂತೆ
ಆ ಗರಿಕೆಯ ಕುಂಚ ಹಿಡಿದು
ಆಕಾಶ ಉಂಗುಷ್ಟದಿಂದಾಡಿದೆವು ಎಳ್ಳೆಣ್ಣೆ ತಕ್ಕೊಂಡು ‖ ೫

## ೨೯. ಪೂಜಿಪೆನುನೇಮಿನಾಥನ

ಪೂಜಿಪೆನು ನೇಮಿನಾಥನ ಭವತಾಪ ಹರನ
ಪೂಜಿಪೆನು ನೇಮಿನಾಥನ ‖ ಪಲ್ಲವಿ

ಜಲಗಂಧಾಕ್ಷತೆ ಪುಷ್ಪ ಸುಲಲಿತ ಮನದಿಂದ
ಜಲಜ ಸುತನ ಗೆಲ್ದ ಕಲಿವಾರಿ ಜಿನಪನ ‖ ೧

ಪರಮಾನ್ನ ಪಾಯಸ ವರ ಭಕ್ಷ್ಯ ಸಹಿತದಲಿ
ಅರುಹನಿಗರ್ಚಿಸುವೆ ವರಮೋಕ್ಷಯಹುದೆಂದು ‖ ೨

ದೀಪಧೂಪಗಳನ್ನು ಸುಪವಿತ್ರ ಮನದಿಂದ
ಸ್ವಫಲವಾಗಲಿಯೆಂದು ಪಾಪಹರಗರ್ಪಿಸುವೆ ‖ ೩

ಕದಳಿ ಕರ್ಜೂರ ದ್ರಾಕ್ಷಿ ಫಲ ದಾಳಿಂಬ
ಮೃದುಫಲ ಅರ್ಚಿಸುವೆ ಮದನಾರಿ ಜಿನಪಗೆ ‖ ೪

ಅರ್ಗ್ಯಪಾದ್ಯಗಳಿಂದ ಜಗದತಿ ದೇವನಿಗೆ
ಸುಗಂಧಪುಷ್ಪಾಂಜಲಿಯ ಸೊಬಗಿಂದಲರ್ಚಿಸುವೆ ॥ ೫

ಸುರನರೊರಗವಂದ್ಯ ಸುರಗಣಸೇವಿತಗೆ
ಹರುಷದಿಂದಲಿ ಶಾಂತಿದಾರೆಯನರ್ಚಿಸುವೇ ॥ ೬

ಧರೆಯೊಳಗಧಿಕವಾದ ವರಚಂದ್ರಗಿರಿಯೊಳು
ಹರುಷದಿ ನೆಲಸಿಹ ವರನೇಮಿನಾಥನನು ಪೂಜಿಪೆ ॥ ೭

## ೩೦. ಜಯಫಣಿಪತಿಪಣಿಸೂನು

ಜಯ ಫಣಿಪತಿ ಪಣಿಸೂನು ವಂದಿತ ಪಾದ
ಜಯನಾಥ ಪತಿನುತ ಚರಣ
ಜಯಮುನಿ ಜನವಂದಿತ ಕ್ರಮಕ್ರಮವಾನೆ
ಜಯಜಯ ಶ್ರೀ ನೇಮಿನಾಥ ॥ ೧

ಜಯ ಗರ್ಭಾವತರಣ ಕಲ್ಯಾಣೇಶ
ಜಯಜಯಯೆಂದರಾದಿ ಮಸ್ತಕದೊಳು
ನಯವೆತ್ತ ಬಟ್ಟ ಪಾಲ್ಗಡಲ ನೀರನು ಮಿಂದೆ
ಜಯ ಜಯ ಶ್ರೀ ನೇಮಿನಾಥ ॥ ೨

ಜಯ ಬ್ರೂಹದುರ್ಜಯಾಂತ ಗಿರಿಯರ್ನದೊಳು
ಜಯಸಿ ನಮಸ್ತು ಕರ್ಮವನು
ಜಯವೆನಲು ಸುರವಂದ್ಯ ಲೋಕಾಗ್ರಕೂಗೆದಿರ್ದ
ಜಯ ಜಯ ಶ್ರೀ ನೇಮಿನಾಥ ॥ ೩

ಜಯಕವಿ ಮಂದರ ಜಯ ಮೇರು ಕವಿಧೀರ
ಜಯ ಜಯ ಶ್ರೀ ನೇಮಿನಾಥ ಎಂದಿಂತು
ಜಿನಪನ ಸ್ತುತಿಸಿ ವಸ್ತ್ರಾದಿಗಳಿಂದ
ಪೂಜಿಸಿ ಮುನಿಗಣವ ॥ ೪

## ೩೧. ಮಂದಾರಗಿರಿಯಲ್ಲಿಮಿಂದ

ಮಂದಾರ ಗಿರಿಯಲ್ಲಿ ಮಿಂದ ಮಹಿಮನಹುದೊ ಜಯ ಜಯ
ಮಂದಾರ ಗಿರಿಯಲ್ಲಿ ॥ ಪಲ್ಲವಿ

ಕಡಲು ಹೆಚ್ಚೆ ಗಾಳಿ ಘಮ್ಮನೆ ತೀಡಲು
ಒಡನೆ ದಿಕ್ಕು ಚೊಕ್ಕವ ಮಾಗೆ
ಬಿಡದೆ ಕಲ್ಪತರು ಪುಗೆದೊರಲು ಜಗ
ದೊಡೆಯನ ಪಡೆದಳು ಶಿವದೇವಿ ॥ ೧

ಒಂದು ಲೋಕದ ಶಂಖ ಬೋಂ ಬೋಂ ಬೋಂರೆನ
ಲೊಂದು ಲೋಕದ ಭೇರಿ ಬಾರಿಸಲು
ಒಂದು ಲೋಕದ ಘಂಟೆ ಢಂಡಂ ಢಣರೆನುತ
ಒಂದು ಲೋಕದ ಸಿಂಹನಾದಗಳು ॥ ೨

ಸಗ್ಗಿಗರಾಸನ ನಡುಗಲಿದೆವೆಂದು
ಭೋಗ್ಗನೆದ್ದು ಕೈಗಳ ಮುಗಿಯೆ
ಸ್ವರ್ಗದೊಡೆಯ ಇಂದ್ರಾಣಿಯನೊಡಗೊಂಡು
ಸಗ್ಗಿಗರೆಲ್ಲ ಸಹಿತ ಸಹಿತ ಬಂದು ॥ ೩

ಇಂದ್ರನೈರಾವತ ಗಜವೇರಿಯೇ ಬಂದು
ಒಂದನ ಮಾಲೆಯ ಮುಂದೆ
ನಿಂದು ಶಚಿದೇವಿಯನೊಳಹಗಿಸಲು
ತಂದು ಕೊಟ್ಟಳು ಜಿನಬಾಲಕನ ॥ ೪

ಮೂವತ್ತೆರಡು ಮುಖದ ದಂತಂಗಳು ಸ
ರೋವರ ಕಮಲದ ಅಂಗಳಲ್ಲಿ
ದೇವಾಂಗನೆಯರು ನರ್ತಿಸುತಿರಲೈ
ರಾವತ ಗಜಕುಣಿಯತ ನಡೆಯೆ ॥ ೫

ಹರಿವ ನೆಗೆವ ನೆಲದಲ್ಲಿ ಕುಪ್ಪಳಿಸುವ
ಕರವ ಮುಗಿವ ಹರುಷದಿ ಕುಣಿವ
ಕರವ ಮುಗಿವ ಗಗನಕೆ ಲಂಘಿಸುವ
ಸುರಸಂತತಿಯ ಸಂದಣಿ ನಡೆಯೆ ॥ ೬

ಸುರಶೈಲದ ಪಾಂಡುಕ ಶಿಲೆಯೊಳ್ತಂದಿರಿಸಿ
ಮೆರೆವ ಜಿನಬಾಲಕನ ಅಮರೇಂದ್ರರು
ನೆರೆದಿಕ್ಕಲ್ಲದಲಿ ನಿಂದರು
ಹರಿಗಭಿಷೇಕವನೆಸಗಿ ॥ ೮

ಕ್ಷೀರಾಂಬುದಿ ನೀರನೆ ಮೊಗೆಮೊಗೆದು
ಓರೋರವರ ಕೈಗಳಲಿ

ಸಿರಿ ಕೊಡುವ ಕೊಳುವತಿ ಸಂಭ್ರಮದಿಂ
ದಾರುಣಿಗಾಯಿತ್ತ ಹೊಸಗಂಗೆ ॥ ೯

ಸುರರಭಿಷ್ಟಿತವ ಮಾಡಿದ ಕ್ಷೀರವು
ಸುರಗಿರಿಯಿಂದಿಳಿತರುತಿರಲು
ವರ ಕನಕಜ್ವಲವಾದುದು ಬಿಳಿಯ
ಗಿರಿಯಿಂದ ಆಚಾರ್ಯ್ಯಮದಿಳೆಗೆ ॥ ೧೦

ಇಂದ್ರಶತಂ ನೆರದಭಿಷೇಕವನು ಜಿ
ನೇಂದ್ರಗೆಸಗಿ ಮುನಿಯಲೊಡನೆ
ಇಂದ್ರಾರ್ಚಿತ ದಿವ್ಯಾಭರಣಗಳನು
ಇಂದ್ರನ ಸತಿ ತಂದು ತೊಡಿಸಿದಳು ॥ ೧೧

ಹಾಡಿ ದಣಿಯರು ಕೆಲಂಬರಲ್ಲಿ ನೃತ್ಯ
ನಾಡಿ ದಣಿಯರು ಕೆಲಂಬರಲ್ಲಿ
ನೋಡಿ ನೋಡಿ ಜಿನಪುಂಗವನನು ಕೊಂ
ದಾಡಿ ದಣಿವರು ಕೆಲಂಬರಲ್ಲಿ ॥ ೧೨

ತಮತಮರ್ಚಿಸಿ ಪೂಜಿಸಿ ಪೊಡ
ಮಮಯೆಂದು ಮಹಿಮೆಯ ಹೊಗಲಿ
ಅಮರೇಂದ್ರರು ಜಿನಶಿಶುವಿಗೆ ಹೆಸರಿಟ್ಟು
ಅಮರಗಜದ ಬೆನ್ನಿಗೆ ತಂದು ॥ ೧೨

ಭವನ ವಿಮಾನವು ಜ್ಯೋತಿರ್ವೆಂತರ
ದಿವಿಜರ್ನೆರೆದೆಂತೆನಲು
ಭುವನಚ್ಚರ್ಯ್ಯವೆನಲು ಜನಜನನಿಯ
ಭುವನಕ್ಕೆ ತಂದರು ಜಯ ಜಯವೆನುತಾ ॥ ೧೪

ಜಿನಜನನಿಯನಭಿವಂದಿಸಿ ಬಳಿಕಾ
ಜಿನಜನಕನ ನೆನೆಕೊಂಡಾಡಿ
ಜಿನಪತಿಯನು ಬೀಳ್ಕೊಂಡೈದಿದರಾ
ದನುಜಾರ್ತ್ತತಮಿರ್ದೆಡೆಗೆ ॥ ೧೫

ಜನ್ಮ ಜರಾಮರಣಂಗಳ ಭೀತಿಯನೊ
ಮೊದಲೊಳೆ ತೊಲಗಿಸು ಓಡಿಸು
ಮನ್ಮಥಹರ ನೇಮಿಶ್ವರಗೆಸಗಿದ
ಜನ್ಮಾಭಿಷೇಕವು ಕಲ್ಯಾಣ ॥ ೧೬

## ೩೨. ನೇಮಿಜಿನೇಶ್ವರಸ್ವಾಮಿ

ನೇಮಿಜಿನೇಶ್ವರಸ್ವಾಮಿ ಕೇಳಿಮನವೊಲಿದು
ನೇಮೀಶ್ವರಸ್ವಾಮಿ ಪದವಿಯನು ॥ ಪಲ್ಲವಿ

ಭವ್ಯಾಬ್ಜ ಭವಭಯ ಹರಣನೆ
ಭವ್ಯವು ಸುಖವೀವ ಜಿನರಗೊಂದನೆ ಮಾಡಿ ॥ ೧

ವರಪಂಚಗುರುಗಳ ಸ್ಮರಿಸುತ ಮನದೊಳು
ಉರುತರ ಪದವಿಯ ಪಡೆಯಬೇಕೆನುತಲಿ ॥ ೨

ಜಿನ ಮುಖಾಂಬುಜದೊಳಗುದಿತ ಬಾರದೆ ಎನ್ನ
ಮನವಚನದಿ ಸ್ಮರಿಸುತ ವರಗಳ ಬೇಡಿ ॥ ೩

ವೃಷಭನನಾದಿ ಹೆತ್ತ ಮಗಣದರರಂತ್ಯ
ರುಷಿಗಳಿಗೆರಗಿ ಬೇಡುವೆ ಮತಿಯೀಯಲೆಂದು ॥ ೪

ಜಿನಯಕ್ಷ ಯಕ್ಷಿ ಶಾಸನ ದೇವಿಯರನ್ನು
ಅನುನಯನದಿಂ ಬಲಗೊಂಡು ಜಪಿಸಿದೆನು ॥ ೫

ನೇಮಿನಾಥನ ಪಂಚಕಲ್ಯಾಣವನು ಹೇಳ್ವೆ
ನೇಮದಿಂದ ಶಮಭವಗಳು ಸಹಿತವಾಗಿ ॥ ೬

ವರಜಂಭುದ್ವೀಪದ ಪೂರ್ವವಿದೇಹದೊಳು
ದುರುತರ ಪುಷ್ಕಳ ವಿಷಯ ದೇಶದೊಳಿಹೆ ॥ ೭

ಜಾಳಾಂತಕವೆಂಬ ಕಾನನವಿಹುದಲ್ಲಿ
ಕಳನ ಪರಕಿಣಿಯೆನಿಸಿ ಗುರ್ಣಿಸುತಲಿ ॥ ೮

ಅದರಧಿಪತಿ ವಿಂದ್ಯಕನೆಂಬ ಶಬರನು
ಸುದತಿಯಾದಳು ವಾಗುರೆಯೆಂಬ ಹೆಸರಿಂದ ॥ ೯

ಕ್ರೂರನು ಭೀಕರಾಕಾರ ದುರ್ಮನವನು
ಸಾರಿ ಇರುತಲಿರುತಿರಲೊಂದು ದಿನದೊಳು ॥ ೧೦

ಸತಿಯ ಸಹಿತ ಶಬರನು ಕಾನನದೊಳು
ಪತಿಸುತ ಘೋರ ಮೃಗವ ಬರುತಿರುವಾಗ ॥ ೧೧

ಅಮಲಬುದ್ಧಿಗಳು ವಿಮಲ ಬುದ್ಧಿಗಳೆಂಬ
ಅಮಲಜ್ಞಾನಿಗಳು ಯೋಗದೊಳಿರುತಿರೆ ಕಂಡಾ ॥ ೧೨

ಮಾನವ ರೂಪಿನ ಮೃಗವೆಂದು ಶಬರನು
ಉನ್ನತ ಮನದಿಂದ ಶರವ ಕರ್ಣಕೆಸೆದೆ ॥ ೧೩

ಸತಿಲಾಗುರೆ ಕಂಡು ಅತಿನೋವುತ ಬಂದು
ಪತಿಯ ಕರವ ಪಿಡಿದತಿ ಶಂಕಿಸುತಲಿ ॥ ೧೪

ಅವರು ಮೃಗಗಳಲ್ಲ ಮಹಾಮುನಿಗಳುಯೆಂದು
ಅವನು ಸಹಿತವಾಗಿ ಮುನಿಗೆ ವಂದನೆ ಮಾಡಿ ॥ ೧೫

ಅವರಿರ್ವರಿಗೂ ಮುನಿಗಳು ಹರಸಲಾಗಿ
ಸುವಿನಯದಿಂದ ಪತಿಗಳು ಹರುಷದಿಂದ ॥ ೧೬

ಧರ್ಮವ ಕೇಳಿ ಬಳಿಕ ಮನದಲ್ಲಿ ಭವ್ಯ
ದುರ್ಮನವನು ಹರಿಸಿದ ಸಮ್ಯಕ್ತ್ವವು ಹುಟ್ಟಿ ॥ ೧೭

ಅಣುವೃತ ಮೊದಲಾಗಿ ಹಿಂಸಾವೃತವಕೊಂಡು
ಪ್ರಣುತವಾಗಿ ನಾಡ ಸುತ್ತುತ ತನುವನ್ನು ಬಿಟ್ಟು ॥ ೧೮

ಅವಿಷಯದ ಮಂದರಕಿನಿ ಪುರದೊಳು
ಭಾವಜ ರೂಪ ವೈಶೋತ್ತಮ ಜಿನಪರ ಭಕ್ತಾ ॥ ೧೯

ಋಷಭದತ್ತನು ಎಂಬ ಪರದನಾಥನ ಸತಿ
ಶಸಿನಿ ಭವದನೆ ರತಿಗೆ ಸಮಯೆನಿಪಳು ॥ ೨೦

ಜಿನಪದ ಭಕ್ತೆಯ ಘನಶೀಲವತಿ ಬಂದೂ
ಜನಕೆ ಸಂಪ್ರೀತೆ ಪದ್ಮಶ್ರೀಯೆಂಬಳು ॥ ೨೧

ಅವರ ಗರ್ಭದಿ ವಿಂಧ್ಯಕನು ಬಂದುದಿ ಸಖಾ
ಅವನಿಗೆ ವಿಭ್ರುಕೇತುಯೆಂಬ ಹೆಸರಿಡೆ ॥ ೨೨

ನವಯುವ್ವನವ ಪಡೆದ ವಿಭ್ರುಕೇತುವಿಗೆ
ಯುವತಿಯಾದಳು ಸೌಂದರಿಯೆಂಬ ರಮಣಿಯು ॥ ೨೩

ಸಾರಸುಖವನುಭವಿಸುತ್ತಲನುದಿನ
ಸಾರ ಹೃದಯ ನಿರುತಿರವೊಂದು ದಿನದೊಳು ‖ ೧೪

ನಿರ್ಮಲಧರರೆಂಬ ಮುನಿಗಳು ಬರಲಾಗಿ
ಧರ್ಮಧರ್ಮವಕೇಳಿ ವೈರಾಗ್ಯ ಪರನಾಗಿ ‖ ೧೫

ಸುತನು ಸುಕೇತು ಎಂಬವಗೆ ರಾಜ್ಯವಕೊಟ್ಟು
ಅತಿ ಮುದದಿಂ ದೀಕ್ಷೆ ಪಡೆದು ಮುನಿಗಳಲ್ಲಿ ‖ ೧೬

ಉಗ್ರೋಗ್ರದಿಂದ ತಪಸು ಮಾಡಿ ತನುವ ಬಿಟ್ಟು
ಶೀಘ್ರದಿಂದಲಿ ಹೋಗಿ ಸೌಧರ್ಮದಲಿ ಹುಟ್ಟಿ ‖ ೧೭

ಶ್ರೀಧರನೆಂಬ ನಾಮವನು ಪಡೆದು ಮತ್ತೆ
ಆದರಿಸುತ ದಿವ್ಯಸುಖದೊಳಗಿರಲಿತ್ತು ‖ ೧೮

ಪಡುವಣ ಪುಷ್ಕರಾ ದೀಪದೊಳಗಿರುತಿಹ
ಪಡೆದತಿ ಶೋಭೆಯೊಳಿರುವ ವಿದೇಹದಿ ‖ ೧೯

ಗಂಧಿಳ ವಿಷಯದೊಳಿಹ ವಿಜಯಾರ್ಧದಾ
ಅಂದವಡೆದ ಉತ್ತರ ಶ್ರೇಣಿಯೊಳಗಿಹ ‖ ೨೦

ಅಮರೇಂದ್ರನ ಪುರಕೆಣೆಯೆಂದೆನಿಸುತ
ಅಮಿತ ಸಿರಿಯೊಳಿರುತಿಹ ಸೂರ್ಯ ಪ್ರಭೆಯೆಂಬ ‖ ೨೧

ಪಟ್ಟಣದಧೀಪತಿ ಸೂರ್ಯ ಪ್ರಭನುಯೆಂಬ
ದಿಟ್ಟನಾಥನ ಪಟ್ಟದರಸಿ ಗಾಂಧಾರಿಯು ‖ ೨೨

ಅವರ ಗರ್ಭದಿ ವಿಭ್ಯಕೇತು ಚರದೇವಾ
ಕುವರನಾದನು ಚಿಂತಾಗತಿ ಹೆಸರಲಿ ‖ ೨೩

ಬಾಲಕ ಹಲವು ಸೆಲೆ ಸಕಲ ವಿದ್ಯೆಗಳನೂ
ಲೀಲೆಯಿಂ ಕಲಿತು ಸುಖಾಸುಧೆಯೊಳಗಿರೆ ‖ ೨೪

ಸ್ತ್ರೀಯ ಕಥನದಿಂದ ಹೇರ ಮನಸನಾಗಿ
ಸ್ಯೆಯಮಿಯಾಧಾರದಿಂದ ದೀಕ್ಷೆಯಗೊಂಡು ‖ ೨೫

ದ್ವಾದಶ ತಪದೊಳಗಾಚರಿಸುತ ಮುನಿ
ಆದರದಿಂ ಸನ್ಯಾಸನದಿ ತನುವ ಬಿಟ್ಟು ‖ ೨೬

ಮಹೇಂದ್ರ ಕಲ್ಪವೆಂದೆಂಬ ಸ್ವರ್ಗದಿ ಪುಟ್ಟಿ
ಮಹಿಮನು ಸುಖಸುಧೆಯಿಂದಿರುತಿರಲಿತ್ತ ॥ ೩೭

ಜಂಬೂದ್ವೀಪದೊಳಿಹ ಭರತಾರ್ಯ ಖಂಡದ
ಇಂಬಾಗ ಚಪ್ಪನ್ನದೇಶಕೆ ಅತಿಶಯವಾದ ॥ ೩೮

ವಾತ್ಸಲ್ಯ ವಿಷಯಕೆ ಅತಿಲೋಭೆಯೊಳಗಿಹೆ
ಶತಪತ್ರಮಿತ್ರನ ಪುರಕೆಣೆಯೆನಿಸಿಹೆ ॥ ೩೯

ಸಿಂಹಪುರವುಯೆಂಬ ಪಟ್ಟಣದೊಳಗಿಹ
ಸಿಂಹ ಪರಾಕ್ರಮಿ ಶಶಿಶಾಂತ ಸ್ಮರ ರೂಪಾ ॥ ೪೦

ಜಿನಪದ ಸರಿಸಿ ಬೃಂಗನೆಂದೆನಿಪನೂ
ಘನಮುನಿ ಜನಕೆ ತಾ ಸುರಧೇನುಯೆನಿಸುವಾ ॥ ೪೧

ಅರಘದಸನುಯೆಂಬ ಧರಣೀಶ್ವರನಿಗೆ
ಅರಸಿಯಾದಳು ಜಿನದತ್ತೆ ಸುಶೀಲೆ ಜಾತೆ ॥ ೪೨

ಇಂತೆಸೆದಿಹ ದಂಪತಿಗಳು ಹರುಷದಿ
ಕಂತು ವಿಜಯ ಜಿನರಾಜನ ಪೂಜೆಯ ಮಾಡಿ ॥ ೪೩

ಅವರ ಗರ್ಭದಿ ಚಿಂತಾಗದಿ ಚರದೇವ ಬಂದೂ
ಕುವರನಾದನು ಅಪರಾಜಿತಾ ನಾಮದಿ ॥ ೪೪

ನವಯೌವ್ವನವ ಪಡೆದ ಅಪರಾಜಿತಗೆ
ಯುವತಿಯಾದಳು ಪ್ರೀತಿಮತಿಯೆಂಬ ನಾಮದಿ ॥ ೪೫

ಪುತ್ರನುದಿಸಿದನು ಪ್ರೀತಿಂಕುರನುಯೆಂಬ
ಪುತ್ರ ಪಾತ್ರರುಗೂಡಿ ಸುಖದಿಂದಲಿರಲೊಂದು ॥ ೪೬

ದಿನದೊಳು ಬಿಜಯಂಗೈದರು
ಧ್ಯಾನಕ್ಕೆ ನವಪದಾರ್ಥವ ತಿಳಿದತಿಶಯ ಮುನಿಗಳು ॥ ೪೭

ಬಂದರುಯೆಂಬುದ ಕೇಳಿ ರಾಜೇಂದ್ರನು
ವಂದನೆಯನು ಮಾಡಿ ಧರ್ಮತತ್ವವ ಕೇಳಿ ॥ ೪೮

ನಿರ್ವೇಗಪರನಾಗಿ ಸಕಲ ಸಾಮ್ರಾಜ್ಯವ
ಸರ್ವಧಿಕಾರವ ಅಪರಾಜಿತಗೆ ಕೊಟ್ಟು ॥ ೪೯

ಮುನಿವರನಿಂದ ದೀಕ್ಷೆಯ ಕೊಡು ತಪದಿಂದ
ಅನಘನು ಪಡೆದ ಗಂಧಕುಟ್ಟಿ ಪದವಿಯ ॥ ೫೦

ಧರ್ಮಾವೃತವ ಭವ್ಯ ಜನರಿಗೆ ಪೇಳುತ
ಕರ್ಮಕ್ಷಯವ ಮಾಡಿ ಮುಕ್ತಿಗೆ ಸಂದ ದೇವಾ ॥ ೫೧

ಅಮರೇಂದ್ರನು ಬಂದು ನಿರ್ವಾಣ ಪೂಜೆಯ
ಅಮರೇಂದ್ರ ಮಾಡಿ ಹೋದುದ ಕೇಳು ಕುವರನು ॥ ೫೨

ದರುಶನವನು ಮಾಡಿ ಬರುವ ಪರಿಯಂತರವು
ಹರುಷದಿಂದನಶನವನು ಕೊಳ್ಳನೆನುತಲಿ ॥ ೫೩

ವೃತವ ಧರಿಸಿ ಅಪರಾಜಿತ ಕುವರನು
ಉತ್ತರಮುಖವಾಗಿ ದಳವು ಸಹಿತ ನಡೆಯೆ ॥ ೫೪

ಸುರಪತಿ ತಿಳಿದು ಕುಭೇರಗೆ ಬೆಸಸಿದ
ಉರುತರ ವೃತವನು ತೀರಿಸಿಕೊಡುಯೆಂದು ॥ ೫೫

ಧನಪತಿ ಬಂದು ರಚಿಸಿ ಗಂಧಕುಟ್ಟಿಯನು
ಅನುನಯದಲಿ ಕುವರನಾ ವೃತವನು ಅರ್ಚೆ ॥ ೫೬

ತನ್ನ ಪ್ರತಿಜ್ಞೆ ತೀರಲು ಕುವರನು ಮತ್ತೆ
ತನ್ನ ಪುರಕೆ ಬಂದು ಸುಖದಿಂದಲಿರುತಿರೆ ॥ ೫೭

ಒಂದಾನೊಂದು ದಿವಸವು ಧ್ಯಾನದೊಳಿಹ
ಚಂದದಿ ಸಮೆದ ಮುತ್ತಿನ ಚೈತ್ಯಾಲಯದೊಳು ॥ ೫೮

ದರುಶನವನು ಮಾಡಿಕೊಂಡು ಮಂಟಪದೊಳು
ಹರುಷದಿ ಕುಳಿತಿಹ ಸಮಯದೊಳೆಚ್ಚರನು ॥ ೫೯

ಮುನಿಗಳು ಬಂದರು ಮಿತಗತಿಯ ಮಿತಗತಿ
ಘನತರ ಜಿನರ ಸ್ತುತಿಸಿ ಬಂದು ಕುಳಿತರು ॥ ೬೦

ಅಪರಾಜಿತರಾಜನು ಕಂಡು ನಮಿಸಿ ತಾ
ಅಪರಮಿತವನೊಳು ಧರ್ಮ ತತ್ವವ ಕೇಳಿ ॥ ೬೧

ತನ್ನ ಭವವ ಕೇಳಿ ವೈರಾಗ್ಯವನು ತಾಳಿ
ತನ್ನ ಮಗನು ಪ್ರೀತಿಂಕರಗೆ ರಾಜ್ಯವ ಕೊಟ್ಟು ॥ ೬೨

ಘನತರವಾಗಿ ನಂದೀಶ್ವರ ನೋಂಪಿಯ ಮಾಡಿ
ಘನ ಮಹಿಮನು ದೀಕ್ಷೆವಡೆದ ತಪಕೆ ನೀವೆ ॥ ೬೩

ಸನ್ಯಸನ ವಿಧಿಯಿಂದ ತನುವ ಬಿಟ್ಟು
ಉನ್ನತಚ್ಯುತ ಕಲ್ಪದೊಳಗೆ ಜನಿಸಿದರು ॥ ೬೪

ಮನಸ ಪ್ರವಿಚರ ಸುಖವನುಭವಿಸುತಾ
ಸಾನುರಾಗದಿ ಅಚ್ಯುತ ಕಲ್ಪವನು ಬಿಟ್ಟು ॥ ೬೫

ಜಂಭೂದ್ವೀಪದ ಭರತಾರ್ಯ್ಯ ಖಾಂಡದೊಳಗಿಹ
ಇಂಬಿನ ಕುರುಜಾಂಗಣ ವಿಷಯದೊಳಿಹ ॥ ೬೬

ಹಸ್ತಿನಪುರದಧಿಪತಿ ಆ ಚಂದ್ರನೃಪಾ
ವಿಸ್ತಾರದಿಂ ರಾಜ್ಯವನಾಳುತಿರಲಾಗ ॥ ೬೭

ಆ ನೃಪತಿಯ ಪಟ್ಟದರಸಿ ಶ್ರೀಮತಿಯೆಂಬ
ಮಾನುನಿ ಜಪದ ಭೃಂಗೆಯೆಂದೆನಿಪಳು ॥ ೬೮

ಪುತ್ರನಾ ತಡೆಯಬೇಕೆನುತ ದಂಪತಿಗಳು
ಚಿತ್ತಶುದ್ಧದಿ ಜಿನೇಂದ್ರವಂದನೆ ಮಾಡಿ ॥ ೬೯

ಅವರ ಗರ್ಭದಿ ಅಚುತೇಂದ್ರ ಒಂದು ದಿನವು
ಅವನಿಗೆ ಸುಪ್ರತಿಷ್ಠನುಯೆಂಬ ಹೆಸರಿಡೆ ॥ ೭೦

ಶೋಡಷ ಪ್ರಾಯವಾಗಲು ಸುಪ್ರತಿಷ್ಠನಿಗೆ
ಮಡದಿಯಾದಳು ನಂದನದೇವಿಯೆಂಬಳು ॥ ೭೧

ಆ ಪುಣ್ಯದಂಪತಿಗಳವರ ಗರ್ಭದೊಳು
ಚಾಪಲನೇತ್ರೆ ಸುದ್ರುಷ್ಟಿಯೆಂಬವ ಹುಟ್ಟಿ ॥ ೭೨

ರಾಜ್ಯಭಾರವನಾಳುತಿರಲನುದಿನಾ
ರಾಜನು ಸೃಷ್ಟಿಯೊಳಿರುತಿರಲೊಂದು ದಿನ ॥ ೭೩

ಉಳ್ಕಪತನು ಕಂಡು ವೈರಾಗ್ಯ ಪರನಾಗಿ
ನಿಷ್ಕಲಂಕನು ಸೂದೃಷ್ಟಿಗೆ ರಾಜ್ಯವಕೊಟ್ಟು ॥ ೭೪

ನಂದನರೆಂಬ ಮುನಿಗಳಿಂದೀಕ್ಷೆಯನಾತೂ ಆ
ನಂದದಿಂದ ತಪಸು ಮಾಡಲನುದಿನ ॥ ೭೫

ಗಿರಿಗಳು ವೃಕ್ಷನದಿಗಳ ಮೂಲದಿ ನಿಂತು
ಸಾರಹೃದಯ ಧರ್ಮಧ್ಯಾನನಿಷ್ಠೆಗಳಿಂದಾ ॥ ೭೬

ಮೂರು ತಿಂಗಳು ಸನ್ಯಾಸನ ವಿಧಿಗಳಿಂದ
ಧೀರನು ಪ್ರತಮಾನುಯೋಗದಿಂದಿರುತಲಿ ॥ ೭೭

ಷೋಡಷ ಭಾವನೆಗಳು ಭಾವಿಸಿ ಮುನಿ
ಕೂಡೆ ತೀರ್ಥಂಕರ ನಾಮವನು ಪಡೆದ ಮತ್ತೆ ॥ ೭೮

ಸಿಂಹ ವಿಕ್ರೀಡಿತ ಘೋರತಪದೊಳಿರ್ದು
ಸಿಂಹ ಸಮಾಧಿ ವಿಧಿಗಳ ತನುವ ಬಿಟ್ಟು ॥ ೭೯

ಮುಕ್ತಿಗೆ ನೆರೆಮನೆಯೆನಿಸುವ ಸರ್ವಾರ್ಥ ಸಿದ್ಧಿ
ಸೂಕ್ತಿಯಿಂದಲಿ ಅಹಮಿಂದ್ರಪದವಿಯನು ॥ ೮೦

ಮೂರು ಅಧಿಕ ಮೂವತ್ತು ಸಗರಕಾಲಾ
ಸಾರಸುಖವನನುಭವಿಸುತಲಿರಲೀತಾ ॥ ೮೧

ಜಂಬುದ್ವೀಪದೊಳಿಹ ಭರತಾರ್ಯ್ಯ ಖಾಂಡದ
ಇಂಬಗಿಯಿರುತಿಹದ್ವಾರಕ ದೇಶದೊಳು ॥ ೮೨

ದ್ವಾರವತಿವೆಂಬ ಪುರವಿರುತಿಹುದಲ್ಲಿ
ದ್ವಾದಶ ಯೋಜನದಗಲ ವಿಸ್ತಾರವೂ ॥ ೮೩

ರತ್ನಮಯದ ಕೋಟೆ ಸೌಧ ಉಪ್ಪರಿಗೆಯುಂ
ನೂತ್ನವಾಗಿಹುದತಿ ಸುರಪುರದಂದದಿ ॥ ೮೪

ಇಂತೆಸೆದಿಹ ಪುರವರಕಧಿನಾಥನು
ಕುಂತು ಸದ್ರುಶ ಸಮುದ್ರ ವಿಜಯರಾಜ ॥ ೮೫

ಶರಣಾಗತ ವಜ್ರ ಪಂಜರವೆನಿಪನು
ಸುರಚಿರಸಮ್ಯಕ್ತ್ವದಿರಯೆಂದೆನಿಪನು ॥ ೮೬

ಇಂತೆಸೆದಿಹ ನೃಪತಿಯ ಪ್ರಾಣವಲಭೆ
ಕಂತುಹರನು ಜಿನಪದ ಭಕ್ತೆ ಕಡುಶೀಲೆ ॥ ೮೭

ಮುನಿಜನ ಪರಿಮಾಲೆ ವ್ರತಗುಣ ಸೈಯುತೆ
ಜನನುತೆ ಬಂದು ಜನಕೆ ಚಿತಾಮಣಿ ॥ ೮೮

ಶಿವದೇವಿಯೆಂಬ ನಾಮದ ಕಡುಶೀಲೆಯು
ನವಮಣಿ ಮುಕುರಂದತಿಹರು ದಂಪತಿಗಳೂ ॥ ೮೯

ಇಂತಿರುತಿಹ ದಂಪತಿಗಳ ಉದರದಿ
ಕಂತುವಿಜಯ ಜಿನಚಂದ್ರನುದಿಪನೆಂದು ॥ ೯೦

ಅವಧಿಯಿಂದರಿದು ಕೆಲವರಿಗೆ ಬೆಸಸಿದಾ
ನವರತ್ನ ವೃಷ್ಟಿಯಾ ಕರೆ ದ್ವಾರಾವತಿಲೆಂದು ॥ ೯೧

ದಿನಪತಿ ಬಂದು ರಾಜೇಂದ್ರನಂಗಣದೊಳು
ದಿನ ಮೂರು ಸಂಜೆಯೊಳಗೆ ಮಳೆಗರೆಯಲು ॥ ೯೨

ಇಂದ್ರನಾ ಬೆಸದಿ ಶ್ರೀ ಹ್ರಿಂಬುದಿ ಲಕ್ಷ್ಮೀಯು
ಬಂದು ಶ್ರೀಜಿನಮಾತೆಯ ಪಾದಕೆರಗಿ ತಾ ॥ ೯೪

ಗಂಗಾನದಿ ಮೊದಲಾದ ಜಲವ ತಂದು
ತುಂಗಸುವರ್ಣ ಕುಂಭದಿ ತಂದೆರೆದರಾ ॥ ೯೫

ಅಭಿಷೇಕವ ಮಾಡಿ ಜಿನಮಾತೆಗೆ ತಾವು
ಅಭಿಮತ ಸಿದ್ಧಿಯು ಮನಗಾಗಲಿಯೆಂದು ॥ ೯೬

ದಿವ್ಯಾಂಬರಗಳನುಡಿಸಿ ಕಂಚುಕಿಯಿಟ್ಟು
ದಿವ್ಯದೇವಿಯರು ಅಭರಣವ ನಿಟ್ಟರೊ ॥ ೯೭

ಕಾಲಲಂದುಗೆ ಗೆಜ್ಜೆ ಕಿರಿವೆಲ್ಲಿ ಮಂತುಕೆ
ಮೇಲೆ ವಢ್ಯಾಣವನಿಟ್ಟು ದೇವಿಯರಾಗಾ ॥ ೯೮

ಕಡಗ ಕಂಕಣ ಭುಜಕೀರ್ತಿ ಭಾಪುರಿಗಳು
ಬೆಡಗಿನ ರತ್ನ ಮುದ್ರಿಕೆಗಳನಿಟ್ಟರು ॥ ೯೯

ಹಾರ ಪದಕ ಮುತ್ತಿನಹಾರ ವ್ರಜದ ಸರ
ತೋರಮುತ್ತಿನ ಹತ್ತಕಟ್ಟು ಚಿಂತಕವನು ॥ ೧೦೦

ಮುತ್ತಿನೋಲೆಯು ಮೂಗುತಿ ಕರ್ಣಪತ್ರಗಳು
ರತ್ನನಿರ್ಮಿತ ಚಳ ತುಂಬು ಬುಗುಡಿಗಳು ॥ ೧೦೧

ರತ್ನಖಚಿತದಯ್ರ್ಯ ಗೆಜ್ಜೆ ಚೌರಿ ತುಂಬಿ ನಿಂದಾ
ನೂತ್ನವಾಗಿಹ ಜಡೆ ಬಂಗಾರಗಳಿಟ್ಟರೂ ॥ ೧೦೨

ಕಣ್ಣಿಗಂಜನವಿಟ್ಟ ಕಮಲ ವಾಸಿನಿಯರೂ
ಕನ್ನೆಯನೊಸಲಿಗೆ ತಿಲಕವನಿಟ್ಟರೂ ॥ ೧೦೩

ಇಂತು ಶೃಂಗರಿಸಿ ದೇವಿಯನು ದೇವಿಯರೆಲ್ಲಾ
ಕಂತುಹರನ ಮಾತೆಗೆ ಛತ್ರ ಚಾಮರವಿಕೆ ॥ ೧೦೪

ಗೀತನರ್ತನ ವಾದ್ಯ ನೂತನರ್ತನಗಳೂ
ಕೃತಿವಡೆದ ಜಿನ ಮಾತೆಗೆ ತೋರಿಸುತಾಗಾ ॥ ೧೦೫

ಇಂತು ಸಂಭ್ರಮದಿಂದ ನವನ್ಮಾಸ ಪರಿಯಂತಾ
ಸಂತೋಷದಲಿ ಜಿನಮಾತೆಯನರ್ಚಿಸಿದರು ॥ ೧೦೬

ಒಂದು ದಿನ ಮಾಣಿಕವ ಪಡೆಯೆ ದೇವಿ
ಚಂದದಾ ರತ್ನಾಭರಣಗಳನಿಟ್ಟರೂ ॥ ೧೦೭

ಚತುರ್ಥದಿವಸದೊಳು ತೀರ್ಥ ಜಲವ ತಂದು
ಅತಿ ಮುದದಿಂದೆ ದೇವಿಗೆ ತಾವೆರೆದರು ॥ ೧೦೮

ದುಗುವಾಂಬರವ ನುಡಿಸಿ ದೇವಿಯರೆಲ್ಲಾ
ದಿಗಿಲನೆ ಪೂಜೆ ಗೃಹಕೆ ಕಳುಹಿದರಾಗ ॥ ೧೦೯

ಸುಪ್ತಿಯೊಳಿರೆ ಅಂತ್ಯಜಾವದ ಕಡೆಯೊಳು
ನಿ ಸ್ತ್ರೀ ಕಂಡಳು ಷೋಡಶ ಸ್ವಪ್ನಂಗಳನು ॥ ೧೧೦

ಇನನುದಯದೊಳೆದ್ದು ತನುವ ಪ್ರಕ್ಷಲಿಸಿ
ಜನನುತೆ ಸರ್ವಾಭರಣ ಭೀಷಿತೆಯೊಳು ॥ ೧೧೧

ಪತಿಯ ಬಳಿಗೆ ಅತಿ ಹರುಷದೊಳಿಂತು
ಪತಿಯೊಳು ತಾ ಕಂಡ ಕನಸುಗಳನು ಹೇಳೆ ॥ ೧೧೨

ಮಡದಿ ಹೇಳಿದ ಮಾತ ಕೇಳಿ ರಾಜೇಂದ್ರನು
ಮಂಡೆಯ ತಡವುತ ಜಿನನುದಿಸುವನೆಂದೂ ॥ ೧೧೩

ಪತಿಯು ಹೇಳಲು ಕೇಳಿ ಅತಿ ಹರುಷವ ತಾಳಿ
ಅತಿ ಮುದದಿಂ ಶಿವದೇವಿಯಿರಲು ಮತ್ತೆ ॥ ೧೧೪

ಮುನ್ನ ಹೇಳಿದ ಅಹಮಿಂದ್ರದೇವನು ಬಂದು
ಚೆನ್ನೆಯ ಉದರಾಬ್ದಿಯೊಳು ಜನಿಸಿದನು ॥ ೧೧೫

ಕಾರ್ತಿಕ ಶುದ್ಧ ಸೃಷ್ಠಿಯು ಉತ್ತಾಷಾಢದೊಳು
ಅರ್ತಿಯೊಳಗೆ ಗರ್ಭಾವತರಣವಾಗೆ ॥ ೧೧೬

ಇಂದ್ರನು ದೇವಸಮೂಹಸಹಿತ ಬಂದು
ಸಂದ ಭಕ್ತಿಯೊಳು ಪೂಜಿಸಿ ಪೊಡಮಟ್ಟು ಹೋಗೆ ॥ ೧೧೭

ಪುಳುಕಿನಾ ಕೊಡದೊಳು ಹೊಳೆವ ಸೊಡರಿನಂತೆ
ಹೊಳೆವುತ ತ್ರಿಜ್ಞಾನಧರ ಮಾತೆಯುದರದಿ ॥ ೧೧೮

ನವಮಾಸ ತುಂಬೆ ಸುರಸುಧೆ ತ್ರಿಯರಾಗ
ಭುವನದೊಳಗೆ ಸಡಗರಿಸುತಲಿರುವಾಗಾ ॥ ೧೧೯

ಶ್ರಾವಣ ಶುದ್ಧ ಸೃಷ್ಟಿಯ ಚಿತ್ರತಾರೆಯೊಳು
ಭಾವಜಹರ ಜಿನರಾಜನುದಿಸಿದನು ॥ ೧೨೦

ಇಂದ್ರನ ಪಾದ ಕಂಪನವಾಗಲು ಜಿನಾ
ಚಂದ್ರನುದಯವ ಸುರೇಂದ್ರನು ತಿಳಿದನು ॥ ೧೨೧

ಸುರಲೋಕದಿ ಘಂಟೆ ನಾಗಲೋಕದಿ ಶಂಕ
ವರಜ್ಯೋತಿರ್ಲೋಕದಿ ಸಿಂಹನಾದವು ॥ ೧೨೨

ವ್ಯಂತರಲೋಕದೊಳಗೆ ಭೇರಿಧ್ವನಿಯಿಂದ
ಕಂತು ವಿಜಯ ಜನನುದಯವ ತಿಳಿದರು ॥ ೧೨೩

ನಾಲ್ಕುವಿಧದ ದೇವಗಣವ ಬರಿಸಿ ಬೇಗ
ನಾಕಧಿಪತಿ ಶಚಿಸಹಿತ ಗಜವನೇರಿ ॥ ೧೨೪

ದ್ವಾರವತಿಯ ಸುರದ ರಾಜಧಾನಿಯ ಸುರಚಿರ
ರಾಜಾಂಗಣದೊಳು ಬಂದು ನಿಲೆ ॥ ೧೨೫

ಲಲನೆ ಶಚಿಯು ಗೃಹವನು ಹೊಕ್ಕು ಕಂಡಳು
ಲಲಿತದಿ ನೀಲವರ್ಣದ ಜಿನ ಶಿಸುವನೂ ॥ ೧೨೬

ಮಾತೆ ಸಹಿತ ಜಿನ ಶಿಸುವನು ಬಲವಂದು
ಸಾತಿಶಯದಿ ಸಾಷ್ಟಾಂಗವೆರಗಿ ನಿಂದು ॥ ೧೨೭

ನಿದ್ರೆಯಾ ಬರಿಸಿ ಮಾಯದ ಶಿಸುವನು ಇಟ್ಟು
ಶುದ್ಧ ಚಿತ್ತದಿ ಜಿನ ಬಾಲಕನನುಯೆತ್ತಿ ॥ ೧೨೮

ಜಿನಶಿಸುವಿನ ಪಾದವ ಪಣಿಯೊಳಗಿಟ್ಟು
ಅನುನಯದಲಿ ತನ್ನ ಪತಿಗೆ ಶಿಸುವ ಕೊಡೆ ‖ ೧೨೯

ಸುರಪತಿ ಜಯಜಯವೆನುತ ಶಿಸುವಕೊಂಡು
ಸಿರದೊಳಗಾಂತು ಪದಗಳ ಪಣಿಯೊಳಗಿಟ್ಟು ‖ ೧೩೦

ಸುರರ ಸಭೆಯು ಜಯಜಯವೆಂದು ನಮಿಸಲು
ಶರಧಿಗೊರ್ನ್ನಿಸುವಂತೆ ಸುರವಾದ್ಯ ಮೊಳಗಿತು ‖ ೧೩೧

ಗಜದ ಸ್ಕಂದಕೆ ಶಿಸುವನು ಬಿಜಮಾಡಿಸಿ
ಭುಜಗಳಿಂದಾಂತು ಕೊಂಡನು ದೇವೇಂದ್ರನೂ ‖ ೧೩೨

ಮುತ್ತಿನಾ ಮುಕ್ಕೊಡೆಯನು ಈಶನೀಂದ್ರನೂ
ಮುಕ್ತಿದಯಕೆ ಜಿನ ಶಿಸುವಿಗೆ ಪಿಡಿದನು ‖ ೧೩೩

ಮೇಗಣವೆರಡು ಕಲ್ಪದ ದೇವೇಂದ್ರರೂ
ಅಗೋಚರಮರ ಅರವತ್ನಾಲ್ಕು ಢಾಳಿಸಿದಾರೂ ‖ ೧೩೪

ಧರಣಿರಾಜನ ಜಿನರಾಜನ ಹೊಗಳುತ
ಉರುತರ ಭಕ್ತಿಯೊಳು ಉರಗದೀಶರು ಸಹ ‖ ೧೩೫

ಜಿನರಾಜನೇರಿದ ಗಜದ ಮುಖಗಳೆಂಟು
ಅನುನಯದಲಿ ಮುಖಗಳಿಗೆ ದಂತಗಳೆಂಟು ‖ ೧೩೬

ಒಂದು ಹಂತಕೆ ಒಂದೊಂದು ಸರೋವರ
ಒಂದು ಸರಸಿಗೆ ಬತ್ತೀಶ ಸರೋಜವೂ ‖ ೧೩೭

ಒಂದು ಕಮಲಕೆ ಮೂವತ್ತೆರಡೆಸಳ್ಗಳೂ
ಒಂದು ಗಳಕೆ ಮೂವತ್ತೆರಡು ನರ್ತಕಿಯರೂ ‖ ೧೩೮

ಕಮಲವ ಸೋಂಕದೆ ಮುಟ್ಟದೆ ನರ್ತಿಸುವರೂ
ಅಮಲಗುಣಗಳ ಪಡುತ ಜಿನೇಂದ್ರನಾ ‖ ೧೩೯

ನಾನಾ ತೆರದ ವಾದ್ಯ ನೃತ್ಯಗೀತಗಳಿಂದ
ನಾನಾ ತೆರೆದ ವಾಹನವೇರಿ ನಡೆದರು ‖ ೧೪೦

ಇಂತಪ್ಪ ಸಂಭ್ರಮದೊಳು ನಭದೊಳಗೆಲ್ಲ
ಉತ್ತರ ಮುಖವಾಗಿ ನಡೆದು ಮಂದರಕಾಗಿ ‖ ೧೪೧

ಈಶಾನ ದಿಕ್ಕಿನ ರತ್ನಗಂಬಲವೆಂಬಾ
ಭಾಸುರ ಪಾಂಡುಕ ಶಿಲೆಯ ಮೇಲೊಪ್ಪುವ ‖ ೧೪೨

ರತ್ನನಿರ್ಮಿತದ ಬಿಸಿಕ ಪೀಠದ ಮೇಲೆ
ರತ್ನತ್ರಯವುಳ್ಳ ಜಿನಬಾಲಕನ ಇಟ್ಟು ‖ ೧೪೩

ಕ್ರಮದಿಂದ ಕಳಶಾರ್ಚನೊಳ ಮಾಡಿ ತಾ
ಅಮಲ ಗುಣವನುಳ್ಳ ಜಿನಬಾಲಕನಿಗೆ ‖ ೧೪೪

ಈಶನೀಂದ್ರನು ದಕ್ಷಿಣೇಂದ್ರರೀಶ್ವರೂ ಸಹಾ
ಸಾಸಿರ ತೋಳ ನಿರ್ಮಿಸಿಕೊಂಡು ನಿಂದರು ‖ ೧೪೫

ಛತ್ರವನ್ನೆತ್ತಿ ಢಾಳಿಸುವ ಚಾಮರಗಳು
ನೂತ್ನವಾಗಿಹ ವಾದ್ಯ ಭೋರೆಂದು ಮೊರೆಯಲು ‖ ೧೪೬

ಬತ್ತೀಶ ಕೋಶದಗಲದ ಕುಂಭಂಗಳೂ
ಚತುರ್ಥಕೋಶದಗಲದ ವಿಸ್ತಾರವೂ ‖ ೧೪೭

ಈ ಪರಿ ಸ್ವರ್ಣ ಕಳಶವ ನಿರ್ಮಿಸಿಕೊಂಡು
ಆ ಪಂಚಮಾಬ್ದಿಯ ಪರಿಯಂತೆ ಸುರ ಸಂದಾ ‖ ೧೪೮

ಒತ್ತಿ ಕ್ಷೀರವ ಮೊಗೆಮೊಗೆದು ಸುರರು ತಂದು
ಅರ್ತಿಯಿಂ ಕೊಡಲಭಿಷೇಕ ಮಾಡಿದರಾಗಾ ‖ ೧೪೯

ಇಂಥ ಅಭಿಷೇಕವಾಗಲು ಸುರಾಸುದತಿಯ
ರ್ಕ್ಯಂತು ಹರನ ಕೊಂಡಾಡಿ ನರ್ತಿಸಿದರೂ ‖ ೧೫೦

ಸುರರೆಲ್ಲ ಜಯಜಯವೆಂದೂ ನೋಡುತಲಿರೆ
ಸುರಗಿರಿ ತೋರಿತು ರಜತ ಪರ್ವತದಂತೆ ‖ ೧೫೧

ಇಂತು ಕ್ಷೀರಾಭಿಷೇಕವ ಮಾಡಿ ಸುರ ರಾಜ
ಕಂತು ವಿಜಯಗೆ ಗಂಧಾಭಿಷೇಕವ ಮಾಡಿ ‖ ೧೫೨

ಅಷ್ಟವಿಧಾರ್ಚನೊಳ ಮಾಡಿ ಸುರಪತಿ
ಸಾಷ್ಟಾಂಗವೆರಗಿ ಸಂಪೂರ್ಣ ಅರ್ಗ್ಯವನೆತ್ತಿ ‖ ೧೫೪

ರತ್ನದಾ ಬಾಲದುಡಿಗೆಯದುಡಿಸಿ ಶಚಿ
ರತ್ನಶಿಬಿಯಿಯು ಸಹ ಕಣ್ಗೆ ಅಂಜನವಿಟ್ಟು ‖ ೧೫೫

ಹರಪದಕ ಅರಳೆಲೆ ಮಾಗಾಯಿ ಗೆಜ್ಜೆ
ತೋರಹಾರಗಳಿಟ್ಟು ತಿಲಕವ ಪಣೆಗಿಟ್ಟು ॥ ೧೫೭

ಕಾಲಲಂದುಗೆ ಗೆಜ್ಜೆ ಸರಪಣಿ ಉಡಿದಾರಾ
ಲೀಲೆಯಿಂದಲಿಟ್ಟು ಎರಗಿ ಶಚಿಯು ನೀವೇ ॥ ೧೫೭

ಇಂದ್ರನು ಸಾಸಿರ ನೇತ್ರವ ಪಡೆದು ತಾ
ಸಾಂದ್ರ ಭಕ್ತಿಯೊಳು ಸಾಷ್ಟಾಂಗವೆರಗಿ ನಿಂದೂ ॥ ೧೫೮

ಭವ್ಯಾಬ್ಜ ಮಿತ್ರನೆ ಭವಭಯ ಹರಣನೆ
ನವ್ಯಯಸುಖವ ಪಡೆವ ಜಿನರಾಜನೆ ॥ ೧೫೯

ಕಾಲನ ಗಂಡ ಕರ್ಮದ ಮಿಂಡ ದುರ್ಮೋಹಾ
ಜಲಾಂಧಕಾರವ ಪರಿವ ಜಿನೇಂದ್ರನೇ ॥ ೧೬೦

ನೀಲವರ್ಣದ ರೂಪ ಅಘವನುಗೇಶವನೆ
ಆಲಸ್ಯ ಮಾಡದೆ ನಿನ್ನಂಥ ಪದವಿಕೊಡು ॥ ೧೬೧

ಈ ಪರಿಯಲಿ ಸುರಸಭೆಯು ಕೊಂಡಾಡುತ
ಅಪರಮೇಶನ ಗಜವನೇರಿಸಿಕೊಂಡೂ ॥ ೧೬೨

ಮೇರುಗಿರಿಯ ಬಲಗೊಂಡು ಪುರಕೆ ಬಂದೂ
ಮೇರುವಿಜಯನನು ತಾಯಿ ತಂದೆಗೆ ತೋರಿ ॥ ೧೬೩

ರತ್ನನಿರ್ಮಿತ ಸಿಂಹಾಸನವ ನಿರ್ಮಿಸಿ ದೇವಾ
ರತ್ನತ್ರಯವನುಳ್ಳ ಜಿನನ ಕುಳ್ಳಿರಿಸಾಗ ॥ ೧೬೪

ನಾಮ ಸಾಸಿರ ಪಡೆಯನು ನೇಮಿನಾಥನೆಂದು
ನೇಮದಿ ಕರೆವುತ ಸುರರು ನಮಿಸಿ ನಿಂದೂ ॥ ೧೬೫

ಕರ್ಮವಿದೂರನೆ ಕರುಣಾ ಸಮುದ್ರನೇ
ಕಮಲಭರಣನಹಂ ಮುರಿವ ಜಿನೇಂದ್ರನೇ ॥ ೧೬೬

ಅಜ್ಞಾನ ತಿಮಿರಾಂಧಕೆ ಭಾನುಯೆನಿಪನೆ
ಸುಜ್ಞಾನದಿಂ ತ್ರಿಪುರವ ಸುಟ್ಟವುರುಹನೇ ॥ ೧೬೭

ಜಯಜಯ ಮಾರಮರ್ಧನ ಭವದೂರನೇ
ಜಯಜಯ ಶ್ರೀ ಮೋಕ್ಷಲಕ್ಷ್ಮೀಯ ಅರಸನೇ ॥ ೧೬೮

ಕರುಣಾಬ್ಜಮಿತ್ರನೆ ಕರ್ಮವಿನಾಶನೇ
ಕರುಣಿಸುಯೆನಗೇ ನಿನ್ನಂತ ಪದವಿಯನೂ ‖ ೧೭೯

ಆನಂದ ನರ್ತನವಾಡಿ ಸುರೇಂದ್ರನೂ
ಸಾನುರಾಗದಿ ಜಯವೆನುತ ನಮಿಸಿದನೂ ‖ ೧೮೦

ಬಾಲಕ್ರೀಡೆಗೆ ತಕ್ಕ ಸುರರ ಬಾಲಕರಿಟ್ಟೂ
ಬಾಲಕ ಜಿನರನು ತಾಯಿ ತಂದೆಗೆ ಕೊಟ್ಟು ‖ ೧೮೧

ಸುರರೆಲ್ಲರೂ ಜಯಜಯವೆಂದು ನಮಿಸೆ
ಸುರವಾಹನವೇರಿ ಸುರಲೋಕಕ್ಕೆ ಹೋಗೆ ‖ ೧೮೨

ಬಾಲಕವು ಮುನ್ನೂರು ವರುಷ ಸಲೆ
ಲೀಲೆಯೊಳಗಿರುತಿರವೊಂದು ದಿವಸದಿ ‖ ೧೮೩

ಬಲಕೇಶವರೀರ್ವರೂ ಬಂದೂ ಅಭವಗೆ
ಲೀಲೆಯಿಂದಲಿ ನಮಿಸಿನಿಂದೂ ಹೇಳ್ದರೂ ‖ ೧೮೪

ವನಕೆ ವಸಂತ ಬಂದುದು ಚಿತ್ತೈಸುವುದೆಂದು
ನಾನಾ ವಿಧದಿ ಪ್ರಾರ್ಥಿಸಿ ಗಜವನುಯೇರಿ ‖ ೧೮೫

ನಾನಾವಿಭವದಿಂದ ವನಕೆ ತೆರಳೆ ದೇವಾ
ವನಿತೆಯರು ಸಹ ಬಲಹರಿಗಳು ತೆರಳಲೂ ‖ ೧೮೬

ವನಜಲಕ್ರೀಡೆಯ ನಾಡುತ ಜಿನಪತಿ
ವನಿತೆಯು ಸತ್ಯಭಾವೆಗೆ ವಸ್ತ್ರತಾಳಿಯನೆ ‖ ೧೮೭

ಭೂಮಿ ತ್ರಿಭಾಂಡಪತಿಯ ವಲ್ಲಭೆಯು ಮಾತೆ
ಭೂಮಿ ತೂಕದ ಶಂಭ ಎತ್ತಿದ ಎನ್ನ ಪತಿ ‖ ೧೮೮

ಈತನೋಸ್ತ್ರವ ತೊಳಿವೆನೆಯೆಂದೂ ಗರ್ವದಿ
ಓತು ನುಡಿಯೆ ರುಗ್ಮಣಿ ಕೇಳಿ ಮರುಗುತಾ ‖ ೧೮೯

ಅಕ್ಕ ನೀನಿಂ ತಪ್ಪನು ನುಡಿಯಬಹುದೆಯೆಂದು
ಗಕ್ಕನೆ ವಸ್ತ್ರವ ತೆಗೆದು x x ಸಿರದೊಳಿಟ್ಟೂ ‖ ೧೯೦

ಇಂತು ಸತ್ಯಭಾಮೆ ನುಡಿದ ಮಾತನು ಕೇಳಿ
ಕಂತು ಹರನು ಗಕ್ಕನೆ ಗಜವನುಯೇರಿ ‖ ೧೯೧

ಶಸ್ತ್ರಶಾಲೆಗೆ ಬಂದು ಶತಪತ್ರನೇತ್ರನೂ
ಶತ್ರುಂಜಯನು ಶಂಭವ ವಾಮಕರದಿಂದಾ ‖ ೧೮೨

ಎಡದ ನಾಸಿಕದೊಳಿಟ್ಟು ಶ್ವಾಸವ ಬಿಡೆ
ಬೆಡಗಡಿಸಲು ದೇವತೆಗಳು ಬೆಚ್ಚುತಾ ಓಡೆ ‖ ೧೮೩

ಹರಿಯು ಕೇಳುತ ಅತಿ ಶಂಕಿಸುತಲಿ ಚಿಂತಾ
ಧರನಾಗಿ ಇರುತಾನೊಂದಾನು ದಿವಸದೊಳೂ ‖ ೧೮೪

ಒಡ್ಡೊಲಗದೊಳು ಕುಳಿತಿಹ ಸಮಯದಿ
ಎಡದ ಹಸ್ತದ ಕಿರು ಬೆರಳಕೊಂಕಿಸಿ ಜಿನಾ ‖ ೧೮೫

ಬಲಯುತರಿದನು ಜಗ್ಗಿಸಿ ಎಂದು ಕೈನೀಡಿ
ಬಲಹರಿಗಳು ಅತಿಲೀಲೆಯಿಂ ಪಿಡಿಯಲೂ ‖ ೧೮೬

ಸೂತ್ರದ ಪ್ರತಿಮೆಗಳಂದದಿ ನೇಮಿಚಂದ್ರ
ಅರ್ತಿಯೊಳಗೆ ತೂಗಾಡಿಸಿ ಹರಿಯು ನಾಚಿ ‖ ೧೮೭

ಮನದೊಳು ಯೋಚಿಸಿ ಬಲರಾಮನ ಕೂಡೆ
ಜಿನನಿಂದ ನಮಗೆ ರಾಜ್ಯಗಳಿಲ್ಲವೆಂದು ಪೇಳೆ ‖ ೧೮೮

ಇಂತೆಂದ ಅನುಜನ ಮಾತಿಗೆ ಬಲರಾಮ
ಚಿಂತಿತಾರ್ಥವನೀವ ಮೋಕ್ಷವಾಳುವ ಜಿನಾ ‖ ೧೮೯

ಅವರಿಗೆ ಭೂಮಿಯಾಳುವ ಆಸೆಗಳು ಇಲ್ಲ
ತವಕವೇತಕೆಯೆಂದು ಅನುಜನ ಸಂತೈಸಿ ‖ ೧೯೦

ಇಂತು ಕೆಲವು ದಿನ ನಡೆಯಲು ಹರಿ ಮತ್ತೆ
ಸಂತೋಷದಲಿ ಬಲಭದ್ರನಿಗೆ ಕೇಳಿದನು ‖ ೧೯೧

ನೇಮಿಚಂದ್ರಗೆ ಯೌವ್ವನವಾಯಿತು ಮದುವೆಯ
ಪ್ರೇಮದಿ ಮಾಡಬೇಕೆನುತ ಹೇಳಿದ ಮತ್ತೇ ‖ ೧೯೨

ಅನುಜನ ಮಾತ ಕೇಳುತ ಬಲರಾಮನೂ
ವನದಿ ವಿಜಯನ ಸನ್ನಿಧಿಗೈದು ನಮಿಸುತಾ ‖ ೧೯೩

ನೇಮಿನಾಥಗೆ ಮದುವೆಯು ಆಗಬೇಕೆಂದೂ
ನೇಮದಿ ಪೇಳೆ ಜನಕ ಸಹ ನಡೆತಂದೂ ‖ ೧೯೪

ಸ್ವಾಮಿಗೆರಗಿ ನಿಂದು ಮದುವೆಗೆ ಮನವನು
ಪ್ರೇಮದಿ ಮನವೀವುದೆಂದೂ ಪ್ರಾರ್ಥಿಸಿ ಹೇಳೆ ॥ ೧೯೫

ನಸುನಗುತಲಿ ನೇಮಿಚಂದ್ರ ಮೌನದಿಯಿರೆ
ಶಶಿಮುಖಿ ರಾಜೀವ ಮತಿಯ ನೇಮಿಸಿದಾರೂ ॥ ೧೯೬

ಪಟ್ಟಣವನು ಶೃಂಗರಿಸಿ ವಿಸ್ತಾರದಾ
ಮಂಟಪವನು ಮಾಡಿಸಿದರು ಸಂಭ್ರಮದಿಂದ ॥ ೧೯೭

ಸ್ವಾಮಿ ಮದುವೆಯೆಂದು ದೇಶದಿಶರು ಸಹ
ಪ್ರೇಮದಿ ಕುಟುಂಬ ಪರಿಹಾರ ಸಹವಾಗಿ ॥ ೧೯೮

ದ್ವಾರಾವತಿಯ ಪುರಕೆ ಬಂದು ಶೀಘ್ರದಿಂದ
ದೊರೆಗಳು ನೇಮಿನಾಥನ ಕಂಡು ಎರಗಲು ॥ ೧೯೯

ಬಂದ ದೊರೆಗಳಿಗೆ ಪಡಿ ಬೀಡಾರಗಳಾದಿ
ಚಂದಛಂದದಿ ಬಲಹರಿಗಳು ಮನ್ನಿಸಿದರು ॥ ೨೦೦

ದಿವ್ಯ ಜಲವ ತಂದು ದಿವ್ಯ ನಾರಿಯರೆಲ್ಲಾ
ದಿವಿಜೇಂದ್ರವಂದ್ಯಗೆ ಮಂಗಲಾಭಿಷೇಕವ ಮಾಡಿ ॥ ೨೦೧

ಷೋಡಶಾಭರಣಗಳಿಂದ ಸಿಂಗರಿಸಿ ತಾ
ನಾಡೊಡೆಯಗೆ ಮಂಗಲ ಬಾಸಿಂಗವ ಸೂಡಿ ॥ ೨೦೨

ನಾಡದೊರೆಗಳೆಲ್ಲ ನಾನಾ ವಾದ್ಯಗಳಿಂದಾ
ನಾಡಿಗೊಡೆಯನು ವಾರಣವಯೆಸಿಕೊಂಡೂ ॥ ೨೦೩

ಬಿರಿಸು ಬಾಣಗಳಿಂದ ಗೀತನರ್ತನದಿಂದ
ನಾರಿಯರು ಪಾಡುವ ಧವಳ ಶೋಭನದಿಂದ ॥ ೨೦೪

ಇಂತು ಸಂಬ್ರಮದಿ ನಿಬ್ಬಣ ಬಹು ಸಮಯದಿ
ಕಂತು ಪಿತನು ಮಾಡಿಸಿದ ಕೃತಿಮದಿಂದಾ ॥ ೨೦೫

ಕರು ಬೇರೆ ಪಶು ಬೇರೆ ಬೆಳ್ಗಳಿವುದ ಕಂಡೂ
ಕರುಣಾಳು ನೇಮೀಶ ಕೇಳಿದ ಚರರನೂ ॥ ೨೦೬

ನಿಮ್ಮ ನಿಬ್ಬಣಕೆ ನಿವಾಳಿಗೆಯನೆ ಚರಾ
ಸುಮ್ಮನವಳಿದು ವೈರಾಗ್ಯಯೋಚಿಸೆ ದೇವಾ ॥ ೨೦೭

ಲೌಕಿಕಾಂತ ದೇವರ ಬಂದು ಬೋಧಿಸಿ
ಲೋಕದೊಳಗೆ ಧರ್ಮಾಮೃತವನು ಕರಿರೆಂದೂ ॥ ೧೦೮

ನಾನಾವಿಧದಿ ಬೋಧಿಸಿ ತೆರಳಿದ ಮತ್ತೆ
ಸಾನುರಾಗದಿ ಗಜವಿಳಿದರಮನೆಗೈದೆ ॥ ೧೦೯

ಜನನಿಜನಕ ರತಿಶೋಕಿಸುತಲಿ ನೀವೆ
ಜನತಾದೀಶನವರ ಸಂತೈಸಿದ ಮತ್ತೆ ॥ ೧೧೦

ಪತಿರಾಜೀವಮತಿ ಅತಿಶೋಕದಿಂದಲಿ
ಪತಿಯ ಒಡನೆ ದೀಕ್ಷೆ ಧರಿಸುವೆನೆನುತಿರೆ ॥ ೧೧೧

ಇಂದ್ರನಾಸನ ಕಂಪನವಾಗಲು ಜಿನ
ಚಂದ್ರನ ವೈರಾಗ್ಯ ತಿಳಿದ ದೇವೇಂದ್ರನೂ ॥ ೧೧೨

ಇಂದ್ರನು ದೇವಸಮೂಹ ಸಹಿತ ಬಂದು
ಇಂದ್ರರು ಸಹ ಪರಿನಿಃಕ್ರಮಣ ಪೂಜೆಯ ಮಾಡಿ ॥ ೧೧೩

ಮುತ್ತಿನ ಪಲ್ಲಕ್ಕಿಯನೇರಿಸಿಕೊಂಡು
ಚಿತ್ತಶುದ್ಧದಿ ಸರ್ವವಾದ್ಯ ಮೊರವಿನಲ್ಲಿ ॥ ೧೧೪

ಭೂಚರಕೆ ಚರ ಇಂದ್ರರು ಸಹವಾಗಿ
ಚರ್ಚೆಯಿಂದಲಿ ಯೇಳಡಿ ಹೊತ್ತು ನಡೆದರೂ ॥ ೧೧೫

ಇಂತು ಸಂಭ್ರಮದಿಂದ್ರನಂದನವೆಂಬ ವನಕಾಗಿ
ಸಾತಿಶಯದ ಭಕ್ತಿಯಿಂದ ತೆರಳಿಸಿದರೂ ॥ ೧೧೬

ಇಂದ್ರನಾ ಸತಿ ಶಚಿದೇವಿ ಗದ್ದುಗೆಯನ್ನು
ಚಂದದ ಚಂದ್ರಕಾಂತದ ಶಿಲೆಯೊಳು ಮತ್ತೆ ॥ ೧೧೭

ಜಿನರಾಜ ಹೋಗಿ ಕುಳಿತು ಸರ್ವಾಭರಣವಾ
ಮನವಾರೆ ತೆಗೆದಿಡಾಡಿದ ನಿಮಿಷದಿ ॥ ೧೧೮

ಇಂದ್ರನ ರತ್ನದ ಪಡಲಿಗೆಯಾಂತು ನೀವೆ
ಮಂಧರ ಧೈರ್ಯಕುಂತಳಗಳನು ಪರಿದಿಡೆ ॥ ೧೧೯

ಇಂದ್ರನು ದೇವ ಸಮೂಹದಿ ಕುಂತಳಂಗಳಾ
ಹೊಂದಿಸಿ ಕ್ಷೀರಾಂಬುಧಿಯೊಳು ದೇವೇಂದ್ರನೂ ॥ ೧೨೦

ಶ್ರಾವಣ ಶುದ್ಧ ಸೃಷ್ಟಿಯ ಚಿತ್ರ ತಾರೆಯೊಳೂ
ದೇವಗೆ ಪರಿನಿಷ್ಕ್ರಮಣ ಕಲ್ಯಾಣವಾಗೆ ॥ ೧೧೧

ದೇವಸಭೆಯು ಜಯಜಯವೆಂದು ನಮಿಸಿ ತಾ
ದೇವೇಂದ್ರ ಸಹ ದೇವಲೋಕಕೆ ತೆರಳಲು ॥ ೧೧೧

ಇತ್ತಲು ನೇಮಿನಾಥನು ತಪದೊಳು ನಿಂತು
ಅರ್ತಿಯೊಳಿರೆ ಪರಕಾಲಯೋಗಗಳಿಂದಾ ॥ ೧೧೨

ಮಷ್ಠೊಪವಾಸದಂತ್ಯದಿ ಪಾರಣೆಗೆಂದೂ
ವಶವಾರ್ಚಿತ ಗಿರಿಪುರಿಗೆ ಭಾವರಿಯದೆ ॥ ೧೧೪

ವರದತ್ತನೆಂದೆಂಬರಸನು ಇದಿರ್ಬಂದೂ
ಹರುಷದಿ ಬಿಜಮಾಡಿಸಿದ ಜಿನಪತಿಯನು ॥ ೧೧೫

ಸಪ್ತಗುಣವು ನವವಿಧಪುಣ್ಯ ಸಹಿತಲಿ
ಸ್ತಪಿಸಿ ಜಿನಪನ ಪಾದಪೂಜೆಯ ಮಾಡಿ ॥ ೧೧೬

ಸಿದ್ಧ ಭಕ್ತಿಯು ಪೇಳೆ ಜಯಗಂಟೆ ಮೊರೆಯಲು
ಶುದ್ಧ ಚಿತ್ರದಿ ಬಗೆಬಗೆ ಭಕ್ಷ್ಯಗಳ ನೀಡೆ ॥ ೧೧೭

ಸೃಗ್ದೆಯೊಳಿಡೆ ಜಿನಸಿದ್ಧ ತೃಪ್ತಿಸುತಾ
ಸಿದ್ಧರ ನೆನೆವುತ ಕರವ ಪ್ರಕ್ಷಾಲಿಸಿ ॥ ೧೧೮

ಆತ್ಮಧ್ಯಾನವನೋಡೆ ಅಂತರಂಗದ ಪ್ರಭೆ
ಚಿಂತಾರ್ಥವ ನೋಡಿ ಕಣ್ಬಿಟ್ಟ ಜಿನಪತಿ ॥ ೧೧೯

ಅಕ್ಷಯಾದಾನವೆನುತ ಜಿನಪರಸಲೂ
ತಕ್ಷಣದಲಿ ಅಮರರು ಪಂಚಚರ್ಯ್ಯ ಮಾಡೆ ॥ ೧೨೦

ಪುಷ್ಪವೃಷ್ಟಿಯು ರತ್ನ ವೃಷ್ಟಿಯು ಸುರಭೇರಿ
ಪುಷ್ಪ ಸೌರಭಗಾಳಿ ಜಯರವ ಸಹವಾಗಿ ॥ ೧೨೧

ಧಾತೃವ ಹೊಗಳುತ ಸುರರೆಲ್ಲ ಹರುಷದಿ
ಮಿತ್ರರು ಸಹ ಸುರಲೋಕಕೆ ತೆರಳಲೂ ॥ ೧೨೧

ಇತ್ತಲು ನೇಮಿನಾಥನು ಮನವನು ಹೊಕ್ಕು
ಸೂಸ್ಥಾನದೊಳು ಪ್ರತಿಮಾನುಯೋಗದಿ ನಿಲೆ ॥ ೧೨೨

ಶುಕ್ಲಧ್ಯಾನಗಳಿಂದ ಘಾತಿ ಕರ್ಮವ ಸುಟ್ಟು
ಮುಕ್ತಿದಾಯಕ ಕೇವಲ ಜ್ಞಾನ ಪಡೆಯಲು ॥ ೧೩೪

ಧರೆಯಿಂದೈಸಾಸಿರ ಬಿಲ್ಲಾತರದಿ ನಿಲೆ
ವರನೇಮಿಚಂದ್ರನನಘ ಸರ್ವಜ್ಞನೂ ॥ ೧೩೫

ಸುರಪತಿ ತಿಳಿದು ಕುಭೇರಗೆ ಬೆಸಸಿದಾ
ಸುರಚಿರ ಸಮವಸರಣವ ರಚಿಸುಯೆಂದೂ ॥ ೧೩೬

ಧನಪತಿ ಬಂದು ರಚಿಸೆ ರತ್ನಮಯವಾದ
ಅನುನಯದಲಿ ಸಮವಾಶ್ರುತಿಯನು ಬೇಗ ॥ ೧೩೭

ಮೂರು ಮೇಕಲೆಯ ಪೀಠದ ಅಗ್ರದೊಳಗಿಹ
ಸುರಚಿರ ಸಾಸಿರದೆಂಟೆಸಳ ಪಂಕಜವನೂ ॥ ೧೩೮

ನಾಲ್ವೆರಳನೂ ಸೋಂಕದೆ ಅಭವನು ನಿಲೆ
ನಾಲ್ಕಧಿಪತಿ ಬಂದು ಜಯಜಯವೆನುತಲಿ ॥ ೧೩೯

ಆಶ್ವೀಜ ಶುದ್ಧ ಪಾಡ್ಯದಿ ಚಿತ್ರತಾರೆಯೊಳೂ
ಶೇಷವಂದಿತಗೆ ಕೇವಲ ಜ್ಞಾನ ಪೂಜೆಯ ಮಾಡಿ ॥ ೧೪೦

ಸುರಪತಿಯೆರಗಿ ಸಾಷ್ಟಾಂಗದಿ ಜಿನರಿಗೆ
ಕರಗಳ ನೊಸಲಿಗೆ ತಂದು ನಿಂದನು ಮತ್ತೆ ॥ ೧೪೧

ಚತುರಗತಿಯ ಗೆದ್ದು ಚತುರ್ಮುಖನೆನಿಸಿದೆ
ಚತುರ್ನಿಕಾಯಮರ ವಂದಿತ ಜಿನ ಜಯ ಜಯಾ ॥ ೧೪೨

ಕೋಟಿ ಚಂದ್ರಾದಿತ್ಯ ಕೋಟಿ ಪ್ರಕಾಶದೇವಾ
ಕೋಟಲೆ ಹರಿಸೆನ್ನ ಭವವ ಹರಿಸೋ ತಂದೆ ॥ ೧೪೩

ಅಷ್ಟಮಹಾ ಪ್ರತಿಹಾರ್ಯ್ಯ ಶೋಭಿತ ಜಿನ
ಶ್ರೇಷ್ಠ ಮೋಕ್ಷದ ಪದವನು ತೋರು ಅಭವನೇ ॥ ೧೪೪

ಇಂತು ಶಕ್ತಿ ಶತಸಹಸ್ರದಿಂ ಸ್ತುತಿಯಿಸಿ
ಕಂತುಹರಗೆ ಸಾಷ್ಟಾಂಗವೆರಗಿ ಮತ್ತೆ ॥ ೧೪೫

ವರದತ್ತಗಣಧರರ್ಗ್ಗೆರೆಗಿ ದೇವೆಂದ್ರನೂ
ಹರುಷದಿ ದೇವಕೋಷ್ಟದೊಳು ಕುಳಿತ ಮತ್ತೆ ॥ ೧೪೬

ದಿವ್ಯಧ್ವನಿಯ ಪುಟ್ಟಿ ತಾ ಜಿನನೋದನದಿ
ದಿವ್ಯಭಷಿಗಳಿಂದ ಗಣಧರರ್ವ್ರಿ ರಚಿಸಿ ॥ ೧೪೭

ಧರ್ಮಾಮೃತವ ಪೇಳುತ ಧರೆಯೊಳು ಜಿನ
ಧರ್ಮ ಪ್ರಭಾವನೆಯೆನು ಮೆರೆಸುತ ಬರೆ ॥ ೧೪೮

ಅಂಗವಂತ ಕಾಶ್ಮೀರ ಕರ್ನಾಟ ವಾದಿ
ಮಂಗಲ ಕೌಶಲ್ಯ ಕುರುದೇಶ ಮೊದಲಾಗಿ ॥ ೧೪೯

ಈ ಪರಿಯಿಂದ ಸಮವ ಶ್ರುತಿ ಚರಿಸಲು
ಪಾಪರಹಿತವಾಯಿತು ಸಕಲ ಜನರಿಗೆಲ್ಲ ॥ ೧೫೦

ಇಂದು ಸಮವಸರಣವು ಚರಿಸುತಲಿರೆ
ಕಂತುವಿಜಯಗೊಂದು ತಿಂಗಳಗಾಯುಷ್ಯ ಉಳಿಯೆ ॥ ೧೫೧

ಸಮವಸರಣವ ತ್ಯೆಜಿಸಿ ಮುನಿಗಣ ಸಹ
ಅಮರೇಂದ್ರ ವಂದ್ಯ ಉಜ್ಜಂತಗಿರಿಗೆ ಬಂದೂ ॥ ೧೫೨

ಸಿದ್ಧಶಿಲೆಯ ಮೇಲೆ ಪ್ರತಿಮಾನುಯೋಗದಿ ನಿಂತು
ಸಿದ್ಧರ ಧ್ಯಾನಿಸುತಲಿ ನಿಂತಭವನೂ ॥ ೧೫೩

ಒಂದು ತಿಂಗಳ ಪರಿಯಂತ ತಪದೊಳಿರ್ದ್ದು
ಸಂಧ ಶುಕ್ಲಧ್ಯಾನದೊಳು ಅಘತಿಯಸುಟ್ಟು ॥ ೧೫೪

ಜ್ಞಾನನಯನದಿಂದ ಲೋಕವಿಲೋಕವನು
ನಾನಾ ಜೀವಗಳ ನೆಲೆಯ ನೋಡಿ ಜಿನಪತಿ ॥ ೧೫೫

ದಂಡ ಕವಾಠ ಪೆರಣಿಯಿಂದ ಜಿನರಾಜ
ಕಂಡನಾ ಕ್ಷಣದೊಳು ಅಘತಿ ಕರ್ಮವ ಸುಟ್ಟು ॥ ೧೫೬

ಆಷಾಢ ಶುದ್ಧ ಸಪ್ತಮಿ ಅಂತ್ಯ ಜಾವದಿ
ದೋಷವ ಕೆಡಿಸಿದ ಚಿತ್ತ ನಕ್ಷತ್ರದೊಳೂ ॥ ೧೫೭

ಸಾವಿರೊರುಷ ಸಂಪೂರ್ಣ ಆಯುಷ್ಯನು
ಸಾವದನದಿಂದೆಸೆದನುವುತ್ಸೆದನೂ ॥ ೧೫೮

ನೀಲವರ್ಣದ ತನುನಿಗಮ ಸೇರಿದನೂ
ಆಲಸ್ಯ ಮಾಡದೆ ಮುಕ್ತಿಗೆ ಸಂದ ದೇವಾ ॥ ೧೫೯

ಸುರರಾಜ ತಿಳಿದೂ ಸಮೂಹ ಸಹಿತ ಬಂದು
ಅರುಹನ ನಿರ್ವಾಣ ಕಲ್ಯಾಣ ಪೂಜೆಯ ಮಾಡೆ ॥ ೧೯೦

ಅಗ್ನಿಕುಮಾರ ನಿರ್ಧಾರ ಭಕ್ತಿಯಿಂದ ಬಂದು
ಅಗ್ನಿಮಸ್ತಕದಿಂದ ದಂದಹಿಸಿದ ಮತ್ತೆ ॥ ೧೯೧

ವರಚಿಂತಾಭಸ್ಮವ ಧರಿಸಿ ಸುರೇಂದ್ರನೂ
ಪರಮ ಹರುಷದಿ ಆನಂದ ನೃತ್ಯವನಾಡಿ ॥ ೧೯೨

ಅಷ್ಟದಶ ದೋಷರಹಿತ ಸರ್ವಜ್ಞಾನಿ
ಶ್ರೇಷ್ಠ ಮೋಕ್ಷ ಲಕ್ಷ್ಮೀಗೆ ಕಂಠಾಭರಣನೇ ॥ ೧೯೩

ಜನನ ಮರಣ ದೂರ ಭವವಾರುದಿಸೇವಾ
ಜನನ ಮರಣವ ಹರಿಸಿ ರಕ್ಷಿಸುಯೆನ್ನ ॥ ೧೯೪

ಇಂತು ಕೊಂಡಾಡಿ ನೃತ್ಯವನಾಡಿ ಸುರಪತಿ
ಸಂತೋಷದಲಿ ಜಯಜಯವೆಂದು ಹೋದನು ॥ ೧೯೫

ಧರೆಯೊಳಧಿಕವಾಗಿ ಬೆಳ್ಗೊಳಿದೊಳಗಿಹ
ವರದೇಶಿಗಣಕಗ್ರಗಣ್ಯನೆಂದೆನಿಸುವಾ ॥ ೧೯೬

ವಿಂದ್ಯಕರ ಚರವಿಭ್ಯಕೇತು ಶ್ರೀಧರದೇವಾ
ಸಾಂದ್ರಕೆ ಚರಚಿಂತಾಗತಿಯೆನಿವನೆ ॥ ೧೯೭

ದೇವಮಹೇಂದ್ರ ಕಲ್ಪವು ಅಪರಾಜಿತನೇ
ಭೂವಲಯದಿ ಅಚ್ಯುತೇಂದ್ರನೆಂದೆನಿಪನೇ ॥ ೧೯೮

ಭೂವರ ಸುಪ್ರತಿಷ್ಠನೆ ಅಹಮಿಂದ್ರದೇವಾ
ಭವಜಹರ ನೇಮಿನಾಥನೇ ಸಲಹೆನ್ನ ॥ ೧೯೯

ವರಚಾರುಕೀರ್ತಿ ಪಂಡಿತಾಚಾರ್ಯವರ್ಯರ
ಪರಮ ಶಿಷ್ಯ ಗೊಮ್ಮಟನಾಥ ರಚಿಸಿದ ಕೃತಿಯನು ॥ ೨೦೦

ನೇಮಿನಾಥನ ಪಂಚಕಲ್ಯಾಣವಿದು ಮತ್ತೆ
ಪ್ರೇಮದಿ ಚಂದ್ರಸೂರ್ಯರ ಕಾಲ ಪರಿಪರಿಯಂಥ ॥ ೨೦೧

ನೇಮಿನಾಥನ ಪದವನು ಕೇಳಿದವರೆಲ್ಲ
ನೇಮದಿ ಶ್ರೀಮುಕ್ತಿ ಲಕ್ಷ್ಮಿಯ ಪಡೆವರು ॥ ೨೦೨

ಮಂಗಲಮಸ್ತು ಶುಭಮಸ್ತು ಸುರಮಸ್ತು
ತುಂಗನೇಮೀಶಮಸ್ತು ಶುಭಮಸ್ತು ಶ್ರೀರಸ್ತು ॥ ೨೭೩

**೩೩. ಜಿನಜಿನಜಿನರೆಂದು**

ಜಿನ ಜಿನ ಜಿನರೆಂದು ನೆನೆ ಮನವೇ
ಜನನಾದಿ ದುಃಖವ ಕಳೆ ತನುವೇ ॥ ಪಲ್ಲವಿ

ಅಸುರನು ತನುಜಾತಸುತ ಸಖರೂ
ಎಸೆವ ಜನನಿ ಜನಕಾದಿಗಳು
ಹಸಿದು ಯಮನು ಬಂದು ಮುನಿವಾಗಲದು
ಬಿಸಿಲರಿಸಿನಯೆಂದರಿ ಮನವೇ ॥ ೧

ಕೊಲ್ಲದೆ ಪುಸಿಯದೆ ಕಳದಿರನ್ಯಪರ
ವಲ್ಲಭೆಯರ ಸಂಗಮಾಡದಿರು
ಬೆಲ್ಲಗೂಡಿದ ವಿಷದಂತವೊಲು ಅದು
ನಿಲ್ಲದೆ ಪ್ರಾಣವ ಕೊಂಬುದದು ॥ ೨

ನಡೆವಲ್ಲಿ ನುಡಿವಲ್ಲಿ ಕೆಡುವಲ್ಲಿ
ಒಡಲ್ಲಿಗೆ ಧೈರ್ಯ್ಯಗೆಡಿಸುವಲ್ಲಿ
ಘುಡಿಘುಡಿಸುವ ಸಿಡಿಲೆರಗುವಲ್ಲಿ
ಅಡಿಗಡಿಗರುಹ ನೆನೆ ಮನವೇ ॥ ೩

ಹಲವು ದೈವಂಗಳ ನಂಬಿ ನೀನು
ಹಲವು ದುರ್ಗತಿಯೊಳು ತಿರುಗಿ ಬಂದೆ
ನೆನೆಯಿಲ್ಲದ ದುಃಖವನುಂಡೆ
ಎಲೆಪಾಪಿ ಮನವೇ ಜಿನರ ನೆನೆಯೋ ॥ ೪

ಧರೆಯೊಳು ಚಾರಣಗಿರಿಯೊಳಿಹ
ವರಭವ್ಯಜನರ ಸಂತತಿಗೆ
ಪರಮಸುಖವನಿತ್ತು ಪಾಲಿಸುವ
ವರಗುಣ ಪಾರೀಶ್ವಜಿನರ ನೆನೆಯೋ ॥ ೫

**೩೪. ನೆನಹಿರೋಮನಸಿಜನನು**

ನೆನಹಿರೋ ಮನಸಿಜನನನು ಗೆಲಿದ
ಕನಕಗಿರಿಯ ಶ್ರೀ ಜಿನಪತಿಯ ॥ ಪಲ್ಲವಿ

ಉರಗೇಂದ್ರಾರ್ಚಿತ ಪದಯುಗನಾ
ಸುರಲೋಕದಮೃತವ ಕೊಡುತಿಹನಾ
ಪರಮದಯಾ ಹರನೆನಿಸಿಹನಾ
ಪರಪರ ವಸ್ತುತನಾಗಿಹನಾ ॥ ೧

ಗತಿನಾಲ್ಕನು ಗೆಲಿದತಿಬಲನ
ಯತಿ ಜನಗಳ ಹೃದಯದೊಳಿಹನ
ಕ್ಷಿತಿಪತಿನುತನೆಂದೆನಿಸಿದನಾ
ಶತಪತ್ರ ಪೀಠದೊಳ್ನೆಲಸಿಹನಾ ॥ ೨

ಭೂಮಿಕಾಮಿನಿಯ ಬಿಟ್ಟ ಭವನ್ನಾ
ನಾಮ ಸಾಸಿರವನು ಪಡೆದವನಾ
ಈ ಮಹಿಗತಿಶಯವೆನಿಸಿಹನಾ
ಹೇಮಗಿರಿಯ ಪಾರಿಶ್ವಜಿನೇಶನನ್ನಾ ॥ ೩

## ೩೫. ಎಚ್ಚರಿಕೆಎಚ್ಚರಿಕೆಪಾರಿಶ್ವ

ಎಚ್ಚರಿಕೆ ಎಚ್ಚರಿಕೆ ಪಾರಿಶ್ವ ಎಚ್ಚರಿಕೆ
ಕರ್ಮಹರ ಕುಂತುಹರ ಎಚ್ಚರಿಕೆ ಎಚ್ಚರಿಕೆ
ಜಿನರಾಜ ಕರ್ಮಹರ ಕಂತುರೂಪ ಎಚ್ಚರಿಕೆ ॥ ಪಲ್ಲವಿ

ಸುರನರೋರಗ ವಂದ್ಯ ಸುರಗಣ ಸೇವಿತ
ಸುರುಚಿರ ಗುಣ ರೂಪ ಸುಜ್ಞಾನ ಭರತಿ ॥ ೧

ಕರ್ಮಷ್ಠೋಪ ವಿಜಯನೆ ಕರ್ಮವಿನಾಶನೆ
ಕರ್ಮಕಳಂಕಹರ ಕಮಲಾಸನರೂಢ ॥ ೨

ಪಂಚಬಾಣನ ರೂಪ ಪಂಚಕಲ್ಯಾಣಕೆ ದೀಪ
ಪಂಚಮಗತಿಗೊಡೆಯ ಪಾಹಿ ಜಿನನಾಥ ॥ ೩

ಫಣಿಪತಿಗಧಿನಾಥ ಫಣಿಪನರೋಹನ
ಪಾಪವಿನಾಶನ ಪರಮ ಸುಖಗಧಿಪ ॥ ೪

ಸೂರ್ಯ ಪ್ರಕಾಶನೆ ಸುಜ್ಞಾನ ಕಾಯನೆ
ಸುಜ್ಞಾನ ಪ್ರತಿಷ್ಠಿತನೆ ತ್ರಿಜ್ಞಾನ ಧರನೆ ॥ ೫

ಅನಂತ ಜ್ಞಾನನೆ ಅನಂತಕಾಯನೆ
ಅನಂತ ಶುಕದೀಪ ಆತ್ಮ ಪ್ರತಿಷ್ಠಿತನೆ ॥ ೬

ವಿಶ್ವಸ್ವರೂಪನೆ ಶಾಶ್ವತ ಕಾಯನೆ
ಶಾಶ್ವತ ಸುಖವಿತ್ತು ಸಲಹು ಜಿನನಾಥ ॥ ೭

ಚಂದ್ರಗಿರಿಯವಾಸ ಚಂದ್ರನ ಸಮ್ಯಕ್ತತಾ
ಚಂದ್ರಕೋಟಿಪ್ರಭ ಚಂದ್ರಜಿನಚಂದ್ರ ॥ ೮

ಮೋಕ್ಷ ಲಕ್ಷ್ಮೀಯಕಾಂತ ಸೂಕ್ಷ್ಮಸ್ಥಳ ನಿವಾಸ
ಸಾಕ್ಷತಾ ಸುಖದೊಡೆಯ ಸುಜ್ಞಾನ ಕಾಯ ॥ ೯

ಸರ್ವದೋಷವ ಗೆಲ್ದು ಸರ್ವಜ್ಞಾನನೆನಿಸಿದೆ
ಸರ್ವವಿಘ್ನಪ ಹರನೇ ಸರ್ಪಾಸನರೂಢ ॥ ೧೦

ಬೆಳ್ಗುಳ ಪುರವಾಸ ಚಂದ್ರಗಿರಿಯವಾಸ
ಭಕ್ತರ ಸಲಹಯ್ಯ ಪಾರೀಶ್ವನಾಥ ಎಚ್ಚರಿಕೆ ಎಚ್ಚರಿಕೆ ॥ ೧೧

## ೩೬. ನಿಮ್ಮಪಾದವಎಲ್ಲಿ

ನಿಮ್ಮ ಪಾದವ ಎಲ್ಲಿ ಕಾಣೆ
ಸ್ವಾಮಿ ಸನ್ನುತ ಪಾರೀಶ್ವ ಜಿನರೆ ನಿಮ್ಮಾಣೆ ॥ ಪಲ್ಲವಿ
ಹಲವು ಯೋನಿಯೊಳು ನಾ ಬಂದೆ ಬಹು
ನೆಲೆಯ ಕಾಣದೆ ಬಹಳ ಪಾಶದಲಿ ನೊಂದೆ
ಕಾಲದೂರವ ಮಾಡೋ ತಂದೆ ಮುಕ್ತಿ
ಲಲನೆನಿಸಿ ನಾ ನಿಮ್ಮ ಪಾದದೊಳು ನಿಂದೆ ॥ ೧

ಅರಿತು ವಿಚಾರಿಸಬೇಕು ಇದರೊಳು ಸಂ
ಸಾರವು ನಮಗಿದು ಸಾಕು ನಿಮ್ಮ
ಅರ್ಹನಲ್ಲದೆ ಉಳಿದೆಲ್ಲ ಸಾಕು
x x x x x x x x x x x ॥ ೨

ಭೂಮಿ ಶೃಂಗಾರ ಭವನಿಯವಳೆ
ಪ್ರೇಮದಿ ಶೋಭಿತ ಅನುಮಿಶ ಗಿರಿಯ
ನೆ ಮಾಡಿ ನೆರೆನಾಥ ತತ್ವವಧಿಯಾ ಕರ್ತೃ
ತಾ ಮದ್ದಳೆಯ ಕಾಶಿಯ ಜಿನರಾಜ ನಿಮ್ಮ || ೩

**೩೭. ಭಾವಿಸಿಕೇಳಿರೋಎಲೆ**

ಭಾವಿಸಿ ಕೇಳಿರೋ ಎಲೆ ಜೀವ
ಭಾವಜಹರ ಜಿನ ವಚನವನು || ಪಲ್ಲವಿ

ಶ್ರೀ ಜಿನಶಾಸನಾಜ್ಞೆಯ ಮೀರಿಯೆ
ಜೂಜಿಂ ಪಾಂಡುವರೊಲಿದಾಡಿ
ರಾಜಾರ್ಥವನುಳಿದಡವಿಯ ಹೊಕ್ಕರು
ಜೂಜಿನ ದೆಸೆಯನು ಬಿಡು ಜೀವ || ೧

ವೈಶ್ಯಕುಲೋತ್ತಮ ಚಾರುದತ್ತಾಖ್ಯನ
ವೇಶ್ಯಗಿದ್ದುದನೆಲ್ಲವನಿತ್ತು
ಹಾಸ್ಯಕೆ ಭಾಜನವಾದನು ಜಗದೊಳು
ವೇಶಿಯ ವ್ಯಸನವ ಬಿಡು ಜೀವ || ೨

ಪರಬಲ ಜಲಧಿಗೆ ಒಡಬನೆಂದೆನಿಸಿದ
ಉರವಿ ಕ್ರಮಯುತ ರಾವಣನು
ಪರಸತಿಗಳಳುಪಿಯೆ ನರಕಕ್ಕಿಳಿದನು
ಪರಸತಿಯಾಸೆಯ ಬಿಡು ಜೀವ || ೩

ಬೇಂಟೆಯ ದೆಸೆಯಿಂ ಬ್ರಹ್ಮದತ್ತಾಖ್ಯನು
ಕಂಟಕ ಬಹುದುರ್ಗತಿಯೊಳಗೆ
ಟೆಂಟೆನಿಸಿಹೆ ಬಹುದುಃಖವನುಂಡನು
ಬೇಂಟೆಯ ದೆಸೆಯಂ ಬಿಡು ಜೀವ || ೪

ಕಳವಿನ ದೆಸೆಯಿಂ ಶಿವಭೂತಾಖ್ಯನು
ಪಳಿಯುಂ ಪಾಪಕ್ಕೆ ನೆಲೆಯಾಗಿ
ಇಳಿದು ದುರ್ಗತಿ ಏಳುದುಃಖವನುಂಡನು
ಕಳವಿನ ದೆಸೆಯನು ಬಿಡು ಜೀವ || ೫

ಮಾಂಸದ ದೆಸೆಯಿಂದ ಭಟನೆಂಬರಸನು
ಹಿಂಸೆಯೊಳೆಸಗಿದ ಪಾತಕದಿಂ
ಸಂಸಾರದೊಳತಿ ದುಃಖವನುಂಡನು
ಮಾಂಸದಾಕಾಂಕ್ಷೆಯ ಬಿಡು ಜೀವ ‖ ೭

ವಿದ್ಯೆಯು ಬುದ್ಧಿಯುವೆಂದತಿ ಧರ್ಮವ
ನಿರ್ದ್ದಡೆಯಿಂ ನೆರ x x ಲಗಿಸುವ
ಮದ್ಯದ ದೆಸೆಯಿಂ ಯಾದವರಳಿದರು
ಮದ್ಯದಾಕಾಂಕಾಂಕ್ಷೆಯ ಬಿಡು ಜೀವ ‖ ೭

ಈ ಸಪ್ತವ್ಯಸನವನುಳಿದವರ್ಗೆ
ವಾಸವ ಪದವಿಯನನುಭವಿಸಿ
ಭಾಸುರ ನಿತ್ಯ ನಿರಂಜನ ಮೋಕ್ಷ ನಿ
ವಾಸಿಗಳಪ್ಪರು ಕ್ರಮದಿಂದ ‖ ೮

ಇಂತಿ ಪದಗಳನೋದುವ ಕೇಳುವ
ಚಿಂತಿಪ ಭವ್ಯ ಜನಗಳಿಗೆ
ಕಂತುಮದನ ಪಾರೀಶ್ವ ಜಿನೇಶ್ವರ
ಸಂತತ ಪದವಿಯನಮಗೀಯ್ವಾ ‖ ೯

**೩೮. ಹೆಚ್ಚಿನವನೀನು**

ಹೆಚ್ಚಿನವ ನೀನು ಮೂರು ಲೋಕಕ್ಕೆ
ಹೆಚ್ಚಿನಾ ಸ್ವಾಮಿ ನೀನು
ನಿಶ್ಚಲ ಪೆನಗೊಂಡೆ ಪುರದೊಳು ನೆಲಸಿದ
ಪಚ್ಚೆ ಪಾರೀಶ್ವ ಜಿನ ‖ ಪಲ್ಲವಿ

ಜಗವ ಸೃಷ್ಟಿಸಿದನಲ್ಲ ಎಲೆಸ್ವಾಮಿ
ಮಗಳಿನೆಸೊ ತಾನಲ್ಲ
ಮುಖನಾಲ್ಕು ಪಡೆಯಲಿಲ್ಲ ಎಲೆಸ್ವಾಮಿ
ಜಗದೊಳು ಭಂಡನಲ್ಲ ‖ ೧

ಹತ್ತಾವತಾರನಲ್ಲ ಎಲೆಸ್ವಾಮಿ
ಪತ್ತಿಲ್ಲಿ ಸ್ತ್ರೀಯರಿಲ್ಲ

ಬೆತ್ತಲೆ ಮೀಯ್ವ ಹೆಣ್ಗಳ ಕಂಡು ಸೀರೆಯ
ಎತ್ತಿಕೊಂಡೊಯ್ಯಲಿಲ್ಲಾ ॥ ೨

ಶಿರಮಾಲೆ ಸುಡಲಿಲ್ಲ ಎಲೆಸ್ವಾಮಿ
ಕರಿಚರ್ಮ ಹೊದೆಯಲಿಲ್ಲ
ಕರದೊಳು ತ್ರಿಶೂಲವಿಲ್ಲ ಎಲೆಸ್ವಾಮಿ
ಉರಿಗಣ್ಣು ನೊಸಲೊಳಿಲ್ಲ ॥ ೩

ಹರನು ಭಿಕ್ಷವ ಬೇಡಿದ ಎಲೆಸ್ವಾಮಿ
ಹರಿಗೋವುಗಳ ಕಾಯ್ದನು
ಶಿರವ ನೀಗಿದ ಬ್ರಹ್ಮ ಇವರು ಮೂ
ವರು ಹಗರಣಕೊಳಗಾದಾರು ॥ ೪

ಪೆನಗೊಂಡಾಚಾರ್ಯರಿಗೆ ಎಲೆಸ್ವಾಮಿ
ಘನತರ ಸುಖವನಿತ್ತೆ
ಅನುದಿನ ರಕ್ಷಿಸು ಪಾರೀಶ್ವ ಜಿನತಂದೆ ಶ
ರಣಯ್ಯ ನಿಮ್ಮ ಪಾದಕ್ಕೆ ॥ ೫

## ೩೯. ನೀನೆಕಾರುಣ್ಯಸಂಪನ್ನ

ನೀನೆ ಕಾರುಣ್ಯ ಸಂಪನ್ನ ಸಮ್ಯಜ್ಞಾನ ವಿ
ತ್ಪನ್ನ ವರ್ಧಮಾನ ಮುನಿಪರನ್ನ ॥ ಪಲ್ಲವಿ

ಐದು ಬಾಣಗಳನೆ ತೊಟ್ಟು ಡಾಮ
ಯಿದೋರದೆ ಯೇಸುವಂಗಜನ
ಹೊಯ್ದಡೆ ವೈದನೆಯಲಿವನೇನೊ
ನೊಂದ ಹಸಲ್ಮನೆಂದು ಬಾಯಿ ಪಿ
ಡಿದು ಕೈದಿಲ್ಲದೆ ಗೆಲ್ದು ರಕ್ಷಿಸಿಬಿಟ್ಟೆಯಲ್ಲಾ ॥ ೧

ದೇಹಿಗಳೆಲ್ಲರು ತಮಗೆ ಆಹಾರವೆಂದಿಡಿರಾಂತ
ಮಹಾರಾಕ್ಷಸಂ ನಕಾದ್ರಯೆಂದೆಂಬರೆಬ್ಬ
ವಿಹತ ಮೋಹ ಶಾಂತಿ ರಸದಿ ನಂದಿಸಿ ಪೆರುಗದಕೆ
ಜ್ಜ ಹಲ್ಲು ಹಾವು ಪಡಿವಂತೆ ಪಡೆದು
ಸಾಹಸದ ಪೆಜ್ಜನುಡಿಯ ಬಾಹರಾವಲರು
ಗೆಲ್ದು ತಲೆನಾಯ್ದು ಭೂಲೋಕ ಮೆಚ್ಚ ॥ ೨

ಕಲಹ ಗೆಯ್ದವರನು ಕಾಯಿದ ಸಲೆ ಒಬ್ಬರಿಗೆಂತು ಕರುಣ
ಲಲಿತಕೀರ್ತಿಯೋಗಿ ಎತ್ತ ಜಾಡಿರದೆ ಜೀವ
ಕುಲಕೆ ಇಷ್ಟಾರ್ಥವನು ಪಾಲಿಪ ತ್ರಿಕಲ್ಪ ತರುವೆ ನುಡಿಯ
ಗೆಲುವೆಂತೊ ಶೃಂಗಾರಕವಿಯ ಪಾವನ್ನಗುರುವೆ ಯೋಗಿ
ತಿಲಕ ವರ್ಧಮಾನಮುನಿ ತಾ ಪುಣ್ಯದಾ ಕರುವೆ ॥ ೩

**<u>೪೦. ತಾಯೇನೀನೋಡಿ</u>**

ತಾಯೇ ನೀನೋಡಿ ವರ್ಧಮಾನಮುನಿ
ರಾಯನೆ ತೆರಜಾನನೆ ॥ ಪಲ್ಲವಿ

ತೋರಾ ಕುಚಗಳ ತೊಂಡೆವಾಯ್ದೆರೆಯ
ಈ ರಾಜ್ಯದ ನೀರೆಯರನೊಲ್ಲದೆ x x x ಟು
x x x x x x x x x x x x ತನ್ನ
ಶರೀರವ ದಂಡಿಸುತಿಹನು ॥ ೧

ಕ್ಷೋಣಿಯೊಳೆಲ್ಲರು ಧರಿಸಲಾದೊಂಬತ್ತು
ಮಾಣಿಕ್ಯಾಭರಣವನೊಲ್ಲದೆ
ಕಾಣಬಾರದ ಮೂರು ರನ್ನವ
ಮಾಣದೆ ತಾಳ್ದು ರಂಜಿಸುತಿಹನು ॥ ೨

ತರಳೆ ಪೊಗೆನ್ನದಿರು ನೀನರಿಯೆ
ನ್ನರುವರ ಸ್ಥಿರಸುಖಕೊಲಿವರೆ
ಪರಮ ಶೃಂಗಾರಕವಿ ಬೊಮ್ಮರಸನ ಶ್ರೀ
ಗುರು ವರ್ಧಮಾನ ಮುನೀಂದ್ರನಾ ॥ ೩

**<u>೪೧. ಎಷ್ಟುದೂರಬೆಳಗುಳವೆಂದೆ</u>**
**ರಾಗ: ಬಿಲಹರಿ**

ಎಷ್ಟುದೂರ ಬೆಳಗುಳವೆಂದೆ
ಇಷ್ಟರಲ್ಲಿ ಕಾಣುತ ಬಂದೆ
ಮುಟ್ಟಿ ಜಿನರ ಪಾದವ ಕಂಡೆ ॥ ಪಲ್ಲವಿ

ಶೃಂಗಾರದ ವನವ ಕಂಡೆ
ಭೃಂಗಿಗಳ ಝೇಂಕಾರವ ಕಂಡೆ
ಅಂಗಚಾರಿಯ ಭವನವ ಕಂಡೆ ॥ ೧

ಸಮವಸರಣಾರ ಕಂಡೆ
ಅಮರ ದಿಕ್ಪಾಲಕರ ಕಂಡೆ
ಕಮಲ ಪೀಠವನು ಕಂಡೆ
ವಿಮಲ ಮುನೀಶ್ವರರ ಕಂಡೆ ॥ ೨

ಆದಿಚಕ್ರಿ ಅನುಜನಂತೆ
ಕಾದಿ ಅಣ್ಣನೊಳಗೆ ಗೆಲಿದನಂತೆ
ಸಾಧಿಸಿ ಕಪ್ಪಗೈದನಂತೆ
ಆದಿ ಮೂರುತಿ ಕಂಡನಂತೆ ॥ ೩

ಸತಿಸುತರನ್ನು ಬಿಟ್ಟು
ಯತಿಯಾಕಾಂಕ್ಷೆಯನು ತೊಟ್ಟು
ಗತಿ ಸಾಧಿಸುವುದ ಪಟ್ಟು
ಕ್ಷಿತಿಯೊಳು ಕಷ್ಟಪಟ್ಟು ॥ ೪

ಒತ್ತಿ ಒದರಿ ಹಾರಿತು ಮೇಲೆ
ನೆತ್ತಿಯಲಿ ತಪದಾ ಜ್ವಾಲೆ
ಹೊತ್ತು ಕಡೆಗೆ ಹೊರಸಿಕೊಂಡು
ಸುತ್ತಿಕೈಯೊಳಾಗೀಗಿರಿಯಾ ಎಷ್ಟು ॥ ೫

ಜ್ಯೋತಿಯಂತೆ ಪ್ರಭೆಯದಾತ್ಮ
ಪೂತಿಕರವ ಕಡಿಸಿ ಮಹಾತ್ಮ
ಭೂತದೊಳು ನಿಂದು ಮಹಾತ್ಮ
ಖ್ಯಾತಿಯೊಡೆದ ಪುಣ್ಯಾತ್ಮ ಮಹಾತ್ಮ ॥ ೬

ಮೈಯೆಲ್ಲ ಹಬ್ಬಿದವಂತೆ
ಮಂಡೆ ಕರುಳಿನ ಯೋಗದ ಚಿಂತೆ
ಸ್ವಾಮಿ ನೆಲಸಿದ ಬೆಳ್ಗೊಳವಂತೆ ॥ ೭

ಸುತ್ತ ಬಳಸಿದ ಎಪ್ಪತ್ತು
ರತ್ನ ಖಚಿತ ಬಿಂಬಗಳಿಂದ
ನಿತ್ಯ ವೈಭವ ಲೋಕಹದಿಂದ
ಸ್ವಾಮಿಗೊಪ್ಪಿತು ಅತಿ ಚೆಲುವಿಂದ ॥ ೮

ಭಕ್ತರ ಸಲಹೈದೇವಾ
ಮುಕ್ತಿ ಮಾರ್ಗವ ಕೊಡುವ ಭಾವ
ಕರ್ತೃ ನೀನಲ್ಲದಿನ್ನಾರು ದೇವ
ಸಾರ್ಥಕವಾಯಿತು ನಿಮ್ಮ ನೋಡಿದೊಡಾತ್ಮ ॥ ೯

ದಕ್ಷಿಣಕ್ಕೆ ಕಾಶಿಯಂತೆ
ಲಕ್ಷ್ಮಿ ನೆಲಸಿದ ಬೆಳಗುಳವಂತೆ
ಇಕ್ಷುಚಾಪನ ಗೆದ್ದನಂತೆ
ಮೋಕ್ಷಗಾಮಿ ಗೊಮಟೇಶನಂತೆ ॥ ೧೦

ಕಂಡೆಕಂಡೆ ಕಂಡೆನಿಂದೆ
ಮಂಡಲೇಶನ ಪಾದವಕಂಡೆ
ಕಂಡು ನಿಂದೆ ಕರವ ಮುಗಿದೆ
ಸ್ವಾಮಿ ನೆಲಸಿದ ಬೆಳಗುಳವಂದೇ ॥ ೧೧

ದೇಶಿಗಣದ ಚಾರುಕೀರ್ತಿ
ಭಾಸುರಪಂಡಿತ ಮೂರ್ತಿ
ದೇಶದೊಳು ನಿಮ್ಮ ಕೀರ್ತಿ
ಲೇಸಾಗಿಪರ್ಚಿಸುವ ಮೂರ್ತಿ ॥ ೧೨

ಧರೆಯೊಳಗೆ ಬೆಳ್ಗೊಳ ಪುಟ್ಟಿ
ಮಕ್ಕಳೊದಿಸುವ ಮಠವು ಸ್ವಾಮಿ
ಭಕ್ತಚಂದ್ರಯ್ಯ ಮಾಡಿದ ಪದವು
ಅಕ್ಕರಿಂ ಕೇಳಿರೋ ಜನರು ॥ ೧೩

## ೪೨. ಭಾವಿಸಿಗುಮ್ಮಟಜಿನಪತಿ

ಭಾವಿಸಿ ಗುಮ್ಮಟ ಜಿನಪತಿಯಾ
ಜೀವನೆ ಪಡೆವಡಿಸಿದತಿಯಾ ॥ ಪಲ್ಲವಿ

ಪುರಹರಿತಾರ್ಚಿತ ಪದಯುಗನಾ
ಭರತಚಕ್ರಿಗೆ ಚಕ್ರಪದವಿತ್ತನಾ
ಕರಕರ ಕೋಟಿ ತನು ಪ್ರಭನಾ ॥ ೧

ಕಾವನ ಕಬ್ಬುವಿಲ್ಲವ ನೇಯ್ದು
ಪೂವಿನಂಬುಗಳ ಮುರಿದ ಮೋಹನ
ಠಾವ ಹಿಡಿದುಟ್ಟ ಸುಮುಕ್ತಿ
ಭಾವಕಿಯೊಡಗೂಡಿದನಿರನಾ ॥ ೨

ನೆಲವೆಣ್ಣಿನ ಮುಖಕಳವಟ್ಟಾ
ತಿಲಕವೆಂದೆನಿಸುವ ಬೆಳ್ಗುಳದ
ಅಲಘು ಗುಣಗ್ರದೊಳಗೆ ನಿಂದ
ಕಲ್ಲಲಿ ವಿದೂರ ಗುಮ್ಮಟ ಜಿನರಾ ॥ ೩

**೪೩. ನೋಡಿನಾದಣಿಯೇ**

**ರಾಗ: ಕಾಂಬೋಜಿ ತಾಳ: ರೂಪಕ**

ನೋಡಿ ನಾ ದಣಿಯೇ ದೇವನಾ
ಪಾಡಿ ನಾ ಧಣಿಯೇ
ರೂಢಿಗಧಿಕವಾದ ಬೆಳ್ಗುಳ
ನಾಡ ಪೊರೆವ ಗೋಮಟೇಶನ ॥ ಪಲ್ಲವಿ

ಆದಿಜಿನನ ತನುಜನೊಡನೆ
ಕಾದಿ ಗೆಲಿದ ಭರದೊಳೊಡನೇ
ಬೇಧಿಸಲು ತಾ ಕರ್ಮಗಳನೇ
ಸಾಧಿಸಿದ ಯೋಗಿ ಪಾದವಾ ॥ ೧

ರಾಜ್ಯಧನವು ಕನಕ ಇಂದು
ವ್ಯಾಜ್ಯಕ್ಕಿದುವೆ ಮೂಲವೆಂದು
ತ್ಯಾಜ್ಯಗುಣವ ಪಿಡಿದು ಮುಂದು
ಪೂಜ್ಯನಾದ ನಿನ್ನ ಪಾದವ ॥ ೨

ಬಂಧು ಬಳಗವನ್ನು ತ್ಯಜಿಸಿ
ತಂದೆ ಆದಿ ಜಿನನ ಸ್ಮರಿಸಿ
ನಿಂದು ಕಠಿಣ ತಪವ ಚರಿಸಿ
ಸುಂದರಾಂಗನಾದ ನಿನ್ನನು ॥ ೩

ಚಳಿಯು ಹಸಿವೇ ತೃಷೆ ಇವೆಲ್ಲಾ
ಮಳೆಯ ಬಿಸಿಲ ಗಣನೆ ಇಲ್ಲ

ಇಳೆಗೆ ನೀನೇ ತಪಕೆ ಮಲ್ಲ
ನಳಿನ ಲೋಚನ ಪಾದಯುಗಲವ ‖ ೪

ಎಲ್ಲ ಜನರು ನೋಡಲೆಂದು
ಕಲ್ಲಗುಡ್ಡದ ಮೇಲೆ ನಿಂದು
ಪುಲ್ಲಲೋಚನನಾಗಿ ನಿಂದು
ನಲ್ಲೆಯರರಸನಾದ ನಿನ್ನನು ‖ ೫

ಬಿಳಿಯ ಶಿಲೆಯ ಮೂರ್ತಿಯಲ್ಲಿ
ಚೆಲುವನಾಗಿ ತೋರುತ್ತಲ್ಲಿ
ಇಳೆಯ ಜನರ ಹೃದಯದಲ್ಲಿ
ಜಲಜಲೋಚನ ಪಾದಯುಗಲವ ‖ ೬

ದೇಶದೇಶದ ಜನರ ಮನದಿ
ವಾಸಿಸಿರುವೆ ನಿನ್ನ ಗುಣದಿ
ದೋಷಗಳನು ಕೆಡಿಸಿ ಕ್ಷಣದಿ
ಈಶನಾದ ನಿನ್ನ ಪಾದವ ‖ ೭

**೪೪. ಪುರುಪರಮೇಶನಸ್ಮರಿಸಿ**

**ರಾಗ: ಬೇಹಾಗು ಆದಿ ತಾಳ**

ಪುರುಪರಮೇಶನ ಸ್ಮರಿಸಿ ಮನದೊಳಾ
ಪರಮಹಂಸಮುಖ ಮೂರುತಿಯನು
ಹರುಷದಿ ಪೂಜಿಪೆದೇವಿ ಪದ್ಮಣಿಯ
ಚರುಣಾಂಬುಜದೊಳಗೆರಗುವೆನು ‖ ಪಲ್ಲವಿ

ಧರೆಗೆ ಪವಿತ್ರವು ನರಪತಿ ಮೂರ್ತಿ
ವರಪುರದೇವನ ಪುತ್ರನದೂ
ಹರುಷವನೀಯುವ ಚರಿತೆಯ ಪೇಳುವೆ
ಸರಳ ಜೀವಿಗಳು ಲಾಲಿಪುದು ‖ ೧

ಕೊಳದೊಳು ತಾವರೆ ಬಿಳಿಯಿರುತಿರಲು
ಬಿಳಿಕೊಳಯೆನ್ನುವ ಪೆಸರಾಯಿತು
ಇಳೆಯೊಳು ಮುಂದಕೆ ಬಳಕೆಗೆ ಬರುತ
ಬೆಳ್ಗೊಳವೆನ್ನುವ ಊರಾಯಿತು ‖ ೨

ಹಿಂದಕೆ ಕೆಲಮುನಿ ವೃಂದವು ನೆಲಸಿದ
ರಂದಿಗೆ ಪೆಸರು ಅದು ಬದಲು
ಮಂದಿಗಳೆಲ್ಲರೂ ಶ್ರವಣಬೆಳ್ಗೊಳ
ವೆಂದು ಪಾಡಿದರು ಆ ಮೊದಲು ॥ ೩

ಚಂಡ ಪರಾಕ್ರಮಿ ಗಂಡುಗಲಿಯು ಚಾ
ಮುಂಡರಾಯನು ಒಂದಿನದಿ
ಕಂಡನು ಸ್ವಪ್ನದಿ ಬಂಡೆಯೊಳಗಿಹ
ದಿಂಡ ಮೂರ್ತಿಯ ತಾ ಮುದದಿ ॥ ೪

ತಟ್ಟನೆ ಏಳುತ ಬೆಟ್ಟದಾಕಡೆ
ದಿಟ್ಟಿಸಿ ನೋಡಿದನಾತುರದಿ
ರಟ್ಟೆಯ ಬಲವನು ಕೊಟ್ಟು ಬಂಡೆಗೆ
ಬಿಟ್ಟನು ಬಾಣವ ತಾ ಭರದಿ ॥ ೫

ಸಿಡಿಲಿನ ಶಬ್ದವಗೊಡುತಲಿ ಬಾಣವು
ಬಡಿಯಿತು ಬಂಡೆಗೆ ತಾ ಜವದಿ
ನಡುಗಿತು ಭೂಮಿಯು ಒಡೆಯಿತು ಬಂಡೆಯು
ಪುಡಿಪುಡಿಯಾಯಿತು ಆ ಕ್ಷಣದಿ ॥ ೬

ಬೆಟ್ಟದೊಳಗೆ ತಾ ನೆಟ್ಟಗೆ ನಿಂತಿಹ
ದಿಟ್ಟತನದ ಆ ಮೂರ್ತಿಯನು
ದೃಷ್ಟಿಸಿ ನೋಡಿ ಸಂತುಷ್ಟ ಮನದೊಳಾ
ಮುಟ್ಟಿ ಪೂಜಿಸಿದ ಪಾದವನು ॥ ೭

ಬಿಸಿಲಿಗೆ ಕಂದದ ಹಸಿವಿಗೆ ನೊಂದದ
ಅಸಮವೀರ ನೀ ಗೊಮ್ಮಟನು
ವಸುಧೆಗೀಶನು ಕುಸುಮಬಾಣನು
ನಸುನಗೆ ಬೀರುವ ಗೊಮ್ಮಟನೂ ॥ ೮

ಚಳಿಗೆ ನಡುಗದ ಮಳೆಗೆ ನೆನೆಯದ
ಚೆಲುವನೀತನೆ ಗೊಮ್ಮಟನು
ನಳಿನ ವದನನೂ ಸಬಲಕಾಯನೂ
ಇಳೆಗೆ ಮಲ್ಲನೋ ಗೊಮ್ಮಟನೂ ॥ ೯

ನಿದ್ದೆಯ ಮಾಡದೆ ಎದ್ದು ಹೋಗದೆ
ಸದ್ದುಗಯ್ಯದೆ ನಿಂತಿಹನು

ಉದ್ದದೊಳಗೆ ತಾ ಅರವತ್ತಡಿಯಿಂ
ಶುದ್ಧ ದೇಹದೊಳಿರುತಿಹನು ॥ ೧೦

ಎಷ್ಟು ಹೇಳಿದರಷ್ಟಷ್ಟಿರುವುದು
ಕಷ್ಟವು ಎನಗಿದು ವರ್ಣಿಪುದು
ಸ್ಪಷ್ಟದಿ ತಿಳಿಯಂದಿಷ್ಟವುಳ್ಳವರು
ಬೆಟ್ಟದ ಮೇಲೆಯೆ ನೋಡುವುದು ॥ ೧೧

ಹರುಷದಿ ರಾಯನು ತ್ವರಿತದೊಳೆಸಗಿದ
ಪರಿಪರಿ ವಿಧದಾ ವಿಭವದಲಿ
ವರಪ್ರತಿಷ್ಠೆಯಿಂದಿರಿಸಿದ ಪಂಚ
ವರ ಕಲ್ಯಾಣದ ಪೂಜೆಯಲಿ ॥ ೧೨

ಅಂದಿನ ಮೊದಲು ಇಂದಿನ ತನಕ
ಕುಂದಿ ಕುಂದದಾ ಮೂರ್ತಿಯನು
ಮಂದಿಗಳೆಲ್ಲರು ಒಂದೆಡೆ ಸೇರುತ
ಚಂದದಿ ಮಾಳ್ಪರು ಪೂಜೆಯನು ॥ ೧೩

## ೪೫. ಮುಗಿಲುಮುಟ್ಟುವಮೂರ್ತಿ

ಮುಗಿಲು ಮುಟ್ಟುವ ಮೂರ್ತಿ
ಸುಗುಣ ಶುಭವನ ಕಂಡೆನಯ್ಯ
ಜಗದಗ್ರಗಣ್ಯ ಶ್ರೀಗೊಮಟೇಶಸ್ವಾಮಿ ಕಂಡೆನಯ್ಯ ॥ ಪಲ್ಲವಿ

ಕಳಕಳಿಸುವ ನಗೆಮೊಗದ ಶೃಂಗಾರನ ಕಂಡೆನಯ್ಯ
ನಳಿನೇತ್ರಂಗಳನು ನಾ ಮಾರನಾ ಕಂಡೆನಯ್ಯ
ಸುಳಿಸುರುಳಿಂದ ಶೋಭಿಪ ಜಿನನ ಕಂಡೆನಯ್ಯ
ಇಳೆಯೊಳಧಿಕ ಸುಗುಣ ಮಣಿಹರನ ಕಂಡೆನಯ್ಯ ॥ ೧

ಆದಿರಾಜೇಂದ್ರನ ಸುಖಾರ್ಚಿತ ಕರ್ಮನ ಕಂಡೆನಯ್ಯ
ಆದರದಿಮದ ನೋಡುವರ ಕಣ್ಗೆ ರಮ್ಯನಾ ಕಂಡೆನಯ್ಯ
ಆದಿಕಾಲದ ಚಕ್ರವರ್ತಿಯ ತಮ್ಮನ ಕಂಡೆನಯ್ಯ
ಮೇದಿನಿಯೊಳಧಿಕತಿಶಯವಾದ ಬ್ರಹ್ಮನ ಕಂಡೆನಯ್ಯ ॥ ೨

ಧರೆಯೊಳಧಿಕ ಬೆಳ್ಗೊಳಪುರವಾಸ ಕಂಡೆನಯ್ಯ
ಪರಮ ಕಾರುಣ್ಯದಿ ಸುಗುಣ ವಿಲಾಸನ ಕಂಡೆನಯ್ಯ
ಸಾರಸತ್ಕವಿ ಬಾಹುಬಲಿ ಯತಿಪ್ರೇಮಿಯ ಕಂಡೆನಯ್ಯ
ಕಾಮಿತಾರ್ಥವನೀವ ಕರುಣ ಪ್ರಭಾವವ ಕಂಡೆನಯ್ಯ ॥ ೩

**<u>೪೬. ಕರುಣಿಸಿಕಾಯೋಎನ್ನ</u>**

ಕರುಣಿಸಿ ಕಾಯೋ ಎನ್ನ ಶ್ರೀ ಗೋಮ್ಮಟೇಶ
ಕರುಣಿಸಿ ಸಲಹು ಯೆನ್ನ ॥  ಪಲ್ಲವಿ

ಧರೆಯೊಳಧಿಕವಾದ ಪೌದನ ಪುರಪತಿ
ಧರೆಯೊಳಗ್ರಜನೊಳು ಸೆಣಸಿ ನೀ ಜಯಿಸಿದೆ ॥ ೧

ಮಲ್ಲಯುದ್ಧದಿ ನೀನು ಬಲ್ಲಿದನೆನಿಸಿದೆ
ಬಲ್ಲಿದ ಭುಜಬಲಿಯೆನಿಸಿ ನೀ ಮೆರೆದಿಹೆ ॥ ೨

ದೃಷ್ಟಿಯುದ್ಧದಿ ನೀನು ದಿಟ್ಟನುಯೆನಿಸಿ ತಾ
ದಿಟ್ಟದಿ ಜಗದೊಳು ಶ್ರೇಷ್ಠನುಯೆನಿಸಿದೆ ॥ ೩

ಧರೆಯೊಳಗ್ರಜನೊಳ ಸೆಣಸಿದಪಕೀರ್ತಿ
ಹೊರೆಯದೆ ಹೋದೆ ನೀ ವೈರಾಗ್ಯದಿಂದಲಿ ॥ ೪

ಸತಿಸುತರನು ಬಿಟ್ಟು ಅತಿಕಾಂಕ್ಷೆಗಳಿಂದ
ಅತಿಶಯ ಸುಖವೀವ ಜಿನದೀಕ್ಷೆ ಪಡೆದನೆ ॥ ೫

ಸುತಾರ್ಯ ಭಾಂಡವ ನೆಲನ ಮೆಟ್ಟಿದೆ ಹೋಗಿ
ಅತಿ ಭಕ್ತ ಧರಣೇಂದ್ರನಿಂದ ಸ್ಥಳವ ಕೇಳಿ ॥ ೬

ಉಂಗುಷ್ಟದೊಳು ನಿಂದು ತಪಗೈಯ್ಯುತಿರುವಾಗ
ಜಗದೊಳತಿಶಯ ಭರತೇಶ ತಿಳಿದಾಗ ಕರುಣಿಸಿ ॥ ೭

ಬಂದು ಬೋಧಿಸಲಾಗ ಅಂಧಕಾರವ ಕೆಟ್ಟು
ಗಂಧಕುಟಿಯೊಳಗ ನೆಲಸಿದ ದೇವನೆ ॥ ೮

ಕ್ಷಿತಿಯೊಳಧಿಕವಾದ ಬೆಳ್ಗುಳದೊಳು ನಿಂದು
ಯತಿ ಪಂಡಿತಾರ್ಯ್ಯ ಸಲಹುವ ದೇವನೇ ॥ ೯

## ೪೭. ಹಂಬಲಿಸದಿರುಮನದಿ

ಹಂಬಲಿಸದಿರು ಮನದಿ ಹಲವ ನೆರೆ
ನಂಬು ಶ್ರೀ ಗೋಮ್ಮಟ ಜಿನಪದ
ವಂ ಬಿಡು ಮದವೆಂಟು ಮದತ್ರಯವ ಪೆರಗಿಡು
ಶಂಭಾದಿ ದೋಷಷ್ಟಕವ ಸುಡು ನಿತ್ಯತ್ವ ಸೇವೆಗಳಷ್ಟ
ದೃಢವಿಡಿಯಷ್ಟಾಗಮ ಗುರುಪದವಾ ‖ ೧

ಕೊಲ್ಲದುದೆ ಧರ್ಮವಿದೆನ್ನು ಈ
ಸೊಲ್ಲನು ಕಂಡಿಪುದು ಶ್ರುತವೆನ್ನು
ಎಲ್ಲ ಬಲ್ಲವ ಜಿನನೆನ್ನು ತಾ
ನೆಲ್ಲವ ತೊರೆದಯ್ದುವ ಗುರುವೆನ್ನು ‖ ೨

ಗಳಪದಿರಸೃತ ವಾಕ್ಯಂಗಳನು ಮನ
ದೊಳೆಣಿಸದಿರು ಕಳವ ನೀನು
ಎಳಸಿ ನೋಡದಿರನ್ಯ ವಧುಗಳನು
ಹಲಹಲವಕಾಂಕ್ಷೆಗಳಿಂದ ಫಲವೇನು ‖ ೩

ತ್ರಿವಿಧಪಾತ್ರದಿ ನಾಲ್ಕು ದಾನ ಕೊಡು
ತ್ರಿವಿಧ ಕಾಲ ಜಿನಪೂಜೆಯ ಮಾಡು
ವಿವಿಧ ಪರ್ವದಿನದೊಳು ಅಸನವನು ಬಿಡು
ಪುಣ್ಯಗಳಿಸುವ ಮಾರ್ಗವಿದು ನೋಡು ‖ ೪

ಹೊಟ್ಟೆರಡಾಗದೆ ಪರಿಣಮಿಸು ಬಹು
ನಿಷ್ಟುರ ಬಂದಡೆಯಲಿ ಕ್ಷಮಿಸು
ಕೆಟ್ಟದರೊಳು ಮನವನು ಮರಿಸು ಎಡ
ಪುಟ್ಟಿದೈಯ್ಯಂಗನೆಗೊಲಿಸು ‖ ೫

ಸಜ್ಜನ ಸಂಗವ ಬಿಡಬೇಡ
ದುರ್ಜನ ಗೋಷ್ಠಿಯೊಳಿರಬೇಡ ಪೆರ
ರಾರ್ಜಿತ ಧನಕಾಸೆಯ ಪಡಬೇಡ ನಿಜ
ದುರ್ಜಗವನು ಮರೆಯಲಿಬೇಡ ‖ ೬

ಗುರುಹಿರಿಯರನು ನಿಂದಿಸಬೇಡ ಪಂಚ
ಗುರುಪಾದವ ಬಿಡಬೇಡ

ಯೆರವಿನನೊಡಲ ನಚ್ಚಿರಬೇಡ
ಪೆರಪೆರ ತುಚ್ಚಿತವನು ಸುತ್ತಿರಬೇಡ ॥ ೭

ಪಿಸುಣ ಸಂಪರ್ಕದೊಳಿರಬೇಡ ಪೆರ
ರೆಸಕಕ್ಕೆ ಕಿಸುಕುಳ ಬಡಬೇಡ
ವಿಷಯೆಲ್ಲದಕ್ಕೆ ಮನಗೊಡಬೇಡ ದು
ರ್ವ್ಯಸನಿಳೊಡನಾಡಬೇಡ ॥ ೮

ಶಶಿರವಿ ಕೋಟಿ ಕಿರಣನೆನಿಸಿ
ಕುಸುವ ಬಾಣನ ಪೆರ್ಮೆಯುತ
ಮಿಸಿ ರಂಜಿಸುವ ಶ್ರೀ ಗೊಮ
ಟೇಶನ ಭಜಿಸಿ ॥ ೯

**೪೮. ತ್ರಿಭುವನಪತಿಶ್ರೀಭುಜುಬಲಿಯಂತೆ**

ತ್ರಿಭುವನಪತಿ ಶ್ರೀಭುಜಬಲಿಯಂತೆ
ಅಭಯವನಿತ್ತವನಂತೆ ॥ ಪಲ್ಲವಿ

ನಾಭಿಯ ಪುತ್ರಾದಿ ಜಿನರ ಸುರನಂತೆ
ಈ ಭೂಮಿಗಾದಿ ಚಕ್ರಿಯ ತಮ್ಮನಂತೆ
ಶ್ರೀ ಭುಜಬಲಿಯಾದ ಮನ್ಮಥನಂತೆ
ಶೋಭಿಪ ಬೆಳ್ಗೊಳದೊಳಗಿರ್ಪನಂತೆ ॥ ೧

ವರಸುರಮಾಭ್ಯಪಾದನ ಭೂಪನಂತೆ
ಶರಯ ಮೇಲ್ಯೆದು ಬಿಲ್ಲು ತೈದನಂತೆ
ಹರಿತಾಂಗರುಚಿ ಶೌರ್ಯ ವೀರ್ಯ ತಾನಂತೆ ॥ ೨

ಮೇರುವಧಿಕ ಗಂಭೀರ ತಾನಂತೆ
ನಾರಿ ಸುನಂದದೇವಿಯರ ಪುತ್ರನಂತೆ
ನೀರೆಯರೆದ್ದು ಸಾಸಿರ ಸ್ತ್ರೀಯರಂತೆ
ಕಾರುಣ್ಯನಿಧಿ ಕಲ್ಪಮರವಂದ್ಯನಂತೆ ॥ ೩

ಭರತಣ್ಣಗೊಲಿದ ಚಕ್ರದ ಮೂಲವಂತೆ
ಧರಿಸಿತು ರೌದ್ರ ಕಾಮಣ್ಣನಿಗಂತೆ

ಗಿರಿಮೇರು ಎರಡು ಒಂದಿದಿರೊಡ್ಡಿದಂತೆ
ಧರೆಗಧಿಕ ದೇಹಗೆಲ್ಲರಿದಾಯಿತಂತೆ ॥ ೪

ಜಲದೃಷ್ಟಿ ಮಲ್ಲಯುದ್ಧವಗೈದರಂತೆ
ತೊಲಗಿ ಚಕ್ರಿಗೆ ಮಾನಭಂಗವಾಯಿತಂತೆ
ಛಲದಂಕ ಚಕ್ರಕಾಮನೀ ಗೆದ್ದನಂತೆ
ಬಲಗೊಂಡು ಬೆಸನ ತಕ್ಷಣ ಬೇಡಿತಂತೆ ॥ ೫

ಆರುಕಾಂಡ ದೀಪಗಾಯ್ತುಪಮಾನವಂತೆ
ಮಾರಣ್ಯವೈರಾಗ್ಯ ತಕ್ಷಣ ಪುಟ್ಟಿತಂತೆ
ಸೇರಿದ ಚಕ್ರಾಧಿಪಾಗೆಂದನಂತೆ
ಮಾರ ನಿಗಮಪ್ರೋಮಗೆ ಬಿದ್ದರಂತೆ ॥ ೬

ಬಲ್ಮಿದ ಚಕ್ರಾದಿ ಭಂಗವಾಯಿತಂತೆ
ಪುಲ್ಲನಾಭನು ವಾರಿಮುಖವಿದ್ದನಂತೆ
ಎಲ್ಲ ಭಾಗ್ಯವ ತೃಣಕಿಣಿ ಕಂಡನಂತೆ
ಅಲ್ಲಿಂದ ಕೈಲಾಸಗಿರಿಗೆ ಹೋದನಂತೆ ॥ ೭

ತಾತನ ಸಮವಸರಣ ಹೊಕ್ಕನಂತೆ
ವೀತರಾಗನ ಕಂಡು ಬಲಗೊಂಡನಂತೆ
ಜಾತರೂಪಿನ ಯೋಗ ಕೈಗೊಂಡನಂತೆ
ಭೂತಗಳ್ಗೆರದೊಡೆ ದುಗುಡ ನಿಂತನಂತೆ ॥ ೮

ಚತುರ್ವಿಧ ವಸ್ತು ವರ್ಜಿತವಾಯಿತಂತೆ
ಮತಿಗೆ ವೈವರನಿದ್ದು ಬಲಿಗೈದನಂತೆ
ಜಿತ ಚಿತ್ತವಿಡಿದೇಕೊತ್ಸರ ನಿಂತನಂತೆ
ಖತಿಯ ನಿಂತಣ್ಣ ನೋಡಿ ಬಿರ್ದನಂತೆ ॥ ೯

ಹುತ್ತಗಳುಭಯ ಭಾಗದೊಳೆದ್ದವಂತೆ
ಸುತ್ತಿಕೊಂಡಾಗ ಭುಜಂಗಳ್ಗಂತೆ
ಹತ್ತಿ ಆವರಿಸಿದ ರಥವಣ್ಣಯಂತೆ
ಇತ್ತ ಶ್ರೀ ಚಕ್ರಿಕೀರ್ತಿ ಮೇರಿದ್ದನಂತೆ ॥ ೧೦

ಬರದಿ ಕೈಲಾಸ ಪರ್ವತಕೋದನಂತೆ
ಧರೆಯೊಳಂಥಾದ್ಯ ತಪಸ ಕಂಡನಂತೆ
ಸ್ಮರಯೋದಿ ಪಾದಪೂಜೆಯಗೈದನಂತೆ
ಶಿರವಾಗಿ ಸಾಷ್ಟಾಂಗವೆರಗಿದನಂತೆ ॥ ೧೧

ಸಿರಿ ರಾಜ್ಯ ತನು ಮೂರಸ್ತಿರವಂತೆ
ಮರುತಗೊಡ್ಡಿದ ಸೊಡರನ ಪರಿಯಂತೆ
ದುರಿತಾದಿಗಕ್ಷಯ ಸಿರಿ ನಿತ್ಯವಂತೆ
ಧರಿಸಿರ್ದ ಖತಿ ಚಕ್ರಿ ಬಿಡಿಸಿದನಂತೆ ॥ ೧೨

ಮದನ ಸಂಜ್ವಲನ ಕ್ರೋಧವ ಬಿಟ್ಟನಂತೆ
ವದನ ಸ್ವಭಾವ ನಿಲ್ಲಿಸಿಕೊಂಡನಂತೆ
ಬೆದರಿ ಘಾತಿಗಳೋರೆಂದೋಡಿದವಂತೆ
ಸಾಧಿಸಿತಾಗವಗೆ ಕೇವಲ ಜ್ಞಾನವಂತೆ ॥ ೧೩

ಮೂರು ಲೋಕಾವರಿಸಿತು ದೀಪ್ತಿಯಂತೆ
ಚಾರು ಶ್ರೀ ಗಂಧಕುಟಿಯೊಳ್ಗಗ್ದನಂತೆ
ಸುರ ಮತೀಂದ್ರರೈದೆರಗಿದರಂತೆ
ಮಾರಶ್ರೀ ನಿರ್ವಾಣಿ ಪತಿಯಾದನಂತೆ ॥ ೧೪

ಭರತಣ್ಣಗನುಜನೊಳ್ಗತಿ ಪ್ರೀತಿಯಂತೆ
ಮರಕತದೊಳ್ಗು ಭಾವಗೈಸಿದನಂತೆ
ಸಿರಿಯ ಪೌದನದಿ ಪೂಜಿಸಿಕೊಂಡನಂತೆ
ಇರಲಿತ್ತ ಕೌಶಲಪುರಿಯೊಪ್ಪಿತಂತೆ ॥ ೧೫

ದಶರಥರಾಯನ ಸುತರಾಮನಂತೆ
ವಸುಧೆಯಾಶ್ವರಿನೊಡಲೈದಿದನಂತೆ
ಪಾಸತ್ತಾದ ಕಣಜ ದೇಶವಿತ್ತಂತೆ
ಕುಶಲದಿ ಚಲಗೊಂಡು ಏರಿದನಂತೆ ॥ ೧೬

ಪಾದನಾದಿಪನಲ್ಮೆಗೈಸಿದನಂತೆ
ಮೋದದಿಂದ ಶಾಸನಾಂಕಿಸಿ ಪೋದನಂತೆ
ಹೋದ ಬಳಿಕ ಕೆಲಕಾಲವಾಯಿತಂತೆ
ಅಂದಿಂದೆ ಚಾಮುಂಡ ನೃಪ ಬಂದನಂತೆ ॥ ೧೭

ವನಮದ್ಯಗಿರಿಯಗ್ರಕೇರಿದನಂತೆ
ಮನಸಿಜ ದೇವನಾಶ್ಚರ್ಯ ಕಂಡನಂತೆ
ಘನತರ ಕೀರ್ತಿ ಕೊಂಡಾಡಿದನಂತೆ
ಮನುಜೇಶ ಬೆಳ್ಗೊಳಗೈಸಿದನಂತೆ ॥ ೧೮

ದೇವಸಮವಸರಣುದಯವಾದಂತೆ
ಭಾವಜದೇವನ ಸ್ಥಾನವಾಯಿತಂತೆ

ತ್ರಿವಿಧ ಬಸದಿ ಪ್ರತಿಷ್ಠೆಯಾಯಿತಂತೆ
ಯೇವೇಳ್ವಗೀರ್ವಾಣು ಮಠವೊಪ್ಪಿತಂತೆ ॥ ೧೯

ಶಾಕ್ತರು ಬಂದು ಪೂಜಿಸಲಾಯಿತಂತೆ
ಸತತ ಮಂಗಲ ಭುಜದೇವಗಂತೆ
ಜಿತಚಿತ್ತಾರವನೊಂದಿ ಸುಗತಿಯಾಯಿತಂತೆ
ಸತತಲಾ ಮಧುರೇಶನೆಸರಾಯಿತಂತೆ ॥ ೨೦

ಎಷ್ಟು ದೊರೆಂದು ಬೆಳ್ಗೊಳ ನೋಡಬಂದೆ
ಕಷ್ಟ ಜೀವಿಸಿ ಭವಭವದೊಳ್ಗು ನೊಂದೆ
ಅಷ್ಟರೊಳ್ಗಪುರಿಯೆಡೆಗೋಗಿ ನಿಂದೆ
ದೃಷ್ಟಿಯೆಷ್ಟಾ ದೂರೊರ್ನಿಸಲಾಗದೆಂದೆ ॥ ೨೧

ವಿತ್ಶೈಶಗಳ್ಗೊವಲ್ಲದತೀರ್ಥೋದ್ರ ಕಂಡೆ
ಮತ್ತೆ ಚಕ್ರೊರ್ನ್ನಿಸಲ ಸದಳ ಕಂಡೆ
ಹೊತ್ತಿನುಗ್ಗುಭಯ ದ್ರಿಧ್ವಜ ಪಂಕ್ತಿಕಂಡೆ
ಚಿತ್ತ ಜಾರಿಗಳ್ಗಕೂಡೆ ಹೋಗಿ ಕಂಡೆ ॥ ೨೨

ಶ್ರೀಕರನಿಭ ದೊಡ್ಡ ಬಸದಿಯ ಕಂಡೆ
ಲೋಕನಾಥರ ಪಾದಕೆರಗಿದೆ ಮಂಡೆ
ನಾಕಕಾಶ್ಚರಿಯಹ ಮುನಿವಾಸಕಂಡೆ
ಲೋಕಪಾವನ ಪಂಡಿತರ ಪಾದಕಂಡೆ ॥ ೨೩

ವನಮಧ್ಯೆ ಶಿಖರದೆಬ್ಬಾಗಿಲು ಕಂಡೆ ಭ
ವನಕಾಶ್ಚರಿಯಬ್ದಿ ಕಲ್ಯಾಣ ಕಂಡೆ ನ
ವನಿಧಿನಿಧಿಯ ಭಂಡಾರವ ಕಂಡೆ ಭು
ವನಕದ್ಭುತ ಕಲ್ಪವೃಕ್ಷವ ಕಂಡೆ ॥ ೨೪

ದೇವದುಂದುಭಿ ಪಂಚವಿಧರವ ಕಂಡೆ
ಹೇವೇಳ್ವ ನಿತ್ಯದುತ್ಸಹ ಜಾತ್ರೆ ಕಂಡೆ
ಭಾವಜದೇವ ಜನ್ಮಭಾವವ ಕಂಡೆ
ದೇವನ್ನೈಸಿರಿ ಶಿಲೆಯುಗ್ರದಿ ಕಂಡೆ ॥ ೨೫

ಹಿಗ್ಗಿತು ಮನ ಕಾಮದೇವನ ಕಂಡು
ಮಗ್ಗಿತು ಎನ್ನೊಳ್ಗಜ್ಜದ ಕರ್ಮದಂಡು
ಬಗ್ಗಿ ಸಾಷ್ಟಾಂಗದೇವನ ಪಾಡಿಕೊಂಡು
ಸುಗ್ಗಿಯಾಯ್ತೆನಗಂಬುಜಾಂಘ್ರಿಯ ಕಂಡು ॥ ೨೬

ಚೆಲುವರಂ ಚೆಲುವಾದಿ ಮನ್ಮಥ ನೀನು
ಚಲದಿಂ ಕುಗುಜಮೆದ್ದೊಂದೊರುಹಿರ್ದ್ದೆ ನೀನು
ನೆಲೆಯಾದ ಶ್ರೀಮುಕ್ತಿಗೊರನಾದೆ ನೀನು
ಬಲಿದಷ್ಟಿ ಕರ್ಮಕಾಯುಧವದಾದಂಥವನು ‖ ೧೭

ಮದನ ನೀನಾಗಷ್ಟಮದ ಬಿದ್ದಭಾವ
ಕುದಿದ ಕಷ್ಟದೋಷಗಳ್ಗೊದ ಭಾವ
ಉದಿಸಿದ ಶ್ರೀ ಪರಂಜ್ಯೋತಿಯೊದಿರವಾ
ಮೊದಲಂತ್ಯವಿರದ ಪ್ರವರ್ಗದೇವಾ ‖ ೧೮

ನಿನ್ನ ಧ್ಯಾನದಿ ಚಿತ್ರಸಫಲವಾಯಿತೆನಗೆ
ನಿನ್ನ ನೀಕ್ಷಿಸಿ ಮಾತ್ರವಪ ಶುದ್ಧವೆನಗೆ
ನಿನ್ನ ಭಜನೆ ಮಾತ್ರ ಕರ್ಮವಾಯಿತೆನಗೆ
ನಿನ್ನಂತೆ ಸುಗತಿಯ ನೀಡು ಮನ್ಮಥಯೆನಗೆ ‖ ೧೯

ಜಯತು ಶ್ರೀಪುರು ಜಿನದಂಗ ಸಂಭವನೆ
ಜಯತು ಶ್ರೀ ಭರತರಾಜೇಂದ್ರನನುಜನೆ
ಜಯತು ಶ್ರೀ ಭುಜಬಲಿ ಪ್ರಥಮ ಮನ್ಮಥನೆ
ಜಯತು ಶ್ರೀ ಕೈವಲ್ಯರತಿಗೆ ಮನ್ಮಥನೆ ‖ ೨೦

ಸಿರಿಗೆ ಮಂದಿರ ತೊವಿನಕೆರೆಯೊಳಗೆ
ದುರಿತಾದಿ ಚಂದ್ರನಾಥನ ವಾಸದೊಳಗೆ
ಸ್ಮರವೈರಿ ಸ್ಮರಣೆಯವರೆದ ಬ್ರಾಹ್ಮಣಗೆ
ಸ್ಥಿರಮುಕ್ತಿ ಸಿರಿಗೊಡು ಕ್ರಮದಿಂದಯೆನಗೆ ‖ ೨೧

**<u>೪೯. ತಿಳಿದುಮನದೊಳುಭಾವಿಸಿ</u>**

**ಉದಯ ರಾಗ**

ತಿಳಿದು ಮನದೊಳು ಭಾವಿಸಿ
ತಿಳುಬೆಳಕಿನಂತಿರ್ದ ಜೈನಮಾರ್ಗದ
ನೆಲೆಯಾವಳವನರಿಯದೆ ಜೈನನೆಂದೆನಿಸಬಹುದೇ ‖ ೧

ವ್ರತರಹಿತ ಸಮ್ಯಕ್ತ್ವ ಒಂದನೆಯ
ಸತ್ಪಾತ್ರ ವ್ರತಿಕರಿಂದ್ಯೆದು ಮದ್ಯಮ

ಪಾತ್ರ ಉನ್ನತ ಮೊದಲಾದ ವ್ರತಿಕರಿಂದಾಕಾಶ
ಯತಿಗುಣಗಳೆಲ್ಲ ಉತ್ತಮ ಪಾತ್ರವು ॥ ೧

ಅಣುವ್ರತಗಳೈದು ಶಿಕ್ಷಾವ್ರತಗಳು ನಾಲ್ಕು
ಗುಣವ್ರತಗಳು ಮೂರು ಈ ಹನ್ನೆರಡರ
ಗುಣ ಸ್ವರೂಪವನಾಂತು ಅತಿಚಾರಗಳ ಕಳೆದು
ಗಣಿತದಲಿ ಎರಡನೆಯ ಜೈನನೆಂದು ತಿಳಿದು ॥ ೩

ಆರು ಆ ನಾಯಕನ ಸೇವೆಯಲಿಪ್ಪಸಂಖ್ಯಾದಿಗಳು
ಮೂರು ಮೂಢವು ಮದಗಳೆಂಟೆಂಬ
ಸೇರಿದಿಪ್ಪತ್ತೈದು ಮಲದೋಷಗಳ ಕಳೆದು
ಸಾರಸದ್ವಕ್ರಿಯಾಗುತಿದು ತಿಳಿದು ॥ ೪

ಮೂರು ಸಂಧ್ಯಾನದಲಿ ಮನದ ಸಂಚಲವಳಿದು
ಕ್ರೂರಕುಕ್ಷಿತ ರಾಗದ್ವೇಷವನಳಿದು
ಚಾರುಗುರು ಪಂಚನಮಸ್ಕಾರಗಳ ಧಾನಿಸುವವನೇ
ಚಾರು ಗುಣದ ಸಾಮಾಯಿಕನೆಂದು ತಿಳಿದು ॥ ೫

ತಿಂಗಳಿಗೆ ಎರಡು ಅಷ್ಟಮಿ ಎರಡು ಚತುರ್ದಶಿ
ಎಂಬ ಪರ್ವತಿಥಿಗಳ ಉಪವಾಸ ಮೊದಲಾದ
ತಿಥಿಗಳಂನೀಸುವವನೇ ಪ್ರೊಸಪದೋವಾಸಿ ತಿಳಿದು ॥ ೬

ಹಸಿಯ ವಸ್ತುವ ಮೆಲ್ವ ಹಲವಿಪ್ಪ ಸುಖಕೊಳ್ಳ
ಹಸಿಭೂಮಿ ಪಾತ್ರೆಯೊಳು
ಬಿಸಿಯ ಚೆಲ್ಲ ಕುಟಿಲ ಮಾಯಕನಲ್ಲ
ಕುಶಲ ಕಾರುಣ್ಯನಿಧಿ ಸಚಿತ್ತ ವಿರತನು ತಿಳಿದೂ ॥ ೭

ಜಲಲವಣದಿಂ ಕೂಡಿದ ಜ್ಯೋತಿಯಿಂದಲಿರ್ದ
ಹಲವು ಚಕ್ಷುಗಳ ರಾತ್ರಿಯಲಿ ಮೆಲಲೊಲ್ಲ
ಫಲ ತಾಂಬೂಲವ ಕೊಳ್ಳ ಭೈಸಜ್ಜಗಳ ತಾನೊಲ್ಲ
ಬಲು ಜೈನ ರಾತ್ರಿ ಚೋಜನವಿರಥನು ತಿಳಿದು ॥ ೭

ಕಾಸಿ ಉಡಿಗೆಯ ಬಿಟ್ಟು ಕಾಲ ರಕ್ಷೆಯ ಮೆಟ್ಟು
ಕೇಶಗಳ ಕಟ್ಟಿ ಗುಷ್ಠೆಯೊಳು ಕಾಯ್ದಿದ್ದ
ಆಶೆಕ ಮುಖನಲ್ಲ ಹೇಸಿ ಕರುಣತ್ರಯೊಳು ಹೆಣ್ಣ ಬಿಟ್ಟು ॥ ೮

ಇನ್ನೂರ ಹದಿನಾರು ಬ್ರಹ್ಮಚರ್ಯವಬಲಿದ
ಕನ್ಯೆಯರ ಕೂಡೆ ನಗೆನೋಟವ
ಹೆಣ್ಣುಗಳ ಕೊಳ್ಳು ಕೊಡುವ ಹೇಸಿ
ಕೃತ್ಯವ ಬಿಟ್ಟು ಮವನಾಂತನೇ ಬ್ರಹ್ಮಚಾರಿ ತಿಳಿದೂ ‖ ೯

ಹುಸಿ ಜಾತಿಗಳ ಮುಟ್ಟು ಮಸಿಯ ಬರಲೀವ ಬಿಟ್ಟು
ಕೃಷಿ ವಾಣಿಜ್ಯ ಪಶುಪಾಲ್ಯದ ಹಂಬಲದ ಹರಿ
ದ ಶ್ರೀ ಮನ್ನಣೆ ತೊರದು
ಅಸಮಗುಣನಿಧಿ ಆರಂಭ ವಿರತನು ‖ ೧೦

ಹತ್ತು ತನುವಿನ ಕಾಮ್ಯ ಹದಿನಾಲ್ಕು ಮನಕಾಮ್ಯ
ವ್ಯರ್ಥವಾಗಿಪ್ಪತ್ನಾಲ್ಕರಲ್ಲಿ
ಚಿತ್ತದಾಸೆಯ ಬಿಟ್ಟು ಬೆನ್ನ ಹೊನ್ನಣೆ ಮುಟ್ಟೆ
ಸತ್ಯಗುಣನಿಧಿ ಪರಿಗ್ರಹ ವಿರತನು ತಿಳಿದೂ ‖ ೧೧

ಜಿನನಿರೂಪಿತ ತತ್ವ ಜಿಂಹ್ವ ಹಿತಗಳ ನುಡಿವ
ವನಿತೆ ಸುತಬಾಂಧವರ
ಮನವಾರ್ತೆಯ ಕೇಳಿ ಮರಳಿ ಬಾಯಲಿ ಹೇಳಲಿನ್ನ
ಮತಿವಿರತ ನವನತುಳ ಜೈನನೆಂದು ತಿಳಿದೂ ‖ ೧೨

ಚಂಡಿಕೆಯ ಬೋಳಿಸಿದ ದ್ರವ್ಯಸೂತ್ರವಂ ತೆಗೆದ
ಖಂಡ ವಸ್ತ್ರವ ಕಾಚನೆದ್ದಿ ಹೊದ್ದ
ಮುಂಡನಣುವ್ರತ ಭೂ
ಮಂಡಲದೊಳತಿ ಮಾನ್ಯ ಉದ್ಧಿಪ್ಪ ಜೈನನೆಂದು ತಿಳಿದೂ ‖ ೧೩

ಲೋಚು ಕುಂಚವು ಕೃಪಾಕರ ಪಾತ್ರವು ಭೋಜನವು
ಶೌಚಗುಂಡಿಗೆ ಒಮದು ಸ್ಥಾನವಿಲ್ಲ
ಆಚಾರ ಸಿತ್ಕ್ರಿಯದ ನೀತಿ ಪುಸ್ತಕವೊಂದು
ಉಚ್ಚ ಕ್ಷುಲ್ಲುಕ ವ್ರತಿಕ ಉದ್ದಿಷ್ಟನೂ ತಿಳಿದು ‖ ೧೪

ಈ ಪರಿಯ ಸತ್ಯಗುಣವಿರಬೇಕು ಶ್ರಾವಕರಿಗೆ
ಪಾಪಮಯ ಕಡಂಬಕದ ಜೈನವಲ್ಲ
ಕೋಪಗರ್ವವ ಜರಿದು ಕಲಿಸೂತ್ರವನು ಹರಿದು
ಭೂಪ ಮಹಾವ್ರತಿಯಾಗ ಭುವನದೊಳು ‖ ೧೫

ಕಂಕಾಲಿ ಕೂಪಾಲನಂತೆ ಕನಕನ ಸುರಿಯಂತೆ
ಯಕ್ಕೆರವಿ ಶಿವನಾಮ ಜಂಬಕಗೆ

ಮರ್ಕಟವು ಪರಿಯೆನಿಸಿದಂತೆ ಶ್ರಾವಕರು
ಬಕ್ಕ ಬರಿನಾಮದೊಳು ಬೇಗೆಯ ಬೇಡಿ ತಿಳಿದು ‖ ೧೮

ಧರೆಯೊಳುತ್ತಮ ತೀರ್ಥ
ಧರ್ಮ ಶಂಭವ ಕ್ಷೇತ್ರ ಕವಿವರನಾಮ ಕೊಲ್ಲಾ
ಪುರದೊಳು ಗುರುಹಂಸಾ ‖ ೧೭

**<u>೫೦. ಕರುಣಿಸುಶ್ರೀಚಂದ್ರನಾಥಾ</u>**

**ರಾಗ: ಜುಂಜೋಟಿಜಿಲ್ಲ ತಾಳ: ಆದಿತಾಳ**

ಕರುಣಿಸು ಶ್ರೀಚಂದ್ರನಾಥ ನಾಥಾಪೂತಾ ಮಹಿತ ‖ ಪಲ್ಲವಿ

ಸ್ಮರದರ್ಪಹರನೇ ಶರಧಿಗಭೀರನೆ
ಹರುಷವನು ತೋರ್ಪುದನು ಪಾರುವೆನು ‖ ೧

ಕಾಲಮದನಹರ ಜಾಲಕಲುಷದೂರ
ಲಾಲಿತರ ಸೇವಿಪರ ಪಾಲಿಪನೆ ‖ ೨

ಕುಂದಕುಸುಮದಿಯರವಿಂದಗಳಿಂದಲಿ
ತಂದರ್ಚಿಸಿ ನಾನೊಂದಿಸಿ ಆನಂದಿಸುವೆನು ‖ ೩

**<u>೫೧. ರಕ್ಷಿಸುಜಿನನೇ</u>**

**ರಾಗ: ಬೇಹಾಗ್ ತಾಳ: ಚಾಪುತಾಳ**

ರಕ್ಷಿಸು ಜಿನನೇ ಶಾಂತಿನಾಥನೇ ‖ ಪಲ್ಲವಿ

ಸ್ಮರಕರಿಸಿಂಹನೆ ಪರಮ ಪವಿತ್ರನೇ
ಸುರನರನುತನೇ ವರಗುಣಯುತನೇ ‖ ೧

ಕರ್ಮವಿಘಾತನೆ ಧರ್ಮಸುತೇಜನೆ
ಶರ್ಮಸಾಗರನೇ ಧರ್ಮದಾಯಕನೇ ‖ ೨

ಭಾಸುರ ಪರಿಯೊಳು ಭಾಸುರಶಾಂತನೆ
ದೊಷರಹಿತನೇ ನಾಶವರ್ಜಿತನೇ ‖ ೩

**೫೧. ಶಾಂತಿಜಿನೇಂದ್ರನಚರಣವ**

**ರಾಗ: ಧನ್ಯಾಸಿ ತಾಳ: ಆದಿತಾಳ**

ಶಾಂತಿಜಿನೇಂದ್ರನ ಚರಣವ ನಂಬಿರಿ
ಭ್ರಾಂತಜೀವಿಗಳಿರಾ
ಸಂತೆಕೂಟವೀ ಸಂಸಾರವು ತಿಳಿ
ದಂತರ್ಬಾಹ್ಯದೊಳನುದಿನ ಪಾಡುತ ॥ ಪಲ್ಲವಿ

ಸಂಚಿತಗಳು ಬಹು ಮಿಂಚಿದ ಕರ್ಮವು
ಚಂಚಲಪಡಬೇಡಿ
ವಂಚನೆಯಿಲ್ಲದೆ ಪಂಚನಮಸ್ಕೃತಿ
ಚಿಂತಿಸಿರಿ ನಿರಂತರದೊಳು ಶ್ರೀ ॥ ೧

ಪರಸತಿ ಪರಧನ ಪರನಿಂದೆಗಳಾ
ವರಿಸಿದ ಮನುಜಗೆ ನರಕವು ತಿಳಿಯೈ
ದುರಿತ ಕ್ಲೇಶಪಾಶಗಳ ತೊರೆದು ಜಿನ
ಸ್ಮರಣೆ ಮಾಡಿ ಪರಗತಿಯ ಕೊಡುವ ಶ್ರೀ ॥ ೨

ಬರಿದೆ ಬರಿದೆ ಈ ಘನಸಂಸಾರವು
ನರರಿಗೆ ಸ್ಥಿರವಿಲ್ಲ
ಧರೆಯೊಳು ಬೆಳ್ಗೊಳಗಿರಿಯೊಳು ನೆಲಸಿದ
ವರಶಾಂತೀಶನ ಪರಮಾರ್ಥದಿ ಶ್ರೀ ॥ ೩

**೫೨. ಅಂತಕನಗೆಲಿದ**

**ರಾಗ: ಭೈರವಿ ತಾಳ: ಆದಿತಾಳ**

ಆಂತಕನ ಗೆಲಿದ ಶಾಂತಿನಾಥನೇ
ಭ್ರಾಂತನಾದೆನ್ನೆಯ ಚಿಂತೆಯ ನೀಡಾಡು ॥ ಪಲ್ಲವಿ

ದಂತಿಪುರಿಯ ಕಾಂತವಿಶ್ವಸೇನನ
ಕಾಂತೆ ಪ್ರಿಯಕಾರಿಣೀ ಸ್ವಾಂತಜಾತಪೂತ ॥ ೧

ಯಕ್ಷ ಕಿಂಪುರುಷ ರಕ್ಷಿತಾಂಗ ಶೋಭ
ಲಕ್ಷಣಾನ್ವಿತನೇ ಈಕ್ಷಿಸಿ ನುತಿಪರ್ ॥ ೨

ಧರ್ಮದಿಂದ ಘನಕರ್ಮನಾಶ ಗೈದ
ನಿರ್ಮಲಾತ್ಮನೆಂದು ಪೆರ್ಮೆಯಿಂ ಧ್ಯಾನಿಪೇ ‖ ೩

## ೫೪. ಶಾಂತಿನಾಥಭವವಿದೂರ

**ರಾಗ: ಕಾನಡ ತಾಳ: ರೂಪಕತಾಳ**

ಶಾಂತಿನಾಥ ಭವವಿದೂರ ಶಾಂತಮತಿಯ ಪಾಲಿಸೈ
ಧ್ವಾಂತತತಿಯ ಪರಿಹರಿಸಿ ಶಾಂತಮೂರ್ತಿ ಪಾಲಿಸೈ ‖ ಪಲ್ಲವಿ

ಜವನಬಾಧೆಯನ್ನು ಬಿಡಿಸ ಭವದ ಭ್ರಮಣ ಪರಿಹರಿಸಿ
ತವಕದಿಂದ ಶಿವಸುಖವನು ಶಿವಮಯಘನ ಜವದಿ ಪಾಲಿಸು ‖ ೧

ರಾಜರಾಜಪದವ ಪಡೆದು ಮೂಜಗದಲಿ ತೇಜನೆನಿಸಿ
ರಾಜ್ಯಸುಖವ ತ್ಯಜಿಸಿ ಪಾರಿವ್ರಾಜ್ಯಪದದಿ ನೆಲಸಿದೇ ಶಾಂತಿನಾಥ ‖ ೨

## ೫೫. ಮುಮದೇನುಗತಿಯುಹಾ

**ರಾಗ: ಆನಂದಭೈರವಿ ತಾಳ: ಅಟ್ಟತಾಳ**

ಮುಂದೇನುಗತಿಯು ಹಾ ಜಿನನೇ ಕುಂಥುಜಿನನೇ
ಚಂದದಿ ನೀ ಬಂದು ಕಾಯೊ ಶ್ರೀ ಜಿನನೇ ‖ ಪಲ್ಲವಿ

ಧರೆಯೊಳು ನಾನುದ್ಭವಿಸಿ ದುಃಖವೆರಸಿ
ಮಾರವಿಜಯ ನಿನ್ನ ಮರೆ ಹೊಕ್ಕೆ ದೊರೆಯೇ ‖ ೧

ಸತಿ ಸುತಹಿತರೊಳು ಮುಳುಗಿ ಬಹುಬಳಲಿ
ಗತಿಯ ಕಾಣದೆ ಕೆಟ್ಟೆ ಕ್ಷಿತಿ ಭಾರನಾಗಿ ‖ ೨

ರವಿಶಶಿಕೋಟಿಪ್ರಕಾಶ ದೀನಪೋಷ
ಸಾನುರಾಗದಿ ಪೊರೆಯೋ ಆನಂದಮೂರ್ತಿಯೇ ‖ ೩

## ೫೬. ಜಯತಿರ್ಥಂಕರಜಯತೀರ್ಥಂಕರ

**ರಾಗ: ಬೇಹಾಗ್ ತಾಳ: ಆದಿತಾಳ**

ಜಯತಿರ್ಥಂಕರ ಜಯತೀರ್ಥಂಕರ
ಜಯತಿರ್ಥಂಕರಾ ನೆನೆ ಮನವೇ ॥ ಪಲ್ಲವಿ

ಸರಸಿಜನೇತ್ರನ ಸಾರಗುಣಾಢ್ಯನ
ಪರಮಪವಿತ್ರನ ನೆನೆ ಮನವೇ
ತರಣಿಪ್ರಕಾಶನ ವರಮುನಿವಂದ್ಯನ
ಅರಹಂತನ ನೀ ನೆನೆ ಮನವೇ ॥ ೧

ಘೋರಪಾಪಗಳನ್ನು ದೂರಗೈದಿರುವನ
ಕಾರಣ ದೇವನ ನೆನೆ ಮನವೇ
ಮಾರನ ಗೆಲಿದನ ಶೂರಜಿನೇಂದ್ರನ
ಅರಿತು ಬಿಡದೆ ನೀ ನೆನೆ ಮನವೇ ॥ ೨

ಮುಕ್ತಿಗೊಡೆಯನ ಶಕ್ತಿಪ್ರಭಾವನ
ಭಕ್ತಿಯಿಂದಲಿ ನೀ ನೆನೆ ಮನವೇ
ಯುಕ್ತಿಯ ಬೋಧಿಪ ಮಧುಗಿರಿವಾಸನ
ಮಲ್ಲಿಜಿನೇಶನ ನೆನೆ ಮನವೇ ॥ ೩

**೫೭. ನೇಮಿಜಿನನನೋಡಿರೋ**

**ರಾಗ: ಬೇಹಾಗ್ ತಾಳ: ರೂಪಕತಾಳ**

ನೇಮಿಜಿನನ ನೋಡಿರೋ ನಮನವನ್ನು ಮಾಡಿರೋ
ಕಾಮಿತಾರ್ಥವನ್ನು ಬೇಡುವ ಕಾಮಿನೀ ಮಣಿಯರೆಲ್ಲರು ॥ ಪಲ್ಲವಿ

ಶುದ್ಧಮನವ ತಾಳಿರೋ ವಿಶುದ್ಧಫಲವ ಬೇಡಿರೋ
ಬದ್ಧಕರ್ಮವನ್ನು ಕೆಡಿಸಿ ಸಿದ್ಧರೂಪನಾಗಿ ಬರುವ ॥ ೧

ಸೋಮರವಿಪ್ರಕಾಶನ ಪ್ರೇಮದಿಂದ ಸ್ತುತಿಯಿಸೋ
ಕಾಮಲೀಲೆಯನ್ನು ಧರಿಸಿ ಕಾಮರೂಪವಾಗಿ ಬರುವ ॥ ೨

ರಕ್ಷಕ ನೀನೆಂದು ಇವನ ಪಕ್ಷವನ್ನು ಸೇರಿರೋ
ಮೋಕ್ಷವನ್ನು ಹೊಂದಲೆಂಬಪೇಕ್ಷೆಯುಳ್ಳ ಮನುಜರೆಲ್ಲರು ॥ ೩

**೫೮. ನೇಮಿನಾಥನೆಸೋಮಶಾಂತನೆ**

**ರಾಗ: ಹಿಂದೂಸ್ಥಾನಿ ತೋಡಿ ತಾಳ: ಆದಿತಾಳ**

ನೇಮಿನಾಥನೆ ಸೋಮಶಾಂತನೆ ಪ್ರೇಮದಿಂದಲಿ ಭಜಿಸುವೇ
ಕಾಮಿತಾರ್ಥವ ನೇಮದಿಂದಲಿ ಶ್ರೀಮಹೀಶನೆ ಪಾಲಿಸೈ ॥ ಪಲ್ಲವಿ

ಜ್ಞಾನಹೀನದಿ ನಾನು ತಿರುಗಿದೆ ಮಾನಮದಗರ್ವಗಳಿಂ
ಸಾನುರಾಗದಿ ಪಾಲಿಸೆನ್ನನು ದೀನಜನಪರಿಪಾಲನೆ ॥ ೧

ಮಂಗಳಾಂಗನೆ ಭಂಗರಹಿತನೆ ನೊಂದೆನ್ನೈ ಸಂಸಾರದಿ
ಅಂಗಜಾರಿಯೆ ಹಿಂಗಿಸೈ ಭವಸಾಗರದ ದುಃಖಂಗಳ ॥ ೨

ರಾಜಪೂಜಿತತೇಜಗುಣನಿಧಿ ಮೂಜಗಾಧಿಪರೊಂದ್ಯನೇ
ಈ ಜಗದ್ವಿಭ್ರಾಜಹರಪುರಿ ಶ್ರೀಜಿನೇಶನೆ ರಕ್ಷಿಸೈ ॥ ೩

**೫೯. ಶ್ರೀನೇಮಿಜಿನರಾಜ**

**ರಾಗ: ಶಂಕರಾಭರಣ ತಾಳ: ಏಕತಾಳ**

ಶ್ರೀ ನೇಮಿಜಿನರಾಜ ರಾಜಪೂಜ
ರಾಜಾಧಿರಾಜ ರವಿಕೋಟಿತೇಜ ॥ ಪಲ್ಲವಿ

ಕರುಣಾಸಾಗರ ಭರಿತಸುಪೂರ
ಚರಣಾನತಭವ್ಯೋಪಕಾರ ॥ ೧

ಪರಮ ದಯಾಕರ ಭರಿತಸುಗಾತ್ರ
ಸರಸೀರುಹನೇತ್ರ ಭವ್ಯಸುಮಿತ್ರ ॥ ೨

ಭಾವಶುದ್ಧಿಯೋಳ್ನಿಮ್ಮಡಿಯ ಕೊಂಡಾಡಿ
ತೀವಿದ ಪ್ರೇಮದಿ ಪಾಡುವೆನಿಂದು ॥ ೩

ಮುನಿಕುಲವರ್ಯ ಯತಿಪಂಡಿತಾರ್ಯ
ನತವರ್ಯಾನಂತವೀರ್ಯ ॥ ೪

ಭುವನಾಧೀಶ ಬೆಳ್ಗುಳವಾಸ
ಭವನೇಶಚಿನ್ವೀಶಜಿನೇಶ ॥ ೫

## ೬೦. ಶ್ರೀನೇಮಿನಾಥಾದಯಮಾಡೈ

**ರಾಗ: ಬಿಲಹರಿ  ತಾಳ: ಆದಿತಾಳ**

ಶ್ರೀನೇಮಿನಾಥಾ ದಯಮಾಡೈ ದಿವ್ಯ
ಜ್ಞಾನಮೂರುತಿ ನಿನ್ನ ಧ್ಯಾನವ ನೀಡೈ
ದೀನಸಂರಕ್ಷಕ ನೋಡೈ ಪದ
ಕಾನತನನಾದೆನ್ನ ನೀನೇ ಕಾಪಾಡೈ ॥  ಪಲ್ಲವಿ

ಧರೆಯೊಳುತ್ತಮವೆಂದೆನಿಸಿದ ಶೌರಿಪುರ
ವರವನು ತಾನು ಕರುಣದಿಂ ಪೊರೆದಾ
ಹರಿವಂಶೋದ್ಭವನಾಗಿ ಮೆರೆದ
ಭವಹರಣಸುಮಂಗಳ ಕರಕೀರ್ತಿ ತಳೆದಾ ॥ ೧

ಶರಧಿವಿಜಯಮಹಾರಾಜನೆಂ
ಬರಸನ ಸತೀ ಶಿವದೇವಿಯ ತನುಜಾ
ಸರಿ ನೀಲವರ್ಣದೊಳೆಸೆದೆ ತಪ
ವರ ಊರ್ಜಯಂತೆಂಬ ಗಿರಿಯೊಳು ಗೈದೇ ॥ ೨

ಸೃಷ್ಟಿಗಧಿಕ ಬೆಳುಗುಳದೊಳ್ ಮನ
ಮುಟ್ಟಿ ಭಜಿಸುವರಿಂಗಿಷ್ಟಾರ್ಥಶರಧಿ
ಕೊಟ್ಟು ನೀ ನೆಲಸಿದೆ ಮುದದಿ ದಯ
ವಿಟ್ಟು ಸಲಹೊ ನಿನ್ನ ಸ್ಮರಿಸುವೆ ಮನದಿ ॥  ೩

## ೬೧. ಕೃಪೆಯಿಲ್ಲವೇಕೊಎನ್ನಮೇಲೆ

**ರಾಗ: ಹುಸೇನ್  ತಾಳ: ರೂಪಕತಾಳ**

ಕೃಪೆಯಿಲ್ಲವೇಕೊ ಎನ್ನ ಮೇಲೆ ದೇವದೇನೇ
ಅಪರಾಧಗಳನು ಕ್ಷಮಿಸಿ ಕಾಯೋ ಪಾರ್ಶ್ವನಾಥನೇ ॥  ಪಲ್ಲವಿ

ಗತಿಯು ನೀನೆ ಹಿತರ ಕಾಣೆ ಪಿತನು ನೀನೆಂದು
ಅತಿಶಯದಿ ನಿನ್ನ ಚರಣ ಸ್ತುತಿಪೆ ನಾ ನಿಂತು ॥  ೧

ನಾಡಾಡಿಗೊಡೆಯ ಬೇಡಿಕೊಂಬೆ ಗಾಢದಿಂದಲಿ
ತಾಡಮಾಡದೆ ಕೊಡು ವರವ ಪೂರ್ಣಹರುಷದಿ ॥  ೨

ಘಾತಿಯಘಾತಿಯನ್ನು ಘಾತಿಸಿದನೇ
ಪ್ರೀತಿಯಿಂದ ಭಕ್ತರನ್ನು ಪೊರೆವ ದೇವನೇ ॥ ೩

ಬೆಳ್ಗುಳಪುರದ ಪಾರ್ಶ್ವನಾಥ ಪ್ರೇಮದಿಂದಲಿ
ಕಾಮಿತಾರ್ಥವನ್ನು ಕೊಡುವ ಸ್ವಾಮಿಜಿನಪನೇ ॥ ೪

**೬೨. ನೇಮಿಶಜಿನಪೋತ್ತಮನೇ**

**ರಾಗ: ನಾರಾಯಣಿ ತಾಳ: ಅಟ್ಟತಾಳ**

ನೇಮಿಶ ಜಿನಪೋತ್ತಮನೇ ಭಕ್ತರ ಕಾಯ್ವ
ಪ್ರೇಮಶರಧಿ ಚಂದ್ರಮನೇ
ಕಾಮಹರಸುತ್ರಾಮವಂದಿತ ನಾಮನೇ ಗುಣಧಾಮನೇ
ಕ್ಷೇಮಕರ ಸುಮಕೋಮಲಾಂಗನೆ ॥ ಪಲ್ಲವಿ

ಈ ತೆರ ಸ್ತುತಿಗೊಳುತಾ ನೇಮಿಶ್ವರ ಪಾತಕಸವರಿಡುತ
ಭೂತಳಕೆ ಪುರುಹೂತ ನಿತ್ಯದಿ ಕಳುಹಿದಾ ನಿಳುಹಿದಾ
ಪ್ರೀತಿದ್ರವ್ಯಗಳೋತುಗೊಳುತಲಿ ॥ ೧

ಇರುತಿರಲೊಂದಿನದಿ ಬಲರಾಮಕೃಷ್ಣರವೆರಸುತಲತಿ ಮುದದಿ
ತರುಣಿಯರು ಸಹ ಚರಿಸಿ ವನದೊಳಗಾಡುತಾ ಪಾಡುತಾ
ಮೆರೆವ ಸರಸಿಯ ಸರಸಿಗೈದಲು ॥ ೨

ಹರುಷದಿ ಜಲಕೇಳಿಯನಾಡುತಲಿ ಬಳಲಿ ಸರಿದರು ಮೇಲ್ಗಡೆಯ
ಪರಮ ನೇಮೀಶ್ವರನು ಧರಿಸಿದಂಬರವನು ಮೆರೆವನು
ತರುಣಿಭಾಮೆಯ ಕರಕೆ ನೀಡಲು ॥ ೩

ಮೂಲೋಕದೊಳು ವೀರನು ಎನ್ನೊಲ್ಲಭನ ಸರಿ ಪೋಲುವರನು ಕಾಣೆನು
ಕೀಳು ಸತಿಯರವೋಲು ನೀನೆನಗಾಡಿದೆ ಏನಾಡಿದೆ
ಮೇಲನರಿಯದೆ ಪೇಳಬಹುದೇ ॥

ಎನೆ ಸತ್ಯಭಾಮೆಯಳಾ ನುಡಿ ಕೇಳಿ ನೇಮಿಜಿನಪನು ಕೋಪಿಸಲು
ಬಳಿಕ ಶ್ರೀಧರಬಲರು ಬಂದತಿಮೋದದಿ ವಿನೋದದಿ
ಒಲಿದು ನೇಮವಗೊಳುತ ಪೋದರು ॥ ೫

ನೀಲವರ್ಣದ ದೇವನು ಗಣರೊಡನೆ ಶಸ್ತ್ರದ ಶಾಲೆಗೆ ತೆರಳಿದನು
ಲೋಲನಯನಾ ಮೇಲೆ ಶಂಖವ ಕರದೊಳು ಭರದೊಳು
ಲೀಲೆಯಿಂ ಗುಣಪಾಲವಿಡಿದನು ॥ ೬

ವಾಮನಾಸಿಕರಂಧ್ರದಿ ಆ ಪಾಂಚಜನ್ಯವನಾ ಮಹಿಮನು ಭರದಿ
ಭೀಮಬಲನಿಸ್ಸೀಮನೂದಲು ನಾದದಿಂ ಪಯೋದದಿಂ
ಆ ಮಹಾತ್ಮೈಭೂಮಿ ನಡುಗಿತು ॥ ೭

ಸುರರು ಕುಸುಮವೃಷ್ಟಿಯ ಧರೆಗೆರೆಯಲಾಕ್ಷಣ ಹರಿಬಹಳಾಚ್ಚರಿಯ
ವೆರಸಿ ಮನದೊಳಗರಿತು ಪೇಳ್ದನು ಭರದೊಳು ಮತ್ಸರದೊಳು
ಅರರೆ ನೇಮೀಶ್ವರನು ಮೆರೆವನು ॥ ೮

ಧರೆಮೂರ ದೊರೆತನವು ಎನ್ನದು ನೇಮೀಶ್ವರ ಸೆಲೆಯುವ ದಿಟವು
ತ್ವರಿತದಿಂದುರು ತರದುಪಾಯವಗೈವೆ ತಾನೆನ್ನುತಾ
ಅರಸ ಬಲರಾಮರೊಳು ಪೇಳ್ದನು ॥ ೯

ಪೊಸಯೌವನವನಾಂತನು ನಮ್ಮಯ ನೇಮಿಶಶಿಗೆ ವಿವಾಹವನು
ಕುಶಲದಿಂ ಪಸರಿಸಲು ಬೇಕೆನೆ ತೋಷದಿ ವಿಲಾಸದಿ
ಅಸಮಪುರರಂಜಿಸಿದುದಾಗಲು ॥ ೧೦

ಐನೂರು ಕನ್ನೆಯರು ಶೃಂಗರಿಸಿ ಲಗ್ನಕೆ ಸಾನುರಾಗದಿಯಮರ
ಮಾನಿನೀಯರವರೇನನೆಂಬೆನು ಗಾನದಿಂ ಯಾನದಿಂ
ಭಾನುತೇಜನ ಧ್ಯಾನ ಗೈದರು ॥ ೧೧

ಭರತಶೃಂಗಾರದೊಳು ಜಿನೇಶ್ವರ ಮೆರೆವಣಿಗೆಯ ಬರಲು
ತುರುಗಳನು ಕಟ್ಟಿರಿಸಿ ಸಾಲೊಳು ಬಿಸಿಲೊಳು ತೃಷೆಯೊಳು
ಉರುತರದಿ ಬಾಡಿರಲಿದೇನೆನೆ ॥ ೧೨

ಅದರೊಳೋರುವ ಗೋಪನು ಪೇಳಿದನು ನಿಮ್ಮಯ ಮದುವೆ ಭೋಜನ
ಕೆಂದಿನ್ನು ಚದುರ ಕೃಷ್ಣನ ಪದುಳದಪ್ಪಣೆಯೆಂದವ
ನಂದವನರಿತು ಬಿಡಿಸಿದ ತುರುಗಳೆಲ್ಲವ ॥ ೧೩

ಪಿಂತಿರುಗುತ್ತ ದೇವನು ವೈರಾಗ್ಯವ ನಂತರ ತಾಳಿದನು
ಇಂತಿರಲು ಲೌಕಾಂತಿಕರು ಬಂದೆಂದರು ನಿಂದರು
ಸಂತಸದಿ ಪರಮಾಂತೆ ಬೋಧೆಯ ॥ ೧೪

ಅರಿತಾಗಲಮರಗಣವೆರಸುತಲಿ ಸುರಪನು ಪರಿನಿಷ್ಕ್ರಮಣಕಲ್ಯಾಣ
ಪರಮಪೂಜೆಯ ವರಜಿನೇಂದ್ರಗೆ ಹರುಷದಿ ಸರಸದಿ
ವಿರಚಿಸಿದನುರುತರದ ವಿಭವದಿ ‖ ೧೫

ಶ್ರಾವಣಶುದ್ಧದೊಳು ಚತುರ್ಥಿಯ ತೀವಿದ ಚಿತ್ರೆಯೊಳು
ದೇವ ವಂದಿತ ದೇವ ದೀಕ್ಷೆಯಗೊಂಡನು ಮುಂಕೊಂಡನು
ಭಾವಶುದ್ಧದೊಳಾ ಉದ್ಯಾನದಿ ‖ ೧೬

<u>**೬೩. ಪೋಷಿಸೈನೇಮೀಶಜಿನಪನೇ**</u>

**ರಾಗ: ಕೇತಾರಗೌಳ ತಾಳ: ರೂಪಕತಾಳ**

ಪೋಷಿಸೈ ನೇಮೀಶ ಜಿನಪನೇ ತವ ದಾಸಜನರ ಬಹು
ದೋಷರಹಿತ ಶ್ರೀಶವಿನುತ ಭಾಸುರಾಂಗ ವಾಸವಾರ್ಚಿತ ‖ ಪಲ್ಲವಿ

ಎಂದು ತ್ರಿದಶವೃಂದ ಸ್ತುತಿಸಲಂದು ಮನದೊಳು ಆ
ನಂದನೇಮಿಚಂದ್ರ ತಪದಿ ನಿಂದನಾ ಪೂರ್ಣೇಂದುಭಾಷ ‖ ೧

ಆರುದಿನದಾಹಾರವಿಲ್ಲದೆ ಚಾರುತಪದಿರಲ್ ಅ
ಪಾರಮಹಿಮ ಪಾರಣೆಂಗೆ ಸಾರಿದಂ ಗಿರಿನಗರವದರ ‖ ೨

ಅತ್ತಲಾ ವರದತ್ತನೆಂಬ ಪೃಥ್ವೀಪೋತ್ತಮ
ಸತ್ಯ ನಿಧಿಗೊಂಬತ್ತು ವಿಧದ ಭಕ್ತಿಯಿಂ ಮುದವೆತ್ತು ಪೂಜಿಸೆ ‖ ೩

ಧರಣೀಪತಿಯ ಪರಮಭಕ್ತಿಗಿರದೆ ಮೆಚ್ಚುತಾ
ಹರುಷದಿಂದ ಹರಸು ತೆಂದ ನಿರುಪಮಸುಖ ತರದ ಬೋಧ ‖ ೪

ಕಂತುವೈರಿಯನಂತರೋರ್ಜಯಂತಗಿರಿಯೊಳು
ಅನಂತಮಹಿಮ ನಿಂತನೇಕೋ ಚಿಂತನೆಯೊಳಾಂತು ತಪವ ‖ ೫

ಈ ಸುಚಾತುರ್ಮಾಸ ತಪೋವಾಸನಾಗಿರಲ್
ಜಿನೇಶಘಾತಿದೋಷವೆಲ್ಲ ನಾಶಗೈದ ದಿನೇಶಭಾಸ ‖ ೬

ಯತಿವರೇಣ್ಯ ನುತಗೆ ದಿವ್ಯ ಮತಿಯ ಪ್ರಾಪ್ತಿಸೇ
ಕ್ಷಿತಿಯ ತೊರೆದು ವ್ರತಿಪ ಗಗನಪಥದಿ ನಿಂದ ಸತತಾನಂದ ‖ ೭

ಅರಿತನಾಗ ಸುರಪ ಬೇಗ ವರಕುಬೇರಗೆ
ತಾನೊರೆಯ ಸಮವಸರಣವನ್ನು ವಿರಚಿಸಿದನು ಪರಮ ವಿಧದಿ ॥ ೮

ಕಾಣುತಾಮರರಾಣ್ಯ ಕೇವಲಜ್ಞಾನಪೂಜೆಯ
ಪರಮಾನುರಾಗದಿ ಧ್ಯಾನಮೂರ್ತಿಗೆ ತಾನೆಗೈದ ನಿನ್ನೇನನೆಂಬೆನು ॥ ೯

<u>**೬೪. ಕೇಳಿಮನವೊಲಿದು**</u>

**ರಾಗ: ಪೀಲು ತಾಳ: ಆದಿತಾಳ**

ಕೇಳಿ ಮನವೊಲಿದು ಚಂದ್ರಪ್ರಭಸ್ವಾಮಿ ಪದವಿಯನು ॥ ಪಲ್ಲವಿ

ಶ್ರೀ ಸುರನರನಾಗ ವಂದಿತ ಚರಣಾಬ್ಜ
ಸಾಸಿರನಾಮದೊಡೆಯಗೆ ವಂದನೆ ಮಾಡಿ ಕೇಳಿ ॥ ೧

ಚಂದ್ರನಾಥನ ಪಂಚಕಲ್ಯಾಣವನು ಪೇಳ್ವೆ
ಚಂದದಿಂದೇಳು ಭವಗಳು ಸಹಿತವಾಗಿ ॥ ೨

ವರಪುಷ್ಕರದ್ವೀಪದ ಪೂರ್ವ ಮಂದರ
ದುರುತರಪರವಿದೇಹ ಮಧ್ಯದೊಳಿಹ ॥ ೩

ಸೀತೋದಾನದಿಯುತ್ತರ ಗಂಧಿಲದೊಳು
ಸಾತಿಶಯಕೆ ನೆಲೆಯೆನಿಸಿದ ಶ್ರೀಪುರ ॥ ೪

ಆ ಪುರದಧಿಪತಿ ಶ್ರೀಷೇಣನೆಂಬಗೆ
ಚಾಪಲನೇತ್ರೆ ಶ್ರೀಕಾಂತೆ ವಲ್ಲಭೆಯಾಗಿ ॥ ೫

ರಾಜ್ಯಭಾರವನನುಭವಿಸುತಲನುದಿನ
ರಾಜನೊಪ್ಪಿದನು ಶಚಿಯ ಪತಿಯಂದದಿ ॥ ೬

ಪುತ್ರನ ಪಡೆಯಬೇಕೆಂದು ದಂಪತಿಗಳು
ಚಿತ್ತಶುದ್ಧದಲಿ ಜಿನೇಂದ್ರನ ಪೂಜಿಸೆ ॥ ೭

ಶ್ರೀವರ್ಮನೆಂಬ ಕುವರನುದಯಿಸಿದನು
ಸಾರ್ವಭೌಮಗೆ ಸಮನೆನಿಸಿ ಸುಖದೊಳಿರೆ ॥ ೮

ಶ್ರೀಪ್ರಭತೀರ್ಥೇಶ್ವರನ ಸಮವಸೃತಿ
ಆ ಪುರದುದ್ಯಾನವನಕೆ ಬರಲು ಕೇಳಿ ॥ ೯

ಸುತ್ರಾಮನಂದದಿ ಶ್ರೀಷೇಣರಾಜನು
ಪುತ್ರಸಹಿತ ಪೋಗಿ ಜಿನರಿಗೊಂದನೆ ಮಾಡಿ ॥ ೧೦

ತತ್ತ್ವೋಪದೇಶವ ಕೇಳಿ ರಾಜೇಂದ್ರಗೆ
ಚಿತ್ತಶುದ್ಧದೊಳು ನಿರ್ವೇಗಪುಟ್ಟಿತು ಮತ್ತೆ ॥ ೧೧

ಜಿನವಚನವ ಕೇಳಿ ಶ್ರೀವರ್ಮಕುವರಗೆ
ಜನಿಸಿತು ಹೃದಯದಿ ಘನತರಸಮ್ಯಕ್ತ್ವ ॥ ೧೨

ಜಿನರಿಗೊಂದನೆ ಮಾಡಿ ಮರಳಿ ಸಂಭ್ರಮದಿಂದ
ಅನಿಮಿಷಪತಿಯಂದದಿ ಪುರವನು ಪೊಕ್ಕು ॥ ೧೩

ಪಟ್ಟವ ಕಟ್ಟಿ ಶ್ರೀವರ್ಮಕುಮಾರಗೆ
ಇಟ್ಟು ಮುಕ್ತಿಯ ರಮಣಿಗೆ ಮನವನು ರಾಜ ॥ ೧೪

ಶ್ರೀಪ್ರಭತೀರ್ಥೇಶ್ವರನ ಸನ್ನಿಧಿಯೊಳು
ಪಾಪವ ಕೆಡಿಸುವ ದೀಕ್ಷೆಯ ಧರಿಸಿದ ॥ ೧೫

ಇತ್ತಲು ಶ್ರೀವರ್ಮ ಸಕಲಸಾಮ್ರಾಜ್ಯವ
ನೊತ್ತಿ ಆಳುವ ಆಷಾಢಪೌರ್ಣಮಿಯೊಳು ॥ ೧೬

ಘನತರವಾಗಿ ಜಿನರ ಪೂಜೆಯ ಮಾಡಿ
ಅನಶನವನು ಮಾಡಿಕೊಂಡು ರಾತ್ರಿಯ ಕಾಲ ॥ ೧೭

ಸೌಧವನೇರಿ ಕುಳ್ಳಿರೆ ಸತಿಯರುಗೂಡಿ
ಔದಾರ್ಯಶೀಲನು ಕಂಡುಳ್ಕಪಾತವ ॥ ೧೮

ಮನದೊಳು ವೈರಾಗ್ಯ ಜನಿಸಿತು ನೃಪತಿಗೆ
ತೃಣವೆಂದು ತಿಳಿದನು ಸಕಲಸಂಪದಗಳ ॥ ೧೯

ಶ್ರೀಕಾಂತನೆಂಬ ಕುವರಗೆ ರಾಜ್ಯವ ಕೊಟ್ಟು
ಸ್ವೀಕರಿಸಿದನು ದೀಕ್ಷೆಯ ತೀರ್ಥಂಕರಲ್ಲಿ ॥ ೨೦

ಶ್ರೀ ಪ್ರಭಗಿರಿಯೊಳು ಪ್ರತಿಮಾಯೋಗದಿ ನಿಂದು
ಪಾಪಹರನು ಸಮಾಧಿ ಮರಣದಿಂದ॥ ೨೧

ಸೌಧರ್ಮಕಲ್ಪದೊಳಗೆ ಜನಿಯಿಸಲಾಗ
ಶ್ರೀಧರನೆಂಬ ನಾಮವನು ಧರಿಸಿದನು॥ ೧೧

ಅಣಿಮಾದಿಗುಣ ಮೊದಲಾದ ಸುಖದೊಳಿರ್ದ
ಅನಿಮಿಷಗಾಯು ಸಂಪೂರ್ಣವಾಗಲು ಇತ್ತು॥ ೧೨

ಧಾತಕಿಖಂಡ ದಕ್ಷಿಣದಿಷುಕಾರದ
ಖ್ಯಾತಿಗೆ ಪೂರ್ವದ ಭರತಾವನಿಯೊಳು॥ ೧೪

ಅಲಕಾಖ್ಯವಿಷಯದ ಮಧ್ಯದೊಳಿರುತಿಹ
ಅಲಕಪುರಕೆ ಸಮವೆನಿಸಿ ಅಯೋಧ್ಯೆಯ ॥ ೧೫

ಅಜಿತಂಜಯನೆಂಬರಸಗೆ ವಲ್ಲಭೆ
ಅಜಿಸೇನೆಯು ತಾನು ಸುಖದೊಳಗಿರುತಿರೆ॥ ೧೬

ಪುತ್ರಾರ್ಥವಾಗಿ ಜಿನರ ಪೂಜೆಯ ಮಾಡಿ
ಸುಪ್ತಿಯೊಳಿರೆ ಶುಭಸ್ವಪ್ನವ ಕಂಡಳು॥ ೧೭

ಶ್ರೀಧರದೇವ ಬಂದುದರದಿ ನೆಲಸಿರ್ದು
ಭೂಧರಧೈರ್ಯನು ಶುಭದಿನದೊಳು ಪುಟ್ಟಿ ॥ ೧೮

ಪುತ್ರನಿಗಜಿತಸೇನನು ಎಂಬ ನಾಮವ
ಸುಪ್ರಸಿದ್ಧದಿ ಕರೆದನು ರಾಜೇಂದ್ರನು॥ ೧೯

ಶುಕ್ಲಪಕ್ಷದ ಚಂದ್ರನಂದದಿ ಬೆಳೆಯಲು
ವಿಕ್ರಮಿಯಾಗಿರುತ್ತಿರಲೊಂದು ದಿನದೊಳು॥ ೨೦

ಬಂದು ಸ್ವಯಂಪ್ರಭಜಿನರ ಸಮವಸೃತಿ
ನಿಂದುದಶೋಕವನದೊಳು ವಾರ್ತೆಯ ಕೇಳಿ॥ ೨೧

ಇಂದ್ರವೈಭವದಿಂದ ಪೋಗಿ ರಾಜೇಂದ್ರನು
ವಂದನೆಯನು ಮಾಡಿ ಧರ್ಮತತ್ತ್ವವ ಕೇಳಿ॥ ೨೧

ನಿರ್ವೇಗಪರನಾಗಿ ಬಂದು ಕುಮಾರಗೆ
ಸರ್ವಸಾಮ್ರಾಜ್ಯವನಿತ್ತು ಕೇವಲಿಯಾದ॥ ೨೨

ಅಜಿತಸೇನನು ಚಕ್ರಧರನಾಗಿ ಕೀರ್ತಿಯ
ತ್ರಿಜಗದೊಳಗೆ ಪಸರಿಸುತ ಸುಖದೊಳಿರೆ॥ ೨೪

ಒಂದಾನೊಂದು ದಿವಸ ಮನೋಹರವೆಂಬ
ಚಂದದುದ್ಯಾನವನಕೆ ಗುಣಪ್ರಭಜಿನ ॥ ೩೫

ಬಂದರು ಎಂಬ ವಾರ್ತೆಯ ಕೇಳಿ ಪೋಗಿ ತಾ
ವಂದನೆಯ ಮಾಡಿ ಭಕ್ತಿ ಪೂರ್ವಕದಿಂದ ॥ ೩೬

ತನ್ನ ಭವವ ಕೇಳಿ ನಿರ್ವೇಗಪರನಾಗಿ
ಸನ್ನುತ ಜಿತಶತ್ರುವಿಗೆ ರಾಜ್ಯವ ಕೊಟ್ಟು ॥ ೩೭

ದೊರೆಗಳ ಒಡಗೂಡಿ ಸಂಯಮಧುರನಾಗಿ
ಇರುತಿರೆ ಗಗನತಿಲಕವೆಂಬ ಗಿರಿಯೊಳು ॥ ೩೮

ಸನ್ಯಾಸನ ವಿಧಿಯಿಂದ ತನುವ ಬಿಟ್ಟು
ಉನ್ನತಚ್ಯುತಕಲ್ಪದೊಳಗೆ ಜನಿಸಿದನು॥ ೪೦

ಮಾನಸಪ್ರವಿಚಾರ ಮೊದಲಾದ ಸುಖದೊಳು
ಅನಿಮಿಷಗಾಯು ಸಂಪೂರ್ಣವಾಗಲು ಇತ್ತ ॥ ೪೧

ಧಾತಕಿಖಂಡದ್ವೀಪದ ಪೂರ್ವಭಾಗದ
ಸೀತಾನದಿಯ ತೆಂಕಣ ದಿಕ್ಕಿನೊಳಗಿಹ॥ ೪೨

ಮಂಗಲಾವತಿಯೆಂಬ ದೇಶದೊಳಗೆ ಸರ್ವ
ಮಂಗಲನಿಗೆ ತಾ ನೆಲೆಯಾಗಿರುತಿಹ॥ ೪೩

ರತ್ನಸಂಚಯವೆಂಬ ಪುರಕಧಿನಾಥನು
ರತ್ನಸಾನುವಿಗೆ ಸಮಾನಧೈರ್ಯವನುಳ್ಳ॥ ೪೪

ಕನಕಪ್ರಭನೆಂಬರಸಗೆ ವಲಭೆ
ಕನಕಮಾಲೆಯ ರತಗೆಣೆಯೆನಿಪ್ಪಳು॥ ೪೫

ಅವರ ಗರ್ಭದೊಳಚ್ಚುತೇಂದ್ರ ಬಂದುದಿಸಲು
ಅವನಿಗೆ ಪದ್ಮನಾಭನು ಎಂಬ ಪೆಸರಿಡೆ॥ ೪೬

ನವಯೌವನ ಪಡೆದ ಪದ್ಮನಾಭಗೆ
ಯುವತಿಯಾದಳು ಸೋಮಪ್ರಭೆಯೆಂಬಳು॥ ೪೭

ಪುತ್ರನುದಿಸಿದನು ಕನಕನಾಭನು ಎಂಬ
ಪುತ್ರಪೌತ್ರರುಗೂಡಿ ಸುಖದೊಳಗಿರುತಿರೆ॥ ೪೮

ಒಂದು ದಿವಸದೊಳು ಪುರದುದ್ಯಾನಕೆ
ಕಂದರ್ಪವಿಜಯ ಶ್ರೀಧರಜಿನೇಂದ್ರನು॥ ೪೯

ಬಂದುದ ಕೇಳಿ ರಾಜೇಂದ್ರ ಪುತ್ರರುಗೂಡಿ
ವಂದನೆಯನು ಮಾಡಿ ಧರ್ಮ ತತ್ತ್ವವ ಕೇಳಿ॥ ೫೦

ನಿರ್ವೇಗಪರನಾಗಿ ಕನಕರಾಜೇಂದ್ರನು
ಉರ್ವಿಯ ಪತ್ರಗೆ ಕೊಟ್ಟು ಮುಕ್ತಿಗೆ ಸಂದ॥ ೫೧

ಪದ್ಮನಾಭನು ಶ್ರಾವಕವ್ರತವನು ತಾಳಿ
ಇದ್ದನಾ ರಾಜ್ಯ ಸುಖದೊಳನವರತವು॥ ೫೨

ಶ್ರೀಧರಜಿನರ ಸನ್ನಿಧಿಯಲ್ಲಿ ತತ್ತ್ವವ
ಮೇದಿನಿಪತಿ ಕೇಳಿ ನಿರ್ವೇಗ ಪರನಾಗಿ॥ ೫೩

ತನುಜ ಸುವರ್ಣನಾಭನಿಗೆ ರಾಜ್ಯವ ಕೊಟ್ಟು
ಅನುಕರಿಸಿದ ನೃಪರೊಡಗೂಡಿ ದೀಕ್ಷೆಯ॥ ೫೪

ಷೋಡಶ ಭಾವನೆಗಳನು ಭಾವಿಸಿ ಮುನಿ
ಕೂಡೆ ತೀರ್ಥಂಕರನಾಮವನು ಪಡೆದು ಮತ್ತೆ॥ ೫೫

ಸಿಂಹನಿಷ್ಕ್ರೀಡಿತಘೋರತಪದಿ ಮುನಿ
ಸಿಂಹಸಮಾನದಿಂದಲಿ ತನುವನು ಬಿಟ್ಟು॥ ೫೬

ಮುಕ್ತಿಗೆ ನೆರೆಮನೆಯೆನಿಸುವ ಪಂಚಾ
ಣುತ್ತರೆಯೊಳು ವೈಜಯಂತ ವಿಮಾನದಿ॥ ೫೭

ಯುವರಾಜನೆಂಬಂತೆ ಶಿವರಾಜ ಪದವಿಗೆ ಅನು
ಭಿಸಿದನಹಮಿಂದ್ರ ಪದವಿಯನು॥ ೫೮

ಮೂರು ಅಧಿಕ ಮೂವತ್ತು ಸಾಗರಕಾಲ
ಸಾರಸುಖದೊಳಿರಲಾರುದಿಂಗಳುಳಿಯಲು॥ ೫೯

ಜಂಬೂದ್ವೀಪದ ಭರತಾರ್ಯಖಂಡದಿ
ಇಂಬಿನ ಚಂದ್ರಪುರವೆಂಬ ಪಟ್ಟಣ॥ ೬೦

ಅಮರೇಂದ್ರನ ಪುರಕೆಣೆಯೆನಿಪ್ಪುದು
ಅಮಲಗುಣನು ಮಹಾಸೇನನೆಂಬರಸನು॥ ೬೧

ಆತಗೆ ಲಕ್ಷ್ಮೀಣೀದೇವಿಯೆಂಬರಸಿಯು
ಭೂತಳದೊಳು ಖ್ಯಾತಿವಡೆದ ದಂಪತಿಗಳು ‖ ೭೧

ಉಪಮೆಯಿಲ್ಲದ ಸಂತೋಷದೊಳಿರುತಿರೆ
ಸಪವಿತ್ರ ಜಿನನುದಿಪನು ಅವಧಿಯೊಳು ‖ ೭೩

ಇಂದ್ರಗೆ ತೋರೆ ಕುಬೇರಗೆ ಬೆಸಸಲು
ಚಂದದ ರತ್ನವೃಷ್ಟಿಯ ಕರೆಯೆನುತಲಿ ‖ ೭೪

ಗರ್ಭಕೆ ಬರಲಾರುದಿಂಗಳು ಮೊದಲಾಗಿ
ನಿರ್ಭರಭಕ್ತಿಯಿಂದಲಿ ಕುಬೇರನು ‖ ೭೫

ಮೂರುವರೆಯು ಕೋಟಿ ರತ್ನವೃಷ್ಟಿಗಳನು
ಮೂರು ಸಂಜೆಯೊಳು ರಾಜೇಂದ್ರನಂಗಣದೊಳು ‖ ೭೬

ಈ ಪರಿಯಲಿ ರತ್ನವೃಷ್ಟಿಯಗರೆಯಲು
ಆ ಪುರಜನಕೆ ಸಕಲಸಂಪದವಾಗೆ ‖ ೭೭

ಇಂದ್ರನ ಬೆಸನದಿ ಶ್ರೀದೇವಿ ಮೊದಲಾಗಿ
ಬಂದು ಲಕ್ಷ್ಮೀಣೀದೇವಿಗೊಂದನೆಯನು ಮಾಡಿ ‖ ೭೮

ಗಂಗಾನದಿ ಮೊದಲಾಗಿ ಜಲಗಳನು
ಗಾಂಗೇಯಕುಂಭದೊಳಗೆ ತೀವಿ ತಂದಾಗ ‖ ೭೯

ಅಭಿಷೇಕವ ಮಾಡಿ ಲಕ್ಷ್ಮೀಣೀದೇವಿಗೆ
ಅಭಿಮತಸಿದ್ಧಿಯು ನಮಗಾಗಲಿಯೆಂದು ‖ ೮೦

ದಿವ್ಯಾಂಬರವನುಡಿಸಿ ಕೊಂಡಾಡುತ
ದಿವ್ಯಭೂಷಣಗಳನಿಟ್ಟು ದೇವಿಯರೆಲ್ಲ ‖ ೮೧

ದಿವ್ಯ ಸುಗಂಧಚಂಪಕಪುಷ್ಪಮಾಲೆಯ
ದಿವ್ಯದೇಹನ ತಾಯ ಮುಡಿಗೆ ಮುಡಿಸಿದರು ‖ ೮೨

ಕಣ್ಣಿಗಂಜನವಿಟ್ಟು ಕಮಲವಾಸಿನಿಯರು
ಚೆನ್ನೆಯ ನೊಸಲಿಗೆ ತಿಲಕವನಿಟ್ಟರು ‖ ೮೩

ಛತ್ರವನೆತ್ತಿ ಡಾಳಿಸುತ ಚಾಮರಗಳ
ಮುತ್ತಿನ ಸೇಸೆಯನಿಕ್ಕಿ ನಮಿಸಿದರು ‖ ೮೪

ನಿತ್ಯನರ್ತನವಾದ್ಯ ನೂತನಗಳ ಜಿನ
ಮಾತೆಯ ಮುಂದೆ ತೋರುತ ಸಂಭ್ರಮದಿಂದ ॥ ೭೫

ಜಿನನುದಿಸುವ ಪರ್ಯಂತರ ಮಾತೆಯ
ಅನವರತವು ಸೇವೆಯ ಮಾಡುತಲಿರೆ ॥ ೭೬

ಚೈತ್ರ ಬಹುಳ ಪಂಚಮಿಯಂತ್ಯಜಾವದಿ
ಮಾತೆಕಂಡಳು ಷೋಡಶ ಸ್ವಪ್ನಗಳನು॥ ೭೭

ಮಂದಗಮನೆಯೆದ್ದು ಮಜ್ಜನವನು ಮಾಡಿ
ಚಂದದಾಭರಣವ ತೊಟ್ಟು ಸಂಭ್ರಮದಿಂದ ॥ ೭೮

ಮಂಡಲೇಶ್ವರಗೆ ತಾ ಕಂಡ ಸ್ವಪ್ನವ ಪೇಳೆ
ಮಂಡೆಯ ತಡೆವುತ ಜಿನಪನಿನ್ನುದರದಿ ॥ ೭೯

ಜನಿಸುವನೆಂದು ರಾಜೇಂದ್ರ ಪೇಳಲು ಕೇಳಿ
ಮನದೊಳು ಘನತರ ಹರುಷವ ತಾಳಿರೆ ॥ ೮೦

ಮುನ್ನ ಪೇಳಿದ ಅಹಮಿಂದ್ರದೇವನು ಬಂದು
ಚೆನ್ನೆ ಲಕ್ಷ್ಮಣೀದೇವಿಯುದರದಿ ನೆಲಸಲು ॥ ೮೧

ಗರ್ಭಾವತರಣಕಲ್ಯಾಣವ ಸುರಪತಿ
ನಿರ್ಭರಭಕ್ತಿಯಿಂದದಲಿಮಾಡಿ ಪೋದನು ॥ ೮೨

ಪಳುಕಿನ ಕೊಡದೊಳಗಿರುವ ಸೊಡರಿನಂತೆ
ಬೆಳೆವುತ ತ್ರಿಜ್ಞಾನಿ ಮಾತೆಯುದರದಿ ॥ ೮೩

ನವಮಾಸವು ತುಂಬೆ ಸುರಪತಿಯರು ಬೇಗ
ಭುವನದೊಳಗೆ ಸಡಗರಗೊಳಿಸುತಲಾಗ ॥ ೮೪

ಪುಷ್ಯಬಹುಳ ಏಕಾದಶೀ ದಿನದೊಳು
ನಿಷ್ಕಲಂಕನು ಜಿನಚಂದ್ರನುದಿಸಿದನು ॥ ೮೫

ಇಂದ್ರಗಾಸನಕಂಪವಾಗಲವಧಿಯಿಂದ
ಇಂದುವರ್ಣದ ಜಿನನುದಯವ ತಿಳಿದನು ॥ ೮೬

ಉರಗಲೋಕದ ಶಂಖ ಸುರಲೋಕದ ಘಂಟೆ
ವರಜ್ಯೋತಿರ್ಲೋಕದೊಳಗೆ ಸಿಂಹನಾದದಿ ॥ ೮೭

ವ್ಯಂತರಲೋಕದೊಳಗೆ ಭೇರೀಧ್ವನಿಯಿಂದ
ಕಂತು ವಿಜಯಜಿನನುದಯವ ತಿಳಿದರು ॥ ೮೮

ನಾಲ್ಕು ವಿಧದ ದೇವಗಣವ ಬರಿಸಿ ಬೇಗ
ನಾಕಪತಿಯು ಶಚೀಸಹಿತಗಜವನೇರಿ ॥ ೮೯

ಬಂದು ಶ್ರೀ ಚಂದ್ರಪುರದ ರಾಜೇಂದ್ರನ
ಅಂದವಾಗಿಹ ರಾಜಾಂಗಣದೊಳು ನಿಲೆ ॥ ೯೦

ಇಂದ್ರನ ಸತಿ ಗೃಹವನು ಪೊಕ್ಕು ಕಂಡಳು
ಚಂದ್ರನ ಬಿಂಬದಿಂದತಿಶಯ ಶಿಶುವನು ॥ ೯೧

ಬಲಗೊಂಡು ಮಾತೃಸಹಿತ ಜಿನಶಿಶುವನು
ಅಲಘು ಭಕ್ತಿಯೊಳು ವಂದಿಸಿ ಇಂದ್ರಾಣಿಯು ॥ ೯೨

ನಿದ್ರೆಯ ಬರಿಸಿ ಮಾಯದ ಶಿಶುವನು ಇಟ್ಟು
ಶುದ್ಧಚಿತ್ತದಿ ಜಿನಬಾಲಕನನು ಎತ್ತಿ ॥ ೯೩

ತನುವನು ಆ ಶಿಶುಪಾದಕ್ಕೆ ಫಣೆಯಿಟ್ಟು
ಅನುರಾಗದಿಂ ತಂದು ಪತಿಗೆ ಶಿಶುವ ಕೊಡೆ ॥ ೯೪

ಇಂದ್ರ ತೆಗೆದುಕೊಂಡು ಕಂದರ್ಪವಿಜಯನ
ಚಂದವ ನೋಡಿ ಪಾದಕ್ಕೆ ಫಣೆಯನಿಟ್ಟು ॥ ೯೫

ದೇವಸಭೆಯು ಜಯಜಯವೆಂದು ನಮಿಸಲು
ದೇವಲೋಕದ ವಾದ್ಯಗಳರವ ಮೊಳಗಲು ॥ ೯೬

ಗಜದ ಸ್ಕಂಧಕ್ಕೆ ಶಿಶುವನು ಬಿಜಮಾಡಿ
ಭುಜದಿಂದ ತಾಳಿಕೊಂಡನು ದೇವೇಂದ್ರನು ॥ ೯೭

ಬತ್ತೀಸ ಮುಖವನು ಧರಿಸಿ ಗಜೇಂದ್ರನು
ಮತ್ತೆ ಒಂದೊಂದು ಮುಖಕೆ ದಂತಗಳೆಂಟು ॥ ೯೮

ಒಂದೊಂದು ದಂತಕೆ ಕಮಲಸರೋವರ
ಒಂದು ಸರಸಿಗೆ ಬತ್ತೀಸ ಸರೋಜವು ॥ ೯೯

ಒಂದು ಸರೋಜಕೆ ಮೂವತ್ತೆರಡು ದಲ
ಒಂದು ದಲಕೆ ಮೂವತ್ತೆರಡು ನರ್ತಕಿಯರು ॥ ೧೦೦

ಕಮಲದಲವ ಮುಟ್ಟದೆ ನರ್ತಿಸುತಿರೆ
ಅಮಲಗುಣಗಳ ಪಾಡುತ ಜಿನಚಂದ್ರನ ॥ ೧೦೧

ಈಶಾನೇಂದ್ರನು ಆತಪತ್ರವನೆತ್ತಿ
ಸಾಸಿರನಾಮದೊಡೆಯ ಜಿನಶಿಶುವಿಗೆ ॥ ೧೦೨

ಮೇಗಣೆರಡು ಇಂದ್ರರು ಚಾಮರಗಳ
ರಾಗದಿ ಡಾಳಿಸುತಿರೆ ಎಡಬಲದೊಳು ॥ ೧೦೩

ಈ ಪರಿಯಲಿ ನಭದಲಿ ಸಂಭ್ರಮದಿಂದ
ಆ ಪರಮೇಶನ ಜನ್ಮಾಭಿಷೇಕಕೆ ॥ ೧೦೪

ಉತ್ತರಮುಖವಾಗಿ ನಡೆದು ಮೇರುವಿಗಾಗಿ
ಉತ್ತಮಪಾಂಡುಕ ವನಕೆ ತೆರಳಿದರು ॥ ೧೦೫

ಈಶಾನದಿಕ್ಕಿನ ರತ್ನಗಂಬಲವೆಂಬ
ಭಾಸುರ ಪಾಂಡುಕ ಶಿಲೆಯ ಮೇಲೊಪ್ಪುವ ॥ ೧೦೬

ರತ್ನನಿರ್ಮಿತದಭಿಷೇಕದ ಪೀಠದಿ
ರತ್ನತ್ರಯವನುಳ್ಳ ಜಿನಶಿಶುವನು ಇಟ್ಟು॥ ೧೦೭

ತಂದರು ಪದಿನಾಲ್ಕು ನದಿಗಳ ಜಲವನು
ಇಂದ್ರಪ್ರತೀಂದ್ರರು ಕಲಶಾರ್ಚನೆ ಮಾಡಿ ॥ ೧೦೮

ನಿಂದರು ಜಿನಶಿಶುವಿನ ಎಡಬಲದೊಳು
ತಂದು ಕೊಡಲು ಕಲಶಗಳ ಕಲ್ಪೇಂದ್ರರು ॥ ೧೦೯

ಮಂಗಲವಾದ್ಯ ಮೊಳಗಲು ಜಿನೇಂದ್ರಗೆ
ಮಂಗಲದಭಿಷೇಕವ ತೊಡಗಿದರಾಗ ॥ ೧೧೦

ಎಂಟು ಯೋಜನದಗಲದ ಕುಂಭಗಳಿರೆ
ಒಂದೊಂದು ಯೋಜನಮುಖದ ವಿಸ್ತಾರವು ॥ ೧೧೧

ಈ ಪರಿಯಲಿ ಸ್ವರ್ಣಘಟಗಳ ನಿರ್ಮಿಸಿ
ಆ ಪಂಚಮಾಬ್ಧಿಯ ಪರ್ಯಂತ ಸುರಸಂಘ ॥ ೧೧೨

ಈ ತೆರದೊಳು ನಿಂದು ಸಕಲಸಂಭ್ರಮದಿಂದ
ಒತ್ತಿ ಕ್ಷೀರವ ಮೊಗೆಮೊಗೆದು ಸುರರು ತಂದು ॥ ೧೧೩

ಇಂದ್ರ ಪ್ರತೀಂದ್ರರ ಹಸ್ತದೊಳಗೆ ಕೊಡೆ
ಸಂದಣಿಸಿದರು ಸಹಸ್ರ ತೋಳುಗಳನು ॥ ೧೧೪

ಭಾಜನಂಗಳು ಕಲ್ಪತರುಗಳೊ ಎಂಬಂತೆ
ಸೋಜಿಗವಾಯಿತು ನೋಡುವ ಸುರರ್ಗೆಲ್ಲ ॥ ೧೧೫

ದೇವಲೋಕದ ಸರ್ವವಾದ್ಯವು ಮೊಳಗಲು
ದೇವಸಭೆಯು ಜಯಜಯವೆಂದು ನಮಿಸಲು ॥ ೧೧೬

ಕ್ಷೀರವರ್ಣದ ಶಿಶುವಿಗೆ ದೇವೇಂದ್ರನು
ಕ್ಷೀರಾಭಿಷೇಕವ ಮಾಡುತಲಿರಲಾಗ ॥ ೧೧೭

ಮೇರುವಿನಿಂದ ಭೋರೆಂದು ಪಾಲಿಳಿಯಲು
ತೋರಿ ರಜತ ಗಿರಿಯೊ ಎಂಬಂದದಿ ॥ ೧೧೮

ಈ ಪರಿಯಿಂದಭಿಷೇಕವಾಗಲು ಮತ್ತೆ
ಪಾಪಹರಗೆ ಗಂಧಾಭಿಷೇಕವ ಮಾಡಿ ॥ ೧೧೯

ಅಷ್ಟವಿಧದ ವಸ್ತುಗಳಿಂದ ಪೂಜಿಸಿ
ಅಷ್ಟಕರ್ಮವ ಕೆಡಿಸುವ ಜಿನಶಿಶುವನು ॥ ೧೨೦

ದಿವ್ಯಜಲಗಳಿಂದ ತನುವ ಪ್ರಕ್ಷಾಲಿಸಿ
ದಿವ್ಯವಸನದಿಂದೊರಸಿ ದಿವ್ಯಾಂಗವ ॥ ೧೨೧

ಅನಿಮಿಷೇಂದ್ರನ ಸತೀ ಶಚೀಮಹಾದೇವಿಯು
ಅನುರಾಗದಿಂ ನೇತ್ರಗಳಿಗೆ ಕಜ್ಜಲವಿಟ್ಟು ॥ ೧೨೨

ಬೊಟ್ಟನಿಟ್ಟಳು ಜಿನಶಿಶುವಿನ ಫಣೆಯೊಳು
ಇಟ್ಟು ಮಸ್ತಕದೊಳು ರತ್ನದ ಶಿಖಿಯನು ॥ ೧೨೩

ರತ್ನದ ಬಾಲದೊಡಿಗೆಯ ತೊಡಿಸಿದಳು
ರತ್ನತ್ರಯವನುಳ್ಳ ಜಿನಬಾಲಕನಿಗೆ ॥ ೧೨೪

ಇಂದ್ರನು ಸಾಸಿರ ನೇತ್ರವ ಪಡೆದು ತಾ
ಚಂದವ ನೋಡಬೇಕೆಂದು ನೋಡಿದ ಮತ್ತೆ ॥ ೧೨೫

ಕಂದರ್ಪವಿಜಯನೆ ಕರುಣಸಮುದ್ರನೆ
ಇಂದುವರ್ಣದ ಕಾಯವನುಳ್ಳ ಜಿನಪನೆ ॥ ೧೨೬

ಭವ್ಯಾಬ್ಜಮಿತ್ರನೆ ಭವಭಯಹರಣನೆ
ಅವ್ಯಯಸುಖವನು ಪಡೆವ ಜಿನೇಂದ್ರನೆ ‖ ೧೨೭

ಕರುಣಾಬ್ಧಿಚಂದ್ರನೆ ಕರ್ಮವಿದೂರನೆ
ಕರುಣಿಸು ನನಗೆ ನಿನ್ನಂಥ ಪದವಿಯನು ‖ ೧೨೮

ಈ ಪರಿಯಲಿ ಪಾಡುತ ನೃತ್ಯವನಾಡಿ
ಪಾಪಹರನ ಪಾದಕೆರಗಿ ಸುರೇಂದ್ರನು ‖ ೧೨೯

ಸುರವಾರಣವನೇರಿಸಿಕೊಂಡು ಶಿಶುವನು
ಸುರಗಿರಿಯನು ಬಲಗೊಂಡು ಪುರಕೆ ಬಂದು ‖ ೧೩೦

ಜನನೀಜನಕರ್ಗೆ ಜಿನಕುವರನ ತೋರಿ
ಅನಿಮಿಷಪತಿ ಸಿಂಹಪೀಠದೊಳಗೆ ಇಟ್ಟು ‖ ೧೩೧

ಪುರಜನ ಮೊದಲಾದ ಬಂಧುಜನಗಳನು
ಬರಿಸಿ ಸಂಭ್ರಮದಿಂದ ಅವರ ಮನ್ನಣೆ ಮಾಡಿ ‖ ೧೩೨

ಚಂದ್ರನ ಕಾಂತಿಯಿಂದಧಿಕವಾಗಲು ದೇಹ
ಚಂದ್ರಪ್ರಭನೆಂಬ ನಾಮವನಿಟ್ಟನು ‖ ೧೩೩

ಯತಿಗಣವಂದ್ಯನೆ ಸುರಸ್ತೋಮ ತಿಲಕನೆ
ಕ್ಷಿತಿಯೊಳು ಧರ್ಮಾಮೃತವನುಗರೆವವನೆ ‖ ೧೩೪

ಮಂಗಲರೂಪನೆ ಅಮಲಶರೀರನೆ
ತುಂಗಮುಕ್ತಿಯ ಸುಖವನು ಕೊಡು ನನಗೆಂದು ‖ ೧೩೫

ಆನಂದನರ್ತನವನ್ನು ಆಡಿ ಸುರಪತಿ
ಸಾನುರಾಗದಿ ಜಿನರಿಗೆ ವಂದನೆ ಮಾಡಿ ‖ ೧೩೭

ಬಾಲಕ್ರೀಡೆಗೆ ತಕ್ಕ ಬಾಲಸುರರನಿಟ್ಟು
ಬಾಲಕಜಿನಪನ ತಾಯಿತಂದೆಗೆ ಕೊಟ್ಟು ‖ ೧೩೮

ಚಂದ್ರನಾಥನಿಗೆ ಸಕಲದೇವೇಂದ್ರರು
ವಂದಿಸಿ ಜಯಜಯಘೋಷಣೆಯನ್ನು ಮಾಡಿ ‖ ೧೩೯

ಅಮರೇಂದ್ರನು ತನ್ನ ಅಮರಗಜವನೇರಿ
ಅಮರರೊಡನೆ ಕೂಡಿ ಅಮರಲೋಕಕೆ ಪೋದ ‖ ೧೪೦

ಬಾಲಕಾಲವು ಸಲೆ ಸಕಲಸಾಮ್ರಾಜ್ಯವ
ನಾಳುತ್ತ ಸುಖದೊಳಗಿರಲೊಂದು ದಿನದೊಳು ‖ ೧೪೧

ರನ್ನಗನ್ನಡಿಯ ನೆಳಲ ನೋಡಿ ಜಿನಪತಿ
ತನ್ನ ಮನದೊಳು ವೈರಾಗ್ಯವ ತಾಳಿದ ‖ ೧೪೨

ಲೌಕಾಂತಿಕದೇವರು ಬಂದು ಬೋಧಿಸೆ
ಲೋಕವಂದ್ಯಗೆ ವೈರಾಗ್ಯ ಹೆಚ್ಚಿಸಿ ಪೋಗೆ ‖ ೧೪೩

ವರಚಂದ್ರನೆಂಬವನಿಗೆ ರಾಜ್ಯವ ಕೊಡೆ
ಸುರಪತಿ ದೇವಸಮೂಹಸಹಿತ ಬಂದು ‖ ೧೪೪

ಪರಮೋತ್ಸವದಿಂದ ಪರಮಜಿನೇಂದ್ರಗೆ
ಪರಿಷ್ಕ್ರಮಣ ಕಲ್ಯಾಣಪೂಜೆಯ ಮಾಡಿ ‖ ೧೪೫

ವಿಮಲೆಯೆಂದೆಂಬ ಪಲ್ಲಕ್ಕಿಯೇರಿಸಿ ಕೊಂಡು
ಅಮರರು ಸಹ ಸರ್ವತ್ರ ವನಕೆ ಪೋಗಿ ‖ ೧೪೬

ಇಂದ್ರನು ರತ್ನದ ಪಡಲಿಗೆಯೊಳಗಾಂತು
ಪೊಂದಿಸಿದನು ಕ್ಷೀರಾಂಬುಧಿಯೊಳು ಬೇಗ ‖ ೧೪೮

ಪೌಷೀಯ ಕೃಷ್ಣಪಕ್ಷದ ಏಕಾದಶಿಯೊಳು
ಸಾಸಿರ ಅರಸುಗಳೊಡನೆ ಸಂಯಮಿಯಾಗೆ ‖ ೧೪೯

ವಾಸವಪತಿ ಮೊದಲಾಗಿ ನಮಿಸಿ ತಮ್ಮ
ವಾಸಕೆಪೋದರು ಜಯಜಯವೆನುತಲಿ ‖ ೧೫೦

ಷಷ್ಠೋಪವಾಸಪಾರಣೆಗೆ ನಳೀಯೆಂಬ
ಪಟ್ಟಣಕ್ಕಾಗಿ ಭಾವರಿಯಿಡೆ ಜಿನಪತಿ ‖ ೧೫೧

ಸೋಮದತ್ತನು ಎಂಬ ನೃಪನರಮನೆಯೊಳು
ಸ್ವಾಮಿಗೆ ಪಾರಣೆಯಾಗಲು ನಭದಿಂದ ‖ ೧೫೨

ಪಂಚಾಶ್ಚರ್ಯವಾಯಿತು ಯೋಗೀಂದ್ರನು
ಚಂಚಲರಹಿತ ಯೋಗದಿ ನಿಲ್ಲೆ ವನದೊಳು ‖ ೧೫೩

ಮೂರು ತಿಂಗಳು ಛದ್ಮಸ್ಥಕಾಲದಿ ಮೌನ
ಧರರಾಗಿರುತಿರೆ ತಪದೊಳು ಜಿನರು ‖ ೧೫೪

ಧರ್ಮಧ್ಯಾನಗಳಿಂದ ಕರ್ಮವ ಸಡಿಲಿಸಿ
ನಿರ್ಮಲಶುಕ್ಲಧ್ಯಾನದಿ ಘಾತಿಗಳ ಸುಟ್ಟು ॥ ೧೫೫

ಪಾವನಫಾಲ್ಗುಣಶುದ್ಧ ಸಪ್ತಮಿಯೊಳು
ಕೇವಲಜ್ಞಾನವಾಯಿತು ಜಿನಚಂದ್ರಗೆ ॥ ೧೫೬

ಭೂಮಿಯಿಂದೈದು ಸಾಸಿರಬಿಲ್ಲಿ ನಂತರ
ಸ್ವಾಮಿ ಚಂದ್ರಪ್ರಭ ಗಗನದೊಳಿರಲಾಗ ॥ ೧೫೭

ಇಂದ್ರನು ಬೆಸಸಿದಂದದಿ ಕುಬೇರನು
ಚಂದದ ಸಮವಸರಣವ ರಚಿಸಿದನು ॥ ೧೫೮

ಸಾಸಿರದೆಂಟು ಎಸಳನುಳ್ಳ ಕಮಲವ
ಭಾಸುರಮೂರ್ತಿ ನಾಲ್ವೆರಳು ಸೋಂಕದೆ ನಿಂದು ॥ ೧೫೯

ಇಂದ್ರನು ದೇವಸಮೂಹಸಹಿತ ಬಂದು
ವಂದಿಸಿ ಕೇವಲಜ್ಞಾನ ಪೂಜೆಯ ಮಾಡಿ ॥ ೧೬೦

ಸಾಸಿರದೆಂಟು ನಾಮಗಳಿಂದ ಸ್ತುತಿಯಿಸಿ
ವಾಸವಪತಿ ಸಾಷ್ಟಾಂಗವೆರಗಿದದನು ॥ ೧೬೧

ಅಷ್ಟಾದಶದೋಷರಹಿತ ಜಿನೇಂದ್ರನು
ಅಷ್ಟಮಹಾಪ್ರಾತಿಹಾರ್ಯ ಸಹಿತವಾಗಿ ॥ ೧೬೨

ದ್ವಾದಶಗಣಪತಿವೃತನಾಗಿ ಜಿನರಾಜ
ದ್ವಾದಶಾಂಗವನುಪದೇಶವ ಮಾಡುತ ॥ ೧೬೩

ಅಂಗವಂಗಾದಿದೇಶಗಳ ವಿಹಾರದಿ
ಮಂಗಲಧರ್ಮಾಮೃತವನು ಕರೆಯುತ ॥ ೧೬೪

ಈ ಪರಿಯಿಂದ ಬಹುಕಾಲ ಸಂಚರಿಸಲು
ಪಾಪರಹಿತವಾಯ್ತು ಭವ್ಯಜನರಿಗೆಲ್ಲ ॥ ೧೬೫

ಸಮವಸರಣವನು ತ್ಯಜಿಸಿ ಮುನಿಗಣಗೂಡಿ
ಅಮರೇಂದ್ರವಂದ್ಯನಘಾತಿ ಕೆಡಿಪೆನೆಂದು ॥ ೧೬೬

ಸಮ್ಮೇದಗಿರಿಯೊಳು ಸಿದ್ಧಶಿಲೆಯ ಮೇಲೆ
ನಿರ್ಮಲಶುಕ್ಲಧ್ಯಾನವನು ಧ್ಯಾನಿಸುತಲಿ ॥ ೧೬೭

ಒಂದು ತಿಂಗಳು ಪರಿಯಂತರ ಜಿನಪತಿ
ನಿಂದು ಪ್ರತಿಮಾಯೋಗದ ಕಡೆಯೊಳು ಮತ್ತೆ ‖ ೧೬೮

ದಂಡ ಕವಾಟ ಪ್ರತರ ಪೂರಣೆಯಿಂದ
ಖಂಡಿಸಿ ಕ್ಷಣದೊಳಘಾತಿಕರ್ಮಗಳನ್ನು ‖ ೧೬೯

ಫಾಲ್ಗುಣಶುದ್ಧ ಸಪ್ತಮಿಯಪರಾಹ್ಣದಿ
ಪಾಲ್ಗಡಲನು ಮಿಂದ ಸ್ವಾಮಿ ಮುಕ್ತಿಗೆ ಸಂದ ‖ ೧೭೦

ಗೀರ್ವಾಣಪತಿ ಸುರಸಮಿತಿಸಹಿತ ಬಂದು
ನಿರ್ವಾಣಕಲ್ಯಾಣವನು ಮಾಡಿ ಪೋದನು ‖ ೧೭೧

ಶ್ರೀವರ್ಮ ಶ್ರೀಧರ ದೇವ ಅಜಿತಸೇನ
ದೇವ ಅಚ್ಚುತಕಲ್ಪದ ಪದ್ಮನಾಭನೆ ‖ ೧೭೨

ಕ್ಷೇಮದಿ ವೈಜಯಂತದ ಅಹಮಿಂದ್ರನೆ
ಸ್ವಾಮಿ ಚಂದ್ರಪ್ರಭ ಕೊಡು ಮುಕ್ತಿಪದವಿಯ ‖ ೧೭೩

ಧರೆಯೊಳಧಿಕವಾದ ಸಿಂಹಪುರದಿ ನಿಂದ
ವರಚಂದ್ರಪ್ರಭಜಿನರ ಸನ್ನಿಧಿಯೊಳು ‖ ೧೭೪

ಸೇನಗಣಾಂಬರ ದಿನಕರನೆನಿಸಿದ
ಭೂನುತಲಕ್ಷ್ಮೀಸೇನಮುನಿಯ ಶಿಷ್ಯ ‖ ೧೭೫

ಚಂದ್ರಸಾಗರವರ್ಣಿ ಪೇಳಿದನೀ ಪದ
ಚಂದ್ರಸೂರ್ಯರ ಕಾಲಪರ್ಯಂತಿರಲೆಂದು ‖ ೧೭೬

## ೩. ಯಕ್ಷಿಣಿಯರ ಹಾಡುಗಳು

### ೧. ಸಿಂಗಾಡಿಯೆಂದದ

ಸಿಂಗಾಡಿಯೆಂದದ ಪುಬ್ಬಿನ
ಕಂಗಳ ಕುಡಿನೋಟದ ಚೆಲುವಿನ
ಭೃಂಗಕುಂತಳದ ಫಣಿವೇಣಿ ಪದ್ಮಾಂಬ
ಸಿಂಗಾರದ ಹೂವ ಮುಡಿ ಬಾರೇ ‖ ೧

ರಾಜೀವ ನೇತ್ರದ ತಿಲಕದ
ತೇಜಮುತ್ತಿನ ಮೂಗುತಿ ಹೊಳೆಯಲು
ರಾಜಿಪನಾಸಿಕದ ವಿಮಲಾಂಗಿ ಪದ್ಮಾಂಬ
ಜಾಜಿಯ ಹೂವ ಮುಡಿಬಾರೇ ‖ ೧

ಕೆಂಬಲ್ಮಿನ ಕೊಡುಸೊಬಗಿಯ ಸಾ
ರಂಭದ ತೊಳ್ದುಜಯ ಚೆಲುವಿಕೆ
ಕಂಬು ಕಂದರದ ಸುಖವಾಣಿ ಪ
ದ್ಮಾಂಬ ಹೊಂಗೇದಗೆ ಹೂವ ಮುಡಿ ಬಾರೇ ‖ ೩

ಕೆಂಪು ಮೊದಲಾದ ರತ್ನದ
ಸಂಪೂರ್ಣದಿ ಕೆತ್ತಿಸಿದ ಕಡಗವು
ಸಂಪಿಂದೆಸವ ಸಲೆ ಜಾಣೆ ಪದ್ಮಾಂಬ
ಸಂಪಿಗೆಯ ಹೂವ ಮುಡಿಬಾರೇ ‖ ೪

ಅಸಿನಡುವಿಗೆ ವೇಶಿಯೆಸೆವತಾಗಿಯೂ
ಹೊಸಮಿಸುನಿಯ ಬಣ್ಣದ ಹೊಂಬಳೆದೊ
ಡಿಸಲು ಅತಿ ಕುಶಲದ ಮಂದಗಜಗಮನೆ ಪದ್ಮಾಂಬೆ
ಯೆಸಳ ಮಲ್ಲಿಗೆಯ ಮುಡಿಬಾರೇ ‖ ೫

ಪಂಕಜ ಮುಗುಳಂದದಿ ರಾಜಿಪ
ಲೆಂಕಿತ ಕುಚಯುಗಳದಿ ಮಗಮಗಿಸುವ
ಕುಂಕುಮ ಲೇಪನದ ಸಲೆ ಜಾಣೆ ಪದ್ಮಾಂಬೆ
ಪಂಕಜದ ಪೂವ ಮುಡಿಬಾರೇ ‖ ೬

ನಗೆಮೊಗಕತಿ ಸೊಗಯಿಸುತಿಹ ಕದ
ಪುಗಳೊಳುಡಾಗಿಪ ಕರ್ಣದ ವಾಲೆಯು
ಸೊಗಸಿಂದ ಲೇಸವಾಸಲೇ ಜಾನೆ ಪದ್ಮಾಂಬೆ
ಮೊಗ್ಗುಮಲ್ಲಿಗೆಯ ಮುಡಿಬಾರೇ ‖ ೭

ವರಹೊಂಬುಚ ಪುರದೊಳು ನೆಲಸಿದ
ವರ ನಿರ್ಗುಡಿಯ ಚರಣವ
ನೆರೆ ಸ್ಮರಿಸುವ ಜನರಿಗೆ
ವರಮುತ್ತು ಜಗದಿ ಸುಖದೇವ ಪದ್ಮಾಂಬೆ
ಸುರಗಿಯ ಹೂವ ಮುಡಿಬಾರೇ ‖ ೮

ಹೊಂಬುಚ್ಚಪುರದೊಳು ನೆಲಸಿದ
ರಂಬೆ ಪದ್ಮಾವತಿಯಮ್ಮಗೆ ಸುವರ್ಣದ
ಪ್ರತುಮೆಯೆಸೆಯಲು ಪದ್ಮಾಂಬೆ
ದುಂಡು ಮಲ್ಲಿಗೆಯ ಮುಡಿಬಾರೇ ‖ ೬

## ೨. ಗಜದೇವನಪಾದ

ಗಜದೇವನ ಪಾದಯುಗಕಭಿನಮಿಸಿ
ಅಜನರಸಿಯು ಶಾರದೆಯನು ಸ್ಮರಿಸಿ
ಭುಜಭೂಷಣನ ಸಲಹೆಂದು
ಭಜಕರಿಗೆಂದು ನಿಜವಾದ ಮತಿಯ ಕರುಣಿಸು ‖ ೧

ಪುಂಡರಿಕಾಂಬಿಕೆಯರು ಬಹುವಿಧ
ತಂಡದಿ ನಾಚುತ ನಗುತಲಿ ಇಂದು
ಮಂಡಲದಂತೆ ಹೊಳೆವುತ್ತ ಪದ್ಮಾವತಿಯಮ್ಮನ
ಕೊಂಡಾಡಿ ಹಸೆಗೆ ಕರದಾರು ‖ ೨

ಬಡನಡುವಿನ ಭಾವಕಿಯರು ಗಿಳಿ
ನುಡಿಯಿಂದಲಿ ಪಾಡುತ ಹೊಗಳುತ
ಬೆಡಗನು ಬೀರುತ ನಲಿವುತ ಪದ್ಮಾವತಿಯಮ್ಮನ
ಸಡಗರದೊಳು ಹಸೆಗೆ ಕರೆದಾರು ‖ ೩

ಮಲಯಜ ಗಂಧಿಯರೊಂದಾಗಿ
ಜಿನೆಯರು ಮುಖಿಯರು ತಲೆವಾಗಿ
ಕಲಕಿರೆ ಶರಧಿ ಅಲೆ ಮುದದಿ ಪದ್ಮಾವತಿಯಮ್ಮನ
ಲಲನೆಯರು ಹಸೆಗೆ ಕರೆದಾರು ‖ ೪

ನಳಿತೋಳಿನ ನವಮೋಹಿನಿಯರು
ಕಲಶಕುಚದ ಕೋಮಲೆಯರು
ಕಳಹಂಸ ನಡೆಯ ಚೆದುರೆಯರು ಪದ್ಮಾವತಿಯಮ್ಮನ
ನಸುನಗತ ಹಸೆಗೆ ಕರದಾರು ‖ ೫

ಮಾರನ ಮದಕರಿಯನು ಸು
ಟ್ಟು ರಾಜೀವ ಮಣಿಮಯರಾಗ

ಚಾರುವಿಧದಿಂದ ಮುದದಿಂದ ಪದ್ಮಾವತಿಯಮ್ಮನ
ನೀರೆಯರು ಹಸೆಗೆ ಕರೆದಾರು ॥ ೬

ದೀಮಾಂಧಲಿ ಧರೆಯನು ಹೊರೆವ
ಕಾಮಿತವನು ಸಂತತ ವೀವ
ಭಾಮಿನಿ ದಯ ಶ್ರೇಣಿಸುವಾಣಿ ಕಲ್ಯಾಣಿ ಪದ್ಮಾವತಿಯಮ್ಮಗೆ
ಹೇಮದಾರತಿಯ ಬೆಳಗಿರೇ ॥ ೭

**೩. ಜಯಜಯನೂತನ**

ಜಯಜಯ ನೂತನ ಪರುಷದ ಖಣಿಯೇ
ಜಯ ಪದ್ಮಾವತಿ ಭಕ್ತ ಜಿನಜಿನ ಚಿಂತಾಮಣಿಯೇ ॥ ಪಲ್ಲವಿ

ದಿನಕೆ ನೂರೆಂಟು ಬಂಡಿ ಕಂಬಿನ ಚಿನ್ನ
ಅನುಮಾಡಿ ಕೊಡು ಜಿನದತ್ತ ಕೊಡು ಸಂಪನ್ನ
ಕನಕಾದ್ರಿ ಕೊಳವೆ ಅಂಡಿಗೆ ತುಂಬಿ ಹೊನ್ನ
ಎನುತ ಓಕುಳಿಯಾಡಿದರಂತೆ ಮುನ್ನ ॥ ೧

ಪಾತಾಳದೊಳು ನಿಮ್ಮ ಪಟ್ಟಣವುಂಟು
ದೂತಿಯರಿಹರು ಯಕ್ಷಿಗಳು ನೂರೆಂಟು
ಭೂತಳೇಂದ್ರನ ಫಣಿರಾಜನ ನಂಟು ನಿಮ್ಮ
ಸೋತು ಪೂಜಿಸುವರಿಗೆ ಭಾಗ್ಯ ಕೈಗಂಟು ॥ ೨

ನೆರೆಶುಕ್ರವಾರ ನಿಮ್ಮಯ ಮೊಕ ಕಲೆಗೆ
ಸರಿಯುಂಟೆ ಪ್ರತ್ಯಕ್ಷದೇವಿ ನಿಮ್ಮೊಳಗೆ
ಪಿರಿದೇಳು ಹೆಡೆಸರ್ಪ ನೆರ ಹುತ್ತದೊಳಗೆ
ಪರುಷವಿಹುದು ನಿಮ್ಮ ಪಾದದ ಕೆಳಗೆ ॥ ೩

ಉನ್ನತವಾದ ಲೊಕ್ಕಿಯ ಕುಂಜ್ಯಾರಗಳು ನಿಮ್ಮ
ಬೆನ್ನಹಿಂದಣ ಸೂತ್ರವಜ್ರ ತುಂಬಿಗಳು
ಕನ್ನೆ ನೆರೆ ಸಿಂಹ ತೀರ್ಥ ತುಂಬಿಹುದು
ನಿಮ್ಮ ಸತ್ಯಕೆ ಚಂದ್ರಾರ್ಕ ಸಾಕ್ಷಿಗಳು ॥ ೪

ಉತ್ತರ ಮಧುರೆಯಿಂದೊಂದು ಬಂದಳಾ ಮಂಡೋದರಿ
ಮತ್ತೆ ಕಂಬಿನಿ ತಾಂಬೆ ಹಮ್ಮಿಲಿ ನೆಲಸಿದೆ

ನಿಮ್ಮ ನೆನೆ ನಂಬೆ ಹಮ್ಮೃಸಧಿಕವಾದ
ವಿಬ್ರವಿಲ್ಲಂಬೆ ನಮ್ಮನ್ನು ರಕ್ಷಿಸು ಪರುಷ ಪದ್ಮಾಂಬೆ ॥ ೫

**೪. ಕಾಯೇಎನ್ನಕಾಯೇ**

ಕಾಯೇ ಎನ್ನ ಕಾಯೇ ಸುಜನ
ಪ್ರಿಯೇ ಕರುಣಧಾರೆ ಆಯತಾಕ್ಷಿ ಅಂದವುಳ್ಳ
ಕಾಯೇ ಅಬ್ಬಪಾಣಿ ನೀಯೆನ್ನ ಕಾಯೇ ॥ ಪಲ್ಲವಿ

ರಕ್ಷಿಸಲು ಬೇಕು ದಯದಿ ನಿ ರೀಕ್ಷಿಸು ನೀ ಎನ್ನ ಜನನಿ
ವೃಕ್ಷದವನು ನಾನು ನಿನ್ನಯ ಕ್ಷಿತಿಯ ದೈವವಾ
ಅಕ್ಷಮಾಡೆ ರಾಕ್ಷಸರ ಶಿಕ್ಷಿಸಿದೆ ನಿನ್ನ ಮಹಿಮೆ
ಯ ಕ್ಷಿತಿಯೊಳಾಕ್ಷೆಯ ಸುಲಕ್ಷಣ ವಿಚಕ್ಷಣ ॥ ೧

ಬಟ್ಟಮುಖದ ಬಾಲೆ ಫಣಿಯೊಳಿಟ್ಟ ಕಸ್ತೂರಿಯ ಲೀಲೆ
ತಟ್ಟೆ ತಾಗಿ ತೂಗಲು ವಿಸ್ತರದ ವೆದೆಯ ಮೇಲೆ
ಗಟ್ಟಿ ಬಂದಿತಲ್ಲಿ ಪದಕ
ಇಟ್ಟ ಚೆಲ್ವ ದೇವಯೆನ್ನ ಅಭಿಷ್ಟವನ್ನಾ ॥ ೨

ನುಡಿಯ ಬೇಡ ನೀ ನಡೆಯ ನಡೆವ ನುಡಿದ ಝುಡಿವ ಪೆಂಡೆಗಳ
ಗಡಣದಿಂದಲೇ ಸದನ ಬಡಿವ ಜೆಡೆಯ ಎಡೆಯಗೊಂಡೆಯಾದ
ಮಡದಿ ಮಣಿಯೇ ನಿನ್ನ ನೋಡಿ ಯಡಿಯಡಿಗೆ ನುಡಿವ ಮತಿಯ
ಕೂಡಿಸು ಬಿಡದೆ ನಿನ್ನ ನುಡಿಗೆ ಪಡಿಯ ಕಾಣೆ ಪದ್ಮಿನಿ ॥ ೩

ಹಿಂಡು ದೈವಗಳಾ ತಂಡ ತಾಂಡವನು ಕಂಡು ಭರದಿ
ಗಂಡು ಸಿಂಹ ಖಳವ ಹಿಂಡ ಕಂಡು ಬೆರಸುವಂದದಿ
ಚೆಂಡೆ ಮಾಡಿ ಹಿಡಿದು ಬಡಿದು ದುಂಡು ತೋಳ ಬಿಗಿದು ಅವರ
ಕಂಡಕಡೆಗೆ ಆದ ಪ್ರ ಚಂಡಯೆನ್ನ ರಕ್ಷಿಸೆ ॥ ೪

ಕುಂಭಕುಚದ ಬಾಲೆಮರಿ ದುಂಬೆ ದುರುಳ ಮಾಲೆ ಮುಡಿದ
ಅಂಬುಜ ಬಿಂಬದ ಅರಳೆ ನಂಬಿದೆನೆ
ಅಂಬಿಕೆ ಕಂಬುಕಂಟೆಯನ್ನು ಮನಕೆ ತುಂಬುಮತಿಯ ನಂಬೆನಮ್ಮ
ಹಂಬಲ ಬಿಡೆ ಸಲಹೆ ಪೊಂಬುಚ್ಚಪುರದ ಪದ್ಮಿನಿ ॥ ೫

**೫. ತಾಯೇಪಾಲಿಸುಮತಿಯ**

ತಾಯೇ ಪಾಲಿಸು ಮತಿಯ
ಪ್ರಿಯದಿ ಒಲಿದಿಗಾರಾಯ ಪಣಿಫನ ರಾಣಿ
ಕಾಯೆ ಕಲ್ಯಾಣಿ ‖ ಪಲ್ಲವಿ

ಅಳಿಗುರುಳ ಅಬಲೆ ಆಯತದಿ ಎನ್ನನ್ನು ಕಾಯೇ
ಹಲವಿಧದೊಳು ಲೋಚನೆ ಶರಣು ಜನರನು ಪೊರೆದೆ
ಶರಧಿಗುಣ ಗಂಭೀರೆ ಶರಣು ಹೋದೆನು ನಿನ್ನ
ಸಲಹೆ ನೀ ಎನ್ನ ಕಾಯೇ ‖ ೧

ಸಾಕ ನುಡಿಯ ಮೃದುವಾಣಿ ಮುಖಶಶಿಯ ವೈಯಾರಿ
ಮುಕರ ಕಪೋಲಕಾರಿ ಅರೆಳಾಂಕಗ ಉರಿ ನಿನೀರೆಳ
ಲೋಕ ನಿಹಾರಿ ಸಕಲ ಶಾಸ್ತ್ರ ಉದ್ಧಾರಿ
ಮುಕುತಿಯನು ತೋರಿ ‖ ೨

ಚಲದಿಯೆಂತರರ ಓಡಿಸಿದೆ ಸುಜನರ ಪೊರೆವೆ
ಕೆಡುತ ತಂದೆಯು ಮಗನ ಕಡಿಯಲೆನಿಸಿದೆ
ಕಡೆಯಿಸಿಯೂ ತಂದು ಪೊಡವಿಗತಿಶಯವೆಂದು
ನುಡಿದೆ ಸೂಕ್ಷ್ಮದಿ ಅಂದು ಕೊಡು ಮತಿಯ ನೀನಿಂದು ‖ ೩

ಆದಿಕಾಲದೊಳು ನಿನ್ನಾಧರಣಿ ಫಲದಿಂದ ಈ ಭು
ವದಿ ಜನಿಸಿತು ಈ ಧರೆಯೊಳು
ನಿಧಿಯಾಂಬುಧಿಯೆಂದು ನಾ ಬೇಡಿದೆನು ಬಂದು
ನಿದನರಿತವನಿಂದು ನೋಡು ದಯಾ ಬಂಧು ‖ ೪

ಮುಕ್ತಿದಾಯಕನೆ ಕ್ಷೇಮದಿ ಹೊಂಬಚ್ಚ ಪುರದ ಸು
ಕ್ಷೇತ್ರದೊಳು ನೆಲಸಿದೆ ದಿಟ್ಟ ಜಿನ
ದತ್ತನಿಗೆ ಕೊಟ್ಟೆ ಮನದಭಿಷ್ಟವನು
ಮನಮುಟ್ಟಿ ರಕ್ಷಿಸುಯೆನ್ನ ಪರುಷ ಪದ್ಮಾಂಬೆ ‖ ೫

**೬. ರಕ್ಷಿಸೆನ್ನನುಪುಣ್ಯ**

ರಕ್ಷಿಸೆನ್ನನು ಪುಣ್ಯಜೀವಿ ಹಂಸ
ಪಕ್ಷಿಯ ನಡೆಯ ಪದ್ಮಾವತಿ
ಪಕ್ಷಿಯ ನಡೆಯ ಪದ್ಮಾವತಿ ತಾಯೇ ರಕ್ಷಿಸೆನ್ನನು ॥ ಪಲ್ಲವಿ

ನಾಗರಾಜನ ಪಟ್ಟದರಸಿ ಭವ
ರೋಗರಹಿತ ಪಾರೀಶ್ವೇಶನ ಯಕ್ಷೆ
ಕೋಗಿಲಿಂಚರರ ಮೃಜಾಕ್ಷಿ ನಿನ್ನ
ಚಾರಕ್ಕೆ ಸರಿತಾರು ಸರಿಯಿಲ್ಲದೆ ॥ ೧
ಪೆರಿನೆಸಳಲಿ ಗುರುಳ ಅಬಲೆ ಪಂಚ
ಸ್ಮರನರಸಿಯ ಕೈಯ ಮಂದಾರ ಮಾಲೆ
ಸುರುಚಿರಕೀರ್ತಿ ವಿಶಾಲೆ ನಿನ್ನ
ಕರುಣವಸಿ ಇರಲಿ ಎನ್ನ ಮೇಲೆ॥ ೨

ಸಚ್ಚುಗ ಸುರನರ ನಿನ್ನಿಯೆ ನಿನ್ನ
ಸಜ್ಜನಸುತ ಪದ್ಮರಾಜನ ತಾಯೆ
ಊರ್ಜಿತ ವರಗಳ ನೀಯೆ ತಾಯೆ
ಹೆಜ್ಜಾಜಿಯರಸಿ ಪದ್ಮಾವತಿ ತಾಯೆ॥ ೩

<u>೭. ಪಾಲಿಸೊಪದ್ಮಾಂಬ</u>

ಪಾಲಿಸೊ ಪದ್ಮಾಂಬ ಪರಮ ಪಾವನ ಜಗದಾಂಬೆ
ನೀಲಕುಂಡಲೆ ನಿಗಮ ಶರೀರೆ
ಬಾಲ ಚಂದಿರೆ ಭವ್ಯಜಿನ ಪ್ರಿಯೆ॥ ಪಲ್ಲವಿ

ಉತ್ತರ ಮಧುರೆಯೊಳು ಪದ್ಮಿನಿ ಜಿನ
ದತ್ತನ ಸಲಹುವಳು
ವೃತ್ತಕುಚದ ಮದನಾಂಕನ ಧೀರೆಯ
ಬೆತ್ತ ಜಿನನೊಲಿದತ್ತೆನು ಅನುದಿನ॥ ೧

ಜಗದೊಡತಿಯು ನೀನು ನಿನ್ನಯ
ಪೊಗಳುವರೆನಗಳವೇ
ಅಗಣಿತ ಮಹಿಮೆಯ ಅರುಹನ್ನಯಕ್ಷಿಯ
ಸುಗಣೆನಿಸಿದಾಗಿ ನೀ ಸದ್ಗುಣ ಚರಿತೆಯ॥ ೨

ಧರೆಯೊಳಧಿಕವಾದ ಚಲುವಿಕೆ
ಸುಪುರದರಮನೆಯ
ಕರುಣವಿತ್ತು ಮಾಲಿಂಗರಸರ
ದುರಿತ ವಿಘ್ನಗಳ ಪರಿಹರಿಸು ಮಹಾದೇವಿಯ ॥ ೩

## ೮. ಅಂಬಾಪರಾಕು

ಅಂಬಾ ಪರಾಕು ದೇವಿ ಪರಾಕು
ಅಂಬಾ ಪರಾಕು ಪದ್ಮಾಂಬ ಪರಾಕು॥ ಪಲ್ಲವಿ

ಪಣಿ ಪರಾಕು ಪದ್ಮಿಣಿ ಪರಾಕು
ಪಾರಿಶ್ವಜಿನಪನ ಯಕ್ಷೆ ಪರಾಕು॥ ೧

ನಾಗಲೋಕಕೆ ಕರ್ತೆ ದೇವಿ ಪರಾಕು
ನಾಗಿಣಿಯಂತರಿಗಧಿನಾಥೆ ಪರಾಕು॥ ೨

ಪಾಪಹರನ ಭಕ್ತಿ ಪಾಹಿ ಪರಾಕು
ಪವನ ಆ ಚಂದ್ರಶಾಂತಿ ಪರಾಕು॥ ೩

ಧಾರಿಣಿ ಗೆಲಿದ ನಾಥೆ ದೇವಿ ಪರಾಕು
ಧಾರಿಣಿ ರಾಜನ ರಾಣಿ ಪಾಹಿ ಪರಾಕು॥ ೪

ಕುಕ್ಕುಷ್ಠವಾಹನೆ ಕುಮುದೆ ಪರಾಕು
ಕಮಲನಯನೆ ಪದ್ಮಾಂಬ ಪರಾಕು॥ ೫

ಪರಮ ದಯಾನಿಧಿ ಪರಶು ಪರಾಕು
ಪರಮ ಪದ್ಮಾಸನ ರೂಢೆ ಪರಾಕು॥ ೬

ಭಕ್ತರ ಪರಿಪಾಲೆ ಧೀರೆ ಪರಾಕು
ಭವಹರನ ಯಕ್ಷೆ ಜಗದಾಂಬೆ ಪರಾಕು॥ ೭

ಸಮ್ಯಕ್ತ್ವಕದಿ ಧೀರೆ ಸುಜ್ಞಾನೆ ಪರಾಕು
ಸುಜನರ ಸಲಹುವ ಸಜ್ಜನೆ ಪರಾಕು॥ ೮

ಪಾಶಾಂಕುಶ ಫಲ ಅಭಯ ಹಸ್ತೆ ಪರಾಕು
ಪಾಪಕ್ಕೆ ಅತಿಭೀತೆ ಮಹಿಮೆ ಪರಾಕು॥ ೯

ನಿರ್ಗ್ಗುಡಿತರುವಾಸೆ ನಿಗಮ ಪರಾಕು
ನಿರ್ಧಯ ಮಾಡದೆ ಸಲಹು ಪರಾಕು॥ ೧೦

ಬೆಳ್ಗುಳ ಪುರವಾಸೆ ಭವ್ಯ ಪರಾಕು
ಬಾಲಕನನು ಕಾಯೆ ಜಗದಾಂಬೆ ಪರಾಕು॥ ೧೧

## ೯. ಎಚ್ಚರಿಕೆಎಚ್ಚರಿಕೆಪದ್ಮಾಂಬೆ

ಎಚ್ಚರಿಕೆ ಎಚ್ಚರಿಕೆ ಪದ್ಮಾಂಬೆ ಎಚ್ಚರಿಕೆ
ಭಕ್ತರ ಪರಿಪಾಲೆ ಎಚ್ಚರಿಕೆ ಎಚ್ಚರಿಕೆ ॥ ಪಲ್ಲವಿ

ನಾಗಲೋಕಕೆ ಕರ್ತೆ ನಾಗರಾಜನ ರಾಣಿ
ನಾಗಭೂಷಣಧೀರೆ ಜಗತಿಗಧಿ ಧೀರೆ॥ ೧

ಪಾರಿಶ್ವಜಿನ ಯಕ್ಷೆ ಪರಮ ಪಾವನ ಗಾತ್ರೆ
ಪರಮಮಂಗಲಕಾರೆ ಪರಮಗುಣಶೀಲೆ॥ ೨

ಪದ್ಮ ಮುಖದಾ ಧೀರೆ ಪದ್ಮನಯನೆ ಬಾರೆ
ಪದ್ಮ ಹಸ್ತದಾ ದೇವಿ ಪದ್ಮಾಸನ ರೂಢೆ॥ ೩

ಪಾಪಹರನ ಭಕ್ತೆ ಪಾಪಕೆ ಅತಿ ಭೀತೆ
ಪಾಲಿಸು ದಯದಿಂದ ಪಾಪಿ ಗುಣರನ್ನೆ॥ ೪

ನಿರ್ಗ್ಗುಂಡಿತರುಪಾಸೆ ನಿಗಮ ಹರನೆ ಯಕ್ಷೆ
ನಿರ್ಗುನ್ವಿತ ಧೀರೆ ನಿಗಮ ಗಂಭೀರೆ॥ ೫

ಭವ್ಯ ಜನರ ಪಾಲೆ ಭಕ್ತರ ಮಂದಾರೆ
ಭವ ವಿನಾಶನ ಯಕ್ಷೆ ಭಕ್ತನ ಸಲಹೆ॥ ೬

ಬೆಳ್ಗುಳ ಪುರವಾಸೆ ಚಂದ್ರಗಿರಿ ನಿವಾಸೆ
ಚಂದದಿಂದಲಿ ಬಂದು ನಿನ್ನ ಬಾಲಸ ಸಲಹೆ॥ ೭

## ೧೦. ಯಾಕಿನ್ನುಕೋಪ

ಯಾಕಿನ್ನು ಕೋಪ ತಾಯೇ
ಲೋಕಾಂಬೆ ರಕ್ಷಿಸು ತಾಯೇ॥ ಪಲ್ಲವಿ

ಮಂದಾರಧೀರೆ ಇಂದು
ಕಂದನ ಸಲಹಿದಳೆಂದು
ಬಂದೇನು ನಾ ಶರಣೆಂದು
ಕುಂದೇನು ಎನ್ನೊಳಗಿಂದು॥ ೧

ಬಳಲದಿರು ಸಿರಿವಂತೆ
ಇಳೆಯೊಳು ಮಹಿಮೆನಾಂತೆ
ತಡ ಮಾಡಬೇಡ ಹಿಮವಂತೆ
ತಾಳಲಾರೆ ನಾ ನಿನಗಿಂತ॥ ೨

ಧ್ಯಾನಿಸುತಿರುವೆನು ನಿನ್ನ
ಆನಂದಮೂರುತಿ ಎನ್ನ
ಮಾನದಿ ಮನ್ನಿಸೊ ಎನ್ನ
ದೀನದಯದೊಳು ಚೆನ್ನ ॥ ೩

ಕಾವುದು ತವನಿಜ ಬಿರಿದು
ಸೇವಾಕರನು ದಯವೆರೆದು
ದೇವಿದುಗುಡವನು ತೊರೆದು
ನಿಜಗುಣವನು ತೊರೆದು॥ ೪

ಕತ್ತಲ ಬಸದಿಯೊಳಗಿರುವೆ
ಅರ್ತಿಯಿಂಬುದರನು ಪೊರೆವೆ
ಭೃತ್ಯಾನು ಮರೆವುದುಚಿತವೇ
ಸತ್ಯಾಂಬೆ ಪದ್ಮನಿಗರುಹೆ॥ ೫

## <u>೧೧. ಪಾಹಿಪದ್ಮಿಣಿಮಾಂ</u>

ಪಾಹಿ ಪದ್ಮಿಣಿಮಾಂ ಪಾಹಿ ಗುಣಮಣಿ
ಸಹಾಯವಾಗು ನೀ ಭವ್ಯಾಬ್ಜ ಗುಣಮಣಿಯೇ॥ ಪಲ್ಲವಿ

ಪಾಶಮಾಂಕುಶ ಫಕ ಭಯಂಕರೇ
ಲೇಸು ತೋರಿಸೆ ಸಕಲ ಸೌಖ್ಯಮಂದಿರೇ॥ ೧

ಕುಂಕುಮಾಂಗಿಯೇ ಶಂಖಕೊರಳ ಜಾಣೆಯೇ
ಬಿಂಕಗಾತಿಯೇ ನಿಷ್ಕಳಂಕ ಚರಿತ್ರೆಯೇ॥ ೧

ದೃಢದೀ ಮನದೊಳು ನಿನ್ನಡಿ ನುತಿಸಲು
ದೃಢದೀ ಅನುದಿನ ಸಿರಿಯ ಕೊಡು ಮನದೊಳು॥ ೩

ಬಿರಿದ ಪಾಲಿಸಿದೆ ಭವನ ಧರಿಸಿದೆ
ಮೊರಲಿದೆ ನಿಧಿಯೆನ್ನ ಹರುಷಗೊಳಿಸಿದೆ ॥ ४

ಸತ್ಯವಂತೆಯೇ ಕತ್ತಲ್ಪಸದಿ ತಾಯೇ
ಭೃತ್ಯಮಧುರ ಶೈಲಜನಿಗೆ ಭಯನೀಯೇ॥ ೫

## ೧೨. ಅಂಬಾನಿನಗೆಂಥ

ಅಂಬಾ ನಿನಗೆಂಥ ನಿರ್ಧಯವೇ
ಚಿಂತತಾರ್ಥವನು ಸಂತೋಷಗೊಳಿಸಿ ಮಾ
ಕಾಂತು ವಿಜಯನೀಕ್ಷಿಸು
ವಂಥ ಸಹಿಸದಿಂದೆಂಥ ನಿರ್ದಯವೇ॥ ಪಲ್ಲವಿ

ಚಿತ್ರವಾಗಿದೆ ಶತಪತ್ರ ಪಾದಂಗಳ
ಸ್ತೋತ್ರವೇ ಗತಿಯೆಂಬ
ಪುತ್ರನ ಪಾಲಿಪದೆಂಥ ನಿರ್ದಯವೇ॥ ೧

ಮಾನವಂತನೆಂದು ಜ್ಞಾನವಂತನೆಂದು
ಮಾನನಿಧಿಯು ಸ
ಮ್ಮಾನವ ಕೊಡದಿಹದಂಥ ನಿರ್ದಯವೇ॥ ೨

ಪರಿಕಷ್ಟವ ಪರಿಹಾರವನು ಮಾಡೆಂದು
ನಿರತ ಭಜಿಪ ನಿಮ್ಮ
ತರಳನ ಕರುಣಿಸದೆಂಥ ನಿರ್ದಯವೇ॥ ೩

ಹೊಂಬುಜಾಪುರದೊಳಗಿಂಬಾಗಿ ನೆಲಸಿದ
ಅಂಬಾ ಪದ್ಮಾವತಿಯೇ
ಸಂಭ್ರಮದೊಳಗಿಹದೆಂಥ ನಿರ್ದಯವೇ॥ ४

## ೧೩. ಎಚ್ಚರಿಕೆಎಚ್ಚರಿಕೆಶ್ರುತದೇವಿ

ಎಚ್ಚರಿಕೆ ಎಚ್ಚರಿಕೆ ಶ್ರುತದೇವಿ ಎಚ್ಚರಿಕೆ
ಸಚ್ಚಿನ್ಮಯ ರೂಪದೇವಿ ಎಚ್ಚರಿಕೆ ಶಾರದದೇವಿ
ಸಚ್ಚಿನ್ಮಯ ರೂಪದೇವಿ ಎಚ್ಚರಿಕೆ ॥ ಪಲ್ಲವಿ

ಸುರನರೋರಗವಂದ್ಯೆ ಸುರನರ ಪೂಜಿತೆ
ಸುರಚಿರ ಗುಣಭರಿತೆ ಸುಜ್ಞಾನಕಾರೆ॥ ೧

ವೀಣಾಮಸ್ತಕಧಾರೆ ವಿನುತ ಜನರ ಪಾಲೆ
ವಿನಯ ಸಿದ್ಧಾಂತಧೀರೆ ವಿನುತ ಜಿನಪಾಲೆ॥ ೨

ಸಕಲ ಶಾಸ್ತ್ರವಿರೂಢೆ ಸಕಲ ಜ್ಞಾನ ಪ್ರಕಾಶೆ
ಸಕಲ ಮತಿಯ ಕೊಟ್ಟು ಸಲಹೆ ಜಗಧೀರೆ॥ ೩

ಕಾಯಕರ್ಮವಿದೂರೆ ಕಮಲನಯನ ಬಾಲೆ
ಕಾಯ ರಹಿತ ದೇವಿ ಕಮಲಾಸನರೂಢೆ॥ ೪

ಭವ್ಯಜನರ ಪಾಲೆ ಭಕ್ತರ ಮಂದಾರೆ
ಭವವಿನಾಶನ ದೇವಿ ಬಾಲನ ಸಲಹೆ॥ ೫

ನವಿಲವಾಹನ ರೂಢೆ ನವರತ್ನ ಭೂಷಿಣೆ
ನವಕೋಟಿ ಮುನಿವಂದ್ಯೆ ನಲವಿಂದ ಸಲಹೆ॥ ೬

ಬೆಳ್ಗುಳ ಮಠವಾಸೆ ಗುರು ಪಂಡಿತಾರ್ಯ ಹೋಷೆ
ಬಹುಕೃಪೆಯಿಂದ ಸಲಹೆ ಶ್ರುತ ವಿಶಾರದೆ॥ ೭

## ೧೪. ಚಂದ್ರನುತಚಂದ್ರ

ಚಂದ್ರನುತ ಚಂದ್ರನಾಥನ ಭಕ್ತೆ
ಸಾಂದ್ರಸದ್ಗುಣ ಮಣಿಭೂಷ ಪ್ರಶಸ್ತೆ
ತಾಂದ್ರವಿಲಯ ಜಿನಧರ್ಮ ಪ್ರಶಸ್ತಿ ಯಕ್ಷಕು
ಲೇಂದ್ರನು ಶ್ರೀ ವಿಜಯನ ಶಕ್ತೆ ರಕ್ಷಿಸೆನ್ನನು ಮತಿದೋರು॥ ೧

ಸಾರಾಂಶಸಾರ ವಿಚಾರಿಸು ಚರಿತೆ
ಘೋರಹಂಕಾರ ವಿಕಾರ ತಾರೆ

ಕಾರುಣ್ಯರೂಪು ಲಾವಣ್ಯ ವಿಸ್ತಾರೆ
ಭೂರಿಗುಣತ್ರಯ ಧಾರೆ ಮನೋಹಾರೆ
ನಿರ್ಮಲಕಾರೆ ಸುಖದೋರೆ॥ ೧

ಅಂಬುಜದಳ ನಿಭಚಾರ ಸುನೇತ್ರೆ
ಕಂಬುಗೊರಳ ಕೋಮಲತೆನುದಾತ್ರೆ
ತುಂಬೆಗುರುಗಳಮುದ್ದು ತುರುಬಿಪ ಚಿತ್ರೆ
ಕೆಂಬಲಗಳ ಹಸಭವ್ಯಾಂಬುಜ ಮಿತ್ರೆ
ರಂಭೆಜ್ವಾಲಿನಿ ಸ್ಥಿರಂಜೀವಿ॥ ೨

ಕಿಂಕಿಣಿ ಸ್ವರಗಳ ಪಾಡುವಲ್ಲಿ
ಕಂಕಣರ ಝಣಝಣಿಸುವಲ್ಲಿ
ಬಿಂಕ ಬಿಂಕದಲಿ ಮುತ್ತಿನ ವಾಲೆಯ ಝಲ್ಲಿ
ಕೊಂಕುಕುರಳ ಶಂಕಿನಿ ನಾರಿಯರಲ್ಲಿ
ಶಂಕಿನಿಯರು ಸ್ತುತಿಯ ಸ್ತುತಿಸಿದಾರು॥ ೪

ಕಂಜವಿಷ್ಟರೆ ಭವ್ಯ ಲೋಕ ಪ್ರಸನ್ನೆ
ರಂಜಿತ ಮಣಿಮಯ ಮೌಲಿ ಸಂಪನ್ನೆ
ಭುಂಜಿತ ಸುಖಕಲೆ ಹರಮೋಹನ್ನೆ
ಮಂಜುಜ್ಞಾನಿ ನಿತ್ಯ ಸೊಗುಸುಗಾರ್ತಿ ಬೆನ್ನು
ರಂಭೆ ಜ್ವಾಲಿನಿ ಸ್ಥಿರಂಜೀವಿ॥ ೫

ರತ್ನರಂಜಿತ ಮೂಗುತಿ ಕಂಠಮಾಲೆ
ಯತ್ನಕೃಪಾಶಿರ ಮುತ್ತಿನ ಜಾಲೆ
ರತ್ನಕೀಲಿತ ಭುಪಪೀಠದ ಮ್ಯಾಲೆ
ರತ್ನನಿರ್ಮಿತ ಪೀಠದ ಮೇಲೆ
***** ಜ್ವಾಲಿನಿ ಸಲಹೆಮ್ಮ॥ ೬

ಅಂಗಜ ಹರನ ಪಾದಂಗಳ ನಮಿಸಿ
ಮಂಗಳ ಶ್ರೀ ಜಿನಮತವನು ಧರಿಸಿ
ಶೃಂಗಾರದಿವ್ಯಗಾತ್ರವನು ಶೋಭಿಸಿ
ರಂಗುದುಟಿಯ ಚೆಲ್ವೆ ಧರ್ಮವಿಸ್ತರಿಸಿ
ಹೊಂಗಳೊಳು ನೀ ಶೀಲೆ ಸಲಹೆಮ್ಮ॥ ೭

ಗರ್ವಭರಿತ ವ್ಯಂತರಗ್ರಹದೂರ್ತೆ
ಸರ್ವಜನರ ಪಾಲಿಪ ಮಹಾದಾತೆ
ನಿರ್ವಾಣ ಪತಿ ಮಸ್ತಕದ ಕೀರ್ತೆ

ಪೂರ್ವಸುಕೃತ ಕರಭೋಗ ಸುವಾರ್ತೆ
ದುರ್ವಾರದೂರ್ತೆ ಸಲಹೆಮ್ಮ॥ ೮

**೧೫. ದೇವಿಯನೋಡುವೆನು**

ರಾಗ: ಕಲ್ಯಾಣಿ ಆಟ ತಾಳ

ದೇವಿಯ ನೋಡುವೆನು ಶ್ರೀ ಜ್ವಾಲಿನಿ ತಾಯೇ
ನಾ ನೋಡುವೆನು ॥ ಪಲ್ಲವಿ

ನೋಡುವೆ ಪಾಡುವೆ ಮಾಡುವೆ ಸ್ತುತಿಗಳ
ಬೇಡಿದ ವರಗಳ ನೀಡುವೆ ಜ್ವಾಲಿನಿದೇವಿಯ
ಅಳಿಮರುಳಿನ ಬಾಲೆ ಕರ್ನದಿ ರಂಜಿಪ ದೇವಿಯೇ॥ ೧

ಹೊಸಮುತ್ತಿನ ವಾಲೆ ರ್ಯಾಗಟಿಗೊಂಡವು
ಕ್ಯಾದಿಗಿ ಜಾಜಿಗಳಿಂದ ಜ್ವಾಲಿನಿ ಶೋಭಿಸು
ಭುವನ ಸಂಜೀವಿಯೇ ದೇವಿಯೇ ॥ ೨

ಆಭರಣವ ತೊಟ್ಟು ನಾಸಿಕದೊಳು ಮೂಗುತಿಯನಿಟ್ಟು
ಬಾಲೆಗೆ ಕಪ್ಪು ಬಾವುಲಿ ಜಾಜಿಗಳಿಂದ
ಜ್ವಾಲಿನಿ ಶೋಭಿಪ ಭುವನ ಸಂಜೀವಿಯೇ॥ ೩

ಸಿಂಹಪುರಸ್ಥಳದಿ ಸ್ಥಿರಕರದಿರ್ಪ ದಯಾಕರದಿ
ಲಕ್ಷ್ಮೀಸೇನ ಮುನಿಪತಿ ಇಷ್ಟಾರ್ಥವ ಕೊಡುವಂಥ
ಅಕ್ಷಯ ವರಗಳ ಕೊಡುವಂಥ ತಾಯೇ॥ ೪

**೧೬. ಪಾಲಿಸುಪಾಲಿಸು**

ಪಾಲಿಸು ಪಾಲಿಸು ಪಾಲಿಸು ತಾಯೇ
ಲೋಲ ಜ್ವಾಲಿನಿ ಎನ್ನ ಅನುದಿನ ಕಾಯೇ॥ ಪಲ್ಲವಿ

ಮೊರೆಹೊಕ್ಕ ಸಿಬರ ಕಾಯಬೇಕಮ್ಮ
ಕರುಣಿಸದಿದ್ದರೆ ಕಾಯ್ವರೇ ನಮ್ಮ
ಸೆರೆಗೊಡ್ಡಿ ಬೇಡಿದೆ ಕರುಣಿಸೇ ನಮ್ಮ
ಮೊರೆಯ ಲಾಲಿಸು ತಾಯೇ ಜ್ವಾಲಿನಿಯಮ್ಮ ॥ ೧

ಪಟ್ಟಪಟ್ಟಾವಳಿದ ನಿಭವನುಟ್ಟೆ
ಗಟ್ಟಿ ನೀ ರಂಜಿಕೆ ಕಂಚಿಕೆ ತೊಟ್ಟೆ
ಇಟ್ಟನೊಸಲಿಗೆ ಮೇಲು ಮುತ್ತಿನಾ ಬಟ್ಟೆ
ಕೊಟ್ಟು ರಕ್ಷಿಸುಯೆನ್ನ ಅಬಿಷ್ಟಮ ದಿಟ್ಟೆ॥ ೨

ದಾರಿದ್ರ್ಯನೆಡೆಗೊಂಡು ಧಾತುಗುಂದಿದೆನು
ಕ್ರೂರನಂಗಂಗಳಿಂದ ಕಡುನೊಂದೆ ನಾನು
ಪ್ರಾಕು ಕರ್ಮಕೆ ಸಿಕ್ಕಿ ಕಡುನೊಂದೆ ನಾನು
ಸಾರಯ್ಯ ದಯೆಯೆನ್ನ ಸಲಹಬೇಕಿನ್ನು॥ ೩

ಚಂದ್ರಾರ್ಕಕೋಟಿ ಪ್ರಕಾಶದೊಳೆನ್ನ
ಚಂದ್ರ ಜಿನೇಂದ್ರ ಯಕ್ಷಿಣಿಯಮ್ಮ
ಇಂದ್ರಾದಿವಂದಿತೆ ದೇವಿಯಮ್ಮ
ಬಂದ ವಿಘ್ನಗಳನು ಪರಿಹರಿಸಮ್ಮ॥ ೪

ಘನವಾದ ಬೆಳ್ಗೊಳಪುರದ ಭಕ್ತರನು
ಅನುದಿನ ಸಲಹಮ್ಮ ಪುತ್ರಾಪವಿತ್ರರನು
ಕ್ಷಣ ಅಗಲದೆ ಎನ್ನ ಹೃದಯದೊಳಗೆ
ನೀನು ಮನೆ ಮಾಡಿಕೊಂಡರು॥ ೫

## ೪. ಜೋಗುಳ ಹಾಡುಗಳು

**<u>೧. ಅಷ್ಟಕಂಬದಮಂಟಪ</u>**

ಅಷ್ಟಕಂಬದ ಮಂಟಪವಲಂಕರಿಸಿ
ಪಟ್ಟೆಪೀತಾಂಬರಗಳನು ಶೃಂಗರಿಸಿ
ಬಟ್ಟ ಮುತ್ತಿನ ಜಲ್ಲಿಗಳು ತಂದಿರಿಸಿ
ತೊಟ್ಟಿಲ ಕಟ್ಟಿದರಾಗ ಸಂಭ್ರಮದಿ ಜೋ ಜೋ ॥ ೧

ಮೃದುತಲದಲಿ ಹಾಸಿಗೆಯ ಹಾಸಿದರು
ಒಲವಿಂದ ಗಂಧಕಸ್ತೂರಿಯ ಪೂಸಿದರು
ವಿಧವಿಧರಾಗದಿ ಪಾಡುತ ಶಿಸುವನು
ಮುದದಿಂದ ತೊಟ್ಟಿಲೊಳಿರಿಸಿ ತೂಗಿದರು ಜೋ ಜೋ ॥ ೨

ಮುಡಿದಮಲ್ಲಿಗೆ ಸರ ಎಡಬಲಕೋಲೆಯು
ಕಡಗಕಂಕಣ ಬಳೆಗಳು ದನಗೆಯ್ಯೆ

ಬೆಡಗಿಂದ ಧವಳ ಶೋಭಾನವ ಪಾಡುತ್ತ
ಕಡುಜಾಣೆಯೆರಲ್ಲ ತೂಗಿ ಹಾಡಿದರು ಜೋ ಜೋ॥ ೩

ಗೌಳಿಗುಜ್ಜರಿನಾಟಿ ಜಂಪೆಗಳಿಂದ
ಸಾಳಂಗ ಕಾಂಬೋಧಿಕಲ್ಯಾಣಿಯಿಂದ
ಮೇಲಾದರಾಗದಿ ಸ್ವರವೆತ್ತಿ ಪಾಡುತ
ಬಾಲೆಯರೆಲ್ಲ ಜೋಯೆನುತ ತೂಗಿದರು ಜೋಜೋ ॥ ೪

ಜೋಜೋ ಜಿನಪಾದ ಸರಸಿಜ ಭೃಂಗ
ಜೋಜೋ ಸಾಕಾರರಾಯನ ಕಂದ
ಜೋಜೋ ಮನಸಿಜ ಸಮರೂಪನೆನುತ
ಜೋಳುಗಪಾಡಿ ತೂಗಿದರು ನಾರಿಯರು ಜೋಜೋ ॥ ೫

ಜನನಿಯ ಗರ್ಭಾಬ್ಧಿ ಚಂದ್ರಾಮ ಜೋಜೋ
ದಿನಕರ ಕೋಟಿಯಂತೆಸೆವನೆ ಜೋಜೋ
ಘನಗುಣಾನ್ವಿತ ಜಿನದತ್ತ ಜೋಯೆಂದು
ವನಜಗಂಧಿಯರೆಲ್ಲ ತೂಗಿ ನಲಿದರು ಜೋಜೋ ॥ ೬

ಸಿರಿಗುರುವಿನ ಮುದ್ದುಕುವರನೆ ಲಾಲಿ
ಧರಣೀಶ ಸಾಕಾರ ತನುಜನೇ ಲಾಲಿ
ತರುಣಿ ಅಂಜನಾ ದೇವಿಕಂದನೆ ಲಾಲೆಂದು
ತರುಣಿಯರೆಲ್ಲ ತೂಗಿ ಪಾಡಿದರು ಜೋಜೋ ॥ ೭

## <u>೨. ಜೋಜೋಪುರುಪರಮೇಶನ</u>

ಜೋಜೋ ಪುರಪರಮೇಶನ ಕಂದ
ಜೋಜೋ ಸುನಂದ ನಯನಾನಂದ
ಜೋಜೋ ಭುವಿನುತ ಚರಣಾರವಿಂದ
ಜೋಜೋ ನಿರ್ಮಲ ಸದ್ಗುಣವೃಂದ ॥ ೧

ಮನುಭೂಮಿಪತಿವಂಶ ಲಕ್ಷ್ಮಿಲಲಾಮ
ವನಿತಾಜನನಾಯನಾಭಿರಾಮ
ಅನವದ್ಯಚರಿತ ಸಂಗರ ರಂಗಭೀಮ
ನಿನಗೆಣೆಯುಂಟೇ ಧರಣಿಗಧಿಕವು ॥ ೨

ಕಾಲಲಂದುಗೆ ಗೆಜ್ಜೆ ಝುಲ್ಲ ಝುಲ್ಲೆನುತಲಿಯೇ
ಚಾಲಿಂದ್ರದೋಲೆ ಕರ್ಣಗಳೊಳ್ಪೆಳೆಯೇ
ಮೇಲು ಮುತ್ತಿನ ಸರಯುರದೊಲಗೋಲೆಯೇ
ಬಾಲೆಯರಿಂತು ತೂಗಿದರು ಬಾಲಕನಾ ‖ ೩

ಬಡನಡು ಬಳುಕೆ ಹೊಂಗೊಡ ಮೊಲೆಯಲುಗೆ
ಕಡೆಗಣ್ಣಕಾಂತಿ ದೆಸೆಯನೆಲ್ಲ ಬೆಳಗೆ
ಮಡಿದ ಮಲ್ಲಿಗೆಗೆ ತುಂಬಿಗಳು ಬಂದೆರಗಿ
ಮಡದಿಯರೆಲ್ಲರು ತೂಗಿದರು ಬಾಲಕನ ‖ ೪

ಆದಿಚಕ್ರೇಶನ ಒಡಹುಟ್ಟಿದನುಜ
ಮೇದಿನಿಯೊಳು ವಿತರನ ಕಲ್ಪ ಭೂಜ
ಆದಿತ್ಯಮಂಡಲ ಸುರಚಿರ ತೇಜ
ಶ್ರೀದಿವಿಜಾನತ ಚರಣ ಸರೋಜ ‖ ೫

ಮೋಹನ ಕಾಯ ಮಕ್ಕಳ ಶಿರೋರನ್ನ
ಸಾಹಸಿ ಸಕಲ ಲಾವಣ್ಯಸಂಪನ್ನ
ಬಾಹುಬಲೀಶ ಕುವರ ಸುಪ್ರಸನ್ನ
ಪಾಹಿಮಾಂ ಸರ್ವಸಜ್ಜನ್ಮತಾಸನ್ಯ ‖ ೬

ಮೇರುಧರಾಧರ ಸನ್ನಭದೀರ
ಪಾರಾವಾರ ಸಮಾನ ಗಂಭೀರ
ಕಾರುಣ್ಯ ನಿಧಿ ತ್ರಿಜಗೈಕಸುವೀರ
ಚಾರುಕೋಮಲ ನೀಲವರ್ಣ ಶರೀರ ‖ ೭

**೩. ಜೋಜೋದಿವಾಕರತೇಜ**

ಜೋಜೋ ದಿವಾಕರ ತೇಜ ವಿರಾಜ
ಜೋಜೋ ಆಶ್ರಿತ ಸುರಕಲ್ಪ ಭೂಜ
ಜೋಜೋ ಖಗಚಕ್ರಕೀರ್ತಿಗರ್ಭೇಜ
ಜೋಜೋ ರಜತಾದ್ರಿಯೊಡೆಯನೆ ರಾಜ ‖ ೧

ಜೋಜೋ ಜ್ಯೋತಿ ಉದರ ಸಂಜಾತ
ಜೋಜೋ ಅಂಬರಚರ ಕುಲಪ್ರಖ್ಯಾತ

ಜೋಜೋ ರಾಜಾಂಗಸಪ್ತಾನ್ವಿತ ಪ್ರೀತ
ಜೋಜೋ ವಿದ್ವಾಂಸಮನೋಭೀಷ್ಟದಾತ ॥ ೨

ಜೋಜೋ ದಯಾನಿಧಿವರ್ಧನ ಚಂದ್ರ
ಜೋಜೋ ಸ್ವರ್ಗಾವತರಣಾವ **x x x**
ಜೋಜೋ ಏಕಾದಶವರ್ಗಪುರೇಂದ್ರ
ಜೋಜೋ ಮದವೆತ್ತದಂತಿ ಮೃಗೇಂದ್ರ ॥ ೫

**<u>೪. ಅಳುವುದ್ಯಾತಕೆಕಂದಾ</u>**

ಅಳುವುದ್ಯಾತಕೆ ಕಂದಾ ಅತ್ತರಂಜಿಸು ಗುಮ್ಮಾ
ಏಳಯ್ಯ ಕಾರುಣ್ಯ ನೆಲಸಿದೆ ನಿನ್ನೊಳಗೆ
ವಜ್ರದ ಪಡಿಗಳು ಸೋಂಕಿದ ಕಿರುವೆರ
ಳುಳುಕಿತೆ ನಿನಗಲರಡಿಯ ಕಂದಯ್ಯ ॥ ೧

ಗರಳದಾ ಮಡುವಿನಲಿ ಧುಮುಕಿದಾ ಕಾರಣದಿ
ಚಣವು ನೊಂದಿತೆ ಪುಷ್ಪಿನ ಮಳೆಯಿಳಿ
ತರಲು ನಿನಗೆ ದೇಹ ಬಳಲಿತೆ ಕಂದಾ ॥ ೨

ಕುರುಹನರಿದು ಪಂಚಗಂಧಿಯರೀ ವಿತರಣದಿ
ಕರಿಯ ಗೆಲಿದು ಹರಿಯಳವಡಿಸುವ ಭೂ
ವರರ ಸೋಲಿಸಿ ಕರ ನೊಂದಿತೆ ನಿನಗೇ ॥ ೩

ದುಷ್ಟ ಚಂಡಪ್ರಭನಾ ಪಿಡಿದು ವಿದ್ಯಾಧರರಾ
ಕುಟ್ಟಿಯಸುರರನು ಕೆಡಹಿದ ಕಾರಣ
ದುಷ್ಟಮೂರುತಿ ಬಳಲಿದುವೆ ಕಂದಯ್ಯ ॥ ೪

ಮೂರು ಕಂಡವ ಸುತ್ತಿ ಬಳಲಿದವೆ ಪದಯುಗಲ
ವಾರಿಜೋದ್ಭವೆಯಾದಿ ರಮಣಿಯರೊಳು ನಲಿ
ದಾರಮೆ ಸುಖದೊಳೋಲಾಡೊ ಕಂದಯ್ಯ ॥ ೫

**<u>೫. ಜೋಜೋಜೋಜಯ</u>**

ಜೋ ಜೋ ಜೋ ಜೋ ಜಯನೃಪಸುತನೆ
ಜೋ ಜೋ ಜೋ ಜೋ ಪೃಥ್ವಿನಂದನೆ
ಜೋ ಜೋ ಜೋ ಜೋ ಕುರುಕುಲವರನೆ
ಜೋ ಜೋ ಜೋ ಜೋ ವಿಕ್ರಮಂಧರನೇ ‖ ಪಲ್ಲವಿ

ಸುತ್ತಿನ ಲವಣ ಸಮುದ್ರದ ಮಧ್ಯದಲೀ
ನಿಂತ ಮಂದರಗಿರಿ ಬಲದ ಭಾಗದಲೀ
ಅರ್ತ ವಿರಾಜಿತ ಮಗಧ ದೇಶದಲೀ
ಚಿತ್ರದಿ ರಂಜಿಪ ಕನಕಪುರದಲೀ ‖ ೧

ಜನಕ ಜಯಂಧರನೆಂಬ ನೃಪಾಲಾ
ಜನನಿ ಪೃಥ್ವೀದೇವಿಯೆಂಬ ಸುಶೀಲೆ
ವನಧಿ ಶಶಾಂಕ ವಂಶಜನತಿ ಲೋಲ
ತನಯನಾದನು ವಿಕ್ರಮಂಧರ ಬಾಲಾ ‖ ೨

ಬಾಲ ಲೀಲೆಯೊಳು ಜಿನಾಲಯದೆಡೆಯಾ
ಬಾಲಾ ನಾಡುತರರೇ ಚರಣದ ರುಚಿಯಾ
ಜಾಲ ಸೋಂಕಿನಲಿ ಘಟಿತ ವಜ್ರಪಡಿಯಾ ವಿ
ಶಾಲದಿ ಬಿರಿದಾರ ಪುಣ್ಯಕೆ ಸರಿಯೇ ‖ ೩

ಮೊಳಗಿತು ದೇವದುಂದುಭಿ ಪುಷ್ಪಮಾಲೆ
ಯಿಳಿದುದಾಗಸದಿಂದ ಶಿಶುವಿನ ಮೇಲೆ
ಒಳ ಹೊಕ್ಕು ಗರಳೆ ಮಡುವಿನಲಿ ತಡಿಯಲೆ
ಕುಳಿತು ನೋಡಲು ಕಾಳೋರಗನಿರಲೂ ‖ ೪

ಕಂಡಜಗರನ ಪಿಡಿವೆನೆಂದು ಗರಳಾ
ಕುಂಡವ ಧುಮುಕಿದ ಬಾಲನ ಗರಳಾ
ಕುಂಡಲಿ ಪೆಡೆಯೊಳಗಾಂತಿರೆ ಮಹಿಳೆ
ಕಂಡು ದುಮ್ಮಿಕ್ಕಿದಳೇನತಿ ಪ್ರಿಯಳೊ ‖ ೫

ಕೊಡುವುದೆಮಗೆ ಪುತ್ರಿದಾನವನೆಂದೂ
ದೃಢದಿ ಕೇಳಲು ಫಣಿರಾಜನು ಬಂದು
ಪೊಡವಿ ದೇವಿಗೆ ಶಿಸುವಿತ್ತ ತಾನೊಂದೂ
ಪಡೆದನು ನಾಮವ ಫಣಿಸುತನೆಂದು ‖ ೬

ಹೊನ್ನದೊಟ್ಟಿಲೊಳಿಟ್ಟು ಗರಳಮರ್ದನನಾ
ಚನ್ನೆ ನಿರೀಕ್ಷಿಸಿ ಪಾಡುತ ಸುತನಾ

ಉನ್ನತ ಗುಣಗಳ ಧರಿಸಿದ ಮದನಾ
ರನ್ನಮುರಾಂತಕ ಲಕ್ಷ್ಮಿಯ ರಮಣ ॥ ೭

ಜೋ ಜೋ ಚಂದ್ರಪ್ರಭ ಮಾನಾಪಹಾರಿ
ಜೋ ಜೋ ಸುಕಂಠನ ಪ್ರಾಣ ಸಂಹಾರಿ
ಜೋ ಜೋ ನಿಶಾಚರಣೆ ಕರಕುಠಾರಿ
ಜೋ ಜೋ ತ್ರಿಲೋಕಕ್ಕೆ ನೀನೇ ಉದಾರಿ ॥ ೮

ಲಾಲಿ ಮೇಣ್ಣಾಸಿರ ನಾರಿಯರರಸಾ
ಲಾಲಿ ಲಕ್ಷ್ಮೀಲೋಲನೆಂಬ ಶ್ರೀ ಸರಸಾ
ಲಾಲಿ ತ್ರಿಭಾಂಡಕ್ಕೆ ನೀನೊಬ್ಬನರಸಾ
ಲಾಲಿ ಶ್ರೀಮುಕ್ತಿ ಮನೋಹರನೆನಿಸಾ ॥ ೯

## ೬. ಜೋಜೋಸುಪಾರಿಶ್ವ

ಜೋ ಜೋ ಜೋ ಜೋ ಸುಪಾರಿಶ್ವನಾಥ
ಜೋ ಜೋ ಜೋ ಜೋ ತ್ರೈಲೋಕ್ಯಪ್ರಖ್ಯಾತ
ಜೋ ಜೋ ಜೋ ಜೋ ಶತ ಇಂದ್ರವಂದಿತ
ಜೋ ಜೋ ಜೋ ಜೋ ಮೋಕ್ಷಲಕ್ಷ್ಮಿನಾಥ ॥ ಪಲ್ಲವಿ

ಇನ್ನಾರುದಿಂಗಳಿಗುದಯಿಪರೆಂದು
ಮುನ್ನಾ ದೇವೇಂದ್ರನರಿದ ಕಾಣಮ್ಮ
ರನ್ನದ ಮಣಿಯನು ಕರೆದು ಬಾರೆಂದು
ಚೆನ್ನ ಕುಭೇರಗೆ ಬೆಸಸಿದರಮ್ಮ ಜೋ ಜೋ ॥ ೧

ಸರ್ವಾರ್ಥ ಸಿದ್ಧಿಯಿಂದ ಸ್ವಾಮಿ ತಾ ಬಂದ
ಬ್ರಹ್ಮಲದೇವಿ ಗರ್ಭವಾಸ ತಾ ನಿಂದ
ನವಮಾಸ ತುಂಬಿತು ತಾಯಿಗಾನಂದ
ಜನ್ಮಕಲ್ಯಾಣಕೆ ಶತಯಿಂದ್ರ ತಾ ಬಂದ ಜೋ ಜೋ ॥ ೨

ಗ್ರಾಮದ ನಾರಿಯರು ಎಲ್ಲರೂ ಬಂದು
ತುಂಬಿದ ಕೊಡದಲ್ಲಿ ನೀರನೆ ತಂದು
ಬಮದ ಮುತ್ತೈದೆಯರು ಬಹುಮಾನ ನಿಂದು
ಎಲೆ ಅಡಿಕೆ ಪನಿವಾರ ಕೊಟ್ಟಾರು ತಂದು ಜೋ ಜೋ ॥ ೩

ಇಪ್ಪತ್ತು ದಿನದಲ್ಲಿ ಶುಭದಿನ ನೋಡಿ
ನವರತ್ನ ಖಚಿತದ ಕಾಷ್ಟವ ಮಾಡಿ
ಕನಕ ಸರ್ಪಣಿ ಮಂದಿರಕೆ ತೂಗಾಡಿ
ಬಂದು ಮುತ್ತೈದೆಯರು ಸ್ವಾಮಿ ಪಾದ ಕೊಂಡಾಡಿ ಜೋ ಜೋ ॥ ೪

ಧರೆಗೆ ಉನ್ನತ ಚೆದಗುಂಬಿ ವಾಸ
ಅಮ್ಮನ ದಯದಿಂದ ಆಣ ಪ್ರಕಾಶ
ಬಸ್ತಿಲೆ ಹೋಗವುತ ನಿಮ್ಮ ಪ್ರಕಾಶ
ಭವ್ಯಜನರಿಗೆ ನೀ ಸಲಹು ಸಂತೋಷ ಜೋ ಜೋ ॥ ೫

**೭. ಜೋಜೋಜೋಶ್ರೀ**

ಜೋ ಜೋ ಜೋ ಜೋ ಶ್ರೀ ಆದಿಜಿನೇಶಾ
ಜೋ ಜೋ ಜೋ ಜೋ ಶ್ರೀ ಧರ್ಮಪ್ರಕಾಶಾ
ಜೋ ಜೋ ಜೋ ಜೋ ಶ್ರೀ ಸದ್ಗುಣಕೋಶ
ಜೋ ಜೋ ಜೋ ಜೋ ಶ್ರೀ ಮುಕ್ತಿಯಕಾಂತಾ ॥ ೧

ಸವಾರ್ಥ ಸಿದ್ಧಿಯ ಬಿಟ್ಟು ನೀ ಬಂದು
ಮರುದೇವಿಯ ಶುದ್ಧ ಉ
ದರದೊಳ್ನಿಂದು ಇಂದ್ರನರಿದು ವಿದತ್ತಪತಿ
ಕರೆದಂದು ಅನುಜ್ಞಯನಮಳೆ ಪೇಳ್ವರೆಂದು ॥ ೨

ಅಯೋಧ್ಯಾನಗರಿಗೆ ಹೋಗು ನೀ ಬೇಗ
ನಾಭಿರಾಜನ ಗೃಹ ಬಾಹ್ಯದೊಳಗಾ
ರತ್ನದಾ ಮಳೆಗರೆ ಶ್ರೀಘ್ರದೊಳೀಗ
ಮೂರು ಕಾಲದಿ ಮೂರುವರೆ ಕೋಟಿ ಈಗ ॥ ೩

ಒಂಬತ್ತು ತಿಂಗಳು ತುಂಬಲು ಬೇಗ
ಹಡೆದಳು ಮರುದೇವಿ ವೃಷಭೇಶನಾಗ
ಶಚಿದೇವಿ ಸಹಿತ ಇಂದ್ರನು ಬಂದನಾಗ
ಪ್ರಸೂತಿ ಗೃಹವ ಹೊಕ್ಕಳು ಶಚಿ ಬೇಗ ॥ ೪

ಅಲ್ಲೊಂದು ಮಾಯದ ಶಿಸುವನ್ನ ಇರಿಸಿ
ತೆಗೆದುಕೊಂಡಳು ಸಂಪ್ರೀತಿಯವೆರಸಿ

ಇಂದ್ರನ ಕರಯುಗದೊಳು ತಾನಿರಿಸಿ
ಸ್ತುತಿ ಸಹಸ್ರಗಳಿಂದ ದೇವನಾ ಸ್ತುತಿಸಿ ॥ ೫

ಐರಾವತವನೇರಿಸಿ ಬಂದನಾಗ
ಪಾಂಡಕಾ ಶಿಲೆಯೊಳು ಇರಿಸಿದಾಬೇಗ
ಕ್ಷೀರಜಲವ ತಂದು ಎರೆದರು ಬೇಗ
ಭೋರೆಂಬ ವಾದ್ಯದಿ ಜಯವೆಂದರಾಗಾ ॥ ೬

ಅಂಗವಸ್ತ್ರದಿ ಮೈಯನೊರಸಿದನಾಗ
ಅಂಗಜ ವಿಜಯಗರ್ತಿಯೊಳತಿ ಬೇಗ
ಸುಗಂಧಜಲವ ತಂದು ಪ್ರಕ್ಷಲಿಸುತಾಗ
ಮಂಗಳಾಭರಣ ತೊಡಿಸಿದನಿಂದ್ರನಾಗ ॥ ೭

ಮರಳಿ ಮಾತೆಯ ಮಗ್ಗಿಲೊಳು ದೇವ
ನಿರಿಸಿ ಇಂದ್ರ ಹೋದನು ತನ್ನ ದೇವಿಯ
ವೆರಸಿ ಇತ್ತಲು ನಾಭಿರಾಜನ ಪಟ್ಟ
ದರಸಿ ಮಗನ ಮುಖವ ನೋಡಿ ಸುಖಿಯಾಗಿ ಹರಸಿ ॥ ೮

ವಿಶ್ವಕರ್ಮ ನಿರ್ಮಿಸಿದ ತೊಟ್ಟಿಲವು
ರತ್ನದಿ ನಿರ್ಮಿತ ಚಿತ್ರವು ಕೆಲವು
ಮತ್ತೆ ನಾನಾವಿಧ ಪ್ರತಿಮೆಯ ಚೆಲವು
ಅಭವನಿದ್ರೆಗೈಯ್ಯ ಭವದ ಚೆಲವು ॥ ೯

ನಾಕಾದಿ ಸ್ತ್ರೀಯರು ಎಲ್ಲರೂ ಕೂಡಿ
ಮಲಹರಿ ದೀಪಾಕಿ ರಾಗದಿ ಹಾಡಿ
ನಾನಾ ವರ್ಣಗಳಿಂದ ಜಿನನ ಕೊಂಡಾಡಿ
ಹರುಷ ಕ್ಷೀರಾಬ್ದಿಯೊಳ್ಮುಳುಗಿ ಚೆನ್ನಾಗಿ ॥ ೧೦

ಜಯ ಜಿನಪತಿ ಜಯ ಮನ್ಮಥ ಹರನೇ
ಜಯ ಜಯ ಶಂಭು ಶಂಕರ ಮುಕ್ತಿವರನೇ
ಜಯ ಜಯ ಮಂಗಳ ಕರಮುಕ್ತಿವರನೇ
ಜಯ ಜಯ ನಿರ್ಭಯ ನಿರಘ ನಿರ್ಮಲನೇ ॥ ೧೧

ಪಂಚಕಲ್ಯಾಣ ಪರಂಜ್ಯೋತಿ
ಪಂಚಮಗತಿ ನಾಥ ಪಾವನಮೂರ್ತಿ
ಪಂಚಬಾಣ ಜಿತ ಜಿನಚಕ್ರವರ್ತಿ
ಪಂಚಮ ಜ್ಞಾನಕ್ಕೆ ನೀನಧಿಪತಿ ॥ ೧೨

ಅಷ್ಟಮಂಗಲ ಪ್ರತಿಹಾರ್ಯ ಸಮೇತ
ಅಷ್ಟಮಂಗಲ ಗುಣಮಂಡಿತಗಾತ್ರ
ಅಷ್ಟದಶಾದೋಷ ನಿರ್ಜಿತ ಚಿತ್ರ
ಅಷ್ಟಮ ಪೃಥ್ವಿಸತಿಗೆ ನೀನೆ ಕರ್ತ ॥ ೧೩

ಜಯಸುರ ನರನಾಗವಂದಿತ ಪಾದ
ನಿರುಪಮ ನಿರ್ಮಲ ಕೇವಲ ಬೋಧ
ಜನನ ಮರಣ ಜರೆ ತ್ರಿಪುರ ವಿನಾಶ
ಕೇವಲ ಜ್ಞಾನ ತಿಮಿರ ಜಿನೇಶಾ ॥ ೧೪

ವೃಷಭ ಅಜಿತ ಶಂಭವ ಗುಣರಾಶಿ
ಅಭಿನಂದನ ಸುಮತಿ ಅಪುದ್ವಂಶಿ
ಪದ್ಮಪ್ರಭು ಸರ್ವಜ್ಞ ಪ್ರಕಾಶಿ
ವರಸುಪಾರೀಶ್ವ ಮಹಾತತ್ವ ಭಾಷಿ ॥ ೧೫

ಚಂದ್ರಪ್ರಭ ಪುಷ್ಪದಂತ ಜಿನೇಶಾ
ಶೀತಳ ಶ್ರೇಯಾಂತ ಬುದ್ಧಿ ವಿಶೇಷ
ವಾಸುಪೂಜ್ಯ ವಿಮಲ ಕರ್ಮನಾಶ
ತಾನಂತ ಧರ್ಮಶಾಂತಿ ಕಂಥುಗಣೇಶಾ ॥ ೧೬

ಅರಮಲ್ಲಿ ಮುನಿ ಸುವ್ರತನೇಮಿನಾಥ
ನೇಮಿ ಜಿನೇಂದ್ರ ತ್ರೈಲೋಕ್ಯ ಪ್ರಖ್ಯಾತ
ಪಾರಿಶ್ವ ವರ್ಧಮಾನ ಶ್ರೀ ಮುಕ್ತಿನಾಥಾ
ಇಪ್ಪತ್ತನಾಲ್ವರ ಗುಣಗಾಣ ಕಥಾ ॥ ೧೭

ಸ್ವರ್ಗದಾ ಸ್ತ್ರೀಯರೂ ಎಲ್ಲರೂ ಕೂಡಿ
ಆದಿ ಜಿನೇಂದ್ರನ ಜೋಗುಳ ಪಾಡಿ
ಮನವಚನ ಕಾಯಗಳನು ಶುದ್ಧಿ ಮಾಡಿ
ತಮಗೆ ಸ್ವರ್ಗಪವರ್ಗದ ಸುಖಬೇಡಿ ॥ ೧೮

ಧರೆಯೊಳೊಪ್ಪುವ ಸೇಜಾನುಪುರದ
ನಿರುಪಮ ಚೈತ್ಯಾಲ ವಾಸದೊಳು ತಾ
ಮೆರೆದ ಪರಮ ಭವ್ಯರಿಗೆ ಧರ್ಮಾಮೃತ
ಕರೆದ ಭುಜದಲಿ ಇಂದ್ರಗೆ ಸಮ್ಮತಿವರೆದ ॥ ೧೯

ಹದಿನೆಂಟು ಪದವ ಕಲಿತು ಪಾಡಿದವರಿಗೆ
ಮುದದಿಂದ ಮುತ್ತೈದಿತನವು ಅವರಿಗೆ

ಸದಮಲ ಭಾಗ್ಯಭೋಗವು ಸತಿಪತಿಗೆ ಕ್ರ
ಮದಿಂದ ಪತಿಯಾಹರು ಮುಕ್ತಿ ಸತಿಗೆ ‖ ೧೦

## ೮. ಶ್ರೀಜಿನರಡಿಗಳಹರುಷದಿ

ಶ್ರೀಜಿನರಡಿಗಳ ಹರುಷದಿ ಪಾಡಿ
ಶ್ರೀ ಶಾರದಾಂಬೆಯ ಗುಣವಕೊಂಡಾಡಿ
ಬಾಲಚಂದ್ರನ ಪೋಲ್ವ ಬಾಲರಮಣಿಯ
ಬಾಲೆಯರೆಲ್ಲ ಜೋ ಎನುತ ತೂಗಿದರು ಜೋಜೋ ‖ ೧

ಕಟ್ಟಿದರ್ ಬೆಳ್ಳಿಯ ಸರಪಣಿಗಳನು
ಇಟ್ಟಿರು ಕನಕದಿಂ ಸಮೆದ ತೊಟ್ಟಿಲನು
ಪಟ್ಟೆಪೀತಾಂಬರ ಹಾಸಿ ಮಗುವನು
ದಿಟ್ಟನಾಗೆನ್ನುತ ಪಾಡೆ ರಾಗವನು ಜೋಜೋ ‖ ೨

ಪೃಥಿವೀದೇವಿಯ ಗರ್ಭನಿಷದದ್ಯುಮಣಿಯೇ
ಕ್ಷತ್ರಿಯವಂಶಾಂಬರದಿನ ಮಣಿಯೇ
ದಿವ್ಯಸುಲಕ್ಷಣ ಭವ್ಯಕುಮಾರ
ದಿವ್ಯರೂಪನೆ ನಾರೀಮೋಹನಮಾರ ಜೋಜೋ ‖ ೩

ತೇಜೋನಿಧಿ ವಿಕ್ರಮಂದ್ರ ಜೋ ಎಂದು
ರಾಜೀವನೇತ್ರೆಯರೊಲಿದು ತೂಗಿದರು ಜೋಜೋ ‖ ೪

ಗೌಳಗುಜ್ಜರನಾಟಿ ಜಂಪೆಗಳಿಂದ
ಸಾರಂಗ ಕಾಂಭೋಜಿ ಕಲ್ಯಾಣಿಯಿಂ
ವಿಧವಿಧಸ್ವರವೆತ್ತಿ ಮದದಿ ಪಾಡುತಲಿ
ಚದುರಬಾಲಕನನು ತೂಗಿದರಾಗ ಜೋಜೋ ‖ ೫

## ೯. ಜೋಜೋಜೋಜೋಶ್ರೀವೀರನಾಥಾ

**ರಾಗ: ಶಂಕರಾಭರಣ ತಾಳ: ತ್ರಿಪುಟತಾಳ**

ಜೋ ಜೋ ಜೋ ಜೋ ಶ್ರೀವೀರನಾಥಾ
ಜೋ ಜೋ ಜೋ ಜೋ ಸಿದ್ಧಾರ್ಥ ಕುವರಾ ‖ ಪಲ್ಲವಿ

ರನ್ನದ ತೊಟ್ಟಿಲೊಳಿಟ್ಟು ಬಾಲಕನ
ಚೆನ್ನೆಯರೊಲಿದು ಪಾಡುತ ಮುದ್ದುಸುತನ
ಬಿನ್ನಾಣದಿ ತೂಗಿದರಮತೆ ಜಿನನ
ರನ್ನದ ಬೊಂಬೆಯಂದದಿ ಚೆಲ್ವಸುತನ ಜೋಜೋ ॥ ೧

ಬಿದಿಗೆಯ ಚಂದ್ರನಂದದಿ ಕಳೆ ಬರಲು
ತೊದಲ್ನುಡಿಗಳನಾಡಿ ಕಾಲನ್ನಿಡಲು
ಮುದದಿಂದ ಬಾಲ್ಯದುಡಿಗೆಯ ತೊಡಿಸಲು
ಚದುರನಂಗಣದೊಳಗಾಡುತ್ತಿರಲು ಜೋಜೋ ॥ ೨

ಪ್ರಿಯಕಾರಿಣಿದೇವಿಯ ಮುದ್ದುಕಂದ
ರಾಜಸಿದ್ಧಾರ್ಥನ ನೇತ್ರಕ್ಯಾನಂದ
ಛಾಯಾರೂಪಿನ ಚಂದದೊಳಂದ
ಪ್ರಿಯದಿಂ ಮುದ್ದಿಟ್ಟು ತೂಗುವುದೊಂದು ಚಂದ ಜೋಜೋ ॥ ೩

## <u>೧೦. ಜೋಜೋಪುರುಪರಮೇಶ</u>

**ರಾಗ: ಕಾಂಬೋಧಿ ತಾಳ: ಚಾಪುತಾಳ**

ಜೋ ಜೋ ಪುರುಪರಮೇಶನ ಕಂದ
ಜೋ ಜೋ ಸುನಂದಾ ನಯನಾನಂದ
ಜೋ ಜೋ ಭುವಿ ನುತಚರಣಾರವಿಂದ
ಜೋ ಜೋ ನಿರ್ಮಲಸದ್ಗುಣವೃಂದ ಜೋ ಜೋ ॥ ೧

ಜೋ ಜೋ ಮನು ಭೀಮಿಪತಿವಂಶಲಕ್ಷ್ಮೀಲಲಾಮ
ಜೋ ಜೋ ವನಿತಾಜನನೇತ್ರಾನಂದ
ಜೋ ಜೋ ಅನವದ್ಯಚರಿತಾಭಿರಾಮ
ಜೋ ಜೋ ನಿನಗೆಣೆಯುಂಟೆ ಧಾತ್ರಿಯೊಳು ಜೋ ಜೋ ॥ ೨

ಕಾಲಲಂದುಗೆ ಗೆಜ್ಜೆ ಝುಲ್ಲೆನುತೊಲೆಯೇ
ಜಾಲೀಂದ್ರದೋಲೆ ಕರ್ಣಗಳೊಳ್ಪೊಳೆಯೇ
ಮೇಲು ಮುತ್ತಿನ ಸರ ವಕ್ಷದೊಳೊಲೆಯೇ
ಬಾಲೆಯರಿಂತು ತೂಗಿದರು ಬಾಲಕನ ಜೋ ಜೋ ॥ ೩

ಬಡನಡು ಬಲುಕೆ ಪೊಂಗಡ ಮೊಲೆಯಲುಗೆ
ಕಡೆಗಣ್ಣ ಕಾಂತಿದಸೆಯನೆಲ್ಲ ಬೆಳಗೇ

ಮುಡಿದ ಮಲ್ಲಿಗೆಗೆ ತುಂಬಿಗಳು ಬಂದೆರಗೆ
ಮಡದಿಯರೆಲ್ಲ ತೂಗಿದರು ಬಾಲಕನ ಜೋ ಜೋ ‖ ೪

ಆದಿಚಕ್ರೇಶನನುಜ ಕಾಮರೂಪ
ಮೇದಿನಿಯೊಳು ವಿತರಣಕಲ್ಪಭೂಜ
ಆದಿತ್ಯಮಂಡಲಸುರುಚಿರತೇಜ
ಶ್ರೀದಿವಿಜಾನತ ಚರಣಸರೋಜ ಜೋ ಜೋ ‖ ೫

ಮೋಹನಕಾಯ ಮಕ್ಕಳ ಶಿರೋರತ್ನ
ಸಾಹಸಿ ಸಕಲ ಲಾವಣ್ಯಸಂಪನ್ನ
ಬಾಹುಬಲೀಶ ಕುವರ ಸುಪ್ರಸನ್ನ
ಪಾಹಿಮಾಂ ಸರ್ವಸಜ್ಜನತಾಸನ್ನ ಜೋ ಜೋ ‖ ೬

ಮೇರುಧರಾಧರಸನ್ನಿಭಧೀರ
ಪಾರಾವಾರ ಸಮಾನಗಂಭೀರ
ಕಾರುಣ್ಯನಿಧಿ ಮೂರು ಲೋಕೈಕವೀರ
ಚಾರುಕೋಮಲನೀಲವರ್ಣ ಶರೀರ ಜೋ ಜೋ ‖ ೭

## ೫. ಶೋಭಾನದ ಹಾಡುಗಳು

### ೧. ಶ್ರೀಮದನಾದಿವಸ್ತು

ಶ್ರೀಮದನಾದಿ ವಸ್ತುವಿಗೆ
ಸ್ವಾಮಿ ಸರ್ವಜ್ಞ ಸಿದ್ಧರಿಗೆ
ಕಾಮಮದೇಭಹರಿಗೆ ಪರಬ್ರಹ್ಮಗೆ
ಕಾಮಿನ ಫಲಗಳ ನೀವ ಚಿನ್ಮಯನಿಗೆ
ಪ್ರೇಮದಿ ಸಾಷ್ಟಾಂಗದೊಳಗೆರಗುವೆನು
ದ್ಧಾಮ ಸನ್ಮತಿಯ ಸಲಿಸೆಂದು ‖ ೧

ಶಂಭರಾರಿಯ ಮದಹರಗೆ
ಶಂಭು ಚಿದಂಬರೇಶನಿಗೆ
ಅಂಬರಸದೃಶ ದಿಗಂಬರ ಪುರುಷಗೆ
ಕುಂಭಿನಿಜನನಿಕರುಂಬ ಪೂಜಿತನಿಗೆ
ನಂಬಿ ಸಾಷ್ಟಾಂಗದೊಳೆರಗಿ ನುತಿಸುವೆ ಕೃ
ಪಾಂಬುಧಿ ಪಾದಕ್ಕನುದಿನ ‖ ೨

ಶ್ರೀ ಗುರು ಪಂಚಪದಗಳ
ಶ್ರೀಗೆ ನಿಲಯ ನಿಗಮಗಳ
ರಾಗರಸದಿ ಧವಳಾಗಮದಿಂದ
ತೂಗಿ ಕದಳಿ ಸಾರಂಗಗಳಿಂದ
ಬಾಗಿ ಶ್ರೀಚರಣಾಂಬುಜಗಳ ನರ್ಚಿಪೆ
ಶ್ರೀಗಣನಾಥ ಕೃಪೆದೋರು ॥ ೩

ಚಂಪಕ ಕುಂದಕುಮ್ಮಟಗಳವಾ
ತಂಪಿನ ಗಂಧ ಸೌರುಭದ
ಸೋಂಪಿನ ಸುರಭಿಯ ಗುಂಪಿನಿಂದೆಸೆವ
ಇಂಪಿನ ಚರುವಿ ಧೂಪ ಸತ್ಫಲವಾ
ಕೆಂಪ ಶ್ರೀಯಾಂದೇವಿಯ ಪದಕರ್ಚಿಪೆ
ಪೆಂಪಿನ ಸುಮತಿಯ ಸಲಿಸೆಂದು ॥ ೪

ಗಣಧರ ಗುಣಗಣಧರರ
ಪ್ರಣುತ ಭವ್ಯಾಬ್ಜಭಾಸ್ಕರರ
ಅಣಿಯರನಷ್ಟ ವಿಧಾರ್ಚನೆಗಳಲಿ
ಮಣಿದೆರಗುವೆ ಭಾವಿಸಿ ಭಕ್ತಿಯಲಿ
ಪ್ರಣಮದಖಿಲ ತ್ರಿದಶೇಂದ್ರವಂದಿತರಡಿ
ಗುಣಗತನಾಗಿ ನುತಿಸುವೆ ॥ ೫

ಚಂಡಮದೇಭ ಕಂಠೀರವನು
ದ್ದಂಡ ಮಹಾನೀಲೋರಗನು
ಅಂಡಲೆವಘತತಿವಿಪಿನ ಧನಂಜಯ
ತಂಡತಂಡದ ಭವ್ಯಾತ್ಮರ ಪಾಲಿಪ
ಪಂಡಿತಜನನುತ ಶ್ರೀಲಕ್ಷ್ಮೀಸೇನ ಭೂ
ಮಂಡಲಾಚಾರ್ಯ ಕೃಪೆದೋರು ॥ ೬

ಪದಿನಾಲ್ಕನೆಯ ಮನುಕುಲಜ
ನುದಯಂಗೈದಿ ನಾಭಿರಾಜ
ಸುದತಿ ಶಿರೋಮಣಿ ಮರುದೇವಿಯಮ್ಮನ
ನುದರ ಸುಧೋದಯನಾದೀಶ್ವರನ
ಪದುಳ ಪದಂಗಳ ನುತಿಸಿ ಪ್ರಥಮಯುಗ
ಗಧಿದೇವರೆಂದು ಪೊಗಳುವೆ ॥ ೭

ಪರಮೇಶನುದರಾಬ್ಧಿ ಚಂದ್ರ
ನೆರೆ ಚಕ್ರಿ ಭರತರಾಜೇಂದ್ರ

ನರಸುರ ನಾಗಲೋಕವ ಸಾಧಿಸಿದ
ಧರೆಗಾದಿಕುವರನ ಧವಳ ಶೋಭಾನವ
ನೊರೆವೆ ಲಾಲಿಪುದು ರಸಿಕರು
x x x x x x x x x x x x x ‖ ೮

ಮೆರೆವಿಂದ್ರನೀಲ ವೇದಿಕೆಯ
ವರ ರತ್ನಜ್ವಲ ಸ್ವರ್ಣನಿಲಯ
ಉರುಮಣಿಕೂಟ ಪರ್ವತನೆ ತರಿದು
ಸುರರು ನಿರ್ಮಿಸಿದರಮನೆಯನೆ ಮೆರೆದು
ಧರಣಿಗಚ್ಚರಿವಡೆದಿಹ ಮಣಿಮಂಟಪ
ತರಣಿಮಂಡಲವ ಪಳಿವುದು ‖ ೯

ಪಚ್ಚೆಯ ಪಾದಪೀಠಗಳು
ಸ್ವಚ್ಛಪ್ರವಾಳ ಕಂಭಗಳು
ಅಚ್ಚರಿ ಮರಕತ ಮಣಿಬೋದಿಗೆಗಳು
ಚೆಚ್ಚಂತಿಹ ವೈಢೂರ್ಯದ ತೊಲೆಗಳು
ಮುಚ್ಚು ವಲಗೆ ಗೋಮೇಧಿಕ ವಜ್ರದ
ಗುಚ್ಚರುಚಿಲೋವೆ ಮೆರೆದುದು ‖ ೧೦

ಮಾಣಿಕಮಣಿ ಪ್ರತ್ಥಳಿಗಳು
ಏಣಾಂಕಾಯತ ದರ್ಪಣಗಳು
ಠಾಣಠಾಣದ ಝಲ್ಲಿ ಕುಚ್ಚು ಪೂಮಾಲೆಯು
ಮಾಣದೆ ನಭವ ಚುಂಬಿಪ ಧ್ವಜಪಂಕ್ತಿಯು
ಕ್ಷೋಣಿಗಪ್ರತಿಗೀರ್ವಾಣರು ರಚಿತ ಕ
ಟ್ಟಾಣಿಮಂಟಪ ಮೆರೆದುದು ‖ ೧೧

ಇಂತಪ್ಪ ವಿಭವಮಂದಿರದಿ
ಸಂತತ ನರಸುರರ್ಮುದಿ
ಚಿಂತಾಮಣಿ ರೂಪಾಂತೊಲು ಬಂದರು
ದಂತಿಮನೆಯರು ಬಾಗಿನವಾಂತರು
ಮುಂತೆ ಮಾಧುರ್ಯ ಪೋಷಣೆಯೊಳಗಿಂದ್ರರ
ಸಂತತಿ ಬಂದು ನೆರೆದುದು ‖ ೧೨

ಮುತ್ತು ಮಾಣಿಕ್ಯ ವೈಢೂರ್ಯದಲಿ
ವೃತ್ತಕುಚೆಯರು ಚೆಲ್ವಿನಲಿ
ಬಿತ್ತರಿಸಿದರತಿ ಚಿತ್ರದ ಹಸೆಯ
ಉತ್ತಮ ನವಮಣಿಖಚಿತದಿಂದೆಸೆಯೆ

ಸುತ್ತ ಸೌರಭ ಕತ್ತುರಿಯ ಸಾರಣೆ ಮುದ
ವೆತ್ತು ರಂಜಿಸಲು ರಚಿಸುತ ॥ ೧೩

ರತ್ನ ದೋಲೆಯು ರತ್ನಾಭರಣ
ಚೆನ್ನಚೆದಂದಬರವರಣ
ವನ್ನು ತಾಳ್ದಾರ್ಯಖಂಡದ ಸೊಬಗಿಯ
ರುನ್ನತ ಸ್ವರ್ಣಕಳಶ ಕನ್ನಡಿಯ
ಚೆನ್ನೆಯರೆಯ್ದಿದರಕ್ಷಯ ಸುಖಸಂ
ಪನ್ನ ಚಿತ್ತೈಸು ಮುದದಿಂದ ॥ ೧೪

ಭುವನವಚ್ಚರಿವಡುವಂಥಾ
ಭವನವಾಸಿಕರ ತತ್ಕಾಂತಾ
ನಿವಹ ದಿವ್ಯಾಂಬರ ಭೂಷಣದಿಂದ
ನವಮಣಿದೊಡಿಗೆಯ ಮುಯ್ಯಗಳ ತಂದ
ನವಯೌವನೆಯರು ಸಹ ಬಂದರು
ರವಿಕಾಂತಿ ತೇಜ ಹಸೆಗೇಳು ॥ ೧೫

ವಿದ್ಯುಲ್ಲತೆಯ ರೂಪಾಂತೋಲು
ವಿದ್ಯಾಧರ ದಂಪತಿಗಳು
ಆದ್ಯಂತರು ದಿವ್ಯಾಭರಣಗಳು
ವಿದ್ಯುತ್ಕಾಂತೆಯರಿಳಿವಂದಗಳಿಂ
ಸದ್ಯ ಬಂದರು ಮೂಲೋಕದವರಿಗು
ಪಾದ್ಯ ಬಂದೇರೋ ಹಸೆಯನು ॥ ೧೬

ಕಿನ್ನರೇಂದ್ರನು ಗಂಧರ್ವೇಂದ್ರ
ಸನ್ನುತ ಗರುಡ ಯಕ್ಷೇಂದ್ರ
ಸ್ವರ್ಣಾಬರ ದಿವ್ಯರತ್ನಭೂಷಣವ
ಕಿನ್ನರಿಯರು ತೊಟ್ಟು ದಿವ್ಯಭೂಷಣವ
ಚೆನ್ನೆಯರಾಂತು ಪಾಡುತ ಬಂದರು ಸುಪ್ರ
ಸನ್ನ ಗುಣರನ್ನ ಹಸೆಗೇಳು ॥ ೧೭

ಜ್ಯೋತಿಯ ರೂಪಾಂತವೊಲು
ಜ್ಯೋತಿರ್ಲೋಕದ ದಂಪತಿಗಳು
ಭೂತಳ ಬೆರಗಪ್ಪಾಭರಣಗಳಿಂ
ಮಾತುಗಳಂಗವು ಖರ್ಜೂರ ಫಲಗಳಿಂ
ಪ್ರೀತಿಯೊಳೈತಂದರು ತ್ರಿಭುವನ ವಿ
ಖ್ಯಾತ ಬಂದೇರೋ ಹಸೆಯನು ॥ ೧೮

ಕಲ್ಪಾಮರೇಂದ್ರಮರಿಯರು
ಸ್ವಲ್ಪ ಮಧ್ಯದ ಭಗಿನಿಯರು
ಶಿಲ್ಪ ಸುವಿದ್ಯಾಭೂಷಣ ದಿವ್ಯಾಂಬರ
ದೊಲ್ಪಿಲಿ ದಿವ್ಯಕಾಂತಿಯ ಬೆಳಗುವರ
ಕಲ್ಪವೃಕ್ಷದ ವಸ್ತುವ ತಂದರು ಸುರ
ರೊಳ್ಪ ಸೂಚಿಪನೆ ಹಸೆಗೇಳು ॥ ೧೯

ಹರಳೋಲೆ ಹಸ್ತಕಡಗವ
ಬೆರಲ ಮುದ್ರಿಕೆಹಾರ ಮೆರೆವ
ಚರಣನೂಪುರ ಚಿತ್ರಾಂಬರನುಡಿಸಿ
ವರ ಮೋಹನಕರ ಕಂಚುಕಿ ತೊಡಿಸಿ
ಉರಗಿಣಿಯರು ಷಟ್ಖಂಡದರಸುಗಳು
ಪರಿಪಾಲಿಪನರಸಿಯ ಕರೆತನ್ನಿ ॥ ೨೦

ಪೊಂಬರಹದ ಪೀತಾಂಬರದಿಂ ಇಂದು
ಬಿಂಬಾನನೆಯರು ಕಂಬುಕಂಠೆಯರು
ಅಂಬರಚರಿಯರು ಅಮರಾಂಗನೆಯರು
x x x x x x x x x x x x x x
x x x x x x x x x x x x x x x
x x x x x ರಂಬೆಯ ಹಸೆಗೆ ಕರೆತನ್ನಿ ॥ ೨೧

ಮೃಗಮದಗಂಧಗಂಧಿಯರು
ಮೃಗಧರಾಯತವದನೆಯರು
ಅಗಿಲು ಕುಂಕುಮ ಮೃಗಮದವನು ತೀಡಿ
ಮಗಮಗಿಪಲರ್ಗಳ ಮಾಲೆಯ ಸೂಡಿ
ಧಗಧಗಿಸುವ ರತ್ನಹಾರ ಭೂಷಣವಿಟ್ಟು
ನಗೆಮೊಗದರಸಿಯ ಕರೆತನ್ನಿ ॥ ೨೨

ಚಂದ್ರಮುಖಿಯ ಚಿಂತಾಮಣಿಯ
ರುಂದ್ರಕಲೆಯ ಕಾಂತಿಕಣಿಯ
ಇಂದ್ರಾಣಿಯ ಮಣಿಪೀಠವನಡರಿಸಿ
ಇಂದ್ರವೈಭವದ ನರೇಂದ್ರರೊತ್ತಿನೊಳೀಹ
ಸ್ತೀಂದ್ರಗಮನೆಯರ್ನುತಿಸಿರೆ
x x x x x x x x x x x x x x x ॥ ೨೩

ಗಂಗಾದೇವಿಯು ಸಿಂಧುದೇವಿ
ಅಂಗನಾಮಣಿ ಶಶಿದೇವಿ

ಬೆಂಗಡೆಯೊಳು ಬೆಳ್ಳೆಲೆಗಳಿಗೆಯನು
ಕಂಗೊಳಿಪೆಲೆ ಕರ್ಪೂರ ಸಾರವನು
ಇಂಗದೆ ಈವ ಬೆಡಂಗಿಯರೆಸೆಯೆ
ಬೆಳ್ದಿಂಗಳ ಕಾಂತಿ ಪಳಿಯುತ್ತ ॥ ೧೪

ಇತ್ತೆರ ಬತ್ತೀಸಚಾಮರಗ
ಳೆತ್ತಿ ಢಾಳಿಸುವ ನಾರಿಯರ
ಮೊತ್ತವೆ ಕ್ಷೀರಾಂಬುಧಿ ಚಾಮರ ತಲೆ
ಯೊತ್ತಿಲಿ ಚಂದ್ರಮರೋಹಿಣಿಯಂತಿರೆ
ಎತ್ತಿದ ಮುತ್ತಿನ ಛತ್ರಚ್ಛಾಯದಿ ಪುರು
ಷೋತ್ತಮನೆಸೆದನಸಿಯೇಳು ॥ ೧೫

ಆವುಜ ಚೆಂಗು ಮೃದಂಗ
ತೀವಿದ ಸ್ವರವುಪ್ಪಾಂಗ
ಭಾಮೆಯರಾಳಪವು ತಾಳದಂಡಿಗೆ
ಭೂವಳೆಯದ ಬಹುವಾದ್ಯ ಘೋಷಣೆಗೆ
ದೇವಗಣಿಕೆಯರು ನರ್ತನ ಮಾಡುವ
ಭಾವವನೆಂತು ಪೊಗಳುವೆ ॥ ೧೬

ಓರವ ಮಾಧುರ್ಯ ಘೋಷಣದಿ
ಉರಿಗಿಣಿಯರ ಚಮತ್ಕಾರದಿ
ತರಿಝುಂ ಝುಕ್ಕಿಟಕಿಟತತ್ತೋಗಿಣ
ತರಿಕುತದ್ದಿಣಧಣ ಝುಣಾಂತರಿಕ್ಕಣ
ತರಿಚೆಂತರಿಝೀ ಝೇಂತ್ಕ್ರಣತಮೆನ್ನುತ
ಮೆರೆವ ನರ್ತಿಕಿಯರೆಸೆವರು ॥ ೧೭

ತತ್ತತೇಂಗಿಣಧಿಮಿಕೆನುತ
ವೃತ್ತ ಕುಚೆಯರಾಳಾಪಿಸುತ
ತತ್ತಿತ್ತೈತೈತದಿಂತರಿಕ್ಕಣ
ತತ್ತೋಂಗಿಣ ತರಿಕಿಟಕಿಧಿಕ್ಕಿಟ ತಕ
ಧಿತ್ತಾಂ ಧಿಗಿಧಿಗಿ ಝುಣಾಂತರಿಕ್ಕಿಣ
ಧಿತ್ತಿತ್ತೋಂಗೆನುತ ನಟಿಸುತ ॥ ೧೮

ಸರಿಗಮಪದನಿಯೆಂಬೇಳು
ಸ್ವರಗಳ ತಾಳಮೇಳದೊಳು
ಮೆರೆವ ನರ್ತಕಿಯರ ಬಹುವಿದ್ಯಾಧರ
ರುರುತರ ದಿವ್ಯಾವಳಿಗಳ ತೋರ್ಪರ

ಪರಿಪರಿಹಾಸ್ಯರಚನೆಯೊಳು ಸಭೆಗ
ಚ್ಚರಿಯ ಪ್ರಮೋದಕರಮಾಗೆ ‖ ೧೯

ತಂಬಟಕೋಟಿ ಸೂಳೈಸೆ
ತುಂಬಿಪಾಠಕರುಗ್ಗಡಿಸಿ
ಕೊಂಬುಕಾಳೆಗಳೊದರಲು ನಿಸ್ಸಾಳವು
ಕುಂಭಿನಿಯೆದುರು ದುಂಬಿರವವು
ಬೊಂಬಾಯ ಮಾನವೆಸೆದುದು
x x x x x x x x x x x x x ‖ ೨೦

ಮಲಯ ಪರ್ವತ ವಿಜಯಾರ್ಧ
ಕುಲಗಿರಿಗಳೊಳುದಿಸಿರ್ದ
ಕಲಿತ ರಜನಿ ಕುಂಕುಮ ಹಿಮಸಾರವು
ನೆಲಸಿದ ಕಮ್ಮೆಣ್ಣೆಯು ಫಲಕುಸುಮವು
ಸುಲಲಿತಗಂಧ ಕದಂಬ ಸಹಿತ ಸುರ
ನಿಲಯಜರೆಲ್ಲ ನೆರೆದರು ‖ ೨೧

ಸುರಭಿ ಸುಗಂಧದೆಣ್ಣೆಯನು
ಸುರಗಿ ಸೇವಂತಗೆಗಳನು
ಸುರಕಾಂತೆಯರು ಪರಂಜೆಯ ಬಟ್ಟಲೊ
ಳರಸಿನ ಗಂಧ ಕದಂಬವ ತೀಡಿ
ಸುರವಿದ್ರುಮ ಫಲಪುಂಜವನಿರಿಸಲು
ಪರಿಮಳ ಸಭೆಯ ಮುಸುಕಲು ‖ ೨೨

ಮಲ್ಲಿಗೆ ಗಂಧದೆಣ್ಣೆಯನು
ಮೊಲ್ಲೆಮಲ್ಲಿಗೆ ಮಾಲೆಯನು
ಘಲ್ಲುಘಲ್ಲೆಂಬಂದುಗೆಗಳ ರವದೊಳು
ಸಲ್ಲಲಿತಾಂಗಿಯರ್ನಲಿಯುತಯಿಳಿಪಲು
ಪಲ್ಲವ ಪಾಣಿಯ ರಚಿಸುವ
ಸಂಜ್ಞೆಗಳಲ್ಲಿಯುಣ್ಮಿದವು ಸಭೆಯಲ್ಲಿ ‖ ೨೩

ಸಂಪಿಗೆಯೆಣ್ಣೆಯರಿಸಿನವ
ಕಂಪೆಸೆವಲರ ಕುಟ್ಮಳವ
ತಂಪಿನ ಗಂಧಕದಂಬ ಕರ್ಪುರವ
ತಂಪಿನ ದ್ರಾಕ್ಷೆ ಖರ್ಜೂರದ ಫಲವ
ಕೆಂಪೆಯರಾಂತು ಬಂದರು ಭಾಗ್ಯದ ಬಹು
ಕೆಂಪಿನಮೊಗದಸತಿಯರು ‖ ೨೪

ಪರಲ್ಕಚಿತದ ಪೊಂಬಟ್ಟಲೊಳು
ಸುರಭಿ ಸುಗಂಧ ವೀಧಿಗಳು
ವರನಾರಂಗಫಲವು ಕಮ್ಮೆಣ್ಣೆಯು
ಉರುತರ ಕದಳಿ ಸುಪಕ್ವ ಫಲಗಳು
ವೆರಸಿ ಷಟ್ಖಂಡ ಚಕ್ರೇಶ್ವರ
ಗರಿಷಿನೆಣ್ಣೆಯನು ತಿರುಗಿದರು ॥ ೩೫

ಅರಸಿನೆಣ್ಣೆಯ ಹದಮಾಡಿ
ಅರಸಿಯರು ಭಯಂಕರಗೂಡಿ
ದರಹಸಿತಾನನಕೊರಸಿ ಮಿಂಚೆಣ್ಣೆಯ
ಕರಚರಣಕೆ ತಿಗುರಿಡೀ ಕತ್ತುರಿಯ
ವಿರಚಿಸಿ ಪಣೆಯೊಳು ತೀಡೆ ಸುಗಂಧವ
ದೊರೆರಾಯನುರಕೆ ಹಸಿಯೇಳೆ ॥ ೩೬

ಮಗಮಗಿಪಲರ್ಗಳ ಸೂಡಿ
ಅಗಿಲುಕುಂಕುಮ ಸಾರ ತೀಡಿ
ಬಗೆಬಗೆ ಫಲಪುಂಜವ ಮುದಗೂಡಿ
ಜಗದೊಡೆಯನ ಮುಮ್ಮಡಿಲೊಳಗೂಡಿ
ಪೊಗಲೋರೆವಾಣಿ ಮುತ್ತಿನ ಸೇಸೆಯನಿ
ಕ್ಕಘಹರನಡಿಗೆ ಹರಸುತ ॥ ೩೭

ಉಲಿಯ ಕಂಕಣ ಝಣತ್ಕಾರ
ಮೊಳಗೆ ನೂಪುರದ ಚೀತ್ಕಾರ
ತೊಳಗುವ ಕರತಳವನು ಪಿಡಿದೆತ್ತಿ
ಥಳಥಳಿಸುವ ತೋಳ್ಗಳಚ್ಚಿವಿಎ ಮುತ್ತೆ
x x x x x x x x x x x x x
x x x x x x x x x x x x x ॥ ೩೮

ಹೆಂಗಳ ಕುಲಶಿರೋಮಣಿಗೆ ಶೃಂಗಾರ
x x x x x ಸೊಬಗಿನ ಕಣಿಯಿಗೆ
ಅಂಗನೆಯರು ನೆರೆದಿಂಗಳವದನೆಗೆ
ಕಂಗೊಳಿಸುವ ಕಮ್ಮೆಣ್ಣೆಯನುರಕೆ
ಹಿಂಗದೆ ತಿಗುರಿಡುತಗಿಲು ಕುಂಕುಮಮೂ
ಲ್ಯಂಗಳ ಸೂಡಿ ಸೊಬಗಿಂದ ॥ ೩೯

ಕಸ್ತೂರಿ ತಿಲಕವನಿಟ್ಟು
ವಿಸ್ತಾರ ಮುತ್ತಿನ ಬೊಟ್ಟು

ಸಿಸ್ತಾಗಲು ಫಲಪುಂಜವ ಕೊಟ್ಟು
ಮಸ್ತಕ ಕಡಿಯಿಂದ ಸೇಸೆಯನಿಟ್ಟು
ವಸ್ತುವಾಹನ ಸಾಮ್ರಾಜ್ಯ ಸುಪುತ್ರರಾ
ರಸ್ತೆಂದು ಹರಸಿ ಮುದದಿಂದ ॥ ೪೦

ಜಯದಿಗ್ವಿಜಯವು ರಸ್ತೆಂ
ಭಯಭವ ವಿಜಯರಾಗೆಂದು
ನಯಯುಗವಿನಯಮದುದಾರರು ಸೇಸೆಯ
ಪ್ರಿಯದಂಪತಿಗಳಿಗಿಕ್ಕೆಯುತ್ಸಹದಿ
ದಯಗುಣನಿಧಿರಿಪುವಿಪಿನಧನಂಜಯ
ಜಯರಾಮೆಗೊಡೆಯ ಸಲಹೆಂದು ॥ ೪೧

ಭಕ್ತರೊಡೆಯ ಭವ್ಯರೊಡೆಯ
ಶಕ್ತರೊಡೆಯ ಶಾಂತರೊಡೆಯ
ಯುಕ್ತಿಯೊಳಿಹ ಪರಲೋಕವ ಸಾಧಿಸಿ
ವ್ಯಕ್ತಿಯೊಳಖಿಲಕರ್ಮಗಳ ಕೆಡಿಸಿ
ರಕ್ತಿರಮಣಿಯರ ತೊರೆದು ಸರ್ವತ್ರವಿ
ರಕ್ತಿಯಿಂ ಮುಕ್ತಿ ಸತಿಯೊಳು ॥ ೪೨

ಶ್ರೀ ಮಹಾಭರತರಾಜೇಂದ್ರ
ಶ್ರೀಮದಮಿತಗುಣಸಾಂದ್ರ
ಆ ಮಹಾಪುರು ಪರಮೇಶನ ಕಂದ
ಈ ಮಹಿಗಾದಿಕುಮಾರಕನಾದ
ಭಾವಿಸಿ ಜನನಿಜಕಾಮಕಾಮಿತಫಲ
ಕಾ ಮಹಾಕಲ್ಪಕುಜನಾದೆ ॥ ೪೩

ಮಣಿಖಚಿತಪರಂಜಿ ಪಾತ್ರೆ
ಗಣಿಮಾಡೆ ಸರಸಿಜನೇತ್ರೆ
ಅಣಿಯರ ನವಮಣಿಖಚಿತದಾರತಿಯ
ಗಣಿಸಬಾರದ ಚಿತ್ರಗೆಲಸದಾರತಿಯ
ಪ್ರಣುತ ಕರ್ಪುರದಾರತಿ ಮೃಗದಾರತಿ
ಫಣಿವೇಣಿಯರೆತ್ತಿ ಬೆಳಗಿರೆ ॥ ೪೪

ಮಂಗಳ ಮಹಿಪರೊಡೆಯಗೆ
ಮಂಗಳ ಸುಜನಪಾಲನಿಗೆ
ಮಂಗಳ ರಿಪುಭಯ ತಿಮಿರಪತಂಗಗೆ
ಮಂಗಳ ಮುನಿಪಾದಾಂಬುಜ ಭೃಂಗಗೆ

ಮಂಗಳ ತ್ರಿಭುವನ ವಿಭವಕಗೆ ಜಯ
ಮಂಗಳಾರತಿಯ ಬೆಳಗಿರೆ ‖ ೪೫

ಮೆರೆವ ಷಟ್ಖಂಡಮಂಡಲಕೆ
ಅರಸು ತಾನಾಗಿಹಪರಕೆ
ಗುರುವೆನಿಪಮರಾಜೇಂದ್ರರ ತಿಳುಹಿ
ಧರಣಿ ಮೂರರ ಭವ್ಯಾತ್ಮರನುಳುಹಿ
ಕರುಣದಿ ಸರ್ವಾತ್ಮರ ರಕ್ಷಿಪ ಜಪ
ದ್ಗುರುವಿಗಾರತಿಯ ಬೆಳಗಿರೆ ‖ ೪೬

ಧರೆಗಾದಿಕುವರಾದಿರಾಜ
ವರವಿದ್ಯಾಧರರ್ಗಧಿರಾಜ
ಮೆರೆವ ಚೌಷಷ್ಟಿವಿದ್ಯಕಧಿರಾಜ
ನೆರೆ ನವನಿಧಿಯಕ್ಷರಿಗಧಿರಾಜ
ಸುರನರಯಕ್ಷರ ಹೃತ್ಕಮಲಕೆ ದಿ
ನರಾಜಗಾರತಿಯ ಬೆಳಗಿರೆ ‖ ೪೭

ಶರನಿಧಿ ಸಮನೆ ಗಂಭೀರಕೆ
ಧರಿಣಿ ಸಾಟಿಯ ಕ್ಷಮಾಗುಣಕೆ
ಸುರತರುವುದಾರಕೆ ಪಾಸಟಿಯಹುದೆ
ವರ ಮಂದರ ಧೈರ್ಯಕೆ ಸರಿಬಹುದೆ
ನೆರೆ ಚಿಂತಾಮಣಿ ಸುರಧೇನುವು ಮಹಾ
ಪುರುಷನಿಗೆಣೆಯೆ ಪೊಗಳಲು ‖ ೪೮

ಧರೆ ಮೇರು ಶರಧಿ ತಾರೆಗಳು
ತರಣಿ ಚಂದ್ರಮನು ಸ್ವರ್ಗಗಳು
ಸ್ಥಿರಕರಮಿರುವನ್ನವು ಸ್ವರ್ಗಗಳು
ನಿರುತಮಂಗಲ ಕಲ್ಯಾಣ ಶೋಭಾನಗಳು
ಪರಮರುಹನ ಚರಣವ ನಂಬಿದರಿಗೆ
ನೆರೆವುದು ನಿರುತ ಸಖಿಯಳೇ ‖ ೪೯

ದಶದಿಕ್ಪಾಲಕರ ಕರ್ಣಗೃಹವು
ಮಿಸುಪನ್ನ ಸುಜನರ ಗೃಹವು
ಒಸಗೆ ಮೇಲೊಸಗೆಯ ಉತ್ಸಾಹದೊಳು
ಕಸವರ ನವವಿಧಪರ ವೃಷ್ಟಿಗಳು
ಎಸೆವುವು ಶಾಸನ ದೇವರ್ಕಳ ನಡಸುವ
ರಸಿಯಳೆ ಭವ್ಯಜನರಿಗೆ ‖ ೫೦

ದೇವದುಂದುಭಿಗಳ ರವದಿ
ದೇವದೇವಿಯರು ಉತ್ಸಹದಿ
ಆವಾಗಳು ನಿರ್ಮ್ಮಾಲಯಗಳಲಿ
ಪೂವಿನಮಳೆ ಸುವರ್ಣ ವೃಷ್ಟಿಯಲಿ
ಶ್ರೀಮಂತರು ಜಯವಂತರಾಗಿರಿಯೆಂದು
ದೇವರ್ಕಳೆಲ್ಲ ಹರಸುತ ‖ ೫೧

ಧರಣಿತ್ರಯದ ಬುಧಜನರು
ಸರಸ ಸದ್ಗುಣ ಧನಾಸ್ತು ಧನಾಶಯರು
ಭರತ ಚಕ್ರೇಶ್ವರನ ಧವಳ ಶೋಭನವ
ನಿರುತದಿ ಪಠಿಸುವ ಬಿಡದೆ ಲಾಲಿಸುವ
ಪರಮಪುರುಷರು ಪಾರ್ಣಾಯ ಪುತ್ರೋತ್ಸವ
ಸಿರಿಯ ಸೌಭಾಗ್ಯಯುತರಲ್ತೆ ‖ ೫೨

ನಿತ್ಯಮಂಗಲ ನಿತ್ಯವಿಭವ
ನಿತ್ಯಕಲ್ಯಾಣಸಂಪದವ
ನಿತ್ಯೋತ್ಸವ ನಿರ್ಮಲ ನಿರುಪಮ
ನಿತ್ಯಾನಂದ ನಿವಾಸ ಸದಯ ಸದ್ಧರ್ಮ ಸೌಭಾಗ್ಯ ಸಂ
ಗತ್ಯದಿಂ ನಿತ್ಯ ಸುಖಿಯಾಗಿ
x x x x x x x x x x x x x x x x x ‖ ೫೩

<u>೨. ಶ್ರೀಸುರಪತಿನರಪತಿ</u>

ಶ್ರೀ ಸುರಪತಿ ನರಪತಿ ಪಣಿಪತಿನುತ
ಭಾಸುರಪದಯುಗಲ ಸಾಕೇತ ಪುರಾ
ಧೀಶ ಕರಕಮಲ ಸಾತತ ಭರತೇಶನ ಪರಿಪಾ
ಲ ಸನ್ನುತ ಶಿಲವಾಸವೊರ್ಜ್ಜಿತ ಪದಸರೋಜ ವಿ
ಲಾಸು ಮುಕ್ತಿ ಶ್ರೀ ರಮಾಪತಿ ಸಾಸಿರಾಮಲನಾಮ ಪುರಪರ
ಮೇಶ ಪಾಲಿಸಭಿಷ್ಟ ಸಿದ್ಧಿಯ ಲೇಸಿತ್ತು ನಮಗೆ ಕೃಪೆದೋರು ‖ ೧

ವಾಣಿ ವಿಭವಕಟ್ವಾಣಿ ನಿಶ್ರೇ ಸಂಕ್ಷೋಣಿಗಧಿಕ ಕ
ಲ್ಯಾಣಿಗಿರ್ವಾಂಗ್ವಾಣಿ ಪ್ರಾಣು ಪಂಕಜ
ಪಾಣಿ ಬ್ರಹ್ಮಚಾರಿಣಿ ಕರುಣ ಸೂಮರಿಕ್ಷ
ಪಾಣಿ ಪನ್ನಗ ಮಾನದೆನ್ನಯ ಮನದ ಸಂಚಲ
ಕಾಣಿಸದೆಲ ನವರತ್ನ ಗುಣಮಣಿ ಮಾನ
ಜಾಣೆಮತಿಗಳೊಡನೆ ಬಾರದೆ
ಪಾಲಿಸೆನ್ನನು ವೀಣಾಲೋಚನೆಯೆ ಕೃಪೆದೋರು ‖ ೨

ಪುಂಡವ ಸರ್ಪಿಣಿ ಕಾಲಿದೊಪದಿ ಪುಜ್ಜ
ದಂಡಗಳ ಕೆಡಿಸಿ ಸಧರ್ಮ
ದಂಡದೊಳಗೆ ನಿಡಿಸಿ ಭವ್ಯಜನಂಗ
ಳಿಂಡುಗಳನು ರಕ್ಷಿಸಿ ಲೋಕವನೊಲಿ
ಚಂಡಿಚಾಂಡಿ ಚಾಮುಂಡಿ ಭೈರವಿ
ಲಂಡಿ ಗೃಹ ಶಿರ ಖಂಡ ಮಂಡಿತ
ಚಂಡ ವಿಕ್ರಮ ಭೂತ ಗುಣದೋ
ರ್ದಂಡನೆ ಗ್ರಹ ಜ್ವಾಲಮಾಲಿನಿ
ಪುಂಡಾಕಾಕ್ಷಿ ಕೃಪೆದೋರು ‖ ೩

ಪದ್ಮ ವಿಷ್ಣರೆ ಪಾದಮಂದಿರೆ
ಪದಪದ ಪದ್ಮರಾಗೊಲಿಜಾತೆ
ಸದ್ಗುಣ ಮಹಿತೆ ಸುರಕ್ಷಿರ ಸ
ಮುದ್ರ ಗಾಂಭೀರ್ಯ್ಯಯುತೆ
ಭದ್ರಪೀಠ ಶ್ರೀ ಲೋಕೈಕಮಾತೆ ಶ್ರೀಜಿನವಾಸೆ
ಮುದ್ರಕೀಲಿತ ಶೇಖರಾನ್ವಿತೆ
ಕ್ಷುದ್ರ ಭೂತ ಗಣಾದಿತಾದನ
ಕುದ್ರಕುದ್ರ ಭಯಂಕರಾನ್ವಿತೆ
ಪದ್ಮಾವತಿದೇವಿ ಕೃಪೆದೋರು ‖ ೪

ವೀರಸೇನಾನ್ವಯಾಂಬ ಸೂರ್ಯರೆನಿಪ ಶ್ರೀ
ಚಾರು ಸಮಂತಭದ್ರದೇವಸಮೋದ್ಧಾರಜ್ವಾಲಿನಿ
ಮುದ್ರ ಷಡ್ತರ್ಕ ವಿಚಾರ ಸದ್ಗುಣ ಸಮುದ್ರ ಶ್ರೀಮುನಿ
ಭದ್ರ ಚಾರು ವಚನ ತುಷಾರ ಗುಣಗಂಭೀರ ಸುಜನೋ
ದ್ಧಾರ ಯತಿಮಂದಾರ ಮುನಿಕುಲಧೀರ ಅಸಮ
ಸಾರ ಶ್ರೀಲಕ್ಷ್ಮಿ ಸೇನ ಮುನಿವರ ಚಾರುಚರಣಕೆ ನಮಿಸುವೆನು ‖ ೫

ನವರತ್ನಖಚಿತ ರಂಜಿತ ಮಂಡಪದೊಳು
ದಿವಿಜತಂನೆಯರೈತಂದು ಪರಿವಾರವೈದು
ತವಕದೊಳು ತರುಣಿಯರು ಸಂದಣಿ
ಕವಿಜನ ಸ್ತುತಿಯಿಂದ ಪಾಡುತ
ಭವನವೊಡೆಯನ ಭರತರಾಜನ
ನವಕಳೆವವರ ಸಾರ್ವಭೌಮನ
ಯುವತಿಯರು ಹಸೆಗೆ ‖ ೬

ಆಯುಧ ಶಾಲೆಯೊಳಗೆ ಸುದರ್ಶನ ಚಕ್ರ
ಅಯುತದೊಳು ಜನಿಸಿ ಸಕಲ ಸುರದಿ
ಕಾಯರೆಲ್ಲರು ಸ್ತುತಿಸಿ ವ್ಯಂತರ ದೇವ
ಕೊಯ್ಯರದೊಳು ಭಜಿಸಿ ಮಂಗಲವೆರಸಿ
ದಾಯದಲಿ ಪದಿನಾಲ್ಕು ರತ್ನ ನಿಕಾಯ ಸಂಜನಿಸಲ್ಕೆ ದೊರೆಗಳ
ಮುತ್ತಿನಹಸೆ ಸಂವಿಧಾನದೊಳು ಗೆಯ್ದುಕಸ್ತೂರಿ ತುಂತು ಮವಸಾರಣೆಗೈದು
ರಾಯನುಮ್ಮಳವೇರಿ ಮನದೊಳು ಪ್ರೇಮದಿಂದಿಗ್ವಿಜಯ ಸಾಧಿಪ ರಾಯನ ಹಸೆಗೆ ಕರದಾರು ॥ ೭

ಧರೆಯೊಳಗುಳ್ಳ ಸೇನೆಯೊಗೂಡಿ ಪೂರ್ವ ಸಾ
ಗರ ಮಗಧನ ಜಯಿಸಿ ಬೇಗದೊಳು ಸಾಗರ
ವರತನ ಬರಿಸಿ ತದ್ವಿಜಯಾರ್ದ್ಧಗಿರಿಯ ಗುಹೆ ತೋಡಿಸಿ ವ್ಯಂತ
ರರೊಲಿಸಿ ತ್ವರಿತದಿಂ ಚಿಲಾತ
ವರತನ ಜಯಿಸಿ ಸಿಂಧು ಜಿನೇಂದ್ರನಂಘ್ರಿಯ ಪರಮ ಭಕ್ತಿಯೊ
ಳೆರಗಿ ಪೂಜಿಸಿ ಸುರರು ಹೂಮಳೆಗರಿಯೆ ಹರುಷದಿ
ಭರತ ರಾಜೇಂದ್ರ ಹಸೆಗೇಳು ॥ ೮

ಪೂರ್ವಪಶ್ಚಿಮ ಖಾಂಡದ ಮ್ಲೆಚ್ಚರೊಂದೆಸಿ
ಸರ್ವರತ್ನಗಳೊಪ್ಪಿಸಿ ಹಿಮವಂತ ದೇ
ವೊರ್ವೀಪಗಳೆ ನಮಿಸಿ ಗಂಗಾ ಸಿಂಧುದೇವಿ
ವೆರಸಿ ಮನ್ನಿಸಿ ಚಿತ್ತವನೊಲಿಸಿ
ಟುರ್ವಿಯೊಳು ವೃಷಭಾಚಲಕೆ ತಾ
ಸರ್ವಕಟುತ ಸಮೇತವಾಗಿ
ಪರ್ವತದಿ ತನ್ನಂತ ಮಾಲೆಯ
ಪೂರ್ವದಿಂದಲಿ ಸ್ಥಾಪಿಸಿದ ಶ್ರೀ
ಸಾರ್ವಭೌಮೇಶ ಹಸೆಗೇಳು ॥ ೯

ಗಗನವಲ್ಲಭ ಪುರದಿಂದವಿನ ನಮಿರಾಜ
ಸುಮತಿ ಸಾಗರ ಸಮೇತ ಸೇನೆಯ
ಕಂಗೊಳಿಪಂತೆ ತಾ ನೋಡುತ ಆಶ್ಚರ್ಯದ
ಬಗೆಗೆ ಹೆಚ್ಚಳ ಹಿಗ್ಗುತ ಸಂತೋಷಬಡುತ
ದುಕುಳನಿವಾಳಿಯನೊಪ್ಪಿಸಿ
ಮುಗುಳು ಕರಗಳ ಮುಗಿದು ವಿನಯವ
ನಗುತ ವಿನಯವನಾಡಿ ಹಾಸ್ಯದಿ
ಸುಗುಣಮನ್ನೆಯನಿತ್ತು ಕಳುಹಿದ
ಜಗಿದಗ್ರಗಣ್ಯ ಹೆಸೆಗೇಳು ॥ ೧೦

ಕಾಳಿಂದಿ ಮದುವಾಣಿಯಾಳಿಯರೈದಿ ಸಮ್ಮೇಳ
ದೊಳಗೆ ಪೇಳಲು ಸುಭದ್ರಿಯ
ಆಳಪದೊಳು ಪಾಡಲು ಸಂತೋಷದಿಂ
ಪೆಳಲಳವೇ ನೋಡಲು ಭಾಷ್ಪಾಂಬು ಬೀಳಲು
ಹೇಳಿಕಳುಹಿ ಸುಬುದ್ಧಿ ಸಾಗರ
ಹೇಳಿಂದಂದದಿ ರಜತ ಗಿರಿಯೊಳು
ಲೀಲೆಯಿಂ ನಮಿನಮಿರಾಜರು
ತಾಳಿ ಬಂದಿ ಮಹೋತ್ಸವೆ
ಸಳಿದ ಬಾಲಾರ್ಕ ತೇಜ ಹಸೆಗೇಳು ‖ ೧೧

ಉಭಯಶ್ರೇಣಿಯೊಳು ದಶೋತ್ತರ ಶತಪುರಿ
ಪ್ರಭುಗಳೆಲ್ಲರುವೆರಸಿ ಸುಭದ್ರೆಯ
ವಿಭವದಿಂ ಶೃಂಗರಿಸಿ ದಿಬ್ಬಣ ಗೂಡಿ
ಶುಭ ಮುಹೂರ್ತವ ಸಾಧಿಸಿ ಪಯಣವ ರಚಿಸಿ
ರಭಸದಿಂದಲೇ ಪಾಗಿ ಕಟಿಕತದ
ಪ್ರಭು ಕುಲೋತ್ತಮ ಸಾರ್ವಭೌಮನ
ಸಭೆ ನಮಿನಮಿರಾಜರ
ಶುಭದಿನದಿ ತಕ್ಕೈಸಿ ಮನ್ನಿಸಿದ ಮಹಿಮ ಹಸೆಗೇಳು ‖ ೧೨

ಪರಮ ಸಂಭ್ರಮದೊಳಗಿರದೆ ಗಂಗಾಸಿಂಧು
ಸುರದೇವಿಯರವತರಿಸಿ ಸುಭದ್ರೆ ನೊ
ಡ್ವರುಷದಿಂ ಮನದೊಳಾಸೆ ಅಗ್ರಜನಗುಣ
ನರಿದು ಅಪ್ಪಣೆ ಪಾಲಿಸಿ ಹರ್ಮ್ಯಕೆ ಗಮಿಸಿ
ತರಳೆಯೊಳು ಹಾಸ್ಯದೊಳು ಕರದೊಳಗಿರುವ
ಬೆರಳ ಮುದ್ರಿಕೆಯ ತೆಗೆಯಲು
ಭರದಿಯಿರ್ವರ ಕರವಿಡಿದು ಮನ
ಹರುಷದೊಳಗುಂಗುರವೆಸಳದ ಶ್ರೀ
ಭರತೇಶನ ರಾಣಿ ಹಸೆಗೇಳು ‖ ೧೩

ಸಕಲ ದಿಗ್ದೇಶದ ಕಿನ್ನರಿಯರು
ಪ್ರಕಟಿಸಿ ಮಂಗಲವ ಸುಭದ್ರೆಗೆ
ವಿಕಸಿತ ಕಂಕಣವ ತೊಂಡಿಲು ಗಟ್ಟಿ
ಸುಖಿಯರಿರುವೆ ಮರೆವ ಸಂಭ್ರಮದೊಳಿರುವ
ಸಖಿಮುಖೋದ್ಗತ ವಾಣಿಯನು ಶ್ರೀ
ನಿಕರ ಧವಳಾರವ ಗಮಕ ಪಾಡುತ
ಅಖಿಲ ಮರಕರ್ತ ಕಿಲಿತದ ಪ

ಲ್ಲಕ್ಕಿಯೊಳಗೆ ಬಿಜಯಂಗೈಸಿ ಗಮಿಸಿದ
ಮುಕುರ ವದನೆಯೇ ಹಸೆಗೇಳು ‖ ೧೪

ಇಂದುವಿನಂದದಿ ಸಾಂದರವಡದಿಹರ
ವಿಂದ ವದನೆ ಕಾಂತೆಯ ಕುಂದರದನ
ಬಿಂದುಗೆ ಬಾಯ್ದೆರೆಯ ಸಾಂದರತರವೆತ್ತ
ಸಿಂಧುರ ಗತಿ ನಡೆಯ ಸುಭದ್ರದೇವಿಯ
ತಂದೆ ಮೆಟ್ಟಕ್ಕಿಯೊಳು ನಿಲ್ಲಿಸಿ
ದಂದವನು ಸಾರ್ವಭೌಮನ ಕಂಡು ಮನದೊಳು ಜುಮ್ಮುದಟ್ಟಿಲು
ಇಂದ್ರ ವೈಭವದಿಂದ ಗಮಿಸಿದ
ಕಂದರ್ಪರೂಪೆ ಹಸೆಗೇಳು ‖ ೧೫

ಸರಸಿಜ ಗಂಧಿಯರ್ವೆರಸಿ ಚಾಮರಗಳ
ತರತರದೊಳು ಬೀಸುತ ದೇಹದ ಕಾಂತಿ
ಪರಿಪರಿಯೊಳು ಸೂಸುತ ಪಾವುಗೆ ಮೆಟ್ಟು
ಸ್ಮರನ ಮೋಡಿಯ ತೋರುತ ನಲ್ಲಳ
ಸ್ಮರಿಸುತ ಪರಮ ಹರುಷವ ತಾಳಿ ಮನದೊಳ
ಗಿಂದೆ ಮಹಾಮೃತವ ಮೀಯಲು
ಭರದಿ ಮಂಟಪಕ್ಕೆ ತಾನಿರದೆ ಮೆಟ್ಟಕ್ಕಿಯೊಳು ನಿಂದ ಶ್ರೀ
ಭರತ ರಾಜೇಂದ್ರ ಹಸೆಗೇಳು ‖ ೧೬

ಮಂಗಲ ವಾದ್ಯಗಳು ಮೊಳಗಲು ದಿಕ್ತಟ
ದಂಗನೆಯರು ಬರಲು ಭೂಸುರರು ಶ್ರೀ
ಮಂಗಲಾಷ್ಟಕ ಪಾಡಲು ಮುತ್ತಿನ ತಂಡು
ರಂಗುಡಾಳಿ ಪರಾಯರಾಜನ
ಅಂಗಕ್ಕಿಕ್ಕಲು ಪುಷ್ಪಮಾಲೆಯ
ಅಂಗನಾಮಣಿಗಿಡಲು ತಿಲಕವ
ಸಂಗಡದಿ ಕೈದಾರೆಯೆರೆಯುತ
ಅಂಗನೆಯರು ಹಸೆಗೆ ಕರೆದಾರು ‖ ೧೭

ಹರುಷದಿಂ ದಂಪತಿಗಳು ಹೋಮವ ಬಲ
ವೆರಸಿ ವಂದನೆಗೈಯ್ಯುತ ದೇವಿ
ಯರು ಕಳ್ಳರಿಸಿ ಗಾನವ ಕೇಳುತ
ಸೌರಭದ ಪರಿಮಳ ವರ್ದಕೆ ತೀಡು
ತಾ ರಸಹಾಸ್ಯವದೋರುತ ತರುಣಿಯರು ಮೌಕ್ತಿಕ
ದ ರನ್ನದ ಹರಿನಿಲದಾರಿ ಯುಕುಲಿಶದ

ವರವೈಢೂರ್ಯಟ ಪವಳ ನಿಲದ
ಪರಿಪರಿಯ ರತ್ನದಲಿ ರಚಿಸಿದ
ಮರುತದಾರತಿಯ ಬೆಳಗೀರೆ ॥ ೧೮

ಮಾಗಿಯ ನೀಗಿದ ಕೋಗಿಲೆಯಂದದಿ
ರಾಗರಾಸದಿ ಪಡುತ ನಾಗಿಣಿಯರು
ಸೋಗೆಯೊಳು ನರ್ತಿಸುತ ಆಗಮದೊಳು
ನಾಗಪಾಲಿಯ ಮಾಡುತ ದಾವನು ಕೊಡುತ
ಮೇಘೇಶ ಜಯನಿಂದೆ ಪೇಳಲು
ತ್ಯಾಗದೊಳು ಕಟಿಕವನು ಮನ್ನಿಸಿ
ರಾಗಭೂಸುರರೆಲ್ಲ ಜಯವೆನೆ
ರಾಗದೊಳು ಕಿನ್ನರು ಪಾಡಲು
ನಾಗಿಣಿಯರು ಹಸೆಗೆ ಕರೆದಾರು ॥ ೧೯

ಸರಿಗಮಪದನಿಯೆಂಬೇಳು ಸ್ವರಗಳಿಂದ
ಸುರವರ ನಾರಿಯರು ನರ್ತಿಸುತ ಶ್ರೀ
ಭರತರಾಜನ ಪಾಡಲು ಪಾಟಕ ಜನ
ರಿರದೆ ಹೊಗಳುತಿರಲು ಗಾನವ ಹೇಳಲು
ತರಿಕುತಂ ಝೇಂಕರಿಕುತಾಹತ
ತಾರಿಕಿಟ ತಝ್ಝಂತಝ್ಝಂತರಿ
ಗಾರಿಗಮ ಪದಮಪನಿಪ ಸಪಸನಿ
ಸಾರಿಗಗಮನಮಪಮಪ
ಗರಿಸದೋರಿ ನರ್ತದೊಳೆಸೆದಾರು ॥ ೨೦

ವಿಕಸಿತ ಕಮಲರಾಕೆಂದು ವದನೆಯರು ತ
ರಿಕು ಝೇಂಕೃತವೆನ್ನುತ
ತೋಘದಿರಾಗಸಿಕಿಯರಿರದೆ ಪಾಡುತ
ನಾಕಿನಿಯರ ನಿಕರಟಮವೇರುತ
ಅಭಿನಯವದೋರುತ
ತಕ್ಕಿಟದಿಮಿತ್ತತ್ತೊಗಿಣಾಗಿಣಾ
ದಿಕಿಟ ಧಾನು ಧಣಾಂತರಿಕ್ಕಿಣ
ತಕೃತ ಝಣಜಣ ಝಂತರಿಕ್ಕಿಣ
ನಿಕರನಿಗಗಮಗಮಪವೆನಿಸುವ
ಸಕಲ ನರ್ತನ ಹೊಳೆಸೆದಾರು ॥ ೨೧

ಇಂತು ಮದುವೆಯಾಗಲೊಡನೆ ಖೇಚರಸ್ವಾಮಿ
ಸಂತಾನದೊಳು ಪುಟ್ಟಿದ ಕುವರಿಯರ
ಸಂತೋಷದೊಳು ನೋಡಿದ ಸುತರಿನೆ ತಾ
ನೊಂತು ಮದುವೆ ಮಾಡಿದ ಅಂಬಿಕೆಯ ನೋಡಿದ
ಕಂತುರಾಜನ ಬರಿಸಿ ಬರದಿ ಕಾ
ಲಾಂತರಂಗವ ತಿಳಿದು ಯುದ್ದಕೆ
ನಿಂತು ವೈರಾಗ್ಯವನು ಪುಟ್ಟಿಸಿ
ಕಂತು ವಿಜಯರ ಕಂಡು ತೆರಳಿದ
ನಂತವೈಭವದಿ ಪುರಕ್ಕಾಗಿ ॥ ೧೧

ಸಾಕೇತಪುರದೊಳನೇಕ ಚೈತ್ಯಾಲಯ
ನಾಕೇಶದಿಂ ರಚಿಸಿ ಜಿನಧರ್ಮವ
ಲೋಕದೊಳಗೆ ಹಬ್ಬಿಸಿ ಕೈಲಾಸಕೆ
ನಾಕರೆಲ್ಲರ ಬರಿಸಿ ಅಭಿಷೇಕಗೈಸಿ
ಲೋಕನಾಥನೆಂದೆನಿಸಿ ಸಕಲ ವಿ
ವೇಕದೊಳು ಜನಗಳು ಪಾಲಿಸ
ನೇಕ ಕಾಲದಿ ರಾಜ್ಯ ರಕ್ಷಿಸಿ
ಕಾಕುಂಕರ್ಮವ ಕೆಡಿಸಿ
ಶ್ರೀಕಾಂತೆಯೊಳು ಕೂಡಿ ಸುಖದಿಂದ ॥ ೧೨

ಧರೆಯುಳ್ಳತನಕವೀ ಶೋಭಾನ
ಸ್ಥಿರವಾಗಿರಲಿ ಸಕಲ ಜನರು ನಿರುತ ಪಾಡಿ
ಪರಮ ಸಂಭ್ರಮವೇರಲು
ಬಾರಲು ಮನ ಹರುಷದೊಳೊಲಾಡಲು ಆನಂದ
ದೋರಲು ಧರೆಯ ಚಕ್ರ ನರೇಂದ್ರನಂದದಿ
ಸ್ಥಿರ ಸುಖದೊಳೊಲಾಡಿ
ಹರುಷದೊಳಿರದೆ ಮುಕ್ತಿ ಕಾಂತೆಗೆ ತಾ
ನಿರತರಾಗುವರೆಂದು ಪೇಳಿದ
ಭರತಕಲ್ಯಾಣ ಧವಳಾರ ॥ ೧೪

ಇಂತಿ ಶೋಭಾನವನೇಳುವ ಪಾಡುವ ಜನ
ಸಂತತ ಸುಖವಿರಲಿ ಭರತ ಚಕ್ರಿ
ಯಂತೆ ನವನಿಧಿ ಬರಲು ನಿತ್ಯ ಕಲ್ಯಾಣ
ದಂತೆ ಮಂಗಲನಾಗಲಿ ವೈಭವದೊಳಿರಲಿ
ಇಂತು ಮಧುಗಿರಿ ಪುರದ ಬಸದಿಯೊ
ಳ್ದಂತಿ ವೈರಿಯ ಪೀಠಮದ್ಯದಿ

ನಿಂತು ಭವ್ಯರ ಮನದಭಿಷ್ಟವ
ಚಿಂತಿತಾರ್ಥವನಿತ್ತು ರಕ್ಷಿಪ ಶ್ರೀ
ಕಾಂತ ಜಿನೇಶ ಕೃಪೆದೋರು ॥ ೧೫

ತುರಗವಾಹನವೇರಿ ಕರದೊಳು
ಸುರಗಿರಿಯ ಪಿಡಿದ ದುರಿತ ಸಂ
ಹಾರದೇವನೇಕಗೊಡೆಯ ಪುರದಿ
ಸ್ಥಿರವಾಸನೇ ಮೇದಿನಿ ಭವ್ಯ
ರೆರಗಿ ಪೂಜಿಸಿಗೊಂಬನೇ ಉತ್ಸಹದಾತನೇ
ಸ್ಮರಿಸಿ ನಿಮ್ಮಡಿಗಳಕೆ ವಂದಿಸಿ
ಭರತಕಥಸಾವೇರಿ ರಾಗದಿ
ಧರೆ ಜನರುಗಳೊಲಿದು ಪಾಡಲು
ಪರಮ ಸಂಪದವಿತ್ತು ಪಾಲಿಪರ
ವರವಿ ಬ್ರಹ್ಮರಾಯಗೆರಗುವೆನು ॥ ೧೬

**೩. ಪಣಿವೇಣಿಯರತಿ**

ಪಣಿವೇಣಿಯರತಿ ಹರುಷದೊಳು ಕಂ
ಕರಣವ ಝುಂಝುಣರೆಂದುಲಿಯಲು
ಮಗಿಭೂಷಣಗಳ ಪ್ರಭೆ ಮೆರೆಯೇ
ಪ್ರಭೆ ಮೆರೆಯೆ ಢವಳಾರವ ಪಾಡುತ
ಮಣಿಮಯದಾರತಿಯ ಬೆಳಗಿರೇ ॥ ೧

ಅಂಗಜ ಸಮರೂಪನೇ ಹಿಂಗಳ ನೆರೆ
ಕಂಗಳ ನೆರೆ ಭಾಗ್ಯದ ಖಣಿಯೇ
ಸಂಗರ ಭೀಮ ಗುಣಧಾಮಯೆನುತಲಿ ವಜ್ರ
ಜಂಗಣಿಗಾರತಿಯಾ ಬೆಳಗೀರೆ ॥ ೨

ಭಾವೆಯರ ಶಿರೋಮಣಿ ಸದ್ಗುಣ ಧಾಮೇಕ
ಲಾಲಿಪು ನೆನೆದಾಲಿಸಿ ಗಜಗಮನೆ ಶವದೆನ
ಸ್ಥಿರವಾಗೆನುತಲಿ ಶ್ರೀಮತಿಗಾರತಿಯಾ ಬೆಳಗೀರೇ ॥ ೩

ಸುರಗಿರಿ ತಾರಕಿ ಶಶಿರವಿಗಳು
ಸ್ಥಿರದೊಳಗಿರುವಂದದಿ ವಧು
ವರರು ನೀವಖಿಳಸುಖದೊಳಗೆ ಬಾಳಿರೆಂದನು ತಲೆ
ತರುಣಿಯರಾರತಿಯ ಬೆಳಗೀರೇ ॥ ೪

ಜಯಮಂಗಳಂ ಶ್ರೀಮತಿ ಪ್ರಿಯಗೆ
ಜಯಮಂಗಳಂ ಕೋಮಲಕಾಯಗೆ
ಜಯಲಕ್ಷ್ಮಿ ರಮಣನೆನಿಸಿದ ವಜ್ರಜಂಘಗೆ
ಜಯವೆಂದಾರತಿಯ ಬೆಳಗೀರೆ ॥ ೫

**೪. ಕರೆತಾರೆಸರಸ್ವತಿಪ್ರಾಣ**

ಕರೆತಾರೆ ಸರಸ್ವತಿ ಪ್ರಾಣದೊಲ್ಲಭನ
ಮರೆಹೊಕ್ಕ ಜನರ ರಕ್ಷಿಸಿ ಪಾಲಿಸುವನ
ಪರಮ ಸಂತೋಷದಿಂದ ಜಿನನರಿದನ
ಸರಿಯೂರು ಶ್ರವಣಗುಂಡದ ಬ್ರಹ್ಮರಾಯನ
ಕರತಾರೆ ಹಸೆಯ ಜಗುಲಿಗೆ ॥ ೧

ಭಂಗವಾಡಿಯ ಭವ್ಯ ಜನರ ರಕ್ಷಿಪನ
ತುರಗವನೇರಿ ವೈಯಾಳಿ ಬಿಡುವನ
ಮಂಗಲಮೂರ್ತಿ ಮನ್ಮಥಗೆಲಿದನ
ಶೃಂಗಾರವಡದಿರ್ದ್ದ ಬ್ರಹ್ಮರಾಯನ
ಕರತಾರೆ ಹಸೆಯ ಜಗುಲಿಗೆ ॥ ೨

ಮಾನಿನಿಯರಿಗೆ ಮಕ್ಕಳ ಕೊಡುವವನ
ನಾನಾದೇಶಕ್ಕೆ ಕೀರ್ತಿಪಡೆದವನ
ಭಾನುಬಿಂಬದ ಪ್ರಕಾಶವುಳ್ಳವನ
ಆನಂದದಿಂದ ಬರುವ ಬ್ರಹ್ಮರಾಯನ
ಕರತಾರೆ ಹಸೆಯ ಜಗುಲಿಗೆ ॥ ೩

ಭೂತಳದೊಳು ಮಹಾಖ್ಯಾತಿ ಪಡೆದನ
ಶೀತಲ ಜಿನರಿಗೆರಗಿ ನುತಿಸುವನ
ಪ್ರೀತಿಯಿಂದಲಿ ಸರ್ವಜನರ ಪಾಲಿಪನ
ನೂತನವಡದಿರ್ದ ಶ್ರೀ ಬ್ರಹ್ಮರಾಯನ
ಕರತಾರೆ ಹಸೆಯ ಜಗುಲಿಗೆ ॥ ೪

ಜಲದ ಮೇಲ್ಗಂಡು ತೇಲಿಸಿ ಬರುವವನಾ
ಹಲವು ಭೂಷಣಗಳ ತೊಟ್ಟು ಮೆರೆವವನಾ
ಫಲವಿಲ್ಲದವರಿಗೆ ಫಲಕೊಡುವವನಾ
ನಲಿನಲಿದಾಡುವ ಶ್ರೀ ಬ್ರಹ್ಮರಾಯನ
ಕರತಾರೆ ಹಸೆಯ ಜಗುಲಿಗೆ ॥ ೫

ಬಂದ ಕಂಟಕವನ್ನು ಪರಿಹರಿಸುವನ
ದಂದದಂದಲಿ ಪೂಜೆಯಗೊಂಬುವನ
ಗಂಧಕಸ್ತೂರಿ ಕುಂಕುಮ ಲೇಪಿತನ
ಬಂದಿ ಕೋಲನೆ ಪಿಡಿದ ಶ್ರೀ ಬ್ರಹ್ಮರಾಯನ
ಕರತಾರೆ ಹಸೆಯ ಜಗುಲಿಗೆ ॥ ೬

ಸ್ವರ್ಗದಾ ಸುಖವ ಸಂಪದವ ಕೊಡುವವನ
ದೀರ್ಘಾಯುಷ್ಯವ ಕೊಟ್ಟು ರಕ್ಷಿಪನ
ವ್ಯಾಘ್ರನಕುದುರೆ ಕಾಲಲಿ ತುಳಿಸಿದವನ ಅ
ರ್ಭಟೆಯೊಳು ಬರುವ ಬ್ರಹ್ಮರಾಯನ
ಕರತಾರೆ ಹಸೆಯ ಜಗುಲಿಗೆ ॥ ೭

ಬಲ್ಲಿದ ಭೂತಕೋಟಿಗಳ ಬಡಿದನಾ
ಪುಲ್ಲಾಕ್ಷಯರಿಗೆ ಮಕ್ಕಳ ಕೊಡವವನ
ನಲ್ಲೆ ಶಾರದೆಯ ಕೈವಿಡಿದು ಬರುವನ
ಉಲ್ಲಾಸದಿಂದ ಬರುವ ಬ್ರಹ್ಮರಾಯನ
ಕರತಾರೆ ಹಸೆಯ ಜಗುಲಿಗೆ ॥ ೮

ಮುಕ್ತಿವಲ್ಲಭ ಶೀತಳಜಿನ ಯಕ್ಷನ
ಶಕ್ತಿಯಿಂದಲಿ ರಣಭೂತ ಹೊಡೆದನ
ಭಕ್ತಿಯಿಂದಲಿ ಸ್ವಾಮಿಸೇವೆ ಮಾಳ್ಪವನ
ಅರ್ತಿಯಿಂದಲಿ ಮೆರೆವ ಬ್ರಹ್ಮರಾಯನ
ಕರತಾರೆ ಹಸೆಯ ಜಗುಲಿಗೆ ॥ ೯

ಸನ್ನುತವಾಗಿಹ ತುರಗವೇರಿದನ
ರನ್ನಕುಂಡಲವನ್ನು ಕಿವಿಯೊಳಿಟ್ಟವನ
ಚೆನ್ನಾಗಿ ಬರುವ ಶ್ರೀಚೆನ್ನಿಗ ಬ್ರಹ್ಮರಾಯನ
ಕರತಾರೆ ಹಸೆಯ ಜಗುಲಿಗೆ ॥ ೧೦

ಸ್ಥಿರವಾಗಿ ಶ್ರವಣಗುಂಡದಿ ನೆಲಸಿದವನ
ತುರಗವನೇರಿ ವೈಯಾಳಿಯ ಬಿಡುವನ
ವರವಿತ್ತು ಅಪ್ಪಾಜಿಯ ಸಲಹುವವನ
ಧರೆಯೊಳು ಭಂಗವಾಡಿ ಬ್ರಹ್ಮರಾಯನ
ಕರತಾರೆ ಹಸೆಯ ಜಗುಲಿಗೆ ॥ ೧೧

**೫. ಕರಿಮುಖನಂಘ್ರಿಕೋಮಲ**

ಕರಿಮುಖನಂಘ್ರಿಕೋಮಲಕೆರಗುವೆನು
ಕರುಣದಿಂದೊಲವಿತ್ತುದ್ಧರಿಸಯ್ಯ ನೀನು
ವಿರಚಿಪೆ ಶ್ರೀ ರಘುರಾಮ ಜಾನಕಿಯ
ಪರಮ ವೈಭವದಲಿ ವೈಭವದಿಂದ
ಧರಣೀ ಭೂಪಾಲರು ಭೂಸುರರು ವಿವಾಹಕ್ಕೆ
ಪರಿಪರಿ ಭೂರಿ ಭೋಜನವಾಗಿ ಕಡೆಯಲಿ
ವರವೆ ತಾಂಬೂಲ ಪದನಾವ ॥ ೧

ನೀಲವಜ್ರದಲಿ ಪಚ್ಚೆ ತೋಲುಗಳು
ಸಾಲು ಸಲಿನ ಲೋವೇಕತನ ಲೋವೆಗಳು
ಮೇಲುಕಟ್ಟಿನ ಚಪ್ಪರದ ಮಧ್ಯೆ
ಬಾಲೆ ಶ್ರೀಲೋಲಾಡುತ ವಾಸಿಗೆ ಹಾಸಿ
ಮಾಳವ ಗೌಳವ ಕರ್ನಾಟಕದ
ಚೋಳಮಗಧ ಪಾಂಡ್ಯಕ್ಷಿತಿಯ
ಪಾಲಕರು ವಾಲಗಗೊಟ್ಟು ಸಭೆಯಲ್ಲಿ ॥ ೨

ಕಕ್ಕಸ ಕುಚೆಯರು ಅವರೆಲ್ಲ ನೆರೆದು
ಅಕ್ಕರದಿಂದಲಿ ಹಸಿಮಣೆ ಬರೆದು
ಚೊಕ್ಕ ಪೀತಾಂಬರಗಳನಳವಡಿಸಿ
ರಕ್ಕಸಿಪು ರಾಮಸೀತೆ ಕುಳ್ಳಿರಿಸಿ
ಚೊಕ್ಕಕನಕ ಕಂಬ ಜ್ಯೋತಿಯನೊಸಿ
ದಿಕ್ಕುದಿಕ್ಕಿಗೆ ವಾದ್ಯ ಭೋರೆಂದು ಬೆಸಸಿ
ಧಿಕ್ಕನೆ ನೆರೆದ ಸಭೆಯಲ್ಲಿ ॥ ೩

ವಾರಿಜಾಸನ ಮುಖ್ಯ ದಿವಿಜಾದಿ ಸತಿಯು
ಧಾರಿಣಿಪತಿಗಳು ಸರಿಸಮ ಸಭೆಯು
ಭೋರನೆ ಮೊಳಗಲು ವಾದ್ಯಗಳೆಸೆಯಲು
ನಾರಿಯರತಿ ಶೊಭಾನವ ಪಾಡಲು
ಕಿರಭಾಷಿಣಿ ಮುದ್ದು ಮೊಗದಾಂಗನೆಯರು
ತಾರಕಿಯೆಂದದಿ ಹೊಳೆಹೊಳೆವು ತಲೆ
ವಾರಾಣವಾದ ಸಭೆಯಲ್ಲಿ ॥ ೪

ಸೃಷ್ಟೀಶ ದಶರಥ ಬರಸಿದ ವಾಲೆ
ಮುಟ್ಟಿ ಬಂದಿತು ನಾಲ್ಕು ಕಡೆಯಿಂದ ಮೇಲೆ
ಕಟ್ಟಿದ ತರತರದೊಲೆಯ ಬುಟ್ಟಿಗಳು
ಅಷ್ಟಭಾಗದಿಂದೊಡದಡಿಕೆಯದಿರುಗಳು

ಪಟ್ಟೆಯ ರಚಿಸುತ ಮಿಸುನಿಪ ಪರಿಗದ
ಕೊಟ್ಟರು ವೀಳ್ಯಾವ ಶ್ರೇಷ್ಠಭೂಸುರರಿಗೆ
ದಿಟ್ಟ ಶತ್ರುಘ್ನ ಭರತನು ॥ ೫

ನಾಗಬಳ್ಳಿಯು ಪಂಚಬಳ್ಳಿಯ ಎಲೆಯು
ಆಗಾರ ಪುರದೆಲೆ ಮಾಳಾವಿ ಪೊರೆಯು
ಬಾಗಿದ ಚಿಗುರೆಲೆದೊರ್ಗ್ಗ ಬಳ್ಳಿಗಳು
ಆಗಮರಾಜ್ಯದ ಸುಳಿ ಬಳಿಯೆಲೆಯು
ಸಾಗರದೇಶದ ತಿಳುವಾದಿಳೆಗಳು
ನಾಗುರರಸಿನ ಸೊಗಸು ಬಳ್ಳಿಗಳು
ರಾಘವನನು ಜತೆಗದಿತ್ತ ॥ ೬

ಪೊಡವಿ ಪಾಲಕರಿಗೆ ಕೊಡಿಸಿ ವೀಳ್ಯಗಳ
ಕಡೆಯೊಳು ಬಹು ಜಾನ ತಾಂಬೂಲಗಳ
ಬಡನಡು ಬಳುಕುತ ಕಂಸಲದೇವಿಯ
ಮುಡಿಗಳಲ್ಲಾಡುತ ಕೈಕಾಲ ಚದುರೆಯು
ಕಡಗಕಂಕಣಯಿಟ್ಟ ಸೌಮಿತ್ರ ಬಾಲೆಯು
ಮಡದಿ ಜನರಿಗೆಲ್ಲ ಬೀಸುತ ಬರಲು
ಸಡಗರದಿಂದ ಸತಿಯರು ॥ ೭

ಕುಂಭಕುಚದ ಬಾಲೆಯರೆಲ್ಲ ನೆರೆದು
ಅಂಬುಜೇಶನ ರಾಣಿ ನಲವಿಂದ ನಲಿದು
ಜಾಂಬವೈರಿಯ ಸತಿ ಮೊದಲಾಗಿಹಳು
ರಂಭೆಲುರ್ವಣಿ ತಿಲೋತ್ತಮೆಯರು
ಸಂಭ್ರಮದಿಂದಲಿ ನರ್ತನಗೈಯುತ
ಶಂಭುಶಂಕರ ಮನಯಿದರಲ್ಲಿ ನೋದಿದ
ಅಂಬರ ಹೂಮಳೆಯಗರೆದರು ॥ ೮

ಕಮಲಕೊರಕ ಕುಚಯುಗೆಯರು ನೆರೆದು
ಅಮರದಿ ಸತಿಗಳು ನಲವಿಂದ ನಲಿದು
ಹಿಮಕರವದನೆಯರು ಮಕರದಿಂದ
ಗಮಗಮಗಮಿಸುತ ಮಲ್ಲಿಗೆ ಮುಡಿದಾರು
ಸಮಸ್ವರದಿಂದಲೇ ಪಾಡಿ ಶೋಭಾನವ
ಅಮಿತ ಉಲ್ಲಾಸದಿ ಸಲೆಯರೊಗ್ಗಿನಲಿ
ಕುಮುದಗಂಧಿಯರು ನೆರೆದರು ॥ ೯

ದೇಶಾಧಿಪತಿಗಳು ಉಡುಗೊರೆಯೆಸೆಯೆ
ಭಾಸುರಾಶೀರ್ವಾದ ಮಂತ್ರೋಕ್ತವಾಗಿ
ಕೇಶವ ಸೀತಾದೇವಿಗತ್ಯುಕ್ತದಿ
ವಾಸವ ಮೊದಲಾದಮರ ನಾರಿಯರು
ಶಶಿಯನಿಕ್ಕುತ ಧವಳದ ಪದನದ
ವಾಸುವೇಣಿಯರತಿ ಹರುಷದಲಿ ವಿ
ಲಾಸದಿಗಳ ಪಾಡಿ ಪೊಗಳಿದರು ‖ ೧೦

ತುಂಗಪಯೋಧರಿಯಾದ ಬಾಲೆಯರು
ರಂಗರಾನವದೇವ ಜನಕಜೆಯರು
ರಂಗು ಮಾಣಿಕರವರತು ನಗಳಾಗ
ಅಂಗದೀಪ ಸರಿಸಿ ಪರಿಗದೋಳಿಗ
ಭೃಂಗಕುಂತಳೆಯವರತಿ ಹರುಷದಲಿ
ಚಂದ್ರಗಾಮಿಯನುಟ್ಟು ತರುಣಿಯರೀರ್ವರು
ಮಂಗಳಾರತಿಯ ಬೆಳಗೀರೆ ‖ ೧೧

ಮಂಗಲ ಜಯ ಜಯ ರಾಮ ಜಾನಕಿಗೆ
ಮಂಗಲ ಜಯ ಜಯ ಕರವೈರಿ ಸಿರಿಗೆ
ಮಂಗಲ ಜಯ ಜಯ ಶಶಿಕರ ಹರಗೆ
ಮಂಗಲ ಜಯ ಜಯ ಕೃತಿರಿಪುವಿನಯಗೆ
ಮಂಗಲ ಜಯ ಜಯ ಮಧುಸೂಧನಿಗೆ
ಮಂಗಲ ಜಯ ಜಯ ಪೊಡವೀಶನಿಗೆ
ಮಂಗಳಾರತಿಯ ಬೆಳಗೀರೇ ‖ ೧೨

**೬. ಬಲಗೊಂಬೆಶ್ರೀಪದ್ಮಾವತಿಯ**

ಒಲಿದಿಹಬೇಕೆಂದು ಮತಿಯ
ಸುಲಲಿತ ಪದಗಳ ಪಾಡುತ ಮುದದಿ
ಲಲನೆಯರೆಲ್ಲರು ನೆರೆದತಿಮುದದಿ
ಚೆಲುವಿ ಪದ್ಮಾವತಿದೇವಿ ಧರಣೇಂದ್ರನ
ಲಲನೆಯರು ಹಸೆಗೆ ಕರೆದಾರು ‖ ೧

ಕಾರುಣ್ಯನಿಧಿ ಕರುಣಾಳು ಸೇರಿದಾ ಜನರ ದಯಾಳು
ವಾರಿಜಮುಖಿ ವನಿತೆಯರ ಕಟ್ಟಾಣಿ
ನೀರೆಯರೊಳಗೆ ನೀನೆನಿಸು ವಾಣಿ
ಧಾರುಣಿಪತಿ ಜಿನದತ್ತ ಚಿಂತಾಮಣಿ
ಬಾರಮ್ಮ ಹಸೆಗೆ ಕರೆದಾರು ‖ ೨

ಪಡೆದ ತಂದೆಯು ಪ್ರಾಣಕೆಣಿಸಿ

ಬಿಡದೆ ತೇಜಿಯನೇರಿಗಮಿಸಿ

ಪೊಡವಿಪತಿ ಜಿನದತ್ತನಿಗಂದು

ದೃಢವಾಗಿ ವರವಿತ್ತು ಹೊಂಬುಚಗೆಂದು

ನಡೆದು ಬರಲು ಲೊಕ್ಕಿಮರ

ದಡಿ ತಳಿರಿಂದ ಒಡತಿ ಬಾ ಹಸೆಗೆ ಕರೆದಾರು ‖ ೩

ಕಂಬು ಕಂಧರೆ ಕಮಲಾಕ್ಷಿ

ಕುಂಭಿನಿಯೊಳು ಜಿನ ಯಕ್ಷಿ

ಬಿಂಬಾಧರೆಬಿಸಜಾಂಬಕಿ ತಾಯೆ

ನಂಬಿದ ಭಕ್ತರ ಬಿಡದೆ ನೀ ಕಾಯೇ

ಹಂಬಲಿಸುವೆ ನಿನ್ನ ಚರಣಕಮಲ ಜಗ

ದಾಂಬೆ ಬಾ ಹಸೆಗೆ ಕರೆದಾರು ‖ ೪

ನೆರೆ ಶುಕ್ರವಾರದಿಂ ಬಂದು ತರುಣಿ

ಪುರುಷರೆಲ್ಲ ನಿಂದು ಮರುಗಮಲ್ಲಿಗೆ ಜಾಜಿ

ಸ್ವರಗಿಯ ತಂದು ಹರುಷದಿ ಪೂಜೆಯ ಮಾಡುವೆನೆಂದು

ಧರಣೆಂದ್ರನರಸಿ ಪದ್ಮಾವತಿಯಮ್ಮಗೆ

ಕುರುಜಿನರಾರತಿಯ ಬೆಳಗೀರೇ ‖

**<u>೭. ಪಾಹಿಪನ್ನಗವೇಣಿಸನ್ನುತೆ</u>**

ತ್ರಾಹಿ ಜಗಜ್ಜನನಿ ಪಾಹಿ ಪರಾಕು ತಾಯೆ ಪದ್ಮಾವತಿ

ಪಾಹಿಯೆಂದು ಪದಕ್ಕೆರಗಿ ನಾ ಬೇಡುವೆ

ಮೋಹನ ರೂಪೆಮತಿದೋರು ‖ ೧

ಹಸುರು ಪಟ್ಟೆಯ ಶಾಲೆ ಸೆರಗಿಗೆ

ಮಿಸುಪ ಚಿನ್ನದ ಧಾರೆ

ಕುಸುಮ ಗಂಧಿನಿ ನಿನ್ನೆಸೆವ

ನಾಸಿಕದೊಳು ಹೊಸ ಮುತ್ತಿನ ಮಣಿ

ಹಸನದೊಳಿಟ್ಟಹ ಹೊಸ ಚಿನ್ನದ ಗೊಂಬೆ

ಹಸೆಗೆ ಕರೆದಾರು ‖ ೨

ಕಡುಬೆಡಗಿನ ಜಾಣೆ ನಿನಗೆಣೆ

ಪೊಡವಿಯೊಳಗೆ ಕಾಣೆ

ಬಡನಡುವಿನೊಳಿದ್ದಿಹ ಬೆಡಗಿನೊಡ್ಯಾಣವು

ಜಡೆಗೊಂಡೆ ಚೌರಿರಾಗಟೆಯಿಟ್ಟ ದೇವಿಯ
ಮಡದಿಯರು ಹಸೆಗೆ ಕರದಾರು ॥ ೩

ಜಾಜಿಮಲ್ಲಿಗೆ ಮಾಲೆ ಮುಡಿಯೊಳು
ರಾಜಿಪ್ಪ ಮುದ್ದುಬಾಲೆ
ಮಾಜದೆ ನಿಮ್ಮನು ಪೂಜಿಸಿದವರಿಗೆ
ಸೋಜಿಗದಿಂದಲೇ ಜಾಜಿ ಪೂಗಳನೀವ
ಪೂಜಗದೊಡತಿಯ ಹಸೆಗೆ ಕರೆದಾರು ॥ ೪

ಚಂದಿರನಂತೆ ಹೊಳೆವ ಮೊಗದರ
ವಿಂದದ ನೊಸಲೊಳಗೆ
ಚಂದದಿ ದಟ್ಟ ಕುಂಕುಮ ಮುಂದಲೆ ಬೊಟ್ಟು
ನಿಂದರಾಜಿಪ ಮಾತಂಗ ಗಮನೆಯರು
ಚಂದದಿಂದ ಹಸೆಗೆ ಕರೆದಾರು ॥ ೫

ಲೊಕ್ಕಿಯ ಮರದೊಳಗೆ ನೆಲಸಿಹ
ಅಕ್ಕಪದ್ಮಾವತಿಯ ರಕ್ಕಸ ಕುಚೆಯರು
ಚೊಕ್ಕ ಶೋಭನವ ಇಕ್ಕೆಲದಲಿ ಪಾಡಿ
ಗಕ್ಕನೆ ನಿಮ್ಮನು ಅಕ್ಕರಿಂದ ಹಸೆಗೆ ಕರೆದಾರು ॥ ೬

ಧರೆಯೊಳಧಿಕವಾದ ವಿಂಶತಿ
ಪುರದ ಚಂದ್ರ ಪ್ರಭನೇ ವರ ಮಂ
ದಿರದೊಳು ಸ್ಥಿರವಾಗಿ ನೆಲಸಿಹ
ಪುರುಷ ಮೂರುತಿ ಪದ್ಮಾವತಿಯೆಮ್ಮಗೆ
ಕುರುಜಿನರಾರತಿಯ ಬೆಳಗೀರೇ ॥ ೭

## ೬. ಮಂಗಳಾರತಿಯ ಹಾಡುಗಳು

**೧. ಮಂಗಳಂಮಂಗಳಂಬ್ರಹ್ಮದೇವಿಗೆ**
**ರಾಗ: ಸುರಟಿ ಅಷ್ಟ ತಾಳ**

ಮಂಗಳಂ ಮಂಗಳಂ ಬ್ರಹ್ಮದೇವಿಗೆ ॥ ಪಲ್ಲವಿ

ಕಂಡಮಾತ್ರದಿ ನೆಲೆಗೊಂಡ ತಮ್ಮ ಪ್ರ
ಚಂಡ ತಾನವನುಳಿದಡಿಗೆರಗಿ
ಕಂಡಕಂಡಗೆ ಪೋಪ ಹಿಂಡು ಭೂತಗಳಿಗೆ
ಗಂಡನದ ದೋರ್ದಂಡ ವಿಕ್ರಮಗೆ ॥ ೧

ಧಾರಣಿಯೊಳು ಕ್ರೂರಮರಿಯರೊಳಗಾನೆ
ಧೀರೆಯಲ್ಲದೆ ಪೆರತಿಲ್ಲೆಂದು
ವಾರೆನೋಟದಿ ಸೂರೆಗೊಂಬೆನೆಂಬ ಮಾಗಿಯ
ದೊರಕಿಸಿದವಗೆ ಜಯಮಂಗಳಂ ॥ ೨

ಚಾರುಸಿರಿಗೆ ತವರೂರಾದ ಬೆಳ್ಗೊಳ
ಧಾರಣಿಧರದ ಮಧ್ಯದಿ ನೆಲಸಿ
ಚಾರುಕೀರ್ತಿಮುನಿ ಪಂಡಿತಾರ್ಯರಿಗುಪ
ಕಾರಿಯಾದ ಬ್ರಹ್ಮದೇವರಿಗೆ ॥

**<u>೨. ಪ್ರಥಮಭಿಗರ್ಭವತರಣ</u>**

ಪ್ರಥಮಭಿ ಗರ್ಭವತರಣ ಪರಾಕು
ದ್ವಿತೀಯ ಕಲ್ಯಾಣಭಿಷೇಕ ಪರಾಕು
ತೃತೀಯಾದಿ ಪರಿನಿಷ್ಕ್ರಮಣ ಪರಾಕು
ಕರಿಯ ಕಟ್ವಾಣಿ ಕೇವಲಿಯೇ ಪರಾಕೆಂದು
ಜಿನೇಂದ್ರನಿಗಾರತಿಯ ಬೆಳಗಿದರು ॥ ೧

ಒಂದು ಪೀಠವು ನವರತ್ನ ಪರಾಕು ಮ
ತ್ತೊಂದು ಪೀಠವು ಅಪರಂಜಿ ಪರಾಕು
ಒಂದು ಪೀಠವು ವೈಢೂರ್ಯ್ಯ ಪರಾಕು
ಒಂದು ಕಿಂಕೋರ್ವ ಚಂ ಪರಾ
ಕೆಂದು ರತ್ನದಾರತಿಯ ಬೆಳಗಿದರು ॥ ೨

ಸಮವಸರಣದಧಿನಾಥ ಪರಾಕು
ಕಮಲಪೀಠ ನಿವಾಸ ಪರಾಕು
ಸುಮನಪಾರ್ಚಿತ ಪಾದಕಮಲ ಪರಾಕು
ಸ್ವಾಮಿಚಂದ್ರಭವ ಜಿನಪಾಹಿ ಪರಾಕೆಂದು
ಜಿನೇಂದ್ರನಿಗಾರತಿಯ ಬೆಳಗಿದರು ॥

**<u>೩. ಬೆಳಗಪ್ಪಜಾವದಲಿ</u>**
**ಉದಯ ರಾಗ**

ಬೆಳಗಪ್ಪ ಜಾವದಲಿ ಕಂಡೆ ನಾ ಸ್ವಪ್ನವನು
ಇಳೆಗಧಿಕ ಲಕ್ಷ್ಮೀಶಯನೈಶ್ವರ್ಯಂಗೆ
ತೊಳತೊಳಗು ಜಪಮಾಲೆ ಬೆರಳಲ್ಲಿರುವುತ್ತ
ಫಳಿಲನೆ ಬರುವದೈ ನಮ್ಮ ಮನೆಗೆ ॥ ಪಲ್ಲವಿ

ಆದಿಶಾಸ್ತ್ರವ ಬಲ್ಲವ ಆಚಾರ್ಯರೈದು ಜನ
ಓದಿಸುವ ಮಕ್ಕಳೀರಾರು ಜನ
ಬೋಧಿಸುವ ಪಂಡಿತರು ನಾಲ್ಕಾರು ಜನ ಸಹಿತ
ಪಾದಮಾರ್ಗದಿ ಬರುವ ನಮ್ಮ ಮನೆಗೆ ॥ ೧

ಕಾಮಕ್ರೋಧವ ಬಿಟ್ಟು ಕರದಿ ಸಿಂಚವ ಪಿಡಿದು
ಸ್ವಾಮಿ ಸರ್ವಜ್ಞರಾ ಸ್ಥಾನದಿಂದ
ಪ್ರೇಮದಿಂದಲಿ ಬರುವ ನಮ್ಮ ಬಾಗಿಲ ಮುಂ
ದೆ ಮಾಲೆಯನಿಟ್ಟು ಬರುವದಾ ಕಂಡೆ ॥ ೨

ಬಂದ ಮುನಿಗಳ ನಾನು ವಂದಿಸಿ ಬಲಗೊಂಡು
ಚೆಂದದಿಂದವರ ಬಾವಲಿಯನಿರಿಸಿ
ವಂದನೆಯ ಮಾಡಿ ಮಂದಿರಕೆ ಕರೆದೊಯ್ದು
ಇಂದು ಮುನಿರಾಯ ಬರುವುದಾ ಕಂಡೆ ॥ ೩

ಅಷ್ಟವಿಧಾರ್ಚನೆಗಳಿಂದ ಪಾದಪೂಜೆಯ ಮಾಡಿ
ಸಾಷ್ಟಾಂಗವೆರಗಿ ತಾವು ಭಕ್ತಿಯಿಂದ
ಕೊಟ್ಟರವುಂಟೆನಾಗೆಂದು ದಿವ್ಯ ಫಲವನು ಹರಸಿ
ಅಷ್ಟಮದೈಶ್ವರ್ಯ ಆಗಲೆಂದು ಬೆಳಗಿಪ್ಪ ॥ ೪

ಅಂಗನೆಯರೈವರು ಮಂಗಳಾರತಿಯವಿಡಿದು
ಶೃಂಗಾರವಾಗಿ ತಾವು ಭಕ್ತಿಯಿಂದ
ರಂಗುಳೇದಾರುತಿಯೆತ್ತುವ ಮಾಗಿ ಕೋಗಿಲೆಯಂತೆ
ರಾಗವನು ಪಾಡುತ್ತಯೋಗಿ ಸಿದ್ಧಾಂತರಿಗೆ ॥ ೫

ಆರತಿಯನೆತ್ತಿ ಆಗಮ ಸಿದ್ಧಾಂತಯೋಗಿಗಳ
ಧರ್ಮೋಪದೇಶವನು ಯೋಗಿಗಳ
ಉಪದೇಶವನು ಮುಗುಳ್ನಗೆಯಿಂದ ಪೇಳಿದ
ಶ್ರಾವಕ ಸೋಮಗಳಿಗೆ ॥ ೬

## <u>೩. ಮಂಗಲಂಮಂಗಲಂಶಾರದಾ</u>

ಮಂಗಲಂ ಮಂಗಲಂ ಶಾರದಾದೇವಿ
ಮಂಗಲಂ ಮಂಗಲಂ ಭವ್ಯರಪ್ರಿಯೆ
ಮಂಗಲಂ ಮಂಗಲಂ ದಯಾನಿಧಿ
ಮಂಗಲಂ ಚಂದ್ರನ ಶಾಂತೆ ಮಂಗಲಂ ॥ ಪಲ್ಲವಿ

ಸುರನರೋರಗವಂದ್ಯೆ ಸುಜ್ಞಾನವಾರುಧಿ
ಸುರುಚಿರತರ ರೂಪೆ ಸರಸಕಲಾಪೆ
ಸಾರಮತಿಯ ಕೊಟ್ಟು ಸಲಹು ಧೀರೆಯೇ
ಸಾರಸುಜ್ಞಾನೆ ಸಂಪನ್ನಗವೆನ್ನಿ ॥ ೧

ವಾಣಿ ವಿಶ್ರುತಗೀರ್ವಾಣಿ ಸುಪ್ವಾಣಿಗೆ
ವೀಣೆ ಪುಸ್ತಕ ಕಂಠ ಪಿಡಿದಳಿಗೆ
ಮಾಣದೆ ವರವಿತ್ತು ಪೊರೆವ ಶ್ರೀದೇವಿಗೆ
ತೃಣತ್ರೈಲೋಕ್ಯವಿನುತ ಚಾರಿಣಿಗೆ ॥ ೨

ಮಂದಯಾನೆಗೆ ಮುದುವಾಣಿ ಸುಪ್ವಾಣಿಗೆ
ಮಂದಾರ ಚಲದಿರೊ ಧಾರುಣಿಗೆ
ವಂದಿಪ ಭವ್ಯರ ಉದಯವ ಪಾಲಿಪ
ಸುಂದರ ಶುಭಕರ ಶಾರದದೇವಿಗೆ ॥ ೩

ಜಿನಮುಖಾಂಬೋಜೆಗೆ ಘನನೀಲವೇಣಿಗೆ
ಮನುಜಲೋಚನೆ ದಿವ್ಯಮೂರುತಿಗೆ
ಮನಸಿಜ ಮರ್ದನೆ ಮನುಕುಲವರ್ಧನೆ
ಘನಮುನಿ ಜನ ವಂದ್ಯೆ ಶ್ರುತ ವಿಶಾರದೆಗೆ ॥ ೪

ಧರೆಯೊಳತ್ಯಧಿಕ ಬೆಳ್ಗುಳಪುರ ಮಠವಾಸೆ
ಸ್ಥಿರದಿ ಭವ್ಯರಿಗತಿ ಗುಣಗಣವಾಸೆ
ಗುರುಪಂಡಿತಾರ್ಯೋಧ್ಧರಣಿ ವಿಚಕ್ಷಣೆ
ಪರಮ ದಯಾನಿಧಿ ಶ್ರೀ ಶಾರದದೇವಿಗೆ ॥ ೫

## <u>೪. ಜಯಮಂಗಲಂನಿತ್ಯ</u>

ಜಯಮಂಗಲಂ ನಿತ್ಯ ಶುಭಮಂಗಲಂ
ಜಯ ಸರ್ವಾಣೇಕ್ಷ ಕೂಷ್ಮಾಂಡಿಣಿ ದೇವಿಗೆ
ಜಯಮಂಗಲಂ ನಿತ್ಯ ಶುಭಮಂಗಲಂ ॥ ಪಲ್ಲವಿ

ಘನಗತಿಶಯಕೆ ಚರವಿನುತ ಪಾದದ್ವಯಗೆ
ಮುನಿಜನ ಹೃದಯ ಸಜ್ಜನ ಪ್ರಿಯೆಗೆ
ಜನನಿ ಜಿನಪದ ಭಕ್ತೆ ಘನಶೀಲೆ ಸಂಪ್ರೀತೆ
ವನಜಲೋಚನದೇವಿ ಭವ್ಯ ಸಂಜೀವಿಗೆ ॥ ೧

ಸಿಂಹವಾಹನದಿರೆ ಸುಜ್ಞಾನ ಗುಣಾದರೆಗೆ
ಸಿಂಹಮಧ್ಯದ ದೇವಿ ಸುಗುಣ ಗಂಭೀರೆ
ಸಿಂಹಪೀಠಕೆ ಕರ್ತೆ ಸುರಕುಜಕೆ ಸಮದಾತೆ
ಸಾಮಜಾಂತಕದೇವಿ ಭಕ್ತವತ್ಸಲೆಗೆ ॥ ೨

ಧರ್ಮ ಚಕ್ರೋದಾರ ನಿರ್ಮಲ ಸ್ವರೂಪನಿಗೆ
ಧರ್ಮ ಪ್ರಭಾವನೆಯೊಳಿರೆವುತಿಹಗೆ
ದುರ್ಮೋಹವನು ಹರಿಸಿದಮಲ ಜಿನಪನಯಕ್ಷೆ
ನಿರ್ಮೋಹಿ ಗುಣಾದರೆಯ ಸರಸಿಜಾಂತಕಗೆ ॥ ೩

ನಾಮಸಾಸಿರಕೊಡೆಯ ನೇಮಿಜಿನಪನಯಕ್ಷೆ
ಪ್ರೇಮದಿಂ ಭವ್ಯರನು ಸಲಹುತಿಹಳೆ
ಶ್ರೀಮನ್ಮಾಹಾ ಧೀರೆ ಮಮ ಹೃದಯದೊಳು ನಿಂದು
ಪ್ರೇಮದಿ ಸಲಹುತಿಹ ಕೂಷ್ಮಾಂಡಿನೀ ದೇವಿಗೆ ॥ ೪

ಕ್ಷಿತಿಯೊಳಗತಿಶಯದ ಚಂದ್ರಗಿರಿಯೊಳೆಸೆವ
ಅತಿಶಯದ ಕತ್ತಲೆಯ ಬಸದಿಯೊಳು ನೆಲೆಸಿ
ಸತತ ಶ್ರೀಗುರು ಪಂಡಿತಾರ್ಯನು ರಕ್ಷಿಸುತಿರ್ಪ
ಅತಿಶಯದ ಮೂರ್ತಿ ಶ್ರೀಕೂಷ್ಮಾಂಡಿನೀ ದೇವಿಗೆ ॥ ೫

**೫. ಮಂಗಳಾರತಿಯತಂದೆತ್ತಿರೆ**

ಮಂಗಳಾರತಿಯ ತಂದೆತ್ತಿರೆ ಜಯ
ಮಂಗಳ ಶುಭಮಂಗಲ ಶ್ರೀ ಬ್ರಹ್ಮದೇವನಿಗೆ
ಮಂಗಳಾರತಿಯ ತಂದೆತ್ತರೆ ॥ ಪಲ್ಲವಿ

ಕಮಲಲೋಚನನಾದ ವಿಮಲಸುಜ್ಞಾನಿಗೆ
ಮಮ ಹೃದಯದೊಳಿದ್ದು ಸಲಹುವವಗೆ
ಮಮತೆಯಿಂ  ಭವ್ಯರ ಸಲಹುವ ದೇವಗೆ
ಸುಮನಬಾಣನ ರೂಪ ಜರಿದವಗೆ ॥ ೧

ಭೂತಭಯಂಕರ ಬೇತಾಳಮರ್ದನ
ವೀತರಾಗನ ಪಾದಭಕ್ತನಿಗೆ
ಭೂತಳದೊಳು ಸತ್ಯಮೂರ್ತಿಯೆಂದೆನಿಸಿದ
ಭೂತಳಪತಿ ಬ್ರಹ್ಮರಾಯನಿಗೆ ॥ ೨

ತುರಗವಾಹನರೂಢ ತುಂಗ ಪರಾಕ್ರಮಿ
ಗುರುಕುಚೆ ಮನುನಿ ಪ್ರಿಯನಿಗೆ
ಸಾರರತ್ನಾಭರಣ ಧೀರಲಂಕೃತ
ವಾರುಧಿಸಮ ಗಂಭೀರನಿಗೆ ‖ ೩

ಶೀತಳ ಜಿನಪನ ಯಕ್ಷನೆಂದೆನಿಸಿ ತಾ
ಭೂತಳದೊಳಗತಿ ಮೆರೆವವಗೆ
ಭೂತಳದೊಳಗಿಂದ್ರಗಿರಿಯ ಕಂಬದೊಳ್ನಿಂದು
ಪ್ರೀತಿಯಿಂ ಭಕ್ತರ ಸಲಹುವಗೆ ‖ ೪

ಧರೆಯೊಳತ್ಯಂತ ಬೆಳ್ಗುಳಗಿರಿ ವರದೊಳು
ಸ್ಥಿರಸುಖದೊಳತಿ ನೆಲಸಿಹಗೆ ವರಭವ್ಯಜನರನು
ಕರುಣದಿ ರಕ್ಷಿಪ ಕರುಣಾಮೂರುತಿ ಬ್ರಹ್ಮದೇವನಿಗೆ
ಮಂಗಲಾರತಿ ತಂದೆತ್ತಿರೆ ಜಯಮಂಗಳಂ ಶುಭಮಂಗಳಂ ‖

**೬. ಮಂಗಲಂಮಂಗಲಂಭವಂತುತೆ**

ಮಂಗಲಂ ಮಂಗಲಂ ಭವಂತುತೆ
ಮಂಗಲಂ ಮಂಗಲಂ ತೀರ್ಥೇಶ್ವತೆ
ಮಂಗಲಂ ಮಂಗಲಂ ಕರ್ಮವಿನಾಶಗೆ
ಮಂಗಲಂ ಮಂಗಲಂ ಪಾರೀಶ್ವ ಜಿನಪತೆ ‖ ಪಲ್ಲವಿ

ವಾರಣಾಸಿಯ ಪುರವರಕಧಿದೇವಗೆ
ಸುರನರೋರಗ ವಂದ್ಯ ಸುಜ್ಞಾನಧರೆಗೆ
ಉರಗಲೋಕದ ಪತಿಧರಣೇಂದ್ರನೊಡೆಯಗೆ
ವರಪದ್ಮಾವತಿಯಿಂದ ಸೇವೆಗೊಂಬವಗೆ ‖ ೧

ಪಚ್ಚವರ್ಣದ ರೂಪ ಫಣಿಯ ಲಾಂಛನನಿಗೆ
ಪಂಚಬಾಣನ ಹಮ್ಮ ಮುರಿದವಗೆ
ಚಂಚಲವಿಲ್ಲದೆ ಕಮಠನ ಜಯಿಸಿ ತಾ
ಪಂಚ ಪಾತಕಗಳ ಗೆಲಿದವಗೆ ‖ ೨

ನವಕೋಟಿ ಮುನಿವಂದ್ಯ ಪಾರಿಶ್ವ ಜಿನಪಗೆ
ನವಪದಾರ್ಥದ ಬೇಧವ ಪೇಳ್ದವಗೆ
ನವರಸಭರಿತೆ ಬ್ರಹ್ಮದೇವಪುತ್ರಗೆ
ನವರತ್ನ ಪ್ರಮಣದುಸ್ಸ್ಯಧನಿಗೆ ‖ ೩

ವಿಶ್ವಸೇನನಪುತ್ರ ಶಾಶ್ವತಕಾಯಿಗೆ
ಶಾಶ್ವತ ಸುಖದೊಳಗಿರುವವಗೆ
ಶಾಶ್ವತ ಮತಿಯಿತ್ತು ಭವ್ಯರ ಪಾಲಿಪ
ವಿಶ್ವಸ್ವರೂಪ ಪಾರಿಶ್ವನಾಥನಿಗೆ ॥ ೪

ಕ್ಷಿತಿಯೊಳತ್ಯಧಿಕ ಬೆಳ್ಗೊಳದೊಳಗಿರುತಿಹ
ಅತಿಶಯದೊಳು ಚಂದ್ರಗಿರಿಯೊಳಿಪ್ಪವಗೆ
ಯತಿ ಪಂಡಿತಾರ್ಯರ ಕರುಣದಿ ರಕ್ಷಿಪ
ಅತಿಶಯ ಮೂರ್ತಿ ಪಾರೀಶ್ವದೇವನಿಗೆ ॥ ೫

**೭. ಆದಿಯೊಳಗೆಚಟ್ಟರಪಡೆಯ**

ಆದಿಯೊಳಗೆ ಚಟ್ಟರಪಡೆಯ ಗೆಲ್ದು
ಸಾಧಿಸಿ ಮುಕ್ತಿ ಪದವ ಪಡೆದ
ವಿಧವಿಧ ರತ್ನತ್ರಯಗಳ ಪೇಳ್ದ
ಆದಿ ಜಿನೇಶಗಾರತಿಯೆತ್ತಿರೇ ॥ ೧

ಅಜಹರಿ ಪೂಜಿತ ಸುಜನನಾರ್ಚಿತ ಪಾದ
ತ್ರಿಜಗವಂದಿತ ಪಾದ ಪದ್ಮನಿಗೆ
ಗಜರಿಪು ಪೀಠ ನಿವಾಸ ಸರ್ವೇಶಗೆ
ಅಜಿತ ಜಿನೇಶಗಾರತಿಯೆತ್ತಿರೇ ॥ ೨

ಶಂಬರಾರಿಯ ಕರದಂಬ್ರದ ಮುರಿದು ಬಾ
ವಾಂಬುಧಿಯನು ದಾಂಟಿ ಮುಕ್ತಿ
ಯೆಂಬ ಕುಂಭಿನಿಯೊಳಗಿಹ ಕುಶಲಯನೆರೆದ ಶ್ರೀ
ಶಂಬವ ಜಿನಪಗಾರತಿಯೆತ್ತಿರೇ ॥ ೩

ಅಭಿಮತ ಸಿದ್ದಿಯ ಆಗಮ ವೃದ್ಧಿಯ
ಸುಭಮತಿಗಳ ನಿತ್ಯ ಸಲಹುವಗೆ
ಉಭಯಲಕ್ಷ್ಮಿಯ ರಮಣಗೆ
ಅಭಿನಂದನ ತ್ರಿಭುವನಪತಿಗಾರತಿಯೆತ್ತಿರೇ ॥ ೪

ಸಮವಸರಣ ಮಧ್ಯ ವಿಮಲ ಪೀಠಾಗ್ರದಿ
ಕಮಲ ನಾಲ್ಬೆರಳ ಸೋಂಕದೆ
ಸುಮನ ಬಾಣನ ಗೆಲ್ದ ಸುಮತಿ ಜಿನೇಶಗೆ
ರಮಣಿಯರೊಲಿದಾರತಿಯೆತ್ತಿರೇ ॥ ೫

ಪದ್ಮಲಾಂಛನಯುತ ಪದಪದ್ಮಯುಗಲಗೆ
ಪದ್ಮಶಾಖೇಂದು ಪ್ರಕಾಶನಿಗೆ
ಪದ್ಮಪೀಠದಿ ನೆಲಸಿದ ಪದ್ಮಪ್ರಭನಿಗೆ
ಪದ್ಮನಿಯರೊಲಿದಾರತಿಯೆತ್ತಿರೇ ॥ ೬

ಅಪವರ್ಗಮಾರ್ಗವ ಕೃಪೆಯಿಂದ ಸಾಧಿಸಿ
ಮಿಮಲ ಸಿದ್ಧಿಯನಾಂತ ಶ್ರೀಕಾಂತಗೆ
ಉಪಮೆಗೊಲಿದ ಶ್ರೀ ಸುಪಾರೀಶ್ವನಾಥಗೆ
ಚಪಲ ನೇತ್ರಿಯರಾರತಿಯೆತ್ತಿರೇ ॥ ೭

ಚಂದ್ರಲಾಂಛನ ಚಂದ್ರಪುರವರಾಧೀಶ್ವರ
ಚಂದ್ರಕೋಟಿ ಪ್ರಕಾಶನಿಗೆ
ಚಂದ್ರಪ್ರಭ ಜಿನರಾಜಗೆ ಮುದದಿಂದ
ಚಂದ್ರವದನೆಯರಾರತಿಯೆತ್ತಿರೇ ॥ ೯

ಜಾತಿ ಜರಾಮರನಾತೂರ ದೂರಗೆ
ನೀತಿ ನಿರ್ಮನಿರಪೇಕ್ಷನಿಗೆ
ಶಾತ ಕುಂಭೋಪಮ ನೂತನ ವರನಿಗೆ
ಶೀತಳ ಜಿನಪತಿಗಾರತಿಯೆತ್ತಿರೇ ॥ ೧೦

ಕಾಯ ಜಸಾಯಕ ಮಾಯಾ ವಿರಹಿತಗೆ
ನಾಯ ತ್ರೈಲೋಕ್ಯದಾಯಕಗೆ
ಶ್ರೇಯೊವೃದ್ಧಿ ಸಹಾಯನೆಂದೆನಿಸಿದ
ಶ್ರೇಯಾಂಸ ಜಿನಪಗಾರತಿಯೆತ್ತಿರೇ ॥ ೧೧

ದೋಷ ವಿನಾಶಗೆ ಸಾಸಿರನಾಮಗೆ
ಕೇಶವರ್ಜಿತ ಪಾದ ಪದ್ಮನಿಗೆ
ಭಾಸುರ ವಿಕೋಟಿ ತೇಜ ಪ್ರಕಾಶಗೆ
ವಾಸುಪೂಜ್ಯೇಶಗಾರತಿಯೆತ್ತಿರೇ ॥ ೧೨

ದ್ಯುಮಣೀಂದು ಕೋಟಿವಿರಾಜಿತ ತೇಜಗೆ
ಕಮಲ ಪೀಠದಿ ನಿಂತ ಕಾರುಣ್ಯಗೆ
ವಿಮಲಬೋಧಗೆ ವಿಮಲಾಂಗ ಶುಭಾಂಗಗೆ
ವಿಮಲನಾಥನಿಗಾರತಿಯೆತ್ತಿರೇ ॥ ೧೩

ಮನಸಿಜ ಮರ್ಧನ ಮನುಕುಲ ವರ್ಧನ
ಘನಕರ್ಮಾರಣ್ಯದಾವಾನಲಗೆ

ಮುನಿಜನವಂದ್ಯಗನಂತಜಿನೇಶಗೆ
ಚಿನುಮಯ ರೂಪಗಾರತಿಯೆತ್ತಿರೇ ॥ ೧೪

ಕರ್ಮಕಾಂತರದವರ್ಮದಲೊಳೆದು ಕಡಿದು
ಧರ್ಮೋಧರ್ಮೋಪದೇಶದಿಂದ
ಸಮ್ಯೋಕ್ಷಪದವ ತೋರಿದ ಧರ್ಮನಾಥಗೆ
ನಿರ್ಮಲಮನದೊಳಾರತಿಯೆತ್ತಿರೇ ॥ ೧೫

ಅಂತರಂಗದಿ ನಿಂತು ಚಿಂತಿಸಿದವರ್ಗೆ
ಸಂತೋಷ ಸುಖವಿತ್ತು ಸಲಹುವಗೆ
ಶಾಂತಸ್ವರೂಪಗೆ ಶಾಂತಿ ಜಿನೇಶಗೆ
ಕಾಂತೆಯರೊಲಿದಾರತಿಯೆತ್ತಿರೇ ॥ ೧೬

ಅಂತಕಪಂಥದ ಸಂತತಿಯನು ಮೆಟ್ಟಿ
ಚಿಂತಿತಮುಕ್ತಿ ಕಾಂತೆಯ ನೆರೆದು
ಸಂತತ ಸೌಖ್ಯ ನಿರಂತರದೊಳಗಿಹ
ಕುಂಥುನಾಥನಿಗಾರತಿಯೆತ್ತಿರೇ ॥ ೧೭

ಪರಮ ಪಾವನಿಗೆ ಪಾಪವಿನಾಶಗೆ
ಸುರುಚಿರ ಸುಜ್ಞಾನಕೋಶಗೆ
ಸುರಪತಿವಂದ್ಯೆಗೆ ವರಮುನಿ ಚಂದ್ರಗೆ
ಅರಜಿನಪತಿಗಾರತಿಯೆತ್ತಿರೇ ॥ ೧೮

ಫುಲ್ಲಬಾಣನ ಸರಳೆಲ್ಲವ ಮುರಿದಿಕ್ಕಿ
ನಿಲ್ಲದೆ ಮುಕ್ತಿನಲ್ಲಳ ನೆರೆದು
ಉಲ್ಲಾಸದೊಳು ಕೊಲ್ಲದ ಧರ್ಮವ ಪೇಳ್ವ
ಮಲ್ಲಿಜಿನೇಶಗಾರತಿಯೆತ್ತಿರೇ ॥ ೧೯

ಮುನಿಜನ ಮುಖ್ಯ ಮೂಲೋಕ ವಂದಿತಸೌಖ್ಯ
ಚಿನುಮಯ ರೂಪಗೆ ಚಿದಾನಂದಗೆ
ಜಿನನಜಿರಾಪುರನಾದಿ ಸಂಹರಗೆ
ಮುನಿ ಸುವ್ರತೇಶಗಾರತಿಯೆತ್ತಿರೇ ॥ ೨೦

ಯಮನಿಯಮವನಾಂತು ಕ್ರಮದಿ ತಪವಮಾಡಿ
ಯಮನಬಾಧೆಯನಾಂತು ಜೈಸಿದ ದೇವಗೆ
ಸಮತೆಯಿಂದಲಿ ಮೋಕ್ಷರಮೆಯನಾಳಿದ
ನಮಿಜಿನಪತಿಗಾರತಿಯೆತ್ತಿರೇ ॥ ೨೧

ರಾಮಕೇಶವನಾಥ ಸುರನರವಂದಿತ
ಕಾಮವಿಜಯ ಕಾಮಿತಾರ್ಥನಿಗೆ
ಸೋಮಾರ್ಕಕೋಟಿ ಕಿರಣರಂಜಿತಪಾದ
ನೇಮಿಜಿನೇಶಗಾರತಿಯೆತ್ತಿರೇ ॥ ೧೧

ಸಾರಸಾರ ವಿಚಾರ ಪರಾಯಣ
ಕಾರುಣಿಕಾತ್ಮ ಮಹಾತ್ಮನಿಗೆ
ಘೋರೋಪ ಸ್ವರ್ಗಪಜಯ ಪಾರೀಶ್ವೇಶಗೆ
ನಾರಿಯರೊಲಿದಾರತಿಯೆತ್ತಿರೇ ॥ ೧೩

ಧಾರುಣಿಗಧಿಕವಾಗಿಹ ವೇಣುಪುರದ ಶ್ರೀ
ಚಾರು ನಿರ್ಮಲ ಚಾರುತಿರ್ಥಂಕರ
ಕಾರುಣ್ಯದಿಂ ಸಲಹುವ ವೀರನಾಥಗೆ
ವಾರಿಜಾಕ್ಷಿಯರಾರತಿಯೆತ್ತಿರೇ ॥ ೧೪

ವಾಣಿಗೆ ವರದ ಕಲ್ಯಾಣಿಗೆ ಪನ್ನಗ
ವೇಣಿಗೆ ವೀಣಾವರ ಪಾಣಿ
ಜಾಣೆಗೆ ಜಗಕಾರಿತ್ರಣಿಗೆ ಪ್ರಾಣಿಗೆ
ಮಾಣಿಕಮಯದಾರತಿಯೆತ್ತಿರೇ ॥ ೧೫

ವೃಷಭಸೇನಾಧಿಗವಿತ ಉತ್ತಮ ಗಣಧರರೆಂಬರೇ
ನವ ಮೂಷರು ಗುಂದಿನವ ಕೋಟಿಯು
ವ ಸುಧೆಯಿಂದಲಿ ಮುಕ್ತಿಗೆ ವೇಶಿಗಳಿಗೆಲ್ಲ
ಶಶಿಮುಖಿಯರುಗಳಾರತಿಯೆತ್ತಿರೇ ॥ ೧೬

ಪದ್ಮವದನೆ ಪದ್ಮಸದನೆ ಪದ್ಮನಯನೆ
ಪದ್ಮಗಂಭಿನಿಪಾಶ ವರಪಾಣಿಗೆ
ಪದ್ಮಸನ್ನಿಭ ಪಾದಯುಗಳಿಗೆ ಪದ್ಮಾಂಬೆಗೆ
ಪದ್ಮಿಣಿಯರುಗಳಾರತಿಯೆತ್ತಿರೇ ॥ ೧೭

<u>**೮. ಜಾತರೂಪವನುಕಳೆದು**</u>

ಜಾತರೂಪವನು ಕಳೆದು ಎಂಟು ಕರ್ಮವ
ಬಾತಿಯಿಂಕೆರಿಸಿ ಸಮವಸರಣಾದಿ
ನೀತಿಯೊಳಗೆ ನಡೆಯೆಂದು ಧರ್ಮವ ಪೇಳ್ದ ಶ್ರೀ
ವೀತರಾಗನಿಗಾರತಿಯೆತ್ತಿರೇ ॥ ೧

ಬುದ್ಧಿಯಿಂದಷ್ಟಕರ್ಮವ ಗೆಲಿದಾತಗೆ
ಸಿದ್ಧಾಷ್ಟಗುಣ ಸಂಪೂರ್ಣನಿಗೆ
ಶುದ್ಧಾಷ್ಟ ಸೃಷ್ಟಿಕದ ಮೋಕ್ಷ ಲಕ್ಷ್ಮೀಶಗೆ
ಸಿದ್ಧರಿಗೊಲಿದಾರತಿಯತ್ತಿರೇ ॥ ೧

ಆಚಾರವನು ಬಿಟ್ಟು ನಡೆವ ಜೀವಗಳಿಗೆ
ಆಚರಣೆಯ ಪೇಳಿ ಬೋಧಿಸುವ
ಖೇಚರನರಸುರವಂದ್ಯರೆಂದೆನಿಸುವ
ಆಚಾರ್ಯರತಿಗಾರತಿಯೆತ್ತಿರೇ ॥ ೩

ಶಬ್ದತರ್ಕಾಗಮ ಸಿದ್ಧಾಂತ ಶಾಸ್ತ್ರವ
ಬುದ್ಧಿಯಿಂ ತಿಳಿದುಪದೇಶಿಸುವ
ಮರ್ದಿಸಿ ಕರ್ಮ ಗೆಲಿದ ಪಾಠಕರಿಗೆ
ಶುದ್ಧಮನದೊಳಾರತಿಯೆತ್ತಿರೇ ॥ ೪

ಭೇದಿಸಿದಾತ್ಮನ ಚಲಿಸದಂದದಿ ನಿಜ
ಸಾಧನದಿಂದ ಸಾಧಿಸುತಿರುವ
ಮೇದಿನಿಯೊಳು ಸರ್ವಸಾಧುಗಳಾಂಘ್ರಿಗೆ
ಓದಿನೀಪದನಾರತಿಯೆತ್ತಿರೇ ॥ ೫

ಅರಹಂತ ಸಿದ್ಧರಾಚಾರ್ಯ್ಯರುಪಾಧ್ಯಾಯ
ವರಸರ್ವಸಾಧುಗಳೆನಿಸುವ
ಗುರುಗಳೈವರ ಮಂತ್ರಧ್ಯಾನ ಪಿಡಿದು ಪಂಚ
ಗುರುಗಳಿಗೊಲಿದಾರತಿಯೆತ್ತಿರೇ ॥ ೬

ಮನುಮೇಶಾಂಬುಧಿವರ್ಧನ ಚಂದ್ರಗೆ
ಇನಶಶಿಕೋಟಿ ಪ್ರಕಾಶನಿಗೆ
ಘನತರ ಸೌಖ್ಯಪ್ರದಾಯಕ ಪುರುಜಿನ
ಜಿನರಾಜಗೊಲಿದಾರತಿಯೆತ್ತಿರೇ ॥ ೭

ಗಜಲಾಂಛನಯುತಲಿ ಜಿತಜಿನೇಶಗೆ
ವಿಜಿತಮಾದನ ಶಂಭವನಾತಗೇ
ಗಝುರಿಹುವಿಷ್ಟರ ಅಭಿನಂದನಿಗೆ
ಶ್ರೀ ಜಗವಂದಿತ ಸುಮತೀಶನಿಗೆ ॥ ೮

ಮಾರಮರ್ದನಪಟ್ಟು ವಾರಿಜ ಪ್ರಭುವಿಗೆ
ಕಾರುಣ್ಯನಿಧಿ ಸುಪಾರೀಶ್ವೇಶಗೆ

ತಾರದಿಪನಾಥ ಚಂದ್ರಪ್ರಭೇಶಗೆ
ಭೂರಿ ಪೃಭವ ಪುಷ್ಪದಂತನಿಗೆ ॥ ೯

ಭೂತಳಪತಿನುತ ಶೀತಳನಾಥಗೆ
ಜಾತರೂಪಾನ್ವಿತ ಶ್ರೇಯಾಂಶಗೆ ಪರಿಹಾರ್ಯ್ಯ
ಯುತ ವಾಸುಪೂಜೇಶಗೆ
ವೀತರಾಗಗೆ ವಿಮಲೇಶಗೆ ॥ ೧೦

ಅಂತಕ ವಿಜಯನನಂತ ಜಿನೇಶಗೆ
ಗ್ರಂಥವರ್ಜಿತ ಧರ್ಮನಾಥನಿಗೆ
ಚಿಂತಿತಾರ್ಥವನೀವ ಶಾಂತಿಜಿನೇಶಗೆ
ಕುಂತುವಿಜಯ ಕುಂಥುನಾಥನಿಗೆ ॥ ೧೧

ವರಮುಕ್ತಿರಮಣ ಶ್ರೀ ಅರಜಿನನಾಥಗೆ
ದುರಿತ ವಿಜಯ ಮಲ್ಲಿನಾಥನಿಗೆ
ಸುರನರೋರಗ ವಂದ್ಯ ಮುನಿ ಸುವೃತೇಶಗೆ
ಪರಮ ಪಾವನ ನಮಿನಾಥಗೆ ॥ ೧೨

ರಾಮಷಕೇಶವನಾಥ ನೇಮಿ ಜಿನೇಶಗೆ
ಸ್ವಾಮಿ ಪಾರಿಶ್ವನಾಥನಿಗೆ
ಸೋಮಾರ್ಕ ಕೋಟಿ ಪ್ರಕಾಶ ಸಾಸಿರದಷ್ಟ
ನಾಮದೊಡೆಯ ವೀರನಾಥನಿಗೆ ॥ ೧೩

ಕ್ಷಿತಿಗತಿಶಯ ವೇಣುಪುರ ಭವ್ಯಜನರ್ಗೆ
ಯತಿಕುಲ ರನ್ನ ಪಂಡಿತಾಚಾರ್ಯ
ರತಿಸೌಖ್ಯದಿಂದ ರಕ್ಷಿಪ ಚಂದ್ರ
ನಾಥಗೆ ಮಂಗಲಾರತಿಯತ್ತಿರೇ ॥ ೧೪

**೯. ಪುರಪರಮೇಶ್ವರಸುರನುತ**

ಪುರಪರಮೇಶ್ವರ ಸುರನುತ ಜಯ ಜಯ
ಪರಮಾನಂದ ಸುಖಾಸ್ಪದ ಜಯ ಜಯ ॥ ೧

ಅಜಿತ ಜಿನಾಧಿಪ ಅಚಲಿತ ಜಯ ಜಯ
ವಿಜಿತ ಮನೋಹರ ಭುಜಬಲಿ ಜಯ ಜಯ ॥ ೨

ಶಂಭವ ಗಂಭೀರಾಂಬುಧಿ ಜಯ ಜಯ
ಶುಂಬಿತನು ತೀರ್ಥೇಶ್ವರ ಜಯ ಜಯ ‖ ೩

ಅಭಿನಂದನ ಜಿನವಲ್ಲಭ ಜಯ ಜಯ
ಇಭರಿಪ ಪೀಠದಿಷ್ಟಿತ ಜಯ ಜಯ ‖ ೪

ಸುಮತಿ ಜಿನಾಧಿಪ ಸುರನುತ ಜಯ ಜಯ ‖
ಕುಮತಾಂಬುಧಿ ಬಡವಾನಲ ಜಯ ಜಯ ‖ ೫

ಪದ್ಮಪ್ರಭ ಪರಮೇಶ್ವರ ಜಯ ಜಯ ‖
ಪದ್ಮಶ್ರೀಯ ಪಾದ ಪಂಕಜ ಜಯ ಜಯ ‖ ೬

ವರ ಸುಪಾರೀಶ್ವ ಜಿನಾಧಿಪ ಜಯ ಜಯ
ನಿರುಪಮ ಗಣಗಣನಿಲಯೆನ್ನ ಜಯ ಜಯ ‖ ೭

ಚಂದ್ರಪ್ರಭ ಪರಮೇಶ್ವರ ಜಯ ಜಯ ‖
ವೃಂದ ಮುನೀಶ್ವರ ವಂದಿತ ಜಯ ಜಯ ‖ ೮

ಪುಷ್ಪದಂತ ಜಿನವಲ್ಲಭ ಜಯ ಜಯ
ಪುಷ್ಪಪರಿಷ್ಠ ಸೋಮಿರನ್ನ ಜಯ ಜಯ ‖ ೯

ಶೀತಳ ಜಿನಪರಮೇಶ್ವರ ಜಯ ಜಯ
ಭೂತಳ ಪತಿನುತ ವಂದಿತ ಜಯ ಜಯ ‖ ೧೦

ಶ್ರೇಯಾಂಶ ಪರಮೇಶ್ವರ ಜಯ ಜಯ
ಆಯತ ಮುಕ್ತಿ ಶ್ರೀಯುತ ಜಯ ಜಯ ‖ ೧೧

ವಾಸುಪೂಜ್ಯ ಜಿನವಲ್ಲಭ ಜಯ ಜಯ
ಭಾಸುರ ಭವ್ಯನಿವಾಸಂಗ ಜಯ ಜಯ ‖ ೧೨

ವಿಮಲ ಶ್ರೀ ರಮಣೀಪತಿ ಜಯ ಜಯ
ದ್ಯುಮಣಿತ ಹಸ್ತದ್ವಿತಿಯುತ ಜಯ ಜಯ ‖ ೧೩

ಅನಘನನಂತ ಜಿನೇಶ್ವರ ಜಯ ಜಯ
ಘನಕರ್ಮಠವಿ ಪಾವಕ ಜಯ ಜಯ ‖ ೧೪

ಧರ್ಮ ಜಿನೇಶ್ವರ ನಿರ್ಮಲ ಜಯ ಜಯ ‖
ಧರ್ಮಶತಲ ನಿಭನಿಚತಲ ಜಯ ಜಯ ‖ ೧೫

ಶಾಂತಿಜಿನೇಶ್ವರ ಶಾಶ್ವತ ಜಯ ಜಯ
ಸಂತತ ಬೋಧನಿವಾರಕ ಜಯ ಜಯ ‖ ೧೬

ಸುಲಲಿತಕುಂಥು ಜಿನೇಶ್ವರ ಜಯ ಜಯ
ಜಲಜನಾಭಸುತಂಜಿತ ಜಯ ಜಯ ‖ ೧೭

ಅರಜಿನ ಸದ್ಗುಣದಾರಕ ಜಯ ಜಯ
ಪರಮ ಶ್ರೀಕುಚಕುಂಕುಮ ಜಯ ಜಯ ‖ ೧೮

ಮಲ್ಲಿ ಜಿನೇಶ್ವರ ವಲ್ಲಭ ಜಯ ಜಯ
ಸಲ್ಲಲಿತುನ್ನತವಂದಿತ ಜಯ ಜಯ ‖ ೧೯

ಮುನಿ ಸುವ್ರತ ಜಿನಕುಂಜರ ಜಯ ಜಯ
ಮುನಿ ವೃಂದಾರಕವಂದಿತ ಜಯ ಜಯ ‖ ೨೦

ನಮಿತ ಜಿನೇಶ್ವರ ನಮಿಜಿನ ಜಯ ಜಯ
ಕ್ರಮಕಲ್ಯಾಣಸುಪಂಚಕ ಜಯ ಜಯ ‖ ೨೧

ಸುರವಿರಚಿತ ನೇಮೀಶ್ವರ ಜಯ ಜಯ
ಹರಿವಂಶಾಂಬುಧಿ ಹಿಮಕರ ಜಯ ಜಯ ‖ ೨೨

ಶ್ರೀಮತ್ಪಾರೀಶ್ವ ಜಿನಾಧಿಪ ಜಯ ಜಯ
ಕಾಮದೇವಮದ ಭಂಜನ ಜಯ ಜಯ ‖ ೨೩

ಶ್ರೀ ವರ್ಧಮಾನವಲ್ಲಭ ಜಯ ಜಯ
ಸಧರ್ಮ ಪ್ರತಿಪಾದಕ ಜಯ ಜಯ ‖ ೨೪

ಜಯನಾಥ ಜಯ ಜಿನೇಶ್ವರ ಕಂದರ್ಪದರ್ಪರಿಪು
ಕುಲಮತನ ಜಯ ನಷ್ಟಹತಿ ಕರ್ಮ ಜಯ
ಜಯ ದೇವೇಂದ್ರ ವೃಂದ ವಂದಿತ ಚರಣ ‖ ೨೫

## ೧೦. ಮಂಗಳಂಗರ್ಭಾವತರಣನಿಗೆ

**ರಾಗ : ಸತುಕ್ತಳಾ**

ಮಂಗಳಂ ಗರ್ಭಾವತರಣನಿಗೆ
ಮಂಗಳಂ ಜನ್ಮಾಭಿ ಶ್ರವಣನಿಗೆ
ಮಂಗಳಂ ಪರಿನಿಷ್ಕ್ರಮಣ ಸುಬೋಧಗೆ
ಮಂಗಳಂ ನಿರ್ವಾಣೇಶಗೆ ‖ ಪಲ್ಲವಿ

ಜಯ ಜಯ ಪುರಪರಮೇಶನಿಗೆ
ಜಯ ಜಯ ಪರಮಾತ್ಮರೂಪನಿಗೆ
ಜಯ ಕರುಣಾರ್ಕ ಕೋಟಿ ಪ್ರಕಾಶಗೆ
ವರಲಕುಮಿ ರಮಣಶ್ರೀ ಪರಮೇಶನಿಗೆ ॥ ೧

ಗಜರಿಪು ವಿಷ್ಟರ ಸುಜನ ಮನೋರಥ
ಅಜನುತ ಪಾದಪಯೋಜನಿಗೆ
ಗಜಲಾಂಛನಧರ ಶಿವದಾತಗೆ
ಅಜಿತ ಜಿನೇಶ್ವರ ಪರಮೇಶನಿಗೆ ॥ ೨

ಶಂಭವ ಸುಖ ಭಕ್ತರ್ಗಿತ್ತು ರಕ್ಷಿಪಗೆ
ಶಂಬರಾರಿಯ ಮದಗೆಲಿದವಗೆ
ಅಂಬುಜನಾಭ ಶ್ರೀರಂಭೆಯ ರಮಣನಿಗೆ
ಕುಂಭಿನಿತ್ರಯನುತ ಶಂಭವಗೆ ॥ ೩

ಅಭಿಮತ ಫಲಸಿದ್ಧಿದಾಯಕಗೆ
ಇಭರಿಪು ಪೀಠದೀ ನೆಲಸಿದಗೆ
ಶುಭಮತಿಯಮಗಿತ್ತು ಸಲಹುವ ದೇವಗೆ
ಅಭಿನಂದನ ಜಿನಸರ್ವಜ್ಞನಿಗೆ ॥ ೪

ಸುಮತಿಯ ಭಕ್ತರಿನಿವನಿಗೆ
ಕ್ರಮಕಲ್ಯಾಣ ಸುಪಂಚಕಗೆ
ಕಮಲವ ಸೋಂಕದೆ ರಾಜಿಪದೇವಗೆ
ಸುಮಶರರಿಪು ಶ್ರೀ ಸುಮತೇಶನಿಗೆ ॥ ೫

ಪದ್ಮ ಪೀಠಾಂಚಿತ ಪದ್ಮಜಿನುತಗೆ
ಪದ್ಮಸಿತಾವ ನಿವಾಸನಿಗೆ
ಪದ್ಮಪ್ರಾದಿವೃಸು ಅರುಣಭ ದೇವಗೆ
ಪದ್ಮಪ್ರಭ ಜಿನದೇವನಿಗೆ ॥ ೬

ಕಪಾಲಧರ ನುತ ಶಂಕರಗೆ
ಸುಪಾಲ ಮರುತವರ್ಣನಿಗೆ
ಅಪರಮಿತ ಗುಣನಂತ ಚಕೋಷ್ಟಗೆ
ಸುಪಾರೀಶ್ವ ಜಿನಪಗೆ ನಿರುಪಮಗೆ ॥ ೭

ಚಂದಿರಶಾಂತಗೆ ಚಂದ್ರಲಾಂಛನಗೆ
ಸಾಂದ್ರಸುಕೋಜ್ವಲ ಮೂರ್ತಿಗೆ

ಚಂದ್ರಪುರಾಧಿಪ ಮಹೇಶನಭವನಿಗೆ
ಇಂದ್ರವಂದಿತ ಚಂದ್ರಪ್ರಭದೇವಂಗೆ ॥ ೮

ಒಪ್ಪುವ ಮಹಾಂಕಾಳಿ ಸೇವಿತಗೆ
ಪುಷ್ಪಸ್ಮರಾರಿ ತ್ರಿಣೇತ್ರನಿಗೆ
ಕರ್ಪೂರಲೋಚನೆ ಕಮನಿಯ ರೂಪಗೆ
ಪುಷ್ಪದಂತೇಶ ನಿಷ್ಪನ್ನನಿಗೆ ॥ ೯

ಘಾತಿಚತುಷ್ಟಯ ನಾಶಗೆ ಪ್ರತಿ
ಹಾರ್ಯಷ್ಟಕನಾಥನಿಗೆ
ಜಾತರೂಪಾನ್ವಿತ ತ್ರಿಭುವನ ತಿಲಕಗೆ
ಶೀತಳ ಜಿನ ವೀತರಾಗನಿಗೆ ॥ ೧೦

ಕಾಯವಳಿದ ನಿರ್ಮಲಾತ್ಮನಿಗೆ
ಕಾಯಜ ಮದಕರಿ ಪಂಚಾಸ್ಯನಿಗೆ
ಕಾಯಜನಾಭಗೆ ಮಾಧವ ಮಹಿಮಗೆ
ಪಾವನಮೂರ್ತಿ ಶ್ರೇಯಾಂಸನಿಗೆ ॥ ೧೧

ವಸುಪೂಜ್ಯ ವಿಜಾಯವತ್ತಿ ಭಾವಗೆ
ವಸುಮತಿ ತ್ರಿಯಮತಿ ಪೂಜಿತಗೆ
ಮಿಸುಪ ಸಿಂಧುವರ್ಣ ಬಿಸರುಹ ನಾಭಗೆ
ವಸುಪೂಜ್ಯೇಶ ನಿರಂಜನಗೆ ॥ ೧೨

ವಿಮಲಹಿಗ್ರವೀತರಾಗನಿಗೆ
ಕಮಲವ ಸೋಂಕದೆ ನಿಂದನಿಗೆ
ಸಮವಸರಣೇಶಗೆ ಸಾಸಿರ ನಾಮಗೆ
ಸುಮತಿ ಜಿನಪತಿ ಶುಭದಾತನಿಗೆ ॥ ೧೩

ಚಿನುಮಯಕಾರ ಚಿದಾನಂದಗೆ
ಅನುಪಮ ಗುಣನಿಧಿ ಹೇಮಾಭನಿಗೆ
ಅನಘನಂತ ಚತುಷ್ಟಯ ರೂಪಗೆ
ಅನವದ್ಯಚರಿತಾನಂತ ಸ್ವಾಮಿಗೆ ॥ ೧೪

ಕರ್ಮಾಂತಕ ಶ್ರೀ ದಶರಥ ಚರಗೆ
ನಿರ್ಮಲ ಭಾನುರೋಜೋದ್ಭವಗೆ
ಧರ್ಮಾಮೃತವನು ಕರೆದ ಮಹಾತ್ಮಗೆ
ಸಮೋಕ್ಷ ಪತಿಧರ್ಮನಾಥನಿಗೆ ॥ ೧೫

ಶಾಂತಸ್ವರೂಪ ಚಕ್ರಧರಗೆ
ಕಾಂತಿತ ಉಧರ ಕಾಮದೇವಗೆ
ಚಿಂತಿತ ಸತ್ಫಲದಾಯಕಗೆ
ಶಾಂತಿಜಿನೇಶ್ವರ ಶಾಶ್ವತಗೆ ॥ ೧೬

ಕಂತು ಸದೃಶ ಹರಿ ಚರಣದ್ವಯಗೆ
ಕಾಂತಿ ಶ್ರೀಮತಿ ಭವಚಕ್ರಗೆ
ಗ್ರಂಥವರ್ಜಿತಲಿಪ್ಪ ಗುಣಸಮೇತಗೆ
ಕುಂಥ ಜಿನಾಷ್ಟಮ ಪ್ರಕ್ಷೇಶನಿಗೆ ॥ ೧೭

ಹರಿಹರವಿನುತಗೆ ಶ್ರೀಪುರಾಂತಕಗೆ
ಉರುತರ ಬಲುಮೆಗೆ ಹರಿವಿಷ್ಟರಗೆ
ವರದನ ಪತಿ ಚರನಹಮಿಂದ್ರನಿಗೆ
ಪರಮ ಪುರುಷ ಹರಜಿನನಾತನಿಗೆ ॥ ೧೮

ಪುಲ್ಲಲೋಚನೆ ಪ್ರಭಾವತಿಯ ಗರ್ಭಾದಗೆ
ಪುಲ್ಲಶರಾಂತಕ ಭವಹರಗೆ
ಚೆಲ್ವ ಅಪರಾಜಿತೆ ಯಕ್ಷೆ ಸುಸೇವೆಗೆ
ಮಲ್ಲಿಜಿನೇಶ ಶ್ರೀ ವಲ್ಲಭಗೆ ॥ ೧೯

ಮುನಿಗಣ್ಯಧ್ಯಾನ ಓಂಕಾರನಿಗೆ
ಜಿನಿತ ದಿವ್ಯಧ್ವನಿದ್ವ ದಶಾಂಗಣಗೆ
ಘನಮೇಘಶ್ಯಾಮ ಚತುರ್ಮುಖ ಬ್ರಹ್ಮಗೆ
ಮುನಿ ಸುವ್ರತೇಶಗೆ ಅರಹಂತನಿಗೆ ॥ ೨೦

ನಮಿತ ಸುರೇಶ್ವರ ಕ್ರಮಯುಗವ ಪದಗೆ
ಅಮರ ಸಿದ್ಧಾಂತ ಚರನಹಮಿಂದ್ರನಿಗೆ
ಅಮಲ ಮಹಿಳೆ ಜಯವರ್ಮನ ತನುಜಗೆ
ನಮಿಜಿನ ಬಾಸುರೋಜ್ವಲ ಮೂರ್ತನಿಗೆ ॥ ೨೧

ಸೋಮವದನೆ ಶಿವದೇವಿ ಗರ್ಭಜಗೆ
ರಾಮಕೇಶವನುತ ಪಾದನಿಗೆ
ಸೋಮಹಾ ಪರಮ ಉದ್ಧರಿತ ದೇಹಗೆ
ನೇಮಿಜಿನಪದ ಶುಭಕರನಿಗೆ ॥ ೨೨

ವಾರಣಾಸಿಯ ವಿಶ್ವೇಶ್ವನೋದ್ಭವಗೆ
ನಾರಿ ಪದ್ಮಾವತಿ ಸೇವ್ಯನಿಗೆ

ಸಾರಸಾರ ವಿಚಾರ ಪರಾಯಣ
ಪಾರೀಶ್ವಜಿನ ಪರಮಾತ್ಮನಿಗೆ ॥ ೨೩

ಶ್ರೀವಧುವರನಿಗೆ ವೀರೇಶನಿಗೆ
ಪಾವನಚರಿತದಿನೋದ್ಧರಗೆ
ದೇವರದೇವಗೆ ದೇವೇಂದ್ರಪೂಜ್ಯಗೆ
ಜೀವದಯಾಪರ ಮೂರುತಿಗೆ ॥ ೨೪

## ೧೧. ಮಂಗಲಂವಿಮಲಲಲಿತಾಂಗಿಗೆ

ಮಂಗಲಂ ವಿಮಲ ಲಲಿತಾಂಗಿಗೆ ಜಯ
ಮಂಗಲಂ ಶ್ರೀ ಜ್ವಾಲಿನಿದೇವಿಗೆ ॥ ಪಲ್ಲವಿ

ವರಸಲಧನು ಖಡ್ಗ ಛತ್ರ ಉರಗ ಖಡ್ಗಗಧಾಪಾಂಗಿ
ವೆರಸಿ ತ್ರಿಶೂಲಷ್ಟ ಬಾಹುಗಳಾ
ಉರಿಮಾಲೆ ಮಹಿಷಕೇಶರಿರುಡೆ ಸದ್ಧರ್ಮ
ಚರಿತೆ ಜ್ವಾಲಿನಿ ಸರ್ವಜಿನ ರಕ್ಷೆಗೆ ॥ ೧

ಒಳಿದು ಕರ್ತಗೆ ಉರಿವೆಳಿ ಮುಖವನು ಕೊಟ್ಟು
ಸುಲಭದಿ ಪೆನಗೊಂಡೆ ಆರ್ಯರಿಂದಾ
ಗೆಲಿಸಿ ಡಿಳ್ಳಿಯ ಸುರಿತಾಳನ ಮುಖಭಂಗ
ಗೊಳಿಸಿದ ಕಡಿಯಾಣ ಬಿರಿದಳಿಗೆ ॥ ೨

ಶರಧಿಯೊಳ ಮಾತಿಹ ಪುರುಪರಮೇಶ
ತ್ತರವನರಿಯಲೆಂದು ಸುರಿತಾಳನ
ಕರವ ಪಿಡಿತ ಮುಟ್ಟಿಲೋಡಿಸಲಲ್ಲಗೆ
ಉರುತರ ತೋರಿದ ಮಹಿಮಳಿಗೆ ॥ ೩

ವಾರುಧಿಯೊಳಗಿಹ ಕ್ಷಾರಗೀರವನು ನೆರ
ಓರಿಸಿದನಿತಮೃತ ರುಚಿಯ
ತೋರಿ ಮಹಿಮೆಯ ಸುಧಾರುಣಿಯೊಳಗೆ ವಿ
ಸ್ತಾರಗೊಳಿಸಿದ ಜ್ವಾಲಿನಿದೇವಿಗೆ ॥ ೪

ಸೃಷ್ಟಿಯೊಳಗೆ ಅತಿಶ್ರೇಷ್ಠ ಯಕ್ಷದ್ವಯ
ದೃಷ್ಟಪ್ರತಿಷ್ಟ ವಿಶಿಷ್ಟದರೀಚಾಮೂಲ
ಪುರದ ಭವ್ಯರಷ್ಟವನರಿದು ಸಂ
ತುಷ್ಟವಗೊಲಿದ ಜ್ವಾಲಿನಿದೇವಿಗೆ ॥ ೫

## ೧೨. ಮಂಗಲಂಮಂಗಲಂಜ್ವಾಲಿನಿ

ಮಂಗಲಂ ಮಂಗಲಂ ಜ್ವಾಲಿನಿದೇವಿ
ಮಂಗಲಂ ಮಂಗಲಂ ಭವ್ಯಜನಪಾಲೆ
ಮಂಗಲಂ ಮಂಗಲಂ ಭಕ್ತರಾ ಪ್ರಿಯೆ ॥ ಪಲ್ಲವಿ

ಅಷ್ಟಭುಜದ ದಿಟ್ಟೆ ದ್ರಷ್ಟಮೂರುತಿ ತಾಯೆ
ಶ್ರೇಷ್ಠದಿ ಮೆರೆವ ಶ್ರೀ ಜಗನ್ಮಾತೆಯೇ
ದ್ರಷ್ಟಮೂರುತಿ ವಿಜಯಾಕ್ಷನ ರಾಣಿಯೇ
ಸೃಷ್ಟಿಯೊಳತಿಶಯ ಜಿವಪನ ಭಕ್ತೆ ॥ ೧

ಚಂದ್ರಜಿನನ ಯಕ್ಷೆ ಶಶಿನಿಭ ವದನೆಯೆ
ಚಂದ್ರಪ್ರಕಾಶದ ಮುಕುರ ಶೋಭಿತಳೆ
ಚಂದದಿಂದೆಸೆವ ಮುತ್ತಿನ ಹಾರಲಂಕೃತಿ
ಚಂದದಿಂ ಭವ್ಯರ ಸಲಹುವ ಪ್ರಿಯೆ ॥ ೨

ಮುತ್ತಿನ ಹಾರ ಪದಕ ರತ್ನದೋಲೆಯು ವಿ
ಚಿತ್ರ ತರದ ಹಸ್ತಕಡಗದಿಂದೆಸೆವ
ರತ್ನಖಚಿತದ ವಢ್ಯಾಣ ಭಾಪುರಿಗಳು
ರತ್ನಾವಳಿಯಿಂದ ಮೆರೆವ ಶ್ರೀದೇವಿಯೇ ॥ ೩

ಭವಜನರ ಪಾಲೆ ಭವವಾರುಧಿ ಶೀಲೆ -
ಭವ ವಿನಾಶನ ಯಕ್ಷೆ ಭಕ್ತರಪಾಲೆ
ಭುವನ ಬುಂಭುಕದೇವಿ ಭೂತ ಭಯಂಕರಿ
ಭವಹರನ ಭಕ್ತೆ ಭಕ್ತನ ಸಲಹೆ ॥ ೪

ಧರೆಯೊಳತ್ಯಧಿಕ ಬೆಳ್ಗೊಳಾ ಮಠದೊಳಗಿಹ
ವರಚಂದ್ರನಾಥನ ಬಸದಿಯೊಳಿರುವ
ಗುರುಪಂಡಿತಾರ್ಯಧರಣಿ ವಿಚಕ್ಷಣೆ
ವರಭವ್ಯ ಜಿನಪಾಲೆ ಜ್ವಾಲಿನಿದೇವಿಗೆ ॥ ೫

## ೧೩. ಜಯಮಂಗಲಂನಿತ್ಯಶುಭ

ಜಯಮಂಗಲಂ ನಿತ್ಯಶುಭಮಂಗಲಂ
ಜಯ ಪರಬ್ರಹ್ಮ ಪಾರೀಶ್ವರಗೆ ॥ ಪಲ್ಲವಿ

ಭುವನಕವತರಿಸುವರುದಿಂಗಳಿನೆ ಮಣಿ ಮಳೆಯ
ದಿವದಾದಿ ಮಧ್ಯಾಂತ್ಯದೊಳು ಕರಿಯಲು
ಭುವನಂಬಿಕೆಯು ಸ್ವಪ್ನಗಾಣಲುಧರದಿ ನೆಲಸಿ
ಅವಧಿಮತಿ ಶ್ರುತವೆನಿದು ಕಳಿದೋರ್ಪಗೆ ॥ ೧

ಜನನಿಯುದರದಿ ತ್ರಿಜಗದಿರವನರಿದಿರ್ಪ್ಪವಗೆ
ಮುನಿಗಳಿಗೆ ತತ್ವನಿರ್ಣಯದೋರ್ಪಗೆ
ಜನಿಸಿ ಸುರಗಜವೇರಿ ಸುರಸಮಿತಿ ಸಹ ತೆರಳಿ
ಕನಕಾದ್ರಿಯೊಳು ಸುಧಾಬ್ಧಿಯ ಮಿಂದವಗೆ ॥ ೨

ತೊಡರಳಿದು ತಪದಿ ಘಾತಿಗಳ ಖಂಡಿಸಿದವಗೆ
ಒಡನೆ ಕೇವಲ ಬೋಧವನು ತಾಳ್ದಗೆ
ಪೊಡವಿಗೈಸಾಸಿರದ ಬಿಲ್ಲಂತರಕ್ಕಾಗಿದು
ಸಡಗರಿಪ ಸಮವಸರಣದಿ ನಿಂದವಗೆ ॥ ೩

ಲೋಕಕ್ಕೆ ಸದ್ಧರ್ಮ ಸಾರ ವೃಷ್ಟಿಯ ಕರೆದು
ಲೋಕಿಸಿ ಬಹಿರ್ಪ್ಪ ಭೂತಿಗಳ ಕಳೆದು
ನಾಲ್ಕು ಘಾತಿಗಳ ಬೇರ್ಗಳ ಕಿತ್ತು ಸುಟ್ಟುರುಹಿ
ಲೋಕಾಗ್ರದೊಳು ನಿಂದ ಶ್ರೀಕಾಂತಗೆ ॥ ೪

ಇಳೆಗಧಿಕವಾದ ಬೆಳ್ಗುಳ ಪುರಿ ಚೈತ್ಯಾ
ನಿಳಯದೊಳು ನಳಿನವಿಷ್ಟರದಿ ನೆಲಸಿ
ತೊಳಗಿ ತನುಕಾಂತಿ ತಾಳಿ ಕಿರಿದಾಂಗುಡಿಯಿಟ್ಟು
ಹೊಳೆದು ಪ್ರಜ್ವಲಿಪ ಪಾರೀಶ್ವಗೆ ॥ ೫

## ೧೪. ಆರತಿಬೆಳಗುವೆ

ಆರತಿ ಬೆಳಗುವೆ ನೀರಜವನಿ ದಯ
ವಾರಿಧಿ ಪರಿಹಾರ ಹಾರ ಸರಸ ಗುಣ
ಪಾರೆ ಶ್ರೀ ಪಾರೀಶ್ವನ ವಾರಿಜಪದ ಸಾರೆ ॥ ಪಲ್ಲವಿ

ಆರಡಿ ನೀ ಭೋಗುರುಳ್ಗ ನೀರಜಮುಖಿ ನಿನ್ನ
ಧೀರ ತನು ಸುಮಾರಾ ಮಾರನ ಲಲನೆಯ
ಕಾರವನಿಳಿಕೊಳ್ವ ನೀರೆ ನಿನ್ನಕಾರ
ಕಾರಮಿಪ ಕಾರಣರೂಪ ಕಮಠನ

ಘೋರ ಉಪದ್ರವವುದೋರೆ
ದೂರ ಕೇಳದೆನ್ನಯಪಾರ ದುಃಖವ ದುಂಡೆ
ತಾರಿಸು ಗಂಭೀರೆ ||

ಮೇಲುಮುತ್ತಿನ ದಂಡೆ ವಾಲಿದು  ವಜ್ರದ ಕಂಠ
ಮಾಲೆ ಮೆರೆವ ವೋಲೆ ಲೋಲಾಕ್ಷನ ಗುಣ
ಮಾಲೆ ಲಲಿತಯಿದು ಬಾಲನ ಸುಖಕಾಲೆ
ವಾಲೆ ಕಂಚುಕಿ ತೊಟ್ಟು ಕೀಲದಾಭವನಿಟ್ಟು
ಲೋಲಾಡುವ ಫಣಿಬಾಲೆ
ಬಾಲನನಿಜ ತ್ರಿಪಾಲಿಪ ಚಿನ್ಮಯ
ಪಾಲಿಸು ಮಹಿಮಾ ಪಾಲೆ || ೨

ಭೂವಳಯಧಿಕ ಶ್ರೀವೇಣುಪುರದೊಳೆಸೆವಳು ಆದಿಕವಳಾ
ಕಾವದನು ಪ್ರಭುಶ್ರೀವಳಯ ವಿನುತ
ಪಾವನಧರ ಹವಳ ಹಾವಭಾವದೊಳು
ದೇವ ಶ್ರೀ ವಿರುಳಾವಳು ಸಮನಿಸುವಳಾ
ನೀವನು ದಿನದಲ್ಲಿ ಭವಿಸಿ ಭಕ್ತ ಜನವವಳ ಪರಿವವಗಾ || ೩

<u>೧೫. ಜಯಮಂಗಳವೈ</u>
**ರಾಗ : ಬೇಹಾಗ್ ತಾಳ : ಆದಿತಾಳ**

ಜಯ ಮಂಗಳ ವೈ ಜಯ ಮಂಗಳ ವೈ
ಜಯಜಯ ಜಯಜಯ ಮಂಗಳ ವೈ
ಮಂಗಳಂ ಜಿನರಾಜಗೇ ಅಂಗಜವಿಜಯಗೆ
ಭಂಗವ ಗೆಲಿದಗೆ ಶೃಂಗಾರಹಾರಗೆ ಮಂಗಳ ವೈ || ಪಲ್ಲವಿ

ದೋಷಪದಿನೆಂಟನು ನಾಶವ ಗೈದಗೆ
ಭಾಸುರತೇಜಗೆ ಮಂಗಳ ವೈ
ಈಶಗೇ ಮುಕ್ತೀಶಗೇ ಸಾಸಿರನಾಮಗೆ
ಲೇಸಿತ್ತು ಪೊರೆವಗೆ ದಾಸನ ದೇವಗೆ ಮಂಗಳ ವೈ || ೧

ಖ್ಯಾತಗೇ ನತಜನ ಪ್ರೀತಗೇ ಸ
ನ್ಮತಿಯುತನಿಗೆ ದೋಷವ ಗೆಲಿದಗೆ
ಅತಿಶಯಯುತನಿಗೆ ಮಂಗಳ ವೈ
ನಾಥಗೇ ಮಹೇಶಗೇ ನೂತನಪುರಿಯಧಿನಾಥಗೇ
ಪೂತಗೆ ರತ್ನತ್ರಯಮಯ ಮಂಗಳ ವೈ || ೨

## ೧೬. ಮಂಗಲಂಶ್ರೀಚಂದ್ರಪ್ರಭಗೆ

**ರಾಗ : ಸುರುಟಿ ತಾಳ : ರೂಪಕತಾಳ**

ಮಂಗಲಂ ಶ್ರೀಚಂದ್ರಪ್ರಭಗೆ ಮಂಗಲಾಂಗಗೇ ॥ ಪಲ್ಲವಿ
ಅಂಗಜನ ವಿಭಂಗನಾದ ಮಂಗಲಾತ್ಮಯೋಗನಾದ
ಸಂಗತಾರ್ಥಿಗೀವ ಮೋದ ಶೃಂಗಾರನಿಗೆ ದೇವನುತಗೆ ॥ ೧

ಇಂದ್ರವೃಂದ್ರವಂದ್ಯನಿಗೆ ಮಂದ್ರಗಣ ವಿಭೂಷಣನಿಗೆ
ಸಾಂದ್ರಮುಕ್ತಿಲಕ್ಷ್ಮೀಪ್ರಿಯಗೆ ಚಂದ್ರಪ್ರಭಜಿನೇಂದ್ರವರಗೆ ॥ ೨

ಧರೆಯೊಳಧಿಕ ಬೆಳುಗುಳದಿ ಮೆರೆವ ಶೋಭೆಯಿಂದ ಬಸದಿ
ವರಸದನದಿ ನೆಲಸಿ ಮುದದಿ ಮೆರೆವನಿಗೆ ಕಾಮಹರಗೆ ॥ ೩

## ೧೭. ಮಂಗಳಂಜಗದಾಂಬದೇವಿಗೆ

**ರಾಗ : ಆನಂದಭೈರವಿ ಆದಿತಾಳ**

ಮಂಗಳಂ ಜಗದಾಂಬದೇವಿಗೆ
ಮಂಗಳಂ ಪದ್ಮಿಣಿಗೆ ॥ ಪಲ್ಲವಿ

ಧರಣೇಂದ್ರಗತಿಯಂತ ಪಾದಸುಪ್ಪಾಣೆಗೆ
ವರಗುಣಭೂಷಣಗೆ ವರಕುಕ್ಕು
ದೋರುಹ ವಾಹನಯಕ್ಷಗೆ
ಪರಾಕು ಪದ್ಮಾವತಿ ಪರಮಪವಿತ್ರೆಗೆ ॥ ೧

ವಾಣಿವಿಭವ ಕಲ್ಯಾಣಿ ಪಾಶಾಂಕುಶ
ಪಾಣಿಸದ್ಗುಣ ಮಣಿಗೆ
ವೇಣು ನೇತ್ರೆಯೇ ಪ್ರೇಮದಿ ಸಲಹುವ
ಕ್ಷೋಣಿಗಧಿಕ ಕಟ್ಟಾಣಿ ನಿಃಶ್ರೇಣಿಗೆ ॥ ೨

ಖ್ಯಾತಿವೆತ್ತ ನರಸಿಂಹಪುರವಾಸಿಗೆ
ಪ್ರೀತಿ ಕರುಣಾನಿಧಿಗೆ
ವಾತುರ ಎನ್ನ ಭಕ್ತರ ಪರಿಪಾಲಿಪ
ಪ್ರೀತಿಕರುಣ ಪದ್ಮಾವತಿ ದೇವಿಗೆ ॥ ೩

## ೧೮. ಜಯಮಂಗಲಂನಿತ್ಯ

ಜಯಮಂಗಲಂ ನಿತ್ಯ ಶುಭಮಂಗಲಂ
ಜಯ ಸೀಮಂತಿನಿದೇವಿ ಪದ್ಮಾಂಬೆಗೆ
ಜಯ ಮಂಗಳಂ ನಿತ್ಯ ಶುಭಮಂಗಳಂ ॥ ಪಲ್ಲವಿ

ಜಿನದತ್ತರಾಯನ ಜನರರಿಕೆಯೊಳು ಸಲಹಿ
ಜನಕ ಮುನಿದುದ ಕಂಡು ಸಲಹಬೇಕೆಂದು
ಘನಬೇಗದಿಂದ ದಕ್ಷಿಣಕೆ ನಡೆತಂದು
ವನಜಲೋಚನೆ ಲಕ್ಕಿವನದಿ ನೆಲಸಿದಳೆ ॥ ೧

ಕಮಲನೇತ್ರದಳ ನೇತ್ರಳಿಗೆ ಕರುಣಸಾಗರ ಮುಖಿಗೆ
ಕಮಲಪೀಠದೊಳೆಸೆವ ಜಗದಾಂಬೆಗೆ
ಕಮಠೋಪ ವಿಜಯ ಪಾರಿಶ್ವಜಿನಪನ ಯಕ್ಷೆ
ಮಮ ಹೃದಯದೊಳು ನಿಂದು ಸಲಹುವಳಿಗೆ ॥ ೨

ನಿರ್ಗುಂಡಿ ತರುವಿನೊಳು ನೆಲಸಿರುವ ದೇವಿಗೆ
ಸುಗುಣದಿಂ ಹರುಷವನು ತೋರಿದಳಿಗೆ
ಮಿಗೆರತ್ನಾಭರಣ ಭೂಷಣದಿ ಮೆರೆವವಳೆ
ಜಗದೊಳತಿಶಯ ಮೂರ್ತಿ ಪದ್ಮಾವತಿದೇವಿಗೆ ॥ ೩

ಧರಣೆರಾಜನ ಪಟ್ಟದರಸಿ ಪದ್ಮಾವತಿಗೆ
ಧರಣಿಯೊಳು ಕೀರ್ತಿಯೊಳು ಮೆರೆವವಳೆ
ಧರಣೇಂದ್ರ ಸಹ ಪರಮ ಜಿನರ ಸೇವೆಯ ಮಾಳ್ಪ
ಸುರುಚಿರ ಗುಣಭರತೆ ಸುಜ್ಞಾನ ಧರೆಗೆ ॥ ೪

ಚಂದ್ರಗಿರಿಯ ನಿವಾಸಿ ಚಂದಿರನ ಸಮಶಾಂತೆ
ಚಂದ್ರವದನೆಯ ನಿಮ್ಮ ಚರಣ ಭಜಿಸುವೆನು
ಚಂದದಿಂ ನೆಲಸಿರುವ ಪದ್ಮಾವತಿ ದೇವಿಗೆ
ಜಯ ಮಂಗಳಂ ನಿತ್ಯ ಶುಭಮಂಗಳಂ ॥ ೫

## ೧೯. ಜಯಮಂಗಲಂನಿತ್ಯಶುಭ

ಜಯಮಂಗಲಂ ನಿತ್ಯ ಶುಭಮಂಗಲಂ
ಜಯ ಮಹಾ ನಂದೀಶ್ವರಾದ್ರಿ ಜಿನರಿಗೆ ॥ ಪಲ್ಲವಿ

ಮುದದಿ ಜಿನನಿಳಯಮಂಜನ ನಾಲ್ಕರೊಳು ನಾಲ್ಕು
ದಧಿ ಮುಖಗಳೀರೆಂಟು ನಿಳಯವನಿತೆ

ಅದರಿಂದ ಮುಂದೆ ರತಿಕರಕೆ ಮೂವ್ವತ್ತೆರಡು
ಸದನದ್ವಾರಪಂಚ ಶ್ರೀ ನಿಳಯಗಳಿಗೆ ॥ ೧

ಮಣಿಮಾಡಗೋಪುರ ದ್ವಾರ ಮಾನಸ್ತಂಭ
ಗಣನೆಯಿಲ್ಲದ ಧ್ವಜಾವಳಿ ತೋರಣ
ಘನವೆತ್ತ ಐದು ವಿಧ ವಾದ್ಯ ಮಂಗಲ ದ್ರವ್ಯ
ಮಿನುಗಿ ನಗೆ ಮಿನುಗುತಿಹ ಜಿನವರರಿಗೆ ॥ ೨

ಇಂದು ರವಿಕೋಟಿ ಕಿರಣವ ಮಿಗುವ ಜಿನಬಿಂಬ
ಅಂದವಡೆದೈನೂರು ಚಾಪಾರಿನ ತಾ
ಮಂದಿರಕೆ ನೂರೆಂಟು ಮಿಂತು ಮೈ ಸಾಸಿರದ
ಮಂದೆಯರು ನೂರುಯೀರೆಣ್ಬರವರ್ಗ್ಗೆ ॥ ೩

ಜನನಾತಿಶಯ ಪತ್ತು ಘಾತಿಕ್ಷಯದಿ ಪತ್ತು
ಅನುಮಿಷರು ರಚಿತ ಪದಿನಾಲ್ಕತಿಶಯ
ವಿನುತಾಷ್ಟ ಪ್ರತಿಹಾರ್ಯ್ಯಗಳಿಂದ ರಾಜಿಸುವ
ಚಿನುಮಯಾತ್ಮಕ ಚಾರು ಚರಣಗಳಿಗೆ ॥ ೪

ಹರಿಯಾದಿ ಸರ್ವ್ವ ವಾಹನವೇರಿ ನಾಲ್ದೆರೆದ
ಸುರರು ನಂದೀಶ್ವರ ಮಹಾದ್ವೀಪಕೆ
ವರುಷದಾಷಾಢ ಕಾರ್ತೀಕ ಫಾಲ್ಗುಣ ಶುಕ್ಲ
ವರಕ್ಷದಷ್ಟಮಿಯೊಳೈಯ್ದಿ ಮುದದಿ ॥ ೫

ಗಿರಿವಸತಿ ಜಿನರುಗಳ ತ್ರಿಪ್ರದಕ್ಷಣಗೊಂಡು
ಸುರರು ಸ್ತುತಿಸಿ ಮಣಿದುಯೊಂದು ದಿವನಾ
ಪರಿಪರಿಯ ಅರ್ಹತಾ ಪೂಜೆಗಳನೆಸಗಿದುರ್ದರ
ದುರಿತ ಕಳೆವರಂತಾ ಜಿನರಿಗೆ ॥ ೬

ಇಳೆಗಧಿಕವಾದ ಬೆಳ್ಗೊಳಪುರಿಯ ಚೈತ್ಯ
ನಿಳಯದೊಳು ನೆಲಸಿ ಪಂಡಿತಯತಿಪಗೆ
ನಲವಿತ್ತು ಅನುಗಾಲಯೆಡವಿಡದೆ ಸತ್ಪೂಜೆ
ಗೊಳುವ ಮಂದಾರದ ಶ್ರೀ ಜಿನವವರಿಗೆ ॥ ೭

<u>೨೦. ಜಯಮಂಗಲಂನಿತ್ಯ</u>

ಜಯಮಂಗಲಂ ನಿತ್ಯ ಶುಭಮಂಗಲಂ
ಜಯಶೀಲ ವಿಮಲ ನಿತ್ಯಾನಂದಗೆ ॥ ಪಲ್ಲವಿ

ವಿಳೆವೆಣ್ಣನುಳಿದು ಜಯವರ್ಮಭೂಪಗೆ ಮಹಾ
ಬಲನಾದ ವಿದ್ಯಾಧರಾಧಿಪತಿಗೆ
ತೊಳತೊಳಗುತಿ ಶಾಸ ಕಲ್ಪದೊಳು ಮೆರೆವ ಬ
ಬ್ಬುಳಿಯೆನಿಸಿ ಮೆರೆವ ಲಲಿತಾಂಗ ದೇವನಿಗೆ ‖ ೧

ಧರಣಿಪತಿ ವಜ್ರಜಂಗಗೆ ಭೋಗಭೂಮಿ ಜಗ
ವರ ಸುಖಾಂಬುಧಿಗೆ ಶ್ರೀಧರದೇವಿಗೆ
ಸರಸ ಸದ್ಗುಣ ಸಿಂಧು ಸುವಿಧಿಗಚ್ಚ್ಯುತ ಕಲ್ಪ
ತರುನಾದ ದೇವದೇವೋತ್ತಮನಿಗೆ ‖ ೨

ಸರ್ವಭೂಮಿಯನಾಳ್ದ ವಜ್ರನಾಭಿಗೆ ಮಹಾ
ಸರ್ವಾರ್ಥ ಸಿದ್ಧಿಪತಿಗಹಮಿಂದ್ರಗೆ
ಸರ್ವಜ್ಞಗಾದಿ ಪರಮೇಶ್ವರಗೆ ಸಹಜ ಕೃಪೆಲೋರ್ವಿ
ಸರ್ವರ ಕಾವ ಸರ್ವತೋಮುಖಗೆ ‖ ೩

## <u>೨೧. ಜಯತುಶಾರದದೇವಿ</u>

**ರಾಗ : ನಾಟಿ**

ಜಯತು ಶಾರದದೇವಿ ಜಯತು ವಾಗ್ದೇವಿ
ಜಯತು ವಿದ್ಯಾದೇವಿ ಭವ್ಯಸಂಜೀವಿ ಜಯತು ಜಯತು ‖ ಪಲ್ಲವಿ

ಜಯತು ತತ್ವೋದ್ಧಾರೆ ಜಯತು ಧರ್ಮವಿಚಾರೆ
ಜಯತು ಶಾಶ್ವತಶೂರೆ ಶರಧಿಗಂಭೀರೆ ‖ ೧

ಜಯತು ಫಣಿನಿಭವೇಣಿ ಜಯತು ವೀಣಾಪಾಣಿ
ಜಯತು ಕೃತಕಲ್ಯಾಣಿ ಜಯತು ಶ್ರುತವಾಣಿ ‖ ೨

ಜಯತು ವಿದ್ಯಾರಂಭೆ ಜಯತು ಸುವಚನಕುಂಭೆ
ಜಯತು ಕುಚಯುಗಕುಂಭೇ ಜಯತು ರುಚಿ ಬ್ರಂಭೆ ‖ ೩

ಜಯತು ಮುನಿಜನ ನೀತೆ ಜಯತು ಮೃಗಮದ ಮಾತೆ
ಜಯತು ಜಿನಮುಖಜಾತೆ ಜಯತು ವಿಖ್ಯಾತೆ ‖ ೪

ಜಯತು ಸರಸಿಜನೇತ್ರ ಜಯತು ಪಾವನಗಾತ್ರೇ
ಜಯತು ತ್ರಿಭುವನಸೂತ್ರೆ ಜಯತು ಸುಪವಿತ್ರೆ ‖ ೫

ಜಯತು ನಿತ್ತೈಶ್ವರ್ಯೆ ಜಯತು ವಿಭುದ ಸಂಪರ್ಯೆ
ಜಯತು ಪಂಡಿತವರ್ಯೆ ಕವಿತಾ ಶುಭಚರ್ಯೆ ‖ ೬

## ೨೧. ಜಯಮಂಗಲಂನಿತ್ಯಶುಭ

ಜಯಮಂಗಲಂ ನಿತ್ಯ ಶುಭಮಂಗಲಂ
ಜಯ ಸುನಂದಾದೇವಿಯಾತ್ಮ ಜನಿಗೆ
ಜಯಮಂಗಲಂ ನಿತ್ಯ ಶುಭಮಂಗಲಂ ॥ ಪಲ್ಲವಿ

ನಾಗನರಸುರಮುನೀಂದ್ರಾದಿ ವಂದಿತಪದದೊಳೆ
ಭೋಗದಾಮೃತವ ಮಳೆಗರೆದವಗೆ
ಪೊಗಲನನ್ಕದವ ಬೇಗ ಮಗ್ಗಿಸಿ ಯಶ
ಶ್ರೀಗೆ ನೆಲೆಯಾದ ಸುಂದರಮೂರ್ತಿಗೆ ॥ ೧

ಭೂಮಿಭಾಮಿನಿ ಹೊನ್ನ ಬಿಟ್ಟು ಭವಕೆಡಿಸಿದಗೆ
ರಾಮರಾವಗ ಪೂಜಿತಾಂಘ್ರಿಯುಗಗೆ
ಚಾಮುಂಡರಾಜ ಹೃತ್ಕುಮುದ ಚಂದ್ರೋದಯಗೆ
ಶ್ರೀಮಹಾಮೇರು ವಿಭಧೈರ್ಯ್ಯಯುತಗೆ ॥ ೨

ಧರೆಗೆ ಬೆಳ್ಗುಳ ಗಿರೀಂದ್ರಾಗ್ರನಿಸನಿಗೆ
ತರಣಿ ಶತಕೋಟಿ ತೇಜೋದ್ಭಾಸಿಗೆ
ಪರಮ ಭವ್ಯಾವಳಿಗೆ ಚಿರಕಾಲ ಸಲಹುತ್ತ
ಸ್ಥಿರನಾದ ಶ್ರೀ ಗೊಮಟೇಶ್ವರನಿಗೆ ॥ ೩

## ೨೩. ಮಂಗಲಂಮಂಗಲಂಗೊಮ್ಮಟ

ಮಂಗಲಂ ಮಂಗಲಂ  ಗೊಮ್ಮಟ ಜಿನಪತೆ
ಮಂಗಲಂ ಮಂಗಲಂ ಕರ್ಮವಿನಾಶ
ಮಂಗಲಂ ಮಂಗಲಂ ಮುಕ್ತಿಯಕಾಂತ
ಮಂಗಲಂ ಮಂಗಲಂ ದಯಾನಿಧಿ ಮಂಗಲಂ ॥

ಆದಿನಾಥನ ಪುತ್ರ ಆಧಾರಯುತನಿಗೆ
ಮೇದಿನಿಯೊಳಗತಿ ಮೆರೆವವಗೆ
ಆದಿ ಚಕ್ರಿಯೊಳು ಯುದ್ಧವ ಮಾಡಿ ಗೆಲಿದವಗೆ
ಆದರ ಮೂರ್ತಿ ಸುನಂದಾದೇವಿ ಗರ್ಭಜಗೆ ॥ ೧

ತ್ರೈನೂರಿಪ್ಪತ್ತೈದು ಬಿಲುತ್ಸೇಧಗೆ
ವೈನದಿ ಮೋಹಶೂರನ ಗೆಲಿದವಗೆ
ತ್ರೈಗುರು ಕೋಟಿ ಕರ್ಮಭಟರನು ಗೆಲ್ದ
ಊನವಿಲ್ಲದ ಮುಕ್ತಿ ಸುಖದೊಳಿರ್ಪವಗೆ ॥ ೨

ಸತಿಸುತರನು ಬಿಟ್ಟು ಯತಿರೂಪ ತಾಳ್ದಗೆ
ಅತಿಸೂಕ್ಷ್ಮದಿಂದ ಪಾಲ್ಮಿಕದಿ ನಿಂದವಗೆ
ಅತಿಶಯದಿಂ ರಥ ಬಳಿ ವಿರಾಜಗೆ
ಅತಿಶಯದಿಂ ಇಂದ್ರಗಿರಿಯೊಳು ನಿಂದವಗೆ ॥ ೩

ಭವ್ಯಜ ಮಿತ್ರಗೆ ಭವಭಯದೂರಗೆ
ನವ್ಯರ ಸುಖದೊಳು ನೆಲಸಿದವಗೆ
ನವಕೋಟಿ ಮುನಿವಂದ್ಯ ಗೊಮಟೇಶ್ವರನಿಗೆ
ನವಮಣಿ ಮುಕುರದಂತೆಸೆವ ದೇವನಿಗೆ ॥ ೪

ಧರೆಯೊಳತ್ಯಧಿಕ ಬೆಳ್ಗುಳಗಿರಿಯೊಳು ನಿಂದು
ಸ್ಥಿರದಿಂದ ಭವ್ಯದ ಸಲಹುವಗೆ
ಗುರುಪಂಡಿತಾರ್ಯ ಕರುಣದಿ ರಕ್ಷಿಪ
ವರಮುಕ್ತಿಮತಿ ಗೊಮ್ಮಟ ಜಿನಪತಿಗೆ ॥ ೫

## <u>೨೪. ಜಯಮಂಗಲಂನಿತ್ಯಶುಭ</u>

ಜಯಮಂಗಲಂ ನಿತ್ಯ ಶುಭಮಂಗಲಂ
ಜಯ ಚೌವೀಸ ಮಹಾಜಿನರಿಗೆ
ಜಯಮಂಗಲಂ ನಿತ್ಯ ಶುಭಮಂಗಲಂ ॥ ಪಲ್ಲವಿ

ಭವಹರಾಧಿಪನಾದ ಆದಿಪರಮೇಶಗೆ
ಭಾವಜನ ಭಂಗಿಸಿದ ಅಜಿತಜಿನಗೆ
ಭವತಾಪವನು ಹರಿಸಿದಮಲ ಶಂಭವ ಜಿನಗೆ
ಭವ್ಯಜನ ಪರಿಪಾಲ ಅಭಿನಂದನ ಜಿನಾಧಿಪಗೆ ॥ ೧

ಕುಸುಮ ಬಾಣನ ಗೆಲಿದ ಸುಮತಿ ಜಿನರಾಜನಿಗೆ
ಅಸಮ ಅಘವನು ಗೆಲಿದ ಪದ್ಮಪ್ರಭುವಿಗೆ
ದೆಸೆಗೆಡಿಸುತಿಹ ಕರ್ಮಗೆಲಿದ ಸುಪಾರೀಶ್ವನಿಗೆ
ಶಶಿಕಾಂತೆಯೊಳೆಸೆವ ಚಂದ್ರಪ್ರಭನಿಗೆ ॥ ೨

ಪುಷ್ಪನಾಯಕ ವಿಜಯ ಪುಷ್ಪದಂತೇಶ್ವರಗೆ
ಪುಷ್ಪಚಾಪನ ಗೆಲಿದ ಶೀತಳೇಶ್ವರಗೆ
ಅಷ್ಟಮಹಾ ಪ್ರತಿಹಾರ್ಯ್ಯ ಶ್ರೇಯಾಂಸನಿಗೆ
ದುಷ್ಟಗುಣಗಣ ಹರನೆ ಶ್ರೀವಾಸುಪೂಜ್ಯನಿಗೆ ॥ ೩

ವಿಪುಲ ನಿರ್ಮಲಕಾರ ಶಶಿಕಾಂತ ವಿಮಲನಿಗೆ
ಅಪರೂಪತರ ರೂಪ ಅನಂತರಾಜನಿಗೆ
ಅಪರಮಿತ ಮೋಹಮರ್ದನ ಧರ್ಮೇಶ್ವರಗೆ
ಅಪರಮಿತ ಸುಖಕೊಡೆಯ ಶಾಂತಿ ಜಿನಪತಿಗೆ ॥ ೪

ಸಮವಸರಣಾಧೀಶ ಕಂತು ಜಿನರಾಜನಿಗೆ
ಸಮತೆಯಿಂ ಭವ ಹರಿಸಿದರ ಜಿನಾಧಿಪಗೆ
ಸುಮವ ಶರವನು ಗೆಲಿದ ಮಲ್ಲಿಜಿನ ದೇವನಿಗೆ
ಕಾಮಮದಹರನಾದ ಮುನಿಸುವ್ರತನಿಗೆ ॥ ೫

ನಾಮಸಾಸಿರಕೊಡೆಯ ನೇಮಿಜಿನಾದೀಶ್ವರಗೆ
ಭೂಮಿಯೊಳಗತಿಶೀಲ ನೇಮಿಜಿನಪತಿಗೆ
ಕಮಠೋಪ ವಿಜಯ ಶ್ರೀಪಾರಿಶ್ವನಾಥನಿಗೆ
ಶ್ರೀ ಮುಕ್ತಿಕಾಂತ ಶ್ರೀ ವರ್ಧಮಾನ ಜಿನಪತಿಗೆ ॥ ೬

ಕ್ಷಿತಿಯೊಳತಿಯಶವಾದ ಬೆಳ್ಗುಳದ ಭಾಂಡಾರಿ
ಬಸ್ತಿಯೊಳು ನೆಲೆಸಿರುವ ಚೌವ್ವೀಸ ತೀರ್ಥರಿಗೆ
ನುಡಿಪ ಶ್ರೀಗುರು ಪಂಡಿತಾರ್ಯರನು ರಕ್ಷಿಸುತಿರ್ಪ
ಅತಿಶಯದ ಶ್ರೀವೀರಾಂತ್ಯ ಜಿನವರರ್ಗ್ಗೆ ॥ ೭

<u>**೨೫. ವರವಾಣಿಯೊಳು**</u>

ವರವಾಣಿಯೊಳು ಮತಿಬೇಡಿ
ಹರಿಣನೇತ್ರಿಯರೆಲ್ಲ ಕೂಡಿ
ಕರಕಮಲದಿಯಾರತಿಗಳ ಹೂಡಿ
ಸುರಸತಿಯರ ನಿಭಕಾಂತಿಯ ಗೂಡಿ
ಸುರಪತಿವಿನುತ ಶ್ರೀ ಚಂದ್ರ ಜಿನೇಂದ್ರಗೆ
ತರುಣಿಯರಾರತಿಯ ಬೆಳಗಿಗೇ ॥ ೧

ಬಾಲಕೋಗಿಲೆ ಧ್ವನಿಯಿಂದ
ಲೋಲನೇತ್ರೆಯರಾಗದಂ
ಸಾಲಾಗಿ ನಿಮದ ಸತಿಯರ ಚಂದ
ಬಾಲಚಂದ್ರನ ಕಾಂತಿ ಮುಖದೊಳು  ನಿಂದ
ಲೀಲೆಯಿಂದಲಿಯಾರತಿಗಳ ತಂದೆ
ಮೂಲೋಕದೊಡೆಯ ಶ್ರೀ ಚಂದ್ರ ಜಿನೇಂದ್ರಗೆ
ಬಾಲೆಯರಾರತಿಯ ಬೆಳಗಿರೇ ॥ ೨

ಜಗದೊಡೆಯನು ಜಿನಾಧೀಶ
ಸುಗುಣಾರ್ಕ ಕೋಟಿ ಪ್ರಕಾಶ
ಅಗಣಿತ ಗುಣಗಣತರತಿಗೆ ನಿಕೋಶ
ಬಿಗುವೆನಿಸುವ ಘಾತಿಕರ್ಮ ವಿನಾಶ
ಬಗೆದ ಸುಖವನೀವ ಮೋಕ್ಷನಿವಾಸ ತ್ರಿ
ಜಗವಿಯುತ ಶ್ರೀ ಚಂದ್ರ ಜಿನೇಂದ್ರಗೆ
ಸುಗುಣಿಯರಾರತಿಯ ಬೆಳಗಿರೇ ॥ ೩

ಮದನನ ಮದವನು ಮುರಿದ
ಹದನದಿ ಸ್ತ್ರೀಯರ ತೊರೆದ
ಕದನದಿಂದಲಿ ಕರ್ಮರಾಜನ ಗೆಲಿದ
ತ್ರಿದಶವಿನುತ ಶ್ರೀ ಚಂದ್ರಜಿನೇಂದ್ರಗೆ
ಸುದತಿಯರಾರತಿಯ ಬೆಳಗಿರೇ ॥ ೪

ಧರೆಯೊಳಗಧಿಕ ವೇಣುಪುರದಿ
ದೊರೆಚಂದ್ರ ಜಿನನ ಮಂದಿರದಿ
ಭರದಿ ಭವ್ಯರ ಮನೋರಥವನು ಸಲಿಸಿ
ಸ್ಥಿರದಿಂದ ಹೊಸಬಸದಿಯೊಳ್ನೆಲಸಿ
ಅರುಹನೆನಿಪ ಶ್ರೀ ಚಂದ್ರಜಿನೇಂದ್ರಗೆ
ತರುಣಿಯರಾರತಿಯ ಬೆಳಗಿರೇ ॥ ೫

**<u>೨೬. ಸುರಚಿರಮಣಿಯ</u>**

ಸುರಚಿರ ಮಣಿಯ ಮಂಡಪದೊಳು
ಮಿರುಗುವ ಕಾಂಚನಮಯದ ಹಸೆಯೊಳು
ಧರಣೀಶನಾ ಬಿಟ್ಟ ಪರಿಯನ ಪತಿಯ
ಮರುದೇವಿಯನಿಬ್ಬರ ಸುರಪಕುಳ್ಳಿರಿಸಿ ವಿಭದಲಿ ॥ ೧

ಸಾಲಾಗಿ ಕುಳ್ಳಿರಲು ದೇವರ್ಕಳು
ಆಳಾಪಿಸೆ ಸುರಗಾಯಕರು
ತಾಳಮದ್ದಳೆಯ ಶ್ರುತಿಗೂಡಿ ರಂಬೆ ಮೇನಕೆಯರು
ಲೀಲೇಕೈಮಿಗಲು ನಟಿಸಿದರು ॥ ೨

ಮೊಲಗಿದವಾಗಲು ತೂರ್ಯ್ಯತ್ರಯ
ಒಲವಿನೊಳಿಂದ್ರಾಣಿಯು ಮುತ್ತಿನ
ಸುಲಲಿತಕ್ಷತೆಯ ಪರಿಮಳ ಮಾಲೆಗಳನು
ತಳಿದಾರು ಬಳಸಿನೊಳ್ಬರಲು ದಿವಿಜೆಯರು ॥ ೩

ಆ ಜಿನ ಜನನಿಗೆ ಸಾನದ
ರಾಜನ ಮಾನಿನಿ ಹೂಮಾಲೆಯ
ನೋಜೆಯೊಳೂಡಿಸಿ ಚೆಲುವಿಂದಕ್ಷತೆಯನು ತಳಿದರು
ರಾಜೀವ ನಯನಗೊಲವಿನಲಿ ॥ ೪

ಸುರಲೋಕದ ದಿವ್ಯಾಭರಣಾಂ
ಬರದಿಂದ ಪುಣ್ಯದಂಪತಿಗಳ
ಸುರಪತಿ ಪೂಜಿಸಿದನೊಲವಿನಲಿ ದಿವಿಜಾಂಗನೆಯರು
ಹರಷದೊಳಾರತಿಯ ಬೆಳಗೀರೆ ॥ ೫

ರಾಜಶಿಖಾಮಣಿ ಫಣಿಪತಿಸುರ
ರಾಜಕಿರೀಟಾನತ ಪದ ಜಿನ
ರಾಜಪ್ರಿಯ ಜನಕ ಜಯ ಜಯತುಯೆಂದೆನುತಲಿ ನಾಭಿ
ರಾಜನಿಗಾರತಿಯ ಬೆಳಗೀರೆ ॥ ೬

ಭಾವೆಯರ ಶಿರೋಮಣಿ ತ್ರಿಭುವನ
ಸೇವಿತ ಪದಪದ್ಮ ವಿರಾಜಿತೆ
ಪಾವನ ಚರಿತೆ ಗುಣಭರಿತೆಯೆಂದೆನುತಲಿ ಮರು
ದೇವಿಗಾರತಿಯ ಬೆಳಿಗಿರೇ ॥ ೭

## ೨೭. ಧರೆಯೊಳಧಿಕವೇಣು

ಧರೆ ಯೊಳಧಿಕ ವೇಣುಪುರದ
ದೊರೆಚಂದ್ರ ಜಿನಮಂದಿರದ
ಪರಿಪರಿ ಸೊಬಗುಗಳಿರದೊರುವುದ
ಕರಚೆಲುವಿನಕಾಂತಿ ಚಿತ್ರ ಮಂಟಪದ
ಸರಸಿಜಾಸನದೊಳು ಸ್ಥಿರವಾಗಿ ನೆಲಸಿದ
ಸರಸ್ವತಿಗಾರತಿಯ ಬೆಳಗೀರೆ ॥ ೧

ಕರುಣಾವಾರುಧೀ ಚಂದ್ರವದನೆ
ಸುರನರವಂದಿತ ಚರಣೇ
ವರಮಣಿ ಮೌಕ್ತಿಕ ಹಾರದ ಭರಣೇ
ಪರಪುಟ ಪಂಚಮ ಸ್ವರದ ಸುಗಾನೆ
ಧರೆಯೊಳು ಸುಜನರ ಪೊರೆವ ಸುಜಾಣೆಗೆ
ತರುಣೆಯರಾರತಿಯ ಬೆಳಗೀರೆ ॥ ೨

ಕಡಗಕಂಕಣ ಕಾಂಚೀಧಾಮ
ನಡುವಿನೊಡ್ಯಾಣವು ಹೇಮ
ಎಡೆಎಡೆಯೊಳು ಕಡು ಸೊಬಗಿನ ಸ್ತೋಮ
ಉಡುಪತಿ ಕಾಂತಿಯ ಮಿಗುವ ಸುಧಾಮ
ಪೊಡವಿಯೊಳು ಜನರ ರಕ್ಷಿಸುವ ಸುಪ್ರೇಮಿಗೆ
ಮಡದಿಯರಾರತಿಯ ಬೆಳಗೀರೇ || ೩

ಕರದಿ ಪುಸ್ತಕ ವೀಣಾಪಾಣಿ
ಮೊರೆವ ಜವ್ವನದ ಕಟ್ಟಾಣಿ
ಕರದು ಸುಜ್ಞಾನವನೀವ ಗೀರ್ವಾಣಿ
ಹರುಷದಿ ಭಜಿಸುವ ಜನರಿಗೆ ವಾಣಿ
ಪರಮದಯಾನಿಧಿ ಪನ್ನಂಗವೇಣಿಗೆ
ತರುಣಿಯರಾರತಿಯ ಬೆಳಗೀರೇ || ೪

ಜಿನಮುಖ ಕಮಲ ಸುಜಾತೆ
ಜನಿತ ಜಾಣ್ಣುಡಿಯ ಪ್ರಖ್ಯಾತೆ
ಮುನಿಜನವಂದ್ಯೆ ವನಿತೆ ಲೋಕಮಾತೆ
ಘನಮುಕ್ತಿ ಪದವನು ಕೊಡು ಮಹಾದಾತೆ
ಜಿನನುತ ಗುಣಗುಣಭರಣ ಭೂಷಿತಗೆ
ವನಿತೆಯರಾರತಿಯ ಬೆಳಗೀರೇ || ೫

## <u>೨೮. ಪರಮಜಿನೇಂದ್ರನನೆನೆದು</u>

ಪರಮಜಿನೇಂದ್ರನ ನೆನೆದು
ಸರಸಿಜಮುಖಿಯರು ನೆರೆದು
ಕರದಕಂಕಣ ಝಣರವಗಳೆಸೆಯಲು
ಬೆರಳ ಮುದ್ರಿಕೆ ಕಾಂತಿ ಧರೆಗೆ ರಂಜಿಸಲು
ಕಿರುನಡುವಿನ ಕಾಂಚಿಧಾಮ ಹೊಳೆಯಲು
ಧರಣಿರಾಜ ಪಟ್ಟದರಸಿ ಪದ್ಮಾಂಬೆಗೆ
ತರುಣಿಯರಾರತಿಯ ಬೆಳಗೀರೇ || ೧

ಶೀಲಭೂಷಿಣಿಯರು ನೆರೆದು
ನೀಲಕುಂತಳದ ನೀರೆಯರು
ಸಾಲೆಯಸೀರೆಯ ನಿರಿವಿಡಿದುಟ್ಟು
ಮೇಲೆನಿಸಿದ ಹೊನ್ನರವಿಕೆಯ ತೊಟ್ಟು
ಬಾಲೆಯರೊಲಿದು ಬಂಗಾರವನಿಟ್ಟು

ವ್ಯಾಲರಾಜನ ಪಟ್ಟದರಸಿ ಪದ್ಮಾಂಬೆಗೆ ಮೊಗೆ
ಬಾಲೆಯರಾರತಿಯ ಬೆಳಗೀರೇ ॥ ೨

ಸೋಗೆ ಮುಡಿಯ ಸುಗುಣಿಯರು
ಕೋಲೆಗೆ ಸ್ವರದ ಕಾಂತಿಯರು
ಪೂಗಾಲ್ವನಿತೆಯರೂಪವರ ಜರಿದು
ವೇಗ ವಿಳಂಬ ಮಧ್ಯತ್ವರಿತವನರಿತು
ರಾಗದಿ ಧವಳದ ಮಳೆಯನೆ ಕರೆದು
ನಾಗರಾಜನ ರಾಣಿ ಪದ್ಮಾವತಿಯಮ್ಮಗೆ
ಆಗಮದಾರತಿಯ ಬೆಳಗೀರೇ ॥ ೩

ಅಂಗನಾಮಣಿಯರು ಬಂದು
ಶೃಂಗಾರವೆಸವುತ ಬಂದು
ಕಂಗಳಪ್ರಭೆಯಿಕ್ಕೆಲದೊಳು ಬೆಳಗಿ
ಹೆಂಗಳೊಳಿವ ಜಾಣೆಯರೊಳಗೆ
ಹಿಂಗದೆ ವಾದ್ಯದ ಧ್ವನಿಗಳು ಮೊಳಗೆ
ಬೃಂಗನಂತ ಪಾಲ ಪೊರೆವ ಪದ್ಮಾಂಬೆಗೆ
ಮಂಗಳಾರತಿಯ ಬೆಳಗೀರೇ ॥ ೪

ಚಂದ್ರಮುಖದ ಚದುರೆಯರು
ಕಂದರ್ಪರತಿಯ ಹೋಲುವರು
ಮಂದಗಮನದಿ ಮಾನಿನಿಯರು ನಡೆದು
ಹೊಂದಾವರೆ ಹೂವ ತುರುಬಿಗೆ ಮುಡಿದು
ದ್ವಂದ್ವ ಹಸ್ತದಿ ಹರಿವಾಣವ ಪಿಡಿದು
ನಂದಪುರದರಮನೆಯ ಪದ್ಮಾಂಬೆಗೆ
ಚೆಂದದೊಳಾರತಿಯ ಬೆಳಗಿರೇ ॥ ೫

**<u>೧೯. ಜಯಜಯಆದಿ</u>**

ಜಯಜಯ ಆದಿಜಿನೇಂದ್ರ
ಜಯಜಯ ಬೋಧಾಬ್ದ ಚಂದ್ರ
ಜಯಜಯ ಬುಧಮುನಿಪತಿನುತ ಚರಣ
ಜಯಜಯ ಬೋಧದಿವಾಕರ ಕಿರಣ
ಜಯಜಯ ಬುದ್ಧಕರ್ಮಾಷ್ಟಕ ಹರಣ
ಜಯವೆಂದಾರತಿಯ ಬೆಳಗಿರೇ ॥ ೧

ಜಯಜಯ ಜಯವರ್ಮನೃಪಗೆ
ಜಯಜಯ ಮಹಾಬಾಲಕಗೆ
ಜಯಜಯ ಈಶಾನಕಲ್ಪಧ್ರುವಗೆ
ಜಯಜಯ ಶ್ರೀವಜ್ರಜಂಘನನಿಗೆ
ಜಯಜಯ ಭೋಗಭೂಮಿನಾಳವನಿಗೆ
ಜಯವೆಂದಾರತಿಯ ಬೆಳಗಿರೇ ‖ ೧

ಜಯಜಯ ಶ್ರೀಧರಮರಗೆ
ಜಯಜಯ ಸುವಿಧಿರಾಜನಿಗೆ
ಜಯಜಯ ಅಚ್ಯುತಕಲ್ಪದೀಶನಿಗೆ
ಜಯಜಯ ಶ್ರೀವಾಸುಚಕ್ರೇಶಗೆ
ಜಯಜಯ ಶಾಶ್ವತ ಸಿದ್ಧಿನಾಯಕಗೆ
ಜಯಜಯವೆಂದಾರತಿಯ ಬೆಳಗಿರೇ ‖ ೨

ಜಯಜಯ ಸಾಕೇತಪತಿಗೆ
ಜಯಜಯ ನಾಭಿಭೂಪತಿಗೆ
ಜಯಜಯ ಶ್ರೀಮರುದೇವಿಯಮ್ಮನಿಗೆ
ಜಯಜಯ ಷೋಷಡ ಸ್ವಪ್ನ ಜನಿತೆಗೆ
ಜಯಜಯ ಶ್ರೀಜ್ಞಾನಧರ ಆದಿದೇವಗೆ
ಜಯವೆಂದಾರತಿಯ ಬೆಳಗಿರೇ ‖ ೪

ಜಯಜಯ ಗರ್ಭಾವತರಣ
ಜಯಜಯ ಜನ್ಮಾಭಿಷವಣ
ಜಯಜಯ ಪರಿನಿಷ್ಕ್ರಮಣ ಕಲ್ಯಾಣ
ಜಯಜಯ ಕೇವಲ ಜ್ಞಾನ ಭಾಸ್ಕರಗೆ
ಜಯಜಯ ನಿರ್ವಾಣ ಪತಿಪುರುದೇವಗೆ
ಜಯವೆಂದಾರತಿಯ ಬೆಳಗಿರೇ ‖ ೫

ಜಯಜಯ ತ್ರಿಜಗದಾರಾಧ್ಯ
ಜಯಜಯ ಭುಜಗೇಂದ್ರಸ್ತುತ್ಯ
ಜಯಜಯ ಅಜಹರಿಪೂಜಿತ ಚರಣ
ಜಯಜಯ ಭುಜಗಭೂಷಣನುತ ಚರಣ
ಜಯಜಯ ಜೈನಮತಾಂಬುಧಿ ಚಂದ್ರಗೆ
ಜಯಜಯವೆಂದಾರತಿಯ ಬೆಳಗಿರೇ ‖ ೬

ಜಯಜಯ ಧರೆಗತಿಯಶಯದ
ಜಯಜಯ ಶ್ರೀವೃಷಭಪುರದ

ಜಯಜಯ ಚೈತ್ಯಾಲಯದಿ ರಂಜಿಸಿದ
ಜಯಜಯ ಹರಿಪೀಠದೊಳು ಶೋಭಿಸುವ
ಜಯಜಯ ಸಾಸಿರಕಮಲದೊಳೊಪ್ಪುವ
ಜಯ ಜಯ ಆದಿದೇವನಿಗಾರತಿಯ ಬೆಳಗಿರೇ ॥ ೭

**೩೦. ಜಯಚಂದ್ರನಾಥನಿಗೆ**

ಜಯಚಂದ್ರನಾಥನಿಗೆ ಜಯ ಇಂದ್ರವಂದಿತಗೆ
ಜಯಚಂದ್ರ ಪುರವಾಸ ಸರ್ವೇಶಗೆ
ಜಯ ಜಯಾಚಂದ್ರ ಲಾಂಛನಗೆ
ಜಯಜಯಾ ರುಂದ್ರಕರುಣಗೆ
ಜಯಜಯಾ ಸಾಂದ್ರ ಸದ್ಗುಣ ಗಂಭೀರಗೆ
ಜಯಜಯಾ ಚಂದ್ರ ಭಾಸ್ಕರ ಕೋಟಿಕಿರಣಗೆ
ಜಯಜಯಾ ಚಂದ್ರವಿಷ್ಟರದಾತಗೆ
ಜಯಜಯಾ ಚಂದ್ರನನ ಜಿನಚಂದ್ರಗೆ
ಜಯವೆಂದಾರತಿಯ ಬೆಳಗಿರೇ ॥ ೧

ಜಯ ಪರಮಪುರುಷನಿಗೆ
ಜಯದುರಿತನಾಶನಿಗೆ
ಜಯನರೋರಗನಮಿತ ನುತಪಾಲಗೆ
ಜಯ ಪರಮ ಪಾವನಗೆ
ಜಯ ಸ್ಮರಣಗೆಲಿದಗೆ
ಜಯ ಜರೆಮರಣವ ತೊರೆದವಗೆ
ಜಯಜಯ ನಿರಘ ನಿರ್ಮಲ ನಿರುಪಮಗೆ
ಜಯಜಯ ನಿರವಂದ್ಯ ನಿರ್ವಿಕಲ್ಪನಿಗೆ
ಜಯಮೋಕ್ಷ ಲಕ್ಷ್ಮೀರಮಣಗೆ
ಜಯವೆಂದಾರತಿಯ ಬೆಳಗಿರೇ ॥ ೨

ಜಯವೀತರಾಗನಿಗೆ
ಜಯಜಾತರೂಪನಿಗೆ
ಜಯಖ್ಯಾತಿವಂತ ಸದ್ಗುಣ ಶಾಂತಗೆ
ಜಯ ಭೂತನಿಗೆ ಜಯ ನೀತಿ ಕೋವಿದಗೆ
ಜಯ ಶತಪರ್ವಪುರದಧಿನಾಥಗೆ
ಜಯ ಯತಿ ಪಂಡಿತಾರ್ಯನುತಿಪಗೆ
ಜಯ ಮತಿಯುತ ಜಿತ ಮದಮಹಿಮಗೆ

ಜಯ ಕ್ಷಿತಿಯೊಳಧಿಕ ಚಂದ್ರನಾಥಗೆ
ಜಯ ವೆಂದಾರತಿಯ ಬೆಳಗಿರೇ ॥ ೩

<u>**೩೧. ಸರಸಿಜಭವನರಸಿಯ**</u>

ಸರಸಿಜ ಭವನರಸಿಯ ಸರಸ್ವತಿಯನು
ನೆರೆ ಸ್ಮರಿಸುತ ಮುದದಿ
ತರುಣಿ ಪದ್ಮಿನಿಯ ಬಲಗೊಂಡು ಪದ್ಮಾವತಿಯಮ್ಮಗೆ
ತರುಣಿಯರಾರತಿ ಬೆಳಗಿರೇ ॥ ೧

ಚೆನ್ನ ಸರಿಬಣ್ಣದ ಮೈಗಣ್ಣನ
ಸತಿಗಿಮ್ಮಡಿ ರೂಹೋನ್ನತೆ
ನಿನ್ನ ಭಜಿಸುತ ಪದ್ಮಾವತಿಯಮ್ಮಗೆ
ರನ್ನದಾರತಿಯ ಬೆಳಗಿರೇ ॥ ೨

ಸತಿಯರ ಕುಲಕತಿಶಯ ಮಣಿ
ಕ್ಷಿತಿಗತಿನುತ ಸನ್ಮತಿಗಳನಿತ್ತು
ಸತತ ಸಜ್ಜನರ ಸಲಹು ಪದ್ಮಾವತಿಯಮ್ಮಗೆ
ಸತಿಯರಾರರಿಯ ಬೆಳಗಿರೇ ॥ ೩

ಸಂತತ ಸಂತೋಷದಿ ಭಜಿಸುವ
ಚಿಂತಿಸಿ ಮನದಂತರಂಗದೊಳು
ನಿಂತು ಪೂಜಿಸುವ ಮನುಜರ ರಕ್ಷಿಪನಾಗ
ಕಾಂತೆಗಳಾರತಿಯ ಬೆಲಗಿರೇ ॥ ೪

ಅಂಬುಜಮುಖಿ ಬಿಂಬಾಧರೆ ಕರ
ವಾಂಬುಜ ನಯನಾಂಬಿಕೆ ತಾಯೆ
ನಂಬಿದ ಜನರ ಸಲಹು ಹೊಂಬುಚಪುರದ ಪ
ದ್ಮಾಂಬಿಕೆಗಾರತಿಯ ಬೆಳಗಿರೇ ॥ ೫

ಅಂಗಣಮಣಿ ಶೃಂಗಾರದ ಹೊಸ
ಮಂಗಲಮುಖಿ ಸಂಗೀತವಿನೋದೆಗೆ
ಹೊಂಗಳಸ ಕುಚದ ಕುವರಿಯರು ಪದ್ಮಾವತಿಯಮ್ಮಗೆ
ಮಂಗಳರಾತಿಯ ಬೆಳಗಿರೇ ॥ ೬

ಸನ್ನುತ ಗುಣರನ್ನೆ ಮೋಹನೆಗೆ
ಪನ್ನಗ ಕುಲದುನ್ನತಿಯಾಧರ

ನೋನ್ನತ ಸರಸಿ ಗುಣಸರಸಿ ಪದ್ಮಾವತಿಯಮ್ಮಗೆ
ಕನ್ನೆಯರಾರತಿ ಬೆಳಗಿರೇ ‖ ೭

ಬಡನಡು ನಡನಡುಗುವ ಕುಚ ಹೊ
ಮ್ಮಿಡಿ ಮುಡಿ ಕಡು ಬೆಡಗಿನ ಜಾಣೆ
ಬಿಡದೆ ಭಕ್ತರನು ಸಲಹುವ ಪದ್ಮಾವತಿಯಮ್ಮಗೆ
ಬೆಡಗಿನರಾರತಿಯ ಬೆಳಗಿರೇ ‖ ೮

ಮೇರುವಿನಿಂದ ದಕ್ಷಿಣ ಭರತಾರ್ಯ್ಯವನಿ
ವರ ವೇಣುಪುರದೊಳು ಪಾರೀಶ್ವ ಜಿ
ನರ ಬಸದಿಯೊಳು ನೆಲಸಿದ
ನಾರಿ ಪದ್ಮಿಣಿಗೆ ಜಯಜಯತು ‖ ೯

ಮನುವಂಶಾಬುಧಿ ವರ್ಧನ ಚಂದ್ರಗೆ
ಇನಶಶಿಕೋಟಿ ಪ್ರಕಾಶನಿಗೆ
ಘನತರ ಸೌಖ್ಯ ಪ್ರದಾಯಕ
ನೆನಿಸಿದ ಸುರಚಿರಗೊಲಿದಾರತಿಯೆತ್ತಿರೇ ‖ ೧

ಗಜಲಾಂಛನನುಳ್ಳ ಅಜಿತ ಜಿನೇಶಗೇ
ವಿಜಿತ ಮದನ ಸಂಭವನಾಥಗೆ
ಗಜರಿಪುವಿಷ್ಟರ ಅಭಿನಂದನಿಗೆ
ತ್ರಿಜಗದೊಡನೆ ಸುಮತೀಶನಿಗೆ ‖ ೨

ಮಾರಮರ್ಧನ ಪಟುವಾರಿಜ ಪ್ರಭವಿಗೆ
ಕಾರುಣ್ಯನಿಧಿ ಸುಪಾರೀಶ್ವೇಶನಿಗೆ
ತಾರಾದೀಪ ಚಂದ್ರಪ್ರಭೇಶನಿಗೆ
ಭೂರಿ ವೃಭವ ಪುಷ್ಪದಂತನಿಗೆ ‖ ೩

ಭೂತಳಪತಿನುತ ಶೀತಳನಾಥಗೆ
ಜಾತರೂಪಾನ್ವಿತ ಶ್ರೇಯಾಂಶನಿಗೆ
ಪ್ರತಿಹಾರ್ಯ್ಯನುತ ವಾಸುಪೂಜ್ಯನಿಗೆ ಶ್ರೀ
ವೀತರಾಗಗೆ ವಿಮಲೇಶನಿಗೆ ‖ ೪

ಅಂತಕವಿಜಯ ಅನಂತ ಜಿನೇಶಗೆ
ಗ್ರಂಥವರ್ಜಿತ ಧರ್ಮನಾಥನಿಗೆ
ಚಿಂತಿತ ಫಲದ ಪ್ರಶಾಂತ ಜಿನೇಶಗೆ
ಕಂತು ವಿಜಯ ಕುಂಥುನಾಥನಿಗೆ ‖ ೫

ವರಮುಕ್ತಿರಮಣ ಶ್ರೀ ಅರಜಿನನಾಥಗೆ
ದುರಿತ ವಿಜಯ ಮಲ್ಲಿನಾಥಗೆ
ಸುರನರವಂದಿತ ಮುನಿಸುವ್ರತನಿಗೆ
ಪರಮಪಾವನ ನಮಿನಾಥನಿಗೆ ॥ ೭

ರಾಮಕೇಶವನುತ ನೇಮಿ ಜಿನೇಶಗೆ
ಸ್ವಾಮಿಪಾರೀಶ್ವ ಜಿನೇಶ್ವರಗೆ
ಸೋಮಕೋಟಿ ಪ್ರಕಾಶ ಸಾಸಿರದಷ್ಟು
ನಾಮದೊಡೆಯ ವೀರನಾಥನಿಗೆ ॥ ೭

ಮತಿಶ್ರುತವತಿ ಮನಪ್ಪರಿಯಾಯವೆಂದೆಂಬ
ಚತುರ್ಜ್ಞಾನ ಜ್ಯೋತಿಯ ವರಪಾದಕೆ
ವ್ರತಶೀಲ ಚಾರಿತ್ಯಗುಣಗಳುಳ್ಳವರೆಲ್ಲ
ಪತಿವ್ರತೆಯರೆಲ್ಲರು ಬಂದಾರತಿಯೆತ್ತಿರೇ ॥ ೮

ವೃಷಭ ಸೇನಾಧಿಗೌತಮಾತ್ಯ ಗಣೇಶಗೆ ಪ
ರುಷದಾರತಿಯಿಂದ ಒಲಿವೊಲಿದು ಪು
ರುಷ ಚಕ್ರಿಯನುಳ್ಳ ಸರಸಿಜಾಂಬಿಕೆಯರು ಹ
ರುಷಶ್ರು ಸೂಸಿ ಆರತಿಯೆತ್ತಿರೇ ॥ ೯

ಕ್ಷಿತಿಗತಿಶಯ ಅಕ್ಷಯ ಪುರಭವ್ಯರ್ಗೆ
ಯತಿಕುಲ ಲಲಿತ  ತೀರ್ಥಾಚಾರ್ಯ್ಯರ್ಗೆ
ಅತಿ ಪ್ರೀತಿಯಿಂದ ರಕ್ಷಿಪ ಪಾರೀಶ್ವೇಶಗೆ
ಮತಿವಂತೆಗೊಲಿದಾರತಿಯೆತ್ತಿರೆ ॥ ೧೦

## ೩೨. ಕನಕಪುರದಜಯಂಧರಗೇ

ಕನಕಪುರದ ಜಯಂಧರಗೇ
ವನಿತೆ ಪೃಥ್ವೀದೇವಿ ಸುತಗೇ
ಜನಿಸಿದ ನಾಗಕುಮಾರನ ನೋಡಿ
ವನಿತೆಯರೆಲ್ಲರು ಧವಳವ ಪಾಡಿ
ಘನ ಬೇಗದೊಳಾರತಿಗಳ ಮಾಡಿ
ಮನದರ್ತಿಯಿಂದ ಮಾನಿನಿಯರು ಬೆಳಗಿರೇ ॥ ೧

ದಿಕ್ಕುದಿಕ್ಕಿಗೆ ಕೀರ್ತಿವಡೆದಾ
ಸೊಕ್ಕಿದಾನೆಯ ಕುದುರೆಗಳ ಪಿಡಿದಾ
ಅಕ್ಕಯಿವಳು ತಂಗಿಯೆಂಬುದನರಿದಾ

ಸಕ್ಕರವಿಲ್ಲಾದ ರೂಪಿನಿಂದ ಜರಿದಾ
ಚಿಕ್ಕಪ್ರಾಯದ ಮಾನಿನಿಯರ ಗೆಲಿದಾ
ಕಕ್ಕಸ ಕುಚದ ಕೋಮಲೆಯರು
ಅಕ್ಷತೆಯನಿಟ್ಟಾರತಿಯ ಬೆಳಗೀರೇ || ೨

ವ್ಯಾಲ ಮಹಾವ್ಯಾಲರನು ಓಲೈಸಿ ಬೋಧ್ಯಾಭೇದ್ಯರು
ಲೀಲೆಯಿಂದಲಿ ಬಂದು ಮುಕುಟವರ್ಧನರು
ಸಲಾಗಿ ಬಂದು ಕುಳಿತು ಜೂಜನಾಡಿದರು
ಸೋಲಿಸಿ ಕಳಿಸಿದ ನಾಗಕುಮಾರಗೆ
ಬಾಲೆಯರಾರತಿಯಾ ಬೆಳಗಿರೇ || ೩

ಚಂಡಪ್ರಭನ ಗೆಲಿದವಗೆ ಪ್ರ
ಚಂಡ ಪೃಥ್ವೀದೇವಿ ಸುತಗೇ
ಮಂಡೆ ಬಾಗಿದರ ಮನ್ನಿಸಿ ಕಳಿಪಿದವಗೇ
ದಂಡೆತ್ತಿ ಪರರಾಯರ ಗೆಲಿದವಗೇ
ಕಂಡು ವೇತಾಳನ ನೆಲಕಿಕ್ಕಿಸಿದವಗೆ ಭೂ
ಮಂಡಲಕಧಿಪತಿ ನಾಗಕುಮಾರಗೆ ಕುಂದದಾರತಿಯ ಬೆಳಗಿರೇ || ೪

ರಾಯಾರಾಯರ ಗೆಲಿದವಗೇ
ವಾಯುವೇಗನ ಕೆಡೆದವಗೇ
ಪ್ರಾಯದೈವತ್ತಾರು ದೇಶವ ಹಾಯ್ದು
ತಾಯ ನೆನೆದು ತನ್ನೂರಿಗೈದಿದಗೇ
ಸ್ತ್ರೀಯರು ಎಂಟು ಸಾವಿರ ಮಂದಿ ಬರಲಿ
ಪುರಕ್ಕೈದಿದ ಮಹಾ ದೊರೆಗಳೊಗ್ಗಿನಲಿ ತನ್ನ
ಪ್ರಿಯಾನಿಗಾರತಿಯ ಬೆಳಗೀರೆ || ೫

ಬಿಡದೆ ಪನ್ನೆರಡು ಯೋಜನವೂ
ನಡೆತರುತಿರಲು ಪಾಳೆಯವೂ
ಪೊಡವಿಪತಿಗಳ ಸಂತೋಷದೊಳಗೆ
ಒಡೆಯನ ಎಡಬಲದೊಳಗಿರಲಾಗ
ಕಡು ಹರುಷದಿನಾನೆಯನೇರಿ ಬೇಗ
ಮಡದಿಯರೆಲ್ಲರು ನಡೆಯಲು ಈ ಭೂಮಂಡಲ
ದೊಡೆಯನಿಗಾರುತಿಯ ಬೆಳಗೀರೆ || ೬

ಉಜ್ಜಂತಗಿರಿಯೊಳು ನಿಂದು ಪ್ರಜ್ವಲಿಸುವ ಸ್ವಾಮಿ ಚೆಂದ
ಮಜ್ಜನದಭಿಷೇಕವ ಮಾಡಿ ಬಂದಾ
ದುರ್ಜನ ಸುಕಂಠನ ತಾನಾಗಿ ಕೊಂದಾ

ಜರ್ಜ್ಜರಿತ ಮಾಡಿ ಸ್ತ್ರೀಯರ ತಂದಾ
ಸೊರ್ಗ ಸೂರ್ಯಪ್ರಭ ನಾಗಕುಮಾರಗೆ
ವಜ್ರದಾರತಿಯ ಬೆಳಗೀರೇ ‖ ೭

ಧರೆಯೊಳು ಅತಿಶಯವಡೆದಾ
ಮರೆವೊಕ್ಕ ಜನರ ಮನ್ನಿಸಿದಾ
ತರುಣಿಯರೆಂಟು ಸಾವಿರ ಮಂದಿ ಬರಲಿ
ಪುರಕೈದಿದ ಮಹಾದೊರೆಗಳೊಗ್ಗಿನಲಿ
ಸುರಿದ ಕನಕವೃಷ್ಟಿ ಮಹಾಪೂರದಲಿ ತಂದೆ ತಾಯಿ
ಗೆರಗಿದ ಪುಣ್ಯ ಪುರುಷನಿಗಾರತಿಯ ಬೆಳಗೀರೆ ‖ ೮

**೩೩. ಜಯಮಂಗಳಂನಿತ್ಯ**

ಜಯ ಮಂಗಳಂ ನಿತ್ಯ ಶುಭ ಮಂಗಳಂ
ಜಯ ಪರಬ್ರಹ್ಮ ಶ್ರೀ ಶಾಂತೀಶಗೆ ಜಯ ಮಂಗಳಂ ‖ ಪಲ್ಲವಿ

ಭುವನಕವತರಿಸುವರುದಿಂಗಳೆನೆ ಮಣಿ ಮಳೆಯ
ದಿವದಾದಿ - ಮಧ್ಯಾಂತದೊಳು ಕರೆಯಲೂ
ಭುವನಾಂಬಿಕೆಯೂ ಸ್ವಪ್ನ ಕಾಣಲುದರದಿ ಜನಿಸಿ
ಅವಧಿ-ಮತಿ-ಶ್ರುತವೆಸೆದು ಕಳೆದೋರ್ಪಗೆ ಜಯ ‖ ೧

ಜನನಿಯುದರದಿ ತ್ರಿಜಗ-ದಿರವನರಿದಿರ್ಪವಗೆ
ಮುನಿಗಳಿಗೆ ತತ್ವ ನಿರ್ಣಯದೋರ್ಪಗೆ
ಜನಿಸಿ ಸುರಗಜವೇರಿ ಸುರಸಮಿತಿ ಸಹ ತೆರಳಿ
ಕನಕಾದ್ರಿಯೊಳು ಸುಧಾಬ್ಧಿಯ ಮಿಂದಗೆ ಜಯ ‖ ೨

ತೊಡರಳಿದ ತಪದಿ ಘಾತಿಗಳ ಖಂಡಿಸಿದವಗೆ
ಒಡನೆ ಕೇವಲ ಬೋಧವನು ತಾಳ್ದಗೆ
ಪೊಡವಿಗೈಸಾಸಿರದಿ ಬಿಲ್ಲಂತರಕ್ಕೊಗೆದು
ಸಡಗರಿಪ ಸಮವಸರಣದಿ ನಿಂದಗೆ ಜಯ ‖ ೩

ಲೋಕಕ್ಕೆ ಸದ್ಧರ್ಮ ಸಾರ ವೃಷ್ಟಿಯ ಕರೆದು
ಲೋಕದೊಳು ಬಹಿರ್ವಿಭೂತಿಗಳ ಕಳೆದಗೆ
ನಾಲ್ಕಘಾತಿಗಳ ಬೇರ್ಗಳ ಸುಟ್ಟುರುಹಿದಗೆ
ಲೋಕಾಗ್ರದೊಳು ನಿಂದ ಶ್ರೀಕಾಂತಗೆ ಜಯ ‖ ೪

**೩೪. ಜಯಮಂಗಲಂನಿತ್ಯಶುಭ**

ಜಯ ಮಂಗಲಂ ನಿತ್ಯ ಶುಭ ಮಂಗಲಂ
ಜಯ ಶೀಲ ವಿಮಲ ನಿತ್ಯಾನಂದಗೆ
ಜಯ ಮಂಗಲಂ ನಿತ್ಯ ಶುಭ ಮಂಗಲಂ ॥ ಪಲ್ಲವಿ

ಇಳೆವೆಣ್ಣನಾಳ್ದ ಜಯವರ್ಮ ಭೂಪಗೆ ಮಹಾ
ಬಲನಾದ ವಿದ್ಯಾಧರಾಧಿಪತಿಗೆ
ತೊಲತೊಲಗುತೀಶಾನ ಕಲ್ಪದೊಳು ಸೌಖ್ಯ ಬೊ
ಬ್ಬುಳಿಸಿ ಮೆರೆಮೆರೆವ ಲಲಿತಾಂಗ ದೇವನಿಗೆ ಜಯ ॥ ೧

ಧರಣಿಪತಿ ವಜ್ರಜಂಘಗೆ ಭೋಗ ಭೂಮಿಜಗೆ
ವರಸುಖಾಂಬುಧಿಗೆ ಶ್ರೀಧರ ದೇವಗೆ
ಸರಸ ಸದ್ಗುಣ ಸಿಂಧು ಸುವಿಧಿಗಚ್ಯುತ ಕಲ್ಪ
ಧರನಾದ ದೇವದೇವೋತ್ತಮನಿಗೆ ಜಯ ॥ ೨

ಸರ್ವ ಭೂಮಿಯನಾಳ್ದ ವಜ್ರನಾಭಿಗೆ ಮಹಾ
ಸರ್ವಾರ್ಥಸಿದ್ಧಿ ಪತಿಗಹಮಿಂದ್ರಗೆ
ಸರ್ವಜ್ಞಗಾದಿ ಪರಮೇಶ್ವರಗೆ ಕೃಪೆಯಿತ್ತು
ಸರ್ವರನು ಕಾಯ್ವ ವರ ಸರ್ವತೋಮುಖಗೆ ಜಯ ॥ ೩

**೩೫. ಆರತಿಬೆಳುಗುವೆ**

ಆರತಿ ಬೆಳಗುವೆ ಆನಂದದಿಂದಲಿ
ಹರಿಣಲಾಂಛನ ಶಾಂತಿ ಜಿನರಾಜಗೆ
ಕರಿಪುರಪತಿ ವಿಶ್ವಸೇನನ ಪಟ್ಟದ ನಾರಿ
ಐರಾದೇವಿಗೆ ತರುಣನಿಗೆ ॥ ಪಲ್ಲವಿ

ಎರಡೈದು ಎರಡನೆ ಭವದೊಳು ಚಾರಣ
ಮುನಿರಾಜನಿಗೆ ಅನ್ನದಾನವ ಕೊಟ್ಟು
ನರಸುರ ಸುಖ ಸಾಗರದೊಳಗೋಲಾಡಿ
ಪರಮ ಪದವಿಯ ಪಡೆದ ಮಹಾತ್ಮಗೆ ॥ ೧

ಮಾರನ ರೂಪಗೆ ಮಾರನೆನಿಪಗೆ
ಮಾರನ ಚಾಪವ ಮುರಿದಾತಗೆ
ಮೇರುಭೂಧರ ಧೈರ್ಯ ದುರಿತ ವಿಲೋಪಗೆ
ಚಾರುಚಿನ್ಮಯ ಚಿದ್ರೂಪನಿಗೆ ಆರತಿ ಬೆಳಗುವೆ ॥ ೨

ಐದು ಕಲ್ಯಾಣೇಶ ಐದನೆ ಚಕ್ರೇಶ
ಐದು ವಿಥ್ಯಾತ್ವ ವಿನಾಶನಿಗೆ
ಐದಿಂದ್ರಿಯ ಮದ ಮತಂಗ ಮೃಗೇಶಗೆ
ಐದನೆ ಗತಿ ನಿವಾಸನಿಗೆ ಆರತಿ ಬೆಳಗುವೆ ॥ ೩

ಪರಮ ಪುರುಷ ಪರಂಜ್ಯೋತಿ ಪರಬ್ರಹ್ಮ
ಪರಮೇಷ್ಠಿ ಪರಬೋಧ ಕೋಷನಿಗೆ
ಪರದೇವ ಪರವೀರ ಪರಮಾತ್ಮ ಪರಮೇಶ
ಸುರುಚಿರ ತತ್ವ ಪ್ರಕಾಶನಿಗೆ ಆರತಿ ಬೆಳಗುವೆ ॥ ೪

ಭವಕಾಲಕ್ಷ ದ್ರವ್ಯ ರಹಿತನಿಗೆ
ಭುವನತ್ರಯಕ್ಕಧಿನಾಥನಿಗೆ
ದೇವೆಂದ್ರನುತ ಪಾದ ಶ್ರೀಶಾಂತಿನಾಥಗೆ
ತವ ನಿಧಿ ಪುತ್ರನಾದಾತನಿಗೆ ಆರತಿ ಬೆಳಗುವೆ ॥ ೫

**<u>೩೬. ಮಂಗಲಾರತಿಯತಂದೆತ್ತಿರೆ</u>**

ಮಂಗಲಾರತಿಯ ತಂದೆತ್ತಿರೆ ಜಗದೊಡೆಯ ಶಾಂತಿ
ಜಿನರಾಜನಿಗೆ ಮಂಗಲಾರತಿಯ ತಂದೆತ್ತಿರೆ ॥ ಪಲ್ಲವಿ

ಕರಿಪುರಪತಿ ವಿಶ್ವಸೇನ ನೃಪೇಂದ್ರಗೆ
ತರುಣಿ ಐರಾದೇವಿ ಎಂಬಳಿಗೆ
ವರಸುತನಾಗಿ ಸಂಜನಿಸಿದ ದೇವಗೆ
ಪರಮ ಪುರಷಗಾರತಿ ಎತ್ತಿರೆ ಮಂಗಲಾರತಿಯ ॥ ೧

ಲಕ್ಷಪರಮಾಯುಷಿ ಇಕ್ಷ್ವಾಕುವಂಶಗೆ
ಅಕ್ಷಯ ಸುಖ ಫಲದಾಯಕಗೆ
ಮೋಕ್ಷ ಪದೈಕ ಲಕ್ಷಣ ಕನಕಾಂಗಗೆ
ಅಕ್ಷತ ನಿರಘಗಾರತಿ ಎತ್ತಿರೆ ಮಂಗಲಾರತಿಯ ॥ ೨

ವರಚಕ್ರಿ ನಾಲ್ವತ್ತು ಬಿಲ್ಲುತ್ಸೇದಗೆ
ವರವೀವ ಗರುಡ ಯಕ್ಷೇಂದ್ರನಿಗೆ
ಪರಮ ದಯಾಳು ಮಾನಸಿ ಯಕ್ಷಿದೇವಿಗೆ
ನಿರಘನ ಸ್ತುತಿಸಿ ಆರತಿಯೆತ್ತಿರೆ ಮಂಗಲಾರತಿಯ ॥ ೩

ಕ್ಷಿತಿಯೊಳೈದನೆಯ ಚಕ್ರೇಶಗೆ ಭೂಪಗೆ
ಅತಿ ಸುಖ ಸಂಪತ್ತಲಿರ್ದವಗೆ

ಗತಿ ನಾಲ್ಕು ಸುಲಭದಿ ಗೆಲಿದ ಮಹಾತ್ಮಗೆ
ಅತಿ ಪುಣ್ಯನಿಧಿಗಾರತಿಯೆತ್ತಿರೆ ಮಂಗಲಾರತಿಯ ॥ ೪

ಭವಭವದೊಳು ಬಹು ಸುಖ ಉಂಡದೇವಗೆ
ಭುವನೇಶ ಹರಿಣಿಯ ಲಾಂಛನಗೆ
ಸುವಿದಾದ್ರಿ ಸಮ್ಮೇದ ತುದಿ ಮೋಕ್ಷ ಪಡೆದಂಗೆ
ಭುವನ ಪ್ರಖ್ಯಾತಗಾರತಿಯೆತ್ತಿರೆ ಮಂಗಳಾರತಿಯ ॥ ೫

ಧರೆಯೊಳಗುತ್ತಮ ಹಿರಿಯ ಬಸದಿಯೊಳು
ಸ್ಥಿರವಾಗಿ ನಿಂದ ಶ್ರೀಶಾಂತೀಶಗೆ
ಕರವ ಮುಗಿದು ಸಾಷ್ಟಾಂಗ ಪ್ರಣುತರಾಗಿ
ಪರಮ ಭಕ್ತಿಯೊಳಾರತಿಯೆತ್ತಿರೆ ಮಂಗಳಾರತಿಯ ॥ ೬

## **೩೭. ಆರತಿಬೆಳಗುವೆನು**

ಅರತಿ ಬೆಳಗುವೆನು ನಿನಗೊಂದಾರತಿ ಬೆಳಗುವೆನು
ಮೇರುಗಿರಿ ಸಮ ಧೈರ್ಯ ನಿನಗೊಂದಾರತಿ ಬೆಳಗುವೆನು ॥ ಪಲ್ಲವಿ

ಮದವೆಂಬ ಮದ್ದಾನೆಯನು ಕದನವಿಲ್ಲದೆ ಗೆದ್ದ ಹರಿಯೇ
ಚದುರ ಲಕ್ಷ್ಮೀಪತಿಯೇ ನಿನಗಾರತಿ ಬೆಳಗುವೆನು ॥

ಪಂಚಬಾಣನ ಗೆಲಿದನಿಗೆ ಪಂಚೇಂದ್ರಿಯ ನಿಗ್ರಹನು ನೀನೆ
ಪಂಚಕಲ್ಯಾಣಾಧಿಪ ನಿನಗೊಂದಾರತಿ ಬೆಳಗುವನೆ ॥

ಸೋಮರವಿಶತ ಕೋಟಿ ತೇಜನೇ ಭೀಮಜನ್ಮಂಬೋಧಿದೂರನೆ
ರಾಮ ರಾವಣ ಪೂಜಿತ ನಿನಗಾರತಿ ಬೆಳಗುವೆನು ॥ ೩

ನರಸುರೋರಗ ವಂದ್ಯನು ನೀನೆ ಹರಿಹರ ಬ್ರಹ್ಮಾದ್ಯನು ನೀನೆ
ಪುರುಷೋತ್ತಮನೆ ನಿನಗೊಂದಾರತಿ ಬೆಳಗುವೆನು ॥ ೪

ಮೂರಾರುಂ ಮೂರಾರು ಗೆಲಿದ ನೂರನಲ್ವತ್ತೆಂಟು
ಧೀರಗಂಭೀರ ನಿನಗೊಲಿದಾರತಿ ಬೆಳಗುವೆನು ॥ ೫

## **೩೮. ಜಯಮಂಗಳಂನಿತ್ಯಶುಭ**

ಜಯ ಮಂಗಳಂ ನಿತ್ಯ ಶುಭಮಂಗಳಂ
ಜಯ ಜಗಜ್ಜನನಿ ಜ್ವಾಲಿನಿದೇವಿ ತೇ

ಜಯ ಮಂಗಲಂ ನಿತ್ಯ ಜ್ವಾಲಿನೀದೇವಿ ತೇ
ಜಯ ಮಂಗಳಂ ನಿತ್ಯ ಶುಭ ಮಂಗಳಂ ॥ ಪಲ್ಲವಿ

ಧವಲಾಂಗಿ ಧವಲಮೌಕ್ತಿಕಹಾರಧಾರಣಿ
ಧವಲಭಾಸುರ ಕುಂಡಲ ಭಾಸಿನಿ
ಧವಲಚಾಮರಧರ ಸ್ತ್ರೀ ಜನವಿರಾಜಿನಿ
ಪ್ರವಿರಾಜ ಸಚ್ಛಾಮಯಕ್ಷರಾಣಿ ॥ ೧

ಪದ್ಮಪಾದೇ ಪದ್ಮದಲ ಸಮವಿಲೋಚನೇ
ಪದ್ಮನಾಭೇ ಪದ್ಮಸೌಗಂಧಿಕೇ
ಪದ್ಮ ಹಸ್ತೇ ಪದ್ಮ ಮಿತ್ರಸಮಕಾಂತಿಕೇ
ಪದ್ಮಾನನೇ ಭಾಸುರ ಮೂರ್ತಿಕೇ ॥ ೨

ಗಜವೈರಿವಾಹನೇ ಝುಷಪಾಶಧಾರಿಣಿ
ಕುಜನ ಸಂಹಾರಿಣೇ ಭವ್ಯಜನನಿ
ವೃಜಿನಹರ ಜಿನಬಿಂಬ ಮಣಿ ಮಕುಟಧಾರಣಿ
ಸುಜನಪೋಷಿಣಿ ಸುವಾಂಛಿತದಾಯಿನೀ ॥ ೩

**<u>೩೯. ಕಮಲಪಾಣಿಸುಗುಣವೇಣಿ</u>**

ಕಮಲಪಾಣಿ ಸುಗುಣವೇಣಿ ಶ್ಯಾಮಮಾಲಿನಿ!
ಸಕಲ ಲೋಕಸುಂದರಾಂಗಿ ಜ್ವಾಲಾಮಾಲಿನಿ ॥ ಪಲ್ಲವಿ

ಅಂಬುಜಾಕ್ಷಿ ಕಂಬುಕಂಠಿ ಶ್ಯಾಮಯಕ್ಷಿಣಿ!
ನಂಬಿದವರ ಸಲಹುತಿಹಳು ಜ್ವಾಲಾಮಾಲಿನಿ ॥ ೧

ಇಂದುವದನೆ ಮಂದಗಮನೆ ಸುಂದರಾಗಿಯೇ
ಚಂದದಿಂದ ಸಲಹುತಿಹಳು ಮಹಿಷವಾಹಿನಿ! ॥ ೨

ರಾಜೀವಾಕ್ಷಿ ಹರಿಸಿ ಪೊರೆವ ಲೋಕನಾಯಕಿ!
ಪಾಲಿಸೆನ್ನ ಲೋಕಮಾತೆ ಜ್ವಾಲಾಮಾಲಿನಿ! ॥ ೩

**<u>೪೦. ಮಂಗಳಾರತಿತಂದುಬೆಳಗಿರೆ</u>**

ಮಂಗಳಾರತಿ ತಂದು ಬೆಳಗಿರೆ ಚಂದ್ರನಾಥನ ಯಕ್ಷಿಣಿಗೆ
ಅಂಬೆಗೆ ಜಗದಂಬೆಗೆ ಶ್ರೀ ಜ್ವಾಲಾಮಾಲಿನಿ ದೇವಿಗೆ ॥ ಪಲ್ಲವಿ

ಶುದ್ಧ ಸ್ನಾನವ ಮಾಡಿ ನದಿಯೊಳು ವಜ್ರಪೀಠದಿ ನೆಲೆಸಿದೆ
ತಿದ್ದಿ ತಿಲಕವ ಹಣೆಯೊಳಿಟ್ಟ ಮುದ್ದು ಮಂಗಳದೇವಿಗೆ ॥ ೧

ಹರಿವ ಮಿಂಚಿಸಿಕರೆವರಾಗದೆ ಭರದಿ ಸ್ಥಿರವಾಗಿರುತಿರೆ
ಪರಮ ಭಕ್ತರು ಸ್ಮರಣೆ ಮಾಡಲು ದುರಿತ ಪಿಂಗಿಪ  ದೇವಿಗೆ ॥ ೨

ಉಟ್ಟ ಒಡವೆಯ ಕಷ್ಟ ಕಳೆದು ಕೊಟ್ಟಳರಸಿನ ಸಿರಿಯನು
ಹೆತ್ತ ಕುವರನ ತೋರಿದಂತೆ ಭಾನುವಾರದೇವಿಗೆ ॥ ೩

**<u>೪೧. ಜಯಮಂಗಳಂನಿತ್ಯಶುಭಮಂಗಳಂ</u>**

ಜಯ ಮಂಗಳಂ ನಿತ್ಯ ಶುಭಮಂಗಳಂ
ಜಗದೊಳಗೆ ಜಿನಧರ್ಮ ಉದ್ಧಾರೆಗೆ
ಜಯ ಮಂಗಳಂ ನಿತ್ಯ ಶುಭ ಮಂಗಳಂ ॥ ಪಲ್ಲವಿ

ಜಾಲದಲಿ ಸಿಲುಕಿದಾ ಹರಿಣಿಯಂದದಿ ನಿಂದು
ವ್ಯಾಲರಾಜಗೆ ಬುದ್ಧಿ ಹೇಳಿ ಕಲಿಸಿ
ಬಾಲೆ ನೋಡೆಲ್ಲರ ಬಂಧನವನು ಪರಿಹರಿಸಿ
ಲಾಲಿಸಿ ಬಂದಂಥ ಧೀರೆ ಜ್ವಾಲಿನಿದೇವಿಗೆ ॥ ೧

ಭೀಮಲಿಂಗವನೊಡೆದು
ಸ್ವಾಮಿ ಚಂದ್ರಪ್ರಭರ ಕಾಣಿಸಿದೆ ಎಲ್ಲರಿಗೂ ಪ್ರತ್ಯಕ್ಷದಿ
ಅಹಿವೇಣಿ ಕಟ್ವಾಣಿ ಎಂದೆನಿಪ ಜ್ವಾಲಿನಿಗೆ
ಜಾಣ್ಮೆಯಿಂ ನಿತ್ಯ ಜಯಿಸಿದ ಮಾತೆಗೆ ॥ ೨

ಚಂದಿರಾಗಿರಿಯಿಂದ ಬಂದಾಳಾಕ್ಷಣದೊಳಗೆ
ಬಂದು ನಿಂದಿಹಳು ಸಿಂಹಪುರಿಯೊಳಗೆ
ಚಂದ್ರನಾಥಸ್ವಾಮಿ ಪಾದಸೇವೆಯ ಮಾಳ್ಪ
ಬಂದು ರಕ್ಷಿಪಳಂತೆ ಭಾಗ್ಯದ ನಿಧಿಗೆ ॥ ೩

**<u>೪೨. ಮಂಗಳಾರತಿಯತಂದೆತ್ತಿರೆ</u>**

ಮಂಗಳಾರತಿಯ ತಂದೆತ್ತಿರೆ ಜಯ ಮಂಗಳ ಶುಭ
ಮಂಗಳ ಶ್ರೀ ಜ್ವಾಲಾಮಾಲಿನಿಗೆ ಮಂಗಳಾರತಿಯ ತಂದೆತ್ತಿರೆ ॥ ಪಲ್ಲವಿ

ಥಳಥಳಿಸುವ ಮುಖ ಹೊಳೆಯುವ ಪಲ್ಲನುಂ
ನೆಲೆಗೊಂಡಿಹ ಚೆಲ್ವ ಪುರ್ಬುಗಳೂ

ಎಳೆನಗೆ ಮಿನುಗುವ ಬಾಯ್ದೆರೆಗಳನುಳ್ಳ
ಸುಳಿಗುರುಳಿನ ಜ್ವಾಲಾಮಾಲಿನಿಗೆ ಮಂಗಳಾರತಿ ‖ ೧

ಹಾರಪದಕ ಹರಳೋಲೆ ಮುತ್ತಿನ ಬೊಟ್ಟು
ಭಾರಿಯ ಭುಜಕೀರ್ತಿ ಬಾಪುರಿಯೂ
ಮಾರನ ಸತಿಯರು ಗೆಲುವರು ಪೂಸೊಬಗ
ನೀರಜ ಮುಖೀ ಶ್ರೀಜ್ವಾಲಿನೀದೇವಿಗೆ ಮಂಗಳಾರತಿ ‖ ೨

ಸಿಂಹಾಪುರಾಧಿಪ ಶ್ರೀ ಲಕ್ಷೀಸೇನರ
ಉನ್ನತ ಪ್ರಿಯ ಶಿಷ್ಯರಾಗಿರುವ
ಸುನ್ನುತ ಚಂದ್ರಸಾಗರ ವರ್ಣಿಯರಿಗೆ ಪ್ರ
ಸನ್ನವಾಗಿಹ ಶ್ರೀ ಜ್ವಾಲಾಮಾಲಿನಿಗೆ ‖ ೩

**೪೩. ಕುಂಜದಳಾಕ್ಷಣಿಕಮಲಿನಿಗೆ**

ಕಂಜದಳಾಕ್ಷಣಿ ಕಮಲಿನಿಗೆ
ಮಂಜುಳವೇಣಿ ಮನೋಹರಿಗೆ
ಕುಂಜರಗಮನೆಗೆ ರಂಜಿಪ ಮಹಿಮೆಗೆ
ಭುಜಂಗನ ರಾಣಿ ಭುವನೇಶ್ವರಿಗೆ
ಮಂಗಲಂ ಜಯ ಮಂಗಲಂ ಮಂಗಲಂ ಜಯ ಮಂಗಲಂ ‖ ೧

ಪೊಳೆವ ಲೊಕ್ಕಿಯೊಳಿರ್ಪ ಸುಲಲಿತೆಗೆ
ಮಲಯಜಗಂಧಿ ಸುಗಂಧಿನಿಗೆ
ಛಲದಿಂದ ಚರಣವ ನೆನೆದು ಸ್ಮರಿಪರಿಗೆ
ಬಲದ ಪ್ರಸಾದವನೀವಳಿಗೆ ‖ ೨

ಅಂಬುಜಮುಖಿ ಬಿಂಬಾಧರೆಗೆ
ನಂಬಿದ ಭಕ್ತರ ಸಲಹಳಿಗೆ
ತುಂಬು ಜವ್ವನೆ ಮರಿ ದುಂಬಿಗುರುಳ
ಚೆಲ್ವೆ ಪೊಂಬುಜ ಪುರದ ಪದ್ಮಾಂಬಿಕೆಗೆ ‖ ೩

**೪೪. ಕಮನೀಯಗಾತ್ರೆಗೆ**

ಕಮನೀಯ ಗಾತ್ರೆಗೆ ಕುಮುದ ಸುನೇತ್ರೆಗೆ ಕಮಲಸಮಾನನೆಗೆ
ರಮಣಿಯರೆಲ್ಲರು ನಮಿಸುತಲೆತ್ತಿರಿ ಕಮನೀಯದಾರತಿಯಾ ‖ ೧

ಕಳಕೀರವಾಣಿಗೆ ಸುಲಲಿತ ವೇಣಿಗೆ ಮಲಯಜಗಂಧಿನಿಗೆ
ಕುಲಶಕುಚದ ಕಾಮಿನಿಮಣಿಗೆತ್ತಿಗೆ ಕಮನೀಯದಾರತಿಯಾ ॥ ೨

ಕಂಬುಸುಕಂಠಿಗೆ ಪೊಂಬುಜವಾಸೆಗೆ ಅಂಬೆ ಪದ್ಮಾಂಬಿಕೆಗೆ
ಸಂಭ್ರಮದಿಂದಲಿ ರಂಭೆಯರೆತ್ತಿರೆ ಅಂಬುಜದಾರತಿಯಾ ॥ ೩

ಅರುಹ ಪಾರಿಶ್ವ ಜಿನೇಶನ ಯಕ್ಷಿಗೆ ಪರುಷ ಪದ್ಮಾಂಬಿಕೆಗೆ
ಧರಣರಾಜನ ಪಟ್ಟದರಸಿಗೆ ಬೆಳಗಿರೆ ಮರಕತದಾರತಿಯಾ ॥ ೪

ಮಾನಿನಿಮಣಿ ವನಮಾಲೆಗೊಲಿದು ಪತಿ ದಾನವ ಕರುಣಿಸಿದ
ಜಾಣೆಗೆ ಕಾಳೋರಗವೇಣಿಗೆ ಬೆಳಗಿರೆ ಮಾಣಿಕ್ಯದಾರತಿಯಾ ॥ ೫

ನಿತ್ಯಮಂಗಲ ಕಲ್ಯಾಣ ಸಂಪತ್ತಿಯ ಮುತ್ತೈದೆಯರ ಭಾಗ್ಯ
ಇತ್ತು ಎಮ್ಮನು ಕಾಯೆ ಮುತ್ತಿನಾರತಿಯನು ಎತ್ತುವೆ ಎಲೆ ತಾಯೇ ॥ ೬

ಹಾರ ಪದಕ ಹರಳೋಲೆ ಮೂಗುತಿ ಬಂದಿ ತೋರ ಮುತ್ತಿನ ಸರವು
ಚಾರು ಸುರತ್ನದ ಕಿರೀಟವನಿಟ್ಟಿಹ ನೀರೆಗಾರತಿ ಬೆಳಗಿರೇ ॥ ೭

**<u>೪೫. ನವರತ್ನದಾರತಿ</u>**

**ರಾಗ : ಕಾಂಬೋಧಿ**

ನವರತ್ನದಾರತಿ ತವಕದಿಂದೆತ್ತಿರಿ
ಭುವನಾಧಿವಾಸೆಗೆ ಭಕ್ತರ ಪೋಷೆಗೆ ॥ ಪಲ್ಲವಿ

ಲಲಿತಲಲಾಟದೊಳ್ ತಿಲಕದಿಂ ಶೋಭಿಪ
ಲಲನಯರೆಲ್ಲರು ಫಲವನು ಬೇಡುತ ॥ ೧

ಫಣಿಲೋಕ ರನ್ನೆಗೆ ಪರಮಸಂಪನ್ನೆಗೆ
ಜಿನದತ್ತಮಾತೆಗೆ ಗುಣರತ್ನಲೋಲೆಗೆ ॥ ೨

ಧರೆಯೊಳು ಪೊಂಬುಜ ಪುರವರವಾಸೆಗೆ
ಪುರುಷವಿಲಾಸೆಗೆ ಪದ್ಮಿಣಿದೇವಿಗೆ ॥ ೩

**<u>೪೬. ಮಂಗಳಂಮಂಗಳಂಭವಂತು</u>**

ಮಂಗಳಂ ಮಂಗಳಂ ಭವಂತು ತೇ ಮಂಗಳಂ ಮಂಗಳಂ ॥ ಪಲ್ಲವಿ

ಸಮನಸವಂದ್ಯೆಗೆ ಸುಖಫಲದಾತೆಗೆ
ವಿಮಲಕೋಮಲತರ ರೂಪಿಣಿಗೆ
ಅಮಿತ ಮಹಿಮೆಗೆ ಯಾಶ್ರಿತ ಪೋಷೆಗೆ
ದ್ಯುಮಣೀಂದು ಕೋಟಿ ಸಂಕಾಶಳಿಗೆ ಮಂಗಳಂ ಮಂಗಳಂ ‖ ೧

ಭೃಂಗ ಕುಂತಳೆಗೆ ಭರಿತ ಪೂರ್ಣತೋಷೆಗೆ
ಮಂಗಳಾಕಾರೆ ಸರ್ವೇಶ್ವರಿಗೆ
ತುಂಗ ವಿಕ್ರಮೆಗೆ ಭುಜಂಗನರಾಣಿಗೆ
ಸಂಗೀತ ಲೋಲೆಗೆ ಶುಭಫಲಕಾರೆಗೆ ಮಂಗಳಂ ಮಂಗಳಂ ‖ ೨

ವಾರಿಜನೇತ್ರೆಗೆ ವಾಸವಸ್ತೋತ್ರೆಗೆ
ಭೂರಿದುರಿತ ಭಯ ಹಾರಿಣಿಗೆ
ಘೋರವಿಷ ಸಚರಾಚರದ ಜೀವಗಳಿಗೆ
ದೊರೆಯಾಗಿಹ ಪರುಷ ಪದ್ಮಾಂಬಿಕೆಗೆ ಮಂಗಳಂ ಮಂಗಳಂ ‖ ೩

**<u>೪೭. ಆಯಾಸವಹುದೇಪದ್ಮಿಣಿಯೇ</u>**

ಆಯಾಸವಹುದೇ ಪದ್ಮಿಣಿಯೇ ನಿನಗಾಯಾಸವಹುದೇ
ದೇವಿ ಮಹಾದೇವಿ! ಭುವನ ಸಂಜೀವಿ! ‖ ಪಲ್ಲವಿ

ಜೀವದಯಾಧಿಕಾರಿಯು ಎಂಬ ಬಿರುದುಳ್ಳ
ಭಾವಜ ವಿಜಯನ ಯಕ್ಷೆ ಪ್ರತ್ಯಕ್ಷಳೇ
ಆಯಾಸವಹುದೇ ಪದ್ಮಿಣಿಯೇ ನಿನಗಾಯಾಸವಹುದೇ ‖ ೧

ಕರಣತ್ರಯದಿ ನಿತ್ಯ ಚರಣಸೇವೆಯಂ ನಿನ್ನ
ನಿರುತ ಭಕ್ತರು ಮಾಳ್ಪ ದುರಿತ ನೀಗಿತು ಎನ್ನ
ಆಯಾಸವಹುದೇ ಪದ್ಮಿಣಿಯೇ ನಿನಗಾಯಾಸವಹುದೇ ‖ ೨

ಸ್ಥಿರವಾಸೆ ವೇಣ್ಬುರ ಹಿರಿಯ ಬಸದಿಯೊಳು
ವರ ಶಾಂತಿನಾಥನ ಪರಮ ಸುಭಕುತಳೆ
ಆಯಾಸವಹುದೇ ಪದ್ಮಿಣಿಯೇ! ನಿನಗಾಯಾಸವಹುದೇ ‖ ೩

**<u>೪೮. ಮಂಗಳಂಮಂಗಳಂಪದ್ಮಾವತೇ</u>**

ಮಂಗಳಂ ಮಂಗಳಂ ಪದ್ಮಾವತೇ ಮಂಗಳಂ ಮಂಗಳಂ
ಇಂದುವದನೆ ಆರವಿಂದನಯನೆ ಮಕ

ರಂದವಾಸೆಗೆ ಶುಭ ಮಂದಿರೆಗೆ ಕಂದಣವನು ಮಾಡಿ
ಕಂದನ ಸಲಹಿದ ಮಂದಯಾನೆಗೆ ಮಧುಕರ ವಾಣಿಗೆ ॥ ೧

ಅಟ್ಟಿ ದುರುಳ ಹೊಯ್ ದಿಟ್ಟು ಭೂತಳದೊಳು
ಇಷ್ಟ ಸಿದ್ಧಿಯನೀಗ ಕೊಟ್ಟಳಿಗೆ
ಕಟ್ಟಾಣಿ ಮಣಿಗೆ ಕಾರುಣ್ಯಾಬ್ಧಿ ಸೋಮೆಗೆ
ದಿಟ್ಟೆ ಮದಾಂಬಿಕೆ ಪಟ್ಟವರ್ಧನೆಗೆ ಮಂಗಳಂ ಮಂಗಳಂ ॥ ೨

ಕುಕ್ಕುಟಾಹಿಯನೇರಿ ಸೊಕ್ಕಿದ ಗ್ರಹಗಳ
ದಿಕ್ಕಿಗೆ ಬಲಿಯನಿಕ್ಕಿದ ಧೀರೆಗೆ
ಚಿಕ್ಕ ಬ್ರಹ್ಮಾಂಕನ ದುಃಖವ ಪರಿದಿಟ್ಟ
ಚೊಕ್ಕ ಪೊಂಬುಜದ ಪದ್ಮಿಣಿ ದೇವಿಗೆ ಮಂಗಳಂ ॥ ೩

## ೪೯. ಮಂಗಲಂಧರಣೇಂದ್ರ

ಮಂಗಲಂ ಧರಣೇಂದ್ರ ಪದ್ಮಾವತಿ!
ಶೃಂಗಾರ ರಸಭರಿತೇ ॥ ಪಲ್ಲವಿ

ಧರಣೇಂದ್ರಗತಿಹಿತವಾದ ಸುಪಾಣಿಗೆ
ವರಗುಣ ಭೂಷಣೆಗೆ ವರಕುಕ್ಕುಟೋರಗವಾಹನ ಯಕ್ಷಿಗೆ
ಪರುಷ ಪದ್ಮಾವತಿ ಪರಮ ಪವಿತ್ರೆಗೆ ಮಂಗಲಂ ॥ ೧

ವಾಣಿ ವಿಭವ ಕಲ್ಯಾಣಿ ಪಾಷಾಂಕುಶ
ಪಾಣಿ ಸದ್ಗುಣ ಮಣಿಗೆ ಏಣಾನೇತ್ರೆಗೆ ಪ್ರೇಮದಿಂ ಸಲಹುವ
ಕ್ಷೋಣಿಗಧಿಕ ಕಟ್ಟಾಣಿ ನಿಃಶ್ರೇಣಿಗೆ ಮಂಗಲಂ ॥ ೨

ಖ್ಯಾತಿಕಲಿತ ಪೊಂಬುಚಪುರವಾಸೆಗೆ
ಪ್ರೀತಿ ಕರುಣಾನಿಧಿಗೆ ಭೂತಳದೊಳು ಭಕ್ತರ ಪರಿಪಾಲೆಗೆ
ಭೀತಿ ಹಾರಣಿ ಪದ್ಮಾವತಿ ದೇವಿಗೆ ಮಂಗಲಂ ಧರಣೇಂದ್ರ ॥ ೩

## ೫೦. ವಾರಣಯಾನೆವೈಯ್ಯಾರಿಣಿಗೆ

ವಾರಣಯಾನೆ ವೈಯ್ಯಾರಿಣಿಗೆ ಶುದ್ಧ
ಸಾರರಸಮ್ಯಕ್ತ್ವೆಗಾರತಿ ಎತ್ತಿರೆ ॥ ಪಲ್ಲವಿ

ದ್ವಾದಶದ್ವಯ ತೀರ್ಥವಸತಿ ವಾಸಿನಿಗೆ
ಬೋಧತ್ರಯಾಂಬಿಕೆಗೆ ಪದ್ಮಾಂಬಿಕೆಗೆ

ವೇದವೇದ್ಯಾಸಾರ ತತ್ವವಿಚಾರೆಗೆ
ಸಾಧಯಾಂಬುಧಿಗಾರತಿ ಎತ್ತಿರೇ ವಾರಣಯಾನೆ ॥ ೧

ಅಷ್ಟೋತ್ತರ ಶತ ನಾಮಾಧಿಕಾರಿಗೆ
ದುಷ್ಟ ದೆವ್ವಗಳ ಮರ್ದಿನಿಗೆ
ಪಟ್ಟವರ್ಧನೆ ಪದ್ಮಗಂಧಿ ಪನ್ನಗವೇಣಿ
ಇಷ್ಟಾರ್ಥದಾಯಿಗಾರತಿ ಎತ್ತಿರೇ ॥ ೨

ನರಸುರನಾಗಾರ್ಚಿತ ಪಾರಿಶ್ವೇಶನ
ಚರಣಾಬ್ಜಯುತ ಭೃಂಗ ಕನಕಲತಾಂಗಿಗೆ
ವರವೇಣುಪುರದ ಹಿರಿಬಸದಿ ಶೋಭಿಪದೇವಿ
ಚರಣ ಕಮಲೆಗಾರತಿಯೆತ್ತಿರೆ ॥ ೩

**೫೧. ಜಯಮಂಗಳಂಭವತು**

ಜಯ ಮಂಗಳಂ ಭವತು ಶುಭ ಮಂಗಳಂ
ಜಯದಂಬೆ ಶ್ರೀಪದ್ಮೆ ಪದುಮಾಂಬೆಗೆ ಜಯ ॥ ಪಲ್ಲವಿ

ಜಯ ಕಮಲ ಲೋಚನೆಗೆ ಜಯ ಕಮಲವಾಸಿನಿಗೆ
ಜಯ ಕಮಲ ಕಟಿನಿ ಜಯ ಕಮಲಾಂಬೆಗೆ
ಜಯ ಕಮಲ ಕರಯುಗಲೆ ಜಯ ಕಮಲಕುಚಯುಗಲೆ
ಜಯ ಕಮಲಪಾದಶ್ರೀ ಜಯ ದೇವಿಗೆ ಜಯ ॥ ೧

ತನುಮನದಿ ನಿನ್ನ ಪದ ವನಜವನು ನೆನೆನೆನೆದು
ಮನುಜರಿಗೆ ಬೇಕಾದ ಘನ ಸೌಭಾಗ್ಯವ
ಅನುದಿನದಲಿತ್ತು ರಕ್ಷಿಸಿ ಪೊರೆದ ಶ್ರೀಫಣಿರಾಜ
ವನಿತೆ ಶ್ರೀ ಪದ್ಮಾಂಬೆ ಜಗದಂಬೆಗೆ ಜಯಮಂಗಳಂ ॥ ೨

ಭೂರಿ ವೈಭವವೆತ್ತ ಸಂಗೀತ ಸಾಹಿತ್ಯ
ವಾರಾಹಿ ನೃತ್ಯ ಗುಣ ಗಂಭೀರೆಗೆ
ಧಾರುಣಿಯೊಳತ್ಯಧಿಕವಾದ ವೇಣ್ಪುರದೊಡತಿ
ನೀರೆ ಪದ್ಮಿಣಿ ದೇವಿ ಶ್ರೀ ಸಂಜೀವಿಗೆ ॥ ೩

**೫೨. ಕುಂಕುಮವರ್ಣೆಗೆ**

ಕುಂಕುಮ ವರ್ಣೆಗೆ ಕುವಲಯನೇತ್ರೆಗೆ
ಕುಶಲದಿಂ ಕುಕ್ಕುಟ ಫಣಿರೂಢೆಗೆ

ಕುರಿತು ಬಂದವರಿಗೆ ಇಷ್ಟಾರ್ಥಕೊಡುವಳ್ಗೆ
ಕುಮುದಕುಚೆಯರಾರತಿ ಎತ್ತಿರೆ ಮಂಗಲಂ ಮಂಗಲಂ
ಪದ್ಮಾವತೇ ಮಂಗಲಂ ಮಂಗಲಂ ‖ ೧

ನಾಗೇಂದ್ರ ರಾಣಿಗೆ ನಯನ ಮೂರುಳ್ಳೆಗೆ
ನಾಗಾರ್ಜುನಗೆ ವರವಿತ್ತಳಿಗೆ
ನಾಗಲೋಕದೊಳಿಹ ಜನರ ರಕ್ಷಿಪಳಿಗೆ
ನಾರಿಯರೊಳಗತಿಕಟ್ಟಾಣಿಗೆ
ಮಂಗಲಂ ಮಂಗಲಂ ಪದ್ಮಾವತೇ ಮಂಗಲಂ ‖ ೨

ಕರ್ನಾಟಕ ದೇಶ ಕನಕಾದ್ರಿವಾಸೆಗೆ
ಕಾಮಿತಾರ್ಥವನೀವ ಕರುಣಾಕರೆಗೆ
ಕರ್ಮವಗೆಲಿದ ಶ್ರೀ ಪಾರ್ಶ್ವನಾಥನ ಯಕ್ಷಿ
ಧರಣೇಂದ್ರನರಸಿ ಪದ್ಮಿಣಿ ದೇವಿಗೆ
ಮಂಗಲಂ ಮಂಗಲಂ ಪದ್ಮಾವತೇ! ಮಂಗಲಂ ‖ ೩

**೫೩. ನಂಬಿದೆನಾನಿಮ್ಮಯ**

ನಂಬಿದೆ ನಾ ನಿಮ್ಮಯ ಪಾದಯುಗಲವ ಅಂಬುಜವದನೆ ದೇವಿ
ಬೆಂಬಿಡದನುದಿನ ಸಲಹೋ ಎನ್ನನು ಮಾತೆ ರಂಭೆ ಪದ್ಮಾವತಿ ದೇವಿ ‖ ಪಲ್ಲವಿ

ಘೋರೋಪಸರ್ಗವ ಜಯಿಸಿದಾತನ ಯಕ್ಷಿ ಧೀರೆ ನೀ ರಕ್ಷಿಸಮ್ಮ
ಸೇರಿ ನಿಮ್ಮಯ ವಾದ ನಂಬಿದ ಭಕ್ತರ ಕಾರುಣ್ಯ ದೃಷ್ಟಿಯಲಿ ‖ ೧

ನಾಗರಾಜನ ರಾಣಿ ಪಾಲಿಸೆಮ್ಮಯ ಮಾತೆ ಈಗ ನಿಮ್ಮಯ ಪುತ್ರಗೆ
ರೋಗ ಬಂದೆರಗಿ ಹೋಗದೆ ನಿಲ್ಲದು ಬೇಗ ನೀ ಪರಿಹರಿಸಮ್ಮ ‖ ೨

ಕುಸುಮಗಂಧಿನಿ ನಿಮ್ಮ ಶಿಶುವಿನ ಉದರದಿ ಎಸೆದುದಿಸಿದ ರೋಗವು
ಉಸುರಲೊಲ್ಲದೆ ನಾನು ಅಸದಳವೆನ್ನಿಂದ ಬಿಸಜಾಕ್ಷಿ ಪಾಲಿಸಮ್ಮ ‖ ೩

ಮೊದಲೊಮ್ಮೆ ಈ ಶಿಶುವಿಗೆ ಕಂಟಕ ಬಂದು ಒದಗಿದ ವೇಳಯೊಳು
ಸದಮಲ ಗುಣನಿಧಿ ಕಾಯ್ದು ರಕ್ಷಿಸು ಎನ್ನ ಅದರ ಹಾಗೆಯೇ ಪಾಲಿಸಮ್ಮ ‖ ೪

ತಂದೆ ಸಾಕಾರ ಮಗನಿಗೆ ಮುನಿದಟ್ಟಲು ಅಂದವನ ನೀ ರಕ್ಷಿಸಿ
ದಂದದಿ ಶಿಶುವಿನ ಮೇಲೆ ಕರುಣವಿಟ್ಟು ಚಂದದಿ ಸಲಹೋ ದೇವಿ ‖ ೫

ಅಡಿಗೆ ಅಂದುಗೆ ಗೆಜ್ಜೆ ನಡುವಿನೊಡ್ಯಾಣವು ಒಡತಿ ಉಂಗುರ ಚೆಳಕಿ
ಬಿಡದೆ ಸರ್ವಾಭರಣವ ಧರಿಸುವ ದೇವಿ ಕೊಡಿ ಪ್ರಸಾದವನು ಬೇಗ ‖ ೬

ನಿಮ್ಮ ಬಾಲಕಿ ಬಲು ರನ್ನೆ ಚೆನ್ನಮ್ಮನ ಚೆನ್ನಾಗಿ ಸಲಹೊ ದೇವಿ
ಅನ್ನಿಗಳೆಂದು ನೋಡದೆ ಪೂರ್ಣ ದಯೆ ಇಟ್ಟು ರಂಬಾ ಪುಷ್ಪವ ಪಾಲಿಸಮ್ಮ ॥ ೭

ಪೊಡವಿಗಧಿಕ ಮೂಡುಬಿದರೆಯ ಪುರದೊಳು ಒಡತಿ ಹಿರಿಯ ಬಸದಿ
ಧೃಡದಿಂದ ಸ್ಥಿರವಾಗಿ ಇರುವ ಪದ್ಮಾವತಿ ಬಿಡದೆ ಭಕ್ತರ ಪಾಲಿಸಮ್ಮ ॥ ೮

**೫೪. ಪರಿಪಾಲಿಸುಪದ್ಮಾವತಿ**

ಪರಿಪಾಲಿಸು ಪದ್ಮಾವತಿ ಗುಣವತಿ ಪರಮಪುಣ್ಯಚರಿತೆ
ತರುಣಾರುಣ ಶತಕೋಟಿ ಪ್ರಕಾಶೆ ನೀ ಕರುಣಾ ರಸಭರಿತೇ ॥ ಪಲ್ಲವಿ

ಅಳಿನೀಳಾಲಕಿ ಮಲಯಜಗಂಧಿನಿ ಪುಳಿನ ಸಮಶ್ರೋಣಿ
ಕಳಕಂಠೋಪಮ ಗಾನೆ ಕಲಾವತಿ ಜಲರುಹನಿಭಪಾಣಿ ॥ ೧

ಕುಲಿಶಧರನೆ ಮದಕಳಗಭನೆ ಮುನಿ ಮಂಜುಳ ಸಾರ ವಾಣಿ
ಕಲಶ ಕುಚದ್ವಯೆ ಸುಲಲಿತಾಂಗಿ ಸದ್ವಿಲಸಿತ ಫಣಿವೇಣಿ ॥ ೨

ವಿಕಸಿತ ತಿಲಸುಮ ನಿಂದಿತನಾಸಿಕೆ ಚಕಿತ ಅರುಣ ನೇತ್ರೆ
ಮುಕುರಪಾಲೆ ಮೃದುಸ್ಮಿತೆ ಮನುಮುನಿ ನಿರಕವಿನುತಿ ಪಾತ್ರೆ ॥ ೩

ಅಕಲಂಕೆ ಇಂದುವದನೆ ಕಷ್ಟದಾಯಕಿ ಸಜ್ಜನಮಿತ್ರೆ
ಸಕಲ ಕಲಾಪರಿಪೂರ್ಣೆ ಮಂಗಲಾತ್ಮಿಕೆ ಚಾರುಸುವಾಸೆ ॥ ೪

ವರ ಪಾಶಾಂಕುಶ ಪರಿಶೋಭಿತೆ ಕರೆ ದುರಿತಾವಳಿ ದೂರೆ
ಭರಿತವಿನೋದೆ ಭವ್ಯೌಘಪಾಲಿನಿ ಸುರಚಿರ ಮಣಿಹಾರೇ ॥ ೫

ಧರಣಿಗುತ್ತಮವೆಂದೆನಿಸಿ ಮೆರೆವುತ್ತಿಹ ಸುರನಗರಾಗಾರೆ
ಧರೆಯನಾಳ್ವ ಹಿರಿಯ ಬಸದಿಯೊಳ್ ಗೊಲಿದುರುತ್ತರಗುಣಸಾರೆ ॥ ೬

**೫೫. ಪಾಹಿಪದ್ಮಾಂಬಿಕೆಯೆಪಾಲಿಸು**

ಪಾಹಿ ಪದ್ಮಾಂಬಿಕೆಯೆ ಪಾಲಿಸು ಸೇವಕರ ಮನದಿಷ್ಟವಾ
ಧೀರೆ ಅನವರತದಲಿ ಸಜ್ಜನ ಸೇವಕರ ರಕ್ಷಾಮಣಿ ॥ ಪಲ್ಲವಿ

ಚರಣ ದಂದುಗೆ ನೂಪುರ ಧ್ವನಿ ಮಿನುಗುತಿಹ ಪೀತಾಂಬರ
ಎರಕದಿಂದೊಡ್ಯಾಣ ಗೆಜ್ಜೆಯ ಸರದ ಕಿಂಕಿಣಿ ಸೌರಭಾ ॥ ೧

ಕಂಚುಕದ ಮೇಲ್ಸರಗಳಲುಗುತ ಮಿಂಚಿನಂದದಿ ಹೊಳೆಯುತ
ಪಂಚಬೆರಳಂಗುಲಿಯು ಹಸ್ತದಿ ಪಂಚ ಕಂಕಣ ಚಳಕಿಯು ‖ ೨

ಪಾಠಕರ ರುಗ್ಗಡದ ಮದ್ದಳೆ ನಾಟ್ಯ ವಾದ್ಯದ ರಭಸಕೆ
ಸಾಟಿ ಇಲ್ಲದೋಲಗದೊಳೊಪ್ಪುವ ಕೋಟಿಸೂರ್ಯಪ್ರಕಾಶಳೇ ‖ ೩

ಮತ್ತೆ ಭುಜಕೀರ್ತಿಗಳು ನಾಸಿಕ ಮೌಕ್ತಿಕಾಮಣಿ ಕರ್ಣದಿ
ಕೆತ್ತಿದೋಲೆ ಕಿರೀಟ ರಾಗದೆ ಸಮಸ್ತ ಸರ್ವಾಭರಣಳೇ ‖ ೪

ಸಂಭ್ರಮಿಪ ಕುಂಕುಮವು ಕಸ್ತೂರಿ ತುಂಬಿಗುರುಳ್ವಸರಗಳೂ
ರಂಬೆ ಪುತ್ಥಳಿ ಬೊಂಬೆ ಸಂತತ ಪೊಂಬುಜದ ಪುರವಾಸಳೆ ‖ ೫

**೫೬. ವರವಿತ್ತುಸಲಹಮ್ಮವರದೆ**

ವರವಿತ್ತು ಸಲಹಮ್ಮ ವರದೆ ಪದ್ಮಮ್ಮ
ವರದೇವಿ ಎಂದು ನಂಬಿರುವೆ ನಾನಮ್ಮ ‖ ಪಲ್ಲವಿ

ಚರಣಾಯುಧ ಸರ್ಪ ವಾಹನೆಯಮ್ಮ
ವರಚತುರ್ಭುಜೆ ತ್ರಿನೇತ್ರೆ ನೀನಮ್ಮ
ಅರುಹನ ಚರಣಕ್ಕೆ ಅತಿಭಕ್ತೆಯಮ್ಮ
ಅರುಣಾಂಗಿ ರವಿಸಮ ತೇಜೆ ನೀನಮ್ಮ ‖ ೧

ಕರಕರೆ ಕೋಟಲೆ ಬಿಡಿಸು ನೀ ಎಮ್ಮ
ಚರಣ ಭಕುತ ಜನಕೋದ್ಧಾರೆಯಮ್ಮ
ಪುರುಹೂತ ಸಂಪದಕಧಿದೇವಿಯಮ್ಮ
ಧರಣೇಂದ್ರನರಸಿ ಶ್ರೀ ಪದ್ಮಿಣಿಯಮ್ಮ ‖ ೨

ಪಾರಾದ ಸಿದ್ಧಿ ನಿನ್ನಿಂದಲೇ ನಮ್ಮ
ಭೂರಿ ಸಂಪದಕೆ ನೀನಧಿದೇವಿಯಮ್ಮ
ಘೋರ ಪಾಪಂಗಳ ಪರಿಹರಿಸಮ್ಮ
ಸೇರಿದ ಭಕ್ತರ ಸಲುಹುವೆಯಮ್ಮ ‖ ೩

ಪರಮ ಮಂಗಳ ಸರ್ವಜನ ಪಾಲೆಯಮ್ಮ
ಸುರಗಿರಿ ಸಮಧೀರೆ ನೀನು ಕಾಣಮ್ಮ
ವರ ಪಾರ್ಶ್ವನಾಥನ ಯಕ್ಷಿ ನೀನಮ್ಮ
ದುರುಳ ಕಮಠ ಗರ್ವ ಹರಣೆ ನೀನಮ್ಮ ‖ ೪

ಹಿರಿಯ ಬಸದಿಯೊಳು ಇರುತಿರ್ಪೆಯಮ್ಮ
ಪರುಷ ಮೂರುತಿ ಪದ್ಮದಲ ನೇತ್ರೆಯಮ್ಮ
ಕರುಣಾಪಾಂಗದಿ ಎನ್ನ ನೋಡಮ್ಮ
ವರಕವಿ ಜಿನಚಂದ್ರನ ರಕ್ಷಿಸಮ್ಮ ‖ ೫

**೫೭. ಯಾಕಿಂತುಕೋಪತಾಯೇ**

ಯಾಕಿಂತು ಕೋಪ ತಾಯೇ ಲೋಕಾಂಬೆ ಪದ್ಮಿಣಿ ಕಾಯೇ ‖ ಪಲ್ಲವಿ

ಮಂದರ ಧೀರೆ ನೀನು ಎಂದು ಕಂದನ ಸಲಹಿದಳೆಂದು
ಬಂದೆನು ನಾ ಶರಣೆಂದು ಕುಂದೇನು ಎನ್ನೊಳಗಿಂದು? ‖ ೧

ಕಾವುದು ತವ ನಿಜ ಬಿರುದು ಸೇವಕರನು ದಯೆವೆರೆದು
ನೀವುದು ಸೌಖ್ಯವೆರೆದು ತಾಯೇ ನನ್ನನು ಪೊರೆದು ‖ ೨

ಬಳಲಿಸದಿರು ಜೀವಂತೆ ಇಳೆಯೊಳ್ ಮಹಿಮಾ ನಿನ್ನಂತೆ
ತಳುಮಾಡದೆ ಬೆಳ್ಗುಳವಂತೆ ಬೇಗದಿ ವರವ ಕೊಡುವಂತೆ ‖ ೩

ಧ್ಯಾನಿಸುತ್ತಿರುವೆನು ನಿನ್ನ ಆನಂದ ಮೂರುತಿಯನ್ನ
ದೀನದಯಾಳೊ ಚೆನ್ನಾ ಎನ್ನ ಮನದಿ ಸಲಹಿದಳೆನ್ನ ‖ ೪

ಧ್ಯಾನಿಸುತಿರುವೆನು ನಿನ್ನ ಆನಂದ ಮೂರುತಿಯನ್ನ
ಲೊಕ್ಕೆಯ ವನದೊಳಗಿರುವೆ ಅರ್ತಿಯಿಂ ಬುಧರನ್ನು ಪೊರೆವೆ ‖ ೫

ಭೃತ್ಯನ ಮರೆವುದುಚಿತವೇ ಸತ್ಯಾಂಬೆ ಪದ್ಮಿಣಿಗರುಹೆ
ಯಾಕಿಂತು ಕೋಪ ತಾಯೇ ಲೋಕಾಂಬೆ ಪದ್ಮಿಣಿ ಕಾಯೋ ‖ ೬

**೫೮. ಪಾಹಿಮಾಂಪರಮಾತ್ಮರೂಪಿಣಿ**

ಪಾಹಿ ಮಾಂ ಪರಮಾತ್ಮರೂಪಿಣಿ ಪಾಹಿ ಪಂಕಜಲೋಚನೆ
ಪಾಹಿ ಪರತರವಸ್ತು ಮೂರುತಿ ಪಾಹಿ ಮಾಂ ಪರಮಾತ್ಮರೂಪಿಣಿ ‖ ಪಲ್ಲವಿ

ಕನಕ ಭೂಷಣೆ ಕಂಜಲೋಚನೆ ಕಾಮಿತದ ಫಲದಾಯಿನೀ
ಮುನಿಹೃದಯ ಸಂಚಾರಿ ಪಾವನ ಪನ್ನಗ ಚರಿತೆ ಮಾಂ ಪರಿಪಾಲಮು ‖ ೧

ಪದ್ಮಲೋಚನೆ ಪರಮಪಾವನೆ ಪದ್ಮನಾಭ ಸುಪೂಜಿತೆ
ಪದ್ಮ ಸನ್ನಿಭ ವದನೆ ವಿಕಸಿತ ಪದ್ಮಗಂಧಿನಿ ಪಾಹಿ ಮಾ ‖ ೨

ಪರುಷ ಪೊಂಬುಜವಾಸೆ ಶಂಕರ ಕಾವ್ಯಮನೋರಥದಾಯಿನೀ
ಸೊಕ್ಕುಜವ್ವನೆ ಸಕಲಸುರಮುನಿ ಸೇವಿತಾಂಘ್ರಿಸುಪದ್ಮಿಣಿ ॥ ೩

**೫೯. ತಾಯೆಸರ್ವರರಕ್ಷಾಮಣಿಯೆ**

ತಾಯೆ ಸರ್ವರ ರಕ್ಷಾಮಣಿಯೆ ಎನ್ನ
ಕಾಯೊ ಪದ್ಮಾವತೀ ಪರುಷದ ಕಣಿಯೇ ॥ ಪಲ್ಲವಿ

ಜಿನದತ್ತಗೊಲಿದು ವರವಿತ್ತೆ ಮಹಾಕನಕಾರ್ಜುನಗಿತ್ತೆ
ಘನ ಪಾರಿಶ್ವೇಶನ ಭಕ್ತೆ ಬಹುಜನರ ಚಿಂತಾಮಣಿ
ನನ್ನನ್ಯಾಕೆ ಮರೆತೇ ತಾಯೇ ಸರ್ವರ ರಕ್ಷಾಮಣಿಯೇ ॥ ೧

ಜನಿಸಿದಾರಭ್ಯದಿ ನಾನು ಬಹು ಘನಕಷ್ಟಕೊಳಗಾಗಿ
ಚಿಂತೆಯೊಳಿಹೆನು ಮನಸು ನಿಶ್ಚಲವಿಲ್ಲದಿಹೆನು
ದೇವಿ ಎನಗೀಗ ತಿಳಿಯದು ಕಾಯಮ್ಮ ನೀನು ॥ ೨

ಕಾಸು ಹುಟ್ಟುವುದಿಲ್ಲಮ್ಮಾ ಎನ್ನ
ಆಸೆಯ ಬದುಕೆಲ್ಲ ಬಯಲಾಯಿತಮ್ಮಾ
ಲೇಸು ಸುಖವ ಕಾಣೆನಮ್ಮ ಈಗ
ಭಾಷೆಕೊಟ್ಟವರೆಲ್ಲಾ ತಪ್ಪಿದರಮ್ಮ ॥ ೩

ಅರ್ಥ ಅರ್ಥವು ವ್ಯರ್ಥವಾಯ್ತು
ಬೇಸತ್ತು ದೇಶವ ತಿರುಗುವದಾಯ್ತು
ಮತ್ತಾರು ಶರಣಾಯ್ತು ಈಗ
ಹೆತ್ತವರಿಗೆ ಮರುಕಿಲ್ಲದೆ ಹೋಯ್ತು ॥ ೪

ಇಳೆ ಎಂಬುದು ಹೂವಾಯ್ತು ಬಹು
ಬಳಗದೊಳಗೆ ಅವಮಾನವಾಯ್ತು
ಪೊಳೆವ ದೇಹವು ಕಂದಿಹೋಯ್ತು
ಕಳೆವ ಕಷ್ಟದಲಿ ಕಾಯುವವರಿಲ್ಲದಾಯ್ತು ॥ ೫

ಧರಣರಾಜನ ಪಟ್ಟ ನಿಮ್ಮ
ತರಳಗೊಲಿದು ಕಷ್ಟವ ಪರಿಹರಿಸಿ
ಹರುಷದಿಂದಲಿ ಸುಖವೆರಸಿ ನಿಮ್ಮ
ಚರಣ ಸೇವಕನ ಬಿಡದೆ ನೀ ಉದ್ಧರಿಸಿ ॥ ೬

ಪೃಥ್ವಿಗಧಿಕ ಪಟ್ಟಣದೊಳು
ಮಹಾಮುಕ್ತಿಗೊಡೆಯ ಶಾಂತಿಜಿನನ ಬಸದಿಯೊಳು
ಅರ್ತಿಯಿಂ ದಕ್ಷಿಣ ಭಾಗದೊಳು ಮಹಾ
ಭಕ್ತವತ್ಸಲೆ ಪದ್ಮಾವತಿ ನೆಲಸಿಹಳು ॥ ೭

ಧರೆಯೊಳಧಿಕವಾದ ಪೊಂಬುಚ್ಚಪುರದ ಮಧ್ಯದೊಳೊಪ್ಪುವ
ಸರಸಿಜಾಸನದೊಳು ಹರುಷದಿಂದಿರುತಿಹ
ಪರುಷ ಮೂರುತಿ ಪದ್ಮಾವತಿ ದೇವಿಯ ॥ ೮

ಬಿಟ್ಟು ಹೋಗುವರೇ ಮನ ನಿಲ್ಲದಮ್ಮ
ಎಷ್ಟು ನೋಡಿದರೂ ನಿಮ್ಮ
ಬಿಟ್ಟು ಹೋಗುವರೇ ಮನ ನಿಲ್ಲದಮ್ಮ ॥ ೯

**೬೦. ಆಡಿದರೋಕುಳಿಯಅಮ್ಮಯ್ಯನ**

ಆಡಿದರೋಕುಳಿಯ ಅಮ್ಮಯ್ಯನ ನೋಡಿ ಬಂದವರೆಲ್ಲರು
ರೂಢಿಯೊಳಗೆ ಇನ್ನು ಸರಿ ಇಲ್ಲ ನಿಮ್ಮನು
ಬೇಡಿಕೊಂಬೆನು ನಾನು ಬೇಗದಿ ದಯಮಾಡು ॥ ೧

ಉತ್ತರ ಮಧುರೆಯೊಳು ನೀನಿರಲಾಗ
ಮತ್ತೆ ಸಾಕಾರರಾಯನು ಹೆತ್ತ ಸುತಗೆ ಹಸ್ತಕಿತ್ತ ಜಂಬೀರವ
ಮತ್ತೆ ತಾ ಪೈಸೆ ಮಾರಿದತ್ತಗೆ ಕೂಡಿಸಿದೆ ॥ ೨

ಅಡವಿ ಪಟ್ಟಣ ಮಾಡಿದೆ ಅತ್ಯಂತರಿಗೆ ಒಡತಿ ಚಿನ್ನವ ತೋರಿದೆ
ಒಡೆಯನಾಗಿಯೆ ನೀನು ರಾಜ್ಯವ ಭಜಿಸೆಂದು
ಒಡತಿ ಉಂಗುರವಿತ್ತು ಉಳುಹಿದ ಮಹಾದೇವಿ ॥ ೩

ದಂಡ್ಯಾ ರಾವುತರೆಲ್ಲರು ನಿಂತಿರಲಾಗ ಮತ್ತೆ ಮಾನ್ಯರಿಗೆ ಸ್ವಪ್ನದಿ
ಇನ್ಯಾಕೆ ಯೋಚನೆ ತೆಕ್ಕೋ ಸಲಾಮೆಂದು
ಮನ್ನಿಸೆ ಭಕ್ತರ ಸಲಹುವ ಮಹಾದೇವಿ ॥ ೪

ಕನಕ ಪೊಂಬುಚ ಪುರದಿ ಭಕ್ತರನೆಲ್ಲಾ
ಅನುದಿನ ಸಲಹುತಲೀ ಬಿಡದನುದಿನ ನಿನ್ನ ಧ್ಯಾನಿಪನಂತೆಗೆ
ತೊಡರಿದ ಜಡವನ್ನು ಬಿಡಿಸೆಂಬೆ ಮಹಾದೇವಿ ॥ ೫

## ೬೧. ಶ್ರೀಪದ್ಮಾಂಬೆಗೆಮಂಗಲಂ

ಶ್ರೀ ಪದ್ಮಾಂಬೆಗೆ ಮಂಗಲಂ
ಚೆಲುವ ಮೂಜಗದೊಡತಿಗೆ ಮಂಗಲಂ ‖ ಪಲ್ಲವಿ

ಭಾಸುರ ಮಣಿಗಣ ಭೂಷೆಗೆ ಈಶೆಗೆ
ಶೆಷನರ್ಧಾಂಗಿಗೆ ಮಂಗಲಂ ‖ ೧

ಸರಸಿಜ ಗಂಧಿಗೆ ಸಾಮಜಯಾನೆಗೆ
ಪರುಷ ಪದ್ಮಾಂಬೆಗೆ ಮಂಗಲಂ ‖ ೨

ಪನ್ನಗ ವೇಣಿಗೆ ಸನ್ನುತವಾಣಿಗೆ
ಚೆನ್ನೆ ಪದ್ಮಾಂಬೆಗೆ ಮಂಗಲಂ ‖ ೩

ನಂಬಿದ ಭಕ್ತರ ಬೆಂಬಿಡದೆ ಸಲಹುವ
ಪೊಂಬುಜದೊಡತಿಗೆ ಮಂಗಲಂ ‖ ೪

## ೬೨. ರಕ್ಷಿಸೌಸದಯೇಪದ್ಮಣಿಯೇ

ರಕ್ಷಿಸೌ ಸದಯೇ ಪದ್ಮಣಿಯೇ
ರಕ್ಷಿಸೌ ಸದಯೇ ಪದ್ಮಿಣಿಯೇ ‖ ಪಲ್ಲವಿ

ಧೀರೆ ವಿಜಯ ಶ್ರೀ ಪಾರ್ಶ್ವನಾಥನ
ಸಾರ ಭಕುತಿಯಿಂದ ಸೇವಿಪ
ಶೂರ ಫಣಿಪ ರಾಣಿ ಬಹುಗಂಭೀರೆ
ನೀರೆ ತೋರೆ ಕರುಣವ ‖ ೧

ಲಲಿತ ಕುಕ್ಕುಟೋರಗವಾಹನೆ
ಜಲಜನೇತ್ರಯುಗಲೆ ಶೋಭೆ
ಸಲಹು ಎನ್ನ ಶಾಂತೆ ವರ ಸುಶೀಲೆ
ಲೋಲೆ ಬಾಲೆ ಪಾಲಿಸು ‖ ೨

ಧರೆಯೊಳ್ ವೇಣುಪುರದೊಳ್ ನೆಲಸಿ
ಉರುತರ ವರಂಗಳಿತ್ತು
ನಿರುತ ಭಕ್ತರನ್ನು ಪೊರೆವ ಧೀರೆ
ಶೂರೆ ಮಾತೆ ಪಾಲಿಸು ‖ ೩

**೬೩. ನಂಬಿದೆನಾನಿಮ್ಮ**

ನಂಬಿದೆ ನಾ ನಿಮ್ಮ ಅಂಬುಜ ಲೋಚನೆ
ಅಂದುಗೆ ಕಿರುಗೆಜ್ಜೆಯಿಟು ಪದ್ಮಮ್ಮಗೆ
ಗಂಧಕಸ್ತೂರಿಯ ಲೇಪನ ಮಾಡಿ ಆ
ನಂದದಿಂದೊಪ್ಪುವ ಸಂಗೀತಲೋಲೆಗೆ
ಮಂಗಳಾರತಿಯಾ ಬೆಳಗಿರೆ ಶೋಭಾನಾ ॥ ೧

ಮೂಜಗದೊಡೆಯನ ಪಟ್ಟದ ರಾಣೀ
ಅರ್ತಿಯಿಂದಲಿ ಮೆರೆಯುವ ಬಹುಜಾಣೇ
ಪಟ್ಟದೇವಾಂಗ ವಸ್ತ್ರವ ನಿರಿವಿಡಿದುಟ್ಟು
ವಿಸ್ತಾರದಿಂದಲಿ ಬರುವ ಪದ್ಮಮ್ಮಗೆ
ನೂತನದಾರತಿಯಾ ಬೆಳಗಿರೇ ಶೋಭಾನಾ ॥ ೨

ಕಂಕಣ ಕೈಯನು ಬಿಂಕದಿ ತಿರುಗುತ್ತಾ
ನಿಂತು ನಿಂತಾಡುತ ನಗುತ ಮಾತಾಡುತ್ತಾ
ಕೊಂಕಿದ ಕುರುಳನು ಉಗುರಲೇ ತಿದ್ದುತ
ಅಂಬುಜನಾಭನ ಅರಸಿ ಪದ್ಮಮ್ಮಗೆ
ಕುಂಕುಮದಾರತಿಯಾ ಬೆಳಗಿರೇ ಶೋಭಾನಾ ॥ ೩

ಶ್ರೀ ಪದ್ಮಾರಾಜಿಪ ಮಾಣಿಕ್ಯದರಳೇ
ಬಿಗಿದು ಕಟ್ಟಿದ ಮಂಡೆ ಬಿಂಕದ ಕುರುಳೇ
ಯೆಡೆಯೆಡೆಗಮರುವ ಮಲ್ಲಿಗೆಯರಳೇ
ದೊರೆಯು ಧರಣೇಂದ್ರ ನಿಮ್ಮ ಮಡದಿ ಪದ್ಮಮ್ಮಗೆ
ಬೆಡಗಿನಾರತಿಯಾ ಬೆಳಗಿರೇ ಶೋಭಾನಾ ॥ ೪

ಎಂಟು ಮುತ್ತಿನ ಜಂಪು ಎಸಳು ಹೊನ್ನೋಲೆ
ಎಂಟದ ಕಾವಲಿಸರ ಕಂಠಮಾಲೆ
ಸಂಪಿಗೆ ವರ್ಣದ ಸೊಬಗಿನ ಶ್ಯಾಲೆ
ಮಿಂಚುವ ಮೂಗುತಿ ಇಟ್ಟ ಪದ್ಮಮ್ಮಗೆ
ಮಂಟಪದಾರತಿಯಾ ಬೆಳಗೀರೇ ಶೋಭಾನಾ ॥ ೫

ಕೋಗಿಲೆಗಾನದ ಕೊರಳಿನ ಗಣಲೇ
ತಾರಮ್ಮ ಬಿಡು ಮುತ್ತಿನ ಮೊಗ್ಗೆಯರಳೇ
ಹಾರ-ಕಂಕಣ-ಬಂದಿ-ತೋಡತತಿಯನಿಟ್ಟು
ಸ್ವಾಮಿ ಧರಣೇಂದ್ರ ನಿಮ್ಮ ಮಡದಿ ಪದ್ಮಮ್ಮಗೆ
ಬೆಡಗಿನಾರತಿಯಾ ಬೆಳಗಿರೇ ಶೋಭಾನಾ ॥ ೬

ಝಣ ಝಣ ಝಣರೆಂಬ ಹೊಳವಿನ ಜಗುಲೀ
ಏರಿ ಮೇಲೊಪ್ಪುವ ಕಾಂಚಿನ ಡಾಮು
ಪಳಕುವ ನಡುವಿಗೆ ಒಪ್ಪುವ ಒಡ್ಯಾಣ
ಕಲ ಕಲದಿಂದಲಿ ಬರುವ ಪದ್ಮಮ್ಮಗೆ
ರತ್ನದಾರತಿಯಾ ಬೆಳಗೀರೆ ಶೋಭಾನಾ ‖ ೭

<u>೬೪. ವಾಣಿವರಕಲ್ಯಾಣಿಮಂಗಳಂ</u>

ವಾಣಿ ವರಕಲ್ಯಾಣಿ ಮಂಗಳಂ
ಏಣನಯನೆ ಜಾಣೆ ಜಯಕೃಪಾಣಿ ಮಂಗಳಂ ‖ ಪಲ್ಲವಿ

ಕ್ಷೋಣಿಗಧಿಕ ತ್ರಾಣೆ ನಿಃಶ್ರೇಯ
ಶ್ರೇಣಿ ಮಧುರ ವಾಣಿ ಪನ್ನಗ
ವೀಣಾಪಾಣಿ ಸುರಸು ಪಾಣಿ
ರಮಣಿಮಣಿ ಕಟ್ಟಾಣಿ ವೇಣಿ ಪಾಣಿ ‖ ೧

ಇಂದ್ರ-ಇಂದ್ರ ಇಂದ್ರ ವಂದಿತೇ
ಕಲ್ಪತರು ಜಿನೇಂದ್ರಚಂದ್ರ ಮುಖಸುಬೋಧಿತೇ
ಸಾಂದ್ರ ಸರಸ ಸುಕವಿಹೃದಯ
ಮಂದಿರೇ ಸುಗಂಧಭರಿತೇ
ಇಂದಿರಾಕ್ಷಿ ಮಂದ್ರ ನಿನದೇ
ಬಂಧುರಾಂಗಿ ಪಾಹಿ ಪಾಹಿ ವಾಣಿ ‖ ೨

ಅರುಣ ಚರಣ ಕಿರಣ ರಂಜಿತೇ
ಮರಕತಾಭ ಬರಿತ ನವ್ಯ ದಿವ್ಯ ಭೂಷಿತೇ
ಪರಮ ಶುಭ್ರವಸನ ಯುಕ್ತೇ
ಸ್ಥಿರಗುಣೌಘಚರಿತೆ ಪೂತೇ
ನಿರಘ ನಿರ್ಮಲ ನಿತ್ಯ ತೃಪ್ತೇ
ಶರುಣ ಶರಣು ಪಾಹಿ ಪಾಹಿ ವಾಣಿ ‖ ೩

ಧರೆಯೊಳಧಿಕ ವೇಣ್ಪುರಾದ್ರಿಯಾ
ಶಾಂತಿನಾಥ ಚರಣಭಕ್ತ ಚಾರುಕೀರ್ತಿಯ
ವರದ ಛಾತ್ರ ನಿಲಯದಲ್ಲಿ
ಸ್ಥಿರದಿ ನೆಲೆಸಿ ಮೆರೆವ ಗುರುವೆ
ತರಳ ಬಾಲರನ್ನು ಸುಖದೊಳಿರಸು ವಾಣಿ ಪಾಹಿ ಪಾಹಿ ವಾಣಿ ‖ ೪

**೬೫. ಶೃಂಗಾರಹಾರಮಾರವಿಜಯ**

**ರಾಗ : ಕಮಾಚ್ ತಾಳ : ಆದಿತಾಳ**

ಶೃಂಗಾರಹಾರ ಮಾರವಿಜಯ ಧೀರ ಮಂಗಳಂ
ಭಂಗವಗೆಲಿದ ಭಾಗ್ಯದೊಡೆಯ ಶ್ರೀಶ ಮಂಗಳಂ ॥ ಪಲ್ಲವಿ

ಜನನಮರಣರಹಿತನಾದ ಜಿನಗೆ ಮಂಗಳಂ
ಘನಶತೇಂದ್ರವಂದ್ಯಪಾದವನಜ ಮಂಗಳಂ ॥ ೧

ಘೋರಕಲುಷದೂರನಾದ ವೀರ ಮಂಗಳಂ
ಚಾರುಮೋಕ್ಷರತಿಯಗೆಲಿದ ಶೂರ ಮಂಗಳಂ ॥ ೨

ಸಂಸಾರಶರಧಿಯನ್ನು ಗೆಲಿದ ಹಂಸ ಮಂಗಳಂ
ಹಿಂಸಾದಿದೋಷರಹಿತಶ್ರೇಯಾಂಸ ಮಂಗಳಂ ॥ ೩

**೬೬. ಜಯಮಂಗಳಂನಿತ್ಯ**

ಜಯ ಮಂಗಳಂ ನಿತ್ಯ ಶುಭ ಮಂಗಳಂ
ಶುಭ ಮಂಗಳಂ ನಿತ್ಯ ಶ್ರುತದೇವಿಗೆ ಜಯ ॥ ಪಲ್ಲವಿ

ಪುರದೇವರಡಿಗಳಿಗೆ ಎರಗಿ ಪೂಜಿಸಿ ವಾಣಿ
ಚರಣ ಕಮಲವ ಸ್ಮರಿಸಿ ಗುರುಗಳಿಗೆ ನಮಿಸಿ
ವರುಷಕ್ಕೆ ವರುಷಕ್ಕೆ ಬರುವ ಸುರುಚಿರದ ಮಾರ್ನೌಮಿ
ಅರಸಿಯರು ಹತ್ತೆತರುವ ಪರಿಯನುಸುರುವೆನು ಜಯ ಮಂಗಳಂ ॥ ೧

ಪ್ರತಿಪದದಿ ಚಕ್ರಧರೆ ದ್ವಿತಿಯೆಯಲಿ ಕೂಷ್ಮಾಂಡಿ
ತೃತಿಯೆಯೊಳು ಶ್ರೀಗೌರಿ ಚತುರ್ಥಿಯಲಿ ಕಾಳಿ
ನುತಚರಿತೆಽನಂತಮತಿ ಪಂಚಮಿಯ ದಿನದಂದು
ಕ್ಷಿತಿನುತೆಯು ಜ್ವಾಲಿನಿಯು ಷಷ್ಠಿದಿನದಿ ಜಯ ಮಂಗಳಂ ॥ ೨

ಎಸೆವ ಸಪ್ತಮಿ ದಿನದಿ ಅಸಮ ಗುಣೆ ಪದ್ಮಿಣಿಯು
ಶಶಿವದನೆ ಬಹುರೂಪಿಣೀ ಅಷ್ಟಮಿಯ ದಿನದಿ
ಲೇಸೆನಿಪ ನವಮಿ ದಿನ ಸುದತಿ ಸಿದ್ಧಾಯಿನಿಯು
ದಶಮಿಯಲಿ ಭಾರತಿಯು ಬಹುಭಾಗ್ಯಯುತೆಯೂ ಜಯ ಮಂಗಳಂ ॥ ೩

ಆಶ್ವೀಜ ಸಿತ ಪಕ್ಷ ಪ್ರತಿಪದೊಂದನೆ ದಿನದಿ
ವಾಸವಾರ್ಚಿನ ಪುರಪರಮೇಶ ಯಕ್ಷಿ

ಲೇಸು ನಮಗಿಷ್ಟಾರ್ಥ ವರಗಳನು ಕೊಡುತಿರುವ ಚ
ಕ್ರೇಶ್ವರೀ ಅಮ್ಮ ಬಂದರೈ ನಮ್ಮ ಮನೆಗೆ ಜಯ ಮಂಗಳಂ ॥ ೪

ದ್ವಿತೀಯದರೆರಡನೆ ದಿನದಿ ಅತಿಶಯದಿ ಕೂಷ್ಮಾಂಡಿ!
ಸತಿ-ಸುತರ ಸೌಭಾಗ್ಯದಷ್ಟ ಸಂಪದವ
ಕ್ಷಿತಿಯ ಸುಜನರಿಗಿತ್ತು ಪ್ರತಿದಿನದಿ ಪಾಲಿಸುವ
ನುತಚರಿತೆ ಕೂಷ್ಮಾಂಡಿನಿ ಬಂದರೈ ನಮ್ಮ ಮನೆಗೆ ಜಯ ಮಂಗಳಂ ॥ ೫

ಮೂರನೆಯ ತೃತೀಯೆಯೊಳು ವಾರೀಜಾಕ್ಷಿಯು ಗೌರಿ
ವಾರಣದ ಮೇಲೇರಿ ವಾದ್ಯ ಘೋಷದಲೀ
ಭೂರಿ ವಿಭವದಿ ಛತ್ರಚಾಮರ ವಿರಾಜಿಸಲು
ನಾರಿಯರ ಅರಸಿ ಶ್ರೀಗೌರಿ ಬಂದರೈ ನಮ್ಮ ಮನೆಗೆ ಜಯ ಮಂಗಳಂ ॥ ೬

ನಾಲ್ಕನೆಯ ಚೌತಿಯೊಳು ಕಾಲಭವನಾ-ರಥದ
ಮೇಲೇರಿ ನಡೆತಂದು ಸುಜನರೆಲ್ಲರಿಗೆ
ಲೇಸ್ಕೊಟ್ಟು ರಕ್ಷಿಸುವ ಮೂರ್ಕಣ್ಣ ಮಾಂಕಾಳಿ
ನೌಕೆಯಲಿ ಬಂದರೈ ನಮ್ಮ ಮನೆಗೆ ಜಯ ಮಂಗಳಂ ॥ ೭

ಪಂಚಮ್ಯೆದನೆ ದಿನದಿ ವಾಂಛಿತಾರ್ಥವ ಭವ್ಯ
ಸಂಚಯಕೆ ಒಲಿದಿತ್ತು ನಿತ್ಯ ರಕ್ಷಿಸುವ
ಪಂಚಬಾಣನ ಗೆಲಿದಽನಂತೆ ಜಿನಪದ ಯಕ್ಷಿ!
ಕೆಂಚೆಯೂ ಬಂದರೈ ನಮ್ಮ ಮನೆಗೆ ಜಯ ಮಂಗಳಂ ॥ ೮

ಷಷ್ಠಿ ಆರನೆ ದಿನದಿ ಸೃಷ್ಟಿ ಸುಜನರಿಗೆಲ್ಲ
ಅಷ್ಟಮಹದೈಶ್ವರ್ಯ ಕೊಟ್ಟು ರಕ್ಷಿಸುವ
ಅಷ್ಟಭುಜದಿಂದಿರುವ ಇಷ್ಟೆ ಜ್ವಾಲಿನೀ ದೇವಿ!
ದುಷ್ಟ ಮಹಿಷನ ಏರಿ ಜಗಜ್ಯೇಷ್ಠೆ ಬಂದರೈ ನಮ್ಮ ಮನೆಗೆ
ಜಯ ಮಂಗಳಂ ॥ ೯

ಏಳನೆಯ ಸಪ್ತಕದಿ ವ್ಯಾಳರಾಜನ ರಾಣಿ
ಭಾಲದಲಿ ಲೋಚನೆಯು ಭಾಗ್ಯದಾಯಕಿಯು
ವ್ಯಾಳಕುಕ್ಕುಟಾರೂಢೆ ಲೋಲೆ ಪದ್ಮಾವತಿಯು
ಲೀಲೆಯಲಿ ಬಂದರೈ ನಮ್ಮ ಮನೆಗೆ ಜಯ ಮಂಗಳಂ ॥ ೧೦

ಅಷ್ಟಮೆಂಟನೆ ದಿನದಿ ಪಟ್ಟದಾನೆಯನೇರಿ
ದಿಟ್ಟಿಸುತ ನಾಲ್ದೆಸೆಯ ಸುಜನರೆಲ್ಲರಿಗೆ

ಇಷ್ಟ ಸುಖಸಂಪದವ ಕೊಟ್ಟು ರಕ್ಷಿಪ ಮಾತೆ
ಇಷ್ಟಮೂರುತಿ ಬಹುರೂಪಿಣಿ! ಬಂದರೈ ನಮ್ಮ ಮನೆಗೆ ಜಯ ಮಂಗಳಂ ॥ ೧೧

ಸದಮಲದ ನವಮಿ ದಿನ ಮದಗಣದ ಮೇಲೇರಿ
ಒದಗಿ ನಡೆಯುತ ವಾದ್ಯ ವಿವಿಧ ವೈಭವದಿ
ಸುದತಿಯರ ಕುಲದರಸಿ ಸಿದ್ಧಾಯಿನೀ ಯಕ್ಷಿ ಸಂ
ಮುದದೊಳೈತಂದರೈ ನಮ್ಮ ಮನೆಗೆ ಜಯ ಮಂಗಳಂ ॥ ೧೨

ದಶಮಿ ಹತ್ತನೆ ದಿನದಿ ದೆಸೆ ದೆಸೆಗೆ ವಾದ್ಯರವ
ಪಸರಿಸಲು ಜಪಮಾಲೆ ಪುಸ್ತಕವು ಸಹಿತ
ಎಸೆವ ಹಂಸೆಯನೇರಿ ಶಶಿಮುಖಿಯು ವಾಗ್ದೇವಿ
ಬಿಸಜಾಕ್ಷಿಯೂ ಬಂದರೈ ನಮ್ಮ ಮನೆಗೆ ಜಯ ಮಂಗಳಂ ॥ ೧೩

ಇಂತು ನವವರಾತ್ರೆಯಲಿ ಕುಂತುಹರಯಕ್ಷಿಯರು
ಅಂತರಿಸದೈತಂದು ನವನಿಧಿಗಳಂತೆ
ಸಂತೋಷ-ಸೌಭಾಗ್ಯ-ಸಂಪದವ ನಮಗಿತ್ತು
ಚಿಂಚಿತಾರ್ಥವು ಕೈಗೆ ದೊರಕಿದಂತಾಯ್ತು ॥ ೧೪

## ೬೭. ಸುರೇಂದ್ರವೃಂದವಂದಿತೇ

ಸುರೇಂದ್ರವೃಂದ ವಂದಿತೇ ದೇವಿ ಮಂಗಲಂ
ಜಿನೇಂದ್ರ ಚಂದ್ರ ಮುಖಸರೋಜ-ಜಾತೆ ಮಂಗಲಂ ॥ ಪಲ್ಲವಿ

ಭಕ್ತವೃಂದವೆಲ್ಲಕೇ ಭುಕ್ತಿಮುಕ್ತಿ ನೀಡುವ
ಪ್ರೇಮದಿಂ ಸಲಹುವ ಸಂಪನ್ನೆ ಮಂಗಲಂ ॥ ೧

ದ್ವಾದಶಾಂಗ ಧಾರಿಣಿ! ವೀಣಾ ಪುಸ್ತಕ ಪಾಣಿ
ಶರಣರ ಪಾಲಿಪ ನಾಗವೇಣಿ! ॥ ೨

ಮಂಗಲಂ ಜಯಾನ್ವಿತೇ ಮಂಗಲಂ ಶುಭಾನ್ವಿತೇ
ಮಂಗಲಂ ಶ್ರೀವರ ಭಾರತೀಗೆ ॥ ೩

## ೬೮. ಶ್ರೀಜಿನರಾಜಗೆಮಂಗಲಂ

ಶ್ರೀಜಿನರಾಜಗೆ ಮಂಗಲಂ ಚೆಲುವ
ಮೂಜಗದೊಡೆಯಗೇ ॥ ಪಲ್ಲವಿ

ಸುರಮುನಿವಂದ್ಯ ಸುರೇಂದ್ರ ಪೂಜಿತಪದ
ಸರಸಿಜಯುಗಲಗೇ ಜಯ ಮಂಗಲಂ ॥ ೧

ಅಂಗವಿಜಯ ಮುಕ್ತ್ಯಂಗನೆಯರಸ ದಿ
ವ್ಯಾಂಗಶೋಭಿತನಿಗೆ ಜಯಮಂಗಲಂ ॥ ೨

ಮಂಗಲ ಮಹಿಮ ಭುಜಂಗಕೇತನ ಸರ್ವ
ಸಂಗ ರಹಿತನಿಗೆ ಜಯಮಂಗಲಂ ॥ ೩

ವಿಶ್ವಪೂಜಿತ ವಿಶ್ವಲೋಚನ ಸುಜ್ಞಾನ
ವಿಶ್ವವಿನುತನಿಗೆ ಜಯಮಂಗಲಂ ॥ ೪

ವಿಶ್ವದಾತ್ಮಜ ವೇಣುಪುರ ಪಾರ್ಶ್ವನಾಥಗೆ
ನಿತ್ಯಶೋಭಿಪನಿಗೆ ಜಯಮಂಗಲಂ ॥ ೫

**೬೯. ಜಯಮಂಗಳಂಸದಾಶುಭ**

ಜಯಮಂಗಳಂ ಸದಾ ಶುಭ ಮಂಗಳಂ
ಜಯ ಶೀತಳೇಶ್ವರನ ಯಕ್ಷೇಂದ್ರಗೆ ಜಯ ॥ ಪಲ್ಲವಿ
ಜಲಗಾಮಿನಿ ಶ್ವೇತಹಯವೇರಿ ಸಾಗರದ
ಜಲದ ಮೇಲೇರಿ ರಾರಾಜಿಸುವ ದೇವೇಶ್ವರ
ಜಲಬ್ರಹ್ಮದೇವ ಶರಣೆಂದು ಶರಧಿಯರಾಜ
ಜಲದೇವಿಯರು ಸ್ತುತಿಸಿ ಜಯವೆನ್ನುತಾ ಜಯಾ ॥ ೧

ದೇಶದೇಶಕ್ಕೆ ಬರುವ ಕ್ಷಾಮ ಢಾಮರ ಸತತ
ದೋಷಗಳ ನೀನೀಗಿ ಶಾಂತಿಯನು ನೀ ನೀಡುವೆ
ಭಾಸ್ಕರನ ತೇಜದಲಿ ಪೊಳೆವ ಮೂರುತಿ ನೀನು
ದಾಸನಾಗುಳಿವೆ ನಿನ್ನ ಚರಣದಡಿಯೊಳಗೆ ಜಯ ॥ ೨

ಶ್ರವಣ ಗುಂಡದಿ ಮೆರೆದ ಬಹುಕಾಲ ವೈಭವದ
ಸರ್ವರಕ್ಷಕ ಶ್ರೀವೀರ ಬ್ರಹ್ಮರಾಯನ ಕಟಾಕ್ಷ
ಭುವನ ಮೂರರೊಳೆಲ್ಲ ಇವನ ಕೀರ್ತಿಪ್ರತಾಪ
ಬಾವಿಯೊಳು ತೇಲಿಸುತ ಕಲ್ಗುಂಡನವ ನಮ್ಮ ಭೂಪ ಜಯ ॥ ೩

**೭೦. ಎತ್ತಿರಾರತಿಸತ್ಯಮೂರ್ತಿಗೆ**

ಎತ್ತಿರಾರತಿ ಸತ್ಯಮೂರ್ತಿಗೆ
ನಿತ್ಯಶಾಂತ ನಿರ್ಮಲಾಂಗ ಬ್ರಹ್ಮದೇವಗೆ ॥ ಪಲ್ಲವಿ

ಕಮಲನಯನ ಕಾರುಣ್ಯಮೂರ್ತಿಗೆ
ದ್ಯುಮಣಿ ತೇಜವೀರ ಶ್ರೀ ಬ್ರಹ್ಮದೇವಗೆ ‖ ೧

ಶೀತಳೇಶನ ಪಾದಸೇವಕ
ಭೂತಳದಿ ಖ್ಯಾತಿಯಿಂದ ಮೆರೆವ ದೇವಗೆ ‖ ೨

ಭೂತಪ್ರೇತ ಪಿಶಾಚಗ್ರಹಗಳ
ಭೀತಿಗೊಳಿಸಿ ತೇಜಯೇರಿ ಬರುವದೇವಗೆ ‖ ೩

ಹುಟ್ಟುಬಂಜೆಗೆ ಕೊಟ್ಟು ಸುತರನು
ಇಷ್ಟಸಿದ್ಧಿಯನ್ನು ಕೊಡುವ ಶ್ರೇಷ್ಠ ಮೂರ್ತಿಗೆ ‖ ೪

ವೇಣುಪುರದೊಳು ಅನಂತಗೇಹದಿ
ಕಮಲ ಪೀಠದೊಳಗೆ ನೆಲಸಿ ಮೆರೆವ ದೇವಗ ‖ ೫

## ೬೧. ಜಯಮಂಗಲಂಸದಾ

ಜಯಮಂಗಲಂ ಸದಾ ಶುಭ ಮಂಗಲಂ
ಜಯಕ್ಷೇತ್ರಪಾಲ ಸದ್ಗುಣ ಶೀಲಗೆ ಜಯಮಂಗಲಂ ‖ ಪಲ್ಲವಿ

ಧೃತರತ್ನಮಯ ಮುಕುಟ ರತ್ನಕುಂಡಲಹಾರ
ಧೃತ ಶೂರ ಖಡ್ಗಕರ ವಾಲಕರಣೇ
ಜಿತಸುಮನ ಶರರೂಪ ನಾಗಸಂಭವ ವರ್ಣ
ಜಿತ ಚಂಡಕರತೇಜ ವರಧೀರಗೆ ಜಯ ಮಂಗಲಂ ‖ ೧

ಗಜ ವೈರಿ ಪೋತ ಸಮಸಾರ ಮೇಯಾರೂಢ
ಭುಜ ಕಿರೀಟಾದಿ ಭೂಷಣಗೆ
ರಾಜೇಂದ್ರ ಚಂದ್ರ ಪೂಜಿತ ಚರಣ ಕಮಲಯುಗ
ದ್ವಿಜಸೂತ್ರಧರ ಹಿತಕರಭಾಷಗೇ ಜಯಮಂಗಲಂ ‖ ೨

ವ್ಯಂತರಾಮರವಂದ್ಯ ಕೃತಸಜ್ಜನಾಮೋದ
ಭೂತ ಪೈಶಾಚ ಭಯದೂರಕರಗೆ
ಚಿಂತಿತಾರ್ಥವನೀವ ಚಿಂತಾಮಣಿರಾಯನಿಗೆ
ಸಂತತದಿ ಜಿನಗೇಹ ರಕ್ಷಣಕಾರಗೆ ‖ ೩

## ೬೨. ಮಂಗಳಾರತಿಯತಂದೆತ್ತಿರಿ

ಮಂಗಳಾರತಿಯ ತಂದೆತ್ತಿರಿ ಜಿನಯಜ್ಞ ರಕ್ಷಿತನಾದ ಕ್ಷೇತ್ರಪಾಲಗೆ
ಮಂಗಳಾರತಿಯ ತಂದೆತ್ತಿರೆ ‖ ಪಲ್ಲವಿ

ಉರಗ ಭೂಷಣನಾದ ಅರುಣ ನಿಭಾಂಗಗೆ
ಕರುಣವಾರಿಧಿ ಪೂರ್ಣ ಚಂದ್ರನಿಗೆ
ಅರುಹನು ಭಕ್ತಿಗೆ ವರಬ್ರಹ್ಮಚಾರಿಗೆ
ಸರಸಿಜ ಮುಖಿಯರಾರತಿ ಯೆತ್ತಿರಿ ‖ ೧

ಅಂಗನೆಯರ ರತಿಸುಖವನ್ನು ತೊರೆದಗೆ
ಕಂಗಳು ಮೂರುಳ್ಳ ದಿಗಂಬರಗೆ
ಕಂಗೊಳಿಸುವ ಶ್ವಾನವಾಹನರೂಢಗೆ
ಭೃಂಗ ಕುಂತಳೆಯರಾರತಿ ಯೆತ್ತಿರೆ ‖ ೨

ದಂಡ ಕಮಂಡಲ ಡಮರುಕ್ಷ ಮಾಲಗೆ
ಮಂಡಲಕಧಿಕ ಪ್ರಚಂಡ ಮೂರುತಿಗೆ
ಖಂಡಿತಖಿಲ ವಿಘ್ನತಂಡ ಉದ್ಧಂಡಗೆ
ಶುಂಡಾಲ ಗಮನೆಯರಾರತಿ ಯೆತ್ತಿರೆ ‖ ೩

ಅಷ್ಟ ದಿಕ್ಕುಗಳಲ್ಲಿ ಬೆಟ್ಟಾರಣ್ಯಗಳಲ್ಲಿ
ತುಟ್ಟ ತುದಿಯ ಶಿಖರಾಗ್ರದಲೀ
ಪಟ್ಟಣ ನದಿ ಸಾಗರದಲ್ಲಿ ನೆಲಸಿರ್ಪ
ಝುಟ್ಟಿಂಗರಾಯನಿಗಾರತಿಯೆತ್ತಿರೆ ‖ ೪

ಭಸಿತ ಲೇಪಿತನಿಗೆ ಶಶಿಯಧರಿಸಿದಗೆ
ಕುಸುಮಬಾಣವ ಮುರಿದಾತನಿಗೆ
ವಸುಧೆಗಧಿಕ ಹಿರಿಬಸದಿಯೊಳ್ ನೆಲೆಸಿರ್ಪ
ಅಸಮ ಭೈರವಗಾರತಿ ಎತ್ತಿರೆ ‖ ೫

**<u>೭೩. ಜಯಮಂಗಳಂಸದಾ</u>**

**ರಾಗ : ಆನಂದಭೈರವಿ ತಾಳ : ರೂಪಕತಾಳ**

ಜಯಮಂಗಳಂ ಸದಾ ಶುಭಮಂಗಳಂ
ಜಯಚತುರ್ವಿಂಶತಿ ಮಹಾಜಿನರಿಗೆ ‖ ಪಲ್ಲವಿ

ಇಂದ್ರಶತವಂದ್ಯ ಶ್ರೀವೃಷಭಜಿನರಾಜನಿಗೆ
ಚಂದ್ರಾರ್ಕ ತನುತೇಜ ಅಜಿತಜಿನಗೆ

ಮಂದರಾಗ್ರದಿ ನಿಂದ ಶಂಭವಜಿನೇಶ್ವರಗೆ
ಕಂದರ್ಪವಿಜಯ ಅಭಿನಂದನರಿಗೆ ॥ ೧

ಅಮರವಂದಿತನಾದ ಸುಮತಿ ಶ್ರೀ ಜಿನಪತಿಗೆ
ಅಮಿತಗುಣಪದ್ಮ ಪ್ರಭೇಶ್ವರನಿಗೆ
ಸುಮನಸಾರಾಬ್ಜಸುಪಾರ್ಶ್ವಜಿನಪತಿಗೆ
ಮಮ ದೇವನಾದ ಶ್ರೀಚಂದ್ರಜಿನಗೆ ॥ ೨

ಪುಷ್ಪಸಾಯಕವಿಜಯ ಪುಷ್ಪದಂತೇಶ್ವರಗೆ
ನಿಷ್ಪನ್ನಹೃದಯ ಶೀತಳಜಿನರಿಗೆ
ಒಪ್ಪುತಿಹ ಶ್ರೇಯಾಂಸ ವಾಸುಪೂಜ್ಯೆಶ್ವರಗೆ
ದರ್ಪಕಾರಾತಿ ಶ್ರೀವಿಮಲ ಜಿನಗೆ ॥ ೩

ಅಂತಕಾಂತಕನೆನಿಪನಂತ ಶ್ರೀಜಿನಪತಿಗೆ
ಕಂತುಮದಹರಧರ್ಮ ಶಾಂತಿಜಿನಗೆ
ಕುಂಥು ಅರಮಲ್ಲಿ ಮುನಿಸುವ್ರತಗೆ ನಮಿಜಿನಗೆ
ಚಿಂತಿತಾರ್ಥವನೀವ ನೇಮಿಜಿನಗೆ ॥ ೪

ಪರಮ ಶ್ರೀಪಾರ್ಶ್ವ ಜಿನ ಮಹತಿ ಮಹಾವೀರನಿಗೆ
ಧರೆಗೆ ಬೆಳ್ಗುಳದ ಭಂಡಾರಿಗೃಹದ
ಹರಿಪೀಠದೊಳು ನೆಲಸಿ ಪಂಡಿತಾಚಾರ್ಯರಿಗೆ
ನಿರತಸುಖವೀವ ಚವ್ವೀಶ ಜಿನರಿಗೆ ॥ ೫

**೭೪. ಜಯಮಂಗಲಂಸದಾ**

**ರಾಗ : ಆನಂದಭೈರವಿ ತಾಳ : ಝಂಪೆತಾಳ**

ಜಯಮಂಗಲಂ ಸದಾ ಶುಭಮಂಗಲಂ
ಆದಿಜಿನಪನ ತನುಜನಾದ ಚಕ್ರಿಯ ಕೂಡೆ
ಕಾದು ಗೆಲಿದತಿಭರದಿ ಮೇದಿನಿಯೊಳು
ಭೇದಿಸಿದ ಸಕಲಕರ್ಮವ ಗೆಲ್ದು ಮುಕ್ತಿಯನು
ಸಾಧಿಸಿದ ಬಾಹುಬಲಿ ಜಿನರಾಜಗೆ ॥ ೧

ಪಚ್ಚೆವರ್ಣದ ಕಾಂತಿ ಪರಮಪಾವನ ಶಾಂತಿ
ಹೆಚ್ಚಿ ಕಾಮನ ಸರಳತುಚ್ಛ ಮಾಡಿ
ಎಚ್ಚ ಶ್ರೀ ಸುಜ್ಞಾನ ಕಕ್ಷದೊಳು ತಪವಾಂತು
ಮುಕ್ತಿಯನು ಸಾಧಿಸಿದ ಬಾಹುಬಲಿ ಜಿನರಾಜಗೆ ॥ ೨

ಧರೆಗಧಿಕವಾದ ಸ್ರೀ ಕಾರ್ಕಳಪುರಾಗ್ರದೊಳು
ಸ್ಥಿರವಾಗಿ ನೆಲಸಿರ್ದು ನಿಶ್ಚಿಂತೆಯೊಳ್
ಗುರುಲಲಿತಕೀರ್ತಿಮುನಿಪತಿಯ ತಾ ರಕ್ಷಿಸುವ
ದುರಿತಹರ ಬಾಹುಬಲಿ ಜಿನರಾಜಗೆ ॥ ೩

## ೭೫. ಮಂಗಳನಿಜಪರಂಜ್ಯೋತಿಗೆ

**ರಾಗ : ಸೌರಾಷ ತಾಳ : ಅಟ್ಟತಾಳ**

ಮಂಗಳ ನಿಜಪರಂಜ್ಯೋತಿಗೆ ಜಯ
ಮಂಗಳ ಶುಭಮಂಗಳ ಗುರು ಹಂಸನಾಥನಿಗೆ ॥ ಪಲ್ಲವಿ

ಪದಿನೆಂಟು ದೋಷವ ಗೆಲಿದಷ್ಟಕರ್ಮವ ಪಡೆದಷ್ಟ ಗುಣವಿಶ್ವರೂಪನಿಗೆ
ಮದನವಿಜಯನಿಗೆ ಪರಮಾರಹಂತಗೆ ವಿದಿತ ಬೋಧಾಮೃತವೀವನಿಗೆ ॥ ೧

ಬದ್ಧಕರ್ಮಾರಿಪ್ರಬುದ್ಧ ಸುಜ್ಞಾನಸಮುದ್ರ ನಿರಂಜನಸಿದ್ಧರಿಗೆ
ಶುದ್ಧ ರತ್ನತ್ರಯರೂಪಾತ್ಮನಾದ ಪ್ರಸಿದ್ಧ ಬೋಧರಾಚಾರ್ಯರಿಗೆ ॥ ೨

ಸುರನರನಾಗೇಂದ್ರರಿಗುಪದೇಶವ ಪರಿಪಾಲಿಸಿದುಪಾಧ್ಯಾಯರಿಗೆ
ಕರುಣಾಮೃತವೀವ ಸರ್ವಸಾಧುಗಳಿಗೆ ಪರಮಪಾವನ ಪರಬ್ರಹ್ಮರಿಗೆ ॥ ೩

## ೭೬. ಭವತುಮಂಗಲಂ

**ರಾಗ : ಜೋಗುಸಾವೇರಿ ತಾಳ : ಅಟ್ಟತಾಳ ಚಾಪು**

ಭವತು ಮಂಗಲಂ ಮಂಗಲಂ ಮಂಗಲಂ ॥ ಪಲ್ಲವಿ

ದೇವ ಭವವಿನಾಶನವನ್ನು ಮಾಡಿ
ದೇವ ಕುವಲಯದೊಳು ಧರ್ಮ ಮಾಡಿ
ದೇವ ಸುವಿದಿಯಿಂ ಮುಕ್ತಿಯೊಳ್ಕೂಡಿ
ದೇವ ತವೆಯದೆ ಸುಖವಿತ್ತೆ ನೋಡಿ ॥ ೧

ದೇವ ಅಮರರಿಂ ಪೂಜೆಯನಾಂತು
ದೇವ ಸಮವಸರಣದೊಳು ನಿಂದು
ದೇವ ಸುಮನದಿ ಕೇಳ್ವರ್ಗೆ ಕಂತು
ದೇವಭ್ರಮ ಹರಿಸಿದೆ ಮನವಾಂತು ॥ ೨

ದೇವ ಮೆರೆಯುವ ಬೆಳ್ಗುಳಪುರವ
ದೇವ ಪೊರೆಯುವ ಗೋಮಟದೇವ

ದೇವ ಹರುಷದೊಳಿರುತಿಹ ಭಾವ
ದೇವ ಪರಿಕಿಸಿ ನೋಡಲಭಾವ ॥ ೩

# ೭. ಸಂಕೀರ್ಣ ಹಾಡುಗಳು

**೧. ಜಿನರೆಂದೊಡೆಜಿನ**

ಜಿನರೆಂದೊಡೆ ಜಿನಶರಣೆಂದೊಡೆ
ಎನ್ನ ಮನದ ಕರ್ಮವನೀಡಾಡವೆನು ॥ ಪಲ್ಲವಿ

ಕಾಮವೈರಿಯೆಂದು ನಿಮ್ಮ ಕೋಮಲ ಪದವನೊಮ್ಮೆ
ಪ್ರೇಮದಿಂದ ವಂದಿಸುವರು ಭೂರಿ ಜನರು ರಾಮಣಿಕ
ಸೋಮಜಾರಿ ಪೀಠಕ್ಕೊಡೆಯನಾದ ಜಿನನೇ ॥ ೧

ಇಕ್ಷುಚಾಪವನು ಗೆಲಿದು ರಕ್ಷಿಸುವ ಧೀರನೆ
ಪ್ರೇಕ್ಷಿಸುವ ಜನರುಗಳಿಗೆ ಆಯುವಿತ್ತನೇ ರಕ್ಷಿಸೆನ್ನನೂ
ಮೋಕ್ಷ ಲಕ್ಷ್ಮಿಲೋಲ ಶ್ರೀವೀತರಾಗನೇ ॥ ೨

ಜನನ ಮರಣವಿಲ್ಲದವನೆ ಘನತರದ ಮೆರುವಿಂ
ದಿನುತ ಪಾಲ್ಗಡಲ ಜಲವ ಮಿಂದ ಮಹಿಮನೇ
ಅನುದಿನ ನಿಮ್ಮ ನೆನೆವ ಮಾನವನಿತ್ತು ಪಾಲಿಸೆನ್ನನು ॥ ೩

ಸರ್ವಜೀವ ದಯಾಪರನೇ ಊರ್ವಿಗಧಿಕನಾದನೇ
ಪರ್ವತಾಗ್ರದಲ್ಲಿ ಯೋಗ್ಯವಿಟ್ಟ ಧೀರನೇ
ಸರ್ವಕಾಲ ಎನ್ನ ಮನವ ನಿಮ್ಮ ಚರಣಕೆರಗಿಸೆನ್ನನು ॥ ೪

ನಗೆಮುಖದ ಚೆಲುವನೆ ಜಗವ ಪಾಲಿಪೊಡೆಯನೆ
ಸುಗುಣ ರನ್ನನೆ ನಿತ್ಯಾನಂದನೆ ಸೊಗಯಿಸುವ
ಮಿಗುವದೊಂದು ಗಿರಿಯಶ್ರೀ ವಿಜಯನಾಥನೇ ॥ ೫

**೨. ಕರೆಕರೆಕರೆಘನ**

ಕರೆ ಕರೆ ಕರೆ ಘನ ಹೋ
ಕರೆಯದಿಂದಿರ್ದರೆ ತಮ್ಮಮ್ಮಗೆ ಹೇಳಾ ॥ ಪಲ್ಲವಿ

ಗಂಡನ ಕಂಡೆಯಿಂದಂಡಲೆ ಘನ ಹೋ
ಕೊಂಡೆಗರ್ರೈವರಿಗಾರೆನಾ

ಚಂಡಮೂನೊ ಮಾವನಂಜಿಕೆಯೆನಗುಂಟು
ಕಂಡೆನೈವರು ಸುಮತಿಯ ಗುಣವ ‖ ೧

ಇಬ್ಬರಂತೆಯರೊಳು ಒಬ್ಬಳುಳಿದಳು ಮ
ತ್ತೊಬ್ಬಳ ಕರೆಕರೆದಾರೆ ನಾ
ನಿರ್ಬುದ್ಧಿಯಿಂದೈವರು ಮೈದುನರುಂಟು
ವಿಬುಧಿಯಿಲ್ಲೆನ್ನ ಬಾಳುವೆಗೆ ‖ ೨

ಸವತಿಯ ಮಕ್ಕಳೈವರ ಕಾಟದಿಂದ
ಹವಣಿಲ್ಲದ ಭವಬಂದೆನಾ
ನವೆಯಲಾರೆನು ಬಡತನದ ಬಾಳುವೆ
ತವರು ಮನೆಯನೊಮ್ಮೆ ತೋರಯ್ಯ ‖ ೩

ಎಂಟು ಮಂದತ್ತಿಗೆಯರು ತಮತಮಗೆ
ಎಂಟು ಕೆಲಸಗಳ ಹೇಳುವರು
ತುಂಟನೊಬ್ಬನು ನಾಲ್ವರ ಘೋರ ಮಾಡುವಾ
ಬಂಟನೊಬ್ಬನ ಮೊರೆಯಿಡುತಿಹನು ‖ ೪

ಅರ್ಹನಲ್ಲದೆ ಪರದೈವಕೆರಗೆನು
ಕೊರಟಗೆರೆಯ ಬ್ರಹ್ಮಸ್ವಾಮಿಯನು
ಸ್ಥಿರದಿಂದ ಬಲ್ಲಿದರೈವರ ಒಡಗೊಂಡು
ಬರುತಲವರು ತವರೂರಿಗೆ ‖ ೫

**೩. ಭಾಗಬಿಳಿದುಭಾಗಕರಿದು**

ಭಾಗ ಬಿಳಿದು ಭಾಗಕರಿದು ಇದ
ರಾಗಮ ಸಿದ್ದಾಂತವನೆಲ್ಲ ತಿಳಿದು ‖ ಪಲ್ಲವಿ

ಎಂಟುಕಮಲದೊಳಗಿಹುದು ನಡು
ದಂಟಿನೊಳಗೆ ಬಿಂದು ಸುಳಿದಾಡುತಿಹುದು
ಉಂಟು ಮಾಡು ತೋರುತಿಹುದು ಇದ
ನೀಂಟಿಸಿ ನೋಡಲು ಶರಕೆ ಬಂದಿಹುದು ‖ ೧

ಎರಡರ ಮದ್ಯದೊಳಿಹುದು ಅದು
ಹೊರಡ ಬಿಟ್ಟೊಂದತ ಹುರೂಟಿಸುತ್ತಿಹುದು
ಬರಡ ಹಯನ ಮಾಡುತಿಹುದು ಇದು
ಎರಡು ಕಣ್ಣವರಿಗೆ ಕಾಣದಿಹುದು ‖ ೨

ನೆತ್ತಿಯೊಳಗೆ ಬಾಯಾಗಿಹುದು ಅದು
ಉತ್ತರದೇಶಕೆ ಎಡೆಯಾಡುತಿಹುದು
ಮತ್ತಾರಿಗೂ ಅಳವಡದು ಇದ
ರರ್ಥ ನಿರ್ವಾಣಯೋಗಿ ತಾ ತಿಳಿದು ॥ ೩

**೪. ತೀರ್ಥಯಾತ್ರೆಯಕೇಳಿಬುಧ**

ತೀರ್ಥಯಾತ್ರೆಯ ಕೇಳಿ ಬುಧ ಸಮಿತಿ ಹರುಷದೊಳು
ಸ್ವಾರ್ಥವಾಯ್ತಿನೊಂದು ಪೇಳಿದ ವಚನಯಮನಲ್ಲಿ
ಪ್ರಾರ್ಥಿಸಲು ಸಮ್ಯಕ್ರಮಣಸಿಂಧು ಚದುರ ಲೋ
ಕಾರ್ಥವಾಗಿದನುಸುರುವೆ ॥ ಪಲ್ಲವಿ

ಪೇಳಿಲಳವಲ್ಲ ಮುಕ್ತಗಿರಿಯ ಮಹಿಮೆಯನು
ಶೀಲಭೂಷಣರಲ್ಲಿ ಮೂರೂವರೆ ಕೋಟಿ ಮುನಿ
ಜಾಲಿಕರ್ಮವನು ಕೆಡಿಸಿ ಸಿದ್ಧ ಪದವಿಯ ಪಡದು
ಲೀಲೆಯಿಂದಿರುತಿರ್ಪರೈ ॥ ೧

ಮೇಲೆನಿಪ ಧುರಗಗಿರಿಯಗ್ರದೊಳು
ನೆಲೆನಿಂದು ಮುಲಿಗುಣಗಳ
ತಳದು ತೊಂಬತ್ತೊಂಬತ್ತು ಕೋಟಿ ಮುನಿ
ವಾಲಿ ಸುಗ್ರೀವ ಹನುಮಂತ ರಾಮಾದಿಗಳು
ಆಳಿದರು ಮುಕ್ತಿವೆಣ್ಣ ॥ ೨

ಅಲ್ಲಿಂದ ತೆಂಕಗಜ ಪಂಥ ಪರ್ವತದಲ್ಲಿ
ಬಲ್ಲಿದರು ವ್ಯಾಲಮಹಾ ಮುಂತಾದವರು
ಸಲ್ಲೀಲೆಯಿಂದೆಂಟು ಕೋಟಿ ಮುನಿಶಿವವದು
ಗೊಲ್ಲವಿತರು ತಾವಾದರೈ ॥ ೩

ಸೊಲ್ಲಿಸುವರಳವಲ್ಲ ಬಡಿಗ ಚೂಳಾಚಳದಿ
ನಿಲ್ಲದೆ ಇಂದ್ರಜಿತು ಕುಂಭಕರ್ಣಾದಿಗಳು
ಚೆಲ್ವನಪ್ಪಂತಿವರು ಮೂರುವರೆ ಕೋಟಿ ಮುನಿಗ
ಳಲ್ಲಿ ಸಿದ್ಧಾತ್ಮವಾದರೈ ॥ ೪

ಆ ಗಿರಿಯ ತಳದೊಳೈವತ್ತೆರಡು ಗಜದಿಂದ
ಮಾಗಿ ರಚಿಸಿದ ಪ್ರಥಮ ಜಿನರ ಬಿಂಬಾಚಾರ್ಯ
ಭೂಗಧಿಕ ಶತ್ರುಂಜಯ ಗಿರಿಯ ಮಧ್ಯದೊಳು
ಭೋಗಿಗಳು ಪಾಂಡವತ್ರಯರು ॥ ೫

ಬೇಗಯಿವರಾಗಿಯಾ ಗೆಂಟುವರೆ ಕೋಟಿ ಮುನಿ
ಸಾಗಿದರು ಮುಕ್ತಿಕನ್ನಿಕೆಗೆ ಮನವಿಟ್ಟಂದು
ಶ್ರೀಗೆ ನೆಲೆಯಾಗಿ ಉಜ್ಜಂತಗಿರಿಯಗ್ರದೊಳು ವೈ
ರಾಗ್ಯ ನೇಮಿಶನ್ನೈ ॥ ೭

ವರದತ್ತ ಮುನಿ ಮುಖ್ಯದೊಳ್ನೊರೆಪ್ಪ
ತ್ತೆರಡು ಕೋಟಿಗಳಂದು ಸಲುವಲ್ಲಿ ಮುನಿ ವೃಂ
ದಾರ ಕರ ಚೆಲುವೆ ಮುಕ್ತಿಕನ್ನಿಕೆಗೊಲಿದು ಸುಖದೊಳಗೆ
ಹರುಷದಿಂದಿರುತಿರ್ಪರೈ ॥ ೭

ನಿರುತ ಪಾವಾಪುರಿಯೊಳುದೆಂಟು ಕೋಟಿ ಮುನಿ
ವರ ಶ್ರವಣಗಿರಿಯೊಳಂದೈದೂವರೆಕೋಟಿ ಮುನಿ
ಮೆರೆವರೆ ದಿವಾನದಿಯ ದಕ್ಷಿಣ ದಿಶಾತಳದಿ
ಇರುತಿರ್ದ ಕರ್ಮಹರರು ॥ ೮

ಮೂರುವರೆಕೋಟಿ ಮುನಿ ಮುಕ್ತಿ ಪುರಕೆ ಇದ್ದರು
ಮಾರಹರ ಶ್ರೀ ವಾಸುಪೂಜ್ಯ ಚಂಪಾಪುರದಿ
ಸಾರಿದನು ಮುಕ್ತಿಯನು ಸಿದ್ಧಾರ್ಥವರ ಪುತ್ರ
ಶೂರ ಭವಪಾಪ ದೂರ ॥ ೯

ಭೂರಿ ವೈಭವದಿಂದ ಮೆರೆವ ಪಾವಾಪುರದಿ
ಸೆರೆವೊಲು ಉದ್ಯಾನ ಕಮಲಗಿರಿ ಮಧ್ಯದೊಳು
ವೀರಶ್ರೀ ವೀರಸನ್ಮತಿ ಮಹತಿ ಮಹಾವೀರ
ಧೀರಶ್ರೀ ವರ್ಧಮಾನ ॥ ೧೦

ಸುಮ್ಮನೇತಕೆ ಕಷ್ಟ ಸಂಸಾರದೊಳು ತೊಳಲುವೈ
ಸಮ್ಮೇದ ಶಿಖರದೊಳಿಪ್ಪತ್ತು ಜಿನರಂದು
ಗಮ್ಮನೆ ಮುಕ್ತಿಯನು ಪಡೆದರಂಬುದ ಕೇಳಿ ದಿನ
ಕೊಮ್ಮೆಯಾದರೂ ನೆನೆಯಹೋ ॥ ೧೧

ಅಮ್ಮಮ್ಮಮ್ಮ ಶಂಕೆಯಿಲ್ಲದೆ ಕೋಟಿ ಮುನಿಯು ಪರ
ಬೊಮ್ಮನೊಬ್ಬನ ನಂಬಿ ಕರ್ಮಗಳ ಕೆಡಿಸಿದರು
ಹೆಮ್ಮೆಯಾಕೆ ನಿಮಗೆ ಜಿನರ ಪಾದಂಗಳನು
ಘಮ್ಮನೆ ಸ್ಮರಿಸಿ ಸುಖಿಸು ॥ ೧೨

ಎಸೆವ ವೈಭಾರ ವಿಪುಳಾದ್ರ ಗಿರಿ ಉದಯಗಿರಿ
ಹೊಸತೆನಿಪ ರತ್ನಗಿರಿ ಸುವರ್ಣಗಿರಿಯೊಳು ನಿಂದು

ಮಸಕಾದಿ ಪರಿಷಹಂಗಳನೆ ಗೆಲ್ವ ಪನ್ನೊಂದ
ಜಸವಾಂತ ಗಣಧರರ ಹೋ ॥ ೧೩

ವಸವಾದರೆಂದರಿಯ ಶಿವನಾರಿಗವರಂದು
ಪೆಸರ್ವೆತ್ತ ಉತ್ತರಾ ಮಧುರೆಯುಧ್ಯಾನದೊಳು
ಹಸಗೆಡಿಸಿ ಕರ್ಮವನು ಜಂಬುನಾಥ ಸ್ವಾಮಿ
ಹಸನಾದನೆಂದರಿಯಯ್ಯ ॥ ೧೪

ಪಾಟಲಿಪುರದ ನಂದನವನದಿ ಸುದರುಶನ
ಶ್ರೇಷ್ಠಿಸಾಧಿಸಿದ ಶಿವಪುರವ ಮತ್ತಿತ್ತಲುಂ
ಸಾಟಿ ಇಲ್ಲೆಂಬ ಮಂದಾರಗಿರಿ ವಿಂದ್ಯಗಿರಿ
ಮಿಟೆನಿಪ ಸ್ವರ್ಣಭದ್ರಿ ॥ ೧೫

ನೋಟದಿಂ ಸೊಗಯಿಸುವ ನದಿಗಂಗೆಯಮುನೆಗಳಲ್ಲಿ
ಕೋಟಿಗಣನೆಗಳಲ್ಲಿ ಕರ್ಮಲಯ ಭೂಮಿಗಳು
ಕೋಟಿಗಳಿಂದೆಸೆವಯೋಧ್ಯ ಹಸ್ತಿನಾಪುರವ
ದಾಟಿ ಕೌಸಂಬಿ ನಗರಿ ॥ ೧೬

ಕುಂಡಲಾಪುರಿರತ್ನಪುರಿ ಚಂದ್ರಪುರಿ ಕಾಶಿ ಭೂ
ಮಂಡಲದೊಳಿವು ತೀರ್ಥಂಕರ ಜಲ್ಮಭೂಮಿಯನು
ಕಂಡು ಬಂದೆನು ಭವ್ಯಬೇಗದಿಂ ಮನಮೊಸೆದೊ
ಡಂಬಡಿಸು ತೀರ್ಥಗಳನು ॥ ೧೭

ಹಿಂಡುಕರ್ಮವ ಕೆಡಿಸುತಿಹ ತೆರೆದಾರ ಸಿಂಹ
ಚಂದ್ರ ವಿಕ್ರಮ ಶಂಖ ಜಿನ ಮಾಣಿಕಸ್ವಾಮಿ
ಮಂಡಲಕೆ ಏಳ್ನೂರಾಚಾರ್ಯ ಜಿನಚಂದ್ರ ಜಿನಸು ಪ್ರ
ಚಂಡ ಬೆಳ್ಗೊಳದೊಡೆಯನ್ಯೆ ॥ ೧೮

ಮಾನಿಯೆಂಬೂರ ನೆಲಮಾಳಿಗೆಯ ಬಸದಿಯೊಳು
ಭಾನು ಸಮಪಾರೀಶ್ವ ಜಿನರಂಗದೊಳು ದಿನಕೊಮ್ಮ
ದಾನವೀವಂತೆ ಜಲಘಟ ನಾಲ್ಕು ಕರೆವುತಿರ
ಲೇನೆಂಬೆನಾಶ್ಚರ್ಯವಾ ॥ ೧೯

ಜ್ಞಾನಿಗಳು ಪೂಜಿಸುವ ಕೋಪವನೆ ಕಂಡು ಬೇ
ಗನೆಂದು ವಾಕ್ಯಹ ಕೇಳಿ ಜಿನರುಂಟೆನಲು
ಭಾನುದಯ ಸತ್ವವ ಸುರಿವಂತೆ ವೇಶಗಳಿಂದ
ನೀರು ಸೂಸುತ್ತಿರೆ ಕಂಡು ॥ ೨೦

ಬಿಡುಬಂಜ್ಯನ ಪಾಶ ಜಿನರೆಂದು ಪೆಸರಿಟ್ಟು
ಕೂಡೊಂದು ಗೆಣಂತರಾಳದೊಳು ಪ್ರತ್ಯಕ್ಷ
ರೂಢಿಗತಿಶಯವಾದ ಪಾಶಜಿನ ಅಜಿತ ಜಿನ
ನೋಡೆ ಚಿಂತಾಮಣೀಶಾ ॥ ೧೧

ಪಾಥಲಿಳಿವಂತತಿಶಯ ನೇಮಿಗಿರಿ ಮಾಡಿ
ದತಿಶಯವಲ್ಲ ವೃಷಭನಾಥ ಸ್ವಾಮಿ ಕಾ
ಡುತಿಯ ಕರ್ಮಗಳ ಕೆಡಿಸಿ
ಮುಕ್ತಿಯೊಳೆಮ್ಮ ಕೂಡಿ ನೆಲೆ ಪಾರ್ಶ್ವ ಜಿನರೇ ॥ ೧೨

ಪೊಂಬುಚ್ಚಪುರದೊಳು ಶ್ರೀ ಚಂಡೇರಿ ಮಾಗಿದ ಶ್ರೀ ಜ್ವಾಲೇರಿ
ವೊಂಬತ್ತು ಬಿಲ್ವಿಡಿಯ ಪುರುಜಿನರುಂಟು
ನಂಬು ತವನಿಧಿ ನವಖಂಡ ಪಾರೀಶ್ವ ಜಿನ
ಹಂಬಲಿಪೆ ಕೈಲಾಸವ ॥ ೧೩

ಇಂಬಿನಿಂದೆಸೆವ ಬ್ರವಿಘ್ನಹರ ಪಾರ್ಶ್ವ ಜಿನ
ತುಂಬಿದ ತ್ರಿಸಯ ತೀರ್ಥ ಇವು ಮೊದಲ್ಗೊಂಡು ನವೊ
ಎಂಬೆ ಗುರು ಸಂತತಿಯ ಚೆನ್ನಾಗಿ ಕೇಳಿರೈ
ಶಂಭರಾರಿಯ ಜೈಸಿದ ॥ ೧೪

ಸ್ವಾಮಿ ವಿದ್ಯಾರನಂದ ಮಲ್ಲಿಭೂಷಣವ
ಕಾಮಿತವನೀವ ಲಕ್ಷ್ಮೀಚಂದ್ರಗಿರಿದೈಯ
ಪ್ರೇಮದಿಂದ ಪೆಸರ್ವೆತ್ತ ವೀರಚಂದ್ರಾಚಾರ್ಯ
ಕಾಮನದಾಟವ ಮುರಿದನೈ ॥ ೧೫

ಸೋಮಶಾಂತನು ಜ್ಞಾನಸುಪ್ರಭಾಚಾರ್ಯ ತಪೊ
ಭೂಮಿಗೆ ಕಣ್ಣಿಟ್ಟು ಸುಪ್ರಭೆಂದು ಮುನಿ
ಕೋಮಲಾಂಗರು ಪ್ರಿಯದಿಂದ ಮಹಿಚಂದ್ರರಾ
ಪ್ರೇಮದ ಶಿಷ್ಯ ನಾನೈ ॥ ೧೬

**<u>೫. ಲಕ್ಷ್ಮಿಸೇನಮುನಿಜ್ವಾಲಿನಿ</u>**

ಲಕ್ಷ್ಮಿಸೇನ ಮುನಿ ಜ್ವಾಲಿನಿ ವರದ ಭಟ್ಟಾರಕ ಸ್ವಾಮಿ
ತೋಚಿ ಶಿಷ್ಯ ಸನ್ಮತಿ ಸಾಗರಲಿಹಿತ್ವರಾಕ್ರಮಿ ॥ ಪಲ್ಲವಿ

ಚಾರುಗಣ ಮಧ್ಯ ತೋರ್ಪ ಭೃತ್ಯ ಝಾಲಾ ಬಹುಧೀರಾ
ಮೊರ್ಕ್ಕ ಜನಾಸಿ ಬೋಧನಕಾರಿತ ಸದ್ಗುಣ ಸಂಪೂರಾ

ಮದನ್ಮನಮಹರ ಜಿನಚರಣಾಂಬುಜ ವಂದಿತ ಸತ್ವರಾ
ತ್ರಿಸಂದಿನಾಧ್ಯಾಯನಕರು ನಿಜಪತಿ ನವಕಾರಾ ॥ ೧

ಶಲ್ಯತ್ರ ಶೋಡು ನಿಜಮನಾಸದರಲಿ ಸುವಿಚಾರ
ಸಂಸಾರಾಂಬುದಿ ಕಾರಣ ಕರಿತಾರರ ತೀರ್ಥ ಪಥೋರ
ಶೀಲಸಾಗರ ಗುಣಗಂಭೀರ ಭವ್ಯಾಬುಧಿ ಶೂರ
ಮನುಷ್ಯತ್ಯಾಚಸ್ತವನಾಕರತಿರ ಅನುದಿನ ಗುಣಸಾರ ॥ ೨

ಸುರಪುರ ಪಕ್ಷಿತ ಶೋಭಿತಪುರ ಗೋಕಾಕನಾಮ
ಯಥರಾಹುನಿ ಕೀರ್ತಿ ಕೀಲರಘುಸುತ ಗುಣಧಾಮ
ಜೋಜೋ ಸ್ತವನಾ ಪಠನಾಕರತಿ ಪುರತಿ ಮನಕಾಮ
ಕಾಯವನಾ ವಿಚಾರ ಪಟ್ಟಸ್ವಾಮೀಜಿ ಮಹಿಮಾ ॥ ೩

## ೬. ಜಿನನಿನಗಂತವುಂಟೆನಲು

ಜಿನನಿನಗಂತವುಂಟೆನಲು ಅಂತಿಂತೆಂದು ಹೊಗಳ್ವ
ದನಂತಗರಿದು ನಿನ್ನ ಅನಂತ ಚತುಷ್ಟಯವು ॥ ಪಲ್ಲವಿ

ಸುರಗಿರಿಯುನ್ನತೀಶರಧಿಗಾಧವಂ
ಬರದಗಲ ಕೋಟಿ ಜಗದೊಳೆಲ್ಲ
ಸುರಗಿರಿ ಶರಧಿಯಂಬರಗಳ ಮಹಿಮೆ ನಿ
ನ್ನೂರು ಬೋಧಕಣುವಾದುದು ॥ ೧

ಕ್ರಮ ಕರುಣ ವ್ಯವಧಾನರಹಿತನಾದ ಪ
ರಮ ಕೇವಲ ಬೋಧರುದಯದಿಂದ
ಅಮರ ಲೋಕಾಲೋಕವನೊಮ್ಮೆ ಅರಿ
ವ ಮಹಿಮೆ ನಿನಗಲ್ಲದುಂಟೆ ॥ ೨

ಕರಿಯ ಕೇಸರಿಯ ಚಕ್ರಿಯ ಸಾವಿರದ ಸಾ
ವಿರದ ಸತ್ವಲೊದೋರ್ವ ಇಂದ್ರನಿಗೆ
ಸುರಪತಿಗಳಸಂಖ್ಯಾತದ ಸತ್ವವು
ಪುರುಜಿನ ನರನಂ ಫಣಿಪತಿಕಾಜನಿತ ॥ ೩

ಸುರರು ಪರರಾಶಿಯಿಂಗುಣಿಯಿಸಿದ
ಪರಮಾನಂದವು ನಿನ್ನ ಕ್ಷಣದ ಸುಖ
ವೊರೆದೊರೆಯೆಂದೆನಲು x x x x x
x x x x x x x x x x x x ॥ ೪

ಅಮರಾಧಿಪತಿ ವಿರಚಿತ ಪಂಚಕಲ್ಯಾಣ
ಸಮವಸರಣ ದಿವ್ಯಭೂತಿಯುತ
ಅಮಚವಾಡಿ ಪುರಪತಿ ಪುರು ಜಿನ
ನಿಮ್ಮ ಕರಕಮಲವೇ ಶರಣು || ೫

<u>**೭. ಏನಿರಲೇನುನಿನಗೆ**</u>

ಏನಿರಲೇನು ನಿನಗೆ ಧ್ಯಾನ ಹೊರತಾಗಿ
ಮಾನಸದೊಳಗೆ ಹಲವನು ಹಂಬಲಿಸುತ || ಪಲ್ಲವಿ

ಹಲವು ದಿನ ಧೃಡ ಬಹು ಪಾಪಾಸ್ತ್ರಗಳ
ತೊಲಗಿಸಿ ಸಂಹರೆಯನು ಬಲಿದು
ನಲಿದು ನಿಜಾತ್ಮನೋಳ್ಳೈಕ್ಯವಾಗಿಯೇ ನಿನ್ನ
ನೆಲೆಯ ಭಾವಿಸದಿದು ಧ್ಯಾನದಿಂ ಜೀವನೇ || ೧

ಆರ್ಜೋನದಿಂದ ನೀ ನಿಲುವ ಮನದೊಲವಿಂದ
ನಿರ್ಜಾತುಕದುಪ್ಪ ಕ್ಷೇತ್ರದೊಳು
ದುರ್ಜರಿಪು ಕರ್ಮರಾಜನ ಬಲವನಿ
ನಿರ್ಜರಿಸದಿದ್ದು ಧ್ಯಾನದಿಂ ಜೀವನೇ || ೨

ಧ್ಯಾನವೆಡ ಬಿಟ್ಟು ಧರ್ಮ ಶುಕ್ತಗಳೆಂಬ
ಧ್ಯಾನವ ಮನದ ಕೊನೆಯೊಳಿರಿಸಿ
ಜಾನಂತ್ರಿ ಕೊಲ್ಲಿಪಾಕ ಪುರದಿ
ಜಿನೇಶನ ಜೀವ ನನ್ನಂತರಂಗದೊಳಿಟ್ಟು || ೩

<u>**೮. ದೇವದೇವನೆಭಾವಜಾಂತಕ**</u>

**ರಾಗ : ಕಾಂಭೋಜಿ ತಾಳ : ರೂಪಕ ತಾಳ**

ದೇವದೇವನೇ ಭಾವಜಾಂತಕ ಕಾವುದೆನ್ನನು ನಾಥ
ಕೇವಲಾಮಲಬೋಧಭಾಸುರ ತೇಜೋರಾಶೇ ಪಾವನಮೂರುತಿ || ಪಲ್ಲವಿ

ಘೋರಭವಾಬ್ಧಿಯ ಪಾರವಪೊಂದುತ
ಭೂರಿಭವ್ಯಾಳಿಯ ಪೊರೆದಿರುವೆ
ಸಾರಸನೇತ್ರನೆ ಮಾರವಿದೂರನೆ
ಶೂರಾ-ವೀರಾ-ಧೀರನೆ ಕುರುಣಿಸು || ೧

ಮಂದರಧೀರನೆ ಬಂಧುರಗಾತ್ರನೆ
ಇಂದ್ರನರೇಂದ್ರರಿಂ ವಂದಿತನೇ
ತಂದೆಯೆ ನಿನ್ನನು ವಂದಿಪೆ ನಾನಿಂದು
ಚಂದದಿಂದಾನಂದವ ಪೊಂದುತ ‖ ೨

ಕಾಮಿತದಾತನೆ ಕೋಮಲಗಾತ್ರನೆ
ಪ್ರೇಮದೊಳ್ನಿನ್ನಯ ನಾಮವನೇ
ಹೇಮಮಯಾಂಗನೆ ನೋಮದೊಳ್ ಜಪಿಸುವೆ
ಧಾಮ-ಸೀಮ-ಭೂಮಿಪ-ಕ್ಷೇಮದ ‖ ೩

## ೯. ಜ್ಞಾನಿಹೊರಗೊಂದ

ಜ್ಞಾನಿ ಹೊರಗೊಂದ ಚಿಂತಿಸದಿರು ಹೊರಗೊಂದ
ಚಿಂತಿಸಿದರೆರಡು ಕಂಗಳ ಮುಚ್ಚಿ ಮೀರುವೆ ಸು
ಜ್ಞಾನ ದೃಷ್ಟಿಯಲ್ಲಿ ನಿನ್ನಯ ಮೈಯ ಮರೆಯಲಿರ್ದವಲಾ
ತ್ಮನಂ ನೋಡು ಭವಪಾಶ ಪರಿಪಟ್ಟು ಮುಕ್ತಿಯಹುದು ‖ ಪಲ್ಲವಿ

ಉತ್ತಮಾಂಗ ಮಧ್ಯಮಾಂಗ ನಿಜಾಂಗವೆಂ
ದೊತ್ತಿ ಮಂಡೆಯ ನಡುವೆ ಕಾಲ್ಗಳಂ ಪೇಳ್ವರಿಂ
ತುತ್ತಮಂ ಮಧ್ಯಮಂ ನಿಜವೆಂಬಿ ಭೇದ ನಿನಗಿಲ್ಲ
ನೆತ್ತಿಯಿಂದುಂಗಷ್ಟ ತನಕ ಸರ್ವತ್ರ ನೀ
ನುತ್ತಮಾಂಗನೆ ಪ್ರಕಾಶಾಂಗನೆ ಸುಖಾಂಗನೆ
ವೃತ್ತದ್ರಧ್ಯೋಧ ಶಕ್ತಿವಗಹನ ಸೂಕ್ಷ್ಮ ನಿರ್ಲಘುಗುರು ವಿಭದಾಂಗನೇ ‖ ೧

ಉಂಗುಷ್ಟ ಮೊದಲಾಗಿ ನೆತ್ತಿ ಕಡೆಯಾಗಿ ಸ
ರ್ವಾಂಗದಲಿ ತಿಳಿದು ಸರ್ವಾಂಗದಲಿ ಸುಖಿಸಿದ್ದು
ನಿಜಾನುಭವಗಮ್ಯ ಚಿತ್ತಾತ್ಮ ಸಾಧನ ರಮ್ಯಂ
ಕಂಗಳೆರಡರ ಬೊಂಬೆಯೊಳಗೆಷ್ಟು ಕಾಣ್ಬ ಹೃದ
ಯಾಂಗ ತಾ ಭುಜದ ಬಡಮನದೊಳಿಷ್ಟಂ ತಿಳಿವೆ
ಆ ಬಗೆಯ ಪದನುಯಿಲ್ಲ ‖ ೨

## ೧೦. ಇರಬಂದೆನೆನಾನಿರಬಂದೆನೆ

ಇರಬಂದೆನೆ ನಾನಿರಬಂದೆನೆ
ಎರವಿನ ಮನೆಯಲ್ಲಿ ಬಹುಚಿಂತೆ ನಮಗೇಕೆ ‖ ಪಲ್ಲವಿ

ಕೆರೆಯ ಮೇಗಣ ವೃಕ್ಷದ ಪಕ್ಷಿಗೆ
ಮರದ ಕೂಡೊಡೆ ಮರಣವೇ
ಕರಗಿ ಬೀಳುವ ಕಷ್ಟದ ಮೈಯೊಳು
ಪರಮ ನಾ ನಿನ್ನಗಲ್ಪುದು ಬೆರೆದು ‖ ೧

## ೧೧. ಸುವ್ವಾಲಾಲೆಸುವ್ವಿ

ಸುವ್ವಾಲಾಲೆ ಸುವ್ವಿ ಸುವ್ವಾ
ಸುವ್ವನಾತ್ಮನೆಂಬನೆಲ್ಲ ತತ್ಪರದಿ ಕಟ್ಟಿಸು ಮನಿ ‖ ಪಲ್ಲವಿ

ಆರು ತಪದೊಳುನಾಗಿ ಸೊಯಿಗೆ
ಮೂರು ದೇಹದ ಒರಳನಿದು
ನೀರೆ ಧ್ಯಾನದ ಒನಕೆವಿಡಿದು
ಕೇರು ಬೇಗ ಬುದ್ದಿಯ ಮೊರಡಿ ‖ ೧

## ೧೨. ಪಾಯೋಪಗಮನದೊಳ

ಪಾಯೋಪಗಮನದೊಳತಿಶಯ ಮುರ್ತಿಯು
ಶ್ರೀಯ ಗೆಲಿದ ಮಹಾದೇವನ ಚೆಲುವನ ತೋರಯ್ಯ ‖ ೧

ಮೂರುಲೋಕವಗೊಲಿದೆರಗಿ ಸುತ್ತಿಹರಿಂದ
ವಾರಿಜದಳ ಶೃಂಗಾರವ ನೋಡುವ ತೋರಯ್ಯ ‖ ೨

ಅಲರ ಶರ ಭರದ ಸಮಜಾನುಗ
ಓಲವಿನ ಸೊಬಗನುವೀಪರಿಯ ನೋಡುವೆ ತೋರಯ್ಯ ‖ ೩

ಹೊಸ ಮಿಸುಣಿಯ ರತ್ನಕಂಭ ಕದಳಿಗಳ
ಪೊಸದನವೆನ ಲೇಸವಿಹ ಕೊಡೆಗಳ ಚೆಲ್ವ ತೋರಯ್ಯ ‖ ೪

ಧರೆಯೊಳಗತಿಶಯ ದೇವರ ದೇವನಗರಿ
ಪುರದ ವಿಸ್ತಾರವ ನೊರೆವಚ್ಚರಿಯಾಗಿ ತೋರಯ್ಯ ‖ ೫

ಶಂಖದ ಬಿಂಕದ ಅಂಗಕ್ಕೆ ಕೊರಳಿನ
ಪಂಕಜ ಬಾಣನ ಗೆಲಿದ ದೇವನ ಬೇಗ ತೋರಯ್ಯ ‖ ೬

ಆದಿಶೇಷನದಿ ಸಭಾವ ವೀಕ್ಷಿಸಿ ಸುಪ್ರಮೋ
ದದಿ ನಿಂದನೆಂದು ನೃತಿವರ ಸೊಬಗನ ತೋರಯ್ಯ ‖ ೭

**೧೩. ನಿನ್ನನೇನಂಬಿಬಂದೆ**

ನಿನ್ನನೇ ನಂಬಿ ಬಂದೆನೆಂಬಭಿ ಮಾನವಿಲ್ಲವೇ
ಕನ್ನಡಿ ತಾಯೇ ನೊಂದೆನಯ್ಯ ಕರುಣವಿಲ್ಲದೆ ॥ ಪಲ್ಲವಿ

ಸಂಚಿತ ಫಲದೆಂತು ಮಾಳ್ಪುದೆಂತು ಸೈರಿಪೆ
ಸಂತಸ ವಿರಹದೆಂತು ಮಾಳ್ಪುದೇಕೆ ಅಳುಕಿದೆ ॥ ೧

ಧರಣಿಯೊಳತಿ ತಿರುಕ ದೈವಗಳನು ಸ್ಮರಿಸದೆ
ಭರದಿಂದ ಭಾವದಿಂದ ನಿಮ್ಮಡಿಯ ಮರೆಯದೇ ॥ ೨

ಕೇಶವನು ಪರಿಹರಿಸಿ ಎನಗೆ ಲೇಸದೋರಿಸು
ಈ ಶರೀರವನ್ನು ಸಲಹಿ ಕೀರ್ತಿ ಹಬ್ಬಿಸು ॥ ೩

**೧೪. ನಾಮನಸೇಸೈರಿಸದು**

**ರಾಗ : ಕಾಂಬೋಧಿ**

ನಾ ಮನಸೇ ಸೈರಿಸದು ಮಾನ
ನೀ ಮಣಿ ನಾ ಮನಸೇ ಸೈರಿಸದು ॥ ಪಲ್ಲವಿ

ಭಾವಜಹರ ಗೊಮಟೇಶನ ಸುರಚಿರ
ಪಾದಾಭಿಷೇಕವ ಮಾಡದೇ ನಾ ॥ ೧

ಭಕ್ತಜನಂಗಳಿಂತರಿಕೆ ಭಾವತಿ
ಪೂಜಾ ಭಾವವ ನೋಡದೆ ನಾ ॥ ೨

ಪಂಡಿತವಿಮಲ ಸುಪಂಡಿತ ಗುರುಗಳ
ಮಂಡಲ ಸೇವೆಯ ಮಾಡದೇ ನಾ ॥ ೩

**೧೫. ತಿಳುಹಿದರಿಲ್ಲವಯ್ಯಾ**

ತಿಳುಹಿದರಿಲ್ಲವಯ್ಯಾ ಪೂರ್ವದೊಳಾರು
ತಿಳುಹಿದರಿಲ್ಲವಯ್ಯಾ ಸಣ್ಣವರಾಗಿ
ತಿಳುಹಿದರಿಂದುತನಕ ಕಷ್ಟ ಸಂಸಾರ
ದೊಳಗೆ ನಾ ತೊಳಲುವೆನು ॥ ಪಲ್ಲವಿ

ಹೊಸ ವಿಷಯ ಸುಖ ವಿಷವೆಂದು ಭಾವಿಸಲಜ್ಞಾನ
ರಸವ ಸೇವಿಸಿ ತಾನೆ ಕೆಡುವ ಮೈಯ್ಯತಾಪಕಾಗಿ ಸ
ಲಿಸಿ ನಿತ್ಯಾನಂದ ಶಿವಪಥವ ನೀ ಪಡೆಯೆಂದುತಿರ್ದೆ ‖ ೧

ಕಾಡು ಕಥೆಗೆ ಕಿವಿಗೊಡದಿರು ವಾಸಲೋಕರ ಕಥೆಯ ಕೇಳು
ವಾಕು ಮನವ ಬಯಲಿಗೆ ಬದ್ಧಲಿಸಿದ ರ
ತ್ನಾಕರಾಧೀಶ್ವರನ ನೀ ನೆನೆಯೆಂದುತಿರ್ದೆ ‖ ೨

ರಾಗರೋಷವ ಬಿಡುಕಂದ ನೀ ಕಡು ಶಾಂತ
ನಾಗಿ ಕರ್ಮವಗೆಲ್ಲೆಂದು ಯೋಗಿ ಮಹೇಂದ್ರ ಕೀರ್ತಿಯ
ಹಾಗೆ ಕೃಪವಂತನಾಗಿ ಗೆಲ್ದವನಲುಗಿ ಸದ್ಧರ್ಮವೆನುತಿರ್ದೆ ‖ ೩

<u>**೧೬. ನಮೋನಮೋನಮೋ**</u>

ನಮೋ ನಮೋ ನಮೋ ನಮೋ ನಮೋ
ನಮೋ ಸ್ವಾಮಿ ನಮೋ ಗುರುವೇ
ನಮೋ ನಿಮ್ಮ ಸಾಮರ್ಥ್ಯಕೆ ಸರಿಯುಂಟೆ
ನಮೋ ಸ್ವಾಮಿ ಕುಮಾರಯೋಗೀಂದ್ರ ‖ ಪಲ್ಲವಿ

ಅಗ್ನಿರಾಜನ ಕುಮಾರ
ನಗ್ನವೇಷಧಾರಿ ಭವ
ಲಗ್ನದೇ ಕರ್ಮವಧ್ಯಾನ
ದಗ್ನಿಯಿಂದ ಸುಟ್ಟೆಯಲ್ಲಾ ‖ ೧

ಸೇರಿದೆಂಟು ಪ್ರಾಯದ ಕು
ಮಾರಮುನಿ ತತಗೈದ
ಕಾರಣಾದಿ ಪರ್ವತ ಕು
ಮಾರಾದ್ರಿಯಾಯಿತಲ್ಲಾ ‖ ೨

ಬೀಸಿ ಆ ಹಳೆಯ ಬೆಟ್ಟದಲ್ಲಿ
ಹೊಸ ಮಲೆಯ ಗುಹೆಯಲ್ಲಿ
ಎಸೆದಿರ್ದ ಕಾರಣ ನಿಮ್ಮ
ಹೆಸರು ತೀರ್ಥವಾಯಿತಲ್ಲ ‖ ೩

ಕ್ರೌಂಚನಾರೊ ಪೊಡಪುರಡಿ
ಮುಂಚೆ ನವವಿಲೆರೆಕಾಯ

ಕಂಚುಕೆಯನಿಳುಹಿ ಮೋಕ್ಷ
ದಂಚೆಗೆಲಾಗಿಸಿದೆಯೆಲ್ಲ ॥ ४

ಕೀರ್ತಿಸಲಳವೆ ಪುಣ್ಯ
ಮೂರ್ತಿ ರತ್ನಾಕರನ ಸಂ
ಪೂರ್ತಿಯ ಗುರುವೆ ಸ್ವಾಮಿ
ಕಾರ್ತಿಕಯೋಗೇಂದ್ರ ಚಂದ್ರ ॥ ೫

**<u>೧೬. ಬಾಬಾಬಾಬಾಬೇಗ</u>**

**ರಾಗ : ಬೇಹಾಗ್ ತಾಳ : ಆದಿತಾಳ**

ಬಾ ಬಾ ಬಾಬಾ ಬೇಗ ಭಾವಜಹರ ಜಿನರಾಜನೆ ನೋಡುವ
ಬಾ ಬಾ ಬಾ ನೀ ಬೇಗನೆ ಭವರೋಗವೈದ್ಯನು
ಭವಗಳ ರೋಗದ ಬೇರ ಕೀಳುವ ಬೇಗ ॥ ಪಲ್ಲವಿ

ಚಂದವ ಬೀರುತ ಸುಂದರವದನದಾ ನಂದದ ಕಳೆಯನು
ಇಂದು ನೋಡುವ ಬೇಗ ಬಾ ಬಾ ॥ ೧

ಮಾರನ ಬಾಧೆಯ ದೂರವ ಮಾಡುತ
ಘೋರಪಾಪವ ಪರಿಹಾರ ಮಾಡುವ ಬೇಗ ಬಾ ಬಾ ॥ ೨

ಚಿಂತೆಗಳೆಲ್ಲವ ಶಾಂತವ ಮಾಡುತ
ಕಂತುವಿಜಯಶ್ರೀ ಅನಂತನ ನೋಡುವ ಬಾ ಬಾ ॥ ೩

**<u>೧೮. ಈಶಭೋನಾಕೇಶವಂದಿತ</u>**

**ರಾಗ : ಕೇತಾರಗೌಳ ತಾಳ : ರೂಪಕತಾಳ**

ಈಶ ಭೋ ನಾಕೇಶವಂದಿತ ದೋಷದೂರ ವೀತರಾಗ
ಭಾಸುರಾಂಗ ಭವವಿನಾಶ ತೋಷಭರತೋ ನೌಮಿ ತ್ವಾಂ ಜಿನ ॥ ಪಲ್ಲವಿ

ಕೇವಲಾಮಲಬೋಧಮಂಡಿತ ಶ್ರಾವ್ಯದಿವ್ಯವಚೋಮೃತ
ಸ್ವಾಮಿಪಾದ ಭಕ್ತಭೂತಂ ರಕ್ಷಮಾಂ ಸದಾ ಮುದಾ ॥ ೧

ಶ್ರೀಜಿನೇಶ್ವರ ಭವ್ಯವಂದಿತ ಸ್ವಾತ್ಮಜಾತಸುಖೋದಯ
ಪ್ರಾರ್ಥಯೇಽಭಿವಾದಯೇ ಗುಣಾಭಿಸಂಧಿಪೂರ್ವಕಂ ॥ ೨

ಯಾಮಿನೀಪತಿದ್ವಾದಶಾತ್ಮ ಸುಭಾಸುರಾಂಗವಿರಾಜಿತ
ದ್ರವ್ಯಭಾವಭೇದಭಿನ್ನ ಕರ್ಮಜಾಲವಿವರ್ಜಿತ ॥ ೩

**೧೯. ಕರುಣಾಂಬುಧೇಕಂತುವೀರದೂರ**

**ರಾಗ : ಕಾನಡ ತಾಳ : ಆದಿತಾಳ**

ಕರುಣಾಂಬುಧೇ ಕಂತುವೀರದೂರ!
ಪಾರುಮಾಡೋ ದೇವಾಧಿದೇವನೇ ‖ ಪಲ್ಲವಿ

ಕಾಲವ್ಯಾಲನನ್ನು ಕಾಲಗಾಣಿಸಿ ನೀ
ಧೂಳಿಗೈದ ದೇವೇಂದ್ರವಂದ್ಯಪಾದ ‖ ೧

ಜ್ಞಾನಮೂರ್ತಿ ನೀನು ಜ್ಞಾನಹೀನನಾದ
ದೀನನನ್ನು ಕಾಯೋ ಕರುಣಾಧರದೇವ ‖ ೨

ಜನ್ಮ ಜನ್ಮದಲ್ಲಿ ನಿರ್ಮಲಾತ್ಮನಾದ
ಚಿನ್ಮ ಯಾತ್ಮನೆ ನೀ ಕಾಣದಿರ್ದೆಯೊ ನಾಥ ‖ ೩

ನಾರಕಾದಿದೇವ ತಾಂತ್ಯಜಾತಿಪಾರಾ
ವಾರದಲ್ಲಿ ಭೂರಿ ದಾರುಣಾರ್ತನಾದೆ ‖ ೪

ಬಾರಿಬಾರಿಗಾಶಾಪಾಶದಲ್ಲಿ ಸಿಲುಕಿ
ಸಾರಧರ್ಮಕಾನು ದೂರನಾದೆ ಬೀಳ್ದೆ ‖ ೫

ಕೇವಲಾವಬೋಧ ಸಾವನೋವನಾಗಿ
ನ್ನಾವ ಭಾವದಿಂದೆ ದೇವ ನೀಗಲಾಪೆ ‖ ೬

ನಿನ್ನ ನಾಮವೆಂಬ ಸಾರಮಂತ್ರದಿಂದೆ
ಖಿನ್ನದೇಹಿಗಳು ಭಿನ್ನಪಾಪರಾಹರ್ ‖ ೭

ಮೋಹಜಾಲದಿಂದ ಬಾಹ್ಯನಾದೆ ನೀನು
ದೇಹಭಾರವನ್ನು ನೀಗಿಸಯ್ಯ ನಾಥ ‖ ೮

ದಾರಿಗಾಣದೆ ಸಂಸಾರಕಾನನದಿ
ಭೂರಿತಾಪಗೊಂಡೆ ದಾರಿದೋರೋ ಬೇಗ ‖ ೯

ಪಾವನಾತ್ಮ ನಿನ್ನನಾವಕಾಲಕ್ಕಾನು
ಭಾವಿಸುವೆ ಸ್ವಾಮಿ ಭಾವಭಕ್ತಿಯಿಂದ ‖ ೧೦

**೨೦. ಪರಿಪಾಲಿಸೈವರವೀತರಾಗ**

**ರಾಗ : ಆಭೋಗಿ ತಾಳ : ಆದಿತಾಳ**

ಪರಿಪಾಲಿಸೈ ವರವೀತರಾಗ ಮೇರುಧೀರನೇ ಶೂರಾಗ್ರಣಿ
ಪರಮಪಾವನ ಭರದಿ ತೋಷ ಬೀರಿ ಮಾರಾರಿದೇವ ಶ್ರೀವೀತರಾಗ ॥ ಪಲ್ಲವಿ

ಭವಬಂಧನಾಶಕರ ಕೋಮಲಾಂಗ
ಭಾವಶುದ್ಧದಿಂದಲಿ ಶ್ರೀಶನೆ ಪಾಲಿಸೈ ॥ ೧

ತವ ಪಾದಪಂಕಜಯುಗಲವನ್ನು
ರವಿಕೋಟಿತೇಜ ಭಾವಿಸುವೆ ಜಿನ ॥ ೨

**೨೧. ಭಾವಿಸದಲೆನಾಕೆಟ್ಟೆ**

**ರಾಗ : ಕಲ್ಯಾಣಿ ತಾಳ : ಅಟ್ಟತಾಳ**

ಭಾವಿಸದಲೆ ನಾ ಕೆಟ್ಟೆ ಜಿನೇಶನ ಪಾವನಪದಯುಗವ
ಆವಕಾಲದೊಳವನ ಪದದೊಳು ದೇವವಿಭುನಾಗೇಂದ್ರರಸುರರು
ಭೂವರೇಣ್ಯಖಗೇಂದ್ರಮುಖ್ಯರು ಸೇವೆಗೆಯ್ವುದನರಿಯದಲೆ ನಾಂ ॥ ಪಲ್ಲವಿ

ಸಾಸಿರನಾಮಾಧಿಪ ಮುಕ್ತೀಶನ ಭೂವಲಯದದೊಳ್ನುತನ
ಕೋವಿದಾಗ್ರೇಸರರು ತಮ್ಮಾ ಜೀವಮಾನವನೆಲ್ಲವಂ ಶ್ರೀಭಾವಜಾಂತಕ
ನಡಿಯ ಸ್ಮರಣೆಯೋಳ್ತೀವಿ ಕಳೆದುದನರಿಯದಲೆ ನಾಂ ॥ ೧

ಉಂಡನುಪಮಸುಖವ ಸದೃಷ್ಟಿಯಿಂ ಕಂಡು ಮೂಲೋಕವನು
ಚಂಡಭಾನುವಿಕಾಸಚಿನ್ಮಯ ಪಿಂಡ ಕುನಯವಿತಂಡ ಶಿಖಿ ಬಲುಗಂಡು
ಗಲಿಗಳ ಕಲಿಯ ಬೊಮ್ಮನ ಮಂಡಿಸುತ ಸತ್ಕರಿಸುತಲಿ ನಾಂ ॥ ೨

ಅಜರಾಮರಸುಖಿಯ ಸರ್ವಜ್ಞನ ಭುಜಬಲಿನುತಪದನ ಸುಜನಸಂಘವು
ಭಜಿಸಿ ಪೂರ್ವದಿ ನಿಜದ ತತ್ತ್ವವನರಿದು ಜಪದಿಂದಜನ ರೂಪವನಾಂತು
ಮುದದಿಂ ಭಜನೆಗರ್ಹತೆ ಪಡೆದುದನು ನಾಂ ಭಾವಿಸದಲೆ ನಾ ಕೆಟ್ಟೆ ॥ ೩

**೨೨. ಭಾಸುರಾಂಗನೆದೋಷದೂರನ**

**ರಾಗ : ಜುಂಜೋಟಿ ತಾಳ : ರೂಪಕತಾಳ**

ಭಾಸುರಾಂಗನೆ ದೋಷದೂರನೆ ಶ್ರೀಶಜೀನೆಶಾ
ಈಶಸುರ ನರೇಶ ಪಾಲಿಸು ದಾಸನಾದೆನ್ನ ॥ ಪಲ್ಲವಿ

ಕಾಮಮದಹರ ಭೂಮಿಪಾಲಸುತ್ರಾಮವಂದಿತ
ಕೋಮಲಾಂಗನೆ ಪ್ರೇಮದಿಂ ಕೊಡು ಕಾಮಿತಾರ್ಥವ ॥ ೧

ಪೊರೆಯೊ ನಿನ್ನಯ ಚರಣವಾರಿಜಕ್ಕೆರಗಿ ಬೇಡುವೇ
ಸರಸಿಜಾಕ್ಷನೆ ಸ್ಫುರಿತತೇಜನೆ ಹರುಷದೊಳೆನ್ನ ॥ ೨

ಜ್ಞಾನಮೂರ್ತಿಯೆ ಭಾನುಶಶಿನಿಭ ಸಾನುರಾಗದಿಂ
ಮಾನನೀಯನೆ ನಿನ್ನ ರೂಪವ ಧ್ಯಾನಮಾಳ್ಪೆನು ॥ ೩

**<u>೨೩. ಈಶಸುರಾಧೀಶವರಜಿನೇಶ</u>**

**ರಾಗ : ಕಮಾಚ್ ತಾಳ : ರೂಪಕತಾಳ**

ಈಶ ಸುರಾಧೀಶ ವರಜಿನೇಶ ಪಾಹಿ ಮಾಂ
ಜಯಜಯ ಈಶ ಸುರಾಧೀಶ ॥ ಪಲ್ಲವಿ

ಅಷ್ಟಮದಹರಾ ದುರಿತಶೈಲಭಂಜನಾ
ಶಿಷ್ಟಜನಸಂತುಷ್ಟಮೋಕ್ಷಪಟ್ಟಕಾಧರಾ ॥ ೧

ನೀರಜಾನನಾ ಭವ್ಯವಾರಮೋಹನಾ
ಸಾರಸುಗುಣಾಪಾರಮಹಿಮ ಮಾರಭಂಜನಾ ॥ ೨

ಭಕ್ತಸನ್ನುತಾ ದೇವನಿಕರವಂದಿತಾ
ಮುಕ್ತಿದಾತ ಸುಖಪ್ರದಾತ ನಿಖಿಳಪೂರಿತಾ ॥ ೩

ಘಾತಿಮಂಡಲಾ ದುರಿತಘಾತನಿರ್ಮಲಾ
ಜಾತರೂಪ ವೀತರಾಗ ಹೇ ತಪೋಜ್ಜ್ವಲಾ ॥ ೪

**<u>೨೪. ಶ್ರೀಜಿನೇಶನೇಪೊರೆಯೈ</u>**

**ರಾಗ : ಶಂಕಾರಾಭರಣ ತಾಳ : ಅಟ್ಟತಾಳ**

ಶ್ರೀಜಿನೇಶನೇ ಪೊರೆಯೈ ಭಜಿಪೆನು ನಿನ್ನನು ನಾನು ಸತತವು ॥ ಪಲ್ಲವಿ

ಇಂದ್ರವಂದಿತ ಸಕಲಸದ್ಗುಣಸಾಂದ್ರನಾದ ಮುನಿಜನ
ವೃಂದವಂದಿತನಾದ ಧರ್ಮವ ಹೊಂದಿ ಭವ್ಯರ ಬೋಧಿಸುತ್ತಿಹ ॥ ೧

ಈ ಜಗದೊಳಗುಳ್ಳ ಭವ್ಯರ ರಾಜಿಯನು ನೀ ಸೌಖ್ಯಕೇ
ಭಾಜನರ ಮಾಡಿರುವ ಕ್ರತುಭುಜ ಭ್ರಾಜದಿಂ ರಾರಾಜಿಸುತ್ತಿಹ ॥ ೨

ಭೂಮಿಯೊಳು ರೂಢಿಯನು ಪೊರೆದಿಹ ಈ ಮಹಾಬೆಳ್ಗುಳವ
ಪ್ರೇಮದಿಂದಲಿ ನಿರತ ಪೊರೆಯುವ ರಾಮಣೀಯಕ ಮಹಿಮನೆನಿಸುವ ॥ ೩

**೧೫. ಆದಿನಾಥನೆಮೇದಿನೀಶನೆ**

**ರಾಗ : ಹಿಂದೂಸ್ಥಾನಿ ತೋಡಿ ತಾಳ : ಆದಿತಾಳ**

ಆದಿನಾಥನೆ ಮೇದಿನೀಶನೆ ಪಾದಪಂಕಜಕೊಂದಿಪೇ
ಕಾದು ರಕ್ಷಿಸು ಲೋಕವಂದ್ಯನೆ ಪೌದನಾಪುರಾಧೀಶನೇ ॥ ಪಲ್ಲವಿ

ವಾರಿಜಪ್ರಿಯ ತೇಜನೆ ಬಹುಕಾರಣಾತ್ಮಕಮೂರ್ತಿಯೇ
ಪಾರಗೊಳಿಸೈ ಎನ್ನನೀ ಸಂಸಾರಶರಧಿಯಿಂದೀಗಲೇ ॥ ೧

ಹಿಂದೆ ಮಾಡಿದ ಕರ್ಮದಿಂದಲಿ ಇಂದು ಪಡುವೆನು ದುಃಖವ
ತಂದೆಯೇ ನಾಂ ಪೇಳಲಶಕ್ಯವು ಮಂದಮತಿಯಾಗಿರುವೆನು ॥ ೨

ಮೂರುಲೋಕದ ಅಗ್ರಭಾಗದೊಳ್ ಸೇರಿ ನೆಲಸಿದ ಸೌಖ್ಯದಿ
ಬಾರಿಬಾರಿಗು ಧ್ಯಾನಮಾಳ್ಪನು ಧೀರ ಕರುಣಿಸು ಪ್ರೇಮದಿ ॥ ೩

ತಂದೆತಾಯಿಗಳಿಲ್ಲ ಎನಗೇ ಬಂಧುಬಳಗವು ತಾನಿಲ್ಲ
ತಂದೆಯೇ ನಾಂ ನೊಂದಿ ಬಂದೆನು ಕಂದನನು ನೀ ಪಾಲಿಸು ॥ ೪

**೧೬. ಪುರುಪರಮೇಶಾಕುರುಣಿಸೈ**

**ರಾಗ : ಫರ್ಜೂ ತಾಳ : ಆದಿತಾಳ**

ಪುರುಪರಮೇಶಾ ಕರುಣಿಸೈ ದೇವಾ
ಸುರನರಪೂಜ್ಯನೆ ಪರಮನೆ ॥ ಪಲ್ಲವಿ

ಭೋಗವ ತೊರೆದು ಯೋಗವ ಮಾಡಿ ನೀ
ಸಾಗಿದೆ ಮುಕ್ತಿಗೆ ಜಗದೀಶ ॥ ೧

ಜ್ಞಾನವಿಲ್ಲದೆ ನಿನ್ನ ಧ್ಯಾನವ ಮಾಡದೆ
ಹೀನರಾದೆಮ್ಮನು ಜಿನರಾಜ ॥ ೨

ಸಾಸಿರನಾಮನೆ ಭಾಸುರತೇಜನೆ
ಪೋಷಿಸಿಯೆನ್ನೊಳು ತೋಷಿಸೈ ॥ ೩

**೧೭. ಪುರುಹೂತಪೂಜ್ಯನೆಪುರುಜಿನ**

**ರಾಗ : ಜಂಗಲ್ ತಾಳ : ಆದಿತಾಳ**

ಪುರುಹೂತಪೂಜ್ಯನೆ ಪುರುಜಿನನಾಥನೆ ಪರಿಪಾಲಿಸು ಎನ್ನ
ತಿರುಗಿತಿರುಗಿ ಬಹುತಾಪವ ಹೊಂದಿಹೆ ಕರುಣಿಸು ಗತಿಯೆನಗೆ ॥ ಪಲ್ಲವಿ

ಮೇರುಪರ್ವತದೊಳು ಕ್ಷೀರವ ಮಿಂದನೆ ಚಾರುವೈಭವಯುತನೇ
ಮಾರವಿದೂರನೆ ಸೇರಿದೆ ನಿಮ್ಮಡಿ ಸಾರಸುಖವದೋರೈ ॥ ೧

ಕಾಲ ವಿಜಯನೇ ಮೂರ್ಲೋಕದೊಡೆಯನೇ ಬಾಲನ ಬಿನ್ನಪವಾ
ಲೀಲಾ ಮಾತ್ರದಿ ಲಾಲಿಸಿ ಪಾಲಿಸು ಜೋಲಿಗಯ್ಯದೆ ಸುಖವಾ ॥ ೨

ತಂದೆ ತಾಯ್ಗಳು ಬಂಧುಬಳಗವೆಲ್ಲ ಎಂದಿಗು ಸ್ಥಿರವಲ್ಲ
ಕಂದನು ನಿಮ್ಮಯ ನಿಂದು ನಾ ಬೇಡುವೆ ಚಂದದ ಸುಖದೋರೈ ॥ ೩

**೧೮. ಕರುಣಾಚರಣಾಧರಣಾ**

**ರಾಗ : ಮೋಹನ ತಾಳ : ಆದಿತಾಳ**

ಕರುಣಾ ಚರಣಾ ಧರಣಾ ಸುಗುಣಾ ಶ್ರೀ ॥ ಪಲ್ಲವಿ

ಪುರುಪರಮೇಶನೇ ಶರಧಿಗಂಭೀರನೇ
ಪುರುಹೂತಸೇವ್ಯನೇ ಪೊರೆವುದು ನಿರತಂ ॥ ೧

ಮಂದರಧೀರನೇ ಸುಂದರಾಕಾರನೇ
ಕಂದರ್ಪವಿಜಯನೇ ವಂದಿಪೆ ನಿನ್ನನೇ ॥ ೨

ಮೆರೆಯುವ ಬೆಳ್ಗುಳ ಪುರವನ್ನು ಪೊರೆಯುವೆ
ಹರುಷವಿತ್ತೆನ್ನನು ಪೊರೆವುದು ನಿರತಂ ॥ ೩

**೧೯. ಆದಿಪರಮೇಶನೇಸದೃಶ್ಯನೇ**

ಆದಿಪರಮೇಶನೇ ಸದೃಶ್ಯನೆ ಸುಸೇವ್ಯನೇ
ಸಾದರದಿ ನಿನ್ನ ನುತಿಪೇ ಹೇ ದಯಾಬ್ಧಿಚಂದ್ರನೇ ॥ ಪಲ್ಲವಿ

ಕ್ರೂರಘಾತಿಕರ್ಮವೆಂಬ ಶೂರವೈರಿಯನ್ನು ಗೆಲ್ದ
ವೀರನೇ ನಾ ನಿನ್ನ ಚರಣಸಾರಸವನು ನಮಿಸುವೇ ॥ ೧

ಪರಮಕೇಶಲಾಖ್ಯಜ್ಞಾನ ಸೂರ್ಯನುದಯವಾಗಲೊಡನೆ
ಸುರರು ಬಂದು ನಿಂದು ಭಕ್ತಿಭರದಿ ಸ್ತುತಿಯ ಗೈದರು ॥ ೨

ರಾಜರಾಜ ರಚಿತಮಪ್ಪ ಮೂಜಗಕಾಶ್ಚರ್ಯವಾದ
ಭ್ರಾಜಸಮವಸರಣದಲ್ಲಿ ರಾಜಮಾನನಾಗಿ ನೀ ॥ ೩

ಸಾರದಿವ್ಯನಾದದಿಂದ ಸಾರಧರ್ಮಕಥನ ಗೈದು
ಭೂರಿಭವ್ಯಜೀವಗಳನು ಪೊರೆದ ಆದಿಬ್ರಹ್ಮನೇ ॥ ೪

ಕಮಲನಾಭ ನಿನ್ನ ಗುಣಕೆ ಸಮವ ಕಾಣೆನಾರ್ಯವರ್ಯ
ವಿಮಲಹೃದಯದಿಂದ ನಿನ್ನ ಅಮಲ ನಾಮವ ಸ್ಮರಿಸುವೇ ॥ ೫

## ೩೦. ವೃಷಭೇಶಪಾಲಿಸೆನ್ನನು

**ರಾಗ : ತೋಡಿ ತಾಳ : ಆದಿತಾಳ**

ವೃಷಭೇಶ ಪಾಲಿಸೆನ್ನನು ಶಶಿಸೂರ್ಯಕೋಟಿತೇಜನೇ
ಶ್ರೀ ಯುತ ಪ್ರಪೂತ ಅನಾಥರಕ್ಷಕ ॥ ಪಲ್ಲವಿ

ಅಕಲಂಕರೂಪನೇ ಮಕರಾಂಕ ನಾಶನೇ
ಸಕಲೋರ್ವಿಗೀಶನೇ ಸುಖದ ಚಿದ್ರೂಪನೇ ॥ ೧

ಮಂದರಧೀರನೇ ವಂದಿಸಿ ಪೂಜಿಪೇ
ಚಂದದಿಂದಲಿ ಅರವಿಂದಂಗಳಿಂದಲಿ ॥ ೨

ಸಾಸಿರನಾಮನೇ ಭಾಸುರತೇಜನೇ
ದಾಸನಾದೆನ್ನನು ಪೋಷಿಸು ಕರುಣದಿಂ ॥ ೩

## ೩೧. ಧೀರಚಂದ್ರಶ್ರೀಜಿನಾ

**ರಾಗ : ಹಿಂದೂಸ್ಥಾನಿ ಕಾಪಿ ತಾಳ : ಆದಿತಾಳ**

ಧೀರಚಂದ್ರ ಶ್ರೀಜಿನಾ ನೀರಜಾತಲೋಚನಾ
ಭೂರಿಭಕ್ತಿಯಿಂದಲಿ ಪರಿಪೂತ ವಂದಿಪೇ ॥ ಪಲ್ಲವಿ

ಕಾಮರೂಪನಿಂದನಾ ಕೃತಸುತ ವಂದನಾ
ಕಾಮಿತಾರ್ಥಚಂದನಾ ಕೋಮಲಾಂಗ ಬಂಧನಾ ॥ ೧

ಫಾಲಕಾಂತಚಂದಿರಾ ಪಾದಪೂತಮಂದಿರಾ
ಬಾಲಚಂದ್ರ ಸುಂದರಾ ಭವಿತಾಬ್ಜಕಂಧರಾ ॥ ೨

ಸಾರದಿವ್ಯವಚನಾ ಕಂತುಶಕ್ತಿಮಥನಾ
ಪಾವನಾತ್ಮರಾಧಾನ ಪಂಡಿತಾರ್ಯಲಾಲನಾ ॥ ೩

## ೩೨. ಧ್ಯಾನಿಸುವೇಜಿನಪದ

**ರಾಗ : ಶಂಕರಾಭರಣ ತಾಳ : ಚಾಪುತಾಳ**

ಧ್ಯಾನಿಸುವೇ ಜಿನಪನ ಮನದಿ ಧ್ಯಾನಿಸುವೇ ॥ ಪಲ್ಲವಿ

ವನಜ ಪೀಠದೊಳಿರ್ದು ಅನಿಮಿಷರೆಲ್ಲರಿಂ
ದನವರತದೊಳಿರ್ಪ ಮನುಜರೊಂದಿತನ ಧ್ಯಾನಿಸುವೇ ॥ ೧

ಕುಮತಾಂಧಕಾರವ ನಿಮಿಷದಿಂ ಕೆಡಿಸುತ
ಸಮವಸರಣಧರ ಅಮರೇಂದ್ರನುತನ ॥ ೨

ಮಂದರಗಿರಿಯೊಳು ನಿಂದು ಸದ್ಭವ್ಯರ
ವೃಂದವ ಪೊರೆಯುವ ಚಂದ್ರಜಿನಪನ ॥ ೩

**೩೩. ನಂಬಿದೆನಂಬಿದೆಶೀತಲಜಿನಪನೆ**

**ರಾಗ : ಜಂಗಲ್ ತಾಳ : ಆದಿತಾಳ**

ನಂಬಿದೆ ನಂಬಿದೆ ಶೀತಲಜಿನಪನೆ ಪಾಲಿಸು ಬಿಡದೆನ್ನ
ಕುಂಭಿನಿಯೊಳು ನಿನ್ನ ನಂಬಿದ ಭಕ್ತರ ಸಲಹುವ ಮೂರುತಿಯೇ ॥ ಪಲ್ಲವಿ

ಅರಹಂತೇಶನೇ ವರಮುನಿವಂದ್ಯನೇ ಕರುಣಾಕೃಪಕರನೇ
ನಿರುತದಿ ನಿನ್ನನೆ ವರ್ಣನೆಗೈಯುವೆ ಪುರುಪರಮೇಶ್ವರನೇ ॥ ೧

ರತಿಪತಿವಿಜಯನೆ ಅತಿಶಯಶಾಂತನೆ ಖ್ಯಾತಿಯನುಳ್ಳವನೇ
ಗತಿಯೆಂದು ನಿನ್ನನು ಅತಿಶಯದೊಳು ನಾನು ಸ್ತುತಿಸುವೆ ನಾಮವನು ॥ ೨

ಮೂಢ ಮೂರರನು ಗಾಢದಿ ಗೆಲಿದನೆ ಗಾಢಾಂಧಕಾರಹರನೇ
ಕಾಡುವ ಮದಗಳನೋಡಿ ಗೆಲಿದನೆ ನಾಡಾಡಿಗೊಡೆಯ ನೀನೇ ॥ ೩

ಧರೆಯೊಳು ಬೆಳ್ಗುಳ ಪುರಕಧಿಕರ್ತನೆ ನಿರತದೊಳಿರುತಿಹನೇ
ಘೋರದುರಿತಹರ ತ್ವರಿತದಿ ಭವ್ಯರ ಪೊರೆಯುತಲಿರುತಿಹನೇ ॥ ೪

**೩೪. ಶ್ರೀವಿಮಲಜಿನರಾಜ**

**ರಾಗ : ಮೋಹನ ತಾಳ : ಕಲ್ಯಾಣಿ**

ಶ್ರೀವಿಮಲ ಜಿನರಾಜ ರಾಜ ಶ್ರೀವಿಮಲಜಿನರಾಜ ॥ ಪಲ್ಲವಿ

ಅಮಲ ಕಮಲದಳ ನಯನವಿಶಾಲ
ವಿಮಲಚರಿತ್ರ ಸುಮಿತ್ರಮಾಂ ಪಾಹಿ ರಾಜಶ್ರೀ ॥ ೧

ದೃಢಭಕ್ತಿಯೊಳ್ನಿನ್ನ ಚರಣವ ಪಿಡಿದು
ಪೊಡಮಟ್ಟು ಬೇಡಿಕೊಂಡರು ದಯೆ ಬಾರದೇ ॥ ೨

ಸ್ಥಿರವಾಸ ಬೆಳ್ಗುಳಪುರವಾಸ ಶ್ರೀಜಿನ
ಗುರುಪಂಡಿತಾಚಾರ್ಯವರ್ಯ ಸುಪಾಲಾ ॥ ೩

**೩೫. ಸಮವಸರಣನೆಶ್ರೀ**

**ರಾಗ : ಬೇಗಡೆ ತಾಳ : ಆದಿತಾಳ**

ಸಮವಸರಣನೆ ಶ್ರೀವಿಮಲನಾಥನೇ
ನಾಮ ಸ್ಮರಣೆಗೈವೆ ಭೂರಿಭಕ್ತಿಯಿಂದ ॥ ಪಲ್ಲವಿ

ದೋಷ ಪದಿನೆಂಟ ನಾಶವನ್ನು ಗೈದೇ
ಭಾಸುರಾಂಗತೇಜ ಪೋಷಿಸೆನ್ನ ದೇವಾ ॥ ೧

ಘೋರಕರ್ಮವೆಂಬ ಬೇರ ಕಿತ್ತು ಸುಟ್ಟು
ಸಾರಮೋಕ್ಷದಲ್ಲಿ  ಸೇರುತಿರ್ಪುದಿದು ॥ ೨

ಕಾಮಿತಾರ್ಥವನ್ನು ಪ್ರೇಮದಿಂದಲೀವೇ
ಸ್ವಾಮಿ ನಿನ್ನ ಧ್ಯಾನ ನೇಮದಿಂದ ಮಾಳ್ಪೇ ॥ ೩

**೩೬. ಹೊಂದಿದೆನಾಬಂದು**

**ರಾಗ : ಮೋಹನ ತಾಳ : ಅಟ್ಟತಾಳ**

ಹೊಂದಿದೆ ನಾ ಬಂದು ವಂದಿಪೆನಿಂದು
ಚಂದದಿ ಸಲಹೋ ಪೂರ್ಣೇದು ವದನಸಿಂಧು
ಹಿಂದೆ ಸಕಲಭವ ಬಂಧುದೊಳಗೆ ಸಿಲುಕಿ
ನೊಂದೆನು ಬಹುಕಾಲ ಕಂದರ್ಪ ವಿಜಯಾ ॥ ಪಲ್ಲವಿ

ಇಂದು ಮೊದಲು ಮನಸಂದು ಪೂಜಿಪೆ ಜಿನ
ತಂದೆ ನೀ ಸಲಹಬೇಕೆಂದು ನಂಬಿದೆ ನಿಮ್ಮ
ಚಂದಚಂದದಿ ನುತಿಪೆ ಯೆನ್ನನು
ಹೊಂದಿ ಕಾಡುವ ಕರ್ಮವನು ಮುದದಿಂದ
ಕೆಡಿಸುವ ದೇವ ನೀನಹುದೆಂದು ಸಾರಿದೆ ನಿಮ್ಮ ಚರಣವ ॥ ೧

ಪುಟ್ಟಿದಂದಿನಿಂದ ಶ್ರೇಷ್ಠನೆಂದೆನಿಸಿ ನೀ
ಕಷ್ಟಪಡಿಸುವುದುಚಿತವೆನ್ನನೊಯಿಸಿ
ಇಷ್ಟದಿಂ ಪೂರ್ಣಕಟಾಕ್ಷವಿಟ್ಟನುಗಾಲ

ಕಷ್ಟವ ತ್ಯಜಿಸತಿಶ್ರೇಷ್ಠ ಶ್ರೀ ಜಿನ
ಪತೇ ಕೊಟ್ಟು ರಕ್ಷಿಸು ಸಂಪದವ ಮನ
ಮುಟ್ಟಿ ಭಜಿಸುವೆ ನಿಮ್ಮ ಪಾದವ
ಅಷ್ಟಗುಣಸಂತುಷ್ಟ ಎನ್ನೊಳ
ಗಿಟ್ಟು ಕರುಣಿಸು ದೇವ ಜಯಜಿನ ‖ ೧

ಪಾವನರೂಪನೇ ಪರಹಿತಚರಿತನೇ
ಜೀವದಯಾಕರಮಾನಂದ ನೀನೇ
ಕಾಯ್ದುದೆನ್ನನು ಕವಿಜನಪರಿಪಾಲನೇ
ಭಾವಜಹರ ಭವರೋಗ ವಿನಾಶನೇ
ದೇವದೇವರದೇವ ನಿಮ್ಮಡಿ
ದಾವರೆಯನೊಂದಿರುವ ಭವ್ಯರ ಕಾಯ್ವು
ದ್ದೇವನಂತ ಜಿನೇಂದ್ರ ಬೇಗದಿ ‖ ೨

**<u>೩೭. ಬೇಗದಿಂದಲಿಬನ್ನಿರೈ</u>**
**ರಾಗ : ಶಂಕರಾಭರಣ ತಾಳ : ಆದಿತಾಳ**

ಬೇಗದಿಂದಲಿ ಬನ್ನಿರೈ ಶ್ರೀಜಿನಾಲಯಕ್ಕೆ
ಜ್ಞಾನಮೂರ್ತಿ ಶ್ರೀ ಅನಂತನ ನೋಡುವ ‖ ಪಲ್ಲವಿ

ಅಷ್ಟಕರ್ಮವ ಗೆಲಿದ ಶ್ರೇಷ್ಠಪರಮಾತ್ಮನ
ಸೃಷ್ಟಿ ಮೂರನು ಪರಿಪಾಲಿಪನ
ನಿಷ್ಟೆಯಿಂ ಬೇಡಲಭೀಷ್ಟಸಿದ್ಧಿಯ ಕೊಡುವ
ದಿಟ್ಟ ಅನಂತ ಜಿನೇಂದ್ರನ ಪೂಜೆಗೆ ‖ ೧

ಅಕ್ಷಯ ಸೌಖ್ಯನ ಅನಂತಸುಜ್ಞಾನನ
ಯಕ್ಷಗಂಧರ್ವಸನ್ನು ತಪದನ
ರಕ್ಷಿಸು ನೀನೆಂದು ಅಕ್ಷಯಫಲಗಳ
ಪೇಕ್ಷಿಪ ಜನರಿಗೆ ಈಕ್ಷಿಸಿ ಕೊಡುತಿರ್ಪ ‖ ೨

ಪ್ರೇಮದಿಂ ಭಕ್ತರ ಸಾಮದಿಂ ಪೊರೆವನ
ನಾಮಸಾಸಿರದೊಳು ಮೆರೆವವನ
ಕಾಮನ ಗೆಲಿದಿಳೆಯೊಳ್ ಖ್ಯಾತಿವ
ಡೆದನ ಶ್ರೀಮುಕ್ತ್ಯಂಗನೆಯೆರಸನ ಪೂಜೆಗೆ ‖ ೩

**<u>೩೮. ಶ್ರೀಮದನಂತೇಶಾಮುನಿಜನ</u>**
**ರಾಗ : ಶಂಕರಾಭರಣ ತಾಳ : ಆದಿತಾಳ**

ಶ್ರೀಮದನಂತೇಶಾ ಮುನಿಜನ ಪ್ರೇಮಿ ಭಕತಪೋಷಾ
ಗುಣಧಾಮವರಸುತ್ರಾಮವಂದಿತ ನಾಮ ಸರ್ವೇಶಾ ॥ ಪಲ್ಲವಿ

ಭೂತಳದಿ ಮೆರೆವ ಸಾಕೇತಪುರವರವ
ಬಹುನೂತನದಿ ಪೊರೆದಾತ ಮೃಗತತಿ ನಾಥಸೇನಭವ ॥ ೧

ಕ್ಷಿತಿಪತಿಸತಿಯೆನಿಪ ಲಕ್ಷ್ಮೀಮತಿಸುತ ಯತಿಜಿನಪ
ಸ್ಮರಜಿತ ನತಪಾಲಿತ ಮನಿಯುತರಂಜಿತ ಸತತಾನಂದಧೃತಾ ಶ್ರೀಮದ ॥ ೨

ಕಾರ್ಕಳಪುರವಾಸ ಸೋಮಾರ್ಕಕನಕಭಾಸ
ಪದಿನಾರ್ಕೂಡುತಲೆರಡೇರ್ಕೆಯ ದೋಷ ನೀರ್ಕಡಿಗೈದರಸ ॥ ೩

**<u>೩೯. ಶಾಂತಿಜಿನೇಂದ್ರನಿಮ್ಮ</u>**

**ರಾಗ : ಕಲ್ಯಾಣಿ ತಾಳ : ಅಷ್ಟತಾಳ**

ಶಾಂತಿಜಿನೇಂದ್ರ ನಿಮ್ಮ ಶ್ರೀಚರಣವ
ಚಿಂತಿಸದೆ ನಾ ಮುನ್ನ ಭ್ರಾಂತಾಗಿ ಕರ್ಮದ
ಕಾಂತಾರದೊಳು ಸಿಲ್ಕಿ ಸಂತಾಪಗೊಳಗಾದೆನು ಶ್ರೀಜಿನದೇವ ॥ ಪಲ್ಲವಿ

ಕಾಮಸಂಹಾರಮಾಡಿದೆ ಸ್ವಾಮಿಯೆ ಮುಕ್ತಿ
ಕೋಮಲೆಯೊಡಗೂಡಿದೆ ಪ್ರೇಮದಿಂದಲಿ ನಿಮ್ಮ
ನಾಮವ ನೆನೆದರೆ ಆ ಮಹಾಕರ್ಮದೂರ ಶ್ರೀ ಜಗತ್ಪಾಲ ॥ ೧

ಮೂರುಶಲ್ಯಗಳ ಬಿಟ್ಟು ನಿರ್ಮಲವಾದ
ಈರಾರುತಪವ ತೊಟ್ಟು ಗಾರುಮಾಳ್ಪಘವೃಕ್ಷ
ಬೇರನೆಲ್ಲವ ಸುಟ್ಟು ಧೀರನೀನಹುದೆ ಸ್ವಾಮಿ ಸಾಸಿರನಾಮಿ ॥ ೨

ಹೆಣ್ಣು ಹೊನ್ನು ಮಣ್ಣನು ನೆನೆದು ಬಲು
ಬಣ್ಣ ಬಡುತಿಹೆನು ನಾಂ ಸನ್ನುತಧ್ಯಾನದೊಳಿನ್ನು ಪಾಲಿಸು ಬೇಗ
ಚೆನ್ನಾಗಿ ಸಲಹೊ ದೇವಾ ಭಕ್ತರ ಕಾಯ್ವಾ ॥ ೩

ಮಂಗಲಮಹಿಮ ನೀನು ಭಕ್ತರಂತ
ರಂಗಾಂಬುಜಕೆ ಭಾನು ಅಂಗಜಹರನ ಪಾದಂಗಳಿಗೆರಗುವೆ
ಹಿಂಗಿಸು ಭವರೋಗವ ಭವ್ಯರ ಕಾಯ್ವಾ ॥ ೪

ರಾಗ ರೋಷವ ಕೆಡಿಸಿ ರಂಜಿಸುವ ಶ್ರೀ
ಮೇಗುಂದದೊಳು ನೆಲಸಿ ಬೇಗದಿಂದಲಿ ನಿಮ್ಮ ನಾಮವ ನೆನೆದರೆ
ಆ ಮಹಾಕರ್ಮದೂರ ಶ್ರೀ ಜಗತ್ಪಾಲಾ ॥ ೫

**೪೦. ಜಿನಪತಿಪಾಲಿಸುಬೇಗ**

**ರಾಗ : ಮೋಹನ ಕಲ್ಯಾಣಿ ತಾಳ : ಆದಿತಾಳ**

ಜಿನಪತಿ ಪಾಲಿಸು ಬೇಗ ॥ ಪಲ್ಲವಿ

ಕುನಯವ ಕೆಡಿಸುತ ವಿನಯರ್ಗೆ ಸುಪಥವ
ಅನುನಯದಿಂದಲಿ ತೋರಿದೆ ॥ ೧

ಮಾರನ ಮುರಿದು ಹಮ್ಮೀರನೆನಿಸಿ ಮುಕ್ತಿ
ನಾರಿಮಣಿಗೆ ಕಾಂತನಾದೆಯ್ಯೆ ॥ ೨

ಮೆರೆಯುವ ಬೆಳ್ಗುಳು ಪುರವನ್ನು ಪೊರೆಯುವ
ಅರಜಿನದೇವನೆ ಪಾಲಿಸೋ ॥ ೩

**೪೧. ಪೊರೆಯ್ಯೆಶ್ರೀಜಿನರಾಜ**

**ರಾಗ : ಕಾನಡ ತಾಳ : ಆದಿತಾಳ**

ಪೊರೆಯ್ಯೆ ಶ್ರೀಜಿನರಾಜ ಪೊರೆಯ್ಯೆ
ಪೊರೆಯೊ ಶ್ರೀಜಿನರಾಜ ತರಣಿಕೋಟಿತೇಜ
ವರಮುನಿಜಿನರಾಜ ಪರಮಮೋಕ್ಷಕೆ ಬೀಜ ॥ ಪಲ್ಲವಿ

ಭುವಿಯೊಳು ನಾ ಜನಿಸಿ ಭವಸಾಗರದಿ ಮುಳುಗಿ
ಅವಿವೇಕಿಯಾದೆನ್ನ ಜವದಿಂದ ನೀ ಬಂದು ॥ ೧

ಭಾಸುರಾಂಗನೆ ನೀನು ಬೇಸರಗೊಳ್ಳದೆ
ಪ್ರಸಾದವನು ಕೊಟ್ಟು ದಾಸನಾಗಿಹ ಎನ್ನ ॥ ೨

ಧರೆಯೊಳು ಮಂದರಗಿರಿಯೊಳು ನೆಲಸಿಹ
ವರಮುನಿಸುವ್ರತ ಚರಮಾಂಗಧರನೇ ॥ ೩

**೪೨. ಬೇಡುವೆನಾಂಬಿಡದೇ**

**ರಾಗ : ಕಮಾಜ್ ತಾಳ : ಆದಿತಾಳ**

ಬೇಡುವೆ ನಾಂ ಬಿಡದೇ ಶ್ರೀ ಜಿನದೇವ
ಬೇಡುವೆ ನಾಂ ಬಿಡದೇ ॥ ಪಲ್ಲವಿ

ಬೇಡುವೆ ವರಗಳ ಪಾಡುವೆ ಗುಣಗಳ
ಗಾಢದಿ ದಯೆಯಿಂದ ನೀಡುತ ಸುಖವನ್ನು ॥ ೧

ಕಾಲಾಂಗಜರ ಗರ್ವ ಜಾಲವ ಕೆಡಿಸಿದೆ
ಮೇಲಾದ ಸುಖವಿತ್ತು ಪಾಲಿಸು ದೇವನೆ || ೨

ಧರೆಯೊಳು ಬೆಳ್ಗುಳ ಪುರವನ್ನು ಪಾಲಿಪ
ವರನಮಿಜಿನಪನೆ ಕರುಣಾಕೃಪೆಯದೋರು || ೩

**೪೩. ಜಿನವರಭೋಭಾವಯೇ**

**ರಾಗ : ಹಿಂದೂಸ್ಥಾನಿ ಕಾಪಿ ತಾಳ : ಆದಿತಾಳ**

ಜಿನವರಭೋ ಭಾವಯೇ ಭವಹರಣ ಕೃತಕರಣ || ಪಲ್ಲವಿ

ಪಂಕಜಸನ್ನಿಭ ವರವದನಾಂಚಿತ
ಸುಗುಣರತ್ನಾಕರ ನೇಮಿನಾಥೇಶ್ವರ || ೧

ಮಾನಸಕಲ್ಮಷ ನಾಶನಭಾಸ್ಕರ
ಶರಣಕೃಪಾಕರ ನೇಮಿನಾಥೇಶ್ವರ || ೨

ಮನಸಿಜನಾಶಕ ಶಾಂತರಸಾತ್ಮಕ
ಜ್ಞಾನವಿವರ್ಧಕ ನೇಮಿನಾಥೇಶ್ವರ || ೩

**೪೪. ಪಾರಿಶ್ವೇಶಪಾಹಿಸದಾ**

**ರಾಗ : ಹಿಂದೂಸ್ಥಾನೀ ಭೈರವಿ ತಾಳ : ರೂಪಕತಾಳ**

ಪಾರಿಶ್ವೇಶ ಪಾಹಿ ಸದಾ ಶ್ರೀಧರಾರ್ಚಿತ
ಪಾರಗೊಳಿಪ ಯೋಗಿವಂದ್ಯ ಭಕ್ತಸನ್ನುತ
ಸಾರಸಾಕ್ಷ ಧೀರಮಹಿಮನೆ || ಪಲ್ಲವಿ

ಪಾಲಿಸೆನ್ನ ದೇವದೇವ ತ್ರಿದಶಪೂಜ್ಯನೇ
ಕಾಲವಿಜಯ ಕರ್ಮರಹಿತ ಮಾರವಿಜಯನೆ
ಬಾಲತನದಿ ದೀಕ್ಷೆ ತಾಳ್ದನೇ || ೧

ಕಮಠೋಪಸರ್ಗವನ್ನು ಭರದಿ ತಾಳ್ದ ಮಹಿಮನೇ
ಸುಮನವಿಬುಧ ಜನರ ನೀಗ ಪೊರೆವ ದೇವನೇ
ಕಾಮಿತಾರ್ಥವಿತ್ತು ಪೊರೆವನೇ || ೨

ಕಾಮಕ್ರೋಧವನ್ನು ನಾಶಗೈದ ಮಹಿಮನೇ
ಪ್ರೇಮದಿಂದ ಸ್ತುತಿಸುವವರ ಪಾಲಿತಾರ್ಥನೇ
ಸೋಮನಂತೆ ಶಾಂತಚಿತ್ತನೇ || ೩

ಅಷ್ಟಮದವ ನಷ್ಟಗೈದ ಶ್ರೇಷ್ಠದೇವನೇ
ಸೃಷ್ಟಿಯೊಳಗೆ ಪೂಜಿಪರಿಗಭೀಷ್ಟವೀವವನೇ
ಕಷ್ಟವನ್ನು ದೂರ ಮಾಳ್ಪನೇ ॥ ೪

ಚತುರ್ವಿಂಶತಿ ತೀರ್ಥಂಕರ ಬಿಡದೆ ಭಜಿಸುವ
ಕ್ಷಿತಿಯ ವಿಬುಧರುಗಳಿಗೀಗ ಕೊಡುವ ಮುಕ್ತಿಯ
ಅತಿಶಯ ಗತಿಯ ತೋರುವ ॥ ೫

ಧರೆಯ ನೂತನಾದ್ರಿಯಲ್ಲಿ ಸ್ಥಿರದಿ ಮೆರೆಯುವ
ಪರಮಭಕ್ತರನ್ನು ಬೇಗದಿಂದ ಸಲಹುವ
ಪಾರಿಶ್ವೇಶನನ್ನು ಸುತ್ತಿಸುವ ॥ ೬

**<u>೪೫. ಪೊರೆಶ್ರೀರಾಮಾರಮಣನೆ</u>**

**ರಾಗ : ಶಂಕರಾಭರಣದ ಮೂರ್ಛನೆ ತಾಳ : ಆದಿತಾಳ**

ಪೊರೆ ಶ್ರೀರಾಮಾರಮಣನೆ ಶ್ರೀರವಿಕಿರಣನೆ
ಕ್ರೂರತಿಮಿರಹರ ಜಯ ಜಯ ಜಯ
ಚಾರುತರ ಪ್ರಕಾಶನೇ ಭೂರಿದುರಿತಹರ ಶೂರಮನ್ಮಥ
ರಿಪು ಧೀರಸುಸುಖರ ಜಯ ಜಯ ಜಯ ॥ ಪಲ್ಲವಿ

ಕಮಠೋಪಸರ್ಗವ ನಿಮಿಷದಿಂ ಜಯಿಸಿದ
ಸುಮನಸರೊಡೆಯನೆ ಸೈ ಸೈ ಸೈ
ಸೋಮನೇ ಶಮ ಪ್ರೇಮನೇ ಕಾಮಿತಫಲದನೆ
ಹೇಮಪ್ರಕಾಶನೆ ಸ್ವಾಮಿ ಪಾರ್ಶ್ವಜಿನ ಜಯ ಜಯ ಜಯ ॥ ೧

ಮಂದಿಪ ಭವ್ಯಜನವೃಂದಕೆ ಸುಪಥವ
ತಂದೆಯೆ ತೋರುವೆ ಜಯ ಜಯ ಜಯ
ಇಂದು ನಾ ನೊಂದಿಪೇ ಅಂದದ ಬೆಳ್ಗೊಳ
ಚಂದದಿ ಪಾಲಿಪ ಬಂಧುರಮತಿಯುತ ಜಯ ಜಯ ಜಯ ॥ ೨

**<u>೪೬. ಸಾರಿಬಂದೆನೊದೇವ</u>**

**ರಾಗ : ಕಾಂಭೋಜಿ ತಾಳ : ರೂಪಕತಾಳ**

ಸಾರಿ ಬಂದೆನೊ ದೇವ ಶ್ರೀವೀರನಾಥಾ
ಭೂರಿಗುಣಗಳನಾಂತ ಶ್ರೀರಮಾರಮಣಾ ॥ ಪಲ್ಲವಿ

ಪರಮಾತ್ಮನನು ಮರೆತು ಪರಿಪರಿಯ ಭವಗಳಲಿ
ತಿರುತಿರುಗಿ ಬೇಸತ್ತು ಬಳಲಿ ನೊಂದು
ಸುರವಂದ್ಯ ನಾನೀಗ ವರಚರಣಪದ್ಮದೊಳು
ಶಿರ ಬಾಗಿ ನಮಿಸುತಲಿ ನೀ ಕರುಣಿಸೆಂದು ॥ ೧

ನಾರಿಪೊಮನ್ಮಣ್ಣುಗಳೆ ಸಾರವಸ್ತುಗಳೆಂದು
ಸೇರಿಯವುಗಳ ನಂಬಿ ಸೂರೆ ಹೋಗಿ
ಸೇರಲೋಸುಗ ನಿನ್ನ ಭೂರಿಕೃತಿಗಳ ಗೈವ
ಸಾರಬುದ್ಧಿಯನಿತ್ತು ಪಾರುಗೈಸಯ್ಯಾ ॥ ೨

ಕಲುಷಘಮಸಂತತಿಯ ನೆಲೆಯಳಿಸಿ ಬಲುಮೆಯೊಳು
ಬಲು ಖ್ಯಾತಿಯಂ ತಳೆದ ತ್ರೈಲೋಕ್ಯವಂದ್ಯಾ
ಲಲಿತಮುಕ್ತ್ಯಂಗನೆಯ ನಿಲಯವಾಸನೆ ಬಾಹು
ಬಲಿವಂದ್ಯ ಶ್ರೀಪಾದಸಲಿಲರುಹನೇ ॥ ೩

**<u>೪೭. ಸುರಪತಿವಿನುತ</u>**

**ರಾಗ : ಬೇಹಾಗ್ ತಾಳ : ಆದಿತಾಳ**

ಸುರಪತಿವಿನುತ ವರವೀರಜಿನಪಾ
ಕರುಣಿಸು ಸಂತತಂ ಹರುಷದೊಳೆನ್ನ
ಪರಮಭಕ್ತಿಯೊಳ್ನಿನ್ನ ಚರಣಸರೋಜಂ
ಪರಿಪರಿ ವಿಧದೊಳುಪಚರಿಸುವೆ ನಾಂ ॥ ಪಲ್ಲವಿ

ಹರಿವಂಶಜನೇ ದುರಿತವಿದೂರನೇ
ವರಮುಕ್ತಿ ರಮಣನೇ ಪರಮಪಾವನನೇ
ಧರೆಯೊಳು ಪಾವಾಪುರದೊಳು ನಿಂದು
ಪುರುಹೂತಪೂಜ್ಯನೇ ಸ್ಥಿರಮೋಕ್ಷಪಡೆದೇ ॥ ೧

ಅಕ್ಷಯವೆನಿಪ ಮೋಕ್ಷವ ಪಡೆದ
ದಕ್ಷನೆ ನೀನೆನ್ನ ರಕ್ಷಿಸು ನಿರತಂ
ಪಕ್ಷ ವರ್ಜಿತನೇ ಲಕ್ಷ್ಯವ ಕೊಡುವ
ಈಕ್ಷಿಸಿ ಶಿವಪದ ಭಿಕ್ಷಾಂದೇಹಿ ಮೇ ॥ ೨

**<u>೪೮. ವೀರಜಿನಪಪೊರೆಯೊಕೃಪಾ</u>**

**ರಾಗ : ದರ್ಬಾರು ತಾಳ : ರೂಪಕತಾಳ**

ವೀರಜಿನಪ ಪೊರೆಯೊ ಕೃಪಾ ಮೂರುತಿಯೇ ನೀನು ಎನ್ನ
ವಾರಿಧಿಗುಣಗಭೀರಜೀಯ ತೋರುತ ಕರುಣವನು ಮುದದಿ ॥ ಪಲ್ಲವಿ

ಕುಂಡಲಪುರಿವರೇಶ ನಿಮಗೆ ಮಂಡೆ ಬಾಗಿ ಬೇಡಿಕೊಂಬೆ
ಚಂಡಯಮನ ಬಾಧೆಗಿಡದೆ ಪಂಡಿತಾರ್ಯವಂದ್ಯ ದೇವ ॥ ೧

ಕಮಲನಾಭ ಪೂಜ್ಯ ಎನ್ನ ಶ್ರಮವನೆಲ್ಲ ಪರಿಹರಿಸೋ
ಮಮತೆಯಿಂದ ಬೇಡಿಕೊಂಬೆ ವಿಮಲ ಹೃದಯ ಭವಜೀಯ ॥ ೨

ಪಾವಾಪುರಿಯ ಕೆರೆಯ ಮಧ್ಯ ಕೇವಲಾಂಗ ಮುಕ್ತಿಗೈದೆ
ಜೀವದಯಾಪರನೆ ನಿನ್ನ ಭಾವಿಸುವೆ ಭಕ್ತಿಯಿಂದ ॥ ೩

## ೪೯. ಅರುಹಶ್ರೀಚರಣವನೆನೆವೆನು

**ರಾಗ : ಮೋಹನ ತಾಳ : ಆದಿತಾಳ**

ಅರುಹಶ್ರೀಚರಣವ ನೆನೆವೆನು ಅನುದಿನ
ಜಿನರ ಶ್ರೀಚರಣವ ನೆನೆವೆ ನಾನು ॥ ಪಲ್ಲವಿ

ಅರಗಿಳಿಗಳು ಫಲಪುಷ್ಪವ ನೆನೆವಂತೆ
ಅರಹಂತರಡಿಗಳ ನೆನೆವೆ ನಾನು ॥ ೧

ಸಾಧುಸಜ್ಜನರು ಸತ್ಪುರುಷರ ನೆನೆವಂತೆ
ಶ್ರೀಸಿದ್ಧರಡಿಗಳ ನೆನೆವೆ ನಾನು ॥ ೨

ಉತ್ತಮಸತಿ ತನ್ನ ಪುರುಷನ ನೆನೆವಂತೆ
ಆಚಾರ್ಯರಡಿಗಳ ನೆನೆವೆ ನಾನು ॥ ೩

ಹೊಲಕೋದ ಪಶು ತನ್ನ ಕರುವನ್ನು ನೆನೆವಂತೆ
ಉಪಾಧ್ಯಾಯರಡಿಗಳ ನೆನೆವೆ ನಾನು ॥ ೪

ವಸಂತಕೋಗಿಲೆ ವನವನ್ನು ನೆನೆವಂತೆ
ಸಾಧುಗಳಡಿಗಳ ನೆನೆವೆ ನಾನು ॥ ೫

ಇಂತಿವರೈವರ ನೆನೆಯಲು ಅನುದಿನ
ಪಿಂತೆ ಮಾಡಿದ ಪಾಪ ಹರಿಯಲೆಂದು ॥ ೬

ಕಂತುವೈರಿಯ ಗೆಲ್ದ ಶ್ರೀಯಾದಿಜಿನಪನ
ಸಂತಸವನು ತಾಳ್ದು ನೆನೆವೆ ನಾನು ॥ ೭

**೫೦. ಆರಸಿರಿಆರತನು**

**ರಾಗ : ಮೋಹನ ತಾಳ : ಆದಿತಾಳ**

ಆರ ಸಿರಿ ಆರ ತನು ಧನಪುತ್ರಮಿತ್ರರು
ಆರಿಗೂ ಸ್ಥಿರವಿಲ್ಲ ಸಂಸಾರದ ವಿಭವ
ಚಾರುಶ್ರೀ ಜಿನಮತವ ನಂಬು ಜೀವನೆ
ನಿನಗೆ ಬೇರೊಂದು ಶರಣಿಲ್ಲವೇ ॥ ಪಲ್ಲವಿ

ಶ್ರೀಯುಯೌವನ ವಿಭವ ಮಾಯ ಮದ ಮಾ
ತ್ಸರ್ಯಕಾಯನಿರ್ಮಲವಂಶ ರೂಪಸೌಭಾಗ್ಯವು
ವಾಯುಗೊಡ್ಡಿದ ಸೊಡರು ಮಿಂಚುಮಂಜಿನ ಪುಂಜ ನೀರ ಬೊಬ್ಬಳಿಕೆಯಂತೆ

ಹೇಯ ಸಂಸಾರವು ಶರೀರ ತಾನಸ್ಥಿರವು
ಶ್ರೇಯಾಂಸಪತಿ ಶಾಂತಿ ಜಿನರ ಪಾದಗಳಿಗೇ
ಕಾಯ ಮನೋವಚನದಲ್ಲಿ ನಂಬು ಜೀವನೇ ನಿನಗೆ ಮತ್ತೊಂದು
ಶರಣಿಲ್ಲವೈ ॥ ೧

ಗುರುರಾಜಮಂತ್ರಿ ಸುರಸೇನೆ ವಜ್ರಾಯುಧವು
ಹರಿವೈರಿಚೌದಂತಮೆನಿಪ ಐರಾವತವು
ಅರಸಿಯರು ರಂಭೆಮೇನಕಿ ತಿಲೋತ್ತಮೆಯು ದೇವ ಕಾಂತೆಯರೆನಿಪರು
ಪಿರಿದು ಆಯುಶ್ಯ ಅಮೃತಾಹಾರವು
ಸುರಪತಿಗೆ ಪರುಷ ಚಿಂತಾಮಣಿಯು ಕಲ್ಪತರು ಗೃಹಗಳಲಿ
ಪರಮೇಶನೊಲುಮೆಯಾಗಿರ್ದ ಇಂದ್ರತ್ವತಕ್ಷಣದೊಳದೃಶ್ಯವಾಯಿತು ॥ ೨

ಈರೇಳು ರತ್ನ ಎಂಬತ್ನಾಲ್ಕುಲಕ್ಷಜನ
ಸೂರ್ಯನ ರಥಕೆ ಮಿಗಿಲೆನಿಪ ರತ್ನದ ರಥವು
ನಾರಿಯರು ತೊಂಬತ್ತಾರುಸಾಸಿರವು ಪದಿನೆಂಟು ಕೋಟಿ ಜಾತ್ಯಶ್ವ
ಶಾರದೆಯ ನೆಲೆಗೆ ಮಿಗಿಲೆನಿಪ ಸಾಕೇತಪುರ
ಮೂರುವರೆಕೋಟಿಬಂಧುಗಳು ಮೈಗಾವಲ
ವೀರಭಟರಿರುತಿರಲು ಕ್ಷಣದೊಳದೃಶ್ಯವಾಯ್ತು ಸಗರೇಂದ್ರಚಕ್ರಧರಗೇ ॥ ೩

ಬಲದೇವವಾಸುದೇವಾದಿಗಳ ಐಶ್ವರ್ಯ
ಹಲವು ದೇಶವು ಹಸ್ತಿ ರಥತುರಗ ಭಂಡಾರ
ಒಲುಮೆಯ ಸ್ತ್ರೀಯರು ಪುತ್ರಸಂತತಿಮಂತ್ರಿಮಂಡಳಿಕ ಸಾಮಂತರಿರಲು
ಜಲಜನಾಭನ ಮಗನಗೆಲುವ ರೂಪಿನ ಸೊಬಗು
ಬಲವಂತ ಶ್ರೀ ರಾಮರಾವಣವಿಭೀಷಣರು

ಕಲಿಕೃಷ್ಣ ದುರ್ಯೋಧನಪಾಂಡವಾದಿಗಳ ಸಿರಿಯು
ಕ್ಷಣದೊಳದೃಶ್ಯವಾಯಿತು ॥ ೪

ದೇವಮಾನವರುರಗಪತಿಯ ವಿಭವವಧ್ರುವವು
ಶ್ರೀವನಿತೆಯುಳಿದ ಮನುಜರಲಿ ಸ್ಥಿರವಾಗಿಹಳೇ
ಜೀವ ಕೇಳಾ ನಿನ್ನ ತನುಧನವು ಮೋಹದಿಂದೇನಾಗದು
ಆವಾವಗತಿಗಳಲಿ ತೊಳಲಿ ಬಳಲಿಯೆ ಬಂದು
ಸಾವು ಹುಟ್ಟುವ ಚತುರ್ಗತಿಗಳ ಭ್ರಮಣೆಯಲಿ ತಿರುಗಿ
ನೋವದಿರು ನಂಬು ಜೀವನೆ ನಿನಗೆ ಬೇರೊಂದು ಶರಣಿಲ್ಲ ವೈ ॥ ೫

ಮಾಡುವುದು ದೇವತಾರ್ಚನೆಯ ಗುರುಪೂಜೆಯನು
ಮಾಡುವುದು ದಾನ ಧರ್ಮಗಳನು ಅನುದಿನವು
ಮಾಡುವುದು ಶೀಲೋಪವಾಸ ಜಪತಪೋ ನಿತ್ಯನೇಮಾದಿಷಟ್ಕರ್ಮಗಳನು
ಆಡುವುದು ಸತ್ಯವನು ಪರವಧುವಿಗೆಳಸದಿರು
ಕೇಡುಳ್ಳ ಸಂಸಾರವನು ನಂಬಿ ಕೆಡಬೇಡ
ಪಾಡಳಿದು ಭಯ ಭಕ್ತಿಯಲಿ ನಂಬು ಜೀವನೆ ನಿನಗೆ ಮತ್ತೊಂದು
ಶರಣಿಲ್ಲವೈ ॥ ೬

ಭವರೋಗವೈದ್ಯ ಬಂಕಾಪುರದ ಶಾಂತೀಶ
ರವಿಕೋಟಿತನುತೇಜ ಚಿನ್ಮಯ ಚಿದಾನಂದ
ಭುವನತ್ರಯಾಧಿಪತಿ ಐದನೆಯ ಚಕ್ರೇಶ ಪದಿನೆಂಟು ದೋಷರಹಿತಾ
ಜಿನಮಾರ್ಗವನು ತೋರಿ ಭವ್ಯಜನಸಂತತಿಗೆ
ಜಿನಪದವಿಯನು ಕೊಡುವ ಅಘಹರನೆ ಚಿದ್ರೂಪ
ಭವಹರ ಭವನಾಶ ಸಂಗಮನ ಬಿನ್ನಪವನೊಲಿದು ರಕ್ಷಿಪುದಯ್ಯಾ ॥ ೭

## <u>೫೧. ವಸಂತವಾಡಿರಿಶಶಿಮುಖಿಯರು</u>

**ರಾಗ : ಮೋಹನ ತಾಳ : ಆದಿತಾಳ**

ವಸಂತವಾಡಿರಿ ಶಶಿಮುಖಿಯರು ಕೂಡಿ
ವಸುಧೇಗೊಡೆಯ ಜಿನರಾಜರಿಗೆ
ಬಿಸಜಮುಖಿಯರೆಲ್ಲ ನಸುನಗೆಯಿಂದಲಿ
ಎಸೆವಷ್ಟ ಗಂಧದ ಓಕುಳಿಯಾಡಿರಿ ॥ ಪಲ್ಲವಿ

ಚಂದ್ರದಿಂದೊಪ್ಪುವ ನಂದೀಶ್ವರ ದ್ವೀಪ
ದಂದವ ಮನದೊಳು ಭಾವಿಸುತ
ಇಂದ್ರಾದಿಸುರರೆಲ್ಲ ಜಯ ಜಯವೆಂದು
ಕುಂದದರ್ಚಿಪರು ಜಿನರಾಜರ್ಗೆ ಜಯವೆಂದು ॥ ೧

ನಂದೀಶ್ವರದ್ವೀಪಮಂದರದೆಶೆ ನಾಲ್ಕ
ರಿಂದಲಿ ಶೋಭಿಸುತ್ತಿರುವ
ಬಂಧುರದಧಿಮುಖ ಅಂಜನರತಿಕರ
ದಿಂದಲಿ ರಾಜಿಪ ಜಿನರಿಗೆ ಭಕ್ತಿಯೊಳ್ ॥ ೧

ದೆಶೆಯೊಂದರೊಳಗೆ ಎಸೆವ ತ್ರಯೋದಶ
ಅಸಮರತ್ನದಿ ನೆಲೆಗೊಂಡ
ಬಸದಿಗಳಿರಲದರೊಳಗೆ ವರ್ತಿಸುತಿಹ
ಶಶಿಕೋಟಿಭಾಸ ಜಿನೇಶರ್ಗೆ ಜಯವೆಂದು ॥ ೩

ಜಿನಗೃಹವೊಂದರೊಳ್ ಘನಬಿಂಬ ನೂರೆಂಟು
ಮಿನುಗುವ ರತ್ನಖಚಿತದಿ ನನು ಐ
ದುನೂರುತ್ಸೇಧದಿ ರಾಜಿಪ
ಜನರಿಗೆ ಜಯಜಯವೆಂದು ಬೇಗದಿ ಬಂದು ॥ ४

ಐದುಸಾವಿರದ ಆರ್ನೂರ
ಪದಿನಾರು ವೈಡೂರ್ಯಖಚಿತಬಿಂಬಗಳು
ಐದು ಕಲ್ಯಾಣದೊಡೆಯರಾಗಿ
ನಿಂದಿಹ ವೈಭವದಿಂದಲಿ ಜಿನರಡಿಗೆರಗಿ ॥ ೫

ಆಷಾಢಕಾರ್ತಿಕಫಾಲ್ಗುಣಮಾಸದಿ
ವಾಸವರತಿ ಸಂಭ್ರಮದಿ ತಾಳ
ದಷ್ಟಮಿಯಿಂದೆಂಟು ದಿವಸ ಪರಿ
ಸಾಸಿರ ನಾಮವ ಭಜಿಸುತ್ತ ಜಿನರ ॥ ೬

ಮಹಾಮಹಿಮೆಯಿಂ ಮಹದಭಿಷೇಕವ
ಮಹಾಶ್ರೀವೀತರಾ ಗರಿಗೆ
ಬಹುವಸ್ತುಗಳಗೂಡಿ ಎಸೆವರು ಕ್ಷೀರವ
ಬಹುರತ್ನದರ್ಘ್ಯಗಳಿಂದಲಿ ಪೂಜಿಸಿ ॥ ೭

ಜಯಭೇರಿ ಸಿಂಹನಾದವು ಶಂಖ ಮೊದಲಾದ
ನಯನಾಟ್ಯಾನೃತ್ಯಗೀತಗಳು
ಭಯವಿಲ್ಲದರುಹನ ಪಾದಮೂಲದೊಳಾಗ
ಜಯಜಯವೆಂದು ಪಾಡುವರು ತೋಷದಿ ನಿಂದು ॥ ೮

ಪದಿನಾಲ್ಕುನದಿಯ ಜಲವ ತಂದರ್ಚಿಸುವರು
ಹೃದಯಶುದ್ಧದಿ ಸುರರೆಲ್ಲ

ಸದಮಲವಾಗಿಹ ಪರಿಮಳಪುಷ್ಪವ
ಒದಗಿಸಿ ಪೂಜಿಸುತ್ತಿಹರು ಸುರರು ಬಂದು ॥ ೯

ಜಲಮೊದಲಾದಷ್ಟವಸ್ತುವಿಂ ಪೂಜಿಸಿ
ಕಲಿಲಹರರ ಸ್ತೋತ್ರಗೈದು
ಒಲವಿನಿಂದರ್ಘ್ಯವ ಕೆಯ್ಗೊಂಡು ಸುರರೆಲ್ಲ ಬಲಗೊಂಬರತಿ
ಚಂದದಲಿ ಮೋದವ ಪೊಂದಿ ॥ ೧೦

ಜಯ ಜಯವೆಂದತಿ ಭಯಭಕ್ತಿಯಿಂದಲಿ ವಿ
ನಯದೊಳ್ ಸುರರೆಲ್ಲ ಕೂಡಿ
ದಯೆಯಿಟ್ಟು ರಕ್ಷಿಸೆಂದೆಲ್ಲರು ವಂದಿಸಿ
ನಯದಿ ಪೋಪರು ಚತ್ತಾರಿಪಾಡ್ಯದೊಳು ॥ ೧೧

**<u>೫೨. ಅಸಗನೀತನಲ್ಲಕರ್ಮವ</u>**
**ರಾಗ : ಮಧ್ಯಮಾವತಿ ತಾಳ : ಏಕತಾಳ**

ಅಸಗನೀತನಲ್ಲ ಕರ್ಮವ ಕುಸುರಿ ಒಗೆಯಬಲ್ಲ
ಪೊಸಮಡಿವಾಳನು ಕೊಳೆಯಾತ್ಮನ ತಾಮಸವಿಲ್ಲದೆ ಒಗೆವನು ನೋಡೆಲ್ಲ ॥ ಪಲ್ಲವಿ

ಆರು ತಪದೊಳದ್ದಿ ಪಂಚಾಚಾರದೊಳಗೆ ಹೊದ್ದಿ
ತೋರುವ ಚತುರಾರಾಧನೆಗಳು ಚೌಗಾರಸುತಪದ ಬಿಸಿಲ್ಗಾಯಿಸುತ್ತಿಹ ॥ ೧

ಮೂರುದೇಹದೊಳಗೇ ಬಾನಿಯೊಳಾರು ಕ್ರಿಯೇಯು ಬೆಳಗೆ
ಧೀರತೆ ದಶಧರ್ಮದ ಉಬ್ಬೆಯು ಸುವಿಚಾರದಿ ತಳಕಿ ಒಗೆದು ಹಿಂಡುತ್ತಿಹ ॥ ೨

ವರಗುಪ್ತಿತ್ರಯದಿ ಧ್ಯಾನದ ಸಿರಿಯೊಳು ನಿರಿಗಟ್ಟಿ
ಪರಮಾತ್ಮನು ಮಡಿ ಬಿಳಿದು ಚಿದಂಬರ ಪುರುಷನೆ ಕೊಡು ಶ್ರೀಮುಕ್ತಿಗೆ ಸಲಿಸುತೆ ॥ ೩

**<u>೫೩. ಅರಿಯಲಿಲ್ಲವಲ್ಲಆತ್ಮನ</u>**
**ರಾಗ : ಮಧ್ಯಮಾವತಿ ತಾಳ : ಏಕತಾಳ**

ಅರಿಯಲಿಲ್ಲವಲ್ಲ ಆತ್ಮನ ಮರೆದು ಕೆಟ್ಟರೆಲ್ಲ
ಹೊರಗಣ ಸೋಗೆಯ ತಿಂದೊಳಗಿಹ
ರಸದಿರವನರಿಯದಿಹ ಕುರಿಯಂತೆಲ್ಲ ॥ ಪಲ್ಲವಿ

ಆಶಾಮೋಹದಿಂದ ರೌದ್ರಾವೇಶದೊಳಘಬಂಧ
ಮೋಸದಿ ಹೇಸದೆ ಗಾಸುಪಟ್ಟು ಬಹು ನಾಶವಾಗಿ ನರಳುತ್ತಿಹರಾತ್ಮನ ॥ ೧

ಹೊಟ್ಟೆಯ ಹೊರೆವುದಕೇ ಧರ್ಮವ ಬಿಟ್ಟು ಹೋಗುವರಿದಕೇ
ಕೆಟ್ಟಮನದ ಕೇಡಿನ ಬದುಕಿಗೆ ತಲೆಗೊಟ್ಟಳುತಿಹರದ ಬಿಟ್ಟು ನಿಜಾತ್ಮನ ॥ ೨

ಉರಿವರು ಸಿರಿಯಿರಲು ದುಃಖದಿ ನರಳುವರೆಡರಿನೊಳು
ಎರಡರೊಳೊಂದೇ ಭಾವದಿ ಸಂತತ ಪರಮ ನಿರಂಜನಸಿದ್ಧನ ಧ್ಯಾನವು ॥ ೩

**೫೪. ಶ್ರೀಗುರುವರನಂಘ್ರಿಯುಗಕೆ**

**ರಾಗ : ದರ್ಬಾರು ತಾಳ : ರೂಪಕತಾಳ**

ಶ್ರೀಗುರುವರನಂಘ್ರಿಯುಗಕೆ ಬಾಗುವೆ ನಾಂ ಮನದ ಬಯಕೆ
ಬೇಗದಿಂ ನೆರವೇರಿಸುಗೆ ವಾಗ್ದೇವಿಯ ಸ್ಮರಿಪೆ ಮಿಗೆ ॥ ಪಲ್ಲವಿ

ವರೆಯುವೆನಾ ನೇಮಿಜಿನಪವರನ ಪಂಚಕಲ್ಯಾಣವ
ಸ್ಮರನ ಮದವ ಮುರಿದು ಮೆರೆವ ಚರಿತೆ ಮನವನಿರಿಸಿ ಕೇಳಿ ॥ ೧

ಮೇರುಗಿರಿಯ ದಕ್ಷಿಣಭರತಾರ್ಯಖಂಡ ವಾರಿಧಿನಡು
ಸೇರಿ ಮೆರೆವ ದ್ವಾರಾವತಿ ಚಾರುಪುರವು ಶೃಂಗಾರದಿಹುದು ॥ ೨

ಸುರಪುರವನು ಸರಿ ಪೋಲುವ ಧರೆಯನಾಳ್ವ ಹರಿಕುಲೇಶ
ಶರಧಿ ವಿಜಯನರಸಿನಿಚಯಸರಸೀರುಹ ತರಣಿಪ್ರಾಯ ॥ ೩

ಭೂವರೇಣ್ಯಗೆಣೆಯಹ ಶಿವದೇವಿಯೆಂಬಳರಸಿಯವಳ
ಭಾವಭಾಗ್ಯವಾವನೊರೆವ ಭಾವಿಸಲ್ಕೆ ದೇವವಿಭವ ॥ ೪

ಇನಿತು ಮೆರೆವ ಜನಪನಲ್ಲಿ ಜಿನಪವರನು ಜನಿಪನೆಂದು
ಅನಿಮಿಷರೊಡೆಯನು ತಿಳಿವುತ ಧನಪನಿಗಪ್ಪಣೆಯನೀಡೆ ॥ ೫

ಸತಿಯು ಗರ್ಭವತಿಯಹ ಮೊದಲತಿಶಯ ಮೂರುತುವಿಡಿಯುತ
ರತುನ ವೃಷ್ಟಿಗರೆದನು ಧನಪತಿಯು ತಾ ಮೂರಾರುಮಾಸ ॥ ೬

ದೇವನಾಥ ಪೇಳ್ದ ತೆರದಿ ದೇವಸತಿಯರೊಗ್ಗುತ ಶಿವ
ದೇವಿಯ ಮನೋಭಾವವರಿತು ಸೇವಿಸಿದರು ತಾವು ನಲಿದು ॥ ೭

ಈ ರೀತಿಯೊಳಿರಲೊಂದಿನ ತೋರಿದ ಪದಿನಾರುಸ್ವಪ್ನ
ಸಾರಮೇನೆಂದೆನುತ ಕೇಳೆ ಭೂರಮಣನು ಪೇಳ್ದನಾಗ ॥ ೮

ರನ್ನೆಯೆ ಕೇಳ್ ನಿನ್ನುದರದಿ ಸನ್ನುತ ಜೇನದೇವನುದಿಪ
ನಿನ್ನ ನಮ್ಮ ಪುಣ್ಯಫಲದೊಳೆನ್ನಲವಳು ಹರುಷದಿರಲು ॥ ೯

ಸುರರು ತಿಳಿದು ಧರಣಿಗಿಳಿದು ಬರುತಲಾ ಗರ್ಭಾವತರಣ
ನಿರುಪಮವರಕಲ್ಯಾಣವ ಪರಮವಿಧದಿಗೈದರವನು ॥ ೧೦

**೫೫. ಕೇಳಿಪೇಳ್ವೆಲಾಲಿಸಿ**

**ರಾಗ : ಬೇಹಾಗ್ ತಾಳ : ಅಟ್ಟತಾಳ**

ಕೇಳಿ ಪೇಳ್ವೆ ಲಾಲಿಸಿ ಮುದದಿ ಬಾಲೆಯ ಉದರದಿ
ಬಾಲಚಂದ್ರಮನಂತೆ ಲೀಲೆಯಿಂ ಬೆಳೆದ ಜಿನಪಾಲನು ಮುದದಿ ॥ ೧

ನವಮಾಸ ತುಂಬಲು ಅವನಿಯ ಮನುಜರು
ಭವರೋಗವೈದ್ಯನ ಭಜನೆ ಮಾಡಿದರು ॥ ೨

ಒದಗಿದ ವೈಶಾಖ ಮೊದಲಾ ತ್ರಯೋದಶಿ
ಯದರೊಳು ರಂಜಿಪ ವಿಧುತಾರೆಯೊಳಗೆ ॥ ೩

ಇಂದ್ರನರೇಂದ್ರ ಫಣೀಂದ್ರ ವಂದಿತನೇಮಿ
ಚಂದ್ರನುದ್ಭವಿಸಿದ ಚಂದದೊಳಾಗ ॥ ೪

ಸುರವರಕುಳಿತಿರ್ದ ಹರಿಪೀಠ ಕಂಪಿಸ
ಲರಿತನವಧಿಯಿಂದ ವರಜಿನನುದಯ ॥ ೫

ಉರಗಲೋಕದ ಶಂಖ ಸುರರ ಲೋಕದ ಘಂಟೆ
ವರಜ್ಯೋತಿರ್ಲೋಕದ ಹರಿನಾದ ಕೇಳೇ ॥ ೬

ನಾಲ್ಕು ವಿಧದ ದೇವರ್ನಾಕಪತಿಯು ಶಚೀ
ತಾ ಕೂಡಿ ಬಂದರನೇಕಸಂಭ್ರಮದಿ ॥ ೭

ಬಂದು ಜಿನೇಶನ ಚಂದದಿ ನಮಿಸುತ್ತಾ
ನಂದದೊಳೈದರು ಮಂದರದೆಡೆಗೆ ॥ ೮

ರತುನಪಾಂಡುಕಶಿಲೆಯ ರತುನ ಪೀಠದಿ
ನವರತುನತ್ರಯದ ಜಿನರತುನನನಿರಿಸಿ ॥ ೯

ಕಣ್ಮನ ದಣಿವಂತೆ ಮನ್ಮಥವಿಜಯನ
ಜನ್ಮಾಭಿಷೇಚನ ಸನ್ಮಾನಿಸಿದರು ॥ ೧೦

ಅಷ್ಟವಿಧಾರ್ಚನೆಯಷ್ಟು ಪೂರೈಸಿ ಸಂ
ತುಷ್ಟನಾದನು ಸುರಪಟ್ಟವಾಳುವನು ॥ ೧೧

ತಿರುಗಿ ಪುರಕೆ ಬಂದು ಸುರನುತದೇವನ
ಹರಿವಿಷ್ಟರದಿ ಕುಳ್ಳಿರಿಸಿದರಂದು ॥ ೧೨

ಕಾಮನ ಗೆಲುವಂಥ ನಾ ಮಹಿಮನ ಕಂಡು
ನೇಮಿಚಂದ್ರಮನೆಂಬ ನಾಮದಿ ಕರೆಯೆ ॥ ೧೩

ಸುರಪನು ಸುರಸತಿಯರ ಕೂಡಿ ಕುಣಿದಾಡಿ
ತೆರಳಿದ ಸ್ವರ್ಗಕೆ ಹರುಷದೊಳಾಗ ॥ ೧೪

**೫೬. ಪೊರೆಕರುಣದಿಶರಣರ**

**ರಾಗ : ಕಲ್ಯಾಣಿ ತಾಳ : ಆದಿತಾಳ**

ಪೊರೆ ಕರುಣದಿ ಶರಣರ ದೇವ
ನೆರೆ ಸ್ಮರಿಸುವೆ ನಿನ್ನಯ ಪಾದವ ॥ ಪಲ್ಲವಿ

ಸಮವಸರಣದೊಳು ಕಮಲವ ಸೋಂಕದೆ
ವಿಮಲ ರೂಪದೊಳು ನಿಂದನೇ ॥ ೧

ಎಂದೆನುತಲಿ ಸುರವೃಂದಸಹಿತಲಮ
ರೇಂದ್ರನು ನರ್ತನವಾಡಿದ ॥ ೨

ಪರಿಮಮೂರ್ತಿಯು ಧರೆಯ ಜನರಿಗೆಲ್ಲ
ವರಧರ್ಮಾಮೃತಸಾರವ ॥ ೩

ಸುರಿಯುತ ಭವ್ಯರ ದರಿತವ ನೋಡಿಸಿ
ಮೆರೆದನು ಬಹುಪರಿಯಂತರ ॥ ೪

ಸಮವಸರಣವನು ಯಮಿನುತ ತ್ಯಜಿಸುತ
ವಿಮಲೋರ್ಜಯಂತಗಿರಿ ಶಿಖರದೊಳು ॥ ೫

ಜಾತರೂಪ ನವನಘಾತಿಕರ್ಮವ
ತಾ ತೊರೆದನು ಶುಕ್ಲಧ್ಯಾನದಿ ॥ ೬

ಆಷಾಢದ ಮೊದಲಾ ಸಪ್ತಮಿದಿನ
ಈಶ ಮೋಕ್ಷಲಕ್ಷ್ಮೀಶನಾದ ॥ ೭

ಅರಿಕೃತು ಸಂವತ್ಸರದುತ್ತರಾಯಣ
ಮೆರೆವ ಶೈಶಿರದ ಮೊದಲ ಮಾಸದಿ ॥ ೮

ಧರೆಯೊಳು ಕಾರ್ಕಳ ವರನೇಮೀಶಗೆ
ನೆರಹಿದೈದು ಕಲ್ಯಾಣಸಮಯ ॥ ೯

ಕಾಮವಿಜಯಗುಣಧಾಮ ಮನೋಹರ
ನೇಮಿಶರಧಿವರ್ಣಿಯವರ ॥ ೧೦

ಕರುಣರಸಾಮೃತ ಶಿರದೊಳು ಧರಿಸಿದ
ನೊರೆದನು ಬಿದುರೆಯ ಸುಬ್ಬರಾಯ ॥ ೧೧

ಸುರನುತ ನೇಮೀಶ್ವರನುದಿಸಿದ ಪರಿ
ಬರೆದನು ದೋಷವ ತಿದ್ದುವುದು ॥ ೧೨

**೫೭. ಶ್ರೀಸುರನುತಜಿನರಡಿಗೆರಗುತ**

**ರಾಗ : ಕಾಂಭೋಜಿ ತಾಳ : ಏಕತಾಳ**

ಶ್ರೀ ಸುರನುತ ಜಿನರಡಿಗೆರಗುತ ವಾ
ಗೀಶ್ವರಿಗೊಂದಿಸಿ ಮುನಿಗಳಿಗೆರಗಿ
ಲೇಸೆನಿಪಾದಿ ಜಿನರ ಪಂದಕಲ್ಯಾಣ
ದೇಶದೇಶದೊಳರಿವಂತೆ ವರ್ಣಿಪೆ ಸಂ
ತೋಷದಲಿ ಮತಿಯ ಕರುಣಿಸು ಶೋಭನ ॥ ೧

ಜಂಬೂದ್ವೀಪದ ಭರತಾರ್ಯಖಂಡದೊಳು
ಇಂಬಾದ ಸಾಕೇತಪುರವ ಪಾಲಿಸುತ
ಕುಂಬಿನಿ ಪತಿನಾಭಿರಾಜನು ಸುಖದಿಂದ
ಅಂಬುಜಮುಖಿಯರು ದೇವಿಯು ಸಹಿತಲಿ
ಸಂಭ್ರಮಗೂಡಿ ಸುಖದಿರೆ ॥ ೨

ಆರು ಮಾಸಕೆಯೆಂದು ಗರ್ಭಾವತರಣ
ಮಾರಹರನ ಪುಣ್ಯಪ್ರೇರಣೆಯಿಂದ
ಸಾರಸದ್ಗುಣಿ ದೇವೇಂದ್ರನವಧಿಯೊಳ
ಗಾರೈದು ಸಂತೋಷದಿಂದಲಿ ಆ ಕು
ಬೇರನೊಳಿಂತು ನುಡಿದನು ॥ ೩

ಹೊತ್ತು ಮೂರಕೆ ಪರಿನೈದುಮಾಸಾಂಬರ
ರತ್ನದ ಮಳೆಗರೆಯೆನೆ ಕೇಳಿ ಬಂದು
ವಿತ್ತೇಶ ನಾಭಿರಾಜನ ಮನೆ ಮುಂದೆಸೆ

ಬಿತ್ತರದಂಗಣದಲಿಯನುದಿನ ಘನ
ರತ್ನದ ಮಳೆಯ ಗರೆದನು ‖ ೪

ಕುಲಗಿರಿರುಚಕಕುಂಡಲದ ಮಸ್ತಕದಿ
ನೆಲಸಿದ ಶ್ರೀದೇವಿ ಮೊದಲಾದರೆಲ್ಲ
ತಿಳಿದು ದೇವೇಂದ್ರನ ಬೆಸನದಿ  ನಡೆತಂದು
ಲಲನೆ ಶ್ರೀ ಮರುದೇವಿಯ ಪಾದಸೇವೆಯ
ನಲಸದನುದಿನವೊದಗಿರೆ ‖ ೫

ವೀಣೆಮದ್ದಳೆತಾಳಕೊಳಲುತಂಬೂರಿಯೂ
ನಾನಾಪರಿಯ ವಾದ್ಯಗೀತನೃತ್ಯಗಳ
ಸಾನುರಾಗದಿ ಸುರಸತಿಯರರು ನಿರ್ಮಿಸಿ
ಮಾನಿನಿ ಮಣಿಮರುದೇವಿಯ ಚಿತ್ತ
ಕ್ಕಾನಂದ ಮಾಡಿ ದಣಿಯರು ‖ ೬

ಇವು ಮೊದಲಾದ ಸೇವೆಗಳೆಲ್ಲ ಮಾಡಿ
ಉದರಾದಿಯಲ್ಲಿ ಗರ್ಭ ಶೋಧನೆಗೆಂದು
ಒದಗಿಸಿ ದಿವ್ಯೌಷಧಿಗಳನಿರದಿತ್ತು
ಹೃದಯಶೋಧನೆ ಮಾಡಿ ಸ್ವರ್ಗದ ಆಹಾರ
ಅದರಿಂದ ಬಳಿಕ ಕೊಡುವರು ‖ ೭

ಒಂದು ದಿವಸ ರತ್ನ ಕಂಡು ಶ್ರೀಮರುದೇವಿ
ಮಿಂದು ನಾಲ್ನೀರನು ಪರಿಯೆಡೆಗೈದಿ
ಹೊಂದಿ ಕ್ರೀಡಿಸಿ ಸುಖನಿದ್ರೆಯೊಳೊರಗಿರೆ
ಅಂದೆರಡೆಂಟು ಸ್ವಪ್ನವ ಕಂಡು ಹರುಷದಿ
ಮದಗಜಗಮನೆ ಮರುದಿನ ‖ ೮

ಉದಯದೊಳೆದ್ದಂಗಶುಚಿಯಾಗಿ ಪತಿಯೆಡೆ
ಒದಗಿನಿತಾದ ಸ್ವಪ್ನವ ಪೇಳೆ ಕೇಳಿ
ಸುದತಿ ನಿನ್ನುದರದಿ ತ್ರಿಜಗವಿನುತಸ್ವಾಮಿ
ಉದಿಪರೆಂಬುದ ಕೇಳಿ ಜನ್ಮ ಸಫಲವೆಂದು
ಮುದದಿ ಸಂತೋಷ ತಾಳಿದರು ‖ ೯

ಸರ್ವಾರ್ಥಸಿದ್ಧೀಶನಹಮಿಂದ್ರ ಬಂದು
ಮರುದೇವಿಯುದರದೊಳುದಿಸಿದನೆಂದು
ಅರಿದವಧಿಯೊಳಿಂದ್ರ ಎರಡೆಂಟು ಸ್ವರ್ಗದ

ಸುರರ ಭವನವ್ಯಂತರರ ಜ್ಯೋತಿಷ್ಕರ
ಇರದೆ ಸಹವಾಗಿ ನಡೆತಂದ ॥ ೧೦

ಬಂದರಮನೆಯೊಕ್ಕು ಜಿನಜನಕರನು
ವಂದಿಸಿ ಧನ್ಯರಾದಿರಿ ನೀವೆನುತ
ಚಂದದಿಂ ವಸ್ತ್ರಾಭರಣವನಿತ್ತು ಪೂಜಿಸಿ
ಮುಂದುದಯಿಪತನಕ್ಕೆಲ್ಲರು ಬೆಸಗೆಯ್ದು
ದೆಂದು ನಿಯಮಿಸಿ ನಡೆದನು ॥ ೧೧

ಇತ್ತ ಮರುದೇವಿಗೆ ನವಮಾಸ ತೀವೆ
ಉತ್ತಮ ಲಗ್ನದೊಳನಿಮಿಷನುತನ
ಪೆತ್ತಳೆಂದರಿದವಧಿಯೊಳಿಂದ್ರ ಸುರಪತಿ
ಮೊತ್ತದ ಬಳಸಿನೊಳೈರಾವತವೇರಿ
ಅತ್ಯಂತ ಭರದಿ ನಡೆತಂದ ॥ ೧೨

ಬಂದರಮನೆ ಮೇಲೆ ಸುರನಿಕುರುಂಬ
ನಿಂದಿಂದ್ರನಪ್ಪಣೆಯಲಿ ಶಚೀದೇವಿ
ಹೊಂದಿ ಸೂಶಕ ಗೃಹದಲಿ ಜಿನಶಿಶುವನು
ವಂದಿಸಿ ಕೊಂಡೆತ್ತಿ ತನ್ನಾಣ್ಮನಕೆಯ್ಯೊ
ಳಂದು ಕೊಡಲಾಗಿ ಕೆಯ್ಕೊಂಡ ॥ ೧೩

ಹಸ್ತಿಯೊಳಾ ಶಿಶುವನು ನಿಜಬಲದೊಡೆ
ಗೊತ್ತಿಡೆ ಸುರರೆಲ್ಲ ಜಯಜಯವೆನುತ
ಎತ್ತಿದ ಛತ್ರಚಾಮರಸಿಂದ ಸಿಗುರಿದ
ಮೊತ್ತದ ಬಳಸಿನೊಳಾ ಸುರಪಡೆಯನು
ಎತ್ತಿ ಸುರಗಿರಿಗೆ ನಡೆದರು ॥ ೧೪

ಕರಿಗೆಂಟುರದನದ ಮುಖ ಮೂವತ್ತೆರಡು
ಸರಸಿಳೊಂದೊಂದುರದನಕ್ಕೆ ಮೂವ
ತ್ತೆರಡೆಸಲಬ್ಜಗಳದು ಒಂದರೊಳು ಮೂ
ವತ್ತೆರಡೊಂದು ದಳಕ್ಕೆ ನರ್ತನ ನಾರಿಯರು ಮೂ
ವತ್ತೆರಡಾಗಿ ಮುಂದೆ ನಡೆದರು ॥ ೧೫

ಅಡಿಗೊಮ್ಮೆ ಸುರರೆಲ್ಲ ಜಯಜಯವೆನುತ
ನಡೆದರು ವೈಭವದಲಿ ಸುರಗಿರಿಯ
ನಡರಿ ಪ್ರದಕ್ಷಿಣೆವಾಗಿ ಈಶಾನದಿ

ಕಡುಶೋಭೆವಡೆದಿಹ ಪಾಂಡುಕ ಶಿಲೆಯೊಳ
ಗೊಡೆಯನ ನಿಲಿಸೆ ಕ್ರಮಗೂಡಿ ॥ ೧೬

ಬಲಗಡೆಯೊಳು ಸೌಧರ್ಮೇದ್ರ ನೆಡದಿ ನೆಲಸು
ತಲೀಶಾನೇಂದ್ರರು ಗೂಡಿ ಜಿನನ ಕಲಧೌತ
ಕಲಶದಿ ಕ್ಷೀರ ಸಾಗರದಿಂದ
ಜಲ ತೀವಿ ಸುರರೆಲ್ಲ ಕೂಡೆ ಜಿನಗಭಿಷೇಕ
ಬಲು ಭಕ್ತಿಯಿಂದ ಗರೆದರು ॥ ೧೭

ಈ ರೀತಿಯಲಿ ಜನ್ಮಾಭಿಷಷೇಕವ ಮಾಡಿ
ಸಾರವಸ್ತುಗಳಿಂದ ಪೂಜಿಸಿ ಸ್ತುತಿಸಿ
ಭೂರಿವೈಭವಗೂಡಿ ಸಾಕೇತಪುರಕೆಯ್ದಿ
ಆ ರಾಜ ಮಿಥುನವ ಸಿಂಹಪೀಠಾಗ್ರಕ್ಕೆ
ಏರಿಸಿ ನೆಲೆಯ ಗೊಳಿಸಿದ ॥ ೧೮

ಸ್ವಾಮಿಯನಾ ಪೀಠಾಗ್ರದೊಳಿರಿಸಿ
ಭೂಮಿಯೊಳಗೆ ನೀವು ಧನ್ಯರೆಂದೆನಿಸಿ
ಸ್ವಾಮಿ ಜನನೀ ಜನಕರನು ಪೂಜಿಸಿ ಮೋಕ್ಷ
ಗಾಮಿಗೆ ಶ್ರೀ ವೃಷಭೇಶನೆಂಬ
ನಾಮವನಿಟ್ಟು ನಲಿದನು ॥ ೧೯

ದೇವಬಾಲಕರಾಗಿ ಜಿನಬಾಲಕನೊಳು ಸಹ
ವಾಸದಿಂದಂಘ್ರಿ ಸೇವಿಸುವುದೆನುತ
ಆವಾಸದಿ ದೇವೇಂದ್ರನು ಸುರರಿಗೆ ನಿಯಮಿಸಿ
ಭಾವಜಹರನ ಬೀಳ್ಕೊಂಡು ಸಂತೋಷದಿ
ದೇವಲೋಕಕ್ಕೆ ನಡೆದನು ॥ ೨೦

ಬಾಲಕುಮಾರ ಕಾಲಕ್ಕೆ ಯೋಗ್ಯವಾದ
ಲೀಲೆಯೊಳಿರ್ದ ಯೌವ್ವನವಾಗಲಂದು
ಲೋಲಲೋಚನೆಯರ ಮದುವೆಗಿಬ್ಬರ ನಿಂದು
ಬಾಲಕರಂತು ನೂರೊಂದನು ಪಡೆದು ಒ
ಡ್ಡೋಲಗ ಗೊಟ್ಟು ಸುಖದಿರೆ ॥ ೨೧

ಬಾಲಕುಮಾರ ಯೌವನಕಾಲ ಪೋಗೆ
ಮೂಲೋಕದೊಡೆಯನಿಗೊಂದು ವಾಸರದಿ
ನೀಲಾಂಜನೆ ನಾಟ್ಯವಾಡಿ ಬಯಲಾಗೆ ಕಂಡು

ಕಾಲವಿಜಯಗಂದು ವೈರಾಗ್ಯಮೊದವಿರೆ
ಅಲೌಕಿಕಾಂತಿಕಸುರರಂದು ॥ ೨೨

ಬಂದು ಸ್ವಾಮಿಗೆ ಪ್ರತಿಬೋಧಿಸಿ ಪೋಗೆ
ಇಂದ್ರನು ಸುರಸಮಿತಿಯ ಕೂಡೆ ಬಂದು
ವಂದಿಸಿ ಜಿನರ ಸಿಂಹಾಸನದಗ್ರದೊ
ಳಂದಭಿಷೇಕವ ಮಾಡಿ ಪೂಜಿಸಿ ಸ್ವರ್ಗದ
ಚಂದದುಡಿಗೆಗಳ ತೊಡಿಸಿದ ॥ ೨೩

ಶಿಬಿಕೆಯನೇರಿಸಿ ಭೂಚರ ಖಚರ
ರಭವನಿಗಳೇಳಡಿ ಪೊತ್ತು ನಡೆದು
ವಿಭವದಿ ಮುಂದಕ್ಕೆ ಸುರರೊಂದು ವನದೊಳು
ಶುಭಲಗ್ನದಲಿ ದಿವ್ಯಶಿಲೆಯೊಳು ಸ್ಥಾಪಿಸೆ
ಉಭಯಪರಿಗ್ರಹನುಳಿದನು ॥ ೨೪

ಕುಂತಳ ಕೆಯ್ಯೊಳೆ ಕಿತ್ತಿಡೆ ಸುರಪತಿ
ಯಾಂತನು ರತ್ನದ ಪಡಲಿಗೆ ಕೊಂಡು
ಜಂತು ರಹಿತ ಶರಧಿಯೊಳಿಟ್ಟು ಬಂದು ಪೂಜೆ
ಯಾಂತು ಶ್ರೀ ಪರಿನಿಷ್ಕ್ರಮಣ ಕಲ್ಯಾಣದ
ಇಂತಾಗುಮಾಡಿ ನಡೆದನು ॥ ೨೫

ಆರುಮಾಸಕ್ಕೆ ಎನಗುಪವಾಸವೆನುತ
ಘೋರ ತಪದೊಳಿರ್ದು ಬಳಿಕ ಪಾರಣೆಗೆ
ಊರೊಳು ಬರುತಿರೆ ವಿಧಿಯಲಿ ನಿಲಿಸುವ
ರಾರನು ಕಾಣದೆ ತಿರುಗಿತಿರುಗಿ ಇಂ
ತಾರು ಮಾಸಾಂತ್ಯದೊಳಗೋರ್ವ ॥ ೨೬

ಧಾತ್ರೀಶನೆಂಬೋರ್ವ ಶ್ರೇಯಾಂಸನಂದು
ರಾತ್ರಿಯೊಳಗೆ ಮೇರು ಸುರತರು ಪ್ರಭೃತ
ಹತ್ತಿರಕ್ಕೆ ಬರುವ ಸ್ವಪ್ನವ ಕಂಡು ಬೆಳಗೆದ್ದು
ಸುತ್ರಾಮನುತ ನಾದಿಜಿನಪನ ಬರವನು
ನೇತ್ರದಿ ನೋಡಿಯಿರುತ್ತಿರೆ ॥ ೨೭

ಬರುವ ಸ್ವಾಮಿಯ ಕಂಡು ಪೂರ್ವದಿ ಸರ್ಪ
ಸರಿಸಿಯೊಳಿತ್ತ ದಾನದ ವಿಧಿಭವದ
ಸ್ಮರಣೆಯೊಳರಿದು ಸ್ವಾಮಿಗೆ ವಿಧಿಪೂರ್ವಕ

ಕರೆದೊಯ್ದು ಆಹಾರದಾನವನಿತ್ತಿರೆ ಸ್ವಾಮಿ
ಪರಿಪೂರ್ಣವಾಗಿ ನಡೆದರು ॥ ೧೮

ಸ್ವಾಮಿಗಿತ್ತಾಹಾರ ದಾನದ ಫಲದಿ
ಪೂಮಳೆ ರತ್ನದ ಮಳೆ ಗಂಧವಾತ
ವ್ಯೋಮದಿ ಸುರಭೇರಿ ಜಯ ಜಯನಿನದವು
ಆ ಮಹೀಪತಿಗಳ್ಳೈದಾಶಯನವು
ಕ್ಷೇಮವನಾಂತು ಸುಖದಿರೆ ॥ ೧೯

ಕೆಲವು ಕಾಲದ ಮೇಲೆ ಕೇವಲಬೋಧ
ಜ್ವಲಿಸಲು ಸುರಪತಿ ಬೆಸನದಿ ಧನದ
ಪೊಳೆವ ಶ್ರೀ ಸಮವಸರಣ ಗಗನದಿ ಮಾಡೆ
ಕಲುಷಾಪಹರನ ಕೇವಲ ಪೂಜೆಗೆನುತಾಗ
ಬಲಯುತನಿಂದ್ರ ನಡೆತಂದ ॥ ೨೦

ಚಂದ್ರಕಾಂತದ ಶಿಲೆಯಗ್ರ ಭಾಗದೊಳು
ನಿಂದು ಶ್ರೀ ಜಿನಪತಿ ದುರಿತವ ಕೆಡಿಸಿ
ಸಂದನು ಮೋಕ್ಷಕೆ ನುತಸುರ ಸಭೆಗೂಡಿ
ಇಂದ್ರನಲ್ಲಿಗೆ ಬಂದು ದೇಹ ಸಂಸ್ಕಾರ ಮಾಡಿ
ಅಂದು ಪೂಜಿಸಿ ನಡೆದನು ॥ ೨೧

ಭರತೇಶನೊಂದಿನೆರಡುವರೆ ದ್ವೀಪದೊ
ಳಿರುವ ವಸ್ತುಗಳೆಲ್ಲ ತರಿಸಿ ಪೂಜಿಸುತ
ಇರುಳು ಪಗಲು ಪದಿನಾಲ್ಕು ದಿವಸ ಸಮವ
ಸರಣ ವಿಸರ್ಜಿಸಿ ಯೋಗದೊಳಿರುವನೆ
ವರವಿಭವದಲ್ಲಿ ಕ್ರಮದಿಂದ ॥ ೨೨

ಜಯಜಯ ತ್ರಿಭುವನನುತ ಜಿನರಾಜ
ಜಯಜಯ ಕೋಟಿ ಚಂದ್ರಾದಿತ್ಯ ತೇಜ
ಜಯಜಯ ಭವ್ಯರ ಸಲಹುವ ಸುರಭೂಜ
ಜಯ ಜಯನಂತ ಚತುಷ್ಟಯ ಗುಣಸಹಜ
ಜಯಿಸೆನ್ನ ನೀನು ಕರುಣದದಿ ॥ ೨೪

ಬಿದುರೆಯ ಗುರುಪಂಡಿತಾರ್ಯರ ದಿವ್ಯ
ಪದಸರಸಿಜಕ್ಕಳಿ ಶಿಶುವಾದ ಶಾಂತ
ಹೃದಯದಿನೆನಿಪ ಚಂದಯ್ಯನು ಪೇಳಿದ

ಮದಹರನಾದಿ ಜಿನರ ಪಂದಕಲ್ಯಾಣ
ಬುಧರು ಲಾಲಿಪುದು ಮುದದಿಂದ ॥ ೩೫

**೫೮. ಶ್ರೀಮದನಂತಜಿನೇಂದ್ರರ**

ಶ್ರೀಮದನಂತಜಿನೇಂದ್ರರ ವ್ರತವ
ಆ ಮಹಾಸ್ವಾಮಿಯ ವಚನದಮೃತವ
ಪಾವನ ಮಾಡಿದ ಸ್ವಾಮಿಯ ಭಕ್ತರು
ಕಾಮಿಸಿ ಪಡೆದ ತತ್ಫಲದ ಮಹಾತ್ಮೆಯ
ಪ್ರೇಮದೊಳ್ ಬುಧರು ಇದ ಕೇಳಿ ಶೋಭನ ॥ ೧

ಕೃತಯುಗಚಕ್ರೇಶ ಭರತಭೂತನಾಥ
ವ್ರತಗುಣಚಾರಿತ್ರ ಶೀಲವಿಖ್ಯಾತ
ಕ್ಷತ್ರಿಯ ಧರ್ಮದಿ ಧಾತ್ರಿಯ ಪಾಲಿಸಿ
ಕೀರ್ತಿಯ ಮೆರೆಸಿದ ಪಾರ್ಥಿವಾಗ್ರಣಿಯನು
ಪ್ರಾರ್ಥಿಸಿ ನಾನು ಬಲಗೊಂಬೆ ॥ ೨

ಷಟ್ಖಂಡಭೂಮಿಯದೋರ್ದಂಡಭುಜದಿ
ಮಾರ್ಕೊಂಡು ವಿಜಯಾರ್ಧಗಿರಿಯ ದ್ವಾರದೊಳು
ಏರ್ಕೊಂಡು ತೇಜಿಯ ಕಾಕಿಣಿಪ್ರಭೆಯೊಳು
ಬೀಳ್ಕೊಂಡು ವೃಷಭಾದ್ರಿಗೈದಂಕಮಾಲೆಯ
ತಾ ಕಂಡು ಬರೆದು ಮಗುಳಿದ ॥ ೩

ಚಕ್ರದ ಬಲುಮೆಯಿಂ ಭೂ ಚಕ್ರವಗೆಲಿದು
ವಿಕ್ರಮಿಯಿರಲಾ ಚಕ್ರದ ಪ್ರಭೆಯು
ವಕ್ರವಾಗಲು ಕ್ಷೀರ ತಕ್ರವಾದಂದದಿ
ಅಕ್ರಮವೇನಿದನರಿಯಬೇಕೆಂದಾಗ
ಶಕ್ರವಂದಿತನು ನೆನೆದದನು ॥ ೪

ಉರುಭಕ್ತಿಯಿಂದಲಿ ಭರತ ಭೂವರನು
ಗುರುಗಣಧರ ಶ್ರೀವೃಷಭಸೇನರನು
ಚರಣಾರವಿಂದಕೆ ವಂದಿಸಿ ಚಕ್ರದ ರಮಣೀ
ಯಪ್ರಭೇಯು ತಾ ಕುಂದಿದುದೇಕೆಂದು
ಧರಣೇಶ ತಾನು ಬೆಸಗೊಂಡು ॥ ೫

ಕುಂದುತ ಸ್ಥಿತಿಗತಿ ಹುಂಡಾವಸರ್ಪಿಣಿ
ಬಂದಪುದಾ ಕಾಲಮಹಿಮೆಯಿಂದೀಗ

ಕುಂದಿತ ಪ್ರಭೆಯಿಂದ ವಸ್ತುಸಂಚಯವೆಲ್ಲ
ಎಂದು ಪೇಳಲು ಕೇಳೆರಗಿ ಬೀಳ್ಕೊಂಡಾಗ
ಮುಂದೇನು ಇದಕೆ ಪರಿಹಾರ ॥ ೬

ಎಂದು ಬಿನ್ನೈಸಿದ ಭರತಭೂವರಗೆ
ಮಂದರಧೀರ ಮುನೀಂದ್ರ ರು ಮುದದಿ
ಬಂದಿಹುದಿದು ಕಾಲಮಹಿಮೆಯಿದಕೆ ನಾವು
ಒಂದಿಹುದದನುಸುರುವೆವು ಕೇಳೆಂದಾಗ
ತಂದೆ ಮುನಿರಾಯ ಕರುಣಿಸು ॥ ೭

ಆದಿ ಅಜಿತ ಶಂಭವ ಅಭಿನಂದನೇಶ
ಬೋಧಭೂಷಣ ಮಹಾಸುಮತಿ ತೀರ್ಥೇಶ
ಪದ್ಮಲಾಂಛನಧರ ಪದ್ಮಪ್ರಭೇಶರು
ಸುರುಚಿರಮೂರ್ತಿ ಸುಪಾರಿಶ್ವಜಿನರೆಂದು
ಮದನಾರಿಚಂದ್ರಜಿನಪರು ॥ ೮

ಪುಷ್ಪಸಾಯಕವಿಜಯ ಪುಷ್ಪದಂತೇಶ
ದುಶ್ಕರ್ಮಹರವರ ಶೀತಳಜಿನಪ
ಒಪ್ಪುವ ಶ್ರೇಯಾಂಸ ವಾಸುಪೂಜ್ಯೇಶರು
ನಿಷ್ಪನ್ನಹೃದಯರೆಂದರೆನಿಸಿದ ಶ್ರೀಮಹಾ
ದರ್ಪರೆನಿಸಿದ ವಿಮಲೇಶ ॥ ೯

ಇಂತೆಂದು ಪದಿಮೂರು ತೀರ್ಥಕರಂತ್ಯಾ
ನಂತ ಜಿನೇಂದ್ರರು ಜಗದೊಳತ್ಯಂತ
ಶಾಂತಾತ್ಮರಾಗಿ ಸಂಜನಿಸುವರನು ನೀನು
ನೋಂತಭಿಮತಫಲವನು ಪಡೆಯೆಂದು
ಮುಂತಾದ ವಿಧಿಯನುಸುರ್ದರು ॥ ೧೦

ಮಾಸದೊಳಧಿಕವಾದ ವರಭಾದ್ರಪದದ
ಆ ಶುದ್ಧಪಕ್ಷ ತ್ರಯೋದಶೀ ದಿನದ
ನಿಶಿಯೊಳು ಜಾಗರಮಿರ್ದುಪವಾಸದಿ
ಒಸೆದು ನೋಂಪಿಯ ಮಾಡಿ ಪಡೆದು ಸೌಭಾಗ್ಯವ
ಎಸೆದು ನೀವೆಲ್ಲ ಸುಖಿಯಾಗಿ ॥ ೧೧

ಸೃಷ್ಟಿಯೊಳ್ ಹಸ್ತಿನಾಪುರಮದನಾಳ್ವ
ಶ್ರೇಷ್ಠನೆಂದೆನಿಸಿದ ಶಾಂತ ಭೂವರೆಗೆ
ಕೊಟ್ಟು ಕೊಳ್ಳುವ ರಾಜಶ್ರೇಷ್ಠಿ ಸುದರ್ಶನ

ಶ್ರೇಷ್ಠಿಯ ವಲ್ಲಭೆ ಸನ್ಮತಿಯವರಿಗೆ
ಪುಟ್ಟಿದ ಮಗಳು ಗುಣವತೀ ॥ ೧೨

ವ್ರತ ಗುಣ ಚಾರಿತ್ರ ಶೀಲಸಂಪನ್ನೆ
ಅತಿರೂಪಗುಣವತಿ ಯೌವನವಂತೆ
ಕ್ಷಿತಿಯೊಳಗೆಲ್ಲರು ಅತಿಚೆಲ್ವೆಯೆಂದೆಲ್ಲ
ಸ್ತುತಿಸಲು ವಾರ್ತೆಯ ಕೇಳಿದ ಜನರೆಲ್ಲ
ಅತಿಪ್ರೀತರಾಗಿಯಿರುತ್ತಿರೆ ॥ ೧೩

ಅತ್ತ ಚಿತ್ರಾಂಗದವೆಂದೆಂಬ ಪುರದ
ಧಾತ್ರೀಪತಿಯು ತುಂಗಭುಜಬಲನೆಂಬ
ಪ್ರಸ್ತುತವಾರ್ತೆಯ ಕೇಳಿ ಗುಣವತಿಯ
ಯತ್ನದೊಳೈತಂದಿತ್ತಗೆ ಮಾನ್ಯವ
ಆರ್ತಿಯಿಂ ಕೊಡುವೆನೆನುತಲಿ ॥ ೧೪

ಕೃತಕದಿಂ ಕನ್ಯೆಯ ಪೃಥ್ವೀಶ ತರಿಸಿ
ನುತರೂಪಗುಣವತಿಯನ್ನು ಶೃಂಗರಿಸಿ
ಅತಿಶಯಮುಹೂರ್ತದಿ ತುಂಗಭುಜಬಲನಿಗೆ
ಸತಿಯರು ಕೂಡಿ ಶೋಭನವಾಡಿ ಧಾರೆಯ
ಕ್ಷಿತಿಪಾಲಗಾಗ ಗುಣಮಣಿಯ ॥ ೧೫

ಸತ್ಯವಂತೆಯು ಪತಿವ್ರತಧರ್ಮದಿಂದ
ನಿತ್ಯ ಶ್ರೀಜಿನಪೂಜೆ ಗುರುಸೇವೆಯಿಂದ
ಅತ್ಯಂತಭಕ್ತಿಯಿಂ ಭರ್ತನು ಸಹವಾಗಿ
ಅರ್ತಿಯೊಳಿರಲಾಗ ಶ್ರೀಮದನಂತವ್ರತ
ಪ್ರಸ್ತುತವಾಗಿ ಬರಲಂದು ॥ ೧೬

ಶ್ರೀಮದನಂತಜಿನೇಂದ್ರರ ವ್ರತವ
ಆ ಮಹಾಜಿನಮುನಿವಚನಸಮ್ಮತವ
ಪ್ರೇಮದಿ ಮಾಡುವೆ ಅದಕೆ ತಕ್ಕವನು
ನೇಮದಿ ಕೊಡುವುದೆಂದಪ್ಪಣೆಕೊಂಡಾಗ
ಭಾಮಿನೀ ವ್ರತವ ಧರಿಸಿದಳು ॥ ೧೭

ಸುರುಚಿರಭಕ್ತಿಯಿಂದರುಹನಾಲಯದಿ
ಪರಮವೈಭವದಿಂದ ನೋಂಪಿಯನೋಂತು
ಗುರುವರ ಹಸ್ತದಿಂ ಧರಿಸಿದ ದಾರವ

ಕರದೊಳು ವರಸಿದ್ಧಶೇಷೆಯು ಸಹವಾಗಿ
ಭರದಿಂದ ಮನೆಗೈತಂದು ‖ ೧೮

ಮಂದಗಮನೆ ತನ್ನ ಮಂದಿರಕ್ಕೈದಿ
ಗಂಧಪ್ರಸಾದವ ಕೊಟ್ಟು ವಲ್ಲಭಗೆ
ಅಂದಿತ್ತು ವಂದಿಸಿ ನಿಂದಿರ್ದ ಭಾವೆಯ
ಕಂದಿರ್ದ ಮುಖವನು ಕಂಡುಗ್ರಕೋಪದಿ
ಚಂದಿರಾನನೆಯ ಕಳುಹಿದ ‖ ೧೯

ಅನ್ನವುದಕನಿದ್ರೆ ತಾಂಬೂಲ ಬಿಡಿಸಿ
ಇನ್ನು ಫಲಹಾರವಸ್ತುಗಳೆಲ್ಲ ತೊರೆಸಿ
ಚೆನ್ನಾಗಿ ಮಲಗುವ ಹಾಸಿಗೆ ವ್ರತವೆಂದು
ಬನ್ನಬಡಿಸಿದ ಬೋಳ್ಮಂಡೆಯ ಸವಣರ
ಅನ್ಯಾಯವೇನ ಉಸುರಲಿ ‖ ೨೦

ಪುಂಡರಿಕಾನನೆ ಅಂದಿನ ದಿವಸ
ಗಂಡನೊಡನೆ ತಾ ಹೊಂದಿ ಕುಳ್ಳಿರಲು
ಕಂಡಾಗ ದಾರವ ತೋಳೊಳಗಿರ್ದುದ
ಪುಂಡು ಸವಣರ ಮೋಡಿ ದಂಡೆಯಿಂದೆಂದದ
ಕೆಂಡದೊಳಿಕ್ಕಿ ಉರುಹಿದ ‖ ೨೧

ದಹಿಸಲು ಮನದಿ ನಿಶ್ಚಯಿಸಿದಳಿಂತು
ಐಶ್ವರ್ಯವೆಲ್ಲವು ತೊಲಗುವುದೆನುತ
ಗ್ರಹಿಸದೆದಹಿಸಿದ್ದು ಪೂರ್ವದ ಕರ್ಮವು
ದಹಿಸ ಬಹುದೆ ಪಾಪಿ ಉಪದೇಶವಿಲ್ಲದೆಂ
ದಹಿವೇಣೀ ಮನದಿ ಮರುಗಿದಳು ‖ ೨೨

ಅತ್ತಲು ಶಾಸನದೇವತೆ ಮುನಿಯೆ
ಅರ್ಥವು ಮೊದಲಾದ ವಸ್ತುಸಂಚಯವು
ಮತ್ತೆಲ್ಲವದೃಶ್ಯವಾಗಲು ದಾರಿದ್ರ್ಯಾ
ವಸ್ಥೆಯು ದೊರಕೊಳೆರಾಯನು ಸತಿಗೂಡಿ
ಚಿತ್ತೈಸಿದನಂದು ಪುರದಿಂದ ‖ ೨೩

ಅಂತವರೀರ್ವರು ತೊಳಲುತ ಬರುತ
ನಿಂತಿರ್ದ ಮುನಿಗಳು ದೂರದೊಳ್ಕಂಡು
ಅಂತರಂಗದೊಳ್ ನಮಗಿಂತಾದುದುಸುರ್ದರೆ

ಪಂಥವಿಡದೆ ಪಾದಾಕ್ರಾಂತನಾಗುವೆನೆಂದು
ಚಿಂತಿಸುತಾ ರಾಯ ನಡೆತಂದ ‖ ೧೪

ಬಾರಯ್ಯ ಭೂಪಾಲ ತುಂಗವಿಕ್ರಮನೆ
ಮಾರವಿಜಯನಿತ್ತ ಜಿನರ ದಾರವನು
ನಾರೀಗುಣವತಿಯ ತೋಳೊಳಗಿರ್ದುದ
ಸಾರವನರಿಯದೆ ಉರುಹಿದ ಕಾರಣ
ಘೋರಕೋಟಲೆಗೆ ಗುರಿಯಾದೆ ‖ ೧೫

ದಾರವು ಚೋರಾರಿ ಮಾರಿನಿಗ್ರಹವು
ದಾರವು ಘೋರಾಹಿವ್ಯಾಘ್ರಾಪಹರವು
ದಾರವು ದಾರಿದ್ರ್ಯ ದುಃಖಸಂಹಾರವು
ದಾರವು ಘಾತಿಸಂಹಾರವೆಂದರಿಯದೆ
ದಾರವನು ಉರುಹಿದೆ ‖ ೧೬

ದಾರವೆ ಸಕಲಸಂಹಾರಕಾರಣವು
ದಾರವೆ ಮುಕ್ತಿಯ ಕಾಮಿನೀಹಾರ
ದಾರವೆ ಸಕಲಸಂಪದಕೆ ಕಾರಣವು
ದಾರವೆ ವ್ರತಕೆ ಆಧಾರವೆಂದರಿಯದೆ
ದಾರವನು ಉರುಹಿದೆ ‖ ೧೭

ಮಂದಬುದ್ಧಿಯ ಬಿಟ್ಟು ಮುಂದೆ ಈ ವ್ರತವ
ಒಂದೇ ಮನದಿ ಮಾಡೆಬಂದ ದುಷ್ಕೃತವ
ನಂದಿಸಿ ಕಳೆದು ಸಕಲಸಾಮ್ರಾಜ್ಯವ
ತಂದಿತ್ತು ಪಾತಾಳಯಕ್ಷ ರಕ್ಷಿಪನೆನೆ
ವಂದನೆ ಮಾಡಿ ಮರಳಿದ ‖ ೧೮

ಮುನಿವರರಪ್ಪಣೆಯಿಂದಲಿ ವ್ರತವ
ವನಿತೆ ಸಹಿತವಾಗಿ ಕೈಕೊಂಡು ಪಥವ
ವಿನಯದಿ ಬರುತಿರಲೊಂದು ರಾತ್ರಿಯೊಳು
ಕನಸಿನೊಳ್ ಶುಭಫಲ ಸೂಚನೆಯನು ತಿಳಿ
ದನುವಾಗಿ ನಂಬಿ ಇರುತಿರೆ ‖ ೧೯

ತುಂಗಭುಜಬಲರಾಯನಂಗನೆಗೂಡಿ
ಅಂಗಜಮಲ್ಲನ ವ್ರತವನು ಮಾಡಿ
ಭಂಗವಾಗಿಹ ರಾಜ್ಯದಂಗನೆಗೆ ವರನಾಗಿ

ಹಿಂಗದೆ ಸುಖಮಿರ್ದ ತುಂಗ ವಿಕ್ರಮನಿಗೆ
ಮಂಗಳಮಸ್ತು ಶುಭಮಸ್ತು ‖ ೩೦

ವೃದ್ಧಯುವಕದರಿದ್ರಧನಿಕರೆಂದು
ಮುದ್ದು ಯುವತಿ ವೃದ್ಧೆಯೆಂದೆನ್ನದೆ
ಇದ್ದ ವಸ್ತುವಿನೊಳು ಶಕ್ತ್ಯನುಸಾರದಿ
ಶುದ್ಧಭಾವದಿ ನೋಂತು ಪಡೆದ ಸೌಭಾಗ್ಯವ
ಇದ್ದು ನೀವೆಲ್ಲ ಸುಖಿಯಾಗಿ ‖ ೩೧

ಇಂತಿಹ ವ್ರತವನ್ನು ಮಾಡಿದವರಿಗೆ
ಸಂತೋಷದಿಂದನುಮೋದಬಟ್ಟವರ್ಗೆ
ಚಿಂತಿತಫಲವಿತ್ತನಂತಜಿನೇಂದ್ರರು
ಸಂತತ ಸೌಭಾಗ್ಯ ಸಂಪದವಿತ್ತು
ಶಾಂತಮೂರುತಿಯು ಸಲಹಲಿ ಶೋಭನ ‖ ೩೨

**೫೯. ಹಿಗ್ಗುವೆಯಾಕೋ**

**ರಾಗ : ಮಾಂಜಿ ತಾಳ : ಅಟ್ಟತಾಳ**

ಹಿಗ್ಗುವೆ ಯಾಕೋ ಈ ದೇಹಕ್ಕೆ ‖ ಪಲ್ಲವಿ

ಹಿಗ್ಗುತ ತಗ್ಗತ ಮುಗ್ಗತ ಕುಗ್ಗುತ
ಅಗ್ನಿಯೊಳಗೆ ದಗ್ಧವಾಗುವ ದೇಹಕ್ಕೆ ‖ ೧

ನವ ವಿಧದ್ವಾರದಿ ಮಲಮೂತ್ರಗಳಿಂದ
ನೀರಿಲ್ಲದಿದ್ದರೆ ನಾರುವ ದೇಹಕ್ಕೆ ‖ ೨

ಏಳುತ್ತ ಬೀಳುತ್ತ ಬಾಳುತ್ತ ಬದುಕುತ್ತ
ಹೇಳದೆ ಹೋಗುವ ಹಾಳಾದ ದೇಹಕ್ಕೆ ‖ ೩

ಆಗಬೋಗಗಳೆಲ್ಲವಾಗ ಮಾಡುತಲಿದೆ
ರೋಗ ಬಂದರೆ ತಾನೇ ಹೋಗುವ ದೇಹಕ್ಕೆ ‖ ೪

ನರರ ಸೇವೆಯ ಮಾಡಿ ನರಕ ಭಾಜನನಾಗಿ
ಉರುಳುತ್ತುರುಳಿ ಬಿದ್ದು ನರಳುವ ದೇಹಕ್ಕೆ ‖ ೫

ಸತಿ ಪುರುಷರು ತಮ್ಮ ರತಿಕ್ರೀಡೆಯನಾಡಿ
ಪ್ರಥಮದಿಂದ್ರಿಯಭವ ಪ್ರತಿಮೆಯೆ ದೇಹಕ್ಕೆ ‖ ೬

ಪುರುಪರಮೇಶನ ಚರಣಕಮಲಗಳಿ
ಗೆರಗದೆಯಿರುವಂಥಾ ಗರ್ವಿಪ ದೇಹಕ್ಕೆ ‖ ೭

**<u>೬೦. ದೇಹವಿದ್ದೇನುಸಾರ್ಥ</u>**

**ರಾಗ : ಕಲ್ಯಾಣಿ ತಾಳ : ಅಟ್ಟತಾಳ**

ದೇಹವಿದ್ದೇನು ಸಾರ್ಥ ಪಂಚೇಂದ್ರಿಯದಿಂ
ದೇವ ನಿನ್ನೊಲಿಸದಂಥಾ
ದೇವ ನಿನ್ನನು ನೋಡಿ ಕಣ್ದಣಿ
ಜಾವಜಾವಕೆ ಪಾಡಿ ಮಿಗೆ ಸ
ದ್ಭಾವದಿಂದರ್ಚಿಸುತ ನಮಿಸದ ಹೇಯದವಯವನುಳ್ಳ ಈ ನರ ‖ ಪಲ್ಲವಿ

ಸನ್ನುತಾಗಮವ ನೋಡಿ ನಿನ್ನಯ ನಾಮವನ್ನು ಕೊಂಡಾಡಿ ಪಾಡಿ
ನಿನ್ನ ನಾಮರಸಾಯನಾಮೃತವನ್ನು ಸೇವಿಸದನ್ಯಸತಿಯಧರಾಮೃತ
ವನುರೆ ಹೇಯದೀಂಟುವ ಕುನ್ನಿಜಿಹ್ವೆಯನುಳ್ಳ ಈ ನರ ‖ ೧

ಅಂಗಜ ಮದಮರ್ದನನ ಭವ್ಯರ ಭವಭಂಗಿಪ ಚಿನುಮಯನ
ಮಂಗಳಾಂಘ್ರಿ ಪಯೋಜಪರಿಮಳ ಭೃಂಗನೆನಿಸದೆ ಪರರ ಹೆಂಗಳ
ಅಂಗಲಿಪ್ತಸುಗಂಧಕೆಳಸುವ ಕೊಂಕು ಘ್ರಾಣಗಳುಳ್ಳ ಈ ನರ ‖ ೨

ಚೆಲುವ ಶ್ರೀ ತವ ಬಿಂಬವ ನೇತ್ರದಿ ಕಂಡು ನಲಿದಭಿಷವ ಮಾಡದ
ಹಲವು ಸಂಭ್ರಮಕೊಲಿದು ಬಾಷ್ಪದ ಜಲವ ತುಳುಕದ ಅನ್ಯಸತಿಯರ
ಚೆಲುವ ದೇಹವ ನೋಡಿ ಮೋಹಿಪ ಕೊಳಕು ನಯನಗಳುಳ್ಳ ಈ ನರ ‖ ೩

ತತ್ತ್ವಶಾಸ್ತ್ರಗಳ ಕೇಳಿ ನಿನ್ನಯ ಸುಚಾರಿತ್ರಕ್ಕಾಮೋದ ತಾಳಿ
ಧಾತ್ರೀಸುಖವನು ತೊರೆದು ಮುಕ್ತಿಗೆ ಪಾತ್ರನೆನಿಸದೆ ವಿಟರ ದುಶ್ಚಾ
ರಿತ್ರವನೆ ನೆರೆ ಕೇಳಿ ಹಿಗ್ಗುವ ಶ್ರೋತ್ರಗಳು ತಳೆದಿರ್ಪ ಈ ನರ ‖ ೪

**<u>೬೧. ಧ್ಯಾನವಮಾಡಿರೊ</u>**

ಧ್ಯಾನವ ಮಾಡಿರೊ ಜಿನೇಶ್ವರ
ಧ್ಯಾನವ ಮಾಡಿರೋ ‖ ಪಲ್ಲವಿ

ಮಾನವ ಜನರಿಗೆ ಮತಿಕೊಡುವ ಮಹಾತ್ಮನ್ನ
ಸ್ತುತಿ ಮಾಡಿ ಯುಕ್ತಿಲಿಂದ ಗತಿ ಎಂಬೊ ಮುಕ್ತಿಪಡಿರೋ ‖ ೧

ಪರಮ ಪಾವನ ಮೂರ್ತಿ ಧರೆಯೊಳು ಅವರ ಕೀರ್ತಿ
ಅರಹಂತ ದೇವರನ್ನ ಮರಿಯದೆ ಭಜಿಸಿರೊ ‖ ೨

ಮಸಿನ ಮಡಿಉಟ್ಟು ಶಿಸ್ತಿಲಿಂದಲಿ ಬಂದು
ಮನಮುಟ್ಟಿ ಪೂಜಿಸ ಗಡನೆ ಗತಿ ಪಡೆಯಿರೋ ॥ ೩

ತಿಗಡೊಳ್ಳಿ ಊರಲ್ಲಿ ಹೊಸದಾದ ಬಸ್ತಿಯಲ್ಲಿ
ವಾಸ ಮಡಿದ ಪಾಸಮೂರ್ತಿ ಮರಿಕಲ್ಲ ಮಾಡಿದ ಸ್ತುತಿ ॥ ೪

**೬೨. ಜೈನಧರ್ಮದಕ್ರಿಯಾ**

ಜೈನ ಧರ್ಮದ ಕ್ರಿಯಾ ಹೇಳತೇವ ತಗದ ಬಾಯಾ
ನನ್ನ ಮ್ಯಾಲ ನಿಮ್ಮ ದಯಾ ಇರಬೇಕ ಪೂರ್ಣಾ
ಶಾಂತದಿಂದ ಕೇಳರಿ ಸರ್ವಜನಾ ॥ ಪಲ್ಲವಿ

ಜೈನರಾಗಿ ಜನಿಸಿದ ಬಳಿಕ ಕ್ರಮನೋಡಿ ನಡಿಬೇಕ
ಪಾಪಪುಣ್ಯ ಅರಿಬೇಕ ತಿಳದ ನುಡಿ ಆಡಬೇಕ
ಆಹಾರ ನೋಡಿ ಮಾಡಬೇಕು ನೋಜನಾ
ನೀರ ಸೋಸಿ ಕುಡೀರಿ ಪ್ರತಿದಿನಾ ॥ ೧

ಪಾತಾಳ ಬಟ್ಟಿ ತಗೋಬೇಕ ಜೋಡಪದರ ಮಾಡಬೇಕ
ಬಾಂವಿಯಲ್ಲಿ ಸೋಸಬೇಕ
ಅರವಿ ತೊಳದ ಮಾಡಬೇಕು ಹಸನಾ
ಇದರಂತ ಮಾಡ್ರಿ ಹಾಲುಹೈನಾ ॥ ೨

ಮೈಲಿಗಿ ಬಟ್ಟಿ ಇರಬಾರದ ಉಪಯೋಗ ಮಾಡಿರಬಾರದ
ಚಿದ್ರ ಪದ್ರ ಆಗಿರಬಾರದ
ನಿಮ್ಮ ಮುಂದ ಮಾಡುವೆ ವರ್ಣನಾ
ಇಲ್ಲದಿದ್ರ ಕೊಲ್ಲುವಿರಿ ಕ್ರಿಮಿಗಳನಾ ॥ ೩

ಮಲಿನ ಬಟ್ಟಿ ಇರಬಾರದಂತ ಹೇಳತೇನ ನಾನಿಂತ
ಕೇಳಬಹುದ ಯಾಕಂತ
ಭಗವಂತನ ನೈವೇದ್ಯ ಆಗೋದ ಅನ್ನಾ
ಗುರುಗಳಿಗೆ ಕೊಡತೇರಿ ಆಹಾರವನ್ನಾ ॥ ೪

ನೀರ ಸೋಸಿ ಕುಡಿದಿದ್ದರ ಆಹಾರ ನೋಡಿ ಉಣದಿದ್ದರ
ದಾರಿ ನೋಡಿ ನಡಿದಿದ್ದರ
ಊರ ಸುಟ್ಟ ಮಾಡಿದಂತೆ ದಹನಾ
ತಟ್ಟುವದು ಪಾಪದ ಬಂಧನಾ ॥ ೫

ತಿಗಡೊಳ್ಳಿ ಊರಸಿಸ್ತಿ ಬಸ್ತಿಯಲ್ಲಿ ಭಗವಂತ
ಜಿನೇಶ್ವರ ಅರಿಹಂತ
ಮಾಡುತೇವ ನಾವು ಧ್ಯಾನಾ
ಇದು ಮರಿಕಲ್ಲನ ಕವನಾ ॥ ೬

**<u>೬೩. ಜೈನರಾಗಿಹುಟ್ಟಿಬಂದ</u>**

ಜೈನರಾಗಿ ಹುಟ್ಟಿಬಂದ ಣಮೋಕಾರ ಮಂತ್ರ ಒಂದ
ಅನಬೇಕ ಬಸ್ತಿಗಿ ಬಂದ ಮನಾ ತೊಳದ ಮಾಡಬೇಕು ಜಳಕ
ಸಂದೇಹವಿಲ್ಲದ ದೊರಕುವದು ಮೋಕ್ಷ ॥

ಪುಣ್ಯ ಪಡಿಯುವುದಕ್ಕ ಹುಣವಿ ನೋಂಪಿ ಬೆಳಗಬೇಕು
ಸಿದ್ಧಶಾಸ್ತ್ರ ಓದಬೇಕ ಆಹಿಂಸಾದಿಂದ ಸಾಗಬೇಕ
ಸತ್ಯಾಸತ್ಯೆ ತಿಳದ ನಡಿಯಬೇಕು ॥

ತೀರ್ಥಕ್ಷೇತ್ರ ನೋಡಬೇಕು ದಾನಧರ್ಮ ಮಾಡಬೇಕ
ಪುಣ್ಯೇದ ಗಂಟ ಕಟ್ಟಬೇಕ ಮಾಡಿ ಇಟ್ಟಾಂಗ ಸ್ವಾಕ
ದೊರಕೀತ ಮುಂದೀನ ಜನ್ಮಕ್ಕ ॥

ಬೈಲಹೊಂಗಲ ತಾಲೂಕ ತಿಗಡೊಳ್ಳಿ ಊರಚೊಕ್ಕ
ಎಲ್ಲಾರು ಬರಬೇಕು ಜಿನೇಶ್ವರನ ದರ್ಶನಕ
ಮರಿಕಲ್ಲ ಸಖಿ ಹೇಳಿದ ಖಡಕ ॥

# ಅನುಬಂಧ (೦೧-೦೨)

**<u>೧. ಪಾರಿಭಾಷಿಕಪದಕೋಶ</u>**

**ಅಷ್ಟಾಂಗಯೋಗ :** ೧. ತನ್ನ ಸತ್ಯಮಾರ್ಗಾವಲಂಬನೆಯಲ್ಲಿ ಸಂಶಯವಿಲ್ಲದಿರುವುದು ನಿಃಶಂಕಯೋಗ. ೨. ಯಾವ ವಿಧದ ತಾರ್ಕಿಕ ಸುಖದ ಆಶೆಯೂ ಇಲ್ಲದಿರುವುದು ನಿಃಕಾಮಕ್ಷತಯೋಗ. ೩. ಅನ್ಯರಲ್ಲಿ ಹೇಸಿಕೆ ತೋರದಿರುವುದೂ, ಅಪವಿತ್ರತೆಯನ್ನು ಕಾಣದಿರುವುದೂ ನಿರ್ವಿಚಿಕಿತ್ಸಾಯೋಗ. ೪. ಅಸತ್ಯಚರಣೆಯುಳ್ಳವನೊಡನೆ ಸಹಕರಿಸದಿರುವುದು ಅಮೂಢ ದೃಷ್ಟಿಯೋಗ. ೫. ಅಜ್ಞಾನಿಗಳಿಂದ ಆಗುವ ಸನ್ಮಾರ್ಗದ ನಿಂದೆಯನ್ನು ತಪ್ಪಿಸುವುದು ಉಪಗೂಹನಯೋಗ. ೬. ಸನ್ಮಾರ್ಗದಿಂದ ಬೇರೆಯಾಗುವವರಿಗೆ ಯೋಗ್ಯದಾರಿ ತೋರುವುದು ಸ್ಥಿರೀಕರಣಯೋಗ. ೭. ಸತ್ಯರೂಪಾದಿಗಳನ್ನು ಸ್ನೇಹದಿಂದ ಕಾಣುವುದು ವಾತ್ಸಲ್ಯಯೋಗ. ೮. ದೂರಮಾಡಲು ಯತ್ನಿಸುವುದು ಪ್ರಭಾವನಾಯೋಗ.

**ಅಸಿಆಉಸ :** ಅರಿಹಂತರು, ಸಿದ್ಧರು, ಆಚಾರ್ಯರು, ಉಪಾಧ್ಯಾಯರು ಮತ್ತು ಸರ್ವಸಾಧುಗಳೆಂಬ ಪಂಚಪರಮೇಷ್ಠಿಗಳು.

**ಅಸ್ತಿಕಾಯಗಳು ಐದು :** ಜೀವಾಸ್ತಿಕಾಯ, ಪುದ್ಗಲಾಸ್ತಿಕಾಯ, ಧರ್ಮಾಸ್ತಿಕಾಯ, ಅಧರ್ಮಾಸ್ತಿಕಾಯ ಮತ್ತು ಆಕಾಶಾಸ್ತಿಕಾಯ.

**ಆರುದ್ರವ್ಯಗಳು :** ಜೀವ, ಪುದ್ಗಲ, ಧರ್ಮ, ಅಧರ್ಮ-ಆಕಾಶ ಮತ್ತು ಕಾಲ.

**ಒಂಬತ್ತು ಪದಾರ್ಥಗಳು :** ಜೀವ, ಅಜೀವ, ಆಸ್ರವ, ಬಂಧ ಪುಣ್ಯ, ಪಾಪ, ಸಂವರ, ನಿರ್ಜರ, ಮೋಕ್ಷ.

**ಚತುಸ್ಸಂಘ :** ಶ್ರಾವಕ, ಶ್ರಾವಿಕಾ, ಮುನಿ ಮತ್ತು ಆರ್ಯಿಕಾ ಇದನ್ನೇ ಇಲ್ಲಿ ನಾಲ್ಕು ಸಂಘವೆಂದು ಹೇಳಿದೆ.

**ತ್ರಿಗುಪ್ತಿ :** ಕಾಯ, ವಚನ ಮತ್ತು ಮನಸ್ಸು.

**ತ್ರಿಮೂಢ :** ಜೈನನು ರಾಗ ದ್ವೇಷಗಳಿಂದ ಕೂಡಿದ ವ್ಯಕ್ತಿಗಳನ್ನು ದೇವರೆಂದು ಭಾವಿಸುವುದಿಲ್ಲ. ಹಾಗೆ ಭಾವಿಸಿದರೆ ಅದು ದೇವ ಮೂಢಯೆಂದು ತಿಳಿಯುವನು. ಹೀಗೆಯೇ, ಸಂಸಾರದಲ್ಲಿ ಬಿದ್ದವರ, ಒಂದಿಲ್ಲೊಂದು ಪರಿಗ್ರಹದಿಂದ ಪೀಡಿತರಾದ, ಹಿಂಸಾಪ್ರಚೋದಕರಾದ ಜನರನ್ನು ಗುರುವೆನ್ನುವುದಿಲ್ಲ. ಅನ್ನುವುದಾದರೆ ಅದು ಗುರುಮೂಢ ಎನಿಸಿಕೊಳ್ಳುವುದು. ಸೂರ್ಯನಿಗೆ ಅರ್ಘ್ಯಕೊಡುವುದು, ಗ್ರಹಣಸ್ನಾನ, ಸಂಕ್ರಾಂತಿದಾನ, ಸಂಧ್ಯಾಕಾಲದಲ್ಲಿ ಅಗ್ನಿ ಹೋತ್ರ ಮುಂತಾದುವುಗಳು ಜೈನಧರ್ಮದಂತೆ ನಿಷೇಧ. ಅದನ್ನು ಆಚರಿಸಿದರೆ ಆಗ ಅದು ಲೋಕಮೂಢ ಎನಿಸಿಕೊಳ್ಳುತ್ತದೆ.

**ದಶಧರ್ಮ :** ಕ್ಷಮೆ, ಮಾರ್ದವ, ನಿಷ್ಕಪಟ, ಸತ್ಯ, ನಿರ್ಲೋಭ, ಸಂಯಮ, ತಪ, ತ್ಯಾಗ, ಪರಿಗ್ರಹತ್ಯಾಗ ಮತ್ತು ಬ್ರಹ್ಮಚರ್ಯ.

**ದಶಭಕ್ತಿ :** ೧. ಸಿದ್ಧಭಕ್ತಿ. ೨. ಚೈತ್ಯಭಕ್ತಿ. ೩. ಪಂಚಗುರುಭಕ್ತಿ. ೪. ಶಾಂತಿಭಕ್ತಿ. ೫. ಸಮಾಧಿಭಕ್ತಿ. ೬. ಶ್ರುತಭಕ್ತಿ. ೭. ಚಾರಿತ್ರಭಕ್ತಿ. ೮. ಆಚಾರ್ಯಭಕ್ತಿ. ೯. ಯೋಗಭಕ್ತಿ. ೧೦. ನಿರ್ವಾಣಭಕ್ತಿ.

**ದಶಲಕ್ಷಣ ಶಾಸ್ತ್ರ :** ಧರ್ಮ ಹತ್ತು ಲಕ್ಷಣಗಳು : ಉತ್ತಮ ಕ್ಷಮಾ, ಉತ್ತಮ ಮಾರ್ದವ, ಉತ್ತಮ ಆರ್ಜವ, ಉತ್ತಮ ಶೌಚ. ಉತ್ತಮ ಸತ್ಯ, ಉತ್ತಮ ಸಂಯಮ, ಉತ್ತಮ ತಪ, ಉತ್ತಮ ತ್ಯಾಗ, ಉತ್ತಮ ಆಕಿಂಚನ್ಯ ಮತ್ತು ಉತ್ತಮ ಬ್ರಹ್ಮಚರ್ಯ.

**ದ್ವಾದಶಾಂಗಶ್ರುತ :** ಜೈನಶ್ರುತಕ್ಕೆ ಹನ್ನೆರಡು ಅಂಗಗಳಿವೆ. ೧. ಆಚಾರಾಂಗ, ೨. ಸೂತ್ರಕೃತಾಂಗ, ೩. ಸ್ಥಾನಾಂಗ, ೪. ಸಮ ವಾಯಾಂಗ, ೫. ವ್ಯಾಖ್ಯಾಪ್ರಜ್ಞಪ್ತಿ, ೬. ಜ್ಞಾತ ಧರ್ಮಕಥಾ, ೭. ಉಪಾಸಕಾಧ್ಯಯನ, ೮. ಅಂತಃಕೃದ್ಧಶಾ, ೯. ಅನುತ್ತರ, ೧೦. ಪ್ರಶ್ನ ವ್ಯಾಕರಣ, ೧೧. ವಿಪಾಕ, ೧೨. ಸೂತ್ರಕೃತಾಂಗ. ಮೊದಲ ಹನ್ನೊಂದನ್ನೇ ಇಲ್ಲಿ ಏಕಾ ದಶಶ್ರುತಗಳೆಂದು ಹೇಳುತ್ತಾರೆ.

**ದ್ವಾದಶಾನುಪ್ರೇಕ್ಷೆ :** ಧ್ಯಾನದಲ್ಲಿ ಮನವನ್ನು ಕೇಂದ್ರೀಕರಿಸಲಿಕ್ಕಾಗಿ ಆಗಿಂದಾಗ್ಗೆ ಕೆಲವು ಚಿಂತೆಗಳನ್ನು ಮಾಡಬೇಕು. ಇವಕ್ಕೆ ಅನುಪ್ರೇಕ್ಷೆಗಳೆಂದು ಹೆಸರು. ೧. ಸಂಸಾರ ಸ್ಥಿರವಲ್ಲವೆಂದು ಚಿಂತಿಸುವ ಅನಿತ್ಯಾನುಪ್ರೇಕ್ಷೆ. ೨. ಧರ್ಮವನ್ನು ಬಿಟ್ಟರೆ ಆತ್ಮರಕ್ಷಣೆಯಾಗದೆಂದು ಭಾವಿಸುವ ಅಶರಣಾನುಪ್ರೇಕ್ಷೆ. ೩. ಲೋಕದ ನಿಜಸ್ವರೂಪವರಿವುದು ಸಂಸಾರಾನುಪ್ರೇಕ್ಷೆ. ೪. ಕರ್ಮಕ್ಕೆ ತನ್ನಾತ್ಮನೊಬ್ಬನೇ ಹೊಣೆಯಂದು ಯೋಚಿಸುವುದು ಏಕತ್ವಾನುಪ್ರೇಕ್ಷೆ. ೫. ದೇಹ, ಪತ್ನೀಪುತ್ರರೂ ನನ್ನವರಲ್ಲವೆನ್ನುವುದು ಅನ್ಯತ್ವಾನುಪ್ರೇಕ್ಷೆ. ೬. ದೇಹವು ಮಲಿನಮಯವೆನ್ನುವುದು ಅಶುಚಿತ್ವಾನುಪ್ರೇಕ್ಷೆ. ೭. ಯಾವುದರಿಮದ ಕರ್ಮಬಂಧವಾಗುವುದೋ ಅದು ಆಸ್ರವಾನುಪ್ರೇಕ್ಷೆ. ೮. ಆಸ್ರವ ನಿರೋಧ ಚಿಂತಿಸುವುದು ಸಂವರಾನುಪ್ರೇಕ್ಷೆ. ೯. ಕರ್ಮಕ್ಷಾಲನ ಮಾಡುವ ಭಾವನೆಯ ನಿರ್ಜರಾನುಪ್ರೇಕ್ಷೆ. ೧೦. ಜಗತ್ತಿನ ಅರಿವಾಗುವುದು ಲೋಕಾನುಭವಾನುಪ್ರೇಕ್ಷೆ. ೧೧. ಸಮ್ಯಕ್ತ್ವವು ಸುಲಭ ಸಾಧ್ಯವಲ್ಲವೆಂಬ ಸಾಧನೆ ಬೋಧಿದುರ್ಲಭಾನುಪ್ರೇಕ್ಷೆ. ೧೨. ಧರ್ಮವೇ ಆತ್ಮನ ನಿಜಸ್ವರೂಪವೆಂಬ ಭಾವನೆ ಧರ್ಮಾನುಪ್ರೇಕ್ಷೆ.

**ನಾಲ್ಕುದಾನ :** ಆಹಾರ, ಅಭಯ, ಔಷಧ ಮತ್ತು ಶಾಸ್ತ್ರದಾನ.

**ಪಂಚಕಲ್ಯಾಣ :** ತೀರ್ಥಂಕರನಾಗುವಂಥ ಭವ್ಯ ಜೀವವು ತನ್ನ ಕೊನೆಯ ಜನ್ಮಕ್ಕೆ ತಾಯಿಯ ಗರ್ಭಕ್ಕೆ ಅವತರಿಸುವಂದಿನಿಂದ

ನಡೆಯುವ ಐದು ಮಹಾಮಂಗಳಗಳೇ ಪಂಚಕಲ್ಯಾಣಗಳು. ಗಭಾಂವತರಣ ಕಲ್ಯಾಣ, ಜನ್ಮಾಭಿಷೇಕ ಕಲ್ಯಾಣ, ಪರಿನಿಷ್ಕ್ರಮಣ ಕಲ್ಯಾಣ, ಕೇವಲಜ್ಞಾನ ಕಲ್ಯಾಣ ಮತ್ತು ಮೋಕ್ಷ ಕಲ್ಯಾಣಗಳೇ ಈ ಐದು ಕಲ್ಯಾಣಗಳು.

**ಪಂಚಮಹಾವ್ರತ :** ಅಹಿಂಸೆ, ಸತ್ಯ, ಅಚೌರ್ಯ, ಬ್ರಹ್ಮಚರ್ಯ, ಪರಿಗ್ರಹ ಪರಿಮಾಣ. ಪಂಚಾಣುವ್ರತಗಳೆಂದರೂ ಇವೇ.

**ಪಂಚಾಚಾರ :** ದರ್ಶನ, ಜ್ಞಾನ, ಚಾರಿತ್ರ, ತಪ ಮತ್ತು ವೀರ್ಯ.

**ಭವ್ಯ :** ಸಿದ್ಧ ಸ್ಥಿತಿಯನ್ನು ಹೊಂದುವ ಯೋಗ್ಯತೆ ಇರುವ ಜೀವಕ್ಕೆ ಭವ್ಯವೆಂದು ಹೆಸರು. ಇಂಥಾ ಯೋಗ್ಯತೆಯುಳ್ಳವರೆಲ್ಲರೂ ಭವ್ಯರೇ.

**ಪ್ರೋಷಧೋಪವಾಸ :** ಪ್ರತಿ ಅಷ್ಟಮೀ ಚತುರ್ದಶಿ ತಿಥಿಗಳಲ್ಲಿ ಉಪವಾಸವನ್ನು ಆಚರಿಸುವುದು.

**ರತ್ನತ್ರಯ :** ಸಮ್ಯಗ್ದರ್ಶನ, ಸಮ್ಯಗ್ ಜ್ಞಾನ ಮತ್ತು ಸಮ್ಯಕ್ಚಾರಿತ್ರ. ಒಂದು ಜೀವವು ಮುಕ್ತಿ ಹೊಂದಬೇಕಾದಾಗ ಆ ಸಾಧನೆಗೆ ತನ್ನ ಅತ್ಮವನ್ನು ಸಿದ್ಧಗೊಳಿಸಬೇಕಾಗುತ್ತದೆ. ಈ ಸಿದ್ಧತೆಗೆ ತತ್ವಜ್ಞಾನ ಅವಶ್ಯಬೇಕು. ಏಕೆಂದರೆ ಇದರಿಂದ ಆತ್ಮ ಅನಂತ ಶಕ್ತಿಯುತವಾದುದೆಂದೂ, ದೇಹವು ಕೇವಲ ಕರ್ಮಕಟ್ಟುವಿಕೆಯಿಂದಾಗಿರುವ ಪರಿಣಾಮವೆಂದೂ ನಿಶ್ಚಯವಾದ ತಿಳಿವನ್ನು ಪಡೆಯಬಹುದು. ಇಂಥಾ ತತ್ವವನ್ನು ಬೋಧಿಸಿರುವ ಜಿನೇಶ್ವರನ, ಅವನಂತೆ ಆಚರಣೆ ಯುಳ್ಳವರಲ್ಲಿ ಮತ್ತು ಅವರ ಬೋಧನೆಯಲ್ಲಿ ಇರುವ ಜ್ಞಾನ ಸಮ್ಯಗ್ ಜ್ಞಾನ. ಅರಿತಮೇಲೆ ಅದರಂತೆ ನಡೆವುದು ಸಮ್ಯಕ್ಚಾರಿತ್ರ. ಇವುಗಳನ್ನೆ ಇಲ್ಲಿ ಮೂರು ರನ್ನವೆಂದೂ ಹೇಳಲಾಗಿದೆ.

**ವಿದೇಹ ಕ್ಷೇತ್ರ :** ಶುದ್ಧ ಧರ್ಮಾಚರಣೆಯಿಮದ ಜೀವನಿಗೆ ಮೋಕ್ಷ ಪ್ರಾಪ್ತಿಯಾಗುವ ಕ್ಷೇತ್ರ. ಸೀತಾ, ಸಿತೋದಾ ನದಿಗಳೂ ನೂರಹನ್ನೆರಡು ಸಾವಿರ ಉಪನದಿಗಳು ಇಲ್ಲಿ ಪ್ರವಹಿಸುತ್ತವೆ. ಗೋಲಾಕಾರದ ಸುಮೇರು ಪರ್ವತವಿಲ್ಲಿದೆ. ಇದಕ್ಕೆ ಉತ್ತರ ದಕ್ಷಿಣ ಭಾಗಗಳಲ್ಲಿ ಉತ್ತಮ ಭೋಗಭೂಮಿಗಳೂ, ಪೂರ್ವ, ಪಶ್ಚಿಮಗಳಲ್ಲಿ ಕರ್ಮ ಭೂಮಿಗಳೂ ಉಂಟು. ಒಂದೊಂದರಲ್ಲೂ ಒಂದೊಂದು ವಿಜಯಾರ್ಧ ಪರ್ವತ, ಉಪನದಿಗಳೂ ಉಂಟು. ಹೀಗಾಗಿ ಪ್ರತಿಯೊಂದೂ ಆರು ಖಂಡಗಳಾಗಿ ವಿಭಾಗಿಗೊಂಡಿವೆ.

**ಶಲಾಕಾಪುರುಷರು :** ೨೪ ತೀಥಂಕಕರು, ೧೨ ಚಕ್ರವರ್ತಿಗಳು, ೯ ನಾರಾಯಣರು, ೯ ಪ್ರತಿನಾರಾಯಣರು ಮತ್ತು ೯ ಬಲಭದ್ರರೂ ಸೇರಿ ೬೩ ಜನ ಶಲಾಕ ಪುರುಷರೆನಿಸುತ್ತಾರೆ.

**ಶುಕ್ಲಧ್ಯಾನ :** ಶುಭಧ್ಯಾನ.

**ಷೋಡಶಭಾವನೆ :** ದರ್ಶನವಿಶುದ್ಧಿ, ವಿನಯಸಂಪನ್ನತೆ, ಶೀಲವ್ರತೇಷ್ವನತಿಚಾರ, ಅಭೀಕ್ಷ್ಣ ಜ್ಞಾನೋಪಯೋಗ, ಸಂವೇಗ, ಶಕ್ತಿತಸ್ತ್ಯಾಗ, ತಪ, ಸಾಧುಸಮಾಧಿ, ವೈಯಾವೃತ್ಯ, ಅರ್ಹದ್ಭಕ್ತಿ, ಆಚಾರ್ಯಭಕ್ತಿ, ಬಹುಶ್ರುತಭಕ್ತಿ, ಪ್ರವಚನಭಕ್ತಿ, ಆವಶ್ಯಕಾ ಪರಿಹಾಣಿ,  ಮಾರ್ಗಪ್ರಭಾವನಾ ಮತ್ತು ಪ್ರವಚನವಾತ್ಸಲ್ಯ.

**ಸಪ್ತತತ್ವ :** ಜೀವ, ಅಜೀವ, ಅಸ್ರವ ಬಂಧ, ಸಂವರ, ನಿರ್ಜರ ಮತ್ತು ಮೋಕ್ಷ. ಜೀವಕ್ಕೆ ಕಟ್ಟುವ ಕರ್ಮವು ಅಜೀವ ತತ್ವದ ಅಂಶ. ಇದು ಕಟ್ಟಲಿಕ್ಕೆ ಕಾರಣವಾಗುವ ದೇಹ, ಮನಸ್ಸು ಮಾತು ಅಸ್ರವಗಳು. ಹೀಗೆ ಕಟ್ಟಿಕೊಳ್ಳುವ ಕ್ರಿಯೆಯೇ ಬಂಧ. ಕಟ್ಟಿದ ಕರ್ಮಗಳನ್ನು ಕಳೆಯುವುದೇ ನಿರ್ಜರೆ. ಬೇರೆ ಕರ್ಮಗಳು ಕಟ್ಟದಂತೆ ತಡೆಗಟ್ಟುವುದೇ ಸಂವರೆ. ಜೀವಕ್ಕೆ ಕರ್ಮವು ಪೂರ್ಣವಾಗಿ ನಾಶವಾದಾಗ ಉಂಟಾಗುವ ಶಾಂತಿ ಸ್ಥಿತಿಯೇ ಮೋಕ್ಷ.

**ಸಪ್ತವ್ಯಸನ :** ಜೂಜು, ಮಾಂಸಾಹಾರ, ಮದ್ಯಸೇವನೆ, ಬೇಟೆ, ವೇಶ್ಯಾಗಮನ, ಕದಿಯುವಿಕೆ ಮತ್ತು ಪರಸ್ತ್ರೀಚಿಂತೆ.

**ಸಮ್ಯಕ್ವ :** ದ್ರವ್ಯಗಳಾರು, ಅಸ್ತಿಕಾಯಗಳೈದು, ಪದಾರ್ಥಗಳು ಒಂಬತ್ತು. ಇವುಗಳ ಬಗ್ಗೆ ಜಿನೇಂದ್ರರ ಸತ್ಯಸ್ವರೂಪದ ಹೇಳಿಕೆಯಂತೆ ತಿಳುವಳಿಕೆ ಇಟ್ಟುಕೊಳ್ಳುವುದಕ್ಕೆ ಸಮ್ಯಕ್ತ್ವವೆಂದು ಹೆಸರು.

**ಸಾಮಾಯಿಕ :** ಸಂಧ್ಯಾಕಾಲಗಳಲ್ಲಿ ಏಕಾಂತದಲ್ಲಿ ಆತ್ಮಧ್ಯಾನ ಮಾಡುವುದು.

ಹತ್ತು ಅತಿಶಯಗಳು : ಕೇವಲ ಜ್ಞಾನವು ಪ್ರಾಪ್ತವಾದ ನಂತರ ಜಿನನಿರುವ ಸ್ಥಳದಿಂದ ನಾಲ್ಕು ದಿಕ್ಕುಗಳಲ್ಲೂ ನಾಲ್ಕುನೂರು ಹರಿದಾರಿಗಳ ತನಕ ಸುಭಿಕ್ಷ, ಆಕಾಶಗಮನ, ಅಹಿಂಸೆ, ನಿರಾಹಾರ, ನಿರುಪದ್ರವ, ನೋಡಲು ನಾಲ್ಕು ಮುಖಗಳು, ಸರ್ವಜ್ಞತ್ವ, ದೇಹದ ನೆರಳಿಲ್ಲದಿರುವಿಕೆ, ಕಣ್ಣು ರೆಪ್ಪೆಗಳ ಚಲನೆ ಇಲ್ಲದಿರುವುದು, ಉಗುರು ಕೂದಲುಗಳು ಬೆಳೆಯದಿರುವುದು ಇವುಗಳೇ ಹತ್ತು ಅತಿಶಯಗಳು.

**ಹದಿನೆಂಟು ದೋಷಗಳು :** ಕ್ಷುಧೆ, ತೃಷೆ, ಭಯ, ದ್ವೇಷ, ರಾಗ, ಮೋಹ, ಚಿಂತೆ, ಜರೆ, ರೋಗ, ಮೃತ್ಯ, ಖೇದ, ಕ್ರೋಧ, ಮದ, ಆರತಿ, ವಿಸ್ಮಯ, ಜನ್ಮ, ನಿದ್ದೆ ಮತ್ತು ವಿಷಾದ.

**ಹನ್ನೊಂದು ಶ್ರಾವಕ ಧರ್ಮ :** ಶ್ರಾವಕನು ತನ್ನ ಆತ್ಮಕಲ್ಯಾಣ ಸಾಧನೆಗೆ ವ್ರತ ನಿಯಮಗಳ ಕಟ್ಟಿನೊಳಗಿರಬೇಕು. ಅವನು ಆಚರಿಸಬೇಕಾದ ವ್ರತ ನಿಯಮಾದಿಗಳನ್ನು ಒಂದಾದ ಮೇಲೊಂದರಂತೆ ಕಾಲಾನುಕ್ರಮವಾಗಿ ಸಾಧಿಸಬೇಕು. ಇಂಥವು ಹನ್ನೊಂದು ತೆರನಾಗಿವೆ. ಒಂದು ಸಾಧನೆಯಲ್ಲಿ ಸಿದ್ಧಪಡೆದ ನಂತರ ಇನ್ನೊಂದರ ಸಾಧನೆ ಪ್ರಾರಂಭವಾಗುತ್ತದೆ. ಕೊನೆಯದರ ಸಾಧನೆಯಲ್ಲಿರುವಾಗ ಹನ್ನೊಂದು ಧರ್ಮಗಳೂ ಅವನಿಗೆ ಸಿದ್ಧಿಸಿರುತ್ತವೆ. ಈ ಹನ್ನೊಂದೂ ಅವನ ಸಾಧನೆಯ ತರಗತಿಗಳು. ಒಂದೊಂದು ತರಗತಿಯಲ್ಲಿರುವಾಗ ಅವನಿಗೆ ಒಂದೊಂದು ಹೆಸರಿರುತ್ತದೆ. ೧. ಪಂಚಾಣುವ್ರತ, ಎಂಟುಗುಣಗಳಿಂದ ಕೂಡಿ ಅವಶ್ಯವಿದ್ದಷ್ಟು ಭೋಗದಲ್ಲಿರುವವನು ದಾರ್ಶನಿಕ. ೨. ರಾಗದ್ವೇಷಗಳನ್ನು ಗೆದ್ದು ಸಮಭಾವವನ್ನು ಧರಿಸುವುದಕ್ಕಾಗಿ ವಿಹಾರ-ಸಂಚಾರ, ಅಪ್ರಯೋಜನಕ ಕಾರ್ಯ, ಭೋಗೋಪಭೋಗವಸ್ತುಗಳ ಉಪಯೋಗ ಇವುಗಳನ್ನು ಮಿತಿಯಲ್ಲಿಟ್ಟುಕೊಂಡು ಸಂಧ್ಯಾಕಾಲಗಳಲ್ಲಿ ಆತ್ಮಧ್ಯಾನ-ಅಷ್ಟಮೀ ಚತುರ್ದಶಿಗಳಲ್ಲಿ ಉಪವಾಸ, ಸಾಧುಗಳಿಗೆ ಆಹಾರ ದಾನ ಇವುಗಳನ್ನು ಬೆಳೆಸಿಕೊಂಡು ಬರುವವನು ವ್ರತಿಕ. ೩. ಮೂರು ಕಾಲಗಳಲ್ಲೂ ಪ್ರತಿದಿನವೂ ಆತ್ಮಧ್ಯಾನ ಮಾಡುವವನು ಸಾಮಾಯಿಕ. ೪. ಉಪವಾಸಗಳನ್ನು ವ್ರತವಾಗಿ ಹಿಡಿದವನು ಪ್ರೋಷದೋಪವಾಸಿ. ೫. ಕಾಮೋದ್ರೇಕಾದಿಯಾಗಿ ಸಚಿತ್ತ ವನಸ್ಪತಿಗಳನ್ನು ಸೇವಿಸದಿರುವವನು ಸಚಿತ್ತವಿರತ. ೬. ಹಗಲು ಕಾಯಿಕ ಭೋಗವನ್ನು ತಡೆಗಟ್ಟುವವನು ದಿವಾಮೈಥುನವಿರತ. ೭. ಸ್ತ್ರೀ ಸಂಗವನ್ನು ಪೂರ್ಣತ್ಯಾಗ ಮಾಡುವವನು ಬ್ರಹ್ಮಚಾರಿ. ೮. ತನ್ನ ಜೀವನದ ಕಸಬಿನಿಂದ ನಿವೃತ್ತಿಗೊಳ್ಳುವವನು ಆರಂಭವಿರತ. ೯. ಸಂಸಾರವನ್ನೆಲ್ಲಾ ಮಕ್ಕಳಿಗೆ ವಹಿಸಿ ಕೇಳಿದಾಗ ಮಾತ್ರ ಸಲಹೆ ನೀಡಿಕೊಂಡಿರುವವನು ಪರಿಗ್ರಹವಿರತ. ೧೦. ಸಂಸಾರವನ್ನು ಸಂಪೂರ್ಣವಾಗಿ ತ್ಯಾಗಮಾಡುವವನು ಅನುಮತಿವಿರತ. ೧೧. ಮುನಿಸೇವೆ ಶಾಸ್ತ್ರಚಿಂತೆ ಮತ್ತು ಧ್ಯಾನದಲ್ಲಿ ಕಾಲಕಳೆಯುವವನು ಉದ್ದಿಷ್ಟವಿರತ.

**<u>೨. ನಾಮಸೂಚಿ</u>**

(ಮುಂದಿನ ಅಂಕಿಗಳು ಪುಟಗಳನ್ನು ಸೂಚಿಸುತ್ತವೆ)

**ವ್ಯಕ್ತಿನಾಮ**


ಅಚ್ಯುತೇಂದ್ರ ೧೯೯ , ೨೩೨

ಅಜಿತಜಿನ ೧೩೮, ೩೫೭, ೩೬೫

ಅಜಿತವೀರ್ಯ ೧೫೦, ೧೫೪
ಅಜಿತಸೇನ ೨೩೧, ೨೩೨, ೨೪೨
ಅನಂತಜಿನ ೧೪೦, ೧೪೨, ೧೬೦
ಅನಂತಜಿನೇಶ ೧೫೭, ೧೫೮
ಅನಂತಜಿನೇಶ್ವರ ೧೫೬
ಅನಂತಜಿನೇಂದ್ರ ೪೦೦
ಅನಂತನಾಥ ೧೪೮, ೧೭೩
ಅನಂತವೀರ್ಯ್ಯ ೧೫೦, ೧೫೨, ೧೭೧
ಅಭಿನಂದನ ಜಿನ ೧೩೮
ಅರಜಿನ ೧೪೦, ೧೬೦, ೩೦೬, ೩೮೩
ಅರಜಿನನಾಥ ೩೦೫, ೩೩೦
ಅರಜಿನಪತಿ ೩೦೨
ಅಹಮೀಂದ್ರ ೧೮೩, ೧೮೭, ೩೧೮, ೩೦೧, ೩೩೩, ೩೯೬
ಆದಿನಾಥ ೩೧೯
ಕಂಸಲದೇವಿ  ೨೯೦
ಕಲ್ಯಾಣಕೀರ್ತಿ ೧೬೪
ಕುಂದಕುಂದಾಚಾರ್ಯ ೧೯
ಕುಂಥುನಾಥ ೧೬೦, ೩೦೨, ೩೦೫, ೩೩೦
ಕೂಷ್ಮಾಂಡಿನಿ ೨೯೭
ಚಂದ್ರನಾಥ ೨೧೮, ೧೬೮, ೧೬೯, ೧೭೧, ೨೨೧, ೨೨೯, ೨೩೯, ೨೪೦, ೨೫೩, ೩೦೫, ೩೧೨, ೩೨೭, ೩೨೮
ಚಂದ್ರನಾಥಸ್ವಾಮಿ ೧೪೧, ೩೩೭
ಚಂದ್ರಪ್ರಭ ೧೩೯, ೧೫೮, ೧೫೯, ೧೭೦, ೨೪೧, ೨೪೨, ೨೬೧, ೨೬೪, ೨೯೩, ೩೦೦, ೩೦೬, ೩೦೮, ೩೧೫, ೩೨೦, ೩೩೭
ಚಂದ್ರಪ್ರಭೇಶ ೩೨೯
ಚಂದ್ರಪ್ರಭಸ್ವಾಮಿ ೨೨೯
ಚಂದ್ರಮುನಿ ೧೭೩
ಚಂದ್ರಸಾಗರವರ್ಣಿ ೨೪೨, ೩೩೮
ಚಂದಪ್ರಭ ೨೬೦
ಚಾಮುಂಡರಾಯ ೨೧೦
ಚಾರುಕೀರ್ತಿ ೩೫೧
ಚಾರುಕೀರ್ತಿಪಂಡಿತ ೧೫೮
ಚಾರುಕೀರ್ತಿಮುನಿ ೨೯೪
ಚಾರುದತ್ತ  ೨೦೨
ಚೆನ್ನಮ್ಮ ೩೪೩
ಚಿಕ್ಕರಾಯ ೧೫೮
ಚಿದಾನಂದ ೩೦೨, ೩೦೯
ಜಂಭುನಾಥಸ್ವಾಮಿ ೩೬೪

ಜಂಭುಸ್ವಾಮಿ ೪, ೧೪೭
ಜಯನೃಪ ೨೯೦
ಜಯವರ್ಮ ೩೨೯, ೩೩೩
ಜ್ವಾಲಮಾಲಿನಿ ೨೭೯, ೩೩೯, ೩೩೭
ಜ್ವಾಲಿನಿ ೨೫೩, ೨೫೪, ೨೫೫, ೩೫೨
ಜ್ವಾಲಿನೀದೇವಿ ೨೫೫, ೩೧೧, ೩೧೨, ೩೩೯, ೩೩೭, ೩೫೩
ಜ್ವಾಲಿನಿಯಮ್ಮ ೨೫೫
ಜಿನದತ್ತ ೨೪೫, ೨೫೮, ೨೯೨
ತುಂಕಪ್ಪ ೧೪೮
ಸುವ್ರತ ೧೪೧, ೧೫೮, ೧೯೦, ೧೯೩, ೨೯೪, ೩೦೭, ೩೨೧, ೩೫೮
ಸುವ್ರತೇಶ ೩೦೫, ೩೧೦
ಸೂರಿಪ್ರಭುಸ್ವಾಮಿ ೧೫೨
ಸೋಮದತ್ತ ೨೪೧

**ಸ್ಥಳನಾಮ**
ಅಚಲಾಪುರ ೧೪೭
ಅಮಚವಾಡಿ ೩೯೭
ಅಮ್ಮಿನಬಾವಿ ೮೯
ಅಲಕಪುರ೨೩೧
ಅವನತಾಪುರ ೧೯೩
ಅಕ್ಷಯಪುರ ೩೩೦
ಉಚ್ಚಂಗಿ ೧೪೨
ಉದಯಗಿರಿ ೩೯೪
ಉಜಂತಗಿರಿ ೧೪೯, ೧೯೮, ೩೩೨, ೩೯೩
ಕನಕಗಿರಿ ೧೪೯, ೨೦೦
ಕಾರ್ಕಳ ೩೫೮, ೩೮೨, ೩೯೪
ಕಾನಾಪುರ ೧೭೪
ಕುಂಡಲಾಪುರ ೩೯೪, ೩೮೯
ಕೂಡಲೂರು ೧೪೨
ಕೊಪಣ ೧೭೦, ೧೭೧
ಕೊರಟಗೆರೆ ೩೯೧
ಕೊಲ್ಲಾಪುರ ೨೨೧
ಕೊಲ್ಲಿಪಾಕ ೩೯೭
ಖಾನಾಪುರ ೧೪೮
ಗಗನಗಿರಿ ೧೪೨
ಗುಡಿಬಂಡೆ ೧೪೧

ಗೋಕಾಕ ೩೩೬

ಚಂದ್ರಪುರ ೧೭೨

ಚಂಪಾಪುರ ೧೪೩, ೧೪೬, ೩೬೩

ಚನ್ನಗಿರಿ ೧೪೩

ಚಾರಣಗಿರಿ ೨೦೪

ಚೆನ್ನೆಪುರ ೧೫೪

ಡಿಳ್ಳಿ (ದೆಹಲಿ) ೪೧

ತಿಗಡೊಳ್ಳಿ ೪೦೮, ೪೦೯

ತೋವಿನಕೆರೆ ೨೧೮

ನಂದಪುರ ೩೨೫

ನರಸಿಂಹಪುರ ೩೧೫

ನಾಮಗೊಂಡಲ ೧೪೨

ನಿರ್ಗ್ಗುಂಡಿ ೩೧೬

ನಿಟ್ಟೂರು ೧೪೨

ನಿಡಗಲ್ಲು ೧೪೨

ಪಾವಗಿರಿ ೧೪೭

ಪಾವಾಪುರ ೧೪೬, ೩೬೩, ೩೮೬

ಪುತ್ತಂಗಡಿ ೧೭೧

ಪೆನಗೊಂಡೆ ೧೪೧, ೨೦೪, ೩೧೧

ಪೊಂಬುಚ ೨೪೭, ೩೪೧, ೩೩೮, ೩೩೯, ೩೪೫, ೩೪೬, ೩೪೭, ೩೪೯, ೩೬೫

ಪೌದನಪುರ ೩೭೬

ಬಂಕಾಪುರ ೩೮೯

ಬಿದುರೆ ೪೦೦

ಬಿಸಿರಹಳ್ಳಿ ೮೫

ಬೆಳ್ಗೊಳ ೧೬೩, ೧೬೬, ೧೬೮, ೧೯೯, ೨೦೨, ೨೦೬, ೨೦೭, ೨೦೮, ೨೧೦, ೨೧೨, ೨೧೩, ೨೧೪, ೨೧೭, ೨೨೨, ೨೨೬, ೨೫೦, ೨೫೩, ೨೫೬, ೨೯೦, ೨೯೪, ೨೯೭, ೨೯೮, ೨೯೯, ೩೧೨, ೩೧೩, ೩೧೫, ೩೧೭, ೩೧೯, ೩೨೦, ೩೨೧, ೩೫೮, ೩೫೯, ೩೬೪, ೩೭೫, ೩೭೭, ೩೭೯, ೩೮೩, ೩೮೫

ಬೇಳೂರು ೧೪೨

ಬೈಲಹೊಂಗಲ  ೪೦೯

ಭಂಗವಾಡಿ ೧೭೩, ೨೮೮

ಮಧುಗಿರಿ ೨೨೪

ಮಲ್ಲಪುರ ೧೫೪

ಮೂಡಬಿದರೆ ೩೪೪

ರತ್ನಗಿರಿ ೧೪೨, ೩೬೪

ರಾಂಪುರ ೧೪೨

ವರವಿ ೨೮೬

ವಾರಣಾಸಿ ೨೯೯, ೩೧೦
ವೇಣುಪುರಿ ೧೪೨, ೩೦೨, ೩೦೫, ೩೨೨, ೩೨೩, ೩೨೯, ೩೪೨, ೩೪೯, ೩೫೫, ೩೫೬
ವೇಣ್ಪುರ ೩೪೦, ೩೪೨, ೩೫೧
ಶಿರ್ಯ (ಸಿರಾ) ೧೪೨
ಶಿವಪುರ ೩೬೪
ಶ್ರವಣಬೆಳ್ಗೊಳ ೨೧೦
ಸಾಕೇತಪುರ  ೨೮೫, ೩೮೧, ೩೮೮, ೩೯೫, ೩೯೮
ಸಿಂಹಪುರ ೧೮೨, ೨೪೨, ೨೫೫, ೩೩೭, ೩೩೮
ಸುರಪುರ ೩೬೬
ಸೆಜಾನುಪುರ ೨೬೫
ಹರದ ೧೪೧
ಹರಿಹರ ೩೩೬
ಹಿರಿಯೂರು ೧೪೨
ಹೊಂಬುಚ ೨೪೪, ೨೪೭, ೨೫೨, ೨೯೨, ೩೨೮

# ಅನುಬಂಧ (೩)

**೩. ಹಾಡುಗಳಅಕಾರಾದಿ**

(ಮುಂದಿನ ಅಂಕಿಗಳು ಪುಟಸಂಖ್ಯೆಯನ್ನು ಸೂಚಿಸುತ್ತವೆ)

**೧. ರತ್ನಾಕರನ ಹಾಡುಗಳು**

ಅಯ್ಯಯ್ಯೋ ಕಷ್ಟದ ೧
ಅಜ್ಞಾನಿ ಬಳಲಿಯೂ ೧೬
ಅರಿದರಿದೆ ಜಿನ ತಪಸು ೪೬
ಅರಿಹಂತ ಅತಿಶಾಂತ ೭
ಆಡಿ ಬಾ ಆಡಿ ಬಾ ೯
ಆತ್ಮಧ್ಯಾನಿಸು ನೀ ೨
ಆತ್ಮ ನಂಬದಿರು ಸಿರಿ ೧೦೮
ಆತ್ಮನ ಕಲೆಯೆಂಬುದದು ೨೮
ಆತ್ಮನೆ ಲೋಕವೆಲ್ಲವು ೩೧
ಆದಿ ಜಿನೇಶ ಜಿನನಾದರೋ ೬೨
ಆನಂದಯೋಗಿ ಆಧ್ಯಾತ್ಮ ೬೦
ಆರದೆಂದಾರ್ಜಿಸಿಡುತಿಹೆ ೧೦೮
ಆರಿಗಾರು ಬಹರು ೧೦೭
ಆರುಂಟು ಕರುಣಿಗ ೫೧
ಆರು ಕಾಣರು ದೇವನಾ ೬೨

ಆರೈದು ಹೇಳಿರಣ್ಣಾತ್ಮ ೨೦
ಇಂದ್ರನಾಥನೆ ಶೃಂಗಾರ ೩೯
ಇಂದೇ ಮುಕ್ತನವಂ ೧೧೭
ಇದ ನೀವು ಕಣ್ಣಾರೆ ೧೫
ಇದ್ದಿತು ಎದ್ದಿತು ಬಿದ್ದಿತಲ್ಲಾ ೪೨
ಇಲ್ಲಿಯೇ ನಿನಗೆ ನಿತ್ಯಪದ ೩೭
ಇಷ್ಟ ಕಾಣಿರೋ ಮುಕ್ತಿಗೆ ೬೩
ಇಹಪರವೆರಡರ ಚಿಂತೆ ೫೭
ಊರಿಗೆ ಹೋಗುವ ಬನ್ನಿ ೧೧೭
ಎಂತಾಗಲಿರುವೆ ನಾ ೪೪
ಎಂತು ಮರೆವೆ ಎಂತು ೨೯
ಎಂದಿಗಹುದೋ ೬೪
ಎಂದಿಗೆ ಹಿಂಗುವುದೊ ೩೩
ಎಚ್ಚರಿಕೆ ಜತನ ಎರವಿನ ೬೪
ಎಚ್ಚರೆಚ್ಚರವಿರಲಿ ೬೫
ಎತ್ತಣಿಂದ ಬಂದೆಯಿನ್ನೆತ್ತ ೧೩೪
ಎತ್ತಲಿಂದ ಬಂದೆ ಇನ್ನೆತ್ತ ೩
ಎಲ್ಲರೂ ಭಾವಿಸಿ ನೋಡಿರೊ ೨೭
ಎಲ್ಲೆಲ್ಲಿಯು ನಿಲಬಹುದು ೬೫
ಏಕಯ್ಯ ಹೀಗೆನ್ನ ನೋವ ೬೬
ಏತರ ವಿವೇಕ ಏತರ ಜನ್ಮ ೪೧
ಏತರವ ನಾನಿಂತು ೬೬
ಏದೂರವಲ್ಲ ಮುಕ್ತಿಸಾರಾತ್ಮ ೬೭
ಏನ ಕಂಡು ಮೆಚ್ಚಿದೆ ೨೪
ಏನಮ್ಮ ಹೆಸರೇನೆಂದೈಯ ೭೦
ಏನಯ್ಯ ಗುರುವೆ ನಿಮಗಿಷ್ಟ ೬೭
ಎನಿಂತು ಮದದಿ ಮೈಮರದೆ ೬೮
ಏನು ಸವಿ ಮತ್ತಿನ್ನೇನು ೬೮
ಏನು ಹೋಗದು ಹೊತ್ತು ೬೯
ಏನೆಂದು ಹೇಳಲಿ ಸುಖ ೧೨
ಏನೆಂಬೆ ನೋಡು ನರರ ೪೩
ಏನೆನ್ನ ಬಹುದು ನಿಜಾತ್ಮನ ೬೯
ಒಲ್ಲೆನು ನಿನ್ನಾತ್ಮ ಧ್ಯಾನವ ೨೪
ಒಸಗೆಯ ಹೇಳು ಕಂಡಾ ೪೯
ಒಳಗೆ ಬೇಧಿಸಬೇಕು ೪೭
ಕಂಡರೆ ಕರ್ಮವ ಗೆಲ್ದ ೧

ಕಂಡು ಕಾಣಲಿಲ್ಲ ಅಕಟ ೭೧
ಕರುಣದೋರು ಕರುಣದೋರು ૩೫
ಕರುಣದೋರೋ ಕಡಲಾದಿ ೭೧
ಕರೆತಂದರಾರೋ ನಿನ್ನ ೫೫
ಕಾಯವ ದಂಡಿಸಬೇಕಾದರೂ ೭೨
ಕಾವುದೆನ್ನ ಶ್ರೀ ಹಂಸ ೭೨
ಕುರುಹ ಹೇಳಿನೂ ಬಾ ೭೩
ಕೂಸ ಕಂಡರಿಯಿರೊ ೧೧೨
ಕೆಳಗೆ ಬಿದ್ದು ಕುಳಿಕುಂಡು ೧೦
ಕೇಡಿನೊಳಗಾದ ನಾಡಿ ೫೨
ಕ್ಷೇಮವೇ ಮತ್ತೂ ಕ್ಷೇಮವೇ ૩೪
ಕೊಡಗೈಯವನಲ್ಲ ಜಿನ ೧೧೮
ಕೊಲೆ ಹುಸಿಯು ಕಳವು ೭೩
ಗ್ರಂಥವನೋದಿ ಗ್ರಂಥ ೧೦೯
ಗುರುಪಾದವಿರಲಿಕೆ ಪರದೈವ ೧೧೮
ಗುರುವೇ ನಿನ್ನ ನಾ ೧೦೯
ಗೆದ್ದೆ ಹೋಗೂ ಮೈಯೊಳೆದ್ದ ೪೫
ಘನವೆ ನಿನಗೆ ಮನವೇ? ೧೧೧
ಚಂದಮಾ ಚಂದಮಾ ೨૩
ಚಿಂತೆಯ ಮೇಲೆ ಚಿಂತೆ ೧೨೦
ಚಿತ್ರವ ಕಂಡುದಿಲ್ಲವೆ ૩೬
ಚಿದ್ರೂಪನ ಧ್ಯಾನವೆಂಬ ೭೫
ಚಿದ್ರೂಪನ ಮರೆಯದಿರು ೧೧೨
ಜಪತಾನೆ ಬಲು ೫೬
ಜಯತು ಜಯತು ೧೨೦
ಜಲಗಾರನ ಜಲಗಾರನ ೨೯
ಜಾಣರ ದೇವಾ ಜಿನಪತಿ ೧೨೧
ಜ್ಞಾನಿ ಹೊರಗೊಂದ ೭೬
ಜಿನಜಿನ ಜಿನ ಎನ್ನಿರೋ ೭೬
ಜಿನರಾಜ ನೀನೆ ಜಯಶ್ರೀಲ ೧೨೨
ಜಿನರೆನ್ನು ನಿಚ್ಚ ಜಿನ ೪೫
ತನ್ನನರಿದ ಮೇಲೆ ಜಗವೆಲ್ಲ ૩೭
ತನ್ನಾತ್ಮನ ತಾನೇ ೫೯
ತನ್ನಿಂದ ತಾ ಸುಖಿ ೧೨೨
ತಾನು ತನ್ನ ರೂಪ ೭೭
ತಾರಮ್ಮಯ್ಯ ಜಿನಪತಿ ೧೨૩

ತಾಲೆಲ್ಲೆ ಲೆಲ್ಲೆಲ್ಲೆ ಮಾಯಿ ೪೦
ತಿಳುಹಿದರಿಲ್ಲಯ್ಯ ೧೧೦
ತೀರ್ಥವಂದನೆಗೇಳು ೪
ತುಂಬಿದ ಪಟ್ಟಣವನು ೭೭
ತೊಳಲದಿರು ಕಂಡಕಡೆಗೆ ೪೮
ತೋರವ್ವ ಕೆಳದಿ ೭೮
ದಯೆವೆಲಸೆನ್ನಿ ದಾರಿಗೆ ೧೨೪
ದಾನಕೆ ಸಲ್ಲದ ಸಿರಿ ೧೨೪
ದಾನಿಯ ಸಂಪತ್ತು ಜಗದ ೨೧
ದೀಪ ಜತನವಯ್ಯ ೪೨
ದುರಿತಾರಿ ತ್ರಿಜಗದುನ್ನತದ ೭೯
ದೇಗುಲವನೆ ಪೂಜಿಸುತಹರೆ ೮೦
ದೇವ ಕಂಡೆನು ನಿಮ್ಮನು ೫೯
ದೇವ ನಮೋ ಜಿನದೇವ ೪೩
ದೇಹ ಕೆಟ್ಟರೆ ನಾ ಕೆಟ್ಟೆ ೨೨
ದೊರೆತನವೆ ನಿನಗೆ ೮೧
ಧರ್ಮವೆ ಬಲ್ಲಿತಲ್ಲಾ ಬಹು ೮೧
ಧೀರನೆಂದೆನ್ನಿ ತ್ರಿಭುವನ ೧೩೫
ನಗೆಯಲ್ಲವೆ ಇದು ೮೩
ನನ್ನ ಮಾತ ಕೇಳು ೮೩
ನಮ್ಮ ಮನೆಯೊಳಿಂದ ೧೧೦
ನಮ್ಮವರೆಲ್ಲರು ಹೋದ ೮೪
ನಮಿನಮಿಸಿ ಎಡೆಬಿಡದೆ ೮೪
ನಮೋ ನಮೋ ನಮೋ ೮೫
ನಾನಾ ವರ್ಣಗಳಿಂದ ೮೬
ನಾನಾ ವಸ್ತುವಿಗೊಂದೂರ ೫೪
ನಾನಾರು ನಾನಾರು ದೇಹ ೮೬
ನಾನೊಬ್ಬರ ಹಾಗಿಲ್ಲ ೧೨೪
ನಿಚ್ಚ ಪುಟ್ಟವಿಕ್ಕು ದೇಹ ೮೬
ನಿಜವರಿಯದ ಮನುಜ ೧೧೩
ನಿನಗೆ ಸೋತೆನಿಲ್ಲಿ ೧೪
ನಿನ್ನ ನಾನೆಂತು ಜೋಪಾನ ೮೭
ನಿನ್ನನು ನಾನೇನೆಂಬೆ ೮೮
ನಿನ್ನವನೆಂದೆನ್ನ ಮನ್ನಿಸಾ ೨೧
ನಿನ್ನ ಹೆಸರೇನೊ ೪೭
ನಿನ್ನೊಳಗೆ ನೀನಿಂತು ೫೦

ನಿಮ್ಮ ನಾಮ ನಮ್ಮ ಪರಿಣಾಮ ೩೯
ನೀನು ತ್ರಿಭುವನ ಸಾರ ೮೮
ನೀನೆ ನೀನೆ ನೀನೆ ೨೫
ನೀನೇಕೆ ಹೋರಗಾಡುವೆ ೮೯
ನೀವು ನಿಮ್ಮ ಹಾಗೆ ೯೦
ನೋಡಬೇಡವೆ ತನ್ನಾತ್ಮನ ೯೦
ನೋಡಿರೆಲ್ಲ ನೋಡಿರೆಲ್ಲ ೫೪
ನೋಡಿರೆಲ್ಲರು ಕೊಂಡಾಡಿರೆಲ್ಲರು ೯೧
ನೋಡು ನೋಡು ತನು ೯೧
ನೋಡುವಾಗೆ ನಿನ್ನ ೫೭
ಪಾಡಿರೆಲ್ಲರೂ ದೇವನ ೩೪
ಪಾಪಿ ಬಲ್ಲನೇ ಪರರ ೧೨೫
ಪಾರಿತಾತ್ಮನೆಚ್ಚರಿಕೆ ೯೨
ಪುತ್ಥಳಿ ಪುತ್ಥಳಿ ೬
ಪುಣ್ಯಫಲಾ ಆಹಾ ೯೨
ಬಂದರೆ ಮನೆ ಹೋದರೆ ೩೦
ಬಣ್ಣಿಸಬಲ್ಲವರೆ ೩೮
ಬದ್ದು ಬಸ್ತಿಯ ಹೋಗು ೮
ಬಲ್ಲೆ ನೆಂಬವರುಸುರು ಬಣ್ಣ ೫೨
ಬ್ರಹ್ಮ ಯೋಗವೇ ಸುಖ ೫೮
ಬಯಿದವರಾರೋ ನಿನ್ನ ೯೩
ಬರಿಯ ಬೊಮ್ಮದ ಮಾತು ೯೪
ಬರೆದದೆ ಬರೆದದೆ ೯೪
ಬಲ್ಲಿದ ನೀನೆಂದು ಬಡವರ ೧೧೩
ಬಿಡದು ಕಾಣಯ್ಯ ಚೆನ್ನಯ್ಯಾ ೯೫
ಬಿಡು ಬಿಡು ತನುವೆ ೨
ಬುದ್ದಿ ಸದರವೆಯೆಲ್ಲಕೆ ೬೧
ಭಜನೆ ಮಾತ್ರ ಸಾಲದೆ? ೧೨೬
ಭಾವಿಸಿ ಹೇಳಿರಣ್ಣಾತ್ಮ ೨೦
ಭಿಕ್ಷೆ ಮಾಡಿಯೂ ನಿಚ್ಚ ೪೦
ಬೇಡಿಕೊಂಬೆನು ನಿಮ್ಮ ೧೩೫
ಭೇದ ವಿಜ್ಞಾನ ರಾಜ್ಯ ೪೫
ಮಂಗಳ ನಿಜ ೯೬
ಮನದಂತೆ ಮಂಗಲ  ೨೭
ಮನುಜ ಜನ್ಮಕೆ ಬಂದು ೧೧೬
ಮಹಾನವಮಿಯ ಮಾಡಿದ ೯೬

ಮಾನವ ಜನ್ಮಕೆ ಬಂದು ೧೨೬
ಮಿಂದು ಬಾ ಮಿಂದು ೯೭
ಮುಕ್ತಿ ಬೇಕಾದರೆ ೨೬
ಮುಕ್ತಿಯೆಂಬುದುಲಿಹೊ ೨೫
ಮೂರು ರತ್ನವೆ ನಾನಿಂದು ೨೮
ಮೋಸದಿಂದಾದ ಪಾಪಕೆ ೯೮
ಯಾಕೆ ಮೈಮರೆದ ತನು ೧೩೬
ಯೋಗವೆ ಭೋಗವಯ್ಯ ೧೭
ಯೋಗಿಯೆಂಬೆನೋ ೧೯
ರಾಜನೀತಿಯ ಕೇಳಿ ನಡೆದರೆ ೯೮
ಲಾಭ ಲಾಭ ದಿನದಿನಕೆ ೧೨೭
ಲೀಲೆ ಲೀಲೆ ದಿನದಿನಕೆ ೧೨೭
ಲೋಕಭರಿತ ನೀ ೧೧
ಲೋಕವೆಲ್ಲವು ಸಟೆ ೧೦೬
ವೀತರಾಗ ವೀತರಾಗ ೯೯
ವೈದ್ಯವಿದೇಕೊ ಕೂಡೊಂದು ೧೦
ಶರಣಾಗು ನಿಜ ಪರಮಾತ್ಮ ೯೯
ಶುದ್ಧನಾಗಿ ಬದುಕೆಂದು ೧೦೦
ಶೃಂಗಾರವಾಗಾತ್ಮ ಸುಮ್ಮನೇಕೆ ೧೧೧
ಸಂಗವ ತೊರೆವುದೆ ೧೨೮
ಸಂತಸ ಬರುತಿದೆ ನಿನಗೆ ೧೨೯
ಸಂಸಾರ ಸುಖದೊಮ್ಮೆ ೫೩
ಸದರವೆಂದಿರಬೇಡಾ ೧೦೦
ಸರಸ್ವತಿ ಧವಲವ ಕೊಡು ೧೧೧
ಸಲ್ಲದು ನುಡಿ ನಿಮಗೆ ೧೦೧
ಸಸ್ಸಾರಾ ನಿಸ್ಸಾರಾ ೧೦೨
ಸಾಕಿನ್ನು ಹಲವು ಹಂಬಲಿನಾಸೆ ೧೨
ಸಾಕು ಸಾಕು ಸವಿ ೧೮
ಸಾಧನೆಯ ಮಾಡು ೭
ಸಾಧನೆಯ ಮಾಡು ಕಂಡ ೧೨೯
ಸಾಕು ಹೋಗು ನಿಲ್ಲು ೬೦
ಸಾಮಾನ್ಯನಲ್ಲಲ್ಲ ಕಾಣಿರೋ ೩೮
ಸಾರಿದೆ ನಿಮ್ಮಡಿಗಳನು ೩೬
ಸಾಲದೆ ಶುದ್ಧಾತ್ಮಯೋಗ ೬೧
ಸಾಲದೇ ನಿನ್ನ ಕಲ್ಯಾಣ ೧೩೦
ಸಾವಾರಿಗೆ ಹುಟ್ಟಾರಿಗೆ ೨೩

ಸುಖವ ಬಯಸಿ ಸುಖ ೧೬
ಸುಖವೆಂಬೆ ನನ್ನ ಸೊಬಗೆಂಬೆ ೨೨
ಸುಖಿಸಲಿಲ್ಲವೆ ನಿಚ್ಚ ೩೩
ಸುಖಿಸಲಿಲ್ಲವೆ ನಿಜ ೫೦
ಸುಜನ ಸುಜ್ಞಾನ ಜಿನಾನಂದ ೧೭
ಸುಜ್ಞಾನಿಯಲ್ಲವೆ ೧೩
ಸುಜ್ಞಾನಿ ಸ್ವರೂಪ ನೀನು ೧೦೨
ಸುತ್ತಬೇಡ ಸುತ್ತಮುತ್ತಲು ೧೦೩
ಸುಪ್ರಸನ್ನ ಹಂಸನಾಥ ೧೦೩
ಸುಮತಿ ಸುಮತಿಯೆಂದು ೧೫
ಸುವ್ವಲಾಲೀ ಸುವ್ವಿ ೧೩೦
ಸುವಿಚಾರವೊಂದ ಕೇಳು ೧೮
ಹಂಗು ಬೇಡವಿನ್ನೆನಗೆ ೧೩೧
ಹಂಸೆ ಹರಿದೇಕೊ ೯
ಹಲ ಹಲವ ಚಿಂತಿಸದಿರು ೩೨
ಹಾರಿತು ಉದ್ದಕೆ ೧೦೩
ಹಾಹಾ ಕಷ್ಟ ಜ್ಞಾನದೇಹಿ ೪೪
ಹೀಗೆ ಮೈ ಮರೆದಿಹರೆ ೪೮
ಹೆಚ್ಚಿ ಬದುಕಿ ನರರಾಯುಷ್ಯ ೧೧
ಹೆಚ್ಚು ಬಾಳ್ವರೆ ೧೩೨
ಹೆಸರೇನೂ ನಿನ್ನ ೧೦೪
ಹೇಗೆ ಭೋಗಿಸುವಿರಿ ೧೦೪
ಹೇಳಬೇಕೆಂದೊಮ್ಮೆ ೧೦೫
ಹೊಯ್ಯೋ ಡಂಗೂರವ ೧೩೩
ಹೊರ ಹೊರಗಾಡಿದರೇನುಂಟು? ೧೧೫
ಹೊರ ಹೋರಗಾಡಿ ಮೈಮರೆತಿದೆ ೧೩೨
ಹೋದರೆ ಹೋಗು ೩೧
ಹೋಯಿತು ಹೋಯಿತು ೧೦೫
ಹೋ ಹೋ ಪುರೇ ೧೦೬
ಹೋ! ಹೋ! ಭೋಗಬಾಳು ೧೩೩

**೨. ತೀರ್ಥಂಕರರ ಹಾಡುಗಳು**

ಅಂತಕನ ಗೆಲಿದ ೨೨೨
ಅಮರವಂದಿತನಾದ ೧೬೨
ಆದಿ ಜಿನೇಶ್ವರ ನಮೋ ೧೫೮
ಆದಿ ಜಿನೇಶ್ವರ ನಮೋ ೧೫೯

ಉದಯಕಾಲದೊಳೆದ್ದು ೧೪೧

ಎಚ್ಚರಿಕೆ ಎಚ್ಚರಿಕೆ ಪಾರಿಶ್ವ ೨೦೧

ಎಷ್ಟುದೂರ ಬೆಳಗುಳವೆಂದೆ ೨೦೬

ಏಳು ಮನೋಹರ ಜಾವ ೧೪೬

ಕರುಣಿಸಿ ಕಾಯೋ ಎನ್ನ ೨೧೨

ಕರುಣಿಸು ಶ್ರೀ ಚಂದ್ರನಾಥಾ ೨೨೧

ಕರುಣಿಸೆನ್ನನು ಶಾಂತಿ ೧೭೪

ಕಲಿಯುಗದೊಳಗೊಂದು ೧೪೭

ಕೃಪೆಯಿಲ್ಲವೇಕೊ ಎನ್ನ ಮೇಲೆ ೨೨೬

ಕೇಳಿ ಮನವೊಲಿದು ೨೨೯

ಜಯತಿರ್ಥಂಕರ ಜಯತೀರ್ಥಂಕರ ೨೨೩

ಜಯ ಫಣಿಪತಿ ಪಣಿಸೂನು ೨೭೬

ಜಿನ ಜಿನ ಜಿನರೆಂದು ೧೯೯

ಜಿನನೆ ಬಾರೋ ಜಿನಚಂದ್ರನೇ ೧೭೩

ತಾಯೇ ನೀನೋಡಿ ೨೦೫

ತ್ರಿಭುವನಪತಿ ಶ್ರೀಭುಜುಬಲಿಯಂತೆ ೨೧೪

ತಿಳಿದು ಮನದೊಳು ಭಾವಿಸಿ ೨೧೯

ತೋರಿಸೊ ದೇವಾ ೧೬೭

ದಳಂದಳಾಂದುಳಂ ೧೬೯

ದೇವ ಪಾಲಿಸು ಎನ್ನ ೧೬೫

ನಿಮ್ಮ ಪಾದವ ಎಲ್ಲಿ ೨೦೨

ನೀನೆ ಕಾರುಣ್ಯ ಸಂಪನ್ನ ೨೦೪

ನೆನಹಿರೋ ಮನಸಿಜನನು ೨೦೦

ನೇಮಿಜಿನನ ನೋಡಿರೋ ೨೨೪

ನೇಮಿಜಿನೇಶ್ವರಸ್ವಾಮಿ ೧೭೮

ನೇಮಿನಾಥನೆ ಸೋಮಶಾಂತನೆ ೨೨೪

ನೇಮಿಶ ಜಿನಪೋತ್ತಮನೇ ೨೨೬

ನೋಡಿ ನಾ ದಣಿಯೇ ೨೦೮

ಪರಮ ಪರಂಜ್ಯೋತಿ ಕೋಟಿ ೧೪೩

ಪಾಲಿಸೆನ್ನ ಚಂದ್ರನಾಥ ೧೭೨

ಪಾಲಿಸೆನ್ನ ಪರಮದೇವ ೧೬೮

ಪುರುಪರಮೇಶನ ಸ್ಮರಿಸಿ ೨೦೯

ಪುಷ್ಪಕ್ಹೋಗುವ ಬನ್ನಿ ೧೬೬

ಪೂಜಿಪೆನು ನೇಮಿನಾಥನ ೧೭೫

ಪೋಷಿಸೈ ನೇಮೀಶ ಜಿನಪನೇ ೨೨೮

ಬಂದು ನೋಡಿರೆಲ್ಲ ನಿಂದು ೧೭೧

ಭಜಿಸಿರೋ ಭವ್ಯರೆಲ್ಲ ೧೭೩
ಭಾವಿಸಿ ಕೇಳಿರೋ ಎಲೆ ೨೦೨
ಭಾವಿಸಿ ಗುಮ್ಮಟ ಜಿನಪತಿ ೨೦೮
ಮಂದಾರ ಗಿರಿಯಲ್ಲಿ ಮಿಂದ ೧೭೬
ಮಾನಿನಿ ರನ್ನಳೆ ನೋಡೆ ೧೫೯
ಮುಂದೇನು ಗತಿಯು ಹಾ ೨೨೩
ಮುಗಿಲು ಮುಟ್ಟುವ ಮೂರ್ತಿ ೨೧೧
ರಕ್ಷಿಸು ಜಿನನೇ ೨೨೧
ರಕ್ಷಿಸೋ ಎನ್ನನು ತವನಿಧಿ ೧೪೮
ಲೆಲೆಲೊ ಲೆಲೆಲೊ ಲೆಲೆಲೊ ೧೭೦
ವಸುಧೆಗಧಿಕವಾದ ದೇವ ೧೫೪
ವೃಷಭ ಜಿನೇಶನೇ ೧೬೦
ಶಾಂತಿಜಿನೇಂದ್ರನ ಚರಣವ ೨೨೨
ಶಾಂತಿನಾಥ ಭವವಿದೂರ ೨೨೩
ಶ್ರೀಜಗತ್ರಯ ಭವ್ಯಸಂಚಯ ೧೬೩
ಶ್ರೀನೆಯ್ಯೆನೆರಿಸುವ ೧೭೪
ಶ್ರೀ ನೇಮಿಜಿನರಾಜ ೨೨೫
ಶ್ರೀನೇಮಿನಾಥಾ ದಯಮಾಡ್ಯೆ ೨೨೫
ಶ್ರೀ ಮಂದಾರಸ್ವಾಮಿ ಆದಿ ೧೫೦
ಶ್ರೀಮದಮರಪತಿ ನರ ೧೩೮
ಸಾಕಿನ್ನು ಸಂಸಾರ ೧೬೮
ಸ್ತುತಿಸಲೆನ್ನಳವೆ ಸ್ತುತಿ ೧೪೯
ಹಂಬಲಿಸದಿರು ಮನದಿ ೨೧೩
ಹೆಚ್ಚಿನವ ನೀನು ೨೦೪

**೩. ಯಕ್ಷಿಣಿಯರ ಹಾಡುಗಳು**

ಅಂಬಾ ನಿನಗೆಂಥ ೨೫೨
ಅಂಬಾ ಪರಾಕು ೨೪೯
ಎಚ್ಚರಿಕೆ ಎಚ್ಚರಿಕೆ ಪದ್ಮಾಂಬೆ ೨೫೦
ಎಚ್ಚರಿಕೆ ಎಚ್ಚರಿಕೆ ಶ್ರುತದೇವಿ ೨೫೨
ಕಾಯೇ ಎನ್ನ ಕಾಯೇ ೨೪೬
ಗಜದೇವನ ಪಾದ ೨೪೪
ಚಂದ್ರನುತ ಚಂದ್ರ ೨೫೩
ಜಯಜಯ ನೂತನ ೨೪೫
ತಾಯೇ ಪಾಲಿಸು ಮತಿಯ ೨೪೭
ದೇವಿಯ ನೋಡುವೆನು ೨೫೪

ಪಾಲಿಸು ಪಾಲಿಸು ೧೫೫
ಪಾಲಿಸೊ ಪದ್ಮಾಂಬ ೧೪೮
ಪಾಹಿ ಪದ್ಮಿಣಿಮಾಂ ೧೫೩
ಯಾಕಿನ್ನು ಕೋಪ ೧೫೦
ರಕ್ಷಿಸೆನ್ನದು ಪುಣ್ಯ ೧೪೮
ಸಿಂಗಾಡಿಯೆಂದದ ೧೪೨

**೪. ಜೋಗುಳ ಹಾಡುಗಳು**

ಅಷ್ಟಕಂಬದ ಮಂಟಪ ೧೫೭
ಜೋ ಜೋ ಜೋ ಜಯ ೧೬೦
ಜೋ ಜೋ ಜೋ ಶ್ರೀ ೧೬೧
ಜೋ ಜೋ ಜೋ ಜೋ ಶ್ರೀವೀರನಾಥಾ ೧೬೬
ಜೋ ಜೋ ದಿವಾಕರ ತೇಜ ೧೫೯
ಜೋ ಜೋ ಪುರುಪರಮೇಶ ೧೬೬
ಜೋ ಜೋ ಪುರುಪರಮೇಶನ ೧೫೮
ಜೋ ಜೋ ಸುಪಾರಿಶ್ವ ೧೬೩
ಶ್ರೀಜಿನರಡಿಗಳ ಹರುಷದಿ ೧೬೫

**೫. ಶೋಭಾನದ ಹಾಡುಗಳು**

ಕರಿಮುಖನಂಘ್ರಿಕೋಮಲ ೧೮೯
ಕರೆತಾರೆ ಸರಸ್ವತಿ ಪ್ರಾಣ ೧೮೭
ಪಣಿವೆಣಿಯರತಿ ೧೮೬
ಪಾಹಿ ಪನ್ನಗವೇಣಿ ಸನ್ನುತೆ ೧೯೧
ಬಲಗೊಂಬೆ ಶ್ರೀ ಪದ್ಮಾವತಿಯ ೧೯೩
ಶ್ರೀ ಮದನಾದಿ ವಸ್ತು ೧೬೮
ಶ್ರೀ ಸುರಪತಿ ನರಪತಿ ೧೭೯

**೬. ಮಂಗಳಾರತಿಯ ಹಾಡುಗಳು**

ಆಡಿದರೋಕುಳಿಯ ಅಮ್ಮಯ್ಯನ ೨೪೮
ಆದಿಯೊಳಗೆ ಚಟ್ಟರಪಡೆಯ ೧೯೯
ಆಯಾಸವಹುದೇ ಪದ್ಮಿಣಿಯೇ ೨೪೦
ಆರತಿ ಬೆಳಗುವೆ ೨೩೨
ಆರತಿ ಬೆಳಗುವೆನು ೨೨೫
ಆರತಿ ಬೆಳಗುವೆ ೨೨೨
ಎತ್ತಿರಾರತಿ ಸತ್ಯಮೂರ್ತಿಗೆ ೨೫೫
ಕನಕಪುರದ ಜಯಂಧರಗೇ ೨೨೦

ಕಮನೀಯ ಗಾತ್ರೆಗೆ ೩೩೯
ಕಮಲಪಾಣಿ ಸುಗುಣವೇಣಿ ೩೩೬
ಕುಂಕುಮವರ್ಣೆಗೆ ೩೪೨
ಕುಂಜದಳಾಕ್ಷಣಿ ಕಮಲಿನಿಗೆ ೩೩೮
ಜಯಚಂದ್ರನಾಥನಿಗೆ ೩೨೭
ಜಯಜಯ ಆದಿ ೩೨೫
ಜಯತು ಶಾರದದೇವಿ ೩೧೮
ಜಯಮಂಗಲಂ ನಿತ್ಯ ೨೯೭
ಜಯಮಂಗಲಂ ನಿತ್ಯ ೩೧೫
ಜಯಮಂಗಲಂ ನಿತ್ಯ ೩೧೭
ಜಯಮಂಗಲಂ ನಿತ್ಯಶುಭ ೩೧೨
ಜಯಮಂಗಲಂ ನಿತ್ಯಶುಭ ೩೧೬
ಜಯಮಂಗಲಂ ನಿತ್ಯಶುಭ ೩೧೮
ಜಯಮಂಗಲಂ ನಿತ್ಯಶುಭ ೩೨೦
ಜಯಮಂಗಲಂ ನಿತ್ಯಶುಭ ೩೩೩
ಜಯಮಂಗಲಂ ಸದಾ ೩೫೬
ಜಯ ಮಂಗಳಂ ನಿತ್ಯ ೩೩೨
ಜಯ ಮಂಗಳಂ ನಿತ್ಯ ೩೫೨
ಜಯ ಮಂಗಳಂ ನಿತ್ಯ ಶುಭ ೩೩೬
ಜಯ ಮಂಗಳಂ ನಿತ್ಯ ಶುಭಮಂಗಳಂ ೩೩೭
ಜಯ ಮಂಗಳಂ ಭವತು ೩೪೨
ಜಯಮಂಗಳಂ ಸದಾ ೩೫೭
ಜಯಮಂಗಲಂ ಸದಾ ೩೫೮
ಜಯಮಂಗಳಂ ಸದಾ ಶುಭ ೩೫೫
ಜಯ ಮಂಗಳ ವೈ ೩೧೪
ಜಾತರೂಪವನು ಕಳೆದು ೩೦೩
ತಾಯೆ ಸರ್ವರ ರಕ್ಷಾಮಣಿಯೆ ೩೪೬
ಧರೆಯೊಳಧಿಕ ವೇಣು ೩೨೩
ನಂಬಿದೆ ನಾ ನಿಮ್ಮ ೩೪೯
ನಂಬಿದೆ ನಾ ನಿಮ್ಮಯ ೩೪೩
ನವರತ್ನದಾರತಿ ೩೩೯
ಪ್ರಥಮಭಿ ಗರ್ಭವತರಣ ೨೯೪
ಪರಮಜಿನೇಂದ್ರನ ನೆನೆದು ೩೨೪
ಪುರಪರಮೇಶ್ವರ ಸುರನುತ ೩೦೫
ಪರಿಪಾಲಿಸು ಪದ್ಮಾವತಿ ೩೪೪
ಪಾಹಿ ಪದ್ಮಾಂಬಿಕೆಯೆ ಪಾಲಿಸು ೩೪೪

ಪಾಹಿಮಾಂ ಪರಮಾತ್ಮ ರೂಪಿಣಿ ೩೪೬

ಬೆಳಗಪ್ಪ ಜಾವದಲಿ ೨೯೫

ಭವತು ಮಂಗಲಂ ೩೫೯

ಮಂಗಲಂ ಧರಣೇಂದ್ರ ೩೪೧

ಮಂಗಲಂ ಮಂಗಲಂ ಗೊಮ್ಮಟ ೩೧೯

ಮಂಗಲಂ ಮಂಗಲಂ ಜ್ವಾಲಿನಿ ೩೧೨

ಮಂಗಲಂ ಮಂಗಲಂ ಭರಂತುತೆ ೨೯೮

ಮಂಗಲಂ ಮಂಗಲಂ ಶಾರದಾ ೨೯೬

ಮಂಗಲಂ ವಿಮಲ ಲಲಿತಾಂಗಿಗೆ ೩೧೧

ಮಂಗಲಂ ಶ್ರೀಚಂದ್ರಪ್ರಭಗೆ ೩೧೪

ಮಂಗಳಾರತಿ ತಂದೆತ್ತಿರೆ ೩೩೪

ಮಂಗಳಾರತಿ ತಂದೆತ್ತಿರೆ ೩೩೮

ಮಂಗಳಂ ಗರ್ಭಾವತರಣನಿಗೆ ೩೦೭

ಮಂಗಳಂ ಜಗದಾಂಬದೇವಿಗೆ ೩೧೫

ಮಂಗಳಂ ಮಂಗಳಂ ಪದ್ಮಾವತೇ ೩೪೦

ಮಂಗಳಂ ಮಂಗಳಂ ಬ್ರಹ್ಮದೇವಿಗೆ ೨೯೪

ಮಂಗಳಂ ಮಂಗಳಂ ಭವಂತು ೩೩೯

ಮಂಗಳ ನಿಜಪರಂಜ್ಯೋತಿಗೆ ೩೫೮

ಮಂಗಳಾರತಿ ತಂದು ಬೆಳಗಿರೆ ೩೩೭

ಮಂಗಳಾರತಿಯ ತಂದೆತ್ತಿರಿ ೩೫೬

ಮಂಗಳಾರತಿಯ ತಂದೆತ್ತಿರೆ ೨೯೮

ಯಾಕಿಂತು ಕೋಪ ತಾಯೇ ೩೪೬

ರಕ್ಷಿಸೌ ಸದಯೇ ಪದ್ಮಣಿಯೇ ೩೪೯

ವರವಾಣಿಯೊಳು ೩೨೧

ವರವಿತ್ತು ಸಲಹಮ್ಮ ವರದೆ ೩೪೫

ವಾಣಿ ವರಕಲ್ಯಾಣಿ ೩೫೦

ವಾರಣಯಾನೆ ವೈಯ್ಯಾರಿಣಿಗೆ ೩೪೧

ಶ್ರೀಜಿನರಾಜಗೆ ಮಂಗಲಂ ೩೫೪

ಶ್ರೀ ಪದ್ಮಾಬೆಗೆ ಮಂಗಲಂ ೩೪೮

ಶೃಂಗಾರಹಾರ ಮಾರವಿಜಯ ೩೫೧

ಸರಸಿಜ ಭವನರಸಿಯ ೩೨೮

ಸುರಚಿರ ಮಣಿಯ ೩೨೨

ಸುರೇಂದ್ರವೃಂದ ವಂದಿತೇ ೩೫೪

**೭. ಸಂಕೀರ್ಣ ಹಾಡುಗಳು**

ಅರಿಯಲಿಲ್ಲವಲ್ಲ ಆತ್ಮನ ೩೯೧

ಅರುಹ ಶ್ರೀಚರಣವ ನೆನೆವೆನು ೩೮೭
ಅಸಗನೀತನಲ್ಲ ಕರ್ಮವ ೩೯೧
ಆದಿನಾಥನೆ ಮೇದಿನೀಶನೆ ೩೭೬
ಆದಿಪರಮೇಶನೇ ಸದೃಶ್ಯನೇ ೩೭೭
ಆರ ಸಿರಿ ಆರ ತನು ೩೮೭
ಇರಬಂದೆನೆ ನಾನಿರಬಂದೆನೆ ೩೬೯
ಈಶ ಭೋ ನಾಕೇಶವಂದಿತ ೩೭೨
ಈಶ ಸುರಾಧೀಶ ವರಜಿನೇಶ ೩೭೫
ಏನಿರಲೇನು ನಿನಗೆ ೩೬೭
ಕರುಣಾಂಬುಧೇ ಕಂತುವೀರದೂರ ೩೭೩
ಕರುಣಾ ಚರಣಾ ಧರಣಾ ೩೭೭
ಕರೆ ಕರೆ ಕರೆ ಘನ ೩೬೦
ಕೇಳಿ ಪೇಳ್ವೆ ಲಾಲಿಸಿ ೩೯೨
ಜ್ಞಾನಿ ಹೊರಗೊಂದ ೩೬೮
ಜಿನನಿನಗಂತವುಂಟೆನಲು ೩೬೬
ಜಿನಪತಿ ಪಾಲಿಸು ಬೇಗ ೩೮೨
ಜಿನವರಬೋ ಭಾವಯೇ ೩೮೪
ಜಿನರೆಂದೊಡೆ ಜಿನ ೩೬೦
ಜೈನ ಧರ್ಮದ ಕ್ರಿಯಾ ೪೦೮
ಜೈನರಾಗಿ ಹುಟ್ಟಿಬಂದ ೪೦೯
ತಿಳುಹಿದರಿಲ್ಲವಯ್ಯಾ ೩೭೧
ತೀರ್ಥಯಾತ್ರೆಯ ಕೇಳಿ ಬುಧ ೩೬೨
ದೇವದೇವನೆ ಭಾವಜಾಂತಕ ೩೬೮
ದೇಹವಿದ್ದೇನು ಸಾರ್ಥ ೪೦೭
ಧ್ಯಾನವ ಮಾಡಿರೊ ೪೦೭
ಧ್ಯಾನಿಸುವೇ ಜಿನಪನ ೩೭೮
ಧೀರಚಂದ್ರ ಶ್ರೀಜಿನಾ ೩೭೮
ನಂಬಿದೆ ನಂಬಿದೆ ಶೀತಲಜಿನಪನೆ ೩೭೯
ನಮೋ ನಮೋ ನಮೋ ೩೭೧
ನಾ ಮನಸೇ ಸೈರಿಸದು ೩೭೦
ನಿನ್ನನೇ ನಂಬಿ ಬಂದೆ ೩೭೦
ಪರಿಪಾಲಿಸೈ ವರವೀತರಾಗ ೩೭೪
ಪಾಯೋಪಗಮನದೊಳ ೩೬೯
ಪಾರ್ಶ್ವೇಶ ಪಾಹಿ ಸದಾ ೩೮೪
ಪುರುಪರಮೇಶಾ ಕುರುಣಿಸೈ ೩೭೬
ಪುರುಹೂತಪೂಜ್ಯನೆ ಪುರುಜಿನ ೩೭೬

ಪೊರೆ ಕರುಣದಿ ಶರಣರ ೩೯೪
ಪೊರೆಯೈ ಶ್ರೀಜಿನರಾಜ ೩೮೩
ಪೊರೆ ಶ್ರೀರಮಾರಮಣನೆ ೩೮೫
ಬಾ ಬಾ ಬಾಬಾ ಬೇಗ ೩೭೨
ಬೇಗದಿಂದಲಿ ಬನ್ನಿರೈ ೩೮೧
ಬೇಡುವೆ ನಾಂ ಬಿಡದೇ ೩೮೩
ಭಾಗ ಬಿಳಿದು ಭಾಗ ಕರಿದು ೩೬೧
ಭಾವಿಸದಲೆ ನಾ ಕೆಟ್ಟೆ ೩೭೪
ಭಾಸುರಾಂಗನೆ ದೋಷದೂರನೆ ೭೪
ವಸಂತವಾಡಿರಿ ಶಶಿಮುಖಿಯರು ೩೮೯
ವೃಷಭೇಶ ಪಾಲಿಸೆನ್ನನು ೩೭೮
ವೀರಜಿನಪ ಪೊರೆಯೊ ಕೃಪಾ ೩೮೬
ಲಕ್ಷ್ಮಿಸೇನ ಮುನಿಜ್ವಾಲಿನಿ ೩೬೬
ಶಾಂತಿಜಿನೇಂದ್ರ ನಿಮ್ಮ ೩೮೨
ಶ್ರೀಗುರುವರನಂಘ್ರಿಯುಗಕೆ ೩೯೨
ಶ್ರೀಜಿನೇಶನೇ ಪೊರೆಯೈ ೩೭೫
ಶ್ರೀಮದನಂತ ಜಿನೇಂದ್ರರ ೪೦೦
ಶ್ರೀಮದನಂತೇಶಾ ಮುನಿಜನ ೩೮೧
ಶ್ರೀವಿಮಲ ಜಿನರಾಜ ೩೭೯
ಶ್ರೀ ಸುರನುತ ಜಿನರಡಿಗೆರಗುತ ೩೯೫
ಸಮವಸರಣನೆ ಶ್ರೀ ೩೮೦
ಸಾರಿ ಬಂದೆನೊ ದೇವ ೩೮೫
ಸುರಪತಿವಿನುತ ೩೮೬
ಸುವ್ವಾಲಾಲೆ ಸುವ್ವಿ ೩೬೯
ಹಿಗ್ಗುವೆ ಯಾಕೋ ೪೦೬
ಹೊಂದಿದೆ ನಾ ಬಂದು ೩೮೦

## ಅನುಬಂಧ (೪)

**೪. ಆಕರಗಳು**

**೧. ಹಸ್ತಪ್ರತಿಗಳು**

೧. ಶ್ರವಣಬೆಳಗೊಳದ ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಹಸ್ತಪ್ರತಿಗಳು
ಕೆಎ-೨೨, ಕೆಎ-೨೩, ಕೆಎ-೩೦, ಕೆಎ-೧೨, ಕೆಎ-೫, ಕೆಎ-೩, ಕೆಎ-೮, ಕೆಎ-೨೬, ಕೆಎ-೧೩೫, ಕೆಎ-೭೮, ಕೆಎ-೧೬೫, ಕೆಎ-೩೭೦, ಕೆಎ-೩೭೧, ಕೆಎ-೩೭೨, ಕೆಎ-೩೮೫

೨. ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಸಂಸ್ಥೆಯ ಹಸ್ತಪ್ರತಿಗಳು: ತಾಪ್ರ-೧೨೧೭, ತಾಪ್ರ-೫೭೩, ತಾಪ್ರ-೧೦೭೫, ತಾಪ್ರ-೧೩೧೪, ತಾಪ್ರ-೧೦೦೧, ತಾಪ್ರ-೫೭೮, ತಾಪ್ರ-೫೧೧೦, ತಾಪ್ರ-೩೯೨

೩. ಮೈಸೂರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿಗಳು: ಕೆ-೧೬೪೨, ಕೆ-೨೮೪, ಕೆ-೧೪೮೪, ಕೆ-೧೪೯೪, ಕೆ-೧೮೩೫, ಕೆ-೫೩೨, ಕೆ-೭೧೦, ಕೆ-೫೩೨

**೨. ಗ್ರಂಥಗಳು**


೧. ಜಿನಭಜನಸಾರ, ಸಂ.: ಎರ್ತೂರು ಶಾಂತಿರಾಜಶಾಸ್ತ್ರಿ, ಪ್ರ: ಪಂಡಿತರತ್ನ ಎರ್ತ್ತೂರು ಶಾಂತಿರಾಜಶಾಸ್ತ್ರಿ ಟ್ರಸ್ಟ್, ಬೆಂಗಳೂರು, ಆರನೆಯ ಮುದ್ರಣ ೧೯೮೯

೨. ಜಿನಭಜನ ಸಂಗ್ರಹ, ಸಂ.: ವಿ. ಲೋಕನಾಥಶಾಸ್ತ್ರಿ, ಮೂಡಬಿದ್ರೆ, ೧೯೪೮

೩. ರತ್ನಾಕರನ ಕೀರ್ತನೆಗಳು, ಸಂ.: ಭುವನಹಳ್ಳಿ ಡಿ. ಶ್ರೀಪತಿ ಜೋಯಿಸ್, ಶ್ರೀ ಸಿದ್ಧಾಂತಕೀರ್ತಿ ಗ್ರಂಥಮಾಲೆ ಹೊಂಬುಜ ಶ್ರೀ ಜೈನಮಠ, ಹೊಂಬುಜ-೫೭೭೪೩೬, ಹೊಸನಗರ ತಾಲೂಕು, ಶಿವಮೊಗ್ಗ ಜಿಲ್ಲೆ, ೧೯೯೫

೪. ಶ್ರೀ ಪಂಚಕುಲದೇವತಾ ಪೂಜಾ ಸಂಗ್ರಹ, ಸಂ.: ಶ್ರೀ ಎಂ. ಧರ್ಮರಾಜ ಇಂದ್ರ, ಶ್ರೀ ಅಮ್ಮನವರ ಬಸದಿ, ಮೂಡಬಿದ್ರೆ ೫೭೪ ೨೨೭, ೧೯೯೯

೫. ಮಹಾವೀರ ಗೀತಾಂಜಲಿ, ಸಂ.: ಮಾರನಾಡು ವರ್ಧಮಾನ ಹೆಗ್ಗಡೆ, ವಿಶ್ವಜೈನ ಮಿಶನ್, ಕರ್ನಾಟಕ ಶಾಖೆ ವೀರಸೇವಾ ಭಜನಾ ಮಂಡಳಿ, ಧರ್ಮಸ್ಥಳ

೬. ಮರಿಕಲ್ಪ ಕವಿಯ ಗೀಗೀ ಪದಗಳು, ಸಂ.: ಡಾ. ಬಸವರಾಜ ಮಲಶೆಟ್ಟಿ, ಬಸವೇಶ್ವರ ಪ್ರಕಾಶನ, ತಿಗಡೊಳ್ಳಿ, ಬೆಳಗಾವಿ ಜಿಲ್ಲೆ, ೨೦೦೧

೭. ಫಣಿಕುಮಾರ ಸಾಹಿತ್ಯ, ಸಂ.: ಹಂಪನಾಗರಾಜಯ್ಯ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೮. ಜೈನಧರ್ಮ ಪರಿಭಾಷೆ, ಮ.ಪ್ರ. ಪೂಜಾರ, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ, ೧೯೭೬

೯. ಯಕ್ಷ ಯಕ್ಷಿಯರು, ಹಂಪನಾಗರಾಜಯ್ಯ, ಚಂದ್ರಸಾಗರವರ್ಣಿ ಗ್ರಂಥಮಾಲೆ, ೧೦೭೯, ೫ನೆಯ ವಿಭಾಗ, ರಾಜಜಿನಗರ, ಬೆಂಗಳೂರು, ೧೯೭೬

೧೦. ಜೈನಧರ್ಮ, ಮಿರ್ಜಿ ಅಣ್ಣರಾಯ, ಶಾಂತಿಸೇವಾ ಸದನ, ಸೇಡಬಾಳ, ೧೯೯೭